page No. 169 to 212
is missing

ಬೆಲೆ ೧ ರ ಹತ್ತು ಪಟ್ಟು ೧೦ ಎಂದು ತಿಳಿಯಬೇಕು. ಇದ ರಂತೆ (೧೫) ಬರೆಯುವಾಗ ಒಂದರ ಮುಂದೆ ೫ ಬರೆಯು ತ್ತಾರೆ. ಇಲ್ಲಿ ೧ ಇದು ೧೦ ರ ಪ್ರತಿಯಾಗಿ ಬರೆಯಲ್ಪಟ್ಟಿದೆ. ಯಾಕೆಂದರೆ—ಒಂದರ ೧೦ ಪಟ್ಟು ೧೦ ಮತ್ತು ೫ ಕೂಡಿ ೧೫ ಆಗಿರುತ್ತದೆ. ಇದರಂತೆ ಒಂದು ಅಂಕೆಯ ಮುಂ ದೆ ಒಂದು ಅಂಕೆಯನ್ನು ಬರೆದು ಅದರ ಮುಂದೆ ಬೇರೊಂ ದು ಅಂಕೆಯನ್ನು ಬರೆದರೆ ಮೊದಲು ಬರೆದ ಅಂಕೆಯು ತನ್ನ ೧೦ ಪಟ್ಟನ್ನು ೨ ನೇ ಅಂಕೆಯು ತನ್ನ ಹತ್ತು ಪಟ್ಟು ನ್ನು ೩ ನೇ ಅಂಕೆಯು ತನ್ನ ೧ ಪಟ್ಟನ್ನು ತೋರಿಸುತ್ತದೆ. ೨೩ ಇಲ್ಲಿ ಮೊದಲು ಬರೆದ ೨ ಇದರ ೧೦ ಪಟ್ಟು ೨೦. ೨ ನೇ ಸಾರೆ ಬರೆದ ೩ ಇದರ ೧ ಪಟ್ಟು. ೩ ೩ ನೇ ಸಾ ರೆ ಬರೆದ ೪ ರ ೧ ಪಟ್ಟು ೪ ಕೂಡಿ ೨೩ ಆಗಿರುತ್ತದೆ. ಇ ದೇ ಪ್ರಕಾರ ಒಂದರಮುಂದೆ ಒಂದು ಅನೇಕ ಅಂಕೆಗಳನ್ನು ಬರೆದು ಬಲಗಡೆಯಿಂದ ಪ್ರತಿಯೊಂದು ಅಂಕೆಯು ಏನು ತೋರಿಸುತ್ತದೆಂಬುದನ್ನು ವಿಚಾರ ಮಾಡಲು ಮೊದಲನೇದು ತನ್ನ ೧ ಪಟ್ಟು ೨ ನೇದು ತನ್ನ ೧೦ ಪಟ್ಟು ೩ ನೇದು ತನ್ನ ೧೦೦ ಪಟ್ಟು ೪ ನೇದು ತನ್ನ ೧೦೦೦ ಪಟ್ಟು ೫ ನೇದು ತನ್ನ ೧೦೦೦೦ ಪಟ್ಟು ಇರುವವೆಂದು ಗೊತ್ತಾಗುತ್ತದೆ ಇದರಿಂದ ಯಾವದೊಂದು ಸಂಖ್ಯೆಯಲ್ಲಿ ಬಲಗಡೆಯ ೧ ನೇ ಅಂಕೆಗೆ ಎಕ್ಕಂ ಎಂತಲೂ ೨ ನೇ ಅಂಕೆಗೆ ದಹಂ ಎಂತಲೂ ೩ ನೇ ಅಂಕೆಗೆ ಶತಂ ಎಂತಲೂ ಅನ್ನುವರು ವಾಡಿಕೆಯಾಗಿ ಇವೇ ಮುಂತಾದ ಪೆಸರುಗಳು ಬಿದಿರುತ್ತವೆ.

ಈ ವಿಚಾರದಿಂದ ಪ್ರತಿಒಂದು ಅಂಕೆಗೆ ಸ್ಥಾನ ಬೆಲೆ ಮತ್ತು ಸ್ವತಂತ್ರ ಬೆಲೆ ಹೀಗೆ ಎರಡು ಪ್ರಕಾರದ ಬೆಲೆಗಳಿ ರುತ್ತವೆಂತಲೂ ಮತ್ತು ಪ್ರತಿಒಂದು ಸ್ಥಾನ ತನ್ನ ಮುಂದಿ ನ ಸ್ಥಾನದ ೧೦ ಪಟ್ಟು ಇರುತ್ತದೆಂತಲೂ ಸಿದ್ಧವಾ ಯಿತು

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯಶುಶ್ರೂಷೆಯುಂ ಸಚ್ಛಿಕ್ಷಣೋತ್ಕರ್ಷಮುಂ ।
ಜಯಸುತ್ಸಂ ಪ್ರತಿಪಾಸವಾದಿಗೊಲವಿಂದೀಕಾತ್ರಯಂ ಮುದ್ರಿಸಿ ॥
ಸದಯವಿಂದಿತ್ತವೆವೋದುವರ್ಗೆಸುಗುಣಂ ತೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥

ಪುಸ್ತಕ ೩೬] ಅಕ್ಟೋಬರ ೧೯೦೦. [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಎರಡನೇ ಪಂಚವಾರ್ಷಿಕ ರಿಪೋರ್ಟಿನಲ್ಲಿ ಮೆ॥ ಕಾಟಿನ ಸಾಹೇಬರು ತೋರಿಸಿದ ದೋಷಗಳು ಹ್ಯಾಗಂದರೆ—

(೧) ವರಿಷ್ಠ ಶಿಕ್ಷಣಕ್ಕೆ ಪ್ರಮಾಣಕ್ಕಿಂತ ಖರ್ಚು ಹೆಚ್ಚಾಗುತ್ತದೆ.

(೨) ಕನಿಷ್ಠ ಶಿಕ್ಷಣಕ್ಕೆ ಖರ್ಚು ಕಡಿಮೆಯಾಗುತ್ತದೆ.

(೩) ತಪಾಸಣಿ ಮಾಡುವವರ ಸಂಬಂಧದಿಂದ ತಕ್ಕ ವ್ಯವಸ್ಥೆಯು ಆಗತಕ್ಕದ್ದಿರುತ್ತದೆ.

(೪) ಸ್ಕೂಲರಶಿಪ್ಪುಗಳ ಸಂಬಂಧದಿಂದಲೂ ತಕ್ಕ ವ್ಯವಸ್ಥೆಯು ಆಗತಕ್ಕದ್ದಿರುತ್ತದೆ.

ಈ ಆಕ್ಷೇಪಗಳನ್ನು ಹಿಂದುಸ್ಥಾನ ಸರಕಾರದವರು ಆಯಾ ಸ್ಥಾನಿಕ ಸರಕಾರದವರ ಕಡಿಗೆ ಕಳುಹಿಸಿದ್ದರು. ಆ ಪ್ರಕಾರ ಮುಂಬೈ ಇಲಾಖೆಯ ಡೈರೆಕ್ಟರರಾದ ಮೆ॥ ಜಾಯಿಲ್ಸ ಭೂರೆಗಳು ತಮ್ಮ ಕಡೆಗೆ ಬಂದ ಈ ಆಕ್ಷೇಪಣೆಗಳಿಗೆ ಸರಿಯಾದ ಉತ್ತರ ಕೊಟ್ಟಿದ್ದಲ್ಲದೆ ಮುಂಬೈ ಇಲಾಖೆಗ ಈ ಆಕ್ಷೇಪಣೆಗಳು ಹತ್ತಲಾರವೆಂಬದನ್ನು ಸಪ್ರಮಾಣವಾಗಿ ತೋರಿಸಿರುತ್ತಾರೆ. ಇನ್ಸಪೆಕ್ಟರರ ಸಂಬಂಧದಿಂದ

ಮೊತ್ರ ಸುಧಾರಣೆಯಾಗುವದು ಅವಶ್ಯವಿದ್ದಾಗ್ಯೂ ಹೆಣದ ಕೊರತೆಯು ಮೂಲಕ ಸದ್ಯಕ್ಕೆ ಅನನುಕೂಲವಾಗಿರುತ್ತ ದೆಂದು ಅಭಿಪ್ರಾಯವನ್ನು ಕೊಟ್ಟಿರುತ್ತಾರೆ ಸದ್ಯಕ್ಕೆ ಡೆಪ್ಯೂ ಟಿ ಇನ್ಸಪೇಕ್ಟರರ ಆಫೀಸಿನ ಕೆಲಸವು ಬೆಳಿದದ್ದರಿಂದಲೂ ಕಾರಕೂನ ಜನರು ತಕ್ಕಷ್ಟು ಇಲ್ಲದಿರುವದರಿಂದಲೂ ಅವ ರಿಗೆ ಆಫೀಸ ಕೆಲಸದಲ್ಲಿಯೇ ವಿಶೇಷ ಕಾಲಕಳಿಯಬೇಕಾದ್ದ ರಿಂದ ತಪಾಸಣೀ ಕೆಲಸಕ್ಕೆ ಸರಿಯಾದ ಅವಕಾಶವು ದೊರಿ ಯುವದಿಲ್ಲೆಂತಲೂ ಲೋಕಲ್‌ಬೋರ್ಡಿನಿಂದ ಒಬ್ಬೊಬ್ಬ ಕಾರಕೂನನನ್ನು ಕೊಟ್ಟರೆ ಈ ಅಡಚಣಿಯು ದೂರಾಗು ವಂತೆ ಇರುವದೆಂತಲೂ ತಿಳಿಸಿ ಪ್ರತಿಬಂದು ಜಿಲ್ಲೆಗೆ ಒಂದ ರಂತೆ ಎಲ್ಲ ಜಿಲ್ಲೆಗಳಿಗೂ ೬೦ ರೂಪಾಯಿ ಪಗಾರದ ಒಂ ದೊಂದು ಕಾರಕೂನೀ ಸ್ಥಳವನ್ನು ಕೊಡಬೇಕೆಂದೂ ಹೆಣ್ಣುಮಕ್ಕಳ ಸಾಲೆಗಳ ತಪಾಸಣೆಗಾಗಿ ೩೦ ರಿಂದ ೪೦ ರೂಪಾಯಿ ವರೆಗೆ ಪಗಾರದ ಮೇಲೆ ಮಧ್ಯಭಾಗ ದಕ್ಷಿಣ ಭಾಗಗಳಿಗಾಗಿ ಒಂದು ಮತ್ತು ಉತ್ತರಭಾಗ ಸಿಂಧಪ್ರಾಂತ ಗಳಿಗಾಗಿ ಒಂದು ಈ ಪ್ರಕಾರ ಎರಡು ಇನ್ಸಪೆಕ್ಟ್ರನ್ಸುಗಳ ಸ್ಥಳಗಳನ್ನು ಹೊಸದಾಗಿ ನೇಮಕ ಮಾಡಬೇಕೆಂದೂ ಸಿಫಾ ರಸು ಮಾಡಿರುವರು. ಈ ಪ್ರಕಾರ ವ್ಯವಸ್ಥೆಯಾದರೆ ತಪಾ ಸಣೆ ಸಂಬಂಧದಿಂದ ಮೇಲೆ ಕಾಣಿಸಿದ ಆಕ್ಷೇಪವು ದೂರಾ ಗುವದೆಂದು ಬರೆದಿರುವರು.

ಸರ್ಕಾರಿನೀ ಇಸವಿಯ ಮಾರ್ಚ್ ತಿಂಗಳಲ್ಲಿ ಇಡೀ ಹಿಂದುಸ್ಥಾನದಲ್ಲೆಲ್ಲ ಜನರಲ್ ಖಾನೆಸುಮಾರಿ ಆಗತಕ್ಕದ್ದಿ ದ್ದು, ಆ ಬಗ್ಗೆ ಜಾತಿ, ಒಳಪೇದ ಮುಂತಾದವುಗಳನ್ನು ಸ್ಪಷ್ಟೀ ಕರಿಸುವದಕ್ಕಾಗಿ ಕೆಳಗೆ ಕೊಟ್ಟ ಮಾಹಿತಿಯನ್ನು ಕುರಿತು ಜಿಲ್ಹೆಜಿಲ್ಲೆಗೆ ಕವಿಾಟಗಳನ್ನು ನೇಮಿಸಿ ವಿಚಾರ ನಡೆದದೆ ಆ ಸಂಬಂಧದಿಂದ ಸೂಚಿಸಿದ ಪ್ರಶ್ನಗಳು ಶಿಕ್ಷಕರಿಗೆ ಉಪ ಯೋಗದವಿದ್ದು ವಿಚಾರಾರ್ಹವಾಗಿರುವದರಿಂದ ಅವುಗಳ ನ್ನು ನಮ್ಮ ಪತ್ರಕದಲ್ಲಿ ಸಂಗ್ರಹಿಸಿರುತ್ತೇವೆ.

ನೃವಂಶ ವರ್ಣನೆಯ ಸಂಬಂಧದ ಪ್ರಶ್ನಗಳು.

ಸಾಮಾನ್ಯ ಪ್ರಶ್ನಾವಲಿ.

೧. ಉದ್ದಿಷ್ಟ ಜಾತಿಯ ಹೆಸರನ್ನೂ ತದ್ವ್ಯಾಚಕ ಬೇರೆ ಹೆಸರುಗಳಿದ್ದರೆ ಅವುಗಳನ್ನೂ ಇಂಗ್ಲಿಷದಲ್ಲಿಯೂ ದೇಶೀ ಭಾಷೆಯಲ್ಲಿಯೂ ಬರೆಯಿರಿ. ಇವುಗಳಲ್ಲಿ ಯಾವದಾದರೂ ಪರಿಯವರಿಂದಲೇ ಉಪಯೋಗಿಸಲ್ಪಡುತ್ತಿದ್ದರೆ ಅದನ್ನು ವಿಶೇಷಿಸಿರಿ.

೨. ಈ ಜಾತಿಯಲ್ಲಿ ಬಾಹ್ಯಪತ್ನಿಕ ಒಳಜಾತಿಗಳೇನಾದರೂ ಇದ್ದರೆ ಅವುಗಳ ಹೆಸರುಗಳನ್ನು ಬರೆಯಿರಿ.

ಟೀಪು—ಯಾವ ಒಳಜಾತಿಯ ಕನ್ನೆಯರನ್ನು ಆ ಒಳಜಾತಿಯ ಗಂಡಸರು ಮದುವೆಯಾಗಲಾರರೋ ಆ ಒಳಜಾತಿಯೇ ಬಾಹ್ಯಪತ್ನಿಕ ಒಳಜಾತಿಯು. ಬಾಹ್ಯಪತ್ನಿಕ ಒಳಜಾತಿಗೆ ಗೋತ್ರವೆಂತಲೂ ಬೆಡಗೆಂತಲೂ ಅನ್ನುವರು.

೩. ಈ ಜಾತಿಯಲ್ಲಿ ಅಂತಪರ್ತ್ನಿಕ ವರ್ಗಗಳಿದ್ದರೆ ಅವುಗಳನ್ನು ಬರೆಯಿರಿ. ಒನೇ ಪ್ರಶ್ನದಲ್ಲಿ ಹೇಳಿದ ಗೋತ್ರಗಳು ಈ ವರ್ಗದಲ್ಲಿ ಸಮಾವಿಷ್ಟವಾದರೆ ಅವುಗಳನ್ನು ಪ್ರತ್ಯೇಕವಾಗಿ ಆಯಾ ವರ್ಗದಲ್ಲಿ ಕಾಣಿಸಿರಿ. ಈ ವರ್ಗಗಳಿಗೆ ವಿಶಿಷ್ಟ ಹೆಸರುಗಳಿದ್ದರೆ ಅವುಗಳನ್ನು ಇಂಗ್ಲಿಷದಲ್ಲಿಯೂ ದೇಶಭಾಷೆಯಲ್ಲಿಯೂ ಬರೆಯಿರಿ.

ಟೀಪು - ಯಾವ ವರ್ಗದ ಪೊರಗಿನ ಕನ್ನೆಯರನ್ನು ಆ ವರ್ಗದ ಗಂಡಸರು ಮದುವೆಯಾಗಕೂಡದೋ ಆ ವರ್ಗಕ್ಕೆ ಅಂತಪರ್ತ್ನಿಕ ವರ್ಗವೆಂಬ ಹೆಸರು.

೪. ಈ ಜಾತಿಯವರ ಹೆಣ್ಣು ತೆಗೆದ ಕೊಳ್ಳುವ ಸಂಬಂಧದ ಮರ್ಯಾದೆಗಳು ಅಂದರೆ ಯಾವ ಮರ್ಯಾದೆಗಳ ಒಳಗಾಗಲಿ ಯಾವ ಮರ್ಯಾದೆಗಳ ಹೊರಗಾಗಲಿ ವಿವಾಹವು ನಿಷ್ಪಾದಿಸಲ್ಪಟ್ಟಿರುವದೋ ಆ ಮರ್ಯಾದೆಗಳನ್ನು ಹೇಳಿರಿ; ಉದಾಹರಣಾರ್ಥವಾಗಿ ಪ್ರತಿಬಿಬ್ಬನು ತನ್ನ ಜಾತಿಯಲ್ಲಿಯೇ ಮದುವೆಯಾಗತಕ್ಕದ್ದು. ಅವರೆ ತನ್ನ ಗೋತ್ರದಲ್ಲಾಗಲಿ ಮತ್ತೂ ಕೆಲವು ಸಿಯಮಿತ ಗೋತ್ರಗಳಲ್ಲಾಗಲಿ ಮದು

ಬೆಯಾಗಕೂಡದು; ಇಬ್ಬರು ಅಕ್ಕತಂಗಿಯರನ್ನು ಮದು
ಬೆಯಾಗಕೂಡದು ಈ ಮಾದರಿಯ ನಿರ್ಬಂಧಗಳು.

೫. (ಅ) ಸಾಮಾಜಿಕ ಸಂಸ್ಥಿತಿ (ಬ) ದೇಶಭೇದ ಅಥವಾ
ಸ್ಥಳಭೇದ (ಜ) ಧರ್ಮಭೇದ (ಆಚಾರಭೇದ) ಮತಭೇದ,
ಉದ್ಯೋಗಭೇದ ಅಥವಾ ಉದ್ಯೋಗಾಂತರ ಇವುಗಳನ್ನು
ಅವಲಂಬಿಸಿರುವ ಪರಸ್ಪರ ವಿವಾಹ ವ್ಯವಹಾರಕ್ಕೆ ಏನಾದ
ರೂ ಪ್ರತಿಬಂಧವಿದ್ದರೆ ಹೇಳಿರಿ?

೬. ಈ ಜಾತಿಯ ಮೂಲೋತ್ಪತ್ತಿಯ ವಿಷಯಕ್ಕೆ ಏನಾ
ದರೂ ಲೋಕರೂಢ ಪರಂಪರಾಗತ ಕಥೆಯಿದ್ದರೆ ಅದನ್ನು
ಹೇಳಿರಿ. ಯಾಗು ಈ ಜಾತಿಯ ಮೂಲಪುರುಷ, ಇಲ್ಲವೆ
ಮೂಲಪುರುಷರಿದ್ದರೆ ಅವರ ಹೆಸರನ್ನೂ, ಯಾವ ಸೀಮೆ
ಯಿಂದ ಆ ಜಾತಿಯವರು ಬಂದರೆಂದು ಅನುಮಾನವಿರುವ
ದೋ ಆ ಸೀಮೆಯ ಹೆಸರನ್ನೂ, ವಿಶಿಷ್ಟ ಅರಸನ ಆಳಿಕೆ
ಯಿಂದ ಇಲ್ಲವೆ ಇತಿಹಾಸ ಪ್ರಸಿದ್ಧ ಸಂಗತಿಯಿಂದ ಗೊತ್ತಾ
ದ ಆ ಜಾತಿಯ ದೇಶಾಂತರದ ಕಾಲವನ್ನೂ, ಅಂದಿನಿಂದ
ಇದುವರೆಗೆ ಎಷ್ಟು ತಲೆಗಳು ಆಗಿ ಹೋದವೆಂದು ಅನುಮಾ
ನವಿರುವದೋ ಆ ತಲಾಂತರಗಳ ಸಂಖ್ಯೆಯನ್ನೂ ಹೇಳಿರಿ.

೭. ಈ ಜಾತಿಯವರು ಸ್ಥಳವಿಡಿದು ನಿಲ್ಲುವಂಥವರೋ?
ಊರೂರು ತಿರಗುವಂಥವರೋ? ನಿಮ್ಮ ಪ್ರಾಂತದಲ್ಲಿ ಈ
ಜಾತಿಯವರ ಪ್ರಸಿದ್ಧವಾದ ವಾಸಸ್ಥಲವಿರುವದೋ? ಸಂಚ
ರಿಸುವ ವೃತ್ತಿಯವರಿದ್ದರೆ ಇವರು ಯಾವ್ಯಾವ ಪ್ರದೇಶದಲ್ಲಿ
ಸಂಚಾರ ಮಾಡುವರು? ಇವರ ದೇಶಾಂತರ ಸಂಚಾರಗ
ಳು ನಿಯಮಿತ ಕಾಲದಲ್ಲಿ ಆಗುವವೋ? ಅನಿಯಮಿತವಾಗಿ
ರುವವೋ? ಇವರು ತಮ್ಮ ಮನೆಗಳನ್ನು ಯಾತರಿಂದ ಕಟ್ಟು
ವರು? ಅವುಗಳ ಆಕಾರ ಹ್ಯಾಗಿರುವದು?

೮. ಈ ಜಾತಿಯವರು ತಮ್ಮ ಜಾತಿಯಲ್ಲಿ ಹೊರಗಿನವ
ರನ್ನು ಸೇರಿಸಿಕೊಳ್ಳುವರೋ? ಸೇರಿಸಿಕೊಳ್ಳುತ್ತಿದ್ದರೆ ಯಾವ
ವರ್ಗದವರನ್ನು ಯಾವ ವಿಧಿಗಳಿಂದ ಯಾವ ಶರ್ತುಗಳಿಂದ
ಸೇರಿಸಿಕೊಳ್ಳುವರು.

೯. ವಿವಾಹವನ್ನು ಬಾಲ್ಯದಲ್ಲಿ ಮಾಡುವರೋ? ಪ್ರೌಢಾ

ವಸ್ಥೆಯಲ್ಲಿ ಮಾಡುವರೋ? ಪ್ರಾಥವಿವಾಹ ಪದ್ಧತಿಯು ಪ್ರಚಾರವಲ್ಲಿದ್ದರೆ ಮದುವೆಗಿಂತ ಮೊದಲು ಸಂಭವಿಸಿದ ಸ್ತ್ರೀ ಪುರುಷ ವ್ಯವಹಾರವು ಸಮ್ಮತವಾಗಿರುವದೋ? ಅದಕ್ಕೆ ಅನುಮತಿಸಿರುವರೋ?

೧೦. (ಅ) ಈ ಜಾತಿಯಲ್ಲಿ ಬಹು ಪತ್ನೀಕತ್ವದ ಪ್ರಚಾರವುಂಟೋ? (ಬ) ಬಹುಭರ್ತೃಕತ್ವದ ಪ್ರಚಾರವುಂಟೋ? ತತ್ಸಂಬಂಧದ ಕಟ್ಟುಗಳೂ ಮರ್ಯಾದೆಗಳೂ ಉಂಟೋ? ಬಹುಭರ್ತೃಕತ್ವದ ಪ್ರಚಾರವಿದ್ದಲ್ಲಿ ಗಂಡಂದಿರೆಲ್ಲರು ಅಣ್ಣತಮ್ಮಂದಿರೇ ಇರಲಿಕ್ಕೆ ಬೇಕೆಂಬ ನಿರ್ಬಂಧ ಉಂಟೋ?

೧೧. ಇವರಲ್ಲಿ ಯಾವ ವಿವಾಹಪದ್ಧತಿಯು ವಾಡಿಕೆಯಾಗಿ ಪ್ರಚಾರದಲ್ಲಿರುವದು. ವಿವಾಹ ವಿಧಿಯ ಪ್ರಕಾರಗಳನ್ನೂ ಆ ವಿಧಿಯ ಮುಖ್ಯವಾದಂಥ ಬಂಧಿಸುವಂಥ ಅಂಶವನ್ನು ಹೇಳಿರಿ.

೧೨. ಇವರಲ್ಲಿ ವಿಧವಾ ವಿವಾಹದ ಪ್ರಚಾರ ಉಂಟೋ? ಇದ್ದರೆ ವಿಧವೆಯು ತನ್ನ ಸತ್ತ ಗಂಡನ ಅಣ್ಣನನ್ನಾಗಲೀ ತಮ್ಮನನ್ನಾಗಲೀ ಮದುವೆಯಾಗಬೇಕೆಂದು ನಿರ್ಬಂಧ ಉಂಟೋ? ಗಂಡನ ಅಣ್ಣತಮ್ಮಂದಿರನ್ನು ಮದುವೆಯಾಗದ ಪಕ್ಷದಲ್ಲಿ ಯಾರನ್ನು ಆಗತಕ್ಕದ್ದೆಂಬ ಬಗ್ಗೆ ನಿರ್ಬಂಧ ಉಂಟೋ? ಇಂಥ ಲಗ್ನಗಳು ಯಾವ ವಿವಾಹ ವಿಧಿಯಿಂದಾಗುವವು? ಆ ವಿಧಿಯ ಮುಖ್ಯವಾದಂಥ ಬಂಧಿಸುವಂಥ ಅಂಶವನ್ನು ಹೇಳಿರಿ.

೧೩. ಯಾವ ಪ್ರಸಂಗಗಳಲ್ಲಿ ಯಾವ ರೀತಿಯಿಂದ ಶರಗು ಹರಿದು ಬಿಡುವರು. ಈ ರೀತಿ ಬಿಟ್ಟ ಹೆಂಗಸರು ಮತ್ತೆ ಮದುವೆಯಾಗಬಹುದೇ?

೧೪. ಈ ಜಾತಿಯವರು ಹಿಂದುಧರ್ಮಶಾಸ್ತ್ರದ ದಾಯದ ಕ್ರಮವನ್ನು ಅನುಸರಿಸುವರೋ? ಇಲ್ಲವೆ ಮಹಮ್ಮದೀಯ ಧರ್ಮಶಾಸ್ತ್ರ ಕ್ರಮವನ್ನು ಅನುಸರಿಸುವರೋ? ತಮ್ಮ ಸ್ವಂತ ಜಾತಿಯ ಪರಿಪಾಠವನ್ನು ಹಿಂಬಾಲಿಸುವರೋ?

೧೫. ಈ ಜಾತಿಯು ಯಾವ ಧರ್ಮಕ್ಕೆ ಹಾಗು ಆ ಧರ್ಮದ ಯಾವ ಪಂಥಕ್ಕೆ ಸೇರಿರುವರು. ಹಿಂದುಗಳಾದರೆ ಹಿಂದುಗಳ ಕ್ರಮವಾದ ದೇವತೆಗಳಲ್ಲಿ ಯಾವದಾದರೊಂದು ವಿಶೇ

ವ್ಯ ದೇವರನ್ನು ಪುರಸ್ಕಾರದಿಂದ ಪೂಜಿಸುವರೋ? ಈ ಪುರಸ್ಕಾರಕ್ಕೆ ಕಾರಣವೇನು?

೧೬. ಈ ಜಾತಿಯವರು ವಿಶೇಷವಾಗಿ ಪೂಜಿಸುವ ಕ್ಷುದ್ರ ದೇವತೆಗಳ ಇಲ್ಲವೆ ಶರಣ ಸಂತರ ಹೆಸರುಗಳನ್ನು ಹೇಳಿರಿ. ಈ ದೇವತೆಗಳಿಗೆ ಯಾವ ಪವಸ ಯಾವ ತರದ ಎಡೆಗಳನ್ನಿಡುವರು? ಆ ಎಡೆಗಳನ್ನು ಯಾವ ವರ್ಗದ ಜನರು ತಕ್ಕೊಳ್ಳುವರು ಹೇಳಿರಿ. ದೇವರದಿಂಡರ ಶರಣಸಂತರ ಪೂಜೆಯನ್ನು ಈ ಜಾತಿಯ ಜನರೆಲ್ಲರು ಮಾಡುವರೋ ಹೆಂಗಸರು ಹುಡುಗರು ಮಾತ್ರ ಮಾಡುವರೋ?

೧೭. ಈ ಜಾತಿಯವರು ಕಾರ್ಯ ಪ ಯೋಜನಗಳಲ್ಲಿ ಬ್ರಾಹ್ಮಣರನ್ನು ಕರೆಯುವರೋ? ಈ ರೀತಿ ಕಾರ್ಯಪ್ರಯೋಜನಗಳಿಗೆ ಹೋಗುವ ಬ್ರಾಹ್ಮಣರನ್ನು ಬೇರೆ ಬ್ರಾಹ್ಮಣರು ಊನವಾಗಿ ತಿಳಿಯುವರೋ ಅನೂನವಾಗಿ ತಿಳಿಯುವರೋ?

೧೮. ಈ ಜಾತಿಯವರು ಸತ್ತವರನ್ನು ಸುಡುವರೋ? ಹುಗಿಯುವರೋ? ಇಲ್ಲವೆ ಬೈಲಿಗಿಡುವರೋ? ಹುಗಿದರೆ ಹ್ಯಾಗೆ ಹುಗಿಯುವರು? ಹೆಣ ಕೂಡ್ರಿಸುವರೋ! ಮಲಗಿಸುವರೋ? ಹೆಣ ಸುಟ್ಟ ಬೂದಿಯ ವ್ಯವಸ್ಥೆಯನ್ನು ಯಾವ ರೀತಿ ಮಾಡುವರು

೧೯. (ಅ) ಸಮಸ್ತ ಪಿತೃಗಳ (ಬ) ನಿಪ್ರತಕ ಪಿತೃಗಳ (ಕ) ಮರಣ ಹೊಂದಿದ ಪಿತೃಗಳ ಸಂತರ್ಪಣೆಗಾಗಿ ದಿನಗಳನ್ನೇನಾದರೂ ಮಾಡುತ್ತಾರೋ? ಮಾಡುತ್ತಿದ್ದರೆ ಯಾವ ಪ್ರಕಾರದ್ದು? ಯಾವ ಋತುವಿನಲ್ಲಿ? ಶ್ರಾದ್ಧಕರ್ಮವನ್ನು ಮಾಡುತ್ತಾರೋ ಇಲ್ಲವೋ?

೨೦. ಈ ಜಾತಿಗಾಗಲಿ ಒಳಭೇದಕ್ಕಾಗಲಿ ಯಾವದಾದರೊಂದು ಪ್ರಾಣಿಯ, ಶಸ್ತ್ರದ ಇಲ್ಲವೆ ಆಯುಧದ ಹೆಸರು ಕೊಟ್ಟಿರುವರೋ? ಇದನ್ನು ಕುರಿತು ತಮ್ಮ ಪೂಜ್ಯಬುದ್ಧಿಯನ್ನು ವಿಶೇಷತರದ ಪೂಜೆಯಿಂದಾಗಲಿ ಅದನ್ನು ಕೊಲ್ಲದೆ, ತಿನ್ನದೆ, ಕಡಿಯದೆ, ಸುಡದೆ, ಉಪಯೋಗಿಸದೆ ಹೆಸರುಗೊಂಡು ಕರೆಯದೆ ಇರುವದರಿಂದಾಗಲಿ ತೋರಿಸುವರೋ?

೨೧ ಈ ಜಾತಿಯವರು ತಮ್ಮ ಮೂಲಹೋರೆ ಅಥವಾ ಹೋರೆಗಳು ಯಾವವೆಂದು ನಂಬುವರು; ಅವುಗಳನ್ನು ಈ ಜಾತಿಯವರೇಯಾಗಲಿ ಬಳಭೇದದವರೇಯಾಗಲಿ ಎಷ್ಟರ ಮಟ್ಟಿಗೆ ಬಿಟ್ಟಿರುವರು? ಇವರ ಈಗಿನ ಹೋರೆಯನ್ನು ವರ್ಣಿಸಿರಿ?

೨೦ ಇವರು ಒಕ್ಕಲಿಗರಾಗಿದ್ದರೆ ಒಕ್ಕಲತನದಲ್ಲಿ ಇವರ ಸಾಮಾನ್ಯ ಯೋಗ್ಯತೆಯು ಹ್ಯಾಗಿರುತ್ತದೆ? ಅಂದರೆ ಇವರೇನು–

(೧) ಜವಿಾನದಾರರೋ?

(೨) ಗೇಣಿದಾರರೊ? ಯಾವ ತರದ ಗೇಣಿಯೆಂಬದನ್ನು ತೋರಿಸಿರಿ?

(೩) ಖಾತೇದಾರರಾದ ರೈತರೋ? ಇಲ್ಲವೆ ಲಾವಣಿದಾರರಾದ ರೈತರೋ? ತರಿಗಯು ಸಂಬಂಧದಿಂದ ಏನಾದರೂ ಹಕ್ಕು ಇರುವದೋ? ಇಲ್ಲವೆ ಹಕ್ಕು ಕೇಳುವರೋ? ಎಂಬದನ್ನು ಹೇಳಿರಿ?

(೪) ಸಂಚಾರ ಮಾಡುವ ಜಾತಿಯ ಒಕ್ಕಲಿಗರೋ? (ಯಾವ ತರದ ಒಕ್ಕಲತನವನ್ನು ಮಾಡುತ್ತಾರೆಂಬದನ್ನು ಹೇಳಿರಿ)

(೫) ಹೊಲವಿಲ್ಲದ ದಿನಗೂಲಿಯವರೋ?

(ಅವರಿಗೆ ಕೂಲಿಕೊಡುವ ಕ್ರಮವನ್ನು ಹೇಳಿರಿ?

೨೧ ಅವರ ಹೋರೆಯು –

(ಅ) ಕಸಬುಗಾರರಿದ್ದರೆ ಅವರ ಕಸಬು ಯಾವದು? ಯಾವ ವಿಶೇಷ ಪದಾರ್ಥದಲ್ಲಿ ಕೆಲಸ ಮಾಡುವವರು? ಅಥವಾ ಮಾಡುವವರಲ್ಲ?

(ಬ) ಬೇಟೆಗಾರರಾಗಿದ್ದರೆ ಬೇಟೆಯನ್ನು ಆಡುವರೋ? ಜುಳಹುಪ್ಪಡಿಯನ್ನು ಹಿಡಿಯುವವರೋ?

(ಕ) ವಿಾನುಗಾರರಿದ್ದರೆ ಅವರು ಬರೇ ಮತ್ಸ್ಯಗಳನ್ನು ಹಿಡಿಯುವವರೋ, ಇಲ್ಲವೆ ಮೊಸಳೆ ಆವೆಗಳನ್ನು ಸಹ ಹಿಡಿಯುವವರೊ?

(ಡ) ಉಡುಗುವವೆರಾದರೆ, ಮಲಮೂತ್ರವನ್ನು ತೆಗೆಯುವವರೋ? ತೆಗೆಯರೋ?

೦೪. ಈ ಜಾತಿಯ ಭೇದಕ ಲಕ್ಷಣವಾದಂಥ ಶಸ್ತ್ರವಾಗಲಿ ಅಥವಾ ಕೆಲಸಮಾಡುವ ಪದ್ಧತಿಯಾಗಲಿ ಇದ್ದರೆ ಅದನ್ನು ಹೇಳಿರಿ. ಹಾಗು ಅವರ ಮುಖ್ಯ ಹೋರೆಯ ಯಾವ ಸಂಸ್ಕಾರವನ್ನು ಅಥವಾ ವಿಧಾನವನ್ನು ಮಾಡುವದು ಬಿಟ್ಟರೆ ಅದೇ ಜಾತಿಯ ಇತರರಿಗಿಂತ ಮೇಲಾಗುತ್ತೇವೆಂದುನಂಬುತ್ತಾರೋ ಅಂಥ ಸಂಸ್ಕಾರ ಅಥವಾ ವಿಧಾನವೇನಾದರು ಇದ್ದರೆ ಅದನ್ನು ನಿರೂಪಿಸಿರಿ.

೦೫. ಇವರಲ್ಲಿ ತಮ್ಮ (೧) ಅವಿವಾಹಿತ ಹೆಂಗಸರನ್ನಾಗಲಿ (೨) ವಿವಾಹಿತ ಹೆಂಗಸರನ್ನಾಗಲಿ ಬಸವಿ (ಸೂಳೆ) ಯರನ್ನಾಗಿ ಮಾಡುವ ಪರಿಪಾಠವಿದೆಯೋ?

೦೬. ಈ ಜಾತಿಯವರು ಕೆಳಗಿನ ಆಹಾರಪದಾರ್ಥಗಳಲ್ಲಿ ಯಾವದನ್ನು ತಿನ್ನುವರು? ಅಥವಾ ಬಿಡುವರು :— ಮಾಂಸ, ಮದ್ಯ, ಮಂಗ, ಗೋಮಾಂಸ, ಹಂದೀಮಾಂಸ, ಪಕ್ಷಿಗಳು, ಸಶಲ್ಕ ಅಥವಾ ವಿಶಲ್ಕ ಮತ್ಸ್ಯಗಳು, ಮೊಸಳೆಗಳು, ಸರ್ಪಗಳು, ಸರಟಗಳು (ಹಲ್ಲಿಯಜಾತಿ) ನರಿಗಳು, ಮೂಷಕಗಳು, ಇತರ ಕ್ರಿಮಿಕೀಟಕಗಳು, ಅನ್ಯರ ಉಚ್ಛಿಷ್ಟವು (ಎಂಜಲು) ಯಾವದೊಂದು ಆಹಾರಪದಾರ್ಥವನ್ನು ಸೇವಿಸದೆ ಬಿಟ್ಟರೆ ಅದನ್ನು ಸೇವಿಸುವಂಥ ಬೇರೊಂದು ಜಾತಿಗಿಂತ ಮೇಲಾಗುತ್ತೇವೆಂದು ಅವರು ಅಭಿಪ್ರಾಯ ತೊಟ್ಟಿರುವರು, ಅಂಥ ವಿಶೇಷ ಆಹಾರಪದಾರ್ಥ ಯಾವದಿರುವದು?

೦೭. ಈ ಜಾತಿಯವರು ಯಾವ ಹೀನ ಜಾತಿಯ ಕೂಡ (ಅ) ಅನ್ನವನ್ನು ಉಣ್ಣುವರು, (ಬ) ಫಲಹಾರವನ್ನು ಮಾಡುವರು (ಕ) ಕುಡಿಯುವರು. (ಡ) ಬತ್ತೀ ಸೇದುವರು; ಆ ಜಾತಿಯ ಹೆಸರನ್ನು ಹೇಳಿರಿ, ಈ ಜಾತಿಯವರ ಕೂಡ ಯಾವ ಸುಪ್ರಸಿದ್ಧವಾದ ಉಚ್ಚ ಜಾತಿಯವರು ಮೇಲ್ಕಾಣಿಸಿದ ವ್ಯವಹಾರ ಮಾಡುವರೋ ಆ ಜಾತಿಯ ಹೆಸರನ್ನು ಹೇಳಿರಿ.

ಈ ಮಾಹಿತಿಯನ್ನು ಕೊಡುವವರು ಈ ಪ್ರಶ್ನೆಗಳಿಗೆ ಉತ್ತರ ಹೇಳಿದ ಜನರ ಹೆಸರುಗಳು, ಇರುವ ಸ್ಥಳ (ಊರು ವ ಠಾಣೆ), ಉದ್ಯೋಗ, ಜಾತಿ, ಒಳಜಾತಿ, ಪುತ್ತು ವಿಭಾಗ,

ಇವುಗಳನ್ನು ಈ ಸ್ಥಳದಲ್ಲಿ ನಮೂದಿಸತಕ್ಕದ್ದು. ಅವರಲ್ಲಿ ಯಾರಾದರು ಶಟಕರು, ವಂಶಾವಳಿ ಬಲ್ಲವರು, ಜಾತಿಯ ಪ್ರಮುಖರು, ಪಂಚರು, ಅಥವಾ ಜಾತಿಯ ಸಂಬಂಧದಿಂದ ಪರಂಪರಾಗತ ಹುದ್ದೇದಾರರು ಇದ್ದರೆ ಆ ಸಂಗತಿಯನ್ನು ಬರೆಯತಕ್ಕದ್ದು. ಮೇಲ್ಕಾಣಿಸಿದ ಜಾತಿಯ ಜನರಿಗೆ ಸಮಕ್ಷಮ ಕೇಳಿ ವಿಚಾರಣೆ ಮಾಡದೆ ಬೇರೆ ಮಾರ್ಗದಿಂದ ಈ ಪ್ರಶ್ನಗಳಿಗೆ ಉತ್ತರಗಳನ್ನು ದೊರಕಿಸಿದ್ದರೆ ಆ ಮಾರ್ಗವನ್ನು ಮೇಲ್ವಿಚಾರಣೆಯ ಅಧಿಕಾರಸ್ಥನಿಗೆ ಈ ಉತ್ತರಗಳ ತಥ್ಯಾಂಶವನ್ನು ಪರೀಕ್ಷಿಸಲಿಕ್ಕೆ ಬರುವಂತೆ ನಿರ್ದೇಶಿಸತಕ್ಕದ್ದು.

CHEMISTRY.

ರಸಾಯನಶಾಸ್ತ್ರ.

(೧೫೬ ನೇ ಪುಟದಿಂದ ಮುಂದೆ ಸಾಗಿದ್ದು.)

೫೮. ಇದ್ದಲಿಯಿಂದ ಹುಟ್ಟುವ ಒಂದು ತರದ ಜ್ವಾಲಾಗ್ರಾಹಿ ವಾಯುವನ್ನು ತೆಗೆಯುವ ರೀತಿಯು

ಪ್ರಯೋಗ ೫೪. ಚಿನಯಿ ಮಣ್ಣಿನ ಚಿಲಿಮೆಯನ್ನು ತಕ್ಕೊಂಡು ಅದರೊಳಗೆ ಕಲ್ಲಿದ್ದಲಿಯ ಪುಡಿಯನ್ನು ತುಂಬಿ ಅದರ ಬಾಯಿಗೆ ಜಿಗಟು ಮಣ್ಣನ್ನು ಇಲ್ಲವೆ ಉದ್ದಿನ ಹಿಟ್ಟಿನ್ನು ಮೆತ್ತು. ಆ ಮೆತ್ತಿಗೆಯು ಚನ್ನಾಗಿ ಒಣಗಿದ ಬಳಿಕ ಆ ಚಿಲಿಮೆಯನ್ನು ಆಕೃತಿಯಲ್ಲಿ ತೋರಿಸಿದಂತೆ ಕಬ್ಬಿಣದ ಕೊಂಬದಲ್ಲಿ ಗಟ್ಟಿಯಾಗಿ ಕೂಡ್ರಿಸಿ ಬುಡದಲ್ಲಿ ಮದ್ಯಾರ್ಕದ ದೀಪವನ್ನಿಡಬೇಕು. ತುಸು ಹೊತ್ತಿನಲ್ಲಿ ಆ ಚಿಲಿಮೆಯ ಮತ್ತೊಂದು ಬಾಯಿಂದ ಹೊಗೆಯು ಹೊರಡಹತ್ತುವದು. ಈ ಹೊಗೆಗೆ ದೀಪವನ್ನು ಮುಟ್ಟಿಸಿದ ಕೂಡಲೆ ಅದು ಉರಿಯಹತ್ತಿ ಎಣ್ಣೆಯ ದೀಪಕ್ಕಿಂತ ಹೆಚ್ಚು ಪ್ರಕಾಶಮಾನವಾಗಿ ತೋರುವದು. ಈ ಹೊಗೆಗೆ ಇದ್ದಲಿಯ ಹೊಗೆಯೆನ್ನುತ್ತಾರೆ ಅದರ ಈಗ ಮುಂಬಯಿ ಮುಂತಾದ ಪಟ್ಟಣಗಳಲ್ಲಿಯೂ ಕೆಲಕೆಲವು ಊಗೆಬಂಡಿಗಳಲ್ಲಿಯೂ ದೀಪಕ್ಕಾಗಿ ಉಪಯೋಗಿಸುವ ಹೊಗೆಯು ಇದಲ್ಲ. ಇದಕ್ಕೂ ಅದು ಸ್ವಲ್ಪ ಹಿರುತ್ತದೆ.

ಇನ್ನು ಈ ಚಿಲಿಮೆಯ ಹೊಗೆ ಹೊರಡುವ ಬಾಯನ್ನು ನೀರೊಳಗೆ ಮುಳುಗಿಸಲು ನೀರಮೇಲೆ ಗುಳ್ಳೆಗಳೇಳಲಾರಂಭಿಸುವವು. ಈ ಗುಳ್ಳೆಗಳನ್ನು ಹಿಂದೆ ಹೇಳಿದಂತೆ ಬುದ್ದು ನೀಸೆಯಲ್ಲಿ ಹಿಡಿದಿಡಬೇಕು. ಅಂದರೆ ನೀರಿನ ಸಂಯೋಗದಿಂದ ಈ ಹೊಗೆಯು ಹೆಚ್ಚು ಸ್ವಚ್ಛವಾಗುವದು. ಇದರೊಳಗೆ ಕಾರ್ಬೊನ್ನಿರುತ್ತದೆ ಅದರಿಂದ ಇದು ಉರಿಯುಹತ್ತಿತೆಂಬರೆ, ಕಾಡಿಗೆಯು ಉತ್ಪನ್ನವಾಗುತ್ತದೆ; ಮತ್ತು ಕಾರ್ಬಾನಿಕ್ ಆಸಿಡ್ ವಾಯುವೂ ಹುಟ್ಟುತ್ತದೆ. ಈ ವಾಯುವಿನಲ್ಲಿ ಹೈದ್ರೊಜನವೂ ಇರುತ್ತದೆ. ಇಗೋ ಈ ಸ್ವಚ್ಛವಾದ ಬಿಣಿಗಿವ ಗ್ಲಾಸನ್ನು ಈ ಜ್ಯೋತಿಯ ಮೇಲೆ ಡಬ್ಬುಹಿಡಿ. ನೋಡು ಆ ಗ್ಲಾಸಿನ ಒಳಮ್ಯೈಯ್ಯಲ್ಲಿ ಇಬ್ಬನ್ನಿಯಂಥ ಸೂಷ್ಮ ಜಲಕಣಸಮುದಾಯವು ಹ್ಯಾಗೆ ಅಂಟಿಕೊಂಡಿದೆ. ಈ ದೀಪದ ಜ್ಯೋತಿಯಿಂದ ಹೊರಡುವ ಹೈದ್ರೋಜನವಾಯುವು ಉರಿಯುವಾಗ ಹವೆಯೊಳಗಿನ ಆಕ್ಸಿಜನದೊಡನೆ ರಸಾಯನಸಂಯೋಗವನ್ನು ಹೊಂದಿ ನೀರನ್ನುಂಟು ಮಾಡುತ್ತದೆ. ಈ ಇದ್ದಲಿಯಿಂದ ಹುಟ್ಟಿದ ವಾಯುವು ವರ್ಣಹೀನವಾದ ಅದೃಶ್ಯಪದಾರ್ಥವಿರುತ್ತದೆಂತಲೂ, ಸಾಮಾನ್ಯಹವೆಗಿಂತ ಹಗುರಿರುತ್ತದೆಂತಲೂ, ಜ್ವಾಲಾಗ್ರಾಹಿಯಾಗಿರುತ್ತದೆಂತಲೂ ಪದಾರ್ಥವಿಜ್ಞಾನ ಶಾಸ್ತ್ರದ ಮೊನಲನೇ ಪುಸ್ತಕದಲ್ಲಿ ಬರೆದಿರುತ್ತದಷ್ಟೇ? ಈ ಸಂಗತಿಗಳನ್ನು ಮನಗಾಣುವದಕ್ಕಾಗಿ ಕೆಲವು ಪ್ರಯೋಗಗಳನ್ನು ಮಾಡಿನೋಡುವ.

ಮುಂಬಯಿಯಂಥ ದೊಡ್ಡ ಪಟ್ಟಣಗಳಲ್ಲಿ ಇದ್ದಲಿಯ ಹೊಡೆಯು ದೀಪವನ್ನು ಹಚ್ಚುತ್ತಾರೆಂದು ಮೇಲೆ ಹೇಳಿದ್ದೇವೆ. ಆದರೆ ನಾವು ಪ್ರಯೋಗದಲ್ಲಿ ತಕ್ಕೊಂಡ ಚಿಲಿಮೆಯಿಂದಲೂ, ಅದರೊಳಗೆ ಹಾಕಿದ ಚಿಮಟಿಗೆಯಷ್ಟು ಇದ್ದಲಿಯ ಪುಡಿಯಿಂದಲೂ ಆ ದೊಡ್ಡ ಪಟ್ಟಣವೆಲ್ಲಾ ಪ್ರಕಾಶಮಯವಾಗುವಷ್ಟು ಗ್ಯಾಸವು ಬೊರೆಯುವದು ಅಸಂಭವವು. ಅಲ್ಲಿ ಇಟ್ಟಂಗಿಯ ದೊಡ್ಡ ಭಟ್ಟಿಗಳನ್ನು ಕಟ್ಟಿ ಅವುಗಳಲ್ಲಿ ಸಾವಿರಾರು ಖಂಡಗ ಕಲ್ಲಿದ್ದಲಿಯನ್ನು ತುಂಬಿ ಹೊಗೆಯನ್ನು ತಯಾರ ಮಾಡಿ ಕಬ್ಬಿಣದ ಕೊಳವೆಗಳಿಂದ ದೊಡ್ಡ ದೊಡ್ಡ

ತೋಪಪಾತ್ರೆಗಳಲ್ಲಿ ಸಂಗ್ರಹಿಸಿಡುತ್ತಾರೆ. ಬಳಿಕ ಸಣ್ಣ ಸಣ್ಣ ಕೊಳವೆಗಳೊಳಗಿಂದ ಬೀದಿಬೀದಿಗೆ ಒಯ್ದು ದೀಪ ಹಚ್ಚುತ್ತಾರೆ ಒಳ್ಳೇದು ಇನ್ನು ನಾವು ಪ್ರಕೃತವಿಷಯವ ನ್ನು ಮುಂದೆ ಸಾಗಿಸುವ.

ಪ್ರಯೋಗದಲ್ಲಿ ತಕ್ಕೊಂಡ ಚಿಲಿಮೆಯನ್ನು ಮುಂದಿಟ್ಟು ಕೋ. ಅದರ ಮುಚ್ಚಳವನ್ನು ತಗಬೊಗಿ, ಒಳಗೇನದೆ ನೋಡು. ಅಗೋ ಮೊದಲಿನ ಇದ್ದಲಿಯ ಪುಡಿಯ ಬದಲಾ ಗಿ ಬಿಳಿ ಇದ್ದಲಿಯದೊಂದು ತುಂಡು ಕಾಣುವದಿಲ್ಲವೇ? ಇದೇನು? ಇದು ಆ ಕಲ್ಲಿದ್ದಲಿಯೊಳಗಿನ ಶುದ್ಧವಾದ ಕಾ ರ್ಬೊನ್ನು ಕಲ್ಲಿದ್ದಲಿಯೊಳಗಿನ ಕಾರ್ಬೊನ್ನಿನ ಕೆಲವು ಭಾಗ ವು ವಾಯುರೂಪದಿಂದಲೂ, ಕೆಲವು ನೀರಿನ ರೂಪದಿಂದ ಲೂ, ಕೆಲವು ಕಾಡಿಗೆಯ ರೂಪದಿಂದಲೂ ಹಾರಿಹೋಗು ತ್ತದೆ. ನೀವು ಬೇಕಾದಾಗ ಕಲ್ಲಿದ್ದಲಿಗೆ ಬೆಂಕಿಕೊಟ್ಟು ಪರೀ ಕ್ಷಿಸಿದರೂ ಅದರೊಳಗೆ ನೀರು, ಕಾಡಿಗೆ, ವಾಯು ಈ ಮೂರೇ ಪದಾರ್ಥಗಳಿರುತ್ತವೆಂದು ಮನಗಾಣಬಹುದು.

ಕಲ್ಲಿದ್ದಲಿಯೊಳಗೆ ಹಲವು ಜಾತಿಗಳುಂಟು ಒಂದು ಜಾ ತಿಯ ಕಲ್ಲಿದ್ದಲಿಯಲ್ಲಿ ಕಾರ್ಬೊನ್ನ ಹೈದ್ರೊಜನಗಳು ಅಲ್ಪ ಪ್ರಮಾಣದಿಂದಿರುವದರಿಂದ ಆ ಇದ್ದಲಿಯಿಂದ ಜ್ವಾಲಾಗ್ರಾ ಹಿಯಾದ ಇದ್ದಲಿಯ ಹೊಗೆಯು ಅಲ್ಪಪ್ರಮಾಣದಿಂದಲೂ ಬಿಳಿ ಇದ್ದಲಿಯು ಹೆಚ್ಚು ಪ್ರಮಾಣದಿಂದಲೂ ಹುಟ್ಟುತ್ತವೆ.

ಇದ್ದಲಿಯು ಹೂ ಅಥವಾ ದೀಪೋಪಯೋಗಿಯಾದ ವಾ ಯುವಿನ ಹೊರ್ತು ಕಲ್ಲಿದ್ದಲಿಯಲ್ಲಿ ಇನ್ನೂ ಅನೇಕ ಘಟಕಗ ಳುಂಟು. ಹಡಗದ ದೊಡ್ಡ ದೊಡ್ಡ ಹಗ್ಗಗಳಿಗೂ ವಿಾನ ಬಳಿಗಾರನ ಜಾಳಿಗೆಗೂ ನೀರು ಹತ್ತಿ ಕೆಡಬಾರದೆಂದು ಹಚ್ಚುವ ಒಡನೆಯನ್ನು ಕಲ್ಲಿದ್ದಲಿಯಿಂದ ಮಾಡುತ್ತಾರೆ. ಹಾಸುಗಲ್ಲಿಗೆ ಹಚ್ಚುವ ಡಾಂಬರವೂ, ಅಂಗಡಿಯ ಹಲಿಗೆಗ ಳಿಗೆ ಹಚ್ಚುವ ತರತರದ ಬಣ್ಣವೂ ಕಲ್ಲಿದ್ದಲಿಯಿಂದಲೇ ಸಿದ್ಧ ಮಾಡಲ್ಪಡುತ್ತವೆ. ಅವುಗಳನ್ನು ಹ್ಯಾಗೆ ಸಿದ್ಧಮಾಡು ತ್ತಾರೆಂಬದನ್ನು ವಿವರಿಸಲಿಕ್ಕೆ ಸದ್ಯಕ್ಕೆ ಅವಕಾಶವಿಲ್ಲ.

೪೯. ಕಲ್ಲಿದ್ದಲಿಯ ಉಪಯೋಗವು— ಕಲ್ಲಿದ್ದಲಿಯು

ಎಹು ಉಪಯುಕ್ತವಾದ ಪದಾರ್ಥವು. ಇಂಗ್ಲಂಡದ ಘನತೆ
ಕ್ಕೆ ಕಲ್ಲಿದ್ದಲಿಯೇ ಬಲವಾದ ಕಾರಣವೆಂದು ನಿರಾತಂಕವಾಗಿ
ಹೇಳಬಹುದು. ಕಲ್ಲಿದ್ದಲಿಯು ಖನಿಗಳು ಆ ದೇಶದಲ್ಲಿ ಹೇರ
ಳವಾಗಿ ಉಂಟು. ಇದಲ್ಲದೆ ಅದನ್ನು ಕಣಿಯೊಳಗಿಂದ ತೆಗೆ
ಯುಲಿಕ್ಕೂ ಹೆಚ್ಚು ವೆಚ್ಚ ಬೀಳುವದಿಲ್ಲ. ಈ ಕಾರಣದಿಂದ
ಅದು ಅಗ್ಗವಾಗಿ ಮಾರಲ್ಪಡುತ್ತದೆ. ಈ ಅಸಾಧಾರಣವಾದ
ಸಾಧನವು ತರತರದ ಯಂತ್ರಗಳನ್ನು ರಚಿಸಲಿಕ್ಕೂ, ನಡಿ
ಸಲಿಕ್ಕೂ ಕಾರಣವಾಗಿ ಆ ಯಂತ್ರಗಳ ದ್ವಾರದಿಂದಲೇ ಆ
ದೇಶದ ಜನರ ಸುಖವನ್ನು ಸಹ ಬೆಳಿಸಲಿಕ್ಕೆ ಸಮರ್ಥವಾಗಿ
ರುತ್ತದೆ. ಮತ್ತು ಕಲ್ಲಿದ್ದಲಿಯು ವಿಪುಲವಾಗಿ ದೊರೆಯು
ತ್ತಿರದಿದ್ದರೆ ಚಳಿಗಾಲದಲ್ಲಿ ಇಂಗ್ಲಂಡದ ಒಬ್ಬ ಮನುಷ್ಯನಾ
ದರು ಬಾಳುವದು ಅಸಂಭವವಾಗಿತ್ತು. ಈ ದೇಶದ ಸಂಪ
ತ್ತಿಯು ಬೆಳುವಣಿಗೆಗೆ ಕಾರಣವಾದ ಉಗೆಬಂಡಿ, ಉಗೆಹಡ
ಗ ಮೊದಲಾದ ಯಂತ್ರಗಳನ್ನು ರಚಿಸಲಿಕ್ಕೂ, ನಡಿಸಲಿ
ಕ್ಕೂ ಪ್ರಧಾನಸಾಧನವಾದ ಕಲ್ಲಿದ್ದಲಿಯೇ ಇಲ್ಲದಿದ್ದರೆ ಇವು
ಹುಟ್ಟುವದೂ ನಡಿಯುವದೂ ಅಸಂಭವವಲ್ಲವೇ? ಇಂ
ಗ್ಲಂಡನಲ್ಲಿ ಲ್ಯಾಂಕಶಾಯರ್ ಪ್ರಾಂತದಲ್ಲಿ ಕಲ್ಲಿದ್ದಲಿಯ ಕಣಿ
ಗಳು ಸಮೃದ್ಧಿಯಾಗಿರುತ್ತವೆ. ಅದರಿಂದ ಆ ಪ್ರಾಂತದಲ್ಲಿ
ನೂಲುವ ನೇಯುವ ಯಂತ್ರಗಳಾದರೂ ಹೇರಳವಾಗಿರುತ್ತ
ವೆ. ಆದರೆ ಕೆಂಟ್, ಎಸೆಕ್ಸ, ಸಸೆಕ್ಸ ಮುಂತಾದ ಪ್ರಾಂತಗ
ಳಲ್ಲಿ ಇದ್ದಲಿಯ ಕಣಿಗಳಿಲ್ಲ. ಆದ್ದರಿಂದ ಆ ಪ್ರಾಂತದ ಜನ
ರು ಒಕ್ಕಲತನದಿಂದ ಜೀವಿಸುತ್ತಾರೆ. ಸಾರಾಂಶವೇನೆಂದರೆ
ಕಲ್ಲಿದ್ದಲಿಯು ವಿಪುಲವಾಗಿ ದೊರೆಯುವ ದೇಶದವರು ಕಾ
ರಖಾನೆಗಳಿಂದಲೂ, ಮಿಕ್ಕ ದೇಶದವರು ಒಕ್ಕಲತನದಿಂದ
ಜೀವ ತಮ್ಮ ಉಪಜೀವನ ಸಾಗಿಸಿಕೊಳ್ಳುವದು ಸ್ವಾಭಾವಿಕ
ವು. ಈ ನಮ್ಮ ಭರತಖಂಡವು ಎರಡನೇ ವರ್ಗದ ದೇಶ
ವಾಗಿರುತ್ತದೆ.

೧೫ನೇ ಪಾಠ.

ಭೂಮಿ.

೬೦. ಇದ್ದಲಿಯಿಂದ ಹುಟ್ಟಿದ ವಾಯುವೂ ದೀಪದ ಜ್ಯೋ
ತಿಯೂ—ಮಕ್ಕಳಿರಾ ನಾವು ಇನ್ನು ದೀಪದ ಜ್ಯೋತಿಯ

ಜ್ಜಿರೂಪವನ್ನು ತಿಳುಕೊಳ್ಳುವದಕ್ಕಾಗಿ ಇದ್ದಲಿಯು ಹೆಗೊ
ಯನ್ನು ತೆಗೆದುಕೊಂಡು ಕೆಲವು ಪ್ರಯೋಗಗಳನ್ನು ಮಾಡಿ
ನೋಡುವ.

ಪ್ರಯೋಗ-೩೫. ನಾವು ಹಿಂದೆ ೧೮ ನೇ ಪ್ರಯೋಗದಲ್ಲಿ
ಹೈದ್ರೋಜನ್ ವಾಯುವನ್ನು ಉರಿಸಿ ನೋಡಿದ್ದೇವೆ. ಆದರೆ
ಆ ವಾಯುವಿನ ದೀಪದ ಜ್ಯೋತಿಯು ಅಷ್ಟು ಸ್ಪಷ್ಟವಾಗಿ
ಕಾಣಲಿಲ್ಲ. ಆದರೆ ಈ ಇದ್ದಲಿಯ ಹೊಗೆಯ ದೀಪದ
ಜ್ಯೋತಿಯು ಒಳ್ಳೇ ತೇಜಃಪುಂಜವಾಗಿ ಕಾಣುವದು. ಬನ್ಸ
ನ್ನನೆಂಬವನೊಬ್ಬ ಕಲ್ಪಕನು ವಾಯುವನ್ನು ಉರಿಸುವದೊಂ
ದು ಕುಂದೀಲವನ್ನು ರಚಿಸಿದ್ದಾನೆ ಆಕೃತಿ ನೋಡು. ಈ
ಯಂತ್ರದಲ್ಲಿರುವ ತೂತನ್ನು ನಾವು ಬೊಟ್ಟಿನಿಂದ ಮುಚ್ಚಿದರೆ
ಒಳಗಿನ ಹೊಗೆಯ ದೀಪವು ಹೆಚ್ಚು ಢಾಳಾಗಿ ಉರಯುವ
ದು. ಯಾಕಂದರೆ ಹೊಗೆಯೊಳಗಿನ ಕಾರ್ಬೊನ್ನು ಅಥವಾ
ಕಾಡಿಗೆಯು ಸಣ್ಣ ಕಣಗಳ ರೂಪದಿಂದ ಜ್ವಾಲೆಯಲ್ಲಿ ಶಿಕ್ಕು
ಉರಿಯುವದರಿಂದ ಜ್ಯೋತಿಯು ಹೆಚ್ಚು ಪ್ರಕಾಶಮಾನವಾ
ಗಿ ತೋರುವದು ಈ ಪ್ರಕಾಶಮಾನವಾದ ಜ್ಯೋತಿಯ
ಮೇಲೆ ನಾಲ್ಕಾರು ಬೆರಳುಗಳ ಅಂತರದಲ್ಲಿ ಬಿಂದು ಬಿಳೇ
ಕಾಗದವನ್ನು ಹಿಡಿದರೆ ಅದಕ್ಕೆ ಕಾಡಿಗೆಗವಿಯುತ್ತದೆ. ಆದ
ರೆ ತೂತಿನಮೇಲಿನ ಬೊಟ್ಟು ತೆಗೆದ ಕೂಡಲೆ ದೀಪವು ಮಂ
ದವಾಗುವದು. ನಿಸ್ತೇಜವಾದ ಜ್ಯೋತಿಯಮೇಲೆ ಹಿಡಿದ
ಕಾಗದದ ಮೇಲ್ಮೈಯು ಇದ್ದಂತಿರುತ್ತದೆ. ದೀಪದ ಜ್ಯೋ
ತಿಯು ಒಳ್ಳೇ ಪ್ರಕಾಶಮಾನವಾಗಿದ್ದಾಗ ಜ್ವಲನಕ್ರಿಯೆಯು
ಪೂರ್ಣವಾಗಿ ನಡೆಯುತ್ತದೆಂದು ತಿಳಿಯಲಾಗದು ಯಾಕಂ
ದರೆ ಕಾರ್ಬೊನ್ನಿನ ದೊಡ್ಡ ದೊಡ್ಡ ಕಣಗಳು ಆ ಕಾಲದಲ್ಲಿ
ಆ ಜ್ಯೋತಿಯೊಡನೆ ಹಾರಿಹೋಗುತ್ತಿರುತ್ತವೆ. ಜ್ಯೋತಿ
ಯು ಮಂದವಾಗಿದ್ದಾಗ ಈ ಯಂತ್ರದ ಬದಿಗಿರುವ ತೂತಿ
ನೊಳಗಿಂದ ಹವೆಯು ಒಳಸೇರುವದರಿಂದ ಯಂತ್ರದೊಳಗಿ
ನ ಕಾರ್ಬೊನೆಲ್ಲವು ಸುಡುತ್ತಿರುತ್ತದೆ. ಇದ್ದಲಿಯ ಹೊಗೆ
ಯೂ ಸಾಮಾನ್ಯ ಹವೆಯೂ ಕೂಡಿ ಉಂಟಾದ ಹೊಸ
ಮಿಶ್ರಣವು ಸುಡುತ್ತಿರುತ್ತದೆ.

ಪ್ರಯೋಗ—೩೬. ಸಾಧಾರಣವಾಗಿ ಮೇಣಬತ್ತಿಯು ದೀಪದ ಜ್ಯೋತಿಯು ಹ್ಯಾಗಿರುತ್ತದೆ? ಮತ್ತು ಆ ಜ್ಯೋತಿಯ ಮಂಡಲದಲ್ಲಿ ಎಷ್ಟು ವಲಯಗಳಿರುತ್ತವೆ? ಮುಂತಾದ ಸಂಗತಿಗಳನ್ನು ತಿಳುಕೊಳ್ಳುವದು ಪ್ರಯೋಜನಕರವಾದದ್ದೂ ಆನಂದಕರವಾದದ್ದೂ ಆಗಿರುತ್ತದೆ. ಆದ್ದರಿಂದ ನೀವು ಈ ಮೇಣಬತ್ತಿಯನ್ನು ಹಚ್ಚಿ ಗಾಳಿಗೆ ಜ್ಯೋತಿಯು ಹೊಯ್ದಾಡದಂತೆ ಜಾಟಿಗೆ ಇಡಿರಿ. ಇನ್ನು ದೀಪದ ಜ್ಯೋತಿಯನ್ನು ದಿಟ್ಟಿಸಿ ನೋಡಿರಿ. ಅದರಲ್ಲಿ ಮೂರು ಬೇರೆ ಬೇರೆ ವಲಯಗಳು ಒಂದರೊಳಗೊಂದು ಇರುತ್ತವೆಂದು ಕಾಣುತ್ತವಲ್ಲವೇ?

೧. ತೀರ ಹೊರಗಿನ ಭಾಗವು ಅಥವಾ ವಲಯವು ನೀಲವರ್ಣದ್ದಿದ್ದು ಅಷ್ಟು ನಿಚ್ಚಳವಾಗಿ ಕಾಣುವದಿಲ್ಲ. ಈ ಭಾಗದಲ್ಲಿ ಜ್ವಲನಕ್ರಿಯೆಯು ಪೂರ್ಣವಾಗಿ ನಡೆಯುತ್ತಿರುತ್ತದೆ.

೨. ಮೇಲೆ ವರ್ಣಿಸಿದ ಭಾಗದ ಒಳಬದಿಗೆ ಒಂದು ಒಳ್ಳೇ ಪ್ರಕಾಶಮಾನವಾದ ಎರಡನೇ ಭಾಗವಿರುತ್ತದೆ. ಈ ಭಾಗದಲ್ಲಿ ಕಾಡಿಗೆ ಮುಂತಾದ ಒಡನೆಗಳು ಸುಡದೆಹಾಗೆ ಹೊರಬಿದ್ದುಹೋಗುತ್ತಿರುತ್ತವೆ. ಜ್ವಲನಕ್ರಿಯೆಯಾದರೂ ಪೂರ್ಣವಾಗಿ ನಡೆಯುತ್ತಿರುವದಿಲ್ಲ

೩. ಮೇಲೆ ಬಣ್ಣಿಸಿದವುಗಳ ಹೊರತು ಬತ್ತಿಯ ಸುತ್ತುಮುತ್ತು ಬೇರೊಂದು ಕಪ್ಪು ಬಣ್ಣದ ಭಾಗವದೆ ನೋಡು. ಈ ಭಾಗದಲ್ಲಿ ಬತ್ತಿಯೊಳಗಿಂದ ಹೊರಡುವ ಹೊಗೆಯು ಜ್ವಲನದ ಪೂರ್ವಸ್ಥಿತಿಯ ರೂಪದಿಂದ ಇರುತ್ತದೆ. ದೀಪವು ಗ್ಯಾಸವನ್ನು ಸಿದ್ಧಮಾಡುವದೊಂದು ಸಣ್ಣ ಕಾರಖಾನೆಯೇ ಆಗಿದೆ ಮೇಣವು ಅಥವಾ ಎಣ್ಣೆಯು ಇದ್ದಲ್ಲಿಯೇ ಆಗಿಯಾಗಿ ಒತ್ತಿಗುಂಟ ಹೊರಬಿದ್ದು ಉರಿಯುತ್ತಿರುವದು.

ತೀರ ಒಳಗಿನ ಭಾಗದಲ್ಲಿ ಬರೇ ಹೊಗೆ ಇರುತ್ತದೆಂಬುವದನ್ನು ಸುಲಭವಾಗಿ ತೋರಿಸಬಹುದು. ಒಂದು ಕಾಜಿನ ಸೊಟ್ಟ ಕೊಳವೆಯನ್ನು ತಕ್ಕೊಂಡು ಅದರದೊಂದು ತುದಿಯನ್ನು ಜ್ಯೋತಿಯೊಳಗಿನ ಮೂರನೇ ಭಾಗದಲ್ಲಿ ಸೇರಿಸು. ಆಗೋ ಆ ಕೊಳವೆಯ ಎರಡನೇ ಬಾಯಿಂದ ಒಂದು ಪ್ರಕಾರದ ಹೊಗೆಯು ಬರುತ್ತದೆ. ಅದಕ್ಕೆ ದೀಪವನ್ನು ಮುಟ್ಟಿಸು. ನೋಡು ಅದು ಸ್ವತಂತ್ರವಾಗಿ ಹ್ಯಾಗೆ ಉರಿಯುತ್ತದೆ?

ಳಗ. ಕಲ್ಲಿದ್ದಲಿಯು ಕಣಿಯಲ್ಲಿ ಒಮ್ಮೊಮ್ಮೆ ಬಹು ಭಯಂಕರವಾದ ಸಪ್ಪಳವು ಕೇಳಿಬರುತ್ತದೆ. ಅದರೆ ಆ ಸಪ್ಪಳವು ಯಾಕೆ ಹುಟ್ಟುತ್ತದೆ? ಅದು ಹುಟ್ಟುವಂತೆ ಏನು ಪಂಚಾಕೆ ಮಾಡಬೇಕು?

ಇದ್ದಲಿಯು ಕಣಿಯೊಳಗೆ ಒಂದು ತರದ ವಾಯುವು ಉತ್ಪನ್ನವಾಗುತ್ತದೆ. ಅದಕ್ಕೆ ಅಗ್ನಿಧೂಮವೆನ್ನುವರು. ಇದು ಇದ್ದಲಿಯ ಹೊಗೆಯು ಒಂದು ವಿಶೇಷ ಪ್ರಕಾರವಷ್ಟುಂಟು. ಇದು ತೀವ್ರಜ್ವಾಲಾಗ್ರಾಹಿಯು, ಇದಕ್ಕೆ ಬೆಂಕಿ ತಗಲುವದಂತು ಒತ್ತಟ್ಟಿಗಿರಲಿ, ಸಾವಾನ್ಯ ಹವೆಯ ಸಂಪರ್ಕವಾದ ಕೂಡಲೆ ಹೊತ್ತಿ ಉರಿಯಲಾರಂಭಿಸುವದು. ಮತ್ತು ಉರಿಯುವಾಗ ದೊಡ್ಡ ಸಪ್ಪಳವಾಗುವದು. ಕಣಿಯಲ್ಲಿ ಕತ್ತಲೆ ಒಡಳವಾಗಿರುವದರಿಂದ ಕೆಲಸ ಮಾಡುವವರು ದೀಪವನ್ನು ಒಯ್ಯುವರು ಅದರೆ ಈ ವಾಯುವು ಕಣಿಯಲ್ಲಿ ತುಂಬಿಕೊಂಡಿರುವದರಿಂದ ದೀಪದ ಹೊಂದಿಗಿರುವ ವಾಯುವು ಮೊದಲಿಗೆ ಹೊತ್ತುವದು. ಮುಂದೆ ಭಗ್ಗೆಂದು ಕಣ್ಣು ಮುಚ್ಚಿ ಕಣ್ಣು ತೆರಿಯುವಷ್ಟರಲ್ಲಿ ಕಣಿಯಲ್ಲಿದ್ದ ಎಲ್ಲ ವಾಯುವಿಗೆ ಬೆಂಕಿ ಕತ್ತಿ ಒಳಗಿದ್ದ ಸರ್ವ ಪ್ರಾಣಿಗಳು ಸುಟ್ಟುಕೊಂಡು ಮಡಿದ ಉದಾಹರಣೆಗಳೆಷ್ಟೋ ಉಂಟು. ಈ ಅನರ್ಥವನ್ನು ಪರಿಹರಿಸುವದಕ್ಕಾಗಿ ಸರ್ ಹಂಫ್ರಿ ಡೇವಿ ಎಂಬ ಕಲ್ಪಕನು ಒಂದು ಜಪು ತ್ಕಾರವಾದ ಕಂದೀಲು ಮಾಡಿದ್ದಾನೆ ಈ ದೀಪಕ್ಕೆ ಸಂರಕ್ಷಣಿಯ ದೀಪವೆಂದು ಹೆಸರು ಕೊಡಬಹುದು. ಇದು ಬಳಕೆಯಲ್ಲಿ ಬಂದಂದಿನಿಂದ ಕಣಿಯಲ್ಲಿ ಸುಟ್ಟುಕೊಂಡು ಸಾಯುವ ಭಯವು ಇಲ್ಲದಂತಾಗಿದೆ. ಈ ದೀಪದಿಂದ ಕಣಿಯೊಳಗಿನ ಹೊಗೆಗೆ ಯಾಕೆ ಬೆಂಕಿ ಬತ್ತುವದಿಲ್ಲೆಂಬದನ್ನು ಆಲೋಚಿಸುವ.

ಪ್ರಯೋಗ ೩೭.—ಮೇಲೆ ಬಸ್ಸನ್ನನ ದೀಪವನ್ನು ಬಣ್ಣಿಸಿದ್ದೇವಷ್ಟೇ. ಆ ದೀಪದ ಮೇಲೆ ತೀರ ಸವಿವಾದದಲ್ಲಿ ಕಬ್ಬಿಣದ ತಂತಿಯಿಂದ ದಟ್ಟಾಗಿ ಹೆಣೆದ ಜಾಳಿಗೆಯನ್ನು ಹಿಡಿ. ಅದು ನೋಡು ದೀಪದ ಜ್ವಾಲೆಯು ತಂತಿಯ ತೂತಿನೊಳಗಿಂದ ಮೇಲ್ಗಡಿಗೆ ಹಾಯದೆ ಜಾಳಿಗೆಯ ಕೆಳಗಡೆಯಲ್ಲಿಯೇ ಇರುತ್ತದೆ. ಹೊಗೆಯು ಮಾತ್ರ ತೂತಿನೊಳಗಿಂದ ವಾರಾಗಿ ಮೇಲಕ್ಕೆ ಹೋಗುತ್ತದೆ. ಇನ್ನು ಆ ಹೊಗೆಗೆ ಕಡ್ಡಿ ಕೊರೆದು ಹಚ್ಚು. ಅಗೋ ಆ ಹೊಗೆಯೂ

ಉರಿಯಲಾರಂಭಿಸಿತು. ಇನ್ನು ಈ ಜಾಳಿಗೆಯನ್ನು ದೀಪದಿಂದ ನಾಲ್ಕು ಬೊಟ್ಟು ಮೇಲಕ್ಕೆ ಸರಿಸು. ಮೇಲೊಂದು ಕೆಳಗೊಂದು ಹೀಗೆ ಎರಡು ದೀಪಗಳು ಹ್ಯಾಗೆ ಉರಿಯುತ್ತವೆ ನೋಡು. ದೀಪದ ಜ್ಯೋತಿಯು ಜಾಳಿಗೆಯೊಳಗಿಂದ ಪಾರಾಗಿ ಯಾಕೆ ಹೋಗಬಾರದು? ತಂತಿಯ ಜಾಳಿಗೆಯು ಒಳಗಿನ ಜ್ವಾಲೆಯ ಉಷ್ಣತೆಯನ್ನು ಹೀರಿಕೊಳ್ಳುವದರಿಂದ ಹೊರಗಿನ ವಾಯುವಿಗೆ ಉರಿ ಹಚ್ಚುವಷ್ಟು ಶಕ್ತಿಯು ಅದರೊಳಗೆ ಉಳಿಯುವದಿಲ್ಲ. ನಾವು ತಂತಿಯ ಜಾಳಿಗೆಯನ್ನು ಈ ದೀಪದ ಸುತ್ತುಕಡಿಯಲ್ಲಿಯೂ ಸುತ್ತಿದರೆ ದೀಪವು ಒಳಗಿಂದೊಳಗೆ ಉರಿಯುವದು. ದೀಪ ಉರಿಯಲಿಕ್ಕೆ ಬೇಕಾದ ಆಕ್ಸಿಜನ್‌ವು ಜಾಳಿಗೆಯ ತೂತಿನೊಳಗಿಂದ ಒಳಸೇರುವದು. ಬೆಳಕು ಹೊರಬೀಳುವದು. ಆದರೆ ಜ್ವಾಲೆಯು ಎಂದಿಗೂ ಹೊರಬೀಳದು. ಆದ್ದರಿಂದ ಡೇವೀ ಸಾಹೇಬನು ತನ್ನ ಕಲ್ಪಕತನದಿಂದ ಈ ದೀಪವನ್ನು ರಚಿಸಿ, ಹೊಟ್ಟೆಗಾಗಿ ದುಡಿಯುತ್ತಿದ್ದ ಒಡ ಕೂಲಿಕಾರರ ಜೀವವನ್ನು ಕಾಪಾಡಿದನು. ಕಣಿಗಳೊಳಗಿನ ಪದಾರ್ಥಗಳು ಬೆಂಕಿಯಿಂದ ಸುಟ್ಟು ಹೋಗುವದರಿಂದ ಕೋಟಿಗಟ್ಟಲೆ ಹಣ ಕಳಕೊಂಡು ಕಷ್ಟಕ್ಕೆ ಗುರಿಯಾಗಬೇಕೆಂದು ಹಗಲಿರುಳು ಚಿಂತಿಸುತ್ತಿದ್ದ ಕಣಿಗಳ ಒಡೆಯರ ಮನದಳಲನ್ನು ಕಿತ್ತೊಗೆದನು. ಇಷ್ಟೇ ಅಲ್ಲ, ಬೇರೊಂದು ಬಗೆಯಿಂದ ವಿಚಾರಿಸಿದರೆ ಯಾವತ್ತು ಮಾನವ ಪ್ರಾಣಿಗಳಿಗೂ ಹಿತ ಮಾಡಿದನೆಂದು ಒಡಿದು ಕಾಣುತ್ತದೆ. ನೋಡಿರಿ ಶಾಸ್ತ್ರೀಯ ಜ್ಞಾನದ ಮಹಿಮೆಯು ಎಷ್ಟು ಘನವಾದದ್ದುಂಟು.

(ಸಶೇಷ.)

MANUAL OF METHOD.

ಶಿಕ್ಷಾಕ್ರಮ.

(೧೪೪ನೇ ಪುಟದಿಂದ ಮುಂದೆ ಸಾಗಿದ್ದು.)

ಮೊನ್ನೆ ಮೊನ್ನಿನ ತನಕ ಅಂದರೆ ೧೪೭೦ನೇ ಇಸ್ವಿಯವರೆಗೆ ನಮ್ಮ ಶಿಷ್ಟಣಪದ್ಧತಿಗಳೆಲ್ಲ ಡಿಡಕ್ಟಿವ್ (ವ್ಯಾಪ್ತಿಸಿದ್ಧ) ಪದ್ಧತಿಯನ್ನು ಅವಲಂಬಿಸಿದ್ದವು. ಇಂಡಕ್ಟಿವ್ (ವ್ಯಾಪ್ಯಸಾಧ್ಯ) ಪದ್ಧತಿಯು ಶಿಲ್ಪವಿದ್ಯದಲ್ಲಿ ಪ್ರಯೋಗಿಸಲ್ಪಟ್ಟಾಗ್ಯೂ ನಮ್ಮ ಶಾಲೆಗಳಲ್ಲಿ ಅದರ ಪ್ರವೇಕವಾಗಲಿಲ್ಲ.

ನಮ್ಮ ಯಾವತ್ತು ಮಧ್ಯಮಪ್ರತಿಯ ಮತ್ತು ಮೇಲ್ತರದ ಶಾಲೆಗಳಲ್ಲಿ ಪ್ರಾಚೀನ ಭಾಷೆಗಳ, ಪ್ರಾಚೀನ ತರ್ಕಶಾಸ್ತ್ರದ, ಪ್ರಾಚೀನ ಭೂಮಿತಿಶಾಸ್ತ್ರದ ಅಭ್ಯಾಸವು ಅವ್ಯಾಹತವಾಗಿ ನಡೆದಾಗ್ಯೂ ಮನುಷ್ಯನ ನಿತ್ಯ ವ್ಯವಹಾರಕ್ಕೆ ನಿಕಟ ಸಂಬಂಧವುಳ್ಳಂಥ ವ್ಯವಹಾರ ಶಾಸ್ತ್ರಗಳ ಅಧ್ಯಯನಕ್ಕೆ ಯಾರ ಮನಸ್ಸು ಎಳೆಯಲಿಲ್ಲ. ಆಗ್ಗೆ ಶಾಲೆಗಳಲ್ಲಿ ನಡೆಯುತ್ತಿರುವ ಪದ್ಧತಿಯಿಂದ ಅದರ ಸಂಕುಚಿತ ಪ್ರಯೋಜನವು ಸಹ ಈಡೇರಲಿಲ್ಲ. ಈ ಪದ್ಧತಿಯು ಕಲಿಯುವವರ ಬುದ್ಧಿಸಾಮರ್ಥ್ಯಗಳನ್ನು ಕೆಲಸಕ್ಕೆ ಹಚ್ಚಿ ಬೆಳಿಸುವದೆಂದು ಹೇಳುವರು. ಆದರೆ ಇದರಿಂದ ಸ್ಮರಣಶಕ್ತಿಯು ಬೆಳುವಣಿಗೆಯು ಅಲ್ಪಸ್ವಲ್ಪ ಸಾಧ್ಯವಾಗುತ್ತಿತ್ತೇ ಹೊರ್ತು ಬುದ್ಧಿ ಸಾಮರ್ಥ್ಯಗಳನ್ನು ಬಲಪಡಿಸುವ ಕಾರ್ಯವಾಗುತ್ತಿದ್ದಿಲ್ಲ. ಪೂರ್ವಿಕರು ಮಾಡಿದ್ದನ್ನೆಲ್ಲ ಕಂಡು ಅದರಿಂದ ಏನಂದ ಪಡುವದೂ ಪ್ರಯತ್ನಪೂರ್ವಕವಾಗಿ ಲಕ್ಷದಲ್ಲಿಡುವದೂ ಬೇಕಾದಾಗ ಅಂದು ತೋರಿಸುವದೂ ಇವೇ ಮೊದಲಾದವು ಈ ಪದ್ಧತಿಯ ಮುಖ್ಯ ಉದ್ದೇಶಗಳು. ಅದರಿಂದ ಪೂರ್ವಿಕರ ಕೃತಿಗಳ ಅನುಕರಣ ಮಾಡೋಣವೇ ನಾಲ್ಕೂ ಕಡೆಗೆ ತಲೆದೋರಿತು; ಅಲ್ಲದೆ ಅವರ ಕೃತಿಗಳನ್ನು ತರ್ಕರೀತಿಯಿಂದ ಪರೀಕ್ಷಿಸಿ ಅವುಗಳ ದ್ವಾರದಿಂದ ಹೊಸ ಯುಕ್ತಿಗಳನ್ನು ಹೊರಡಿಸುವಂಥವರೂ ಅವರ ವಿಚಾರ ಭಾಂಡಾರದಿಂದ ವ್ಯವಹಾರಕ್ಕೆ ಅನುಕೂಲವಾಗುವಂಥ ಹೊಸ ಹೊಸ ಕಲ್ಪನೆಗಳನ್ನು ನೆಲೆಗೊಳಿಸುವವರೂ ಹುಟ್ಟಲಿಲ್ಲ. ಈ ಜನರು ಅವರ ಸುತ್ತಲು ವರ್ತಿಸುವಂಥ ಸಂಗತಿಗಳ ಮತ್ತು ಅವುಗಳಿಂದ ಫಲಿಸುವ ಸಿದ್ಧಾಂತಗಳ ಗೊಡವೆಗೆ ಎಂದೂ ಹೋಗಲಿಲ್ಲ. ಸ್ಮರಣ ಸಾಮರ್ಥ್ಯಗಳಿಂದ ಶಾಸ್ತ್ರಾಭಿವೃದ್ಧಿಗೆ ಸಹಾಯವಾದರೂ ಅನುಕೂಲವಾಗಲಾರದೆಂಬ ಸಂಗತಿಯನ್ನು ಬೇಕನ್ನನು ಸಾರಿದನು. ಸ್ಮರಣ ಶಕ್ತಿಯುನ್ನೇ ಬೆಳಿಸಿದ ಮನುಷ್ಯನಿಗೂ ಶರೀರ ಸಾಮರ್ಥ್ಯವನ್ನೇ ಬೆಳಿಸಿದ ಡೊಂಬನಿಗೂ ಸಾಮ್ಯವುಂಟೆಂದು ಹೇಳಬಹುದು. ಇವರಿಬ್ಬರನ್ನು ಕಂಡು ಆಶ್ಚರ್ಯ ಹುಟ್ಟು

ವದಲ್ಲದೆ ಭಕ್ತಿ ಹುಟ್ಟಲಾರದು ಜೇಕನ್ನನ ತರುವಾಯ ಲಿದಂಥ ಲಾಕನೆಂಬ ತತ್ವಜ್ಞನಾದರೂ ಇದೇ ಮಾತನ್ನು ಪ್ರತಿಪಾದಿಸಿದನು

ಮಧ್ಯಕಾಲೀನರು ವ್ಯವಹಾರವನ್ನು ಶಾಸ್ತ್ರವನ್ನು ಬೇರೆಬೇರೆ ಮಾಡಿ ಇಟ್ಟಿದ್ದರು ಶಾಸ್ತ್ರಸಿದ್ಧಾಂತಗಳನ್ನು ವ್ಯವಹಾರಕ್ಕೆ ಹಚ್ಚುವದೆಂದರೆ ಶಾಸ್ತ್ರದ ಅವಮರ್ಯಾದೆಯಾಯಿತೆಂದು ಅನ್ನುವರು ಭೂಮಿತಿಯನ್ನು ವ್ಯವಹಾರದಲ್ಲಿ ಉಪಯೋಗಿಸುವದು ಅವರಿಗೆ ತೀರ ಅಸಮ್ಮತವು ಹಾಗೆ ಮಾಡಿದರೆ ತತ್ವಗಳಿಗೆ ಕುಂದು ಬರುವದೆಂದು ಅವರು ಪ್ರತಿಪಾದಿಸುವರು ಸಾರಾಂಶ, ಶಾಸ್ತ್ರವ್ಯವಹಾರ ಸಾಹಚರ್ಯವು ಪಾಪ ಮೂಲವಾದದ್ದು, ಶಾಸ್ತ್ರಕ್ಕೆ ಕುಂದು ತರುವಂಥಾದ್ದು ಎಂದು ಎಣಿಸುವರು. ಯುಕ್ಲಿಡದಿಂದಲೇ ಆರಂಭಿಸಿ ಯುಕ್ಲಿಡದಿಂದಲೇ ಸಮಾಪ್ತಿಯಾಗಬೇಕೆಂದು ಅವರು ಸಾರುವರು.

ಜೇಕನ್ನನ ಅಭಿಪ್ರಾಯವು ಹಾಗಲ್ಲ. ಶಾಸ್ತ್ರಗಳ ವ್ಯವಹಾರಾನುಕೂಲತೆಯೇ ಅವುಗಳ ಗೌರವಮೂಲವು ಅವುಗಳ ವ್ಯವಹಾರಾನುಕೂಲತೆಯು ನಮ್ಮ ಪ್ರಪಂಚದ ಕೊರತೆಗಳನ್ನು ಪೂರೈಸುವ ಸಾಮರ್ಥ್ಯವನ್ನು ಹುಟ್ಟಿಸುವದೇ ಶಿಕ್ಷಣದ ಮುಖ್ಯಾಂಗವಾಗಿರುವದೆಂತಲೂ ಶಾಸ್ತ್ರಸಿದ್ಧಾಂತಗಳನ್ನು ವ್ಯವಹಾರಗಳಲ್ಲಿ ಪ್ರಯೋಗಿಸುವದರಿಂದ ಮನಃ ಶಿಕ್ಷಣಕ್ಕೆ ಕುಂದು ಬರುವದಕ್ಕಿಂತ ಅದು ಪೂರ್ಣವೂ ಸರಸವೂ ಆಗುವದೆಂತಲೂ ವಾದಿಸುವರು. ಗಣಿತ ಶಾಸ್ತ್ರವು ಶಾಸ್ತ್ರಕಲೆಗಳ ಬೆಳುವಣಿಗೆಗೆ ಮೆಲ್ತರದ ಸಾಧನವೆಂತಲೂ ತದಿತರ ನೃಷ್ಟಿಯಿಂದ ಅದನ್ನು ಅಭ್ಯಾಸಿಸುವದು ನಿಷ್ಫಲವಾದದ್ದೆಂತಲೂ ಜೇಕನ್ನನ ಅಭಿಪ್ರಾಯವು. ಸಾರಾಂಶ, ಹಳೇ ಹೊಸ ಪದ್ಧತಿಗಳ ಉದ್ದೇಶವು ಒಂದೇ* ಆದಾಗ್ಯೂ ಫಲಿತವು ಭಿನ್ನವಾಗಿರುವದು.

---

* ಯಾವತ್ತೂ ಪದ್ಧತಿಗಳ ಉದ್ದೇಶವು ಅಂದರೆ ಮುಖ್ಯತಃ ಶಿಕ್ಷಣದ ಉದ್ದೇಶವು ಮನುಷ್ಯನ ಸುಖದ ವ್ಯವಹಾರವನ್ನು ಬೆಳೆಸುವದಿರುತ್ತದೆ.

ಪ್ರಗತಿ ಪ್ರಯೋಜನಗಳನ್ನು ಲೌಕಿಕ ದೃಷ್ಟಿಯಿಂದ ವಿಚಾರಿಸಲು ಶಿಕ್ಷಣವು ಶಿಕ್ಷಕ ಶಿಕ್ಷಿತರಲ್ಲಿ ತಮ್ಮ ಕರ್ತವ್ಯಗಳನ್ನು ಜರಗಿಸುವ ಸಾಮರ್ಥ್ಯಗಳನ್ನು ಹುಟ್ಟಿಸಲಿಕ್ಕೆ ತಕ್ಕದ್ದಾಗಿರಬೇಕೆಂಬ ಸಂಗತಿಯು ಫಲಿತವಾಗುತ್ತದೆ ಆದರೆ ಹಳೆ ಪದ್ಧತಿಯಿಂದ ಕಲಿತಂಥ ಶ್ರೇಷ್ಠ ಸ್ಥಿತಿಯ ಶಿಕ್ಷಕನಿಗೆ ಬಿತಿಗನ ಕೇಳುತರದ ಕರ್ತವ್ಯಗಳ ಪ್ರಯೋಜನಗಳ ಗೋಜೇನು? ಉಪ್ಪಾರನ ಗೊಡವೆ ಏಸು? ನೇಕಾರರ ದರಕಾರವೇನು? ಅವರ ಅಭ್ಯಾಸಕ್ಕೂ ವ್ಯವಹಾರಕ್ಕೂ ಈ ಜನರ ಅಭ್ಯಾಸ ವ್ಯವಹಾರಗಳಿಗೂ ಭೂಮ್ಯಾಕಾಶಗಳಷ್ಟು ಅಂತರವು. ಈ ಜನರ ವಿಚಾರಸರಣಿಯೂ ಪರಿಪಾಠವೂ ಅವರಿಗೆ ರವಷ್ಟಾದರೂ ಗೊತ್ತಿರುವದಿಲ್ಲ ಮತ್ತು ಅವನ್ನು ಕುರಿತು ಅವರು ಆಲೋಚಿಸುವದಿಲ್ಲ ಈ ತರದ ಶಿಕ್ಷಕನಿಗೂ ಶಿಕ್ಷಿತರಿಗೂ ಇರುವ ಅಭ್ಯಂತರವು ಹೇಳಲಳವಲ್ಲ. ಶಿಕ್ಷಕನು ಕೇವಲ ಕಾಲ್ಪನಿಕ ತರ್ಕಜ್ಞಾನದಲ್ಲಿ ಮುಳುಗಿದವನು ಶಿಕ್ಷಿತರು ಪ್ರತ್ಯಕ್ಷ ವ್ಯವಹಾರದಲ್ಲಿ ಸುಳಿದಾಡುವರು. ಇವರಿಬ್ಬರಿಗೂ ಶಿಕ್ಷಕ ಶಿಕ್ಷಿತರ ಸಂಬಂಧವು ಕೂಡುವದು ಹ್ಯಾಗೆ?

ಸ್ವಾರ್ಥವು ಮನುಷ್ಯನ ಅವಲೋಕನಗಳನ್ನು ಚುರುಕುಗೊಳಿಸುತ್ತದೆ. ಮತ್ತು ಉಳಿದ ಎಲ್ಲ ಬುದ್ಧಿಸಾಮರ್ಥ್ಯಗಳನ್ನು ಬಲಪಡಿಸುತ್ತದೆ. ಕಾರಾಗೀರನು ಸಾಮಾನ್ಯ ಸಿದ್ಧಾಂತಗಳನ್ನು ವ್ಯಾಪ್ತ್ಯಸಾಧ್ಯ ಪದ್ಧತಿಯಿಂದ ಹೊರಡಿಸುವನು. ಆ ಕ್ರಮದ ಆಧಾರದಿಂದಲೇ ಹೊಸ ಹೊಸ ಹಂಚಿಕೆಗಳನ್ನೇ ಕೈಕೊಳ್ಳುವನು. ಈ ಪದ್ಧತಿಯು ಅನುಮಾನಗಳ ನಿಜತತ್ವದಲ್ಲಿಯೂ ಅಚ್ಚುಕಟ್ಟುತನದಲ್ಲಿಯೂ ಅವನ ಪೂರ್ಣ ನಂಬಿಗೆಯುಂಟು ಮತ್ತು ಈ ಹಂಚಿಕೆಗಳನ್ನು ಅವನು ಎಚ್ಚರದಿಂದಲೂ ಆದರದಿಂದಲೂ ಕೊನೆಗಾಣಿಸುವನು ಅವನ ಸ್ವಾರ್ಥಸಾಧನವು ಈ ಹಂಚಿಕೆಗಳ ಸಾರ್ಥಕ್ಯದಿಂದ ಸಿದ್ಧವಾಗುವದಿರುತ್ತದೆ. ಮಧ್ಯಕಾಲದಲ್ಲಿ ತತ್ವಶಾಸ್ತ್ರದೊಳಗೆ ಯಾವ ಸುಧಾರಣೆಗಳು ಆಗದಿದ್ದಾಗ್ಯೂ ಕಲೆಗಳು ಸುಧಾರಿಸುತ್ತ ಹೋದವುದರ ಮರ್ಮವು ಇದೇ. ಜೇಕನ್ನನು ಈ

ಕಾರತಮ್ಯವನ್ನು ಕಂಡು ತತ್ಪವಿಚಾರಕ್ಕಾದರೂ ವ್ಯಾಪ್ಯಸಾಧ್ಯ ಪದ್ಧತಿಯೇ ಪ್ರಯೋಜನಕರವಾದದ್ದೆಂದು ನಿರ್ಣಯಿಸಿದನು. ಕಾರಾಗೀರನು ಅನುಸರಿಸಿದ ಪದ್ಧತಿಯನ್ನು ಶಾಸ್ತ್ರವಿಚಾರದಲ್ಲಿ ಸ್ವೀಕರಿಸಲು ಎಲ್ಲ ಶಾಸ್ತ್ರಗಳು ಭರದಿಂದ ಸಾಗುವವೆಂಬ ಸೂಕ್ಷ್ಮ ಅವಲೋಕನದಿಂದ ಶಾಸ್ತ್ರವಿಚಾರ ಪದ್ಧತಿಯನ್ನು ಕಂಡು ಹಿಡಿದನು. ಅದೇ ಪದ್ಧತಿಯನ್ನು ಶಿಕ್ಷಣದ ವಿದ್ಯಾರ್ಥಿಯನ್ನು ಬಯಸುವವರು ಅನುಸರಿಸತಕ್ಕದ್ದು. ಕಾರಾಗೀರರ ವಿಚಾರಸರಣಿಯನ್ನೂ ಅನುಮಾನ ಕ್ರಮವನ್ನೂ ಆತ್ಮಶಿಕ್ಷಣದ ಬಗೆಗಳನ್ನೂ ಎಚ್ಚರದಿಂದ ತಿಳಿಕೊಂಡು ಶಿಕ್ಷಕನು ಕೆಲಸ ಸಾಗಿಸಿದರೆ ಬಹಳ ಹಿತವಾಗುವದು

ಬೇಕನ್ನನಂಥ ಬುದ್ಧಿಶಾಲಿಯೇ ಕಾರಖಾನೆಗಳ ಅವಲೋಕನದಿಂದ ಅಲ್ಲಲ್ಲಿ ತಲೆದೋರುವ ಪದ್ಧತಿಯನ್ನು ತತ್ಪಶಾಸ್ತ್ರ ವಿಚಾರದಲ್ಲಿ ಪ್ರಯೋಗಿಸಲು, ಆ ಪದ್ಧತಿಯನ್ನು ಸ್ವೀಕರಿಸಲಿಕ್ಕೆ ನಮಗೆ ಅನುಮಾನವೇನು? ಏನೂ ಇಲ್ಲ, ಇರಬಾರದು, ಸರಿ. ಆದರೆ ವಸ್ತುಸ್ಥಿತಿಯು ಹಾಗಿಲ್ಲ. ಮೇಲ್ತರದ ಶಿಕ್ಷಣವನ್ನು ಹೊಂದಿದ ಜನರ ಕೂಡ ಈ ಮಾತನ್ನು ಅಂದರೆ ಕಾರಖಾನೆಯೊಳಗಿರುವ ಜನರು ಅನುಸರಿಸುವ ಪದ್ಧತಿಯನ್ನೂ ನಿಯಮವನ್ನೂ ಶಾಸ್ತ್ರ ಪದ್ಧತಿಯಲ್ಲಿ ಉಪಕ್ರಮಿಸಬೇಕೆಂಬ ಮಾತನ್ನು ಪ್ರಸ್ತಾಪಿಸಲು ನಮ್ಮ ಉಪಹಾಸ ಮಾಡುವದಲ್ಲದೆ ಈ ಜನರಿಂದ ನಾವು ಕಲಿಯುವದೇನೆಂದು ಪ್ರತಿಪಾದಿಸುವರು ಸುಶಿಕ್ಷಿತ ಜನರು ಸಾಮಾನ್ಯ ಜನರಿಂದ ಕಲಿಯತಕ್ಕದ್ದೇನು? ಅಭ್ಯಾಸವನ್ನು ಸರಿಯಾಗಿ ಮಾಡಲಿಕ್ಕೆ ಅನುಕೂಲವಿಲ್ಲದಂಥ ಈ ಜನರಿಂದ ತಿಳುಕೊಳ್ಳುವದೇನು ಎಂದು ವಾದಿಸಬಹುದು ಈ ಸಾಮಾನ್ಯಸ್ಥಿತಿಯು ಕಾರಾಗೀರ ಜನರಿಗೆ ಮೇಲ್ತರದ ಶಿಕ್ಷಣವು ದೊರೆಯುವದು ಅಪರೂಪವೆಂಬ ಮಾತು ನಿಜವು. ಆದರೆ ಈ ಜನರು ಈ ಶಾಲೆಯನ್ನು ಬಿಟ್ಟಬಳಿಕ ಸ್ವಶಿಕ್ಷಣಕ್ರಮವನು ಅಂಗೀಕರಿಸುವರು ಈ ಸ್ವಶಿಕ್ಷಣದ ನಡತೆಯು ಪ್ರಯೋಜನಕರವಾಗಿರುವದು. ಇದರಿಂದಲೇ ಆ ಜನರು ಬಹು ಕುಶಲರೂ ತಮ್ಮ ರಾಷ್ಟ್ರಕ್ಕೆ ಭೂಷಣೀಭೂತರೂ ಆಗಿರುವದೆಂಬುದನ್ನು ಮರೆಯಕೂಡದು.

ಈ ಜೇಕನ್ನನ ಪದ್ಧತಿಯು ಶಿಕ್ಷಣಾಭಿಮಾನಿಗಳಿಗೆ ಮೊ ನ್ನೆಯಾಗಿ ಈಗ ೬೦ ವರ್ಷಗಳಾದವು. ಆದರೂ ಕಲಾಶಿಕ್ಷ ಣವು ಪ್ರಗತಿ ಪ್ರಯೋಜನಗಳ ಭೋರಣದಿಂದಲೇ ನಡೆಯು ತ್ತದೆಂದು ಹೇಳಲಿಕ್ಕೆ ಅಸ್ಪದವಿಲ್ಲ. ದೊಡ್ಡ ದೊಡ್ಡ ಹೆಸರಿನ ಕೆಳಗೆ ನಡೆಯುತ್ತಿರುವ ಹಳೆ ಪದ್ಧತಿಗಳೂ ಜುನಾದಿಯ ಸಮಾಜದವರು ಕೈಕೊಂಡ ಕಟ್ಟಳೆಗಳೂ ಈಗಲು ಅಮಲು ನಡಿಸುತ್ತವೆ ವಿಚಾರಸ್ವಾತಂತ್ರ್ಯವನ್ನೂ ಕ್ರಿಯಾಸ್ವಾತಂತ್ರ್ಯ ವನ್ನೂ ನಷ್ಟಗೊಳಿಸಿ ಜಿಜ್ಞಾಸೆಯನ್ನು ಮುರಿಬಡಿದು ಜ್ಞಾನದ ಪ್ರಗತಿಯನ್ನು ಪ್ರತಿಬಂಧಿಸುವ ತತ್ವದ ವಿಚಾರವು ಪೂರ್ಣ ವಾಗಿ ದೂರಾಗಲಿಲ್ಲ. ಕೆಲವು ತತ್ವವಿಚಾರಗಳು ಕಟ್ಟುಕಲ್ಪ ನೆಗಳನ್ನು ನಿರ್ಮಿಸಿ ವ್ಯಾಪ್ಯಸಾಧ್ಯ (ಇಂಡಕ್ಶನ್) ಪದ್ಧತಿಯ ನ್ನು ಮೂಲಿಗೊತ್ತಿದ್ದರಿಂದ ಪ್ಲೇಟೋ (ಕ್ರಿ. ಪೂ. ೪೮೯ ರಿಂ ದ ೩೪೭) ಇವನು ರಚಿಸಿದ ಪದ್ಧತಿಯು ಎರಡುಸಾವಿರ ವ ರ್ಷಗಳವರೆಗೆ ಮನುಷ್ಯನ ಬುದ್ಧಿಯನ್ನು ಅಂಕೆಯಲ್ಲಿಟ್ಟು ಅವ್ಯಾಹತವಾಗಿ ನಡೆದಾಗ್ಯೂ ಮನುಷ್ಯನ ಜ್ಞಾನದಲ್ಲಿ ಏನೂ ಪ್ರಯೋಜನಕರವಾದ ವಿವರ್ಧನ ಆಗಲಿಲ್ಲ.

ಜೇಕನ್ನನು ಮನುಷ್ಯನ ಮನಸ್ಸಿನ ಈ ದಾಸ್ಯತ್ವದ ಸ್ಥಿತಿ ಯನ್ನೂ ತಪ್ಪಿಸಿದನು. ಹಳೆ ಪದ್ಧತಿಯಿಂದಾದಂಥ ಅಥವಾ ಜ ನರು ನೆರೆನಂಬಿದಂಥ ಪಂಡಿತರು ಗೊತ್ತುಹಚ್ಚಿದ ತತ್ವಶೋ ಧಗಳಿಗಿಂತ ಹೆಚ್ಚು ಪ್ರಯೋಜನಕರವಾದಂಥ ಹೆಚ್ಚು ಗೌರವ ವುಳ್ಳಂಥ ಶೋಧಗಳನ್ನು ವ್ಯಾಪ್ಯಸಾಧ್ಯ ಪದ್ಧತಿಯಿಂದ ಮಾ ಡುವದು ಅನುಕೂಲವಾಗಿರುತ್ತದೆಂಬ ಮಾತು ಜೇಕನ್ನನು ನಿದರ್ಶನಕ್ಕೆ ತಂದುಕೊಟ್ಟನು. ವ್ಯಾಪ್ಯಸಾಧ್ಯ ಪದ್ಧತಿಯೇ ಮೇಲಾದದ್ದೆಂದು ಆಧುನಿಕ ಶೋಧಗಳಿಂದ ನಿರ್ವಿವಾದವಾಗಿ ಸಿದ್ಧವಾಗಿರುತ್ತದೆ.

ತಾತ್ವಿಕ ಪ್ರಶ್ನೆಗಳಲ್ಲಿ ಸ್ವತಂತ್ರವಾದ ನಿಜತ್ವದ ಗುಣವು ತೋರುವದೇ ಇಲ್ಲ. ತಾತ್ವಿಕ ವಿಚಾರಗಳಲ್ಲಿ ವಿಧಾನಗಳ ಸ್ವತಂತ್ರವಾದ ನಿಜತ್ವದ ಮಾತು ಇಲ್ಲೆಂದರೂ ಸಲ್ಲುವದು. ಭೂಮಿತಿಯ ಪ್ರಶ್ನೆಗಳನ್ನು ಖಂಡಿತವಾಗಿ ಬಿಡಿಸಲಿಕ್ಕೆ ಬಂದಂ ತೆ ವಿಜ್ಞಾನದ ಸಂಬಂಧದ ಪ್ರಶ್ನವು ಖಂಡಿತವಾಗಿ ಬರುವದಿಲ್ಲ.

ತಾತ್ವಿಕ ವಿಚಾರದ ವಿಧಾನಗಳ ಪ್ರಮಾಣಗಳಿಗೂ ಗಣಿತ ವಿಚಾರದ ವಿಧಾನಗಳ ಪ್ರಮಾಣಗಳಿಗೂ ಮಹದಂತರ ವುಂಟು.

ವ್ಯಾಪ್ತಿಸಾಧ್ಯ ಪದ್ಧತಿಯಿಂದ ನಡಿಸಿದ ವಿಚಾರಗಳಲ್ಲಿ ನಿಜವಾದವಾತು ಕೈಗೆ ನಿಲುಕದಿದ್ದರೂ ಅದರ ಸವಿಾಸವಿಾಪಕ್ಕೆ ಹೋಗಬಹುದು. ಈ ಪದ್ಧತಿಯಿಂದ ಉಂಟಾದ ವಿಧಾನಗಳು ಪ್ರಯೋಜನಕರವಾಗಿಯೂ ಆಯಾ ಕಾಲದ ಜನರ ಯೋಗ್ಯತೆಗೆ ಅನುಸಾರವಾಗಿಯೂ ನಿಜತ್ವವುಳ್ಳಂಥವುಗಳಾಗಿಯೂ ಇರುತ್ತವೆ. ವ್ಯಾಪ್ತಿಸಾಧ್ಯ ಪದ್ಧತಿಯು ವಿಚಾರಪ್ರತಿಬಂಧಕವಾಗಿಲ್ಲ. ಕಾರ್ಯಕಾರಣ ವಿಚಾರಗಳನ್ನು ನಡಿಸಲಿಕ್ಕೆ ಅನುಕೂಲವಾಗುತ್ತದೆ. ಪ್ರಭುತ್ವವನ್ನು ಅಂಗೀಕರಿಸಿ ಇದು ನಿಯಮವು ಇದನ್ನು ಅನುಸರಿಸಲಿಕ್ಕೆ ಬೇಕೆಂದು ಅದು ಸರ್ವಥಾ ಹೇಳುವದಿಲ್ಲ. ಈ ವ್ಯಾಪ್ತಿಸಾಧ್ಯ ಪದ್ಧತಿಯು ದೈವಿಕ ಅಥವಾ ಈಶ್ವರೀ ಸಂದೇಶವನ್ನು ತಿಳಿಸುವದಿಲ್ಲ. ಆದರೆ ಇದಕ್ಕೆ ವಿಪರೀತವಾಗಿ ಸಾರಾಸಾರ ವಿಚಾರಕ್ಕೆ ಕೆಲಸಗೊಟ್ಟು ವಿಚಾರಸಾಮರ್ಥ್ಯಕ್ಕೂ ವಿಚಾರದ ರೂಢಿಗೂ ಉತ್ತೇಜನ ಕೊಡುತ್ತದೆ.

DEPARTMENTAL NOTICES
ನೋಟೀಸು ಜಾ. ನಂ ೧೪.

ಧಾರವಾಡ ಟ್ರೇನಿಂಗಕಾಲೇಜದ ಪ್ರವೇಶಪರೀಕ್ಷೆಯು ಬರುವ ನವ್ಹಂಬರ ತಿಂಗಳ ೧೬ನೇ ತಾರೀಖು ಶುಕ್ರವಾರ (ಕಾರ್ತಿಕ ವದ್ಯ ೧೦) ಕನ್ನಡ ೬ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೭ನೇ ಅಥವಾ ೪ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟ ಪಡೆದವರೂ ಇಲ್ಲವೆ ಯುನಿವರ್ಸಿಟಿ ಪರೀಕ್ಷೆಯಲ್ಲಿ ಪಾಸಾದವರೂ ಅಂದರೆ ಫಾಯನಲ್, ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕೊಟ್ಟವರು) ಸತ್ಯಸ್ತರೂ, ವ್ಯಂಗರಹಿತರೂ, ತಕ್ಕಮಟ್ಟಿಗೆ ಎತ್ತರ ಇರುವಂಥವರೂ, ೧೭ರ ಮೇಲೆ ೨೦ರ ಒಳಗೆ ವಯಸ್ಸುಳ್ಳವರೂ ಇರಬೇಕು. ಅವರು ವಯಸ್ಸಿನ ದಾಖಲೆಯನ್ನೂ ಮುಲ್ಕಿ ಸರ್ಟಿಫಿಕೇಟನ್ನೂ ಸಂಗಡ ತೆಗೆದುಕೊಂಡು ತಾರೀಖು

೧೬ನೇ ನವ್ಹಂಬರ ಒಳಗಾಗಿ ನಮ್ಮ ಕಡೆಗೆ ಬಂದು ಹಾಜರಾಗಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ ಉಮೇದವಾರರೇ ಇರಲಿ ಅವರಲ್ಲಿ ಉತ್ತಮರೀತಿಯಿಂದ ಪಾಸಾದ ಜನರನ್ನು ವಿದ್ಯಾರ್ಥಿಗಳಾಗಿ ತೆಗದುಕೊಳ್ಳುವೆವು.

೨. ಪರೀಕ್ಷೆಗೆ ಬರುವ ಎಲ್ಲ ಉಮೇದವಾರರು ಬಿನ್ನ ಇಯತ್ತೆಯ ಅಂಕಲಿಪಿ ಮೊದಲ್ಗೊಂಡು ೬ನೇ ಇಯತ್ತೆಯ ವರೆಗೆ ಇರುವ ಯಾವತ್ತು ಪುಸ್ತಕಗಳನ್ನು ಚನ್ನಾಗಿ ಓದಿ ಮನನ ಮಾಡಿಕೊಂಡು ಬರಬೇಕು. ಕಾಲೇಜದಲ್ಲಿ ಶೇರಿಸಿಕೊಳ್ಳಲ್ಪಟ್ಟವರು ದಸ್ತೈವಜುಗಳನ್ನು ಬರಕೊಡಬೇಕಾಗುತ್ತದಷ್ಟೇ; ಅದಕ್ಕೆ ೧೫೦ ರೂಪಾಯಿಗಳ ಲಾಯಖಿಉಳ್ಳ ಇಬ್ಬರು ಜಾಮೀನದಾರರು ಬೇಕಾಗುವರು ಅವರನ್ನು ಸಹ ಗೊತ್ತುಮಾಡಿಕೊಂಡು ಬರಬೇಕು. ಅಂದರೆ ಕಾಲೇಜದಲ್ಲಿ ಸೇರಿಸಿಕೊಂಡಕೂಡಲೆ ಕಾಲೇಜದ ನಿಯಮಗಳಿಗನುಸರಿಸಿ ಕರಾರಪತ್ರ ಬರಕೊಡಲಿಕ್ಕೆ ಅನುಕೂಲವಾಗುವದು. ಕಾಲೇಜದಲ್ಲಿ ನಿಂತವರು ಕಾಲೇಜದ ನಿಯಮದಂತೆ ಅಡಪ್ಹಾನ್ಸ್ ೧೦ ರೂ ಸ್ಟ್ಯಾಂಪಿಗಾಗಿ ೧-೪-೦ ಇಷ್ಟು ಹಣವನ್ನು ಕೊಡಬೇಕಾಗುವದು ಈ ಹಣವನ್ನೂ ತಮ್ಮ ಖರ್ಚುವೆಚ್ಚಕ್ಕಾಗಿ ಬೇಕಾಗುವ ಹಣವನ್ನೂ ತೆಗದುಕೊಂಡು ಬರಬೇಕು.

೩. ಹೊತ್ತುಕೊಳ್ಳಲಿಕ್ಕೂ ಹಾಸಿಕೊಳ್ಳಲಿಕ್ಕೂ ತೆರುವ ಅರಿವೆಗಳಲ್ಲಿ ೨ ಬೆಚ್ಚಗಾದ ಉಣ್ಣೇ ಅಂಗಿಗಳೂ, ೧ ಜಮಖಾನ ಹಚ್ಚಡವೂ, ೨ ಕಂಬಳಿಗಳೂ ಅವಶ್ಯವಾಗಿ ಇರಲಿಕ್ಕೆಬೇಕು ಉಣ್ಣೇ ಅಂಗಿಗಳನ್ನು ಬೇಕಾದವರಿಗೆ ನಾವು ಇಲ್ಲಿ (ಅವರು ಯೋಗ್ಯ ಖರ್ಚು ಕೊಟ್ಟಲ್ಲಿ) ಮಾಡಿಸಿಕೊಡುವೆವು ಅವರಿಗೆ ಕ್ಲಾಸಿನಲ್ಲಿ ಹಾಕಲಿಕ್ಕೆ ಯೋಗ್ಯವಾದ ಪೋಷಾಕ ಇರಬೇಕು. ಖರ್ಚು ಕೊಟ್ಟರೆ ಇಂಥ ಪೋಷಾಕಗಳನ್ನು ಮಾಡಿಸಿ ಕೊಡುವೆವು ತಿಳಿಯುವದು.

ಧಾರವಾಡ ಟ್ರೀ ಕಾಲೇಜ,
ತಾ॥ ೨೩-೮-೧೯೦೦.

S. K Rodda,
ಪ್ರಿನ್ಸಿಪಾಲ,

ನೋಟೀಸು.

ನಂಬರ ೧೩೯.

ಪಿ. ಕ್ಯೂರೇಟರ ಗವರ್ನಮೆಂಟ ಸೆಂಟ್ರಲ್ ಬುಕ್‌ಡಿಪೋ ಮುಂಬೈ ಇವರಿಂದ ತಿಳಿಸಲ್ಪಡುವದೇನಂದರೆ—

ಸರ್ ೧೯೦೦ನೇ ಇಸವಿಯ ಅಗಷ್ಟ ಅಖೈರಕ್ಕೆ ಕೆಳಗೆ ಬರೆದ ಪುಸ್ತಕಗಳು ಹೊಸದಾಗಿ ಛಾಪಿಸಿ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಇಂಗ್ಲಿಷ.	ಬೆಲೆ ರೂ.	ಆ.	ಪೈ.
"ವೇ ಟು ಹೆಲ್ಥ"	೦	೧	೦
ಸಂಸ್ಕೃತ.			
ರಾಮಾಯಣದ ಭಾಷಾಂತರ	೧೫	೦	೦
ಬಾಂಬೆ ಸಂಸ್ಕೃತ ಸಿರೀಜ ನಂಬರ ೨೪ ಕಾದಂಬರಿ ಭಾಗ ೨.	೪	೮	೦
ಬಾಂಬೆ ಸಂಸ್ಕೃತ ಸಿರೀಜ ನಂಬರ ೬೦ ಕುಮಾರಪಾಲ ಚರಿತ	೮	೮	೦
ಕನ್ನಡ.			
ಮೊದಲನೇ ಪುಸ್ತಕ	೦	೧	೦
ಇಂಗ್ಲಂಡದ ಇತಿಹಾಸ	೨	೦	೦

ಮುಂಬಯಿ
ತಾ. ೧-೯-೧೯೦೦.

J. C. Dubash,
ಕ್ಯೂರೇಟರ ಗವರ್ನಮೆಂಟ ಸೆಂಟ್ರಲ್
ಬುಕ್‌ಡಿಪೋ ಮುಂಬಯಿ.

ನೋಟೀಸು.

ಧಾರವಾಡ ಮತ್ತು ವಿಜಾಪುರ ಸೆಂಟರುಗಳಲ್ಲಿ ಆದ ಕನ್ನಡ ಮುಲ್ಕೀ ಪರೀಕ್ಷೆಗಳಲ್ಲಿ ಕಳೆದ ವರ್ಷ ಅಪ್ರಾಮಾಣಿಕತನದ ವರ್ತನೆ ಮಾಡಿದ್ದರಿಂದ ಕೆಳಗೆ ಕಾಣಿಸಿದ ನಾಲ್ಕು ಜನರಿಗೆ ಸರಕಾರದ ಯಾವ ಖಾತೆಯಲ್ಲಿಯೂ ಉದ್ಯೋಗವನ್ನು ಕೊಡಬಾರದೆಂತಲೂ ೧ನೇ ೩ನೇ ನಂಬರದವರಿಗೆ ಸಿಕ್ಕ ಸರಟೀಫಿಕೇಟುಗಳನ್ನು ರದ್ದ ಮಾಡಿರುತ್ತದೆಂತಲೂ ೨ನೇ ೪ನೇ ನಂಬರದವರನ್ನು ಯಾವ ಪರೀಕ್ಷೆಗೂ ಕೂಡ್ರಗೊಡಬಾರದೆಂತಲೂ ಸರಕಾರದವರು ತಾರೀ

ಬು ೧೯೦ ಸಪ್ಟಂಬರ ೧೯೦೦ ನೇ ಇಸವಿಯ ತರಾವ ನಂಬರ ೧೩೦೦ ನಲ್ಲಿ ಪ್ರಸಿದ್ಧಿಸಿರುತ್ತಾರೆ.

೧. ವೆಂಕಟೇಶ ಗುರಾಚಾರ್ಯ ಮೊಬಾಸು.

೨. ಗೋವಿಂದ ಅಶ್ವತತ್ಥಾಚಾರ್ಯ ನಾಮಣ್ಣನವರ.

೩. ಹಣಮಂತ ಜಮಾಲಪ್ಪಾ ಅರೇರ.

೪. ರಂಗಾ ಬಿ೯ ರಾಜಬಾ ಜಾಧವ.

ಧಾರವಾಡ
ತಾ॥ ೧೩-೯-೧೯೦೦. } B. R. Sahasrabuadhe,
ಎ. ಇನಸ್ಪೆಕ್ಟರ ದಕ್ಷಿಣಭಾಗ.

ನೋಟೀಸು.

ಮಿ. ಎಲ್. ಜಯರಾವ ಗ್ರಾಜ್ಯುಯೆಟ್ ಟ್ರೇಡಿಂಗ ಅಸೋಸಿಯೇಶನ್ ಮೈಸೂರ, ಇವರು ಬರೆದ ಇಸೋಪನೀತಿ ಭಾಗ ೧. ಎಂಬ ಪುಸ್ತಕವನ್ನು ಮೆ. ಡೈರೆಕ್ಟರ ಸಾಹೇಬ ಬಹದ್ದೂರವರು ಇನಾಮಿಗಾಗಿ ಮಂಜೂರ ಮಾಡಿದ್ದಾರೆ.

ಧಾರವಾಡ.
ತಾ॥ ೧೪-೮-೧೯೦೦. } S. K. Rodda,
ಪ್ರಿನ್ಸಿಪಾಲ.

CORRESPONDENCE.

ಪತ್ರವ್ಯವಹಾರ.

(೧೪೬ ನೇ ಪುಟದಿಂದ ಮುಂದೆ ಸಾಗಿದ್ದು.)

(೪) ಮೇಲಿನ ವಿವರಣೆಯು ಮೇಲಿಂದ ನಮ್ಮ ಬಂಧುಗಳಿಗೆ ನಾನು ಕಾಯ್ಮಲ್ಲಿ ಛಪಿಸಿಬಿಡಿಯುವೆ ಕೆಲಸ ಮಾಡುತ್ತಿರುವೆನೆಂತಲೂ, ಯಾವ ಪ್ರಸಂಗದಲ್ಲಿಯೂ ದೇಹದಂಡನವನ್ನು ಉಪಯೋಗಿಸುವದಿಲ್ಲೆಂತಲೂ ತೋರಬಹುದು. ಮೊದಲಿನ ತೋರಿಕೆಯು ನಿಜವಿರುತ್ತದೆಂದು ಹೇಳಲಿಕ್ಕೆ ನನಗೆ ಅಭಿಮಾನವೆನಿಸುತ್ತದೆ. ನುತ್ತೂ ಈ ಪ್ರಕಾರದ ಅಭಿಮಾನದ ಬರಹದಿಂದ ಛಪಿಸಿಬಿಡಿಯುವೆ ಕೆಲಸಮಾಡುವ ವಿಷಯವಾಗಿ ಬಬರದಾರಿಯನ್ನು ನಾನು ಇಡಬೇಕಾಗುವದು. ಯಾರಾದರೆ ಬರೆಯುವದೊಂದು ನನ್ನ ಆಚರಣೆಯೊಂದು ಹೀಗಾದಲ್ಲಿ ಯಾವಾಗಲೂ ನನ್ನ ಉಪಶಿಷ್ಟಕರ ಉಪದಾಸಕ್ಕೂ

ಪ್ರಸಂಗವಶಾತ್ ನನ್ನ ಬಂಧುಗಳ ಉಪಹಾಸಕ್ಕೂ ನಾನು ಕಾರಣನಾಗುವದರಲ್ಲಿ ಸಂಶಯವಿಲ್ಲ. ಇನ್ನು ಎರಡನೆಯ ತಿಳುವಳಿಕೆಯು ಅಂದರೆ ನಾನು ಯಾವ ಪ್ರಸಂಗದಲ್ಲಿಯೂ ದೇಹದಂಡವನ್ನು ಮಾಡುವದಿಲ್ಲೆಂಬದು ಸುಳ್ಳಿರುತ್ತದೆ. ನಾನು ಕ್ವಚಿತ್ತಾಗಿ ಪ್ರಸಂಗವರಿತು ಕಠಿಣತರವಾದ ಶಿಕ್ಷೆಯನ್ನೇ ಮಾಡುವೆನು. ಇಂಥ ಪ್ರಸಂಗದಲ್ಲಿ ನನ್ನ ೧೧ ವರ್ಷದ ನೌಕರಿಯ ಮುದ್ದತ್ತಿನಲ್ಲಿ ಎರಡು ಸಾರೆ ನಾನು ಹುಡುಗರ ತಾಯಿತಂದೆಗಳ ಕ್ಷಮೆ ಬೇಡಬೇಕಾಗಿರುವದು, ಕೆಲವು ಸಾರೆ ನನ್ನ ವಿದ್ಯಾರ್ಥಿಗಳ ಕ್ಷಮೆಯನ್ನೂ ಬೇಡಿರುವೆನು. ನನಗೆ ಈ ನೀಚ ಪ್ರಸಂಗಗಳು ನನ್ನ ಕಯ್ಕೆಳಗಿನ ವಿದ್ಯಾರ್ಥಿಗಳಿಗಿಂತ ಉಪಶಿಕ್ಷಕರ ಕಯ್ಕೆಳಗಿನ ವಿದ್ಯಾರ್ಥಿಗಳಲ್ಲಿ ಹೆಚ್ಚು ಕಿಂಬಹುನಾ ಎಲ್ಲ ಪ್ರಸಂಗಗಳು ಅವರಲ್ಲಿಯೇ ಒದಗಿರುವವೆಂದು ನನ್ನ ಸ್ಮರಣದಲ್ಲಿರುವದು. ಕೆಲಸಮಾಡುವಾಗ್ಗೆ ಎಂಬದರ ಅರ್ಥವನ್ನು ಕಲಿಸುವಾಗ್ಗೆ ಎಂದು ನಾನು ತಿಳಿಯುತ್ತೇನೆ. ಕಲಿಸುವಾಗ್ಗೆ ಬಹುತರ ನಾನು ಎಂದೂ ಕಯ್ಯಲ್ಲಿ ಛಡಿಯನ್ನು ಹಿಡಿದಿಲ್ಲ. ಆಗ್ಗೆ ನಾನು ಛಡಿಯನ್ನು ಉಪಯೋಗಿಸಿದ್ದರೆ ಮುಂದೆ ಉಪಯೋಗಿಸಿದರೆ ನನಗೆ ಬೇಕಾದವರು ಬೇಕಾದ ಉಪಮೆಯನ್ನು ಕೊಟ್ಟರೊ ಅದರಿಂದ ನನಗೆ ವ್ಯಸನವಾಗದು. ಇನ್ನು ಈ ಭಾಗದಲ್ಲಿ ವಿವರಿಸುವ ವಿಷಯವೆಲ್ಲ ನನ್ನ ಅನುಭವದಿಂದ ಬರೆದಿದ್ದಿರುವದರಿಂದ ಇದರಲ್ಲಿ ಹಲವು ತಪ್ಪುಗಳಾಗಬಹುದು ಅವುಗಳನ್ನು ನನ್ನ ಪೂಜ್ಯಬಂಧುಗಳು ತಿಳಿಸಿದರೆ, ಅಥವಾ ತಿಳಿಸಿ ನನಗೆ ಪೂಜ್ಯರಾದರೆ ಕೃತಜ್ಞನಾಗುವೆನು. ನನ್ನ ಈ ಲೇಖನದಲ್ಲಿ ಏನಾದರೊ ಹುರುಳಿರುತ್ತದೆಂದು ಯಾರಿಗಾದರೂ ತೋರಿದರೆ ಅದೇ ನನಗೆ ಪರಮಾನಂದವು.

ಯಾವದೊಂದು ಕಾರ್ಯವನ್ನು ಲಾಭವಿಲ್ಲದೆ ಮಾಡುವದು ಗುದ್ದಕ್ಕೆ ಕಲ್ಲು ಹೊತ್ತಂತೆ ಎಂದು ಎಲ್ಲರೂ ಬಲ್ಲರು. ಅಂದಬಳಿಕ ವಿದ್ಯಾರ್ಥಿಗಳಿಗೆ ಅರ್ಥಾತ್ ತನಗೆ ಏನೂ ಲಾಭವಿಲ್ಲದೆ ಒಂದೊಂದು ಪ್ರಸಂಗದಲ್ಲಿ ಬಹಳ ಹಾನಿ ಸಹ ಆಗುತ್ತಿರಲು ದೇಹದಂಡವನ್ನು ಮಾಡುವದು ತೀರ ದಡ್ಡತ

ನವೂ, ಕ್ರೂರತನವೂ ಎಂದು ನಾನು ನಂಬಿದ್ದೇನೆ. ಅಧ್ಯಾಪಕರಿಗೆ ಸಾಧಾರಣವಾಗಿ ಬೇಹದಂಡ ಮಾಡುವ ಪ್ರಸಂಗಗಳು ನನ್ನ ಅನುಭವದಿಂದ ನಾಲ್ಕು ಗೊತ್ತಾಗಿವೆ ಅವು ಯಾವವೆಂದರೆ (೧) ಕ್ಲಾಸದೊಳಗಿನ ಅವ್ಯವಸ್ಥೆ (೨) ಮಾಸ್ತರನ ಆಜ್ಞಾಭಂಗ (೩) ಮಿತಿಮೀರಿದ ಕೆಲಸ (೪) ನಿಸ್ಸತ್ವವಾದ ಶಿಕ್ಷಣ. ಕ್ಲಾಸಿನಲ್ಲಿಯ ಅವ್ಯವಸ್ಥೆಯನ್ನು ಹೋಗಲಾಡಿಸುವದರ ಮುಖ್ಯ ಗುರುಮಂತ್ರವು ಸಣ್ಣ ಪುಟ್ಟ ಸಂಗತಿಗಳಿಗೆ ತಪ್ಪದೆ ಲಕ್ಷ್ಯಕೊಡೋಣವು. ವಿದ್ಯಾರ್ಥಿಗಳು ಮೆಯ್‌ಮರವಿಸಿಂದಿಗಲಿ, ಅಜ್ಞಾನದಿಂದಾಗಲಿ, ಸೋಮಾರಿತನದಿಂದಾಗಲಿ, ಬೇಕೆಂತಾಗಲಿ ಮಾಡುವ ಅವ್ಯವಸ್ಥೆಯನ್ನು ಆಗಾಗ್ಗೆ ಗೊತ್ತುಹಿಡಿದು ಆಬಗ್ಗೆ ಅವರನ್ನು ಎಚ್ಚರಗೊಳಿಸುತ್ತಿರಬೇಕು. ಇದರಿಂದ ವಿದ್ಯಾರ್ಥಿಗಳು ಮಾಸ್ತರನ ದೃಢತ್ವವನ್ನು ಮನಸ್ಸಿನಲ್ಲಿ ತಂದು ಎಚ್ಚರದಿಂದ ನಡೆಯುವದು. ಹಲವು ಸಾರೆ ಹೇಳಿದಾಗ್ಯೂ ಲಕ್ಷಿಸದೆ ಅವ್ಯವಸ್ಥೆಯನ್ನುಂಟು ಮಾಡುವ ವಿದ್ಯಾರ್ಥಿಯನ್ನು ಮನಸ್ಸಿನಲ್ಲಿಟ್ಟು ಅವನು ತಪ್ಪುಮಾಡಿದ ಕೂಡಲೆ ಅವನ ತಪ್ಪುಹಿಡಿದು ತೋರಿಸಿ ಅವನಿಗೆ ನಿಯಮಿತವಾದ ಅಸಹ್ಯಶಿಕ್ಷೆಯನ್ನು ಮಾಡಬೇಕು. ಇದಕ್ಕೂ ಅವನು ಮಣಿಯದಿದ್ದರೆ ಹೆಚ್ಚು ದಂಡಿಸಬೇಕು. ಈ ಕ್ರಮದಿಂದ ಅವನು ತಪ್ಪದೆ ಹಾದಿಗೆ ಬರುವನು. ಕ್ಲಾಸಿನೊಳಗಿನ ಅವ್ಯವಸ್ಥೆಯು ಕ್ಲಾಸು ಬಂದುಮಾಡುವದರಿಂದ ಅನಾಯಾಸವಾಗಿ ನಿಲ್ಲುವದು. ಹುಡುಗರಿಗೆ ಮೆಯ್ಯುಂಬ ಕೆಲಸ ಹಚ್ಚಿದರೆ ಬಹುತರ ಯಾವ ತರದ ಅವ್ಯವಸ್ಥೆಯೂ ಏಗಲಾರದೆಂಬದು ಎಲ್ಲರ ಅನುಭವದ ಮಾತು. ಸಾರಾಂಶ ಮಾಸ್ತರನು ತಾನು ವ್ಯವಸ್ಥೆಯಿಂದ ನಡೆದು ವಿದ್ಯಾರ್ಥಿಗಳ ಗೊಂದಲ ಆಟಗಳಿಗೆ ಸ್ಥಳ ಬೊರೆಯದಂತೆ ಅವರಿಗೆ ಕೆಲಸ ಹಚ್ಚಿದರೆ ಅವ್ಯವಸ್ಥೆಯು ಆಗದು. ಇಂಥ ಪ್ರಸಂಗದಲ್ಲಿಯೂ ಅವ್ಯವಸ್ಥೆಯನ್ನು ಮಾಡುವವನು ತನಗಾದ ಕ್ರೂರ ದಂಡನೆಯನ್ನಾದರೂ ಅನ್ಯಾಯವೆಂದು ತಿಳಿಯಲಾರನು. ಇಂಥವನನ್ನು ಅವನ ಮಿತ್ರರು ತಿರಸ್ಕರಿಸಿ ಮಾಸ್ತರನ ವಿಷಯವಾಗಿ ಪೂಜ್ಯಬುದ್ಧಿಯುಳ್ಳವರಾಗುವರು. ಇನ್ನು ಸಾಲಿ

ಯನ್ನು ತಪ್ಪಿಸುವದು, ಹುನೆಯಲ್ಲಿ ಮಾಡಿ ತರಹೇಳಿದ ಕೆಲ
ಸವನ್ನು ಮಾಡದಿರುವದು ಮುಂತಾದವು ಮಾಸ್ತರನ ಆಜ್ಞಾ
ಭಂಗದಲ್ಲಿ ಬರುವವು. ಸಚ್ಛಿಕ್ಷಕರಿಗೆ ಆಜ್ಞಾಭಂಗವು ಮರ
ಣತುಲ್ಯವೇಸರಿ. ತಿವರ ಉತ್ತಮ ಕೆಲಸಕ್ಕೆ ಮೆಚ್ಚಿದ ಹು
ಡುಗರು ಬಹುತರ ಆಜ್ಞಾಭಂಗವನ್ನು ಮಾಡರು. ಆಜ್ಞಾ
ಭಂಗದ ಮೂಲವು ಅಪ್ರೀತಿಯು. ಮಾಸ್ತರನ ವಿಷಯವಾ
ಗಿಯೂ ಅವನ ಕೃತಿಯ ವಿಷಯವಾಗಿಯೂ ಅಪ್ರೀತಿಯುಳ್ಳ
ವಿದ್ಯಾರ್ಥಿಗಳೇ ಅವನ ಅಪ್ಪಣೆಯನ್ನು ಮುರಿಯುವರು.
ವಿದ್ಯಾರ್ಥಿಗಳ ಈ ದುರ್ಗುಣದ ನಾಶಕ್ಕೆ ಮಾಸ್ತರನು ತನ್ನ
ಕೆಲಸವನ್ನು ಹೆಚ್ಚು ಆಸ್ಥೆಯಿಂದ ನಡಿಸುವದೇ ತಕ್ಕ ಔಷ
ಧವು. ಆಜ್ಞಾಭಂಗದಿಂದಾಗುವ ಹಾನಿಯನ್ನು ಆಗಾಗ್ಗೆ ಹೃದ
ಯಭೇದಕ ಉಪದೇಶದಿಂದ ತಿಳಿಸುತ್ತಿರಬೇಕು. ಏನು
ಮಾಡಿದರೂ ವಿದ್ಯಾರ್ಥಿಗಳಲ್ಲಿ ಈ ದೋಷವು ತಲೆದೋರು
ವದು. ಕಾರಣ ಇಂಥ ತಪ್ಪಿಗೆ ಇಷ್ಟು ಶಿಕ್ಷೆಯೆಂದು ನಿರ್ಬಂ
ಧ ಮಾಡಿ ತಪ್ಪದೆ ಅದರಂತೆ ನಡೆಯುತ್ತಹೋಗಬೇಕು.
"ಸಾಲೀ ತಪ್ಪಿಸುವವರು" ಎಂಬ ಬಿರುದಿನ ಹುಡುಗರು
ಪ್ರತಿಯೊಂದು ಶಾಲೆಯಲ್ಲಿರುವರು ಅವರನ್ನು ಕೆಲ ಮಾಸ್ತ
ರರು ತಿರಸ್ಕರಿಸುವರು, ಸಾಲೀ ತಪ್ಪಿಸಿದ ಬಗ್ಗೆ ಮಿತಿಮೀರಿ
ಹೊಡೆಯುವರು, ಕಲಿಸುವಾಗ ಅವರನ್ನು ಲೆಕ್ಕಿಸುವದೇ
ಇಲ್ಲ, ಸಾಲೀ ತಪ್ಪಿಸಿದ್ದರಿಂದ ಅಭ್ಯಾಸವು ಬರದಿರಲು ಸಿಟ್ಟು
ಗದ್ದು ಅವರನ್ನು ಮತ್ತೆಷ್ಟು ಹೊಡೆಯುವರು. ಇಂಥ ಹು
ಡುಗರಿಗೆ ಈ ಮಾಸ್ತರರಿಂದ ಹೊಡತದ ಹೊರತು ಮತ್ತೇ
ನೂ ದೊರೆಯುವದಿಲ್ಲ. ಹೊಡೆಮುರಿ ಬಿಡಿಸಿಕೊಳ್ಳುವದ
ಕ್ಕಾಗಿಯೇ ಸಾಲೆಗೆ ದಾರು ಬಿರುವರು? ಅಂದಬಳಿಕ
ಇಂಥ ಹುಡುಗರು ಹೊಡತಕ್ಕೆ ಬೇಸತ್ತು ಸಾಲೀ ಬಿಟ್ಟುರೆ
ಅವರೆ ತಪ್ಪೇನು? ಇಂಥ ಕೆಟ್ಟ ಹುಡುಗರನ್ನು ಹಾದಿಗೆ
ತರುವ ಮಾರ್ಗವಲ್ಲ. ಈ ಸ್ಥಿತಿಯ ಹುಡುಗರನ್ನು
ಬಡಿಯುವೆ ಬಿಡುವದೇ ನನ್ನ ಹೊಸಲನೆಯ ಕೆಲಸವು.

(ಸಶೇಷ)

ಶಾಲಾ ಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ।
ಭಯಸುತ್ಕಂ ಪ್ರತಿಭಾಸದಾದಿಗೊಲವಿಂದೀಪತ್ರಮಂ ಪುದ್ರಿಸಿ॥
ಸಯದಿಂದಿತ್ತವೆವ್ರೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರಿ॥

ಪುಸ್ತಕ ೩೬] ನವಂಬರ ೧೯೦೦. ೧ [ಸಂಚಿಕೆ ೧೧

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕಳೆದ ತಿಂಗಳಲ್ಲಿ ಆಯಾ ಭಾಗದಲ್ಲಿ ವಿದ್ಯಾಪರಿಷತ್ತುಗಳು ನೆರೆಯಿಸಲ್ಪಟ್ಟವು. ಇವುಗಳಲ್ಲಿ ಚರ್ಚಿಸಲ್ಪಟ್ಟ ವಿಷಯಗಳು ಪ್ರಾಥಮಿಕ ಶಾಲೆಗಳ ಇಯತ್ತೆಗಳು.

ನಮ್ಮ ಭಾಗದಲ್ಲಿ ಆದ ವಿದ್ಯಾಪರಿಷತ್ತಿನ ವೃತ್ತಾಂತವನು ಪ್ರತ್ಯೇಕವಾಗಿ ಕೊಟ್ಟಿರುತ್ತೇವೆ.

ಇದೇ ಸುಮಾರಿಗೆ ಮುಂಬೈಯಲ್ಲಿಯೂ ಒಂದು ಪರಿಷತ್ತು ನೆರೆಯಿಸಲ್ಪಟ್ಟಿತ್ತು. ಅಲ್ಲಿ ನಡೆದ ಮುಖ್ಯ ವಿಷಯವು ಇಂಗ್ಲಿಷ ಶಾಲೆಗಳ ಇಯತ್ತೆಗಳು. ಆ ಸಭೆಯ ಅಧ್ಯಕ್ಷಸ್ಥಾನವನ್ನು ನಾಮದಾರ ಮೆ॥ ಜಾಯಿಲ್ಲ ಸಾಹೇಬರವರು ಸ್ವೀಕರಿಸಿದರು. ಆ ಸಭೆಯಲ್ಲಿ ನಾಮದಾರ ಮಿ. ಅಚ್ಯುತ ಭಾಸ್ಕರ ಚೀಸಾಯಿ ಇವರು ನೀತಿಶಿಕ್ಷಣವನ್ನು ಕುರಿತು ಒಂದು ನಿಬಂಧವನ್ನು ಓದಿದರು. ಆ ಬಗ್ಗೆ ಮಾತಾಡುವಾಗ್ಗೆ ಪ್ರೆಸಿಡೆಂಟರು ಅಂದದ್ದೇನೆಂದರೆ:—

ಈ ವಿಷಯವು ಬಹಳ ಗಹನವಾದದ್ದು. ಇದರ ವಿಷಯಕ್ಕೆ ಕೆಲವು ವರ್ಷಗಳಿಂದ ವಿಚಾರ ನಡೆದದೆ. ಎಲ್ಫಿನಸ್ಟನ್ ಹಾಯಸ್ಕೂಲಿನ ಮಾಜಿ ಹೆಡ್ಡ ಮಾಸ್ತರರಾದ ಮೆ॥ ಜೇ

ದುನ್ನು ತಪ್ಪಿಸುವದು, ಮನೆಯಲ್ಲಿ ಮಾಡಿ ತರಹೇಳಿದ ಕೆಲ ಸವನ್ನು ಮಾಡದಿರುವದು ಮುಂತಾದವು ಮಾಸ್ತರನ ಆಜ್ಞಾ ಭಂಗದಲ್ಲಿ ಬರುವವು. ಸಣ್ಣಪ್ಪಿಕ್ಷಕರಿಗೆ ಆಜ್ಞಾಭಂಗವು ಪೆರ ಣತುಲ್ಯವೇನೆರು. ಅವರ ಉತ್ತಮ ಕೆಲಸಕ್ಕೆ ಮೆಚ್ಚಿದ ಹು ಡುಗರು ಬಹುತರ ಆಜ್ಞಾಭಂಗವನ್ನು ಮಾಡರು. ಆಜ್ಞಾ ಭಂಗದ ಮೂಲವು ಅಪ್ರೀತಿಯು. ಮಾಸ್ತರನೆ ವಿಷಯವಾ ಗಿಯೂ ಅವನ ಕೃತಿಯ ವಿಷಯವಾಗಿಯೂ ಅಪ್ರೀತಿಯುಳ್ಳ ವಿದ್ಯಾರ್ಥಿಗಳೇ ಅವನ ಅಪ್ಪಣೆಯನ್ನು ಮುರಿಯುವರು. ವಿದ್ಯಾರ್ಥಿಗಳ ಈ ದುರ್ಗುಣವ ನಾಶಕ್ಕೆ ಮಾಸ್ತರನು ತನ್ನ ಕೆಲಸವನ್ನು ಹೆಚ್ಚು ಆಸ್ಥೆಯಿಂದ ನಡಿಸುವದೇ ತಕ್ಕ ಔಷ ಧವು. ಆಜ್ಞಾಭಂಗದಿಂದಾಗುವ ಹಾನಿಯನ್ನು ಆಗಾಗ್ಗೆ ಹೃದ ಯಹೀವಕ ಉಪದೇಶದಿಂದ ತಿಳಿಸುತ್ತಿರಬೇಕು. ಏನು ಮಾಡಿದರೂ ವಿದ್ಯಾರ್ಥಿಗಳಲ್ಲಿ ಈ ದೋಷವು ತಲೆದೋರು ವದು. ಕಾರಣ ಇಂಥ ತಪ್ಪಿಗೆ ಇಷ್ಟು ಶಿಕ್ಷೆಯಿಂದು ನಿರ್ಬಂ ಧ ಮಾಡಿ ತಪ್ಪದೆ ಅದರಂತೆ ನಡೆಯುತ್ತ ಹೋಗಬೇಕು. "ಸಾಲೀ ತಪ್ಪಿಸುವವರು" ಎಂಬ ಬಿರುದಿನ ಹುಡುಗರು ಪ್ರತಿಯೊಂದು ಶಾಲೆಯಲ್ಲಿರುವರು ಅವರನ್ನು ಕೆಲ ಮಾಸ್ತ ರರು ತಿರಸ್ಕರಿಸುವದು, ಸಾಲೀ ತಪ್ಪಿಸಿದ ಬಗ್ಗೆ ಮಿತಿಮೀರಿ ಹೊಡೆಯುವರು, ಕಲಿಸುವಾಗ ಅವರನ್ನು ಲೆಕ್ಕಿಸುವದೇ ಇಲ್ಲ, ಸಾಲೀ ತಪ್ಪಿಸಿದ್ದರಿಂದ ಅಭ್ಯಾಸವು ಬರದಿರಲು ಸಿಟ್ಟಿ ಗೆದ್ದು ಅವರನ್ನು ಮತ್ತಿಷ್ಟು ಹೊಡೆಯುವರು. ಇಂಥ ಹು ಡುಗರಿಗೆ ಈ ಮಾಸ್ತರರಿಂದ ಹೊಡತದ ಹೊರತು ಮತ್ತೇ ನೂ ದೊರೆಯುವದಿಲ್ಲ. ಹೆಯ್ಮುರಿ ಬಡಿಸಿಕೊಳ್ಳುವದ ಕ್ಕಾಗಿಯೇ ಸಾಲೆಗೆ ಯಾರು ಬರುವರು? ಅಂದಬಳಿಕ ಇಂಥ ಹುಡುಗರು ಹೊಡತಕ್ಕೆ ಬೇಸತ್ತು ಸಾಲೀ ಬಿಟ್ಟರೆ ಅವರೆ ತಪ್ಪೇನು? ಇದು ಕೆಟ್ಟ ಹುಡುಗರನ್ನು ಹಾದಿಗೆ ತರುವ ಮಾರ್ಗವಲ್ಲ. ಈ ಸ್ಥಿತಿಯು ಹುಡುಗರನ್ನು ಬಡಿಯುವೆ ಬಿಡುವದೇ ನನ್ನ ಹೊಡಬಡಿಯು ಕೆಲಸವು.

(ಸಶೇಷ)

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ।
ಬಯಸುತ್ತಂ ಪ್ರತಿಭಾಸದಾದಿಗೊಲವಿಂದೀಪತ್ರಮಂ ಪುರ್ರಿಸಿ॥
ಸಯದಿಂದಿತ್ತವೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂಪೋಷಿಪತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರಿ॥

ಪುಸ್ತಕ ೩೬] ನವಂಬರ ೧೯೦೦. [ಸಂಚಿಕೆ ೧೧

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕಳೆದ ತಿಂಗಳಲ್ಲಿ ಆಯಾ ಭಾಗದಲ್ಲಿ ವಿದ್ಯಾಪರಿಷತ್ತುಗಳು ನೆರೆಯಿಸಲ್ಪಟ್ಟವು. ಇವುಗಳಲ್ಲಿ ಚರ್ಚಿಸಲ್ಪಟ್ಟ ವಿಷಯುಗಳು ಪ್ರಾಥಮಿಕ ಶಾಲೆಗಳ ಇಯತ್ತೆಗಳು.

ನಮ್ಮ ಭಾಗದಲ್ಲಿ ಆದ ವಿದ್ಯಾಪರಿಷತ್ತಿನ ವೃತ್ತಾಂತವನು ಪ್ರತ್ಯೇಕವಾಗಿ ಕೊಟ್ಟಿರುತ್ತೇವೆ.

ಇದೇ ಸುಮಾರಿಗೆ ಮುಂಬೈಯಲ್ಲಿಯೂ ಒಂದು ಪರಿಷತ್ತು ನೆರೆಯಿಸಲ್ಪಟ್ಟಿತ್ತು. ಅಲ್ಲಿ ನಡೆದ ಮುಖ್ಯ ವಿಷಯವು ಇಂಗ್ಲಿಷ ಶಾಲೆಗಳ ಇಯತ್ತೆಗಳು. ಆ ಸಭೆಯ ಅಧ್ಯಕ್ಷಸ್ಥಾನವನ್ನು ನಾಮದಾರ ಮೆ॥ ಜಾಯಿಲ್ಲ ಸಾಹೇಬರವರು ಸ್ವೀಕರಿಸಿದರು. ಆ ಸಭೆಯಲ್ಲಿ ನಾಮದಾರ ಮಿ. ಅಚ್ಯುತ ಭಾಸ್ಕರ ಜೋಸಾಯಿ ಇವರು ನೀತಿಶಿಕ್ಷಣವನ್ನು ಕುರಿತು ಒಂದು ನಿಬಂಧವನ್ನು ಓದಿದರು. ಆ ಬಗ್ಗೆ ಮಾತಾಡುವಾಗ್ಗೆ ಪ್ರೆಸಿಡೆಂಟರು ಅಂದದ್ದೇನಂದರೆ:—

ಈ ವಿಷಯವು ಬಹಳ ಗಹನವಾದದ್ದು. ಇದರ ವಿಷಯಕ್ಕೆ ಕೆಲವು ವರ್ಷಗಳಿಂದ ವಿಚಾರ ನಡೆದದೆ. ಎಲ್ಫಿನಸ್ಟನ್ ಹಾಯಸ್ಕೂಲಿನ ಮಾಜಿ ಹೆಡ್ಡ ಮಾಸ್ತರರಾದ ಮೆ॥ ಜೇ

ಕೆಲವು ಸಾಹೇಬರು ಅಂದಂತೆ ಸಾಹಿತ್ಯಗಳು ಹ್ಯಾಗೇ ಇದ್ದರೂ ಶಿಕ್ಷಣವು ಮುಖ್ಯವಾಗಿ ಶಿಕ್ಷಕರನ್ನೇ ಅವಲಂಬಿಸಿರುತ್ತದೆಂಬ ಮಾತು ದಿಟವಾದದ್ದು. ಶಿಕ್ಷಕನು ನಿರ್ಮಲ ಮನಸ್ಸಿನವನೂ ದೇವರಿಗೆ ಅಂಜಿ ನಡಿಯುವವನೂ ಇದ್ದ ಹೊರತು ನೀತಿ ಶಿಕ್ಷಣದ ವಿಷಯವಾಗಿಯೇ ಬರೆದಂಥ ಬೇಕಾದಂಥ ಪುಸ್ತಕಗಳನ್ನು ತೆಗೆದುಕೊಂಡು ಎಷ್ಟು ಓದಿದರೂ ಅದರಿಂದ ಏನೂ ಲಾಭವಾಗದು. ಅವನು ನೀತಿವಂತನಾಗಿದ್ದರೆ ಮಾತ್ರ ಸಾಧಾರಣ ವಾಚನ ಪುಸ್ತಕಗಳಿಂದಲೂ ಇತಿಹಾಸ ವಿಷಯಗಳಿಂದಲೂ ಸಹ ಹುಡುಗರಲ್ಲಿ ನೀತಿಶಿಕ್ಷಣವನ್ನು ನೆಲೆಗೊಳಿಸಬಹುದು. ವಿದ್ಯಾಖಾತೆಯವರು ಎಲ್ಲರಿಗೂ ಸರಿಬೀಳುವಂಥ ಒಂದೇ ಮಾದರಿಯ ಧರ್ಮಶಿಕ್ಷಣವನ್ನು ಕೊಡುವದು ಅಸಂಭವವು ಆದರೆ ಶಿಕ್ಷಕರು ವಿದ್ಯಾರ್ಥಿಗಳು ಶಾಲೆಯಲ್ಲಿರುವಾಗ್ಗೆ ಅವರಿಗೆ ನೀತಿ ಧರ್ಮಗಳ ತತ್ವಗಳನ್ನು ತಿಳಿಸಿ ಹೇಳಿ ಅವರು ಪ್ರಾಮಾಣಿಕರೂ ನೀತಿವಂತರೂ ಆಗುವಂತೆ ಮಾಡಬಹುದು. ನೀತಿಶಿಕ್ಷಣದ ವಿಷಯಕ್ಕೆ ಒಂದು ಮೇಲಾದ ಪುಸ್ತಕವನ್ನು ಬರೆಯಿಸಬೇಕೆಂದು ಹಿಂದುಸ್ಥಾನ ಸರಕಾರದವರು ೧೧ ವರ್ಷಗಳ ಕೆಳಗೆ ಗೊತ್ತು ಮಾಡಿರುವರು. ಆದರೆ ಈ ವರೆಗೆ ಅಂಥ ಪುಸ್ತಕವು ಸಿದ್ಧವಾಗಿರುವದಿಲ್ಲ. ಈ ತರದ ೧೫೦ ಪುಸ್ತಕಗಳು ನಮ್ಮ ಕಡಿಗೆ ಬಂದಿದ್ದವು. ಆದರೆ ಅವು ಸರಿಯಾಗಿದ್ದಿಲ್ಲ. ಹಿಂದುಸ್ಥಾನದಲ್ಲಿರುವ ಎಲ್ಲ ಜನಾಂಗಗಳಿಗೂ ಸರಿಯಾಗಿ ಉಪಯೋಗಬೀಳುವಂಥ ಒಂದೇ ನೀತಿಶಿಕ್ಷಣದ ಪುಸ್ತಕವನ್ನಾದರೂ ಬರೆಯುವದು ಅಸಂಭವವು. ಹಾಗೂ ಅಂಥ ಪುಸ್ತಕಗಳಿಂದ ತಾದೃಶ ಲಾಭವಾಗುವಂತೆಯೂ ತೋರುವದಿಲ್ಲ. ಆದದರಿಂದ ಈ ಶಿಕ್ಷಣದ ಭಾರವನ್ನು ಶಿಕ್ಷಕರ ಮೇಲೆ ಹಾಕಿ ಅವರಲ್ಲಿಯೇ ನಂಬಿಗೆ ಇಡುವದು ತಕ್ಕದ್ದಾಗಿರುತ್ತದೆ. ಈಗ ಹಿಂದುಸ್ಥಾನದಲ್ಲಿ ಹಾಯ್‌ಸ್ಕೂಲ ಹೆಡ್ಡ ಮಾಸ್ತರರ ಕೆಲಸ ಮಾಡುವ ದೇಶೀ ಉದ್ಯೋಗಸ್ಥರಿಗೆ ಬದಲಾಗಿ ಇಂಗ್ಲಂಡಿಂದ ತಿಂಗಳಿಗೆ ೨೦೦।೩೦೦ ರೂಪಾಯಿ ಪಗಾರದ ಮೇಲೆ ಶಿಕ್ಷಕರನ್ನು ತಂದರೆ ಈ ಕೆಲಸವು ಹೆಚ್ಚು ಚನ್ನಾಗಿ ಆದೀ

ತೆಂದು ನನ್ನೆ ಅಭಿಪ್ರಾಯವಿಲ್ಲ. ವಿದ್ಯಾಖಾತೆಯು ಈಳಿವ ೪೦।೫೦ ವರ್ಷಗಳ ಪರಿಶ್ರಮದಿಂದ ಈ ಕೆಲಸಗಳಿಗಾಗಿ ತಕ್ಕವರಾದಂಥವರು ಇಲ್ಲಿ ಅನೇಕ ಜನರಿರುತ್ತಾರೆಂಬದನ್ನು ತಿಳಿಸಲಿಕ್ಕೆ ನಾನು ತುಂಬಾ ಅಭಿಮಾನಪಡುತ್ತೇನೆ. ಸರಕಾರದ ಬೇರೆ ಬೇರೆ ಖಾತೆಗಳಲ್ಲಿ ೫೦।೬೦ ವರ್ಷಗಳತ್ತಲಾಗಿ ಮೊದಲಿಗಿಂತ ಹೆಚ್ಚು ಪ್ರಾಮಾಣಿಕರೂ ಸತ್ಯವಂತರೂ ಉತ್ಸಾಹವಂತರೂ ಕರ್ತವ್ಯದಕ್ಷರೂ ಆದ ದೇಶೀ ಉದ್ಯೋಗಸ್ಥರ ಸಂಖ್ಯೆಯು ಬೆಳೆಯುತ್ತ ನಡೆದದೆಂಬದಕ್ಕೆ ಮಿ. ದೇಸಾಯಿ ಮೊದಲಾದವರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಈಗಿರುವ ಹಾಯಸ್ಕೂಲ ಹೆಡ್ಡ ಮಾಸ್ತರರಲ್ಲಿ ಎಷ್ಟೋ ಜನರು ಆ ಕೆಲಸಕ್ಕೆ ಪೂರ್ಣವಾಗಿ ತಕ್ಕವರಾಗಿರುತ್ತಾರೆ. ಅವರಲ್ಲಿ ಮೇಲಾದ ಸದ್ಗುಣಗಳೂ ನೀತಿಯೂ ನೆಲೆಗೊಂಡಿರುವದು ಇದು ವಿದ್ಯಾಖಾತೆಯ ಅನೇಕ ವರ್ಷದ ಶ್ರಮದ ಫಲವಾಗಿರುತ್ತದೆ. ಇವರಿಂದ ಶಾಲೆಗಳಲ್ಲಿ ನೀತಿಶಿಕ್ಷಣವು ಚನ್ನಾಗಿ ದೊರೆಯುತ್ತದೆ. ಈ ಕೆಲಸಕ್ಕಾಗಿ ಹಾಯಸ್ಕೂಲುಗಳಲ್ಲಿ ವಸತಿ ಭೋಜನ ಗೃಹಗಳಿದ್ದರೆ ಹೆಚ್ಚು ಉಪಯೋಗವಾಗುವದೆಂಬದು ನಿಜವು. ಈ ಬಗ್ಗೆ ಕೆಲಸ ನಡಿದದೆ. ಶಿಕಾರಪೂರ, ಧುಲಿಯಾ ಮುಂತಾದ ಸ್ಥಳಗಳಲ್ಲಿ ವರ್ಗಣಿ ಕೂಡಿಸುವ ಕೆಲಸ ನಡಿದದೆ. ಮತ್ತು ಸರಕಾರದವರು ಈ ಕೆಲಸಕ್ಕಾಗಿ ತಮ್ಮಿಂದಾದಷ್ಟು ಸಹಾಯ ಮಾಡಲಿಕ್ಕೆ ಸಿದ್ಧರಿದ್ದಾರೆ.

ಟೂರ (ಕಲ್ಲಿದ್ದಲೆಯ ರಸ) ದಿಂದ ಹುಟ್ಟುವ ಸಕರಾಯಿನ ಎಂಬ ಸಕ್ಕರೆಯು ಕಬಿನ ರಸದಿಂದ ಮಾಡಿದ ಸಕ್ಕರೆಗಿಂತ ೨೦೦ ಪಟ್ಟು ಹೆಚ್ಚು ಶೀಯಾಗಿರುವದು. ಇದನ್ನು ಫಲಾಕ ಅಂದರೆ ಹಣ್ಣುಗಳನ್ನು ಹಾಕಿ ಸಾಕ ಮಾಡುವ ಕೆಲಸಗಳಲ್ಲಿ ಬಹಳವಾಗಿ ಉಪಯೋಗಿಸುವರು. ಮತ್ತು ಕಬ್ಬಿನ ರಸದಿಂದ ಮಾಡಿದ ಸಕ್ಕರೆಯ ಪದಾರ್ಥಗಳು ಬೂರಸಗಟ್ಟುವಂತೆ ಇಲ್ಲವೆ ಹಳಿಸುವಂತೆ ಈ ಸಕ್ಕರೆಯನ್ನು ಹಾಕಿ ಮಾಡಿದ ಪದಾರ್ಥಗಳು ಹಳಿಸುವದಿಲ್ಲ. ಆದರೆ ಇದರಿಂದ ಶರೀರಪೋಷಣೆಯೂ ಪುಷ್ಟಿಯೂ ಆಗುವದಿಲ್ಲ. ಕಾರಣಾ

ಕೆಟ ಸಾಹೇಬರು ಅಂದಂತೆ ಸಾಹಿತ್ಯಗಳು ಹ್ಯಾಗೇ ಇದ್ದರೂ ಶಿಕ್ಷಣವು ಮುಖ್ಯವಾಗಿ ಶಿಕ್ಷಕರನ್ನೇ ಅವಲಂಬಿಸಿರುತ್ತದೆಂಬ ಮಾತು ದಿಟವಾದದ್ದು. ಶಿಕ್ಷಕನು ನಿರ್ಮಲ ಮನಸ್ಸಿನವನೂ ದೇವರಿಗೆ ಅಂಜಿ ನಡಿಯುವವನೂ ಇದ್ದ ಹೊರತು ನೀತಿ ಶಿಕ್ಷಣದ ವಿಷಯವಾಗಿಯೇ ಬರೆದಂಥ ಬೇಕಾದಂಥೆ ಪುಸ್ತಕಗಳನ್ನು ತೆಗೆದುಕೊಂಡು ಎಷ್ಟು ಓದಿದರೂ ಅದರಿಂದ ಏನೂ ಲಾಭವಾಗದು. ಅವನು ನೀತಿವಂತನಾಗಿದ್ದರೆ ಮಾತ್ರ ಸಾಧಾರಣ ವಾಚನ ಪುಸ್ತಕಗಳಿಂದಲೂ ಇತಿಹಾಸ ವಿಷಯಗಳಿಂದಲೂ ಸಹ ಹುಡುಗರಲ್ಲಿ ನೀತಿಶಿಕ್ಷಣವನ್ನು ನೆಲೆಗೊಳಿಸಬಹುದು. ವಿದ್ಯಾಖಾತೆಯವರು ಎಲ್ಲರಿಗೂ ಸರಿಬೀಳುವಂಥ ಒಂದೇ ಮಾದರಿಯ ಧರ್ಮಶಿಕ್ಷಣವನ್ನು ಕೊಡುವದು ಅಸಂಭವವು ಆದರೆ ಶಿಕ್ಷಕರು ವಿದ್ಯಾರ್ಥಿಗಳು ಶಾಲೆಯಲ್ಲಿರುವಾಗ್ಗೆ ಅವರಿಗೆ ನೀತಿ ಧರ್ಮಗಳ ತತ್ವಗಳನ್ನು ತಿಳಿಸಿ ಹೇಳಿ ಅವರು ಪ್ರಾಮಾಣಿಕರೂ ನೀತಿವಂತರೂ ಆಗುವಂತೆ ಮಾಡಬಹುದು. ನೀತಿಶಿಕ್ಷಣದ ವಿಷಯಕ್ಕೆ ಒಂದು ಮೇಲಾದ ಪುಸ್ತಕವನ್ನು ಬರೆಯಿಸಬೇಕೆಂದು ಹಿಂದುಸ್ಥಾನ ಸರಕಾರದವರು ೧೧ ವರ್ಷಗಳ ಕೆಳಗೆ ಗೊತ್ತು ಮಾಡಿರುವರು. ಆದರೆ ಈ ವರೆಗೆ ಅಂಥ ಪುಸ್ತಕವು ಸಿದ್ಧವಾಗಿರುವದಿಲ್ಲ. ಈ ತರದ ೧೫೦ ಪುಸ್ತಕಗಳು ನಮ್ಮ ಕಡಿಗೆ ಬಂದಿದ್ದವು. ಆದರೆ ಅವು ಸರಿಯಾಗಿದ್ದಿಲ್ಲ. ಹಿಂದುಸ್ಥಾನದಲ್ಲಿರುವ ಎಲ್ಲ ಜನಾಂಗಗಳಿಗೂ ಸರಿಯಾಗಿ ಉಪಯೋಗಬೀಳುವಂಥ ಒಂದೇ ನೀತಿಶಿಕ್ಷಣದ ಪುಸ್ತಕವನ್ನಾದರೂ ಬರೆಯುವದು ಅಸಂಭವವು. ಹಾಗೂ ಅಂಥ ಪುಸ್ತಕಗಳಿಂದ ತಾದೃಶ ಲಾಭವಾಗುವಂತೆಯೂ ತೋರುವದಿಲ್ಲ. ಆದದರಿಂದ ಈ ಶಿಕ್ಷಣದ ಭಾರವನ್ನು ಶಿಕ್ಷಕರ ಮೇಲೆ ಹಾಕಿ ಅವರಲ್ಲಿಯೇ ನಂಬಿಗೆ ಇಡುವದು ತಕ್ಕದ್ದಾಗಿರುತ್ತದೆ. ಈಗ ಹಿಂದುಸ್ಥಾನದಲ್ಲಿ ಹಾಯ್‌ಸ್ಕೂಲ ಹೆಡ್ಡ ಮಾಸ್ತರರ ಕೆಲಸ ಮಾಡುವ ದೇಶೀ ಉದ್ಯೋಗಸ್ಥರಿಗೆ ಬದಲಾಗಿ ಇಂಗ್ಲಂಡದಿಂದ ತಿಂಗಳಿಗೆ ೬೦೦।೭೦೦ ರೂಪಾಯಿ ಪಗಾರದ ಮೇಲೆ ಶಿಕ್ಷಕರನ್ನು ತಂದರೆ ಈ ಕೆಲಸವು ಹೆಚ್ಚು ಜನ್ಮಾಗಿ ಆದೀ

ತೆಂದು ನನ್ನೆ ಅಭಿಪ್ರಾಯವಿಲ್ಲ. ವಿದ್ಯಾಖಾತೆಯು ಈಗಿನ ೪೦।೫೦ ವರ್ಷಗಳ ಪರಿಶ್ರಮದಿಂದ ಈ ಕೆಲಸಗಳಿಗಾಗಿ ತಕ್ಕವರಾದಂಥವರು ಇಲ್ಲಿ ಅನೇಕ ಜನರಿರುತ್ತಾರೆಂಬುದನ್ನು ತಿಳಿಸಲಿಕ್ಕೆ ನಾನು ತುಂಬಾ ಅಭಿಮಾನಪಡುತ್ತೇನೆ. ಸರಕಾರದ ಬೇರೆ ಬೇರೆ ಖಾತೆಗಳಲ್ಲಿ ೨೦।೩೦ ವರ್ಷಗಳತ್ತಲಾಗಿ ಮೊದಲಿಗಿಂತ ಹೆಚ್ಚು ಪ್ರಾಮಾಣಿಕರೂ ಸತ್ಯವಂತರೂ ಉತ್ಸಾಹವಂತರೂ ಕರ್ತವ್ಯದಕ್ಷರೂ ಆದ ದೇಶೀ ಉದ್ಯೋಗಸ್ಥರ ಸಂಖ್ಯೆಯು ಬೆಳೆಯುತ್ತ ನಡೆದದೆಂಬದಕ್ಕೆ ಮಿ. ದೇಸಾಯಿ ಮೊದಲಾದವರೆಲ್ಲರೂ ಒಪ್ಪಿಕೊಳ್ಳುತ್ತಾರೆ. ಈಗಿರುವ ಹಾಯಸ್ಕೂಲ ಹೆಡ್ಡ ಮಾಸ್ತರರಲ್ಲಿ ಎಷ್ಟೋ ಜನರು ಆ ಕೆಲಸಕ್ಕೆ ಪೂರ್ಣವಾಗಿ ತಕ್ಕವರಾಗಿರುತ್ತಾರೆ. ಅವರಲ್ಲಿ ಮೇಲಾದ ಸದ್ಗುಣಗಳೂ ನೀತಿಯೂ ನೆಲೆಗೊಂಡಿರುವದು. ಇದು ವಿದ್ಯಾಖಾತೆಯ ಅನೇಕ ವರ್ಷದ ಶ್ರಮದ ಫಲವಾಗಿರುತ್ತದೆ. ಇವರಿಂದ ಶಾಲೆಗಳಲ್ಲಿ ನೀತಿಶಿಕ್ಷಣವು ಚನ್ನಾಗಿ ದೊರೆಯುತ್ತದೆ. ಈ ಕೆಲಸಕ್ಕಾಗಿ ಹಾಯಸ್ಕೂಲುಗಳಲ್ಲಿ ವಸತಿ ಭೋಜನ ಗೃಹಗಳಿದ್ದರೆ ಹೆಚ್ಚು ಉಪಯೋಗವಾಗುವದೆಂಬದು ನಿಜವು. ಈ ಬಗ್ಗೆ ಕೆಲಸ ನಡಿದದೆ. ಶಿಕಾರಪೂರ, ಧುಲಿಯಾ ಮುಂತಾದ ಸ್ಥಳಗಳಲ್ಲಿ ವರ್ಗಣಿ ಕೂಡಿಸುವ ಕೆಲಸ ನಡಿದದೆ. ಮತ್ತು ಸರಕಾರದವರು ಈ ಕೆಲಸಕ್ಕಾಗಿ ತಮ್ಮಿಂದಾದಷ್ಟು ಸಹಾಯ ಮಾಡಲಿಕ್ಕೆ ಸಿದ್ಧರಿದ್ದಾರೆ.

ಟಾರ (ಕಲ್ಲಿದ್ದಲೆಯ ರಸ) ದಿಂದ ಹುಟ್ಟುವ ಸಕರಾಯಿನ ಎಂಬ ಸಕ್ಕರೆಯು ಕಬಿನ ರಸದಿಂದ ಮಾಡಿದ ಸಕ್ಕರೆಗಿಂತ ೩೦೦ ಪಟ್ಟು ಹೆಚ್ಚು ಶೀಯಾಗಿರುವದು. ಇದನ್ನು ಫಲಪಾಕ ಅಂದರೆ ಹಣ್ಣುಗಳನ್ನು ಹಾಕಿ ಪಾಕ ಮಾಡುವ ಕೆಲಸಗಳಲ್ಲಿ ಬಹಳವಾಗಿ ಉಪಯೋಗಿಸುವರು. ಮತ್ತು ಕಬ್ಬಿನ ರಸದಿಂದ ಮಾಡಿದ ಸಕ್ಕರೆಯು ಪದಾರ್ಥಗಳು ಬೂರಸಗಟ್ಟುವಂತೆ ಇಲ್ಲವೆ ಹಳಿಸುವಂತೆ ಈ ಸಕ್ಕರೆಯನ್ನು ಹಾಕಿ ಮಾಡಿದ ಪದಾರ್ಥಗಳು ಹಳಿಸುವದಿಲ್ಲ. ಆದರೆ ಇದರಿಂದ ಶರೀರಪೋಷಣೆಯೂ ಸೌಷ್ಟವವೂ ಆಗುವದಿಲ್ಲ. ಕಾರಣಾ

ನಿದ್ವಾನ ಡಾಕ್ಟರರು ಬಹುಮೂತ್ರಾದಿ ರೋಗಗಳುಳ್ಳವರಿಗೆ ಕಾಫಿ, ಚಹ ಮುಂತಾದ ಪಾನಗಳಲ್ಲಿ ಕಬ್ಬಿನ ರಸದಿಂದ ಮಾಡಿದ ಸಕ್ಕರೆಗೆ ಬದಲಾಗಿ ಈ ಸಕ್ಕರೆಯನ್ನು ಹಾಕಿ ಕೊಡಬೇಕೆಂದು ಹೇಳುತ್ತಾರೆ.

ಇಪ್ಪತ್ತು ದಿವಸಗಳವರೆಗೆ ಪಾಟಯ ಕಲ್ಲುಗಳನ್ನು ಕೊರೆದು ಪೆನಶಿಲುಗಳನ್ನು ಮಾಡುತ್ತಿದ್ದರು. ಆದರೆ ಈಗ ಹೈಡ್ರಾಲಿಕ ಪ್ರೆಸಿನಿಂದ ಪಾಟಯ ಕಲ್ಲಿನ ಪುಡಿ ಮಾಡಿ ಅದರಿಂದ ಪೆನಶಿಲುಗಳನ್ನು ಮಾಡಹತ್ತಿರುವರು. ಈ ಪೆನಶಿಲುಗಳು ಕೊರೆದು ಮಾಡಿದ ಪೆನಶಿಲುಗಳಿಗಿಂತ ಬಹಳ ಚಲೋಯಿರುವದರಿಂದ ಅವುಗಳ ಉಪಯೋಗವು ಬಹಳವಾಗಹತ್ತಿದೆ. ಕಳೆದ ವರ್ಷ ಈ ಪೆನಶಿಲುಗಳನ್ನು ಮಾಡುವ ಒಂದೇ ಕಾರಖಾನೆದಲ್ಲಿ ೩೫೦೦೦೦೦೦ ಪೆನಶಿಲುಗಳು ತಯಾರಾಗಿರುವವು.

ಫ್ರಾನ್ಸದಲ್ಲಿ ಜನಸಂಖ್ಯೆಯು ಮಾನದಿಂದ ಸರಾಸರಿ ಪ್ರತಿ ಒಬ್ಬನಿಗೆ ೦೫ ಪೌಂಡು ತಂಬಾಕವು ಬೇಕಾಗುವದು. ಹಾಲಂಡದಲ್ಲಿ ೩ ಪೌಂಡು; ಅಮೇರಿಕವ ಸಂಯುಕ್ತ ಸಂಸ್ಥಾನಗಳಲ್ಲಿ ೫೫ ಪೌಂಡು; ಬೆಲಜಿಯಮ್ಮ ಜರ್ಮನಿಗಳಲ್ಲಿ ೩ ಪೌಂಡು; ಆಸ್ಟ್ರಿಯಾ ಹಂಗರಿಗಳಲ್ಲಿ ೦೬ ಪೌಂಡು; ಕಾನಡಾದಲ್ಲಿ ಸುಮಾರು ೦೫ ಪೌಂಡು; ಸ್ವೀಡನ ರಶಿಯಾಗಳಲ್ಲಿ ಫ್ರಾನ್ಸದ ಪ್ಟೇ ಖರ್ಚಾಗುವದು. ಆದರೆ ಗ್ರೇಟಬ್ರಿಟನದಲ್ಲಿ ೧೬ ಪೌಂಡು ಸಹ ಬೇಕಾಗುವದಿಲ್ಲ.

CHEMISTRY.

ರಸಾಯನಶಾಸ್ತ್ರ.

(೫೪೪ನೇ ಪುಟದಿಂದ ಮುಂದೆ ಸಾಗಿದ್ದು.)

೧೬ನೇ ಪಾಠ.

ಮೂಲತತ್ವಗಳೂ ಮಿಶ್ರಪದಾರ್ಥಗಳೂ.

೪೦. ಮಕ್ಕಳಿರಾ ಈ ಭೂಮಿಯಲ್ಲಿ ಅಸಂಖ್ಯ ಪದಾರ್ಥ

ಗಳುಂಟು. ಅವೆಲ್ಲವುಗಳ ಗುಣಧರ್ಮಾದಿಗಳನ್ನೂ ಘಟಕ ಗಳನ್ನೂ ಪ್ರಯೋಗಪರೀಕ್ಷಣಗಳಿಂದ ಅರಿತುಕೊಳ್ಳುವದು ಮಾನವಪ್ರಾಣಿಯ ಬಾಳಿಕೆಯ ಕಾಲವನ್ನು ಲಕ್ಷದಲ್ಲಿ ತಂ ದು ವಿಚಾರಿಸಿದರೆ ಅಸಂಭವವೆಂದು ಕಂಡುಬರುತ್ತದೆ. ಸೃ ಷ್ಟಿಯ ಅಂತವನ್ನು ತಿಳುಕೊಳ್ಳುವದು ನರಜೀವಿಯ ಅಳವ ಲ್ಲ. ನಿರಾಕೆಯಿಂದ ಕೈಮುಚ್ಚಿಕೊಂಡು ಕೂಡ್ರುವದು ಪುರು ಷಲಕ್ಷಣವಲ್ಲ. ಈ ತತ್ವವನ್ನನುಸರಿಸಿ ನಾವು ಸೃಷ್ಟ್ಯಧ್ಯ ಯನಕ್ಕೆ ಆರಂಭಿಸಿದ್ದೇವಷ್ಟೇ? ಹಿಂದಿನ ಮೂರು ನಾಲ್ಕು ಪಾಠಗಳಲ್ಲಿ ನಮ್ಮ ಒಳಿಕೆಯಲ್ಲಿರುವ ಹಲವು ಪದಾರ್ಥಗಳ ನ್ನು ಪರೀಕ್ಷಿಸಿ ಅವುಗಳ ಸಂಬಂಧದ ಕೆಲವು ಹೊಸ ಸಂಗ ತಿಗಳನ್ನು ಅರಿತುಕೊಂಡೆವು. ಆದರೆ ಇಷ್ಟರಿಂದ ರಸಾಯನ ಶಾಸ್ತ್ರಜ್ಞರು ಪ್ರಯೋಗದಿಂದ ಎಷ್ಟು ಪದಾರ್ಥಗಳನ್ನು ಪರೀಕ್ಷಿಸಿರುವರೋ ಅಷ್ಟೆಲ್ಲ ಒಡವೆಗಳ ಪರೀಕ್ಷಣವು ತೀ ರಿತೆಂದು ತಿಳಿಯಲಾಗದು. ಶಾಸ್ತ್ರಜ್ಞರು ಇಂದಿನವರೆಗೆ ಬಹು ಶ್ರಮದಿಂದ ಭೂಧರಜನೆಯ ಸಂಬಂಧವಾಗಿ ಶೋಧ ಮಾಡಿ ದ್ದಾರೆ. ಪ್ರಯೋಗಪರೀಕ್ಷಣಗಳ ಹೊರ್ತು ರಸಾಯನ ಶಾಸ್ತ್ರವನ್ನು ಕಲಿಯಹವಣಿಸುವವರು ಮರದುದಿಯ ಹಣ್ಣಿ ನ್ನು ಬಯಸುವ ಹೆಳವನನ್ನು ಹೋಲುತ್ತಾರೆ. ಆದ್ದರಿಂದ ನೀವು ಯಾವದೊಂದು ಒಡವೆಯನ್ನು ಕಂಡಕೂಡಲೆ ಇದು ಏನು? ಇದರ ಘಟಕಗಳ್ಯಾವವು? ಇದು ಹ್ಯಾಗೆ ಉಂಟಾ ಯಿತು? ಇದರ ಪ್ರಯೋಜನವೇನು? ಈ ಮುಂತಾದ ಸಂ ಗತಿಗಳನ್ನು ಕುರಿತು ಮನಮುಟ್ಟಿ ವಿಚಾರಿಸುತ್ತಿರಬೇಕು.

ವಾಯು, ಸಮುದ್ರ, ಪೃಥ್ವಿ ಈ ಮೂರರೊಳಗಿರುವ ಪದಾರ್ಥಗಳನ್ನು ಪರೀಕ್ಷಿಸಿ ಶಾಸ್ತ್ರಜ್ಞರು ವಸ್ತುಕೋಟಿಯಲ್ಲಿ ಖನಿಜಕೋಟಿ, ಉದ್ಭಿಜ್ಜಕೋಟಿ, ಪ್ರಾಣಿಕೋಟಿ ಎಂಬ ಮೂರು ಭಾಗಗಳನ್ನು ಮಾಡಿದ್ದಾರೆ. ಆದರೆ ರಸಾಯನ ಶಾಸ್ತ್ರಜ್ಞರು ಈ ಮೂರು ಕೋಟಿಗಳನ್ನು ಕೂಡಿಸಿ ಮುಖ್ಯ ವಾಗಿ ಎರಡೇ ಕೋಟಿಗಳನ್ನು ಮಾಡಿದ್ದಾರೆ. ೧ ಮೂಲತ ತ್ವ ಅಥವಾ ಅಸಂಯುಕ್ತಪದಾರ್ಥವು. ಈ ಪದಾರ್ಥಗಳ ನ್ನು ಪೃಥಕ್ಕರಿಸಿ, ಬೇರೊಂದು ಪದಾರ್ಥವನ್ನು ಕಂಡುಕೊ ಳ್ಳಲಾರೆವು. ೨ ಸಂಯುಕ್ತ ಅಥವಾ ಮಿಶ್ರಪದಾರ್ಥಗಳು

ಇವುಗಳನ್ನು ಪೃಥಕ್ಕರಿಸಿ ಎರಡಾಗಲಿ ಎರಡಕ್ಕಿಂತ ಹೆಚ್ಚಾಗಲಿ ಪದಾರ್ಥಗಳನ್ನು ಕಂಡುಕೊಳ್ಳಬಹುದು.

೪೩. ಸಂಯುಕ್ತಾಸಂಯುಕ್ತ ಪದಾರ್ಥಗಳ ಹಲವು ಉದಾಹರಣೆಗಳು:—

ವಾಯುವರ್ಗವು.

ಆಕ್ಸಿಜನವು ಅಸಂಯುಕ್ತ ಪದಾರ್ಥವು. ಇದನ್ನು ಪೃಥಕ್ಕರಿಸಿದರೆ ಇದರಿಂದ ಮತ್ತೊಂದು ಪದಾರ್ಥವು ಉತ್ಪನ್ನವಾಗುವದಿಲ್ಲ. ಇದರಂತೆ ಹೈದ್ರೋಜನ್ನಾದರೂ ಮೂಲಪದಾರ್ಥವೇ ಉಂಟು. ಆದರೆ ಇದ್ದಲಿಯು ಹೊಗೆಯು ಮೂಲತತ್ವವಲ್ಲ, ಮಿಶ್ರಪದಾರ್ಥವು. ಇದರಿಂದ ಕಾಡಿಗೆ ಹೈದ್ರೋಜನ್ ಎಂಬೆರಡು ಮೂಲತತ್ವಗಳನ್ನು ಬೇರೆ ಮಾಡಬಹುದು. ಇದರಂತೆ ಕಾರ್ಬಾನಿಕ್ ಆಸಿಡ್ ವಾಯುವಾದರೂ ಮಿಶ್ರಪದಾರ್ಥವೇ ಇರುತ್ತದೆ. ಇದರಿಂದಲೂ ಕಾರ್ಬನ್ ಮತ್ತು ಆಕ್ಸಿಜನ್ ಎಂಬ ಎರಡು ಮೂಲತತ್ವಗಳನ್ನು ಬೇರ್ಪಡಿಸಬಹುದು. ಪ್ರವಾಹಿವರ್ಗವು--ಪ್ರವಾಹಿಗಳಲ್ಲಿ ಪಾರಜವು ಮೂಲತತ್ವವು; ಆದರೆ ನೀರು ಮಿಶ್ರಪದಾರ್ಥ ಉಂಟು. ಹಿಂದೆ ನಾವು ನೀರೊಳಗೆ ಆಕ್ಸಿಜನ್ ಹೈದ್ರೋಜನ್‌ಗಳೆಂಬ ಎರಡು ವಾಯುಗಳುಂಟೆಂದು ಪ್ರಯೋಗದಿಂದ ಗೊತ್ತು ಹಚ್ಚಿದ್ದೇವೆ. ಅಪ್ರವಾಹಿ ವರ್ಗವು. ಘನ ಅಥವಾ ಅಪ್ರವಾಹಿ ಪದಾರ್ಥಗಳಲ್ಲಿ ಎಷ್ಟೋ ಮೂಲತತ್ವಗಳೂ ಎಷ್ಟೋ ಮಿಶ್ರಪದಾರ್ಥಗಳೂ ಉಂಟು ಇಂಗಳೀಕದ ಪೃಥಕ್ಕರಣ ಮಾಡಿದ್ದು ನಿಮಗೆ ಗೊತ್ತಿರಬಹುದು. ಅದರಲ್ಲಿ ಪಾರಜವೂ ಆಕ್ಸಿಜನ್‌ವೂ ಇರುತ್ತದೆಂದು ಗೊತ್ತಾಗಿಲ್ಲವೇ? ಆದ್ದರಿಂದ ಇಂಗಳೀಕವು ಮಿಶ್ರಪದಾರ್ಥವೆಂದು ಮೇಲೇ ತೋರುತ್ತದೆ. ಇಪರಂತೆ ಖಡುವಾದರು ಮಿಶ್ರಪದಾರ್ಥವೇ. ಇದರಲ್ಲಿ ಸುಣ್ಣ ಕಾರ್ಬಾನಿಕ್ ಆಸಿಡ್ ಎಂಬೆರಡು ಘಟಕಗಳು ಇರುತ್ತವೆ. ತಿನ್ನುವ ಉಪ್ಪಿನಲ್ಲಿ ಕ್ಲೋರಿನ ವಾಯುವೂ ಸೋಡಿಯಂ ಎಂಬ ಧಾತುವೂ ಇರುತ್ತವೆ. ತುತ್ಯದಲ್ಲಿ ಶುದ್ಧ ತಾಮ್ರವೂ ಗಂಧಕಾಮ್ಲವೂ ಇರುತ್ತವೆ. ಆದ್ದರಿಂದ ಇವೆಲ್ಲಾ ಮಿಶ್ರಪದಾರ್ಥಗಳು. ಆದರೆ ಗಂಧಕ, ಕಾ

ಬೊರ್‌ನ್ನು, ಫಾಸ್ಫರ, ತಾಮ್ರ, ಕಬ್ಬಿಣ, ಬೆಳ್ಳಿ, ಬಂಗಾರ ಮುಂತಾದವುಗಳೆಲ್ಲ ಮೂಲತತ್ವಗಳುಂಟು. ಯಾಕಂದರೆ ಇವುಗಳನ್ನು ಪೃಥಕ್ಕರಿಸಿ ಬೇರೆ ಪದಾರ್ಥಗಳನ್ನು ಕಂಡು ಕೊಳ್ಳಲಿಕ್ಕೆ ಶಾಸ್ತ್ರಜ್ಞರು ಸಹ ಶಕ್ತರಲ್ಲ. ಇದಲ್ಲದೆ ಒಂದು ಮೂಲತತ್ವಕ್ಕೆ (ವಿಶ್ವಪ್ರಯತ್ನದಿಂದ) ಮತ್ತೊಂದು ಮೂಲ ತತ್ವದ ರೂಪವನ್ನು ಕೊಡುವದು ಯಾರಿಂದಲೂ ಆಗದು. ಆದರೆ ತಾಮ್ರ ಕಬ್ಬಿಣಗಳಿಗೆ ಗಿಡಮೂಲಿಕೆಯ ರಸದಿಂದ ಬೆಳ್ಳಿ, ಬಂಗಾರಗಳನ್ನು ಮಾಡುತ್ತೇವೆಂದು ಅನೇಕ ಜೈರಾಗಿ ಗಳು ಅಜ್ಞಾನಿಗಳನ್ನು ಮೋಸಗೊಳಿಸಿದ ಉದಾಹರಣೆಯಿ ನ್ನು ನೀವು ಕೇಳಿರಬಹುದು. ಆದರೆ ರಸಾಯನಸಂಯೋ ಗವು ಈ ತರದ ಸ್ಥಿತ್ಯಂತರವನ್ನು ಮಾಡಲಾರದು.

೪೪. ರಸಾಯನಶಾಸ್ತ್ರಜ್ಞರು ಹಲವು ಸಾರೆ ಪ್ರಯೋಗ ಗಳನ್ನು ಮಾಡಿ ಭೂಗರ್ಭದಲ್ಲಿ, ಭೂಪೃಷ್ಠದಲ್ಲಿ, ಅಂತರಿಕ್ಷ ದಲ್ಲಿ ಇರುವ ಯಾವತ್ತು ಪದಾರ್ಥಗಳು ೬೩ ಮೂಲತತ್ವ ಗಳಿಂದ ಉಂಟಾಗಿರುತ್ತವೆಂದು ಗೊತ್ತು ಹಚ್ಚಿದ್ದಾರೆ. ಈ ಮೂಲತತ್ವಗಳಲ್ಲಿ ಕೆಲವು ಆಕ್ಸಿಜನನಂತೆ ವಾಯುರೂ ಪಿಗಳಾಗಿಯೂ, ಹಲವು ಪಾರಜದಂತೆ ರಸರೂಪಿಗಳಾ ಗಿಯೂ ಕಬ್ಬಿಣದಂತೆ ಕೆಲವು ಘನರೂಪಿಗಳಾಗಿಯೂ ಇರುತ್ತವೆ. ಈ ಮೂಲತತ್ವಗಳೆಲ್ಲ ಬಹುತರವಾಗಿ ಎಲ್ಲ ರಿಗೂ ಗೊತ್ತಿರುತ್ತವೆ. ಹಾಗು ಅವು ಹೇರಳವಾಗಿ ದೊರೆ ಯುತ್ತವೆ. ಆದರೆ ಒಮ್ಮೆ ಶುದ್ಧಸ್ಥಿತಿಯಲ್ಲಿಯೂ ಮತ್ತೊ ಮ್ಮೆ ಸಂಯುಕ್ತಸ್ಥಿತಿಯಲ್ಲಿಯೂ ಗೋಚರವಾಗುತ್ತವೆ. ಆಕ್ಸಿಜನ್‌ವು ಹವೆಯಲ್ಲಿ ಅಸಂಯುಕ್ತಸ್ಥಿತಿಯಲ್ಲಿಯೂ ನೀರ ಲ್ಲಿ ಸಂಯುಕ್ತಸ್ಥಿತಿಯಲ್ಲಿಯೂ ಇರುತ್ತದೆ. ಆಕ್ಸಿಜನ್ ಕೂಡಿದ ಮಿಶ್ರಣಗಳಿಗೆಲ್ಲ ಆಮ್ಲಜವಿಕಾರಗಳೆಂದೆನ್ನುವರು. ಕೆ ಲವು ಮೂಲತತ್ವಗಳು ಮೂಲತಃ ಕಣ್ಣಿಗೆ ಬೀಳುವದಿಲ್ಲ. ಬಿದ್ದರೂ ಬಹು ಸ್ವಲ್ಪ ಸ್ಥಳದಲ್ಲಿ ದೃಷ್ಟಿಗೆ ಬೀಳುತ್ತವೆ. ಈ ಮಾದರಿಯ ಮೂಲತತ್ವಗಳ ಉಪಯೋಗವಾದರೂ ಅಷ್ಟ ಕ್ಕಷ್ಟೇ? ಆದರೆ ಇವು ಕೇವಲ ನಿರುಪಯುಕ್ತ ಪದಾರ್ಥಗ ಳೆಂದು ಎಣಿಸಲಾಗದು. ಆದರೆ ನಾವು ಸಾಂಪ್ರತಕ್ಕೆ ಎಲ್ಲ ಕಡೆಯಲ್ಲಿ ಹೇರಳವಾಗಿ ದೊರೆಯುವಂಥಾ ವ್ಯವಹಾರಕ್ಕೆ

ಅತ್ಯುಪಯುಕ್ತವಾದಂಥಾ ಮೂಲತತ್ವಗಳ ವಿಷಯವಾಗಿ ವಿಲೋಭಿಸುವಾ.

ಸ್ಮರಣಸೌಲಭ್ಯಕ್ಕಾಗಿ ಮೂಲತತ್ವಗಳಲ್ಲಿ ಧಾತುವರ್ಗವೆಂತಲೂ ಅಧಾತುವರ್ಗವೆಂತಲೂ ಎರಡು ಭಾಗಗಳನ್ನು ಕಲ್ಪಿಸುವ ಅಧಾತುವರ್ಗದಲ್ಲಿ ೧೫ ಮೂಲತತ್ವಗಳೂ ಧಾತುವರ್ಗದಲ್ಲಿ ೪೮ ಮೂಲತತ್ವಗಳೂ ಉಂಟು. ಕೆಲವು ಮುಖ್ಯ ಮೂಲತತ್ವಗಳನ್ನು ಕೆಳಗೆ ಬರೆಯುತ್ತೇವೆ.

ಅಧಾತುರೂಪ.		ಧಾತುರೂಪ.	
೧ ಆಕ್ಸಿಜನ (ಅಮ್ಲಜ)	೧೬	೧ ಕಬ್ಬಿಣ ...	೫೬
೨ ಹೈದ್ರೋಜನ (ಜಲಜ)	೧	೨ ಅಲೂಮಿನಂ ...	೨೭
೩ ನೈತ್ರೋಜನ (ನಿರ್ಗಂಧ ವಾಯು) ...	೧೪	೩ ಕ್ಯಾಲ್ಸಿಯುಂ ...	೪೦
೪ ಕಾರ್ಬನ್ನ (ಅಂಗಾರ)	೧೨	೪ ಮ್ಯಾಗ್ನೇಸಿಯುಂ	೨೪
೫ ಕ್ಲೋರೀನ (ಹರಿತ್ಪೀತ)	೩೫	೫ ಸೋಡಿಯುಂ...	೨೩
೬ ಗಂಧಕ ...	೩೨	೬ ಪೋಟಾಸಿಯುಂ	೩೯
೭ ಭಾಸ್ಪರ (ಪ್ರಕಾಶಕ	೩೧	೭ ತಾಪ್ರ ...	೬೩
೮ ಸಿಲಿಕಾನ ...	೨೮	೮ ಸತುವು ...	೬೫
		೯ ತವಥ ...	೧೧೮
		೧೦ ಸೀಸು ...	೨೦೭
(ಇವಲ್ಲದೆ ಇನ್ನೂ ೭ ಅಧಾತು		೧೧ ಪಾರಜ ...	೨೦೦
ರೂಪತತ್ವಗಳುಂಟು ಅಂತು ೧೫)		೧೨ ಬೆಳ್ಳಿ ...	೨೦೮
		೧೩ ಚಿನ್ನ ...	೧೯೭
		೧೪ ಪ್ಲಾಟೀನಂ (ಮಹಾರ ಜತ ...	೧೯೭

(ಇವಲ್ಲದೆ ೩೪ ಕಡಿಮೆ ಧಾತುಗಳುಂಟು ಅಂತು ೪೮)

ಮೇಲೆ ಬರೆದ ಮೂಲತತ್ವಗಳಲ್ಲದೆ ಇನ್ನು ಕೆಲವು ಉಂಟು. ಆದರೂ ಅವೆಲ್ಲ ಕೂಡಿ ೬೩ ಕ್ಕಿಂತ ಹೆಚ್ಚಿಲ್ಲ. ಇವೆಲ್ಲ ಮೂಲತತ್ವಗಳ ಗುಣಧರ್ಮಗಳು ಪರಸ್ಪರ ಭಿನ್ನವಾಗಿರುವದರಿಂದ ಅವುಗಳನ್ನು ಸುಲಭವಾಗಿ ಗೊತ್ತು ಹಿಡಿಯುಬಹುದು ಆದರೆ ಕೆಲವು ಮೂಲತತ್ವಗಳು ಬಂದನ್ನೊಂದು ಹೋಲುತ್ತವೆ. ಕೆಲವು ತೀರ ಭಿನ್ನವಾಗಿರುತ್ತವೆ. ಸೀಸು,

ತವರು, ಇವರಡರ ಗುಣಧರ್ಮಗಳಲ್ಲಿ ಬಹಳ ಸಾಮ್ಯವುಂಟು. ಆದರೆ ಆಕ್ಸಿಜನ್, ಹೈದ್ರೋಜನ್‌ಗಳ ಗುಣಧರ್ಮಗಳಲ್ಲಿ ಸಾಮ್ಯವು ಬಹು ಕಡಿಮೆ. ಈ ಮೂಲತತ್ವಗಳು ಒಂದರೊಳಗೊಂದು ಸಂಯೋಗವಾಗಿ ಮೂರನೇದೊಂದು ಹೊಸ ಪದಾರ್ಥವನ್ನು ಉಂಟು ಮಾಡುತ್ತವೆ. ಆದರೆ ಈ ಮಿಶ್ರವಾಗುವ ಪದಾರ್ಥಗಳ ಗುಣಧರ್ಮಗಳು ಪರಸ್ಪರ ಭಿನ್ನವಿದ್ದಷ್ಟು ಹಿಳಿತು. ಮೇಲೆ ಹೇಳಿದ ಉದಾಹರಣೆಯಲ್ಲಿ ತವದು, ನೀಸುಗಳ ಗುಣಧರ್ಮಗಳಲ್ಲಿ ಸಾಮ್ಯವು ಹೆಚ್ಚಿರುವದರಿಂದ ಇವೆರಡರ ಸಂಯೋಗವು ಆಗುವದಿಲ್ಲ. ಆದರೆ ಆಮ್ಲಜ ಜಲಜಗಳ ಗುಣಧರ್ಮಗಳಲ್ಲಿ ಭಿನ್ನತ್ವವು ಹೆಚ್ಚಿಗಿರುವದರಿಂದ ಇವೆರಡೂ ಸಂಯೋಗವಾಗಿ ನೀರೆಂಬ ಹೊಸ ಪದಾರ್ಥವನ್ನು ಹುಟ್ಟಿಸುತ್ತವೆ. ಈ ಹೊಸ ಪದಾರ್ಥದ ಗುಣಧರ್ಮವು ಘಟಕಗಳ ಗುಣಧರ್ಮಕ್ಕಿಂತ ಭೇರೆಯಾಗಿರುವದು.

೧೭ನೇ ಪಾಠ.

ಅಧಾತುವರ್ಗದ ಮೂಲತತ್ವಗಳು.

೨೫೩. ಹಿಂದಿನ ಪಾಠದಲ್ಲಿ ಅಧಾತುವರ್ಗದ ಮೂಲತತ್ವಗಳ ಪಟ್ಟಿಯನ್ನು ಕೊಟ್ಟಿರುತ್ತೇವಷ್ಟೇ. ಆ ಪಟ್ಟಿಯಲ್ಲಿರುವ ಕ್ರಮದಂತೆ ಆಯಾ ತತ್ವಗಳ ಧರ್ಮವನ್ನು ಕುರಿತು ಆಲೋಚಿಸುವ.

ಆಮ್ಲಜ ಅಥವಾ ಆಕ್ಸಿಜನ್ನವು—ಇದು ರುಚಿ ವರ್ಣಗಳಿಲ್ಲದ ಅದೃಶ್ಯವಾದ ವಾಯುವು. ಇದು ಹವೆಯಲ್ಲಿ ಅಸಂಯುಕ್ತ ಸ್ಥಿತಿಯಲ್ಲಿರುತ್ತದೆ. ತನ್ನ ನಾಲ್ಕಷ್ಟಿರುವ ನೈತ್ರಜನ್ನ ವಾಯುವಿನಲ್ಲಿ ಕೂಡಿರುತ್ತದೆ. ಒಂದು ಹೊತ್ತಾಗಿ ಯಾವತ್ತು ಮೂಲತತ್ವಗಳೊಡನೆ ಸಂಯೋಗವಾಗಿ ಜಂಗು ಅಥವಾ ಆಕ್ಸಾಯಿಡನ್ನು ಉಂಟು ಮಾಡುತ್ತದೆ. ಇದು ಮೂಲತತ್ವಗಳಲ್ಲಿ ಕೂಡಿಕೊಳ್ಳುವಾಗ ಶಕೆಯೂ ಒಮ್ಮೊಮ್ಮೆ ಪ್ರಕಾಶವೂ ಹುಟ್ಟುತ್ತದೆ. ಆಗ ನಾವು ಆ ಸಂಯೋಗ ಹೊಂದುವ ಪದಾರ್ಥವು ಸುಡುತ್ತವೆಂದೆನ್ನುತ್ತೇವೆ. ಇದು ಉಸು

ಬು, ಕಲ್ಲು ಮಣ್ಣುಗಳಲ್ಲಿ ಇರುತ್ತದೆ. ಭೂಗೋಲದಲ್ಲಿ ಅರ್ಧಕ್ಕಿಂತ ಹೆಚ್ಚು ಆಕ್ಸಿಜನ್ನವೇ ಇರುತ್ತದೆಂದು ಪಂಡಿತರು ಹೇಳುತ್ತಾರೆ. ಪ್ರಾಣಿಗಳ ಜೀವನಕ್ಕೆ ಇದು ಅತ್ಯವಶ್ಯವಾದದ್ದು. ಪ್ರಾಣಿಗಳ ಶ್ವಾಸದೊಡನೆ ಅವುಗಳ ಒಡಲೊಳಗೆ ಸೇರಿ ರಕ್ತವನ್ನು ಶುದ್ಧ ಮಾಡುವದಲ್ಲದೆ ಶರೀರೋಷ್ಣತೆಯನ್ನು ಕಾದಿಡುತ್ತದೆ.

ಎಷ್ಟೋ ಸಂಯುಕ್ತ ಪದಾರ್ಥಗಳನ್ನು ಕಾಸಿ ಇದನ್ನು ಬೇರ್ಪಡಿಸಬಹುದು. ಅಥವಾ ಕಾಜಿನ ಹೂಜಿಯಲ್ಲಿ ಇಂಗಳೀಕವನ್ನಾಗಲಿ ಕ್ಲೋರೆಟ್ ಆಫ್ ಪೋಟಾಶ್ ಎಂಬ ಪದಾರ್ಥವನ್ನಾಗಲಿ ಹಾಕಿ ಕಾಸಿದರೆ ಆಕ್ಸಿಜನ್ನವು ಉತ್ಪನ್ನವಾಗುತ್ತದೆ.

ಆದರೆ ಆಕ್ಸಿಜನ್‌ವನ್ನು ಹೇರಳವಾಗಿ ಹುಟ್ಟಿಸಬೇಕಾದರೆ ಕ್ಲೋರೆಟ್ ಆಫ್ ಪೋಟಾಶ್ ಎಂಬ ಪದಾರ್ಥದ ಅರ್ಧ ಔಂಸಿನಷ್ಟು ಪುಡಿಯೊಳಗೆ ಬ್ಲ್ಯಾಕ್ ಆಕ್ಸಾಯಿಡ್ ಆಫ್ ಮ್ಯಾಂಗನೀಜ ಎಂಬ ಪದಾರ್ಥದ ಪುಡಿಯನ್ನು ಮೊದಲಿನ ಪುಡಿಯು ಕಪ್ಪಾಗುವಷ್ಟು ಮಿಶ್ರ ಮಾಡಿ ಈ ಮಿಶ್ರಣವನ್ನು ಒಂದು ಕಾಜಿನ ಹೂಜಿಯಲ್ಲಿ ಹಾಕು. ಬಳಿಕ ಉದ್ದಾದ ಕಾಜಿನ ಸೊಟ್ಟ ಕೊಳವಿಯನ್ನು ಬೆಣೆಯಲ್ಲಿ ಸೇರಿಸಿ ಆ ಬೆಣೆಯನ್ನು ಆ ಪಾತ್ರೆಯ ಬಾಯಿಗೆ ಬಿಗಿಯಾಗಿ ಕೂಡ್ರಿಸು. ಆ ಮೇಲೆ ಆ ಪಾತ್ರೆಯನ್ನು ಅಡ್ಡಣಿಗೆಯ ಮೇಲಿಟ್ಟು ಕಾಸು. ಬಳಿಕ ಹಿಂದಿನ ೧೦ನೇ ಆಕೃತಿಯಲ್ಲಿ ವರ್ಣಿಸಿದಂತೆ ಈ ವಾಯುವನ್ನು ಹಿಡಿದಿಟ್ಟು ಕೆಳಗೆ ವರ್ಣಿಸಿದ ಕೃತಿಗಳನ್ನು ಮಾಡು.

೧. ಒಂದು ತಂತಿಗೆ ಮೇಣಬತ್ತಿಯನ್ನು ಚುಚ್ಚಿ ಅದನ್ನು ಹಚ್ಚು. ಬಳಿಕ ಊದಿ ದೀಪವನ್ನಾರಿಸು. ಮುಂದಿನ ಮಕ್ಕು ಕೆಂಪಾಗಿರುವಾಗಲೇ ಆ ಬತ್ತಿಯನ್ನು ಆಕ್ಸಿಜನ್ ತುಂಬಿಪ ಸೀಸೆಯಲ್ಲಿ ಹಿಡಿ. ಆಗ ಆ ಬತ್ತಿಯು ಪುನಃ ಉರಿಯಲಾರಂಭಿಸುವದು. ಹೀಗೆ ಕೆಲವು ನಿಮಿಷಗಳು ಸಂದ ಮೇಲೆ ಆ ದೀಪವು ಪುನಃ ಆರಿ ಸೀಸೆಯಲ್ಲಿ ಕಾರ್ಬಾನಿಕ್ ಆಸಿಡ್ ಗ್ಯಾಸವು ಹುಟ್ಟಿ ನಿಲ್ಲುವದು. ಆಗ ಸುಣ್ಣದ ತಿಳಿಯನ್ನು ಆ ಸೀಸೆಯಲ್ಲಿ ಸುರುವಲಾಗಿ ಅದು ಹಾಲಿನಂತೆ ಬೆಳ್ಳಗಾಗುವದು.

೨. ಉದ್ದಲಿಯು ಕೆಂಡವನ್ನು ಆ ನೀಸೆಯಲ್ಲಿ ಹಾಕಲು ಅದು ಬಹಳ ಪ್ರಕಾಶದಿಂದ ಉರಿಯುವದು. ಮತ್ತು ಕಾರ್ಬನಿಕ್ ಆಸಿಡ್ ಗ್ಯಾಸವು ಉತ್ಪನ್ನವಾಗುವದು.

೩. ಗಂಧಕವು ಹವೆಯೊಳಗೆ ಚನ್ನಾಗಿ ಉರಿಯುವದಿಲ್ಲ. ಆದರೆ ಅದನ್ನು ಒಂದು ಸೌಟಿನಲ್ಲಿ ಇಟ್ಟು ಬೆಂಕಿ ಹಚ್ಚಿ ಅಮ್ಲಜದೊಳಗೆ ಹಿಡಿದರೆ ಬಹು ಸುಂದರವಾದ ನೀಲವರ್ಣದ ಜ್ವಾಲೆ ಉಂಟಾಗುತ್ತದೆ.

೪. ಫಾಸ್ಪರವನ್ನು ಒತ್ತಲಿರಡಿನಿಂದ ಒತ್ತಿ, ಅದು ಹಸಿ ಇಲ್ಲದಂತಾದ ಬಳಿಕ ಅದಕ್ಕೆ ಬೆಂಕೀ ಹಚ್ಚಿ ಆಕ್ಸಿಜನ್‌ದಲ್ಲಿ ಹಿಡಿದರೆ ಕಣ್ಣು ಕುಕ್ಕುವಷ್ಟು ಪ್ರಕಾಶಮಯವಾಗಿ ಉರಿಯುತ್ತದೆ. ಆಕ್ಸಿಜನ್‌ದಲ್ಲಿ ಗಂಧಕ ಸುಡುವದರಿಂದ ಉತ್ಪನ್ನವಾಗುವ ವರ್ಣಹೀನವಾದ ವಾಯುವಿನಲ್ಲಿಯೂ ಫಾಸ್ಪರವನ್ನು ಸುಡುವದರಿಂದ ಉಂಟಾಗುವ ಬಿಳೀ ಹೊಗೆಯಲ್ಲಿಯೂ ಅಮ್ಲಜದ ಧರ್ಮವಿರುತ್ತದೆ. ಇದನ್ನು ಪರೀಕ್ಷಿಸಬೇಕಾದರೆ ಅಳ್ಳೀಕಾಯಿಯ ಮಸಿಯನ್ನು ಅಥವಾ ನೀಲಿ ಬಣ್ಣದ ಲಿಟಮಸ್ ಎಂಬ ಪ್ರವಾಹಿಯನ್ನು ಈ ವಾಯುಗಳಿರುವ ನೀಸೆಯಲ್ಲಿ ಹಾಕಿದರೆ ಈ ಪ್ರವಾಹಿಗಳ ನೀಲವರ್ಣವು ನಷ್ಟವಾಗಿ ಕೆಂಪು ಬಣ್ಣ ಉಂಟಾಗುತ್ತದೆ.

(ಸಶೇಷ.)

S. D. Edl CONFERNCE 1900.

ವಿದ್ಯಾಭಿಮಾನಿಗಳ ಪರಿಷತ್ತು ದ ಭಾ. ೧೯೦೦.

ಈ ೧೯೦೦ನೇ ಇಸವಿಯಲ್ಲಿ ಧಾರವಾಡದೊಳಗೆ ಕೂಡಿದ ವಿದ್ಯಾಭಿಮಾನಿಗಳ ಪರಿಷತ್ತು — ಈ ಮಹಾಸಭೆಯು ನಾವು ಹೋದ ಸಂಚಿಕೆಯಲ್ಲಿ ಸೂಚಿಸಿದಂತೆ ಧಾರವಾಡದ ಹಾಯಸ್ಕೂಲಿನಲ್ಲಿ ಕೂಡಿತ್ತು. ದಕ್ಷಿಣಭಾಗದ ಎ. ಇ. ಸಾಹೇಬ ಬಹದ್ದೂರವರು ಅಧ್ಯಕ್ಷರಾಗಿದ್ದರು. ಸಭಾ ಕಾರ್ಯವು ಅಕ್ಟೋಬರ ತಿಂಗಳ ೪।೫।೬ ಈ ಮೂರು ದಿವಸ ನಡೆಯಿತು. ಇದೇ ಮಾದರಿದು ಪರಿಷತ್ತು ೧೯೯೮ರಲ್ಲಿ ಕೂಡಿದ್ದನ್ನೂ ಅದರಲ್ಲಿ ನಡೆದ ಸಂಗತಿಯನ್ನೂ

ಮಿಶ್ರ ಕಲ್ಲು ಮಣ್ಣುಗಳಲ್ಲಿ ಇರುತ್ತದೆ. ಭೂಗೋಲದಲ್ಲಿ ಅರ್ಧಕ್ಕಿಂತ ಹೆಚ್ಚು ಆಕ್ಸಿಜನ್ನವೇ ಇರುತ್ತದೆಂದು ಪಂಡಿತರು ಹೇಳುತ್ತಾರೆ. ಪ್ರಾಣಿಗಳ ಜೀವನಕ್ಕೆ ಇದು ಅತ್ಯವಶ್ಯವಾದದ್ದು. ಪ್ರಾಣಿಗಳ ಶ್ವಾಸದೊಡನೆ ಅವುಗಳ ಒಡಲೊಳಗೆ ಸೇರಿ ರಕ್ತವನ್ನು ಶುದ್ಧ ಮಾಡುವದಲ್ಲದೆ ಶರೀರೋಷ್ಣತೆಯನ್ನು ಕಾಪಾಡುತ್ತದೆ.

ಎಷ್ಟೋ ಸಂಯುಕ್ತ ಪದಾರ್ಥಗಳನ್ನು ಕಾಸಿ ಇದನ್ನು ಬೇರ್ಪಡಿಸಬಹುದು. ಅಥವಾ ಕಾಜಿನ ಹೂಜಿಯಲ್ಲಿ ಇಂಗಳೀಕವನ್ನಾಗಲಿ ಕ್ಲೋರೆಟ್ ಆಫ್ ಪೋಟಾಶ್ ಎಂಬ ಪದಾರ್ಥವನ್ನಾಗಲಿ ಹಾಕಿ ಕಾಸಿದರೆ ಆಕ್ಸಿಜನ್ನವು ಉತ್ಪನ್ನವಾಗುತ್ತದೆ.

ಆದರೆ ಆಕ್ಸಿಜನ್‌ವನ್ನು ಹೇರಳವಾಗಿ ಹುಟ್ಟಿಸಬೇಕಾದರೆ ಕ್ಲೋರೆಟ್ ಆಫ್ ಪೋಟಾಶ್ ಎಂಬ ಪದಾರ್ಥದ ಅರ್ಧ ಔಂಸಿನಷ್ಟು ಪುಡಿಯೊಳಗೆ ಬ್ಲ್ಯಾಕ್ ಆಕ್ಸಾಯಿಡ್ ಆಫ್ ಮ್ಯಾಂಗನೀಜ ಎಂಬ ಪದಾರ್ಥದ ಪುಡಿಯನ್ನು ಮೊದಲಿನ ಪುಡಿಯು ಕಪ್ಪಾಗುವಷ್ಟು ಮಿಶ್ರ ಮಾಡಿ ಈ ಮಿಶ್ರಣವನ್ನು ಒಂದು ಕಾಜಿನ ಹೂಜಿಯಲ್ಲಿ ಹಾಕು. ಬಳಿಕ ಉದ್ದಾದ ಕಾಜಿನ ಸೊಟ್ಟ ಕೊಳವೆಯನ್ನು ಬೆಣೆಯಲ್ಲಿ ಸೇರಿಸಿ ಆ ಬೆಣೆಯನ್ನು ಆ ಪಾತ್ರೆಯ ಬಾಯಿಗೆ ಬಿಗಿಯಾಗಿ ಕೂಡ್ರಿಸು. ಆ ಮೇಲೆ ಆ ಪಾತ್ರೆಯನ್ನು ಅಡ್ಡಣಿಗೆಯ ಮೇಲಿಟ್ಟು ಕಾಸು. ಬಳಿಕ ಹಿಂದಿನ ೧೨ನೇ ಆಕೃತಿಯಲ್ಲಿ ವರ್ಣಿಸಿದಂತೆ ಈ ವಾಯುವನ್ನು ಹಿಡಿದಿಟ್ಟು ಕೆಳಗೆ ವರ್ಣಿಸಿದ ಕೃತಿಗಳನ್ನು ಮಾಡು.

೧. ಒಂದು ತಂತಿಗೆ ಮೇಣಬತ್ತಿಯನ್ನು ಚುಚ್ಚಿ ಅದನ್ನು ಹಚ್ಚು. ಬಳಿಕ ಊದಿ ದೀಪವನ್ನಾರಿಸು. ಮುಂದಿನ ಮಕ್ಕು ಕೆಂಪಾಗಿರುವಾಗಲೇ ಆ ಬತ್ತಿಯನ್ನು ಆಕ್ಸಿಜನ್ ತುಂಬಿದ ಸೀಸೆಯಲ್ಲಿ ಹಿಡಿ. ಆಗ ಆ ಬತ್ತಿಯು ಪುನಃ ಉರಿಯಲಾರಂಭಿಸುವದು. ಹೀಗೆ ಕೆಲವು ನಿಮಿಷಗಳು ಸಂದ ಮೇಲೆ ಆ ದೀಪವು ಪುನಃ ಆರಿ ಸೀಸೆಯಲ್ಲಿ ಕಾರ್ಬಾನಿಕ್ ಆಸಿಡ್ ಗ್ಯಾಸವು ಹುಟ್ಟಿ ನಿಲ್ಲುವದು. ಆಗ ಸುಣ್ಣದ ತಿಳಿಯನ್ನು ಆ ಸೀಸೆಯಲ್ಲಿ ಸುರುವಲಾಗಿ ಅದು ಹಾಲಿನಂತೆ ಬೆಳ್ಳಗಾಗುವದು.

೨. ಇದ್ದಲಿನು ಕೆಂಡವನ್ನು ಆ ನೀಸೆಯಲ್ಲಿ ಹಾಕಲು ಅದು ಬಹಳ ಪ್ರಕಾಶದಿಂದ ಉರಿಯುವದು. ಮತ್ತು ಕಾರ್ಬನಿಕ್ ಆಸಿಡ್ ಗ್ಯಾಸವು ಉತ್ಪನ್ನವಾಗುವದು.

೩. ಗಂಧಕವು ಹವೆಯೊಳಗೆ ಚನ್ನಾಗಿ ಉರಿಯುವದಿಲ್ಲ. ಆದರೆ ಅದನ್ನು ಒಂದು ಸೌಟಿನಲ್ಲಿ ಇಟ್ಟು ಬೆಂಕಿ ಹಚ್ಚಿ ಆಮ್ಲಜದೊಳಗೆ ಹಿಡಿದರೆ ಬಹು ಸುಂದರವಾದ ನೀಲವರ್ಣದ ಜ್ವಾಲೆ ಉಂಟಾಗುತ್ತದೆ.

೪. ಫಾಸ್ಪರವನ್ನು ಒತ್ತಿಲರಡಿನಿಂದ ಒತ್ತಿ, ಅದು ಹಸಿ ಇಲ್ಲದಂತಾದ ಬಳಿಕ ಅದಕ್ಕೆ ಬೆಂಕೀ ಹಚ್ಚಿ ಆಕ್ಸಿಜನ್‌ದಲ್ಲಿ ಹಿಡಿದರೆ ಕಣ್ಣು ಕುಕ್ಕುವಷ್ಟು ಪ್ರಕಾಶಮಯವಾಗಿ ಉರಿಯುತ್ತದೆ. ಆಕ್ಸಿಜನ್‌ದಲ್ಲಿ ಗಂಧಕ ಸುಡುವದರಿಂದ ಉತ್ಪನ್ನವಾಗುವ ವರ್ಣಹೀನವಾದ ವಾಯುವಿನಲ್ಲಿಯೂ ಫಾಸ್ಪರವನ್ನು ಸುಡುವದರಿಂದ ಉಂಟಾಗುವ ಬಿಳೀ ಹೊಗೆಯಲ್ಲಿಯೂ ಆಮ್ಲಜದ ಧರ್ಮವಿರುತ್ತದೆ. ಇದನ್ನು ಪರೀಕ್ಷಿಸಬೇಕಾದರೆ ಅಳ್ಳೀಕಾಯಿದು ಮಸಿದನ್ನು ಅಥವಾ ನೀಲಿ ಬಣ್ಣದ ಲಿಟಮಸ್ ಎಂಬ ಪ್ರವಾಹಿದನ್ನು ಈ ವಾಯುಗಳಿರುವ ನೀಸೆಯಲ್ಲಿ ಹಾಕಿದರೆ ಈ ಪ್ರವಾಹಿಗಳ ನೀಲವರ್ಣವು ನಷ್ಟವಾಗಿ ಕೆಂಪು ಬಣ್ಣ ಉಂಟಾಗುತ್ತದೆ.

(ಸಶೇಷ.)

S. D. Edl CONFERNCE 1900.

ವಿದ್ಯಾಭಿಮಾನಿಗಳ ಪರಿಷತ್ತು ದ ಭಾ. ೧೯೦೦.

ಈ ೧೯೦೦ನೇ ಇಸವಿಯಲ್ಲಿ ಧಾರವಾಡದೊಳಗೆ ಕೂಡಿದ ವಿದ್ಯಾಭಿಮಾನಿಗಳ ಪರಿಷತ್ತು — ಈ ಮಹಾಸಭೆಯು ನಾವು ಹೋದ ಸಂಚಿಕೆಯಲ್ಲಿ ಸೂಚಿಸಿದಂತೆ ಧಾರವಾಡದ ಹಾಯಸ್ಕೂಲಿನಲ್ಲಿ ಕೂಡಿತ್ತು. ದಕ್ಷಿಣಭಾಗದ ಎ. ಜಿ. ಸಾಹೇಬ ಬಹದ್ದೂರವರು ಅಧ್ಯಕ್ಷರಾಗಿದ್ದರು. ಸಭಾ ಕಾರ್ಯವು ಅಕ್ಟೋಬರ ತಿಂಗಳ ೪।೫।೬ ಈ ಮೂರು ದಿವಸ ನಡೆಯಿತು. ಇದೇ ಮಾದರಿಯ ಪರಿಷತ್ತು ೧೪ ಕಡೆಗಳಲ್ಲಿ ಕೂಡಿದ್ದನ್ನೂ ಅದರಲ್ಲಿ ನಡೆದ ಸಂಗತಿಯನ್ನೂ

ಅದೇ ಕಾಲಕ್ಕೆ ಮುಖಪತ್ರಿಕೆಯಲ್ಲಿ ಸವಿಸ್ತರವಾಗಿ ವಿವರಿಸಿದ್ದೆವೆಂಬುವದು ಸುಜ್ಞ ವಾಚಕರಿಗೆ ಗೊತ್ತಿರಬಹುದು. ಅವರಂತೆ ಈ ಸಾರೆಯ ಪರಿಷತ್ತಿನ ವೃತ್ತಾಂತವನ್ನಾದರೂ ವಾಚಕರಿಗೆ ತಿಳಿಸುವದು ಲೇಸೆಂದೆಣಿಸಿ ಅದನ್ನು ಈ ಸಂಚಿಕೆಯಲ್ಲಿ ಸಂಕ್ಷೇಪವಾಗಿ ವಿವರಿಸಿದ್ದೇವೆ ಸಭೆಯಲ್ಲಿ ಓದಿದ ನಿಬಂಧಗಳಲ್ಲಿ ಕೆಲವು ನಿಬಂಧಗಳನ್ನು ಸ್ವತಂತ್ರವಾಗಿ ಛಾಪಿಸುವದು ಯೋಗ್ಯನೆಂದರಿತು ಅವುಗಳನ್ನು ಅನುಕೂಲತೆಯ ಮೇರೆಗೆ ಮುದ್ರಿಸುವ ಆಲೋಚನೆ ಮಾಡಿದ್ದೇವೆ. ಉಳಿದ ನಿಬಂಧಗಳ ಸಾರವನ್ನೂ ಪ್ರಧಾನ ಭಾಷಣಗಳ ಸಾರವನ್ನೂ ಮಾತ್ರ ಇದರಡಿಯಲ್ಲಿ ಬರೆದಿರುತ್ತೇವೆ.

ಅಧ್ಯಕ್ಷರು ಸ್ಥಳವನ್ನೂ ಕಾರ್ಯಕ್ರಮ ಪತ್ರಿಕೆಯನ್ನೂ, ತಾವು ಇನ್ನು ಮುಂದೆ ಪ್ರಚಾರದಲ್ಲಿ ತರಬೇಕೆಂದು ಗೊತ್ತು ಪಡಿಸಿದ ಇಯತ್ತ್ರೆಗಳ ಅಭ್ಯಾಸಕ್ರಮದ ಪ್ರಸ್ತೆಕವನ್ನೂ, ಪ್ರಮುಖರಾದ ಮಾಸ್ತರರ ಕಡೆಗೂ ಮ್ಯುನಸಿಪಾಲಿಟಿಗಳ ಕಡೆಗೂ, ಮಿಕ್ಕ ವಿದ್ಯಾಭಿಮಾನಿಗಳ ಕಡೆಗೂ, ಕಳಿಸಿದ್ದರು: ನಾವಾದರೂ ಆ ಸೂಚಿಸಿದ ಇಯತ್ತ್ರೆಗಳನ್ನೆಲ್ಲ ನಮ್ಮ ಈ ಪತ್ರಿಕೆಯಲ್ಲಿ ಸಂಗ್ರಹಿಸಿ ಎಲ್ಲ ಅಧ್ಯಾಪಕರಿಗೂ ತತ್ಪೂರ್ವದಲ್ಲಿಯೇ ತಲಪುವಂತೆ ಮಾಡಿದ್ದೆವೆಂಬದು ಸರ್ವರಿಗೆ ಗೊತ್ತೇ ಉಂಟು; ಅದರಿಂದ ಆ ಜನರಿಗೆ ಆ ಅಭ್ಯಾಸಕ್ರಮವನ್ನು ಓದಿಕೊಂಡು ತತ್ಸಂಬಂಧದ ಸಾಧಕ ಬಾಧಕ ಪ್ರಮಾಣಗಳನ್ನು ಸಭೆಯ ಮುಂದೆ ತರಲಿಕ್ಕೆ ಅನುಕೂಲವಾಯಿತು. ಈ ಸಾರೆಯ ಸಭೆಯಲ್ಲಿ ಹಿಂದಿನ ಸಭೆಯಂತೆ ಅನೇಕ ವಿಷಯಗಳ ಚರ್ಚೆ ನಡೆಯದೆ ಇಯತ್ತ್ರೆಗಳ ಅಭ್ಯಾಸಕ್ರಮವೇ ಪ್ರಧಾನ ವಿಷಯವೆಂದು ಗೊತ್ತಾಗಿತ್ತು. ಆದರೂ ಅವಾಂತರ ವಿಷಯಗಳು ನಡುನಡುವೆ ಸುಳಿದಾಡಿದವು.

ಸಭೆಗೆ ಬಂದ ಪ್ರಮುಖ ಜನರು—ರಾ. ಬ. ಚಿಟಗುಬಿ ಶ್ರೀನಿವಾಸರಾಯರು, ಬೈತಮಂಗಳ ರಾಘವೇಂದ್ರರಾಯರು; ಜಯಸತ್ಯಬೋಧರಾಯರು, ರಾ ಸಾ ಜೋಗಳೇಕರ ಅಂತಾಜಿಪಂತರು; ಕರ್ಜಿಗಿ ವಿಶ್ವನಾಥರಾಯರು, ದೇಸಾಯಿ ರಾಮರಾಯರು, ನಾಲ್ಕೂ ಜಿಲ್ಲೆಯ ಡಿ. ಎ. ಇ. ರು, ಕಟ್ಟೀ

ಪಂಕಟರಾಯರು, ಸಾಧ್ರಿ ಜೊರೆಗಳಾದ ರಿವ್ಹಿಂಗಟನ್ ಅರ್ ಸ್ಪ್ಕ, ಬ್ರೌನ ಮತ್ತು ರೀಷ ಸಾಹೇಬರು, ಮ. ರಾ. ಘಾಟೆ ಕ, ಅಥವಲೆ, ರೊಪ್ಪ, ಹೆರ್ಲೀಕರ ಮುಂತಾದ ಧಾರವಾಡ ದೊಳಗಿನ ವಕೀಲರೂ, ಮ. ರಾ. ನಾಡಗೌಡ ಬೆಳವಿ ಮುಂ ತಾದ ಬೆಳಗಾವಿಯ ವಕೀಲರು, ಅಪ್ಪಿ ಶಂಕರರಾಯರು, ಪೈಜರಕರ ವೆಂಕಟರಾಯರು, ಖಶ್ರೀಬಸಾಜೇಬರು, ಮುಂ ತಾದ ಸದ್ಗೃಹಸ್ಥರಲ್ಲದೆ ಹೈಸ್ಕೂಲ, ಕಾಲೇಜಗಳ ಅಧ್ಯಾಪ ಕರೂ ಧಾರವಾಡದೊಳಗಿನ ಪ್ರಾಥಮಿಕ ಶಾಲೆಗಳ ಶಿಕ್ಷಕ ರೂ, ಮುಂಡರಗಿ, ಬಂಕಾಪುರ, ಅಣ್ಣಿಗೇರಿ, ಬ್ಯಾಡಿಗಿ, ಹಾವ ಸಭಾವಿ, ಮೊರಬ, ಹೊಂಬಳ, ಹೆಬ್ಬಳ್ಳಿ, ಕರ್ಜಗಿ, ಕುತ್ತ ಕೋಟಿ, ನೆರೇಗಲ್ಲ ಮುಂತಾದ ಧಾರವಾಡ ಜಿಲ್ಲೆಯೊಳಗಿನ ಶಾಲಾಧ್ಯಾಪಕರೂ, ಕಲಾದಗಿ, ಬಾಗಲಕೋಟೆ, ಸಂಗಮ, ಹುನಗುಂದ, ಮುಂತಾದ ವಿಜಾಪುರ ಜಿಲ್ಲೆಯೊಳಗಿನ ಶಾಲಾ ಧ್ಯಾಪಕರೂ, ಚಿಕ್ಕೋಡಿ, ಸಂಕೇಶ್ವರ, ಅಥಣಿ, ನಂದಗಡ, ಕಿತ್ತೂರು, ಮುರಗೋಡ ಮುಂತಾದ ಬೆಳಗಾವಿ ಜಿಲ್ಲೆಯೊಳ ಗಿನ ಶಾಲಾಧ್ಯಾಪಕರೂ, ಅಂಕೋಲೆಯ ಮಾಸ್ತರರೂ, ಹುಬ್ಬಳ್ಳಿ ಮ್ಯುನಸಿಪಾಲಟಿ ಶಾಲಾಮಾಸ್ತರರೂ ಈ ಮಹಾ ಸಭೆಗೆ ಬಂದಿದ್ದರು. ಧಾರವಾಡ, ಹುಬ್ಬಳ್ಳಿ ಇವೆರಡು ಮ್ಯು ನಸಿಪಾಲಟಿಯೊಳಗಿನ ಪ್ರಾಥಮಿಕ ಶಾಲೆಗಳ ಮಾಸ್ತರರು ಖೊತ್ತಾಗಿ ಸುಮಾರು ೪೦ ಮಂದಿ ದೂರ ದೂರದ ಮಾಸ್ತ ರರೂ ಸುಮಾರು ೧೦೦ ಮಂದಿ ಇತರ ಸಭ್ಯ ಗೃಹಸ್ಥರ್ನ್ನು ಸಭೆಯನ್ನಲಂಕರಿಸಿದ್ದರು. ಧಾರವಾಡ, ಹುಬ್ಬಳ್ಳಿಯ ಹೆಣ್ಣು ಮಕ್ಕಳಶಾಲೆಯ ಶಿಕ್ಷಕಿಯರೂ, ಫಿಮೇಲ ಟ್ರೇನಿಂಗಕ್ಲಾಸದ ವಿದ್ಯಾರ್ಥಿನಿಯರೂ ಬಂದಿದ್ದರು. ಅವರಿಗೆ ಕೂಡ್ರುವದ ಕ್ಕಾಗಿ ಬೇರೇ ಸ್ಥಳ ಗೊತ್ತು ಮಾಡಲ್ಪಟ್ಟಿತ್ತು.

ಕಾರ್ಯಕ್ರಮವು ಪತ್ರಿಕೆಯಿಂದ ಮೊದಲನೇ ದಿವಸ ೬, ಎರಡನೇ ದಿವಸ ೮, ಮೂರನೇ ದಿವಸ ೪ ಈ ಮೇರೆಗೆ ಒಟ್ಟಿಗೆ ೧೯ ನಿಬಂಧಗಳು ಓದತಕ್ಕವವೆಂದು ಗೊತ್ತಾಗಿತ್ತು. ಇವುಗಳಲ್ಲದೆ ಬೇರೆ ಕೆಲವು ನಿಬಂಧಗಳೂ ಓದಲ್ಪಟ್ಟವು. ಓದಿದ ನಿಬಂಧಗಳ ಸಂಖ್ಯೆಯು ೧೦ಕ್ಕಿಂತ ಕಡಿಮೆಯಾಗ

ಲಿಕ್ಕಿಲ್ಲ. ಗೊತ್ತಾದ ನಿಬಂಧಗಳಲ್ಲಿ ೬ ನಿಬಂಧಗಳು ವಿದ್ಯಾ ಖಾತೆಯಲ್ಲಿ ನೌಕರರಲ್ಲದವರಿಂದ ಬರೆಯಲ್ಪಟ್ಟವು. ಉಳಿದವುಗಳೆಲ್ಲ ಅಧ್ಯಾಪಕರೂ ಡೆಪ್ಯುಟೀ ಇನಸ್ಪೆಕ್ಟರರೂ ಮುಂತಾದ ವಿದ್ಯಾಖಾತೆಯ ನೌಕರರಿಂದ ಬರೆಯಲ್ಪಟ್ಟಂಥವು. ೧೧॥ ಯಿಂದ ೬ ರ ವರೆಗೆ ನಡೆಯುವ ಸಭಾಕಾಲದಲ್ಲಿ ಉಪಹಾರದ ಸಲುವಾಗಿ ಗೊತ್ತು ಮಾಡಿದ ಅರ್ಧ ತಾಸು ಬಿಟ್ಟು ಉಳಿದ ಹೊತ್ತಿನಲ್ಲಿ ಎರಡು ಭಾಗ ಮಾಡಿ ಆರಂಭದಲ್ಲಿ ನಿಬಂಧವಾಚನವೂ ತದನಂತರ ಅವುಗಳ ಸಂಬಂಧವಾದ ವಿವಾದವೂ ನಡೆಯುತ್ತಿತ್ತು. ಅಧ್ಯಕ್ಷರ ಸದ್ಗುಣವರ್ಣನೆಯಿಂದಲೂ ಕಾರ್ಯದರ್ಶಿಗಳ ತತ್ಪರತೆಯಿಂದಲೂ ಸಭಾಕಾರ್ಯವು ಬಹು ಸಮಾಧಾನದಿಂದಲೂ ಸುಯಂತ್ರವಾಗಿಯೂ ಸಾಗಿತೆಂದು ಬರೆಯಲಿಕ್ಕೆ ನಮಗೆ ಸಂತೋಷವಾಗುತ್ತದೆ. ಉಪಹಾರದ ವ್ಯವಸ್ಥೆಯು, ಕಾಲೇಜದ ಪ್ರಾಕ್ಟಿಸಿಂಗ ಸ್ಕೂಲಿನಲ್ಲಿ ಕಾಲೇಜದ ಅಧ್ಯಕ್ಷರಿಂದ ನೆರವೇರುತ್ತಿತ್ತು.

೧ನೇ ದಿವಸ.

ಅಧ್ಯಕ್ಷರು ೧೧½ ಘಂಟೆಗೆ ಸರಿಯಾಗಿ ಸಭಾಕಾರ್ಯಕ್ಕೆ ಪ್ರಾರಂಭಿಸಿದರು. ಅವರು ಆಸ್ಥೆಯಿಂದ ಸಭೆಗೆ ಬಂದ ಎಲ್ಲ ಕಪ್ಪುಹಸ್ತರನ್ನು ಆದರಪೂರ್ವಕವಾಗಿ ಬರಮಾಡಿಕೊಂಡು ಬರ ಪಿಡಗುಗಳಿಂದ ವಿದ್ಯಾಖಾತೆಗೆ ಬಡಿದ ಪೆಟ್ಟನ್ನು ಆದಿಕೋರಿಸಿ ಹಿಂದಿನ ಪರಿಷತ್ತಿನಿಂದುಂಟಾದ ಪರಿಣಾಮವನ್ನು ಸಭೆಯ ಮುಂದಿಟ್ಟರು. ಅವು:–೧ ಕ್ರಮಿಕ ಪುಸ್ತಕಗಳ ಸುಧಾರಣೆಯು. ೨ ಕಾಲೇಜದಲ್ಲಿ ಚಿತ್ರಕಲೆಯನ್ನು ಅವಶ್ಯಕವಾಗಿ ಮಾಡಿರುವದು. ೩ ಇಂಗ್ಲಿಷ ಕಲಿಸುವ ಶಿಕ್ಷಕರನ್ನು ಶಿಕ್ಷಣದಲ್ಲಿ ಪರೀಕ್ಷಿಸುವದು ೪ ಮುಲ್ಕೀ ಪರೀಕ್ಷೆಯನ್ನುತ್ತು ೬ನೇ ಇಯತ್ತೆಗಳ ಅಭ್ಯಾಸಕ್ರಮವು ಒಂದೇಯಾಗಿರುವದು. ಈ ಮುಂತಾದ ಸುಧಾರಣೆಗಳನ್ನು ಹಿಂದಿನ ಪರಿಷತ್ತಿನಲ್ಲಿ ತಮ್ಮಂಥ ವಿದ್ಯಾಭಿಮಾನಿಗಳು ಸೂಚಿಸಿದ್ದರಿಂದಲೇ ನಾವು ಪ್ರಚಾರದಲ್ಲಿ ತಂದಿರುತ್ತೇವೆ. ಮತ್ತು ಆಗಿನ ಸೂಚನೆಗೆ ಅನುಸಾರವಾಗಿಯೇ ಪ್ರಾಥಮಿಕ ಶಾಲೆಗಳ

ಅಭ್ಯಾಸಕ್ರಮವನ್ನು ಏಳು ವರುಷಗಳಲ್ಲಿ ವಿಭಾಗಿಸಿದ್ದೇವೆ. ಅಂದರೆ ಮೊದಲಿದ್ದ ಆರು ಇಯತ್ತೆಗಳಿಗೆ ಬದಲಾಗಿ ಏಳು ಇಯತ್ತೆಗಳನ್ನು ಮಾಡಿದ್ದೇವೆ. ಈ ಸೂಚಿಸಿದ ಇಯತ್ತೆಗಳ ಅಭ್ಯಾಸಕ್ರಮದ ಪುಸ್ತಕವನ್ನು ಈ ಮೊದಲೇ ತಮ್ಮೆಲ್ಲರಿಗೆ ಮುಟ್ಟಿಸಿದ್ದೇವೆ. ಈ ಇಯತ್ತೆಗಳ ಸಂಬಂಧವಾಗಿ ಏನಾದರೂ ಹೆಚ್ಚಿಗೆ ಸೂಚಿಸುವದಿದ್ದಲ್ಲಿ ವಿದ್ಯಾಭಿಮಾನಿಗಳಾದ ತಾವು ತಮ್ಮ ಅಭಿಪ್ರಾಯವನ್ನು ನಿರಾತಂಕವಾಗಿ ಆಡಿ ಅಥವಾ ಬರೆದು ತೋರಿಸಬೇಕೆಂದು ಹೇಳಿ ಕೂತರು. ಬಳಿಕ ಮೈಜರಕರ ವೆಂಕಟರಾಯರ ನಿಬಂಧವನ್ನು ರಾ. ಖಾಸನೀಸ ಎಂಬವರು ಓದಿದರು, ಅದರಲ್ಲಿ ಮುಖ್ಯವಾಗಿ ಅವರು ಇಂಗ್ಲಿಷ ಕಲಿಯುಲಿಕ್ಕೆ ೫ನೇ ಇಯತ್ತೆಯಲ್ಲಿ ಪಾಸಾಗಬೇಕೆಂದು ಈಗ ಗೊತ್ತು ಮಾಡಿದ್ದಕ್ಕೆ ಬದಲಾಗಿ ೬ನೇ ಇಯತ್ತೆಯಿಂದು ಗೊತ್ತು ಮಾಡಬೇಕೆಂತಲೂ, ಚಿತ್ರಬೋಧ ಪುಸ್ತಕವನ್ನು ಸಾಲಿಯಲ್ಲಿ ಉಪಯೋಗಿಸಬೇಕೆಂತಲೂ, ಚಿತ್ರಕಲೆಯನ್ನು ಅವಶ್ಯಕ ವಿಷಯವಾಗಿ ಮಾಡಬೇಕೆಂತಲೂ ಸೂಚಿಸಿ, ಕಿಂಡರಗಾರ್ಟನ್ ಪದ್ಧತಿಯ ಶಿಕ್ಷಣವನ್ನು ಶೇರಿಸಿದ್ದಕ್ಕಾಗಿ ಆನಂದನವನ್ನೂ, ವಿಶ್ವವಿದ್ಯಾಲಯದಲ್ಲಿ ದೇಶಭಾಷೆಗೆ ಆಧಾರವಿಲ್ಲೆಂಬದಕ್ಕಾಗಿ ಮುಖೋದ್ಗಾರವನ್ನೂ ಹೊರಗೆಡವಿದರು. ಬಳಿಕ ವಿ. ರೊದ್ದ ತ್ರಿಮಲರಾಯರು ನಿಬಂಧ ಓದಿದರು. ಅದರಲ್ಲಿ ಅವರು ಸಾಂಪ್ರತಕ್ಕೆ ಸೂಚಿಸಿದ ಇಯತ್ತೆಗಳು ತಕ್ಕವಿರುತ್ತವೆಂತಲೂ ೫, ೬, ೭ರಲ್ಲಿ ಹಳೆಗನ್ನಡ ಗ್ರಂಥಗಳ ವಾಚನವನ್ನು ಸೇರಿಸಬೇಕೆಂತಲೂ, ಹೆಂಟರ ಸಾ.ದ ಇತಿಹಾಸವು ನೆಟ್ಟಗಿಲ್ಲವಾದ್ದರಿಂದ ಪ್ರಯೋಜನಕರವಾದಂಥ ಸುಬೋಧವಾದಂಥ ಹೊಸದಾಗಿ ನಿರ್ಮಿಸಿದ ಪುಸ್ತಕದಿಂದ ಇತಿಹಾಸವನ್ನು ಕಲಿಸಬೇಕೆಂತಲೂ ಸೂಚಿಸಿದರು. ಬಳಿಕ ಬೆಳಗಾವಿಯ ವಕೀಲರಾದ ವಿ. ನಾಡಗೌಡರು ತಮ್ಮ ನಿಬಂಧವನ್ನೋದಿದರು. ಅದರಲ್ಲಿ ತಾವೀದ ಶಿಕ್ಷಣವು ಅವಶ್ಯಕ ವಿಷಯವಾಗಿರಬೇಕೆಂತಲೂ ಮರಾಠಿಯನ್ನು ಕಲಿಸಲೇಬೇಕೆಂತಲೂ ಅಭಿಪ್ರಾಯವಿತ್ತು. ತರುವಾಯ ರಾ. ಸಾ. ಜೋಶಿ ವಿನಾ

ಲಿಕ್ಕಿಲ್ಲ. ಗೊತ್ತಾದ ನಿಬಂಧಗಳಲ್ಲಿ ೬ ನಿಬಂಧಗಳು ವಿದ್ಯಾ ಖಾತೆಯುಲ್ಲಿ ನೌಕರರಲ್ಲದವರಿಂದ ಬರೆಯಲ್ಪಟ್ಟವು. ಉಳಿದವುಗಳೆಲ್ಲ ಅಧ್ಯಾಪಕರೂ ಡೆಪ್ಯುಟೀ ಇನಸ್ಪೆಕ್ಟರರೂ ಮುಂತಾದ ವಿದ್ಯಾಖಾತೆಯ ನೌಕರರಿಂದ ಬರೆಯಲ್ಪಟ್ಟಂಥವು. ೧೧॥ ಯಿಂದ ೬ ರ ವರೆಗೆ ನಡೆಯುವ ಸಭಾಕಾಲದಲ್ಲಿ ಉಪಹಾರದ ಸಲುವಾಗಿ ಗೊತ್ತು ಮಾಡಿದ ಅರ್ಧ ತಾಸು ಬಿಟ್ಟು ಉಳಿದ ಹೊತ್ತಿನಲ್ಲಿ ಎರಡು ಭಾಗ ಮಾಡಿ ಆರಂಭದಲ್ಲಿ ನಿಬಂಧವಾಚನವೂ ತದನಂತರ ಅವುಗಳ ಸಂಬಂಧವಾದ ವಿವಾದವೂ ನಡೆಯುತ್ತಿತ್ತು. ಅಧ್ಯಕ್ಷರ ಸದ್ಗುಣದ ಪರಿಚಯಸ್ಪಿನಿಂದಲೂ ಕಾರ್ಯದರ್ಶಿಗಳ ತತ್ಪರತೆಯಿಂದಲೂ ಸಭಾ ಕಾರ್ಯವು ಬಹು ಸಮಾಧಾನದಿಂದಲೂ ಸುಯಂತ್ರವಾಗಿಯೂ ಸಾಗಿತೆಂದು ಬರೆಯಲಿಕ್ಕೆ ನಮಗೆ ಸಂತೋಷವಾಗುತ್ತದೆ. ಉಪಹಾರದ ವ್ಯವಸ್ಥೆಯು, ಕಾಲೇಜದ ಪ್ರಾಕ್ಟಿಸಿಂಗ ಸ್ಕೂಲಿನಲ್ಲಿ ಕಾಲೇಜದ ಅಧ್ಯಕ್ಷರಿಂದ ನೆರವೇರುತ್ತಿತ್ತು.

೧ನೇ ದಿವಸ.

ಅಧ್ಯಕ್ಷರು ೧೧½ ಘಂಟೆಗೆ ಸರಿಯಾಗಿ ಸಭಾಕಾರ್ಯಕ್ಕೆ ಪ್ರಾರಂಭಿಸಿದರು. ಅವರು ಆಸ್ಥೆಯಿಂದ ಸಭೆಗೆ ಬಂದ ಎಲ್ಲ ಸದ್ಗೃಹಸ್ಥರನ್ನು ಆದರಪೂರ್ವಕವಾಗಿ ಬರಮಾಡಿಕೊಂಡು ಬರ ಪಿಡಗುಗಳಿಂದ ವಿದ್ಯಾಖಾತೆಗೆ ಬಡಿದ ಕೆಟ್ಟನ್ನು ಆಡಿ ತೋರಿಸಿ ಹಿಂದಿನ ಪರಿಷತ್ತಿನಿಂದುಂಟಾದ ಪರಿಣಾಮವನ್ನು ಸಭೆಯ ಮುಂದಿಟ್ಟರು. ಅವು:-೧ ಕ್ರಮಿಕ ಪುಸ್ತಕಗಳ ಸುಧಾರಣೆಯು. ೨ ಕಾಲೇಜದಲ್ಲಿ ಚಿತ್ರಕಲೆಯನ್ನು ಅವಶ್ಯಕವಾಗಿ ಮಾಡಿರುವದು. ೩ ಇಂಗ್ಲಿಷ ಕಲಿಸುವ ಶಿಕ್ಷಕರನ್ನು ಶಿಕ್ಷಣದಲ್ಲಿ ಪರೀಕ್ಷಿಸುವದು ೪ ಮುಲ್ಕೀ ಪರೀಕ್ಷೆ ಮತ್ತು ೬ನೇ ಇಯತ್ತೆಗಳ ಅಭ್ಯಾಸಕ್ರಮವು ಒಂದೇದಾಗಿರುವದು. ಈ ಮುಂತಾದ ಸುಧಾರಣೆಗಳನ್ನು ಹಿಂದಿನ ಪರಿಷತ್ತಿನಲ್ಲಿ ತಮ್ಮಂಥ ವಿದ್ಯಾಭಿಮಾನಿಗಳು ಸೂಚಿಸಿದ್ದರಿಂದಲೇ ನಾವು ಪ್ರಚಾರದಲ್ಲಿ ತಂದಿರುತ್ತೇವೆ. ಮತ್ತು ಆಗಿನ ಸೂಚನೆಗೆ ಅನುಸಾರವಾಗಿಯೇ ಪ್ರಾಥಮಿಕ ಶಾಲೆಗಳ

ಅಭ್ಯಾಸಕ್ರಮವನ್ನು ಏಳು ವರುಷಗಳಲ್ಲಿ ವಿಭಾಗಿಸಿದ್ದೇವೆ. ಅಂದರೆ ಮೊದಲಿದ್ದ ಆರು ಇಯತ್ತೆಗಳಿಗೆ ಬದಲಾಗಿ ಏಳು ಇಯತ್ತೆಗಳನ್ನು ಮಾಡಿದ್ದೇವೆ. ಈ ಸೂಚಿಸಿದ ಇಯತ್ತೆಗಳ ಅಭ್ಯಾಸಕ್ರಮದ ಪುಸ್ತಕವನ್ನು ಈ ಮೊದಲೇ ತಮ್ಮೆಲ್ಲರಿಗೆ ಮುಟ್ಟಿಸಿದ್ದೇವೆ. ಈ ಇಯತ್ತೆಗಳ ಸಂಬಂಧವಾಗಿ ಏನಾದರೂ ಹೆಚ್ಚಿಗೆ ಸೂಚಿಸುವದಿದ್ದಲ್ಲಿ ವಿದ್ಯಾಭಿಮಾನಿಗಳಾದ ತಾವು ತಮ್ಮ ಅಭಿಪ್ರಾಯವನ್ನು ನಿರಾತಂಕವಾಗಿ ಆಡಿ ಅಥವಾ ಬರೆದು ತೋರಿಸಬೇಕೆಂದು ಹೇಳಿ ಕೂತರು. ಬಳಿಕ ಮೈಜರಕರ ವೆಂಕಟರಾಯರ ನಿಬಂಧವನ್ನು ರಾ. ಖಾಸನೀಸ ಎಂಬವರು ಓದಿದರು, ಅದರಲ್ಲಿ ಮುಖ್ಯವಾಗಿ ಅವರು ಇಂಗ್ಲಿಷ ಕಲಿಯುಲಿಕ್ಕೆ ೫ನೇ ಇಯತ್ತೆಯಲ್ಲಿ ಪ್ರಾಸಾಗಬೇಕೆಂದು ಈಗ ಗೊತ್ತು ಮಾಡಿದ್ದಕ್ಕೆ ಬದಲಾಗಿ ೬ನೇ ಇಯತ್ತೆಯಿಂದು ಗೊತ್ತು ಮಾಡಬೇಕೆಂತಲೂ, ಚಿತ್ರಬೋಧ ಪುಸ್ತಕವನ್ನು ಶಾಲೆಯಲ್ಲಿ ಉಪಯೋಗಿಸಬೇಕೆಂತಲೂ, ಚಿತ್ರಕಲೆಯನ್ನು ಅವಶ್ಯಕ ವಿಷಯವಾಗಿ ಮಾಡಬೇಕೆಂತಲೂ ಸೂಚಿಸಿ, ಕಿಂಡರಗಾರ್ಟನ್ ಪದ್ಧತಿಯ ಶಿಕ್ಷಣವನ್ನು ಶೇರಿಸಿದ್ದಕ್ಕಾಗಿ ಆನೆಂದನವನ್ನೂ, ವಿಶ್ವವಿದ್ಯಾಲಯದಲ್ಲಿ ದೇಶಭಾಷೆಗೆ ಅಧಾರವಿಲ್ಲೆಂಬದಕ್ಕಾಗಿ ಪುಃಖೋದ್ಗಾರವನ್ನೂ ಹೊರಗೆಡವಿದರು. ಬಳಿಕ ಮಿ. ರೊದ್ದ ತ್ರಿಮಲರಾಯರು ನಿಬಂಧ ಓದಿದರು, ಅದರಲ್ಲಿ ಅವರು ಸಾಂಪ್ರತಕ್ಕೆ ಸೂಚಿಸಿದ ಇಯತ್ತೆಗಳು ತಕ್ಕವಿರುತ್ತವೆಂತಲೂ ೫, ೬, ೭ರಲ್ಲಿ ಹಳೆಗನ್ನಡ ಗ್ರಂಥಗಳ ವಾಚನವನ್ನು ಸೇರಿಸಬೇಕೆಂತಲೂ, ಹೆಂಟರ ಸಾ.ರ ಇತಿಹಾಸವು ನೆಟ್ಟಗಿಲ್ಲವಾದ್ದರಿಂದ ಪ್ರಯೋಜನಕರವಾದಂಥ ಸುಬೋಧವಾದಂಥ ಹೊಸದಾಗಿ ನಿರ್ಮಿಸಿದ ಪುಸ್ತಕದಿಂದ ಇತಿಹಾಸವನ್ನು ಕಲಿಸಬೇಕೆಂತಲೂ ಸೂಚಿಸಿದರು. ಬಳಿಕ ಬೆಳಗಾವಿಯ ವಕೀಲರಾದ ಮಿ. ವಾಡಗೌಡರು ತಮ್ಮ ನಿಬಂಧವನ್ನೋದಿದರು. ಅದರಲ್ಲಿ ತಾಂತ್ರಿಕ ಶಿಕ್ಷಣವು ಅವಶ್ಯಕ ವಿಷಯವಾಗಿರಬೇಕೆಂತಲೂ ಮರಾಠಿಯನ್ನು ಕಲಿಸಲೇಬೇಕೆಂತಲೂ ಅಭಿಪ್ರಾಯವಿತ್ತು. ತರುವಾಯ ರಾ. ಸಾ. ಜೋಶಿ ವಿನಾ

ಯುಕರಾಯರು ನಿಬಂಧವನೋದಿದರು. ಇವರ ನಿಬಂಧದ ಲ್ಲಿ ಎರಡರಿಂದ ೭ ರವರೆಗೆ ಇರುವ ಎಲ್ಲ ಇಯತ್ತೆಗಳ ಅಕ್ಷ ರಗಳು ಆಯಾ ಇಯತ್ತೆಗಳಿಗನುಸಾರವಾಗಿ ನಾಲ್ಕೂ ಜಿಲ್ಲೆ ಬುಲ್ಲಿ ಒಂದೇ ಆಕಾರದವಿರುವದು ಅವಶ್ಯವೆಂತಲೂ ಎನೇ ೩ನೇ ಇಯತ್ತೆಯವರಿಗೆ ಕವಿತೆಯ ಅರ್ಥ ತಿಳಿಯುವದು ಕಠಿಣವಾದದ್ದೆಂತಲೂ ಪ್ರತಿಪಾದಿಸಿದರು. ಬಳಿಕ ವಾದವಿ ವಾದಕ್ಕೆ ಪ್ರಾರಂಭವಾಯಿತು. ಸಂಖ್ಯೆಗಳ ವಿಕೀಕರಣ, ಪ್ರಥಕ್ಕರಣಗಳ ಸಂಬಂಧವಾಗಿ ವಾದವಿವಾದವಾಯಿತು. ಬಳಿಕ ಉಪಹಾರಕ್ಕೆಂದು ಸಭೆಯು ವಿಸರ್ಜನವಾಯಿತು.

(ಸಶೇಷ)

CONVERSATION.

ಸಂಭಾಷಣವು.

ಸುಶೀಲರಾದ ಇಷ್ಟಮಿತ್ರರ ಕೂಡ ಕೆಲವೊಂದು ವಿಷಯ ವನ್ನು ಕುರಿತು ಮಾತಾಡಿ ಅವರ ಅಭಿಪ್ರಾಯವನ್ನು ತಿಳಕೊಳ್ಳುವದಕ್ಕೆ ಸಂಭಾಷಣವೆಂಬ ಹೆಸರು. ಸೃಷ್ಟಿಕ ರ್ತನಾದ ದೇವರು ಮನುಷ್ಯಪ್ರಾಣಿಗೆ ಹುಟ್ಟುತ್ತಲೇ ಕೆಲ ಮಟ್ಟಿಗೆ ಸಂಭಾಷಣ ಮಾಡುವ ಶಕ್ತಿಯನ್ನು ಕೊಟ್ಟಿರುವ ನು. ಅದನ್ನು ಅಭ್ಯಾಸದಿಂದ ಅಭಿವೃದ್ಧಿಪಡಿಸುವದೇ ಮನು ಷ್ಯನ ಕರ್ತವ್ಯವಾಗಿರುತ್ತದೆ. ಈ ಶಕ್ತಿಯನ್ನು ಬೆಳಿಸಲಿ ಕ್ಕೆ ಮಿತ್ರಸಹಾಯವು ಅವಶ್ಯವೆಂಬದು ಸ್ಪಷ್ಟವದೆ.

ಸಂಭಾಷಣ ಶಕ್ತಿಯು ಸರ್ವರಲ್ಲಿ ಏಕಪ್ರಕಾರವಾಗಿರುವ ದಿಲ್ಲ. ಇದೊಂದು ದೊಡ್ಡ ದೇವತಾ ಅನುಗ್ರಹವಿರುತ್ತದೆ. ಜ್ಞಾನಸಂಪಾದನದ ಕೆಲಸದಲ್ಲಿ ಮನುಷ್ಯರಿಗೆ ಇದರಿಂದ ಸ ಹಾಯವಾದಷ್ಟು ಬೇರೆ ಯಾವ ಶಕ್ತಿಯಿಂದಲೂ ಸಹಾಯ ವಾಗುವದಿಲ್ಲ. ಸಂಭಾಷಣಶಕ್ತಿಯಲ್ಲಿ ಮುಖ್ಯವಾಗಿ ಎರಡು ಅಂಗಗಳುಂಟು. (೧) ತಾವು ಎರಡನೇಯವರ ಕೂಡ ಮಾತಾಡುವದು. (೨) ಎರಡನೇಯವರು ಮಾತಾಡಿದ್ದನ್ನು ಕೇಳಿಕೊಳ್ಳುವದು. ಈ ಪೃಥ್ವಿಯಲ್ಲಿರುವ ಎಲ್ಲ ಜ್ಞಾನಸಂ

ಬೋಧನೆಯ ಸಾಧನಗಳನ್ನು ಪರಿಶೋಧಿಸಿದರೆ ಸಂಭಾಷಣಶಕ್ತಿಯು ಎಲ್ಲಕ್ಕೂ ಹೆಚ್ಚಿನ ಸಾಧನವೆಂದೂ ಅದೇ ಮುಖ್ಯ ಸಹಾಯವೆಂದೂ ಕಂಡುಬರುವದು ಆದ್ದರಿಂದ ಈಗ ವಿದ್ಯಾಚಾರ ಸಂಪನ್ನವಾದ ಎಲ್ಲ ರಾಷ್ಟ್ರಗಳಲ್ಲಿ ಸಂಭಾಷಣನೈಪುಣ್ಯವು ಒಂದು ದೊಡ್ಡ ಕಲೆಯೆಂದು ತಿಳಿಯುವರು; ಮತ್ತು ಅದನ್ನು ಕೂಡಿದ ಮಟ್ಟಿಗೆ ವ್ಯವಸ್ಥಿತರೀತಿಯಿಂದ ಸಂಪಾದಿಸಲಿಕ್ಕೆ ಪ್ರಯತ್ನಿಸುತ್ತಿರುವರು. ಈ ವಿಷಯಕ್ಕೆ ಕೆಲವು ಕಾಲದ ಅನುಭವದಿಂದ ಕೆಲವು ನಿಯಮಗಳು ಗೊತ್ತು ಮಾಡಲ್ಪಟ್ಟಿವೆ. ಆ ನಿಯಮಗಳಂತೆ ನಡಿದರೆ ಸಂಭಾಷಣವು ಲಾಭದಾಯಕವಾಗದೆ ಇರದು. ಕಾರಣ ಅವುಗಳಲ್ಲಿ ಕೆಲವನ್ನು ನಾವು ಇಲ್ಲಿ ಕೊಡುತ್ತೇವೆ.

ಮಾತಾಡುವದು ಅವಶ್ಯವಾಗಿ ತೋರಿದರೆ ಮಾತ್ರ ಮಾತಾಡಬೇಕು. ಇಲ್ಲದಿದ್ದರೆ ಇಲ್ಲ, ಮಾತಾಡಬೇಕೆಂದು ಸುಮ್ಮನೆ ಏನಾದರೊಂದು ಮಾತಾಡಬಾರದು.

ಮಾತಾಡುವಾಗ್ಗೆ ನಿಮ್ಮ ಸಂಚಾಂಗವನ್ನು ಬಿಚ್ಚಿರಗಳೀಭಿದದೆ ಸ್ವಲ್ಪ ಮಾತಿನಿಂದ ಬಹಳ ಅರ್ಥವಾಗುವಂತೆ ಅಂದರೆ ತುಸು ಮಾತಾಡಿದರೂ ನಿಮ್ಮ ಅಭಿಪ್ರಾಯವು ಸ್ಪಷ್ಟವಾಗುವಂತೆ ಮಾತಾಡಬೇಕು; ಅಂದರೆ ಇದರಿಂದ ಕೇಳುವವರಿಗೆ ಬೇಸರ ಬರದೆ ಅವರು ನಿಮ್ಮ ಮಾತನ್ನು ಲಕ್ಷಪೂರ್ವಕವಾಗಿ ಕೇಳುವರು.

ಮಾತಾಡುವಾಗ್ಗೆ ಸಹಜವಾಗಿ ಮಾತಾಡಬೇಕಲ್ಲದೆ ಜೀವಕ್ಕೆ ತ್ರಾಸವಾಗುವಂತೆ ಮಾತಾಡಬಾರದು ಮತ್ತು ಅದರಲ್ಲಿ ಬಣ್ಣ ಡೌಲಿನ ಅಂಶವಿರಬಾರದು.

ಮಾತಾಡುವಾಗ್ಗೆ ಶಬ್ದಗಳನ್ನು ಸ್ಪಷ್ಟವಾಗಿ ಉಚ್ಚರಿಸಬೇಕು. ವಾಕ್ಯಗಳು ಸಣ್ಣಸಣ್ಣವಿರಬೇಕು ಮತ್ತು ಪದಗಳು ತಕ್ಕ ಸ್ಥಲದಲ್ಲಿರಬೇಕು; ದೂರಾನ್ವಯವಾಗುವಂತೆ ಇರಬಾರದು.

ಮಾತಾಡುವವರು ತಮ್ಮ ಅಂಬೋಣವನ್ನು ಸ್ಪಷ್ಟವಾಗಿ ತಿಳಿಸುವದಕ್ಕಾಗಿ ದೃಷ್ಟಾಂತಗಳನ್ನು ಕೊಡುವದು ಅವಶ್ಯವಿದೆ; ಆದರೆ ಅವು ಸಹಜವಾಗಿ ತಿಳಿಯುವಂಥವಿರಬೇಕು.

ಕ್ಷುಲ್ಲಕವಾದ ವಿಷಯದ ಮೇಲೆ ಮಾತಾಡಿ ತಮ್ಮ ಮತ್ತು ತಮ್ಮ ಮಾತನ್ನು ಕೇಳುವವರ ವೇಳೆಯನ್ನು ವ್ಯರ್ಥವಾಗಿ ಕಳೆಯಬಾರದು.

ಮಾತಾಡುವಾಗ್ಗೆ ಯಾರ ನಿಂದೆಯನ್ನೂ ಮಾಡಬಾರದು. ನಿಂದೆ ಮಾಡುವಾಗ್ಗೆ ಅವರು ಅಲ್ಲಿ ಇಲ್ಲದಿದ್ದರೂ ಆ ಸಂಗತಿಯು ಅವರಿಗೆ ತಿಳಿಯದಲೇ ಉಳದೀತೆಂದು ತಿಳಿಯಬಾರದು, ಅದು ನಿಶ್ಚಯವಾಗಿ ಅವರಿಗೆ ತಿಳಿಯುವದು.

ಬಾಯಿಂದ ಕೀಳು ಶಬ್ದಗಳನ್ನು ಆಡಬಾರದು. ಧರ್ಮ, ಸ್ವರ್ಗ, ದೇವರು ಮುಂತಾದವುಗಳ ವಿಷಯಕ್ಕೆ ಮಾತಾಡುವಾಗ್ಗೆ ಬಹಳ ಗಂಭೀರಭಾಷೆಯಿಂದ ಮಾತಾಡಬೇಕು.

ಒಮ್ಮೆ ಹೇಳಿದ ಸಂಗತಿಯನ್ನೇ ಪುನಃ ಹೇಳಬಾರದು, ಮತ್ತು ಒಮ್ಮೆ ಮಾಡಿದ ವಿನೋದವನ್ನೇ ಪದೆ ಪದೆ ಮಾಡಬಾರದು ಅದರಿಂದ ಕೇಳುವವರಿಗೆ ಬೇಸರ ಬರುವದು.

ಯಾವದೊಂದು ಮೇಜವಾನಿಗಾಗಿ ಮಾಡಿದ ಪದಾರ್ಥವು ಎಲ್ಲರಿಗೂ ಸಮನಾಗಿ ದೊರಕುವದು ಅವಶ್ಯವಿದ್ದಂತೆ ನಿಮ್ಮ ಭಾಷಣವಾದರೂ ಎಲ್ಲರಿಗೂ ಸಮನಾಗಿ ಕೇಳಿಸುವಂತೆ ಇರಬೇಕು. ಅದರಲ್ಲಿ ಸ್ವಂತದ ಸಂಬಂಧವು ಎಷ್ಟು ಮಾತ್ರವೂ ಇರಕೂಡದು.

ಮಾತಾಡುವಾಗ್ಗೆ ಬಹಳ ಜಪ್ಪಿಸಿ ಎಚ್ಚರದಿಂದ ಮಾತಾಡಬೇಕು. ತಮ್ಮ ಅಕ್ಕ, ತಂಗಿ, ತಾಯಂದಿರು ಕೇಳಬಾರದೆಂದು ಬಯಸುವಂಥ ಅಭದ್ರ ಭಾಷಣವನ್ನು ಎಲ್ಲಿಯೂ ಎಂದೂ ಮಾಡಬಾರದು. ಇದೇ ಭಾಷೆಯ ಪವಿತ್ರತೆಯೆಂದು ತಿಳಿಯತಕ್ಕದ್ದು.

ನಿಮ್ಮ ವಿಚಾರಗಳು ಯಾವಾಗಲೂ ಚಲೋವಿರುವಂತೆ ಯತ್ನಿಸಬೇಕು. ಅಂದರೆ ಮಾತಾಡಬೇಕಾದರೆ ವಿಶೇಷ ಜಪ್ಪಿಸಬೇಕಾಗಲಿಕ್ಕಿಲ್ಲ. ವಿಚಾರಗಳು ಚಲೋವಿದ್ದರೆ ಭಾಷಣವು ತಾನೇ ಚಲೋದಾಗುವದು.

ತಮ್ಮ ಭಾಷಣದಿಂದ ಎರಡನೇಯವರಿಗೆ ಬೋಧವಾಗಲಿ ವಿನೋದವಾಗಲಿ ಆಗುವಂತೆ ಮಾತಾಡಬೇಕು; ಮತ್ತು ಅದರಲ್ಲಿ ಹಿತಾವಹವಾದ ಸಂಗತಿಗಳೇ ಇರಬೇಕಲ್ಲದೆ ಪರರಿಗೆ ಅಹಿತವಾಗುವಂಥ ಯಾವ ಸಂಗತಿಯೂ ಇರಬಾರದು

ಚಲೋ ಜನರೆದುರಿಗೆ ಮಾತ್ರ ಮಾತಾಡಬೇಕು. ಅಂದರೆ ಅವರಿಂದ ತಮ್ಮ ಸುಧಾರಣೆಯೂ ಮನರಂಜನೆಯೂ ಆಗುವಂತೆ ಇರಬೇಕು.

ನೆರೆದ ಜನರೊಳಗಿನ ಮಾತು ಕಟ್ಟಾದರೆ ಎಲ್ಲರಿಗೂ ಮಾತಾಡಲಿಕ್ಕೆ ಬರುವಂಥ ಯಾವದೊಂದು ಹೊಸ ವಿಷಯವನ್ನು ತೆಗಿಯಬೇಕು.

ಇಂಥ ಭಾಷಣಗಳಲ್ಲಿ ನಿಮಗೆ ಗೊತ್ತಿಲ್ಲದಂಥ ಬೋಧಪರವಾದಂಥ ಸಂಗತಿಗಳು ಹೊರಟರೆ ಅವುಗಳನ್ನು ಕೇಳಿಕೊಂಡು ನಿಮ್ಮ ಟಿಪ್ಪಣಿ ಬುಕ್ಕಿನಲ್ಲಿ ಬರೆದಿಡಬೇಕು.

ನಿಮಗೆ ಬೇರೆಯವರಲ್ಲಿ ದೋಷವಾಗಿ ಕಾಣುವ ಸಂಗತಿಗಳು ಎಲ್ಲರಿಗೂ ಹಾಗೇ ಕಾಣುವದಿಲ್ಲೆಂಬದನ್ನು ಲಕ್ಷದಲ್ಲಿಡಬೇಕು, ಆದ್ದರಿಂದ ಬೇರೆಯವರ ದೋಷಗಳ ಬಗ್ಗೆ ಮಾತಾಡುವಾಗ್ಗೆ ಬಹಳ ಎಚ್ಚರದಿಂದ ಮಾತಾಡಬೇಕು.

ಕೂಡಿದ ಜನರಲ್ಲಿ ಯಾರೊಬ್ಬರು ಮತ್ತೊಬ್ಬರ ನಿಂದೆ ಮಾಡಹತ್ತಿದರೆ ಹಾಗೆ ಮಾಡಬಾರದೆಂದು ಅವರಿಗೆ ಸೌಮ್ಯ ಶಬ್ದಗಳಿಂದ ಹೇಳಬೇಕು. ಅದೂ ನಡಿಯದಿದ್ದರೆ ಸ್ವತಃ ಮೌನದಿಂದ ಕೂಡಬೇಕು. ಅದೂ ಸರಿ ಬೀಳದಿದ್ದರೆ ಅಲ್ಲಿಂದ ಎದ್ದು ಹೋಗಬೇಕು.

ಮಾತಾಡುವಾಗ್ಗೆ ಎರಡನೇಯವರಿಗಿಂತ ಮೇಲಾಗಬೇಕೆಂಬ ಹವಣಿಕೆಯನ್ನು ಹಿಡಿಯಬಾರದು. ನಿಮ್ಮ ಭಾಷಣವು ತತ್ವದಿಂದ ಕೂಡಿದ್ದರೆ ಅದು ತಾನೇ ಜನರನ್ನು ಒಲಿಸುವದು.

ಬೇರೆ ಯಾರಾದರೂ ಅಸಂಬದ್ಧ ಭಾಷಣವನ್ನು ಮಾಡುತ್ತಿದ್ದರೆ ಅದನ್ನು ಸುಮ್ಮನೇ ಕೂತು ಕೇಳಬೇಕು. ಮತ್ತು ತಾವು ಅವರಂತೆ ಮಾತಾಡುತ್ತಿದ್ದರೆ ಹ್ಯಾಗೆ ತೋರುತ್ತಿದ್ದೆವೆಂಬದನ್ನು ಮನಸ್ಸಿನಲ್ಲಿ ವಿಚಾರ ಮಾಡಬೇಕು. ಆಗ ತಮ್ಮಿಂದ ಆಗತಕ್ಕ ತಪ್ಪುಗಳು ತಿಳಿದು ತಿದ್ದುವಿಕೆಗೆ ಬೇಕಾದ ಸೂಚನೆಗಳು ತಮ್ಮಿಂದ ತಾವೇ ಮುಂದೊರಿಯುವವು.

ಮಾತಾಡುವಾಗ್ಗೆ ನಿರ್ಮಲ ಮನಸ್ಸಿನಿಂದಲೂ ಸ್ವಪ್ರೇಕ್ಷೆಯಿಂದಲೂ ಮಾತಾಡಬೇಕು. ಹಾಗೂ ತಾವು ಹಾಗೆ ಮಾ

ತಾಡುತ್ತೇವೆಂಬದು ಕೇಳುವವರ ಲಕ್ಷದಲ್ಲಿ ಬರುವಂತೆ ಯು ತ್ನಿಸಬೇಕು. (ಸಶೇಷ.)

CORRESPONDENCE.
ಪತ್ರವ್ಯವಹಾರ.

(೧೬೪ ನೇ ಪುಟದಿಂದ ಮುಂದೆ ಸಾಗಿದ್ದು.)

ಸ್ಥಾನ—ಅಂಕೆಗಳ ಸ್ಥಾನದಲ್ಲಿ ಬಂದೊಂದು ಹೆಸರಿನ ಗುಂಪುಗಳನ್ನು ಬರೆಯಲಿಕ್ಕೆ ಗೊತ್ತುಮಾಡಿದ ಸ್ಥಳಕ್ಕೆ ಸ್ಥಾನ ಅನ್ನುತ್ತಾರೆ. ಕನ್ನಡದಲ್ಲಿ ೧೮ ಸ್ಥಾನಗಳಿಗೆ ಮಾತ್ರ ಹೆಸರುಗಳು ಅವೆ. ಅವು ಯಾವವೆಂದರೆ:—

೧ನೇ ಸ್ಥಾನ	ಏಕ್ಕಂ (ಬಿಡಿಕಾಳು)
೨ನೇ ಸ್ಥಾನ	ದಹಂ (ಹತ್ತರಗಂಟು)
೩ನೇ ಸ್ಥಾನ	ಶತಂ (ನೂರರಗಂಟು)
೪ನೇ ಸ್ಥಾನ	ಸಾವಿರ (ಸಾವಿರದಗಂಟು)
೫ನೇ ಸ್ಥಾನ	ದಶಸಾವಿರ
೬ನೇ ಸ್ಥಾನ	ಲಕ್ಷ
೭ನೇ ಸ್ಥಾನ	ದಶಲಕ್ಷ
೮ನೇ ಸ್ಥಾನ	ಕೋಟಿ
೯ನೇ ಸ್ಥಾನ	ದಶಕೋಟಿ
೧೦ನೇ ಸ್ಥಾನ	ಅಬ್ಜ
೧೧ನೇ ಸ್ಥಾನ	ಖರ್ವ
೧೨ ನೇ ಸ್ಥಾನ	ನಿಖರ್ವ
೧೩ ನೇ ಸ್ಥಾನ	ಮಹಾಪದ್ಮ
೧೪ ನೇ ಸ್ಥಾನ	ಶಂಕು
೧೫ ನೇ ಸ್ಥಾನ	ಜಲಧಿ
೧೬ ನೇ ಸ್ಥಾನ	ಅಂತ್ಯ
೧೭ ನೇ ಸ್ಥಾನ	ಮಧ್ಯ
೧೮ ನೇ ಸ್ಥಾನ	ಪರಾರ್ಧ

ದಶಕಪದ್ಧತಿ—ಯಾವ ಪದ್ಧತಿಯೆ ಸಂಖ್ಯೆಯನ್ನು ಬರೆಯು ಲಿಕ್ಕೆ ೧೦ ಗುರ್ತುಗಳನ್ನು ಕಲ್ಪಿಸಿರುವರೋ ಮತ್ತು ಯಾವ ಪದ್ಧತಿಯ ಸಂಖ್ಯೆಯಲ್ಲಿ ಪ್ರತಿಬಿಂದು ಸ್ಥಾನ ತನ್ನ ಮುಂದಿ ನ ಸ್ಥಾನದ ೧೦ ಮಡಿ ಇರುವದೋ ಆ ಪದ್ಧತಿಗೆ ದಶಕಪದ ತಿ ಅನ್ನುತ್ತಾರೆ.

ಇದರಂತೆ ೫, ೬, ೧೧, ೧೨ ಇತ್ಯಾದಿ ಗುರ್ತುಗಳನ್ನು ಕಲ್ಪಿಸಿ ಬೇರೆ ಬೇರೆ ರೀತಿಯಿಂದ ಸಂಖ್ಯೆಯನ್ನು ಬರೆದು ತೋರಿಸಬಹುದು. ೫ ಗುರ್ತುಗಳನ್ನು ಕಲ್ಪಿಸಿ ಬರೆವ ಸಂ ಖ್ಯೆಗೆ ೫ ರ ಪದ್ಧತಿಯ ಸಂಖ್ಯೆ, ೬ ಗುರ್ತುಗಳನ್ನು ಕಲ್ಪಿಸಿ ಬರೆದ ಸಂಖ್ಯೆಗೆ ೬ ರ ಪದ್ಧತಿಯ ಸಂಖ್ಯೆ ಇತ್ಯಾದಿ ಹೆಸರು ಗಳುಂಟು.

ಈ ಪದ್ಧತಿಗಳ ಸಂಖ್ಯೆಗಳಲ್ಲಿಯಾವರೂ ೧೦ ರ ಪದ್ಧತಿ ಯ ಸಂಖ್ಯೆಯಂತೆ ಯಾವದೊಂದು ಸ್ಥಾನದ ಬೆಲೆ ಅದರ ನುಂದಿನ ಸ್ಥಾನದ ಬೆಲೆಯ ಹೇಳಿದ ಪದ್ಧತಿಯಷ್ಟು ಪಟ್ಟು ಇರುತ್ತದೆ. ಉದಾ—೪೩ ಇದು ೬ ರ ಪದ್ಧತಿಯಲ್ಲಿ ಬರೆಯ ಲ್ಪಟ್ಟಿದೆ. ಇದೇ ಸಂಖ್ಯೆಯು ೧೦ ರ ಪದ್ಧತಿಯಲ್ಲಿ ಬರೆಯ ಲ್ಪಟ್ಟಿದ್ದರೆ ಈ ಸಂಖ್ಯೆಯ ೩ನೇ ಸ್ಥಾನವ ನಾಲ್ಕರ ಬೆಲೆ ೪೦ ಆಗುತ್ತಿತ್ತು. ಅದರ ಈ ಸಂಖ್ಯೆಯು ೬ ರ ಪದ್ಧತಿಯ ಲ್ಲಿ ಇದ್ದದರಿಂದ ಇದರ ಬೆಲೆ ೪ × ೬ = ೨೪ ಇರುತ್ತದೆ. ಈ ಸಂಖ್ಯೆಯ ಬೆಲೆಯು ದಶಕಪದ್ಧತಿಯಲ್ಲಿ ೨೪ + ೩ = ೨೭ ಆಗುತ್ತದೆ.

ಇದರಿಂದ ಯಾವದೊಂದು ಪದ್ಧತಿಯಲ್ಲಿದ್ದ ಸಂಖ್ಯೆಯನ್ನು ದಶಕ ಪದ್ಧತಿಯಲ್ಲಿ ಬರೆಯುವ ರೀತಿಯು ಹೊರಟಿತು ಅದು ಹ್ಯಾಗಂದರೆ–ಕೊಟ್ಟ ಸಂಖ್ಯೆಯ ಮೊದಲನೇ ಅಂಕೆಗೆ ಆ ಸಂ ಖ್ಯೆಯ ಪದ್ಧತಿದರ್ಶಕ ಅಂಕೆಯಿಂದ ಗುಣಿಸಿ ಗುಣಾಕಾರವಲ್ಲಿ ಮುಂದಿನ ಅಂಕೆಯನ್ನು ಕೂಡಿಸಬೇಕು, ಬಂದ ಬೇರೀಜಿ ಗೆ ಮತ್ತೆ ಪದ್ಧತಿದರ್ಶಕ ಅಂಕೆಯಿಂದ ಗುಣಿಸಿ ಮುಂದಿನ ಅಂಕೆಯನ್ನು ಕೂಡಿಸಬೇಕು, ಇದೇ ಪ್ರಕಾರ ಯಾವತ್ತು ಅಂಕೆಗಳು ತೀರುವವರೆಗೆ ಮಾಡುತ್ತ ಹೋಗಬೇಕು,



..೭೪೦+೦=೧೦೪೪ ಇದೇ ೧೦ರ ಪದ್ಧತಿಯ ಸಂಖ್ಯೆ ಆಯಿತು.

ಅದರೆ ೧೦ರ ಪದ್ಧತಿಯಲ್ಲಿದ್ದ ಸಂಖ್ಯೆಯನ್ನು ೬ರ ಪದ್ಧತಿಗೆ ಬಯ್ಯಬೇಕಾದರೆ ೧೦ರ ಗಂಟುಗಳನ್ನು ಬಿಚ್ಚಿ ೬ರ ಗಂಟುಗಳನ್ನು ಕಟ್ಟುತ್ತ ಹೋಗಬೇಕು. ಅಂದರೆ ಕೊಟ್ಟ ೧೦ರ ಪದ್ಧತಿಯ ಸಂಖ್ಯೆಯಷ್ಟು ಬಿಡಿಕಾಳುಗಳು ೬ರ ಪದ್ಧತಿಯ ಎಕ್ಕಂ ಸ್ಥಾನದ ಬಿಡಿಕಾಳುಗಳೆಂದು ಕಲ್ಪಿಸಿ ೬ರಿಂದ ಭಾಗಿಸಿದರೆ ಬಾಕಿಯು ೬ರ ಪದ್ಧತಿಯ ಸಂಖ್ಯೆಯ ಎಕ್ಕಂ ಸ್ಥಾನದ ಅಂಕೆಯಾಯಿತು. ಯಾಕಂದರೆ ಉಳಿದ ಬಿಡಿಕಾಳುಗಳಿಂದ ಪೂರ್ಣವಾದ ೬ರ ಗಂಟು ಆಗುವದಿಲ್ಲ. ಬಂದ ಭಾಗಾಕಾರವು ೬ರ ಗಂಟುಗಳ ಸಂಖ್ಯೆಯನ್ನು ೧೦ರ ಪದ್ಧತಿಯಲ್ಲಿ ಬರೆಯಲ್ಪಟ್ಟದ್ದಾಗುತ್ತದೆ. ಮತ್ತೆ ಇದರಲ್ಲಿ ೬ರ ಗಂಟುಗಳನ್ನು ಕಟ್ಟಲು ಬಾಕಿಯು ೬ರ ಪದ್ಧತಿಯ ಸಂಖ್ಯೆಯು ದಶಂ ಸ್ಥಾನದ ಅಂಕೆಯಾಯಿತು. ಮತ್ತು ಭಾಗಾಕಾರವು ೬ರ ಪದ್ಧತಿಯ ಸಂಖ್ಯೆಯು ಶತೇ ಸ್ಥಾನದ ೬ರ ಗಂಟುಗಳನ್ನು ೧೦ರ ಪದ್ಧತಿಯಲ್ಲಿ ಬರೆದದ್ದಾಗುತ್ತದೆ. ಈ ಪ್ರಕಾರ ೬ರ ಗಂಟು ಕಟ್ಟಲಿಕ್ಕೆ ಬಾರದಂತಾಗುವವರೆಗೆ ಭಾಗಿಸಿ, ಮೇಲೆ ಹೇಳಿದಂತೆ ಸಂಖ್ಯೆಯನ್ನು ಬರೆಯಬೇಕು.

ಉದಾ—೧೦೪೪ ಇದು ೧೦ರ ಪದ್ಧತಿಯಲ್ಲಿ ಅದೆ ೬ರ ಪದ್ಧತಿಗೆ ಬಯ್ಯಬೇಕಾಗಿದೆ.

೩ನೇಸ್ಥಾನ ೨೧೭ ರ ಗಂಟುಗಳು	೩ನೇಸ್ಥಾನ ೩೬ ರ ಗಂಟುಗಳು.	೨ನೇಸ್ಥಾನ ೯ ರ ಗಂಟುಗಳು.	ಬಿಡಿಕಾಳುಗಳು.
			೧೨೪೪
		೨೦೩	೨
	೩೪	೩	೨
೫	೪	೩	೨

ಸೂ—ಮೇಲಿನ ಕೋಷ್ಟಕದಲ್ಲಿ ೧೨೪೪, ೨೦೩, ೩೪ ಇವು ಕ್ರಮವಾಗಿ ಬಿಡಿಕಾಳು. ೯ ರ ಗಂಟು, ೩೬ ರ ಗಂಟು ಇವುಗಳ ಸಂಖ್ಯೆಯನ್ನು ತೋರಿಸುವ ೧೦ ರ ಪದ್ಧತಿಯು ಸಂಖ್ಯೆಗಳಿರುತ್ತವೆ.

(ಸಶೇಷ.)

DHARWAR TRAINING COLLEGE CERTIFICATE EXAMINATION-1900.

ಧಾರವಾಡ ಟ್ರೇನಿಂಗ ಕಾಲೇಜಿದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು—೧೯೦೦.

೩ನೇ ವರ್ಷ
ಶಿಕ್ಷಣಶಾಸ್ತ್ರ.

೧ ಕೂಲಿಯಪ್ಪ ಸಂಬಳವೆಂಬ ಮಾತು ಶಿಕ್ಷಕರ ಸಂಬಂಧದಿಂದ ಎಷ್ಟು ಮಟ್ಟಿಗೆ ನಡಿಯುತಕ್ಕದ್ದು. ಶಿಕ್ಷಕನ ಶ್ರಮಕ್ಕೆ ಶಿಗತಕ್ಕ ಪ್ರತಿಫಲವು ಯಾವಾಗ ಶಿಗುತ್ತದೆ.

೨. ಸುವ್ಯವಸ್ಥೆ, ಶಿಕ್ಷಣದ ಉತ್ತಮ ಪದ್ಧತಿಗಳು, ಬುದ್ಧಿ ಸಾಮರ್ಥ್ಯದ ಚಟುವಟಿಕೆ, ಇಷ್ಟೇ ಇದ್ದ ಶಾಲೆಗಳು ಮಾದರಿ ತೆಗೆದುಕೊಳ್ಳತಕ್ಕ ಶಾಲೆಗಳಲ್ಲ ಎಂಬದನ್ನು ವಿವರಿಸು.

೩ ಗ್ರಹಪಾಠಗಳು ಅಂದರೇನು, ಅವುಗಳನ್ನು ಕೊಡ ಬೇಕಾದರೆ ಯಾವ ಸಂಗತಿಗಳನ್ನು ಲಕ್ಷದಲ್ಲಿ ತರಬೇಕು.

೪. ಕಿಂಡರಗಾರ್ಟನ ಪದ್ಧತಿಯುಂದರೇನು ಇದರ ಉಪ

೫೪೩–೨
೬

೩೦+೪=೩೪
೬

೨೦೪+೩=೨೦೩
೬

೧–೪೦–೨+೨=೧–೪೪೪ ಇದೇ ೧೦ರ ಪದ್ಧತಿಯ ಸಂಖ್ಯೆ ಆಯಿತು.

ಆದರೆ ೧೦ರ ಪದ್ಧತಿಯಲ್ಲಿದ್ದ ಸಂಖ್ಯೆಯನ್ನು ೬ರ ಪದ್ಧತಿಗೆ ಬಯ್ಯಬೇಕಾದರೆ ೧೦ರ ಗಂಟುಗಳನ್ನು ಬಿಚ್ಚಿ ೬ರ ಗಂಟುಗಳನ್ನು ಕಟ್ಟುತ್ತ ಹೋಗಬೇಕು. ಅಂದರೆ ಕೊಟ್ಟ ೧೦ರ ಪದ್ಧತಿಯ ಸಂಖ್ಯೆಯಷ್ಟು ಬಿಡಿಕಾಳುಗಳು ೬ರ ಪದ್ಧತಿಯ ಎಷ್ಟು ಎಕ್ಕಂ ಸ್ಥಾನದ ಬಿಡಿಕಾಳುಗಳೆಂದು ಕಲ್ಪಿಸಿ ೬ರಿಂದ ಭಾಗಿಸಿದರೆ ಬಾಕಿಯು ೬ರ ಪದ್ಧತಿಯ ಸಂಖ್ಯೆಯ ಎಕ್ಕಂ ಸ್ಥಾನದ ಅಂಕೆಯಾಯಿತು. ಯಾಕಂದರೆ ಉಳಿದ ಬಿಡಿಕಾಳುಗಳಿಂದ ಪೂರ್ಣವಾದ ೬ರ ಗಂಟು ಆಗುವದಿಲ್ಲ. ಬಂದ ಭಾಗಾಕಾರವು ೬ರ ಗಂಟುಗಳ ಸಂಖ್ಯೆಯನ್ನು ೧೦ರ ಪದ್ಧತಿಯಲ್ಲಿ ಬರೆಯಲ್ಪಟ್ಟದ್ದಾಗುತ್ತದೆ. ಮತ್ತೆ ಇದರಲ್ಲಿ ೬ರ ಗಂಟುಗಳನ್ನು ಕಟ್ಟಲು ಬಾಕಿಯು ೬ರ ಪದ್ಧತಿಯ ಸಂಖ್ಯೆಯ ದಶಂ ಸ್ಥಾನದ ಅಂಕೆಯಾಯಿತು. ಮತ್ತು ಭಾಗಾಕಾರವು ೬ರ ಪದ್ಧತಿಯ ಸಂಖ್ಯೆಯು ೩ನೇ ಸ್ಥಾನದ ೬ರ ಗಂಟುಗಳನ್ನು ೧೦ರ ಪದ್ಧತಿಯಲ್ಲಿ ಬರೆದದ್ದಾಗುತ್ತದೆ. ಈ ಪ್ರಕಾರ ೬ರ ಗಂಟು ಕಟ್ಟಲಿಕ್ಕೆ ಬಾರದಂತಾಗುವವರೆಗೆ ಭಾಗಿಸಿ, ಮೇಲೆ ಹೇಳಿದಂತೆ ಸಂಖ್ಯೆಯನ್ನು ಬರೆಯಬೇಕು.

ಉದಾ—೧–೪೦೪ ಇದು ೧೦ರ ಪದ್ಧತಿಯಲ್ಲಿ ಅದೆ ೬ರ ಪದ್ಧತಿಗೆ ಬಯ್ಯಬೇಕಾಗಿದೆ.

೧೨೪೪	೨ನೇಸ್ಥಾನ ೨೧೬ ರ ಗಂಟುಗಳು	೩ನೇಸ್ಥಾನ ೩೬ ರ ಗಂಟುಗಳು.	೨ನೇಸ್ಥಾನ ೬ ರ ಗಂಟುಗಳು.	ಬಿಡಿಕಾಳುಗಳು.
೧೨೪೪				೧೨೪೪
೨೧೬			೨೧೬	೨
೩೬		೩೬	೩	೨
೬		೬	೩	೨

ಸೂ—ಮೇಲಿನ ಕೋಷ್ಟಕದಲ್ಲಿ ೧೨೪೪, ೨೧೬, ೩೬ ಇವು ಮವಾಗಿ ಬಿಡಿಕಾಳು. ೬ ರ ಗಂಟು, ೩೬ ರ ಗಂಟು ಇವುಗಳ ಂಖ್ಯೆಯನ್ನು ತೋರಿಸುವ ೧೦ ರ ಪದ್ಧತಿಯ ಸಂಖ್ಯೆಗಳಿರುತ್ತವೆ.

(ಸಕೇಷ.)

DHARWAR TRAINING COLLEGE CERTIFICATE EXAMINATION-1900.

ಧಾರವಾಡ ಟ್ರೇನಿಂಗ ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು—೧೯೦೦.

ತೃತೀಯ ವರ್ಷ
ಶಿಕ್ಷಣಶಾಸ್ತ್ರ.

೧ ಕೂಲಿಯಪ್ಪ ಸಂಬಳವೆಂಬ ಮಾತು ಶಿಕ್ಷಕರ ಸಂಬಂಧದಿಂದ ಎಷ್ಟು ಮಟ್ಟಿಗೆ ನಡಿಯುತಕ್ಕದ್ದು. ಶಿಕ್ಷಕನ ಶ್ರಮಕ್ಕೆ ತಕ್ಕ ಪ್ರತಿಫಲವು ಯಾವಾಗ ತಿಗುತ್ತದೆ.

೨. ಸುವ್ಯವಸ್ಥೆ, ಶಿಕ್ಷಣದ ಉತ್ತಮ ಪದ್ಧತಿಗಳು, ಬುದ್ಧಿ ಸಾಮರ್ಥ್ಯದ ಚಟುವಟಿಕೆ, ಇಪ್ಪೇ ಇದ್ದ ಶಾಲೆಗಳು ಮಾದರಿ ತೆಗೆದುಕೊಳ್ಳತಕ್ಕ ಶಾಲೆಗಳಲ್ಲ ಎಂಬದನ್ನು ವಿವರಿಸು.

೩. ಗ್ರಹಪಾಠಗಳು ಅಂದರೇನು, ಅವುಗಳನ್ನು ಕೊಡ ಬೇಕಾದರೆ ಯಾವ ಸಂಗತಿಗಳನ್ನು ಲಕ್ಷದಲ್ಲಿ ತರಬೇಕು.

೪. ಕಿಂಡರಗಾರ್ಟನ ಪದ್ಧತಿಯುಂದರೇನು ಇದರ ಉಪ

ಹೋಗಿ ಮಾಡುವಾಗ ಮಾಡಬೇಕು ಅದರಿಂದಾಗುವ ಲಾಭಗಳು ಯಾವವು

೫. ಇತಿಹಾಸ ಕಲಿಸಬೇಕಾದರ ಹ್ಯಾಗೆ ಕಲಿಸಬೇಕು. ಅದನ್ನು ಶಾಲೆಗಳಲ್ಲಿ ಕಲಿಸುವದರಿಂದ ಆಗುವ ಲಾಭಗಳೇನು. ಯಾವ ಹೇತುವಿನಿಂದ ಅದನ್ನು ಕಲಿಸಬೇಕು.

೬. ಶಾಲೆಯಲ್ಲಿ ಕೊಡತಕ್ಕ ಶಿಕ್ಷೆಯು ರಾಜಕಾರ್ಯದಲ್ಲಿ ಆಗತಕ್ಕ ತಪ್ಪಿಗೆ ಯೋಗ್ಯವಾದದ್ದಲ್ಲವೆಂಬದನ್ನು ಸ್ಪಷ್ಟೀಕರಿಸಿ, ದೇಹದಂಡದ ಶಿಕ್ಷೆಯ ವಿಷಯವಾಗಿ ನಿಮ್ಮ ಅಭಿಪ್ರಾಯವನ್ನು ಹೇಳಿರಿ.

೭. ಶಿಕ್ಷಕನಲ್ಲಿ ಕಠಿಣ ಮನಸ್ಸು ಮತ್ತು ಅಸತ್ಯತೆ ಇದ್ದತೆ ಶಾಲೆ ಬಿಟ್ಟು ಹೋದಮೇಲೆ ಹುಡುಗರ ಶೀಲಸ್ವಭಾವ ಮತ್ತು ನಡತೆಯ ಮೇಲೆ ಯಾವ ಪರಿಣಾಮಗಳು ಆಗುವವು?

೮. ಟೀಕಾಪಾಠ ಅಂದರೇನು? ತಿದ್ದುವಿಕೆಯ ಸಂಬಂಧವಾಗಿ ಈ ಪಾಠದಲ್ಲಿ ಯಾವ ಸಂಗತಿಗಳನ್ನು ಲಕ್ಷಿಸಬಹುದು.

೯. ವೇಳಾಪತ್ರಿಕೆಯನ್ನು ಯಾವ ಪ್ರಸಂಗದಲ್ಲಿ ಮುರಿಯಬಹುದು? ಯಾವ ಯಾವ ತರ್ತ್ವದ ಮೇಲೆ ವೇಳಾಪತ್ರಿಕೆಯನ್ನು ರಚಿಸಬೇಕು ಪೂರ್ಣವಾಗಿ ಹೇಳು.

೧೦. ಶಿಕ್ಷಕನ ಮಾನಸಿಕ ನೈತಿಕ ಮತ್ತು ಪ್ರಾಕೃತಿಕ ಗುಣಗಳು ಹ್ಯಾಗೆ ಇರಬೇಕು ವಿವರಿಸು.

೧೧. ನೋಟ ಪುಸ್ತಕಗಳ ಉಪಯೋಗ ದುರುಪಯೋಗಗಳನ್ನು ಹೇಳಿ "ವರ್ತಮಾನ ಪತ್ರ" ಈ ಪಾಠದ ಟಿಪ್ಪಣಿಯನ್ನು ತೆಗೆಯಿರಿ.

೧೨. ನೀತಿಯ ಪ್ರವೃತ್ತಿಗಳಂದರೇನು? ವಿದ್ಯಾರ್ಥಿಗಳಲ್ಲಿ ಅವಶ್ಯವಾಗಿ ಹುಟ್ಟಿಸತಕ್ಕ ನೀತಿಯ ಗುಣಗಳು ಯಾವವು? ಚಿಕ್ಕ ಬಾಲಕರಿಗೆ ಕಲಿಸುವಾಗ ಯಾವ ಇಂದ್ರಿಯಗಳನ್ನು ಬಲಪಡಿಸಬೇಕು ಕಾರಣ ಸಹಿತ ವಿವರಿಸಿರಿ.

ಸಿದ್ಧನಾಥ ವಾಚನ ಮಂದಿರ.
ಪೊರಬ. ಜಿ ಧಾರವಾಡ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಷ್ಯಸೋತ್ಕರ್ಷಮುಂ।
ಜಯಸುತ್ಕಂ ಪ್ರತಿಭಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ॥
ಜಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆ ಕೈಕೊಂಬುದೈ।
ಜಯಮಿಂದೋಷವತಿದ್ದ ವೇಳ್ವುದುಭುಧರ್ಜ್ಞಾನಾಳಿವೃದ್ಧಿಪ್ರಿಯರಿ॥

ಪುಸ್ತಕ ೩೬] ದಿಶಂಬರ ೧೯೦೦. [ಸಂಚಿಕೆ ೧೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕಳೆದ ವರ್ಷ ಧಾರವಾಡ, ವಿಜಾಪುರ ಸೆಂಟರುಗಳಲ್ಲಿ
ನ ಕನ್ನಡ ಮುಲ್ಕೀ ಪರೀಕ್ಷೆಗಳಲ್ಲಿ ಅಪ್ರಮಾಣಿಕತನದ
ನರ್ತನ ಮಾಡಿದ್ದರಿಂದ ನಾಲ್ವರಿಗೆ ಸರಕಾರದ ಯಾವ ಖಾ
ತೆಯಲ್ಲಿಯೂ ಉದ್ಯೋಗ ಕೊಡಬಾರದೆಂದು ಗೊತ್ತು
ಮಾಡಿದ ಬಗ್ಗೆ ಈ ಮೊದಲೇ ಕಳೆದ ಅಕ್ಟೋಬರ ತಿಂಗಳ
ಸಂಚಿಕೆಯಲ್ಲಿ ನೋಟೀಸು ಕೊಟ್ಟಿರುತ್ತದೆ. ಅದೇಮೇರೆ
ಗೆ ಬೆಳಗಾವಿ ಜಿಲ್ಲಾ ಇಟಗಿ ಸಾಲೆಯ ಅಸಿಸ್ಟಂಟ ಮಾಸ್ತರ
ನಾಳಾಜಿ ಅಣ್ಣಾಜಿ ಬೆಟಗೇರಿ ಎಂಬವರ ಮುಕ್ಕಳಾದ
ರಾಮಚಂದ್ರ ಬಾಳಾಜಿ ಬೆಟಗೇರಿ ಮತ್ತು ಅಣ್ಣಾಜಿ ಬಾಳಾ
ಜಿ ಬೆಟಗೇರಿ ಎಂಬವರಿಬ್ಬರು ಕಳೆದ ವರ್ಷ ಧಾರವಾಡದ
ಲ್ಲಿ ಆದ ಮುಲ್ಕೀ ಪರೀಕ್ಷೆಯಲ್ಲಿ ಅಪ್ರಮಾಣಿಕತನದಿಂದ
ನಡೆದದ್ದು ಸರಕಾರಕ್ಕೆ ಕಂಡುಬಂದದ್ದರಿಂದ ಸರಕಾರದವ
ರು ಅವರಿಬ್ಬರ ಸರಟೀಫಿಕೇಟುಗಳನ್ನು ರದ್ದುಪಡಿಸಿ ಅವರಿ
ಗೆ ಸರಕಾರದ ಯಾವ ಖಾತೆಯಲ್ಲಿಯೂ ಉದ್ಯೋಗ ಕೊ
ಡಬಾರದೆಂದು ಗೊತ್ತುಪಡಿಸಿದ್ದಲ್ಲದೆ ಈ ಕೆಲಸಕ್ಕೆ ನಮಾ
ನು ಮಾಡಿದ್ದಕ್ಕಾಗಿ ಅವರ ತಂದೆಯನ್ನು ಕೆಲಸದಿಂದ ಬಿಡು
ಗಡೆ ಮಾಡಿರುವರು; ಮತ್ತು ಈ ಸಂಗತಿಯನ್ನು ತಿಳಿಸದೆ

ಇದ್ದದ್ದಕ್ಕಾಗಿ ಇಟಗಿ ಸಾಲಿಯ ಹೆಡ್ಡ ಮಾಸ್ತರ ಛೀಮಾಜಿ ಶ್ರೀನಿವಾಸ ಇವರ ಪಗಾರದಲ್ಲಿ ೫ ರೂಪಾಯಿ ಕಡಿಮೆ ಮಾ ನಿರುವರು. ಇದರ ಕಡಿಗೆ ನಮ್ಮ ವಾಚಕರು ಪೂರ್ಣ ಲಕ್ಷ ಕೊಡುವರೆಂದು ಇಚ್ಛಿಸುತ್ತೇವೆ.

ರಾಮದುರ್ಗ ಸಂಸ್ಥಾನದ ಒಡೆಯರಾದ ಶ್ರೀಮಂತ ಬಾಳಾ ಸಾಹೇಬರನ್ನು ಪಟ್ಟಕ್ಕೆ ಕೂಡಿಸುವ ಸಮಾರಂಭವು.

ಈ ಸಮಾರಂಭವು ಅಕ್ಟೋಬರ ೧೫ನೇ ತಾರೀಖಿನಲ್ಲಿ ಬಹು ಸಡಗರದಿಂದ ನೆರವೇರಿತು. ಈ ಕಾಲದಲ್ಲಿ ದಕ್ಷಿಣ ಮಹಾರಾಷ್ಟ್ರ ಸಂಸ್ಥಾನಗಳ ಮೇಲ್ವಿಚಾರಕರಾದ ಮೆ॥ ಹೋಜರ ಡೇವಿಸ ಸಾಹೇಬರು ಸಂಸ್ಥಾನದ ಒಡೆಯರಿಗೆ ಒಳ್ಳೇ ಸರಳವಾದ ಅನುಭವದ ಸವಿನುಡಿಗಳಿಂದ ಉಪದೇಶ ಮಾಡಿದರು. ಅದರ ಸಾರಾಂಶವು—ಶ್ರೀಮಂತರೇ, ನೀವು ನಿಮ್ಮ ಸಂಸ್ಥಾನವನ್ನು ಸರಿಯಾಗಿ ಆಳುವಷ್ಟು ವಿದ್ವಾಂಸರೂ ಬುದ್ಧಿವಂತರೂ ಯೋಗ್ಯರೂ ಆಗಿರುವಿರೆಂದು ಬಗೆದು ಸರಕಾರದವರು ಇದುವರೆಗೆ ನಡಿಸುತ್ತ ಬಂದ ಈ ಸಂಸ್ಥಾನದ ಆಡಳಿತದ ಹೊಣೆಯನ್ನು ನಿಮ್ಮ ಮೇಲೆ ಹೊರಿಸಬೇಕೆಂದು ಗೊತ್ತು ಮಾಡಿ ಆ ಹೊಣೆಯನ್ನು ನೆರವೇರಿಸುವದಕ್ಕಾಗಿ ನನ್ನನ್ನು ಯೋಜಿಸಿದ್ದರಿಂದ ನಾನು ಇಲ್ಲಿಗೆ ಬಂದೆನು. ಈ ಸತ್ಕಾರ್ಯವು ನನ್ನ ಕೈಯಿಂದ ಜರಗುವದರಿಂದ ನನಗೆಷ್ಟೊ ಆನಂದವೂ ಅಭಿಮಾನವೂ ಉಂಟಾಗಿದೆ. ಶ್ರೀಮಂತರೇ, ಈ ಸಂಸ್ಥಾನವನ್ನು ಆಳಿರಿ ಎಂದೇ ಮನಃಪೂರ್ವಕವಾಗಿ ನೀವು ಏಳನೆಯವರು. ಸಾಂಪ್ರತಕ್ಕೆ ನಾವೆಲ್ಲರೂ ಉತ್ಸವಕ್ಕಾಗಿ ಸೂಡಿದ ಈ ಕೋಟೆಯನ್ನು ಶಿವಾಜಿಯು ಸುಮಾರು ೧೬೫೦ ರಲ್ಲಿ ಕಟ್ಟಿಸಿ ಅಷ್ಟಾಜಿ ಸೂರ್ಯೋ ಎಂಬ ಬ್ರಾಹ್ಮಣನನ್ನು ಕಿಲ್ಲೇದಾರನನ್ನಾಗಿ ನೇಮಿಸಿದನು. ಮುಂದೆ ಮೊಗಲ ಬಾದಶಹನಾದ ಔರಂಗಜೇಬನು ೧೬೮೦ ರಲ್ಲಿ ಇದನ್ನು ಕೈವಶ ಮಾಡಿಕೊಂಡನು. ಬಳಿಕ ೧೫೫ ವರ್ಷಗಳು ಸಂದು ಹೋದ ಮೇಲೆ ಅಂದರೆ ೧೮೦೫ ರಲ್ಲಿ ಔರಂಗಜೇಬನು ಮಡಿದ ನಂತರ ನಿಮ್ಮ ವಂಶದ ಸ್ವಾ

ಪಕೆನಾದಂಥ ರಾಮರಾಯನೆಂಬ ಕಲಿಯು ಮುಸಲ್ಮಾನರಿಂದ ಈ ಕೋಟೆಯನ್ನು ಕಸುಕೊಂಡನು. ಅಂದಿನಿಂದ ಈ ಸಂಸ್ಥಾನವು ಕೆಲವು ದಿವಸ ಕ್ಷೇತ್ರಿಯರಿಗೆ ಅಂಕಿತವಾಗಿ ಸಾಗಿ ಕಡೆಯಲ್ಲಿ ಅಂದರೆ ಕ್ಷೇತ್ರಿಯರ ಒಡೆತನವು ಹಾಳಾದ ಬಳಿಕ ಬ್ರಿಟಿಶ ಸರಕಾರದ ಕೈಸೇರಿ ಇಂದಿಗೂ ಸುಖರೂಪವಾಗಿ ಬಾಳಿರುತ್ತದೆ. ಬ್ರಿಟಿಶ ಸಾಮ್ರಾಜ್ಯವು ನೆಲೆಗೊಳ್ಳದ ಪೂರ್ವದಲ್ಲಿ ಎಲ್ಲ ದಕ್ಷಿಣದ ಸಂಸ್ಥಾನಗಳು ತರತರದ ತಾಪದಿಂದ ಬಳಲುತ್ತಿದ್ದವು. ನೆರೆಕೊರೆಯ ಸಂಸ್ಥಾನಿಕರು ಯಾವಾಗಲೂ ಒಬ್ಬರಕೂಡೊಬ್ಬರು ಕಡಿದಾಡುತ್ತಿದ್ದರು. ಆದ್ದರಿಂದ ದೇಶದಲ್ಲಿ ಶಾಂತತೆಯು ನೆಲೆಗೊಳ್ಳಲಿಲ್ಲ. ಆದರಿಂದ ಜನರಿಗೆ ಹಿತಕರವಾದ ಸುಧಾರಣೆಗಳು ಉಂಟಾಗುವ ಬಗೆ ಏನು? ಆ ಕಾಲದಲ್ಲಿ ಆನೆ ನಡೆದದ್ದೇ ಮಾರ್ಗವೆಂಬಂತೆ ಗಾದೆಗನುಸಾರವಾಗಿ ಎಲ್ಲ ಸಂಸ್ಥಾನಿಕರ ವರ್ತನವಿತ್ತು. ಆದರಿಂದ ಒಮ್ಮೆ ಬಂದು ಸಂಸ್ಥಾನವು ಉತ್ಕರ್ಷ ಹೊಂದಿದರೆ ಬೇರೊಂದು ಅಪಕರ್ಷ ಹೊಂದುವದು. ಆದರೆ ಈಗ ದೇವರ ದಯೆದಿಂದ ಆ ಬಗೆಯ ಹೊಂದರೆಗಳು ತೀರ ಇಲ್ಲದಂತಾಗಿ ಸುಖಸಂತೋಷಗಳು ಮನೆಮಾಡಿಕೊಂಡಿವೆ. ನಿಮ್ಮ ಅಜ್ಜಂದಿರಾದ ರಾಮರಾಯರು ಗಳಿಸಿದ್ದು ಅಂದರೆ ಬ್ರಿಟಿಶ ಸಾಮ್ರಾಜ್ಯವನ್ನು ನಿರ್ನಾಮ ಮಾಡಬೇಕೆಂದು ಭರತಖಂಡದ ಅನೇಕ ಜನರಲ್ಲಿ ಬಹುಮಂದಿ ಪ್ರಯತ್ನ ಮಾಡಿದ್ದರು. ಆದರೆ ಸಮಯವು ಎಷ್ಟು ಭಯಂಕರವಾಗಬೇಕೆಂಬದನ್ನು ಬಿಗಿಸಲಿಲ್ಲ. ಮಿಕ್ಕವರಿಗಿಂತ ಸಂಸ್ಥಾನಿಕರಿಗಂತೂ ಇದು ಬಲ್ಲೇ ಮುಧಾರ ಪ್ರಸಂಗವಾಯಿತು. ಅವರು ಇಂಥ ನಿಷ್ಕಾರಣ ಕ್ಲಿಷ್ಟಸಂಗವನ್ನು ನೀಡಿ ಸಾಮರ್ಥ್ಯಪೂರ್ವಕ ಪಟ್ಟಿಗೆ ತಿರುಗಿ ಬೇಳಲೇಕೆಂದು ಬೋಧಿಸುವ ಮಜಗನವ ರುಜೋಲ್ಲಾಸಕ್ಕೆ ಕೆಮಿಗೊಡದೆ ರಾಜನಿಷ್ಠರಾಗಿದ್ದೀ ಉಳಿದವು. ಇದೇನು ಸಾಮಾನ್ಯವಾದ ಸಂಗತಿಯಲ್ಲ. ತಮ್ಮ ತಾಯಿ ನಿಮ್ಮ ತಂದೆಯು ಸರಿಯಾದರೆ ಪಟ್ಟಿಕ್ಕೆ ಕುಳಿತು ಮುಂದೆ ಅರೆ ವರ್ಷದಲ್ಲಿ ಅಂದರೆ ೧೮೫೮ರಲ್ಲಿ ಹುಸಿಗೊಡಿಸಿದ ನಿಮ್ಮನ್ನು ಬಿಟ್ಟು ಪರ

ಲೋಕವನ್ನೈದಿದರು. ಅದರಿಂದ ತಾವೇ ಈ ಗಾದಿಗೆ ಒಡೆಯರು. ಅಂದಿನಿಂದ ನೀವು ಸಾರ್ವಭೌಮ ಸರಕಾರದ ಕಾರಭಾರಿಗಳಾದ ಪೋಲೀಟಿಕಲ್ ಎಜಂಟರಿಂದ ಸಂರಕ್ಷಿಸಲ್ಪಟ್ಟು, ಇಂದಿಗೆ ನಿಮ್ಮ ಅಧಿಕಾರವನ್ನು ನಡಿಸುವಷ್ಟು ಉತ್ತಮಾವಸ್ಥೆಯನ್ನು ಪಡೆದಿರುವಿರಿ. ಆ ಕಾಲದಲ್ಲಿ ನಿಮ್ಮ ಸಂಸ್ಥಾನವು ಇದೇ ಎಜಂಟರ ಮುಖಾಂತರವಾಗಿಯೇ ನೇಮಿಸಲ್ಪಟ್ಟ ಕಾರಭಾರಿಗಳಿಂದಲೇ ಸಾಗುತ್ತ ಬಂತು. ಅವರು ನಿಮ್ಮ ಸಂಸ್ಥಾನವು ಏಳಿಗೆಯನ್ನು ಪಡೆಯಬೇಕೆಂದು ಅಶ್ರಾಂತ ಶ್ರಮ ಪಟ್ಟಿದ್ದರಿಂದ ನಿಮ್ಮ ಸಂಸ್ಥಾನದಲ್ಲಿ ಅನೇಕ ಸುಧಾರಣೆಗಳು ತಲೆದೋರಿವೆ. ಸಂಸ್ಥಾನದ ಎಲ್ಲ ಭೂಮಿಯು ಅಳಿಯಲ್ಪಟ್ಟು ತೆರಿಗೆಯು ಗೊತ್ತು ಮಾಡಲ್ಪಟ್ಟಿದೆ. ನ್ಯಾಯಖಾತೆ, ವಸೂಲಿ ಖಾತೆಗಳಲ್ಲಿ ಯೋಗ್ಯವಾದ ಹೆಚ್ಚು ಕಡಿಮೆಗಳು ಮಾಡಲ್ಪಟ್ಟವೆ. ಜನರ ವಿತ್ತಜೀವಿತ ರಕ್ಷಣೆಕ್ಕಾಗಿ ನಿಯಮಿತ ಪೋಲೀಸ ಜನರು ನೇಮಿಸಲ್ಪಟ್ಟಿದ್ದಾರೆ. ರಾಮದುರ್ಗದಲ್ಲಿ ಒಂದು, ಸೂರೆಬನದಲ್ಲಿ ಮತ್ತೊಂದು ಹೀಗೆ ಎರಡು ಮ್ಯುನಿಸಿಪಾಲಿಟಿಗಳು ಸ್ಥಾಪಿಸಲ್ಪಟ್ಟವೆ. ಪಾಠಶಾಲೆಗಳು, ಧರ್ಮಶಾಲೆಗಳು, ಔಷಧಾಲಯಗಳು ಮುಂತಾದ ಲೋಕೋಪಯೋಗದ ಸಂಸ್ಥೆಗಳು ಅಯಾ ಸ್ಥಳದಲ್ಲಿ ಕಟ್ಟಲ್ಪಟ್ಟವೆ. ಸಂಸ್ಥಾನದೊಳಗೆ ಅಲ್ಲಲ್ಲಿಗೆ ರಾಜಮಾರ್ಗಗಳು ಮಾಡಲ್ಪಟ್ಟವೆ. ರಾಮದುರ್ಗದಲ್ಲಿ ೫ನೇ ಇಯತ್ತೆಯವರೆಗೆ ಕಲಿಸುವಂಥ ಒಂದು ಇಂಗ್ಲಿಷ ಶಾಲೆಯೂ, ಒಂದು ಮರಾಠಿ ಶಾಲೆಯೂ, ಒಂದು ಮರಾಠಿ ಹೆಣ್ಣುಮಕ್ಕಳ ಶಾಲೆಯೂ, ಒಂದು ಕನ್ನಡ ಹೆಣ್ಣು ಮಕ್ಕಳ ಶಾಲೆಯೂ ಇರುತ್ತವೆ. ಈಗಿನ ಕಾರಭಾರಿಗಳಾದ ಮಿ. ಹುಯಿಲಗೋಳಕರ ಇವರು ಮನಸೋಇಚ್ಛೆ ದುಡಿದದರಿಂದ ಕಾರಭಾರದ ಸರ್ವ ಶಾಖೆಗಳು ಪೂರ್ಣ ಸುಧಾರಿಸಿವೆ. ಆದ್ದರಿಂದ ಈ ಸಂಸ್ಥಾನದ ಕಾರಭಾರವನ್ನು ಸಾಗಿಸುವದಕ್ಕೆ ಮುಂದೆ ತೊಡಕು ಜಡವೆನಿಸದು. ಹೋದ ಎರಡು ಮೂರು ವರ್ಷಗಳಲ್ಲಿ ಉಂಟಾದ ಬರ ಪಿಡುಗುಗಳಿಂದ ಸಂಸ್ಥಾನಕ್ಕೆ ಹೆಚ್ಚು ವೆಚ್ಚವೂ ತೊಂದರೆಯೂ ಪ್ರಾಪ್ತವಾದವು. ಆದರೂ ಭಾಂಡಾರದಲ್ಲಿ

ತಕ್ಕಷ್ಟು ಹಣದ ಈಡುಂಟು. ಚಿಕ್ಕಂದಿನಲ್ಲಿ ನಿಮಗೆ ಸುಶಿಕ್ಷಣವು ದೊರೆತು ನೀವು ಸಂಸ್ಥಾನದ ಆಡಳಿತವನ್ನು ಸುಯುಂತವಾಗಿ ಸಾಗಿಸುವಷ್ಟು ಯೋಗ್ಯರಾಗಬೇಕೆಂದು ಸರಕಾರದವರು ನಿಮ್ಮನ್ನು ಮಿ. ಹೂಗವರ್ಫ್ ದಸ್ತೂರ ಮುಂತಾದ ಏಜೆನ್ಸಿಸರಬಳಿಯಲ್ಲಿ ಪಿದ್ಯ ಕಲಿಯಲಿಟ್ಟರು. ತರುವಾಯ ಕಾರಭಾರದ ಶಿಕ್ಷಣಕ್ಕೋಸುಗ ಈಗ ಮೂರು ಮೂರುವರಿ ವರ್ಷದಿಂದ ನನ್ನ ಬಳಿಯಲ್ಲಿಯೇ ಇರುವಿರಿ. ನಿಮ್ಮ ಇಬ್ಬರು ಗುರುಗಳು ನಿಮ್ಮ ಅಭ್ಯಾಸದ ಸಂಬಂಧದಿಂದಲೂ ನಿಮ್ಮ ನಡತೆಯ ಸಂಬಂಧದಿಂದಲೂ ಒಳ್ಳೇ ಅಭಿಪ್ರಾಯವನ್ನು ನನ್ನ ಮುಂದೆ ಪ್ರಕಟಿಸಿರುತ್ತಾರೆ. ಇದಲ್ಲದೆ ನಾನು ನನ್ನ ಸ್ವಂತ ಅನುಭವದಿಂದ ನೀವು ಸರಳರೂ ಕಾರ್ಯನಿರ್ವಹಣದಲ್ಲಿ ಕುತೂಹಲವುಳ್ಳವರೂ ಅನೇಕ ಸಭ್ಯ ಗುಣಗಳುಳ್ಳವರೂ ಇರುವಿರೆಂದು ನಂಬಿಗೆಯಿಂದ ಹೇಳುತ್ತೇನೆ. ನಿಮಗೆ ನಾನು ಉಪದೇಶಿಸುವ ಮೊದಲನೇ ಮಾತು ಯಾವದೆಂದರೆ, ಹಿಂದುಸ್ತಾನದ ಸಾರ್ವಭೌಮನಿಯಾದ ಮಹಾರಾಜ್ಞಿಗೆ ರಾಜನಿಷ್ಠರಾಗಿರಬೇಕು ನೀವು ಇನ್ನೂ ತರುಣರು. ನಿಮಗೆ ಜಗದ ಅನುಭವ ಕಡಿಮೆ ಆದ್ದರಿಂದ ಈ ಕಾರಭಾರದ ಹೊರೆಯನ್ನು ಒಳ್ಳೇ ಜಾಗ್ರತೆಯಿಂದ ಹೊತ್ತು ನಡಿಸಬೇಕು.

(ಸಶೇಷ.)

ಯಾವದೊಂದು ಕೆಲಸವನ್ನು ತಾವೇ ಮಾಡಬೇಕು. ಬಿಗಿಯಾದ ಲೆಖ್ಖವನ್ನಾಗಲಿ ಪ್ರಶ್ನವನ್ನಾಗಲಿ ಬಿಡಿಸಬೇಕಾದರೆ ಕೆಲವರು ತಮ್ಮ ಗುರುಗಳನ್ನು ಕೇಳುವ ಲವಲವಿಕೆಯಿಂದ ಅದನ್ನು ಬಿಡಿಸಲಿಕ್ಕೆ ಎಷ್ಟುಮಾತ್ರವೂ ಯತ್ನಿಸುವದಿಲ್ಲ. ಇದು ಸರಿಯಲ್ಲ. ಮೊದಲು ತಾವೇ ಅದನ್ನು ಬಿಡಿಸಲಿಕ್ಕೆ ಯತ್ನಿಸತಕ್ಕದ್ದು. ಬಾರದಿದ್ದರೆ ಆ ಮಾತು ಬೇರೆ ಪ್ರಯತ್ನ ಮಾಡುವದಕ್ಕೆ ಮೊದಲು ಗುರುಗಳಿಂದ ಹೇಳಿಸಿಕೊಳ್ಳುವವರು ತಮಗಾಗಿ ಎರಡನೆಯವರಿಗೆ ಊಟ ಉಣ್ಣಲಿಕ್ಕೆ ಹೇಳುವರೋ? ಪ್ಯಾಗೆ ಹಸಿದವರು ತಾವೇ ಉಣ್ಣುವರೋ? ಹಾಗೆ ಬುದ್ಧಿವಂತರಾಗಲಿಚ್ಛಿಸುವವರು ಪ್ರಶ್ನಗಳನ್ನು ತಾವೇ ಬಿಡಿಸಲಿಕ್ಕೆ ಯತ್ನಿಸತಕ್ಕದ್ದು. ಇದಕ್ಕೆ ವಿಪರೀತವಾಗಿ ನಡೆ

ಯುವವರಿಗೆ ಯಾವ ತರದ ಪ್ರಯೋಜನವೂ ಆಗಲಾರದು. ಪ್ರಯತ್ನ ಮಾಡದ ಸೋಮಾರಿಗಳಿಗೆ ಶಿಕ್ಷಕರು ಸಹಾಯ ಮಾಡಿದರೂ ಆಗುವ ಲಾಭವೇನು?

ಕರ್ತವ್ಯಗಳ ಸಂಬಂಧದಿಂದಾದರೂ ಇದೇ ಮಾತು. ತಮ್ಮ ಕೆಲಸ ತಾವೇ ಮಾಡಿ ತೀರಿಸತಕ್ಕದ್ದು. ಎರಡನೇ ಯವರ ನೆರವನು ಮುಂಚಿತವಾಗಿ ಎಂದೂ ಬಯಸಬಾರದು ತಮ್ಮ ಕೆಲಸವನ್ನು ತಾವೇ ಮಾಡುವ ಹವಣಿಕೆಯಿಂದ ಬುದ್ಧಿ ಸಾಮರ್ಥ್ಯಗಳು ಪ್ರಣಿತ ಬೆಳೆಯುತ್ತವೆ ಹಾಗೂ ಈ ಪಟವು ಒಮ್ಮೆ ನೆಲೆಗೊಂಡರೆ ದೊಡ್ಡ ದೊಡ್ಡ ಕೆಲಸಗಳು ಅನಾಯಾಸದಿಂದ ಕೈಗೂಡುತ್ತವೆ. ಯಾವದೊಂದು ಪ್ರಶ್ನೆಯ ಉತ್ತರ ಹೊರಡಿಸುವದು ಮಹತ್ಪಲ್ಲ; ಬದಲು ಆ ಉತ್ತರವನ್ನು ಹೊರಡಿಸುವಲ್ಲಿ ಬೇಕಾಗುವ ಮನಸ್ಸಿನ ವಿಚಾರಶಕ್ತಿ, ಜಾಗರೂಕತೆ, ಬುದ್ಧಿಯನಿಕಾಷ ಮೊದಲಾದವುಗಳೇ ಬಹಳ ಪ್ರಯೋಜನಕರವಾದ ಸಂಗತಿಗಳು

ಸ್ವಂತಪ್ರಯತ್ನದಿಂದ ಕೆಲಸವನ್ನು ನೆರವೇರಿಸಿದ ಮನುಷ್ಯನ ಮುಖಮುದ್ರೆಯು ಪ್ರಫುಲ್ಲಿತವಾಗಿರುವದಲ್ಲದೆ ಅವನನ್ನು ನೋಡುವವನಲ್ಲಿಯೂ ಉಲ್ಲಾಸ ಹುಟ್ಟಿಸುತ್ತದೆ. ಅವನ ಆನಂದಕ್ಕೆ ಅಳವಿಲ್ಲ ಅವನಲ್ಲಿಯೂ ಕೈಮುಚ್ಚಿಕೊಂಡು ಸುಮ್ಮನೇ ಕೂತಂಥ ಅವನ ಜತೆಗಾರರಲ್ಲಿಯೂ ಭೂಮ್ಯಾಕಾಶದಷ್ಟು ಅಂತರವಾಗುತ್ತದೆ ಅವನಿಗೆ ಸುಖವೂ ಅವನ ಜತೆಗಾರರಿಗೆ ಖೇದವೂ ಪ್ರಾಪ್ತವಾಗುತ್ತದೆ ಆದ ಕಾರಣ ಯಾವದೊಂದು ಕೆಲಸಕ್ಕೆ ಎದೆಗೊಟ್ಟು ನಿಲ್ಲುವ ಚಟವನ್ನು ಹುಟ್ಟಿಸುವದೂ ನೆಲೆಗೊಳಿಸುವದೂ ಸಚ್ಛಿಕ್ಷಕರ ಕರ್ತವ್ಯವು

ನಮ್ಮ ಭಾಷೆಯಲ್ಲಿ ಉಚ್ಚರಿಸಲಾಗದ ಶಬ್ದಗಳು ಮೂರು ಉಂಟು ಅವು ಯಾವವೆಂದರೆ, "ನಮ್ಮ ನನ್ನ ತಪ್ಪು" ಈ ಶಬ್ದಗಳನ್ನು ಉಚ್ಚರಿಸಲಿಕ್ಕೆ ಎಷ್ಟೋ ಹೇಡಿಗಳಿಗೆ ಧೈರ್ಯ ಸಾಲುವದಿಲ್ಲ. ಈ ಧೈರ್ಯಾವ್ಯಕ್ತನೇ ಶೂರನು.

ಪರಿಮಳದ ಬಾಣಕವನು ಒಂದಾನೊಂದು ಕಾಲ ಕಾಳಗದಲ್ಲಿ ಸೋಲಲಾಗಿ ತನ್ನ ರಾಜ್ಯಕಾರಭಾವದ ಮುಖ್ಯ

ಸಭೆಗೆ ಬರೆದದ್ದೇನೆಂದರೆ—"ನಾನು ಕಾಳಗದಲ್ಲಿ ಸೋತಿದ್ದೇನು. ಅದೆಲ್ಲ ನನ್ನ ತಪ್ಪು" ಈ ರೀತಿ ತಪ್ಪು ಒಪ್ಪಿಕೊಳ್ಳುವದೇ ಮಹಾತ್ಮರ ಲಕ್ಷಣವು. ತಪ್ಪುಗಳನ್ನು ಒಪ್ಪಿಕೊಳ್ಳುವದಕ್ಕಾಗಿ ಅವುಗಳಾಗದಂತೆ ಎಚ್ಚರ ಪಡುತ್ತಾ ನಡಕೊಳ್ಳುವವನೇ ಜಾಣನು.

CHEMISTRY.

ರಸಾಯನಶಾಸ್ತ್ರ.

(೬೫೧ ನೇ ಪುಟದಿಂದ ಮುಂದೆ ಸಾಗಿದ್ದು.)

೬೬. ಹೈದ್ರೋಜನವು ಅಥವಾ ಜಲಜವು—ಇದಾವದೂ ಬಣ್ಣವೂ ರುಚಿಯೂ ಇಲ್ಲದ ಅದೃಶ್ಯವಾದ ವಾಯುರೂಪ ಪದಾರ್ಥವು. ಇದು ಎಲ್ಲಿಯೂ ಅಸಂಯುಕ್ತ ಸ್ಥಿತಿಯಲ್ಲಿ ದೊರೆಯುವದಿಲ್ಲ. ಆಕ್ಸಿಜನ್‌ನೊಡನೆ ಸಂಯೋಗವಾಗಿ ನೀರನ್ನುಂಟು ಮಾಡುತ್ತದೆ ನೀರೊಳಗಿಂದ ಹೈದ್ರೋಜನ್‌ನನ್ನು ಬೇರೆ ಮಾಡುವ ಅನೇಕ ರೀತಿಗಳನ್ನು ಹಿಂದೆ ೧೨ನೇ ೧೪ನೇ ಪ್ರಯೋಗಗಳಲ್ಲಿ ವರ್ಣಿಸಿದ್ದೇವೆ. ಇದು ಹವೆದು ಸ್ಥಿತಿ ಉರಿಯುತ್ತಿರುವಾಗ ಸ್ವಚ್ಛವಾದ ನೀರು ಹುಟ್ಟುತ್ತಿರುತ್ತದೆ. ಹೈದ್ರೋಜನವು ಅನೇಕ ಮೂಲತತ್ವಗಳಲ್ಲಿ ಮಿಕ್ಕಾಗುತ್ತದೆ. ಇದು ಕಾರ್ಬೊನ್ನಿನೊಡನೆ ಸಂಯೋಗವಾಗಿ ಅಗ್ನಿಧೂಮ ಅಥವಾ ಕರ್ಪೂರೀತ ವಾಯುವನ್ನುಂಟು ಮಾಡುತ್ತದೆ. ಅಗ್ನಿಧೂಮವು ಇದ್ದರಿಯು ಹೊಗೆಯಲ್ಲಿ ಇರುವದೆಂದು ಹಿಂದೆ ಹೇಳಿದ್ದೇವೆ. ಸೈತ್ರಿಕ ಆಸಿಡ್ ಬೆಂಜೊಯಿಕ್ ಆಸಿಡ್ (ಗಂಧಕಾಮ್ಲ) ಹೈದ್ರೋಕ್ಲೊರಿಕ್ ಆಸಿಡ್ (ಹರಿತ್‌ಕ್ಷಾರಾಮ್ಲ) ಮುಂತಾದ ಎಲ್ಲ ಬಗೆಯ ಆಮ್ಲಗಳಲ್ಲಿಯೂ ಹೈದ್ರೋಜನ್ನವು ಬಹುತರವಾಗಿ ಇರುತ್ತದೆ. ಎಲ್ಲ ವಾಯುರೂಪ ಪದಾರ್ಥಗಳಲ್ಲಿ ಇದು ಹಗುರಾದದ್ದು; ಸಾಮಾನ್ಯವಾಗಿ ಸುಮಾರು ೧೫ನೇ ಪಾಲಷ್ಟು ಜಡವಿನವದರಿಂದ ವಿಮಾನವನ್ನು ನಡಿಸುವಲ್ಲಿ ಇದನ್ನು ಉಪಯೋಗಿಸುತ್ತಾರೆ.

೬೭. ನೈತ್ರೋಜನ್ ಅಥವಾ ನಿರ್ಗಂಧವಾಯುವು—ಇದೂ

ದನೂ ರುಚಿ ವರ್ಣಗಳಿಲ್ಲದಂಥ ಅದೃಶ್ಯವಾದ ವಾಯುರೂಪ ಪದಾರ್ಥವು. ಇದು ಹವೆಯಲ್ಲಿ ಅಸಂಯುಕ್ತ ಸ್ಥಿತಿಯಲ್ಲಿರುತ್ತದೆ. ಹಿಂದೆ ೬ನೇ ಪ್ರಯೋಗದಲ್ಲಿ ತೋರಿಸಿದಂತೆ ಹವೆಯಲ್ಲಿ ಘಾಸ್ಪರವನ್ನು ಉರಿಸುವದರಿಂದ ಆಕ್ಸಿಜನ್‌ದಿಂದ ಜೇರೆಯಾಗುತ್ತದೆ. ಇದು ಶಂಖದ್ರಾವ, ಸೋರುಪ್ಪು, ನವಸಾಗರ ಅಥವಾ ಅಮೋನಿಯಾ ಮುಂತಾದ ಅನೇಕ ಮಿಶ್ರ ಪದಾರ್ಥಗಳಲ್ಲಿ ದೊರೆಯುತ್ತದೆ. ಪ್ರಾಣಿಗಳ ಮಾಂಸದಲ್ಲಿಯೂ ನೈತ್ರೋಜನ್ ಉಂಟು. ಇವರಲ್ಲಿ ತೀವ್ರವಾದ ಧರ್ಮಗಳಾವವೂ ಇಲ್ಲ. ಅದರಿಂದ ಮೂಲತತ್ವಗಳೊಡನೆ ಬಹು ಮಂದವಾಗಿ ಮಿಶ್ರವಾಗುವದು. ಈ ವಾಯುವು ತಾನು ಸ್ವತಃ ಉರಿಯುವದಿಲ್ಲ. ಉರಿಗೆ ಸಹಾಯವನ್ನೂ ಮಾಡುವದಿಲ್ಲ. ಆಕ್ಸಿಜನ್‌ದಂತೆ ಪ್ರಾಣಿಗಳ ಜೀವನಕ್ಕೂ ನೆರವಾಗುವದಿಲ್ಲ. ಆದರೆ ಇದು ವಿಷ ಪದಾರ್ಥವಲ್ಲ. ನಿರ್ಗಂಧವಾಯು ತುಂಬಿದ ಕುಪ್ಪಿಯೊಳಗೆ ದೀಪವನ್ನಿಟ್ಟರೆ ಅದು ನಂದುವದು, ಪ್ರಾಣಿಗಳನ್ನಿಟ್ಟರೆ ಅವು ಸಾಯುವವು. ಆದರೆ ಈ ವಾಯುವಿನ ವಿಷದಿಂದಲ್ಲ ಆಕ್ಸಿಜನ್‌ದ ಅಭಾವದಿಂದ ಹೀಗಾಗುವದೆಂದು ತಿಳಿಯಬೇಕು.

ನೈತ್ರೋಜನ್ ಹೈದ್ರೋಜನ್‌ಗಳ ಸಂಯೋಗದಿಂದ ನವಸಾಗರ ಉಂಟಾಗುತ್ತದೆ. ಮತ್ತು ನೈತ್ರೋಜನ್, ಹೈದ್ರೋಜನ್, ಆಕ್ಸಿಜನ್ ಈ ಮೂರು ಮಿಶ್ರವಾದರೆ ನೈತ್ರಿಕ್ ಆಸಿಡ್‌ವೆಂದರೆ ಶಂಖದ್ರಾವವು ಉತ್ಪನ್ನವಾಗುತ್ತದೆ.

ಪ್ರಯೋಗ ೩೪—ನೈತ್ರಿಕ ಆಸಿಡ್ ಅಥವಾ ಶಂಖದ್ರಾವವನ್ನು ತಯಾರ ಮಾಡುವ ರೀತಿ:—ಅರ್ಧ ಔನ್ಸಿನಷ್ಟು ಸೋರುಪ್ಪಿನ ಪುಡಿಯನ್ನು (ಬೆಳ್ಳಕ್ಕಿಯ ಆಕಾರದಂತಿರುವ ಕಾಚಿನ ಯಂತ್ರ) ಬಕ ಯಂತ್ರದಲ್ಲಿ ಹಾಕಬೇಕು ಬಳಿಕ ಅದರ ಮೇಲೆ ಅರ್ಧ ಔನ್ಸಿನಷ್ಟು ಗಂಧಕಾಮ್ಲವನ್ನು ಸುರುವಿ ಬಕ ಯಂತ್ರದ ಬುಡದಲ್ಲಿ ಮದ್ಯಾರ್ಕದ ದೀಪವನ್ನಿಟ್ಟು ಆ ಯಂತ್ರದ ಬಾಯಿಗೆ ಕಾಚಿನ ಹೂಜಿಯನ್ನು ಹಚ್ಚಬೇಕು ಈ ಹೂಜಿಯನ್ನು ತಣ್ಣೀರಿನಿಂದ ತುಂಬಿದ ಪ್ನೋಮೋಣಿಯಲ್ಲಿ ಇಡಬೇಕು.

ಕಾಜಿನ ಹೂಜಿಯಲ್ಲಿ ಅರಿಶಿನ ಬಣ್ಣದ ದ್ರವವು ಒಟ್ಟು ಗೂಡುವದು ಅದೇ ನೈತ್ರಿಕ ಆಸಿಡ್‌ವು. ಇದು ಬಹಳ ಹುಳಿಯಾದದ್ದೂ ಸೇಂದ್ರಿಯ ಪದಾರ್ಥಗಳನ್ನು ಸುಡುವಂಥಾದ್ದೂ ಇರುತ್ತದೆ. ಇದು ತೀಕ್ಷ್ಣವಾಗಿದ್ದಾಗ ನಮ್ಮ ಮೈಗೆ ಹತ್ತಿದರೆ ಮೈದೊಗಲು ಹಳದಿಯಾಗುವದು, ಮತ್ತು ಸುಡುವದು. ಈ ಆಸಿಡದಲ್ಲಿ ನೀಲಿಯ ಮಸಿಯನ್ನು ಅಥವಾ ಲಿಟಮಸ್ ಎಂಬ ದ್ರವವನ್ನು ಹಾಕಿದರೆ ಕೆಂಪಾಗುವದು ಮತ್ತು ಪೊಟಾಶ್ ಮುಂತಾದ ಕ್ಷಾರಗಳನ್ನು ಹಾಕಿದರೆ ಈ ಆಮ್ಲದ ಮೊದಲಿನ ಗುಣವೆಲ್ಲ ಲಯ ಹೊಂದಿ ಬಿಂದು ನಿಸ್ಸತ್ವ ನಿರ್ಗುಣವಾದ ದ್ರವವಾಗುವದು. ಬಳಿಕ ಈ ಆಮ್ಲದೊಳಗಿನ ನೀರನ್ನು ಶಕೆಯಿಂದ ಉಗಿ ಮಾಡಿ ಇಲ್ಲದಂತೆ ಮಾಡಿದರೆ ತಳದಲ್ಲಿ ಸೋರುಕ್ಸಿಂಬ ಶುಭ್ರವಾದ ಕ್ಷಾರ ಉಳಿಯುವದು. ಈ ಕ್ಷಾರದಲ್ಲಿ ನೈತ್ರಿಕ ಆಸಿಡ್‌ವೂ, ಪೊಟಾಶವೂ ಇರುತ್ತವೆ. ಈ ಕ್ಷಾರದ ನೀರಲ್ಲಿ ಕೆಂಪು ಲಿಟಮಸ್ ಎಂಬ ದ್ರವವು ನೀಲವರ್ಣವಾಗುವದಿಲ್ಲ. ಮತ್ತು ನೀಲಿಯ ದ್ರವವನ್ನು ಕೆಂಪಾಗುವದಿಲ್ಲ. ಇದರಿಂದ ಈ ಕ್ಷಾರವು ನಿರ್ಗುಣ ಪದಾರ್ಥವೆಂದು ಸ್ಪಷ್ಟವಾಗುತ್ತದೆ.

ಆಸಿಡ್ (ಆಮ್ಲಪದಾರ್ಥ) ಅಲ್ಕಲಿ (ತೀಕ್ಷ್ಣಕ್ಷಾರಗಳು)
ಲವಣ (ಕ್ಷಾರ)

ಮೇಲಿನ ಪ್ರಯೋಗದಿಂದ ಗೊತ್ತಾದ ಸಂಗತಿಗಳು.

೧. ಸ್ವತಃ ಹುಳಿಯುಳ್ಳಂಥ ಹೊಸ ಪದಾರ್ಥಗಳನ್ನೆಂಟು ಮಾಡುವಂಥ ತನ್ನ ದ್ರವದಿಂದ ನೀಲವರ್ಣದ ಲಿಟ್‌ಮುಸವನ್ನು ಕೆಂಪು ಮಾಡುವಂಥ ಪದಾರ್ಥಕ್ಕೆ ಆಮ್ಲವೆನ್ನುತ್ತಾರೆ.

೨. ಯಾವ ಪದಾರ್ಥದ ದ್ರವದಲ್ಲಿ ಕೆಂಪು ಲಿಟಮಸ್ ಎಂಬ ಪದಾರ್ಥವು ನೀಲವರ್ಣವಾಗುವದೋ ಯಾವ ಪದಾರ್ಥವನ್ನು ಆಮ್ಲದಲ್ಲಿ ಕೂಡಿಸಿದರೆ ನಿರ್ಗುಣ ಪದಾರ್ಥ ಉತ್ಪನ್ನವಾಗುವದೋ ಆ ಪದಾರ್ಥಕ್ಕೆ ತೀಕ್ಷ್ಣಕ್ಷಾರ ಅಥವಾ ಸಬಲಕ್ಷಾರವೆಂಬ ಹೆಸರು.

೩. ಆಮ್ಲ ತೀಕ್ಷ್ಣಕ್ಷಾರಗಳು ಸಂಯೋಗವಾಗಿ ಉತ್ಪನ್ನವಾಗುವ ನಿರ್ಗುಣ ಪದಾರ್ಥಕ್ಕೆ ಲವಣವೆಂಬ ಹೆಸರು. ಈ

ಮೂರು ಸಂಗತಿಗಳಲ್ಲದೆ ಇನ್ನೊಂದು ಗೌರವದ ಸಂಗತಿ ಯು ಪ್ರಕಟವಾಗುವದ್ಯಾವದೆಂದರೆ-ತೀರ ಭಿನ್ನ ಭಿನ್ನ ಧರ್ಮ ಗಳುಳ್ಳ ಪದಾರ್ಥಗಳು ಸಹ ರಸಾಯನ ಸಂಯೋಗದಿಂದ ಬಂದಾಗಿ ಹೊಸ ಪದಾರ್ಥವನ್ನುಂಟು ಮಾಡುತ್ತವೆ. ನೈತ್ರಿ ಕ್ ಆಸಿಡ್‌ವೂ ಫೋಟಾಶವೂ ಬೇರೆ ಬೇರೆ ಧರ್ಮದವಿ ದ್ದರೂ ರಸಾಯನ ಸಂಯೋಗದಿಂದ ಬಂದಾಗಿ ಸೋರುಪ್ಪಿಂ ಬ ಬೇರೆ ಧರ್ಮದ ಸಂಯುಕ್ತ ಪದಾರ್ಥವನ್ನುಂಟು ಮಾಡಿ ರುತ್ತವೆ.

(ಸಶೇಷ)

S. D. Edl CONFERNCE 1900.

ವಿದ್ಯಾಭಿವೃದ್ಧಿಗಳ ಪರಿಷತ್ತು ರ ಫಾ. ೧೯೦೦.

(೨೫೬ನೇ ಪುಟದಿಂದ ಮುಂದೆ ಸಾಗಿದ್ದು.)

ಮರಳಿ ಸಭೆಯು ನಾಲ್ಕಕ್ಕೆ ನೆರೆದು ಮಿ. ರಾ ಜಗನ್ನಾ ಥರೀ ನಾರಾಯಣರಾಯರ ಸಂಬಂಧವು ಮಿ. ನವರತ್ನ ಇವರಿಂ ದ ಬಿದಲ್ಪಟ್ಟಿತು ಮುಖ್ಯವಾಗಿ ಇವರು ಪ್ರಾಥಮಿಕ ಶಾಲೆ ಯಲ್ಲಿ ಬಾಲಬೋಧ ಲಿಪಿಯೂ ಮಹಾರಾಷ್ಟ್ರ ಭಾಷೆಯೂ ಕಲಿಸಿಕೊಳ್ಳುವದು ಬಹಳ ಕಡಕೆಂದು ಬರೆದಿದ್ದರು. ಅನಂ ತರ ರಾ. ಸಾ. ಚಟ್ಟಿ ವೆಂಕಟರಾಯರು ತಮ್ಮ ನಿಬಂಧವ ನ್ನೋದಿದರು. ಇವರು ಮರಾಠಿಯನ್ನು ಕಲಿಪೊಂದು ಮೆಟ್ಟಿ ನವರೆಗೆ ಪ್ರಾಥಮಿಕ ಶಾಲೆಗಳಲ್ಲಿ ಸೇರಿಸುವದು ಬಹಳ ಉಂತವೆಂದು ಪ್ರತಿಪಾದಿಸಿದರು ಮೊದಲಿನವರು ಕರ್ನಾಟ ಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳು. ಎರಡನೆ ಯವರು ಅದೇ ಸಂಘದ ಉಪಾಧ್ಯಕ್ಷರು ಇವರಿಬ್ಬರೂ ಕೈಕೊಂಡ ಕಾರ್ಯ ದಿಂದೇ ಇದ್ದರೂ ಈ ವಿಷಯದಲ್ಲಿ ಕೇಗೆ ಭಿನ್ನ ಮತವಾಯಿತೆಂಬದನ್ನು ತರ್ಕಿಸಲಿಕ್ಕೆ ಅಸಾಧ್ಯ ವು. ಅಮೇಲೆ ರಾ. ಬ. ಜಯಸತ್ಯ ಶೋಧರಾಯರು ಮರಾಠಿಯು ಅವಶ್ಯವಾಗಿ ಬೇಕೆಂತಲೂ, ಮಿ. ಘಾಟಕ ಗುರುನಾಥರಾಯರು ಅದನ್ನು ಪ್ರಾಥಮಿಕ ಶಾಲೆಗಳಲ್ಲಿ ಸೇ

ರಿಸುವದು ತೀರ ನಿರುಪಯುಕ್ತವಾದದ್ದೂ, ಹಾನಿಕರವಾದ ದ್ದೂ, ಇರುತ್ತದೆಂತಲೂ ಆಗ್ರಹಪೂರ್ವಕವಾಗಿ ಹೇಳಿದರು ಈ ವಿಷಯವು ಸಭೆಯೊಳಗಿರುವ ಎಲ್ಲ ಗೃಹಸ್ಥರ ಬಾಯಿ ಯಲ್ಲಿ ಶಿಕ್ಕು ಅರಿಯಲ್ಲಟ್ಟು ಗಿಜಿಗಿಟ್ಟಿಯಾಯಿತು. ಈ ಮೇರೆಗೆ ಇದು ಖಿದ್ನಾಪುತ್ತಿರುವದನ್ನೂ ಪಲಕೆಲವರು ಸರ್ಯಾದುದಿಂದ ಅಧ್ಯಕ್ಷಕಾರ್ಯವರ್ತಿಗಳ ಆಗ್ರಹವ ನ್ನು ಪ್ರತಿಪಾದಿಸುವದನ್ನೂ ಕಂಡು ಅಧ್ಯಕ್ಷರು ಸರಿಯಾದ ಉತ್ತರದಿಂದ ಸರ್ವರನ್ನು ಸಮಾಧಾನಗೊಳಿಸಿದರು. ಕಡೆ ಯು ದಿವಸವಂತೂ ಅವರು ಈ ವಿಷಯವಾಗಿ ತಮ್ಮ ಆಗ್ರ ಹವು ರವಷ್ಟಾದರೂ ಇಲ್ಲೆಂದು ದೇವರನ್ನು ಸ್ಮರಿಸಿ ಹೇಳಿ ದರು. ಇಂಥ ನಿಃಪಕ್ಷಪಾತಿಗಳಾದ ಸಾಧು ವಿದ್ವಾಂಸರನ್ನು ಈ ಮೇರೆಗೆ ಬಡನುಡಿಯಲಿಕ್ಕೆ ಹಚ್ಚಿದ ಮಹಾತ್ಮರಿಗೆ ಏನೆನ್ನಬೇಕು? ಒಳ್ಳೀದು ಈ ದಿವಸದ ಕಡೆಯ ಭಾಗದ ಲ್ಲಿ ಹೈಸ್ಕೂಲ ಹೆಡ್‌ಮಾಸ್ತರರಾದ ರಾ. ಸಾ. ಕರಂದೀಕರ ರು ಭಾಷಣ ಮಾಡಿದರು ಮುಖ್ಯವಾಗಿ ಅವರು ತಮ್ಮ ಭಾಷಣದಲ್ಲಿ ಈಗ ಸೂಚಿಸಿದ ಇಯತ್ತ್ರಿಗಳಲ್ಲಿ ಸೇರಿಸಿದ ವಿಷಯಗಳನ್ನು ಸರಿಯಾಗಿ ಕಲಿಸುವ ಕ್ರಮವನ್ನು, ಅವರಿಂ ದುಟಾಗುವ ಪರಿಣಾಮವನ್ನು ಜರ್ಮನಿ ಮುಂತಾದ ಸುಧಾ ರಣೆಯು ಕಳನಕ್ಕೇರಿದ ರಾಷ್ಟ್ರಗಳ ಉದಾಹರಣೆಯಿಂದ ಬಹು ಸರಸವಾಗಿ ವರ್ಣಿಸಿದರು. ಕಡೆಯಲ್ಲಿ ೫-೬ ವರ್ಗ ಗಳನ್ನು ಇಬ್ಬರು ಶಿಕ್ಷಕರಿಂದ ಕಲಿಸುವಂಥ ಮಾಸ್ತ ರನು ಮಾತ್ರ ಶಾಸ್ತ್ರೀಯ ಪದ್ಧತಿಯ ಇಯತ್ತ್ರಿಗಳ ಅಭ್ಯಾ ಸಕ್ರಮವನ್ನು ಸಾಗಿಸುವದು ದುಸ್ತರವೆಂದು ಹೇಳಿದರು

೨ ನೇ ದಿವಸ.

ಮಿ. ಕುಲಕರ್ಣಿ (ಬಂಕಾಪುರ ಸಾಲಿಯ ಮಾಸ್ತರರು) ಇವರು ತಮ್ಮ ನಿಬಂಧವನ್ನೋದಿದರು. ಅದರಲ್ಲಿ ಅವರು ಘನಾಚೃತಿಗಳ ಸಂಬಂಧದ ಪಾಠಗಳನ್ನು ೬ನೇ ಇಯತ್ತ್ರಿ ಯಲ್ಲಿ ಕಲಿಸಬೇಕೆಂತಲೂ, ನುಡಿಗಟ್ಟನ್ನು ೫-೬-೭ ರಲ್ಲಿ ಸಿಧಾಗಿಸಬೇಕೆಂತಲೂ, ಶಬ್ದಾತ್ಪತ್ತಿಯೊಳಗಿನ ಕಡಿಮೆ

ಮೂರು ಸಂಗತಿಗಳಲ್ಲದೆ ಇನ್ನೊಂದು ಗೌರವದ ಸಂಗತಿಯು ಪ್ರಕಟವಾಗುವದ್ಯಾವದೆಂದರೆ-ತೀರ ಭಿನ್ನ ಭಿನ್ನ ಧರ್ಮಗಳುಳ್ಳ ಪದಾರ್ಥಗಳು ಸಹ ರಸಾಯನ ಸಂಯೋಗದಿಂದ ಒಂದಾಗಿ ಹೊಸ ಪದಾರ್ಥವನ್ನುಂಟು ಮಾಡುತ್ತವೆ. ನೈತ್ರಿಕ್ ಆಸಿಡ್‌ವೂ ಪೋಟಾಸವೂ ಬೇರೆ ಬೇರೆ ಧರ್ಮದವಿ ವ್ವರೂ ರಸಾಯನ ಸಂಯೋಗದಿಂದ ಒಂದಾಗಿ ಸೋರುಪ್ಪಿಂ ನ ಬೇರೆ ಧರ್ಮದ ಸಂಯುಕ್ತ ಪದಾರ್ಥವನ್ನುಂಟು ಮಾಡಿ ಸುತ್ತವೆ.

(ಸಶೇಷ)

S. D. Edl CONFERNCE 1900.

ವಿದ್ಯಾಭಿವೃದ್ಧಿಸಂಘಗಳ ಪರಿಷತ್ತು ಇ ಸಾ. ೧೯೦೦.

(೨೫೬ನೇ ಪುಟದಿಂದ ಮುಂದೆ ಸಾಗಿದ್ದು.)

ಮರಳಿ ಸಭೆಯು ನಾಲ್ಕಕ್ಕೆ ನೆರೆದು ಮಿ. ರಾ ಕಲಗುಜ ರೀ ನಾರಾಯಣರಾಯರ ನಿಬಂಧವು ಮಿ. ನವರತ್ನ ಇವರಿಂ ದ ಓದಲ್ಪಟ್ಟಿತು ಮುಖ್ಯವಾಗಿ ಇವರು ಪ್ರಾಥಮಿಕ ಶಾಲೆ ಯಲ್ಲಿ ಬಾಲಬೋಧ ಲಿಪಿಯೂ ಮಹಾರಾಷ್ಟ್ರ ಭಾಷೆಯೂ ಶೇರಿಕೊಳ್ಳುವದು ಬಹಳ ಕೆಡಕೆಂದು ಬರೆದಿದ್ದರು. ಆನಂ ತರ ರಾ. ಸಾ. ಕಟ್ಟಿ ವೆಂಕಟರಾಯರು ತಮ್ಮ ನಿಬಂಧವ ನ್ನೋದಿದರು. ಇವರು ಮರಾಠಿಯನ್ನು ಕೆಲವೊಂದು ಪಟ್ಟಿ ನವರೆಗೆ ಪ್ರಾಥಮಿಕ ಶಾಲೆಗಳಲ್ಲಿ ಸೇರಿಸುವದು ಬಹಳ ಹಿತವೆಂದು ಪ್ರತಿಪಾದಿಸಿದರು ಮೊದಲಿನವರು ಕರ್ನಾಟಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳು. ಎರಡನೆ ಯವರು ಅದೇ ಸಂಘದ ಉಪಾಧ್ಯಕ್ಷರು ಇವರೀರ್ವರೂ ಕೈಕೊಂಡ ಕಾರ್ಯ ಒಂದೇ ಇದ್ದರೂ ಈ ವಿಷಯದಲ್ಲಿ ಬೇಗೆ ಭಿನ್ನ ಮತವಾಯಿತೆಂಬದನ್ನು ತರ್ಕಿಸಲಿಕ್ಕೆ ಅಸಾಧ್ಯ ವು. ಆಮೇಲೆ ರಾ. ಬ. ಜಯಸತ್ಯ ಬೋಧರಾಯರು ಮರಾಠಿಯು ಅವಶ್ಯವಾಗಿ ಬೇಕೆಂತಲೂ, ಮಿ. ಫಾಟಕ ಗುರುನಾಥರಾಯರು ಅದನ್ನು ಪ್ರಾಥಮಿಕ ಶಾಲೆಗಳಲ್ಲಿ ಸೇ

ರಿಸುವದು ತೀರ ನಿರುಪಯುಕ್ತವಾದದ್ದೂ, ಹಾನಿಕರವಾದ ದ್ದೂ, ಇರುತ್ತದೆಂತಲೂ ಆಗ್ರಹಪೂರ್ವಕವಾಗಿ ಹೇಳಿದರು ಈ ವಿಷಯವು ಸಭೆಯೊಳಗಿರುವ ಎಲ್ಲ ಗೃಹಸ್ಥರ ಬಾಯಿ ಬಿಟ್ಟಲ್ಲಿ ಶಿಕ್ಕು ಅರಿಯಲ್ಪಟ್ಟು ಗಿಜಿಗಿಟ್ಟಿಯಾಯಿತು. ಈ ಮೀರೆಗೆ ಇದು ಖಿದ್ದಾಡುತ್ತಿರುವದನ್ನೂ ಪಲಕೆಲವರು ಪಿಯರ್ಕಾಯದಿಂದ ಅಧ್ಯಕ್ಷಕಾರ್ಯದರ್ಶಿಗಳ ಆಗ್ರಹವ ನ್ನು ಪ್ರತಿಪಾದಿಸುವದನ್ನೂ ಕಂಡು ಅಧ್ಯಕ್ಷರು ಸರಿಯಾದ ಉತ್ತರದಿಂದ ಸರ್ವರನ್ನು ಸಮಾಧಾನಗೊಳಿಸಿದರು. ಕಡೆ ಯ ದಿವಸವಂತೂ ಅವರು ಈ ವಿಷಯವಾಗಿ ತಮ್ಮ ಆಗ್ರ ಹವು ರವಷ್ಟಾದರೂ ಇಲ್ಲೆಂದು ದೇವರನ್ನು ಸ್ಮರಿಸಿ ಹೇಳಿ ದರು. ಇಂಥ ನಿಃಪಕ್ಷಪಾತಿಗಳಾದ ಸಾಧು ವಿದ್ವಾಂಸರನ್ನು ಈ ಮೀರೆಗೆ ಬಿಡನುಡಿಯಲಿಕ್ಕೆ ಹಚ್ಚಿದ ಮಹಾತ್ಮರಿಗೆ ಏನೆನ್ನಬೇಕು? ಬಳ್ಳೇದು ಈ ದಿವಸದ ಕಡೆಯ ಭಾಗದ ಲ್ಲಿ ಹೈಸ್ಕೂಲ ಹೆಡ್‌ಮಾಸ್ತರರಾದ ರಾ. ಸಾ. ಕರಂದೀಕರ ರು ಭಾಷಣ ಮಾಡಿದರು ಮುಖ್ಯವಾಗಿ ಅವರು ತಮ್ಮ ಭಾಷಣದಲ್ಲಿ ಈಗ ಸೂಚಿಸಿದ ಇಯತ್ತೆಗಳಲ್ಲಿ ಸೇರಿಸಿದ ವಿಷಯಗಳನ್ನು ಸರಿಯಾಗಿ ಕಲಿಸುವ ಕ್ರಮವನ್ನು, ಅದರಿಂ ದಾಗುವ ಪರಿಣಾಮವನ್ನು ಜರ್ಮನಿ ಮುಂತಾದ ಸುಧಾ ರಣೆಯು ಕಳಸಕ್ಕೇರಿದ ರಾಷ್ಟ್ರಗಳ ಉದಾಹರಣೆಯಿಂದ ಬಹು ಸರಸವಾಗಿ ವರ್ಣಿಸಿದರು. ಕಡೆಯಲ್ಲಿ ೫-೬ ವರ್ಗ ಗಳನ್ನು ಇಬ್ಬರು ಶಿಕ್ಷಕರೊಡಗೂಡಿ ಕಲಿಸುವಂಥ ಮಾಸ್ತ ರನು ಮಾತ್ರ ಖಾಸ್ತೀಯ ಪದ್ಧತಿಯ ಇಯತ್ತೆಗಳ ಅಭ್ಯಾ ಸಕ್ರಮವನ್ನು ಸಾಗಿಸುವದು ದುಸ್ತರವೆಂದು ಹೇಳಿದರು

೨ ನೇ ದಿವಸ.

ಮಿ. ಕುಲಕರ್ಣಿ (ಬಂಕಾಪುರ ಸಾಲಿಯ ಮಾಸ್ತರರು) ಇವರು ತಮ್ಮ ನಿಬಂಧವನ್ನೋದಿದರು. ಅದರಲ್ಲಿ ಅವರು ಪ್ರಾಣಾಪ್ಯತಿಗಳ ಸಂಬಂಧದ ಪಾಠಗಳನ್ನು ೬ ನೇ ಇಯತ್ತೆ ಯಲ್ಲಿ ಕಲಿಸಬೇಕೆಂತಲೂ, ನುಡಿಗಟ್ಟನ್ನು ೫-೬-೭ ರಲ್ಲಿ ವಿಚಾರಿಸಬೇಕೆಂತಲೂ, ಶಬ್ದವ್ಯುತ್ಪತ್ತಿಯೊಳಗಿನ ಕಡೆಯ

ಧಾತುಗಳನ್ನೆಷ್ಟೇ ಕಲಿಸಬೇಕೆಂತಲೂ, ಪಾಸಾದ ಪುಸ್ತಕಗಳಲ್ಲಿ ಬೇಕಾದ್ದನ್ನಾರಿಸಿಕೊಂಡು ಉಪಯೋಗಿಸುವ ಅಧಿಕಾರವು ಮಾಸ್ತರರಿಗಿರಬೇಕೆಂತಲೂ, ಬಡಿಗತನದ ವಿದ್ಯೆಯನ್ನು ಎಲ್ಲ ಶಾಲೆಗಳಲ್ಲಿ ಕಲಿಸತಕ್ಕದ್ದೆಂತಲೂ ಬರೆದಿದ್ದರು. ನಂತರ ರೋಣ ಮಾಸ್ತರರ ನಿಬಂಧವನ್ನು ನರೇಗಲ್ಲ ಮಾಸ್ತರರು ಓದಿದರು. ಅದರಲ್ಲಿ ೫ ನೇ ಇಯತ್ತೆಯಲ್ಲಿ ರೇಖಾಪೂರ್ಣಾಂಕವನ್ನೂ ೬ ರಲ್ಲಿ ನಕಾಶ ತೆಗೆಯುವದನ್ನೂ ಕಲಿಸಬೇಕು. ಮತ್ತು ಮರಾಠಿಯು ಆವಶ್ಯಕ ನಿಷಯವಾಗಿ ಸೇರಿಸಬೇಕು ವೈದ್ಯಕ ಮತ್ತು ಕೃಷಿಶಾಸ್ತ್ರದ ಪಲಪು ಪಾಠಗಳನ್ನು ೫ - ೬ ನೇ ಪುಸ್ತಕಗಳಲ್ಲಿ ಸಮಾವೇಶ ಮಾಡಬೇಕು ಎಂದು ಬರೆದಿದ್ದರು. ಆಮೇಲೆ ಮಿ. ರೀವ ಸಾಹೇಬರು ತಮ್ಮ ನಿಬಂಧವನ್ನೋದಿದರು ಅದರಲ್ಲಿ ಅವರು ಮುಖ್ಯವಾಗಿ ಬಿನ್ ಇಯತ್ತೆಯವರಿಗೆ ೬ ತಾಸು ಕಲಿಸುವದು ಬಹು ಅಪಾಯಕರವೆಂತಲೂ ಅದನ್ನು ಕಡಿಮೆಮಾಡಿ ಕ್ರಮೇಣ ಕಾಲವನ್ನು ಬೆಳಿಸಬೇಕೆಂತಲೂ ಬರೆದಿದ್ದರು. ಪ್ರಮಿಕ ಪುಸ್ತಕಗಳಲ್ಲಿ ದೇವರ ದಯ ಸಾಮರ್ಥ್ಯಗಳನ್ನು ನಿವರಿಸುವ ಪಾಠಗಳೂ ನೈತಿಕ ಪಾಠಗಳೂ ಇಲ್ಲೆಂತಲೂ ಕಡಿಮೆಯೆಂತ ಈ ದೇಶದ ವಿದ್ಯಾರ್ಥಿಗಳು ನಿಬಂಧರಚನೆಯಲ್ಲಿ ತೀರ ದುರ್ಬಲರಿರುತ್ತಾರೆಂತಲೂ, ಜರ್ಮನಿಮುಂತಾದ ದೇಶಗಳಲ್ಲಿ ೬ ಕ್ಕೆಂತ ಕಡಿಮೆ ವಯಸ್ಸಿನ ಹುಡುಗರನ್ನು ಶಾಲೆಯಲ್ಲಿ ತಕ್ಕೊಳ್ಳುವದಿಲ್ಲೆಂತಲೂ, ಅದರಂತೆ ಇಲ್ಲಿದ್ದಾಗಲೂ ವ್ಯವಸ್ಥೆಯಾದರೆ ಹುಡುಗರು ಸಶಕ್ತರೂ ದೀರ್ಘಾಯುಷಿಗಳೂ, ಆಗುವರೆಂತಲೂ, ಆದಾ ಉದ್ಯೋಗಸ್ಥರಿಗೆ ಆಸಾಗಬೇಕೆಂದು ಇಡೀ ಹೊತ್ತು ನಡೆಯುವ ಶಾಲೆಗಳನ್ನು ಅರ್ಧ ಹೊತ್ತು ನಡೆಯುವ ಶಾಲೆಗಳನ್ನು ನೆಲೆಗೊಳಿಸಬೇಕೆಂತಲೂ ವಿವರಿಸಿದ್ದರು. ತದುವಾಯ ಕಾಲೇಜಿನ ಗಣಿತಶಿಕ್ಷಕರಾದ ವಿ ಹುಲಕರ್ಣಿಯವರು ಪಸ್ತುಪಾಠಗಳ ಸಂಬಂಧದಿಂದ ಒಂದು ನಿಬಂಧವನ್ನೋದಿದರು. ಅದರಲ್ಲಿ ಅವರು ಪಸ್ತುಪಾಠವೆಂದರೇನು? ಅದರ ಉದ್ದೇಶವೇನು? ಕಲಿಸುವ ಪದ್ಧತಿ ಯಾವದು? ಎಂಬದನ್ನು ಸವಿಸ್ತಾರವಾಗಿ ವಿವರಿಸಿ

ಈ ಪಾಠಗಳಿಂದ ಶಾಸ್ತ್ರೀಯ ಸಂಗತಿಗಳನ್ನು ಅರಿತುಕೊಳ್ಳಲಿಕ್ಕೆ ಅನುವಾಗುತ್ತದೆಂದು ಬರೆದಿದ್ದರು. ಬಳಿಕ ಮಿ. ಹನ್ನೆರಡುಮಠ ಇವರು ಒಡವೇ ಪಾಠಗಳನ್ನು ಕಲಿಸಲಿಕ್ಕೆ ಟ್ರೇಂಡ ಮಾಸ್ತರರ ಆವಶ್ಯಕತೆಯುಂಟು. ಅದಕಾರಣ ಈಗಿರುವ ಅಂಟ್ರೇಂಡ ಶಿಕ್ಷಕರನ್ನು ಕಾಲೇಜದಲ್ಲಿ ೬ ತಿಂಗಳು ಇಟ್ಟುಕೊಂಡು ಕೆಲವು ನಿಯಮಿತ ವಿಷಯಗಳನ್ನು ಕಲಿಸಿ ೯ ರೂ. ಸರಟೀಫಿಕೇಟುಗಳನ್ನು ಕೊಡಬೇಕೆಂದು ಹೇಳಿದರು. ಆನಂತರ ಬಂಕಾಪ್ರರದ ಮಾಸ್ತರರೂ ೩೫ ರೂ ಖಾವೇ ತಯಾರ ಮಾಡಿದ ಹಲವು ಯಂತ್ರಗಳನ್ನು ಸಭೆಯ ಮುಂದಿಟ್ಟು ಅವುಗಳ ಉಪಯೋಗವನ್ನು ಮಾಡಿತೋರಿಸಿದರು ಇದರಿಂದ ಕೈಗಾರಿಕೆಯಲ್ಲಿ ಕುಶಲನಾದಂಥ, ಕೆಲಸದಲ್ಲಿ ದಕ್ಷನಾದಂಥ ಅಧ್ಯಾಪಕನು ೫ - ೬ನೇ ಪುಸ್ತಕಗಳಲ್ಲಿ ಬರೆದಿರುವ ಯಾವತ್ತು ಶಾಸ್ತ್ರೀಯ ಪಾಠಗಳಿಗೆ ಬೇಕಾಗುವ ಯಂತ್ರಸಾಹಿತ್ಯಗಳನ್ನು ಮಾಡಿಕೊಳ್ಳಬಹುದೆಂಬ ಸಂಗತಿಯು ವ್ಯಕ್ತವಾಯಿತು. ಬಳಿಕ ಮೆ. ರಿವ್ಹಿಂಗಟನ್ ಸಾಹೇಬರು ಸಾಲೆಯೊಳಗೆ ತಕ್ಕೊಳ್ಳುವದಕ್ಕಾಗಿ ಗೊತ್ತಾದ ಸಮಯಸ್ಸಿನೊಳಗೆ ಪಿಕ್ಚರ ಪಡಿಸು ಮಾಡುವ ಕಾರಣವಿಲ್ಲ. ನೈತಿಕ ಶಿಕ್ಷಣವೂ, ಧರ್ಮಶಿಕ್ಷಣವೂ ಸರಕಾರೀ ಶಾಲೆಗಳಲ್ಲಿ ಸಾರ್ವತ್ರಿಕವಾಗಿ ಸಾಗಿಸುವದು ಅಸಾಧ್ಯವು. ಉತ್ಕಂಠೆಯುಳ್ಳ ಮಾಸ್ತರರು ವಸ್ತುಪಾಠಗಳನ್ನು ಕಲಿಸಬಹುದು ಇದು ಹಿತಕರವು ಎಂದು ಜೋಷಿಸರು. ಬಳಿಕ ಉಪಾಹಾರದನಂತರ ಮಿ. ಬಾವಡೇಕರ, ರಾ. ಸಾ. ಸವಣೂರ ಮಿ. ಹನ್ನೆರಡುಮಠ ಮುಂತಾದವರು ಗ್ರಾಮ್ಯಶಾಲೆಗಳ ಅಭ್ಯಾಸಕ್ರಮವನ್ನು ಕುರಿತು ನಿಬಂಧ ಓದಿದರು. ಇವರೆಲ್ಲರು ಈಗ ಸೂಚಿಸಿದ ಇಯತ್ತೆಗಳು ತಕ್ಕವುಗಳೆಂದು ಹೇಳಿದರು. ಆಮೇಲೆ ಧಾರವಾಡ ಹೆಣ್ಣುಮಕ್ಕಳ ಶಾಲೆಯ ಉಪಶಿಕ್ಷಕಿಯಾದ ಸೌ. ಗಂಗವ್ವನೂ ಹುಬ್ಬಳ್ಳಿ ಹೆಣ್ಣುಮಕ್ಕಳ ಶಾಲೆಯ ಮುಖ್ಯ ಶಿಕ್ಷಕಿಯಾದ ಸೌ. ಲಿಂಗವ್ವನೂ, ಹೆಣ್ಣುಮಕ್ಕಳ ಶಾಲೆಯ ಇಯತ್ತೆಗಳ ಬಗ್ಗೆ ಬಿಂದೊಂದು ನಿಬಂಧವನ್ನು ಓದಿದರು. ಇವರೀರ್ವರ ನಿಬಂಧ

ಗಳಲ್ಲಿ ಬಿನ್ನಇಯತ್ತೈಯಲ್ಲಿ ಅಂಕಲಿಪಿಯ ೩೧ ಪಾಠಗಳ
ಬರಬೇಕೆಂತಲೂ, ಸಾಭಿನಯ ಗೀತವು ಬೇಡೆಂತಲೂ, ಕ್ರ
ಮಿಕ ಪುಸ್ತಕಗಳಲ್ಲಿಯ ಸಂಭಾಷಣೆಯ ಪಾಠಗಳಲ್ಲಿಯು ಪು
ಲ್ಲಿಂಗದ ಹೆಸರಿಗೆ ಬದಲಾಗಿ ಸ್ತ್ರೀಲಿಂಗದ ನಾಮಗಳಿರಬೇಕೆಂ
ತಲೂ. ಸ್ತ್ರೀಧರ್ಮನೀತಿಯ ಪುಸ್ತಕದಂಥ ಬಂಧು ಪುಸ್ತಕವ
ನ್ನು ೪-೫-೬ ಇಯತ್ತೆಗಳಲ್ಲಿ ಓದಿಸಬೇಕೆಂತಲೂ, ಪದಾರ್ಥ
ಗಳನ್ನು ಸಾಲಿಗೆ ಪೂರೈಸಿಕೊಡಬೇಕೆಂತಲೂ, ವರ್ಗಕ್ಕೊಬ್ಬ
ಶಿಕ್ಷಕಿಯು ಅವಶ್ಯವೆಂತಲೂ, ಶಿಕ್ಷಕಿಯರಿಗೆ ಇದಕ್ಕು ಹೆಚ್ಚಿ
ಗೆ ಶಿಕ್ಷಣ ದೊರೆಯಬೇಕೆಂತಲೂ ೨೦ನೇ ಇಯತ್ತೆಗೆ ಭೂ
ಗೋಲ ಬೇಡೆಂತಲೂ ಬರೆದಿದ್ದರು, ತರುವಾಯ ವಕೀಲ
ಗೋವಿಂದರಾಯರು ಅಭ್ಯಾಸಕ್ರಮದಲ್ಲಿಯು ಶಬ್ದಗಳ ಸಂ
ಬಂಧವಾಗಿ ಕೆಲವು ಸೂಚನೆಗಳನ್ನು ಮಾಡಿ ಗ್ರಾಮ್ಯ ಕಾಲ
ಯಲ್ಲಿ ೫ನೇ ಇಯತ್ತೆಯನ್ನು ಮುಗಿಸಿದವನನ್ನು ಇಂಗ್ಲಿಷ
ಶಾಲೆಯಲ್ಲಿ ಸೇರಿಸಿಕೊಳ್ಳಬೇಕೆಂದು ಹೇಳಿದರು. ಬಳಿಕ ಕೆಲ
ವು ಮಾಸ್ತರರ ಹಲಕೆಲವು ಸೂಚನೆಗಳು ಸಭೆಯಲ್ಲಿ ಬಂದ
ಬಳಿಕ ಸಭೆಯ ಕೆಲಸವು ಮುಗಿಯಿತು.

(ಸಶೇಷ)

CONVERSATION.

ಸಂಭಾಷಣೆಯು.

(೨೦ನೇ ಪುಟದಿಂದ ಮುಂದೆ ಸಾಗಿದ್ದು.)

ನಿಮ್ಮ ಭಾಷಣವು ಕೇಳುವವರಿಗೆ ಅನುಗುಣವಾಗಿ ಇರ
ತಕ್ಕದ್ದು. ಅಂದರೆ, ನೀವು ಒಕ್ಕಲಿಗರ ಕೂಡ ಮಾತಾಡುವಾ
ಗ್ಗೆ ಹೊಲ ಮನೆಯ ಬಗ್ಗೆಯೂ, ವ್ಯಾಪಾರಸ್ಥರ ಕೂಡ ವ್ಯಾ
ಪಾರವಾಗ್ಗೆ ವ್ಯಾಪಾರ ಉದ್ದೇಶದ ಬಗ್ಗೆಯೂ ಶಿಕ್ಷಕರ
ಕೂಡ ಶಿಕ್ಷಣದ ಬಗ್ಗೆಯೂ ಮಾತಾಡಬೇಕು. ಇದರಿಂ
ದ ಅವರಿಗೆ ಮಾತಾಡಲಿಕ್ಕೆ ಅನುಕೂಲವಾದಲ್ಲದೆ ಉಭಯತಾ
ಸ್ಥಾನಾಭಿವೃದ್ಧಿಗೆ ಸಹಾಯವಾಗಿ ಸರ್ವರಿಗೂ ಆನಂದವಾಗು
ವದು.

ದೇವರು ಮನುಷ್ಯನಿಗೆ ಒಂದು ಬಾಯನ್ನೂ ಎರಡು

ಕಿವಿಗಳನ್ನು ಕೊಟ್ಟಿರುವನು. ಇವರಿಂದ ಮನುಷ್ಯನು ಸ್ವಲ್ಪ ಮಾತಾಡಿ ಬಹಳ ಕೇಳಬೇಕೆಂಬುದು ಆತನ ಉದ್ದೇಶವಿದ್ದಂತೆ ತೋರುತ್ತದೆ. ಜಪ್ಪಿ ಭಾಷೆಯಲ್ಲಿ ಇದೇ ಅರ್ಥವು ಬರುವಂತೆ ಗಾದಿಯುಂಟು. ಅದೇನೆಂದರೆ :— "ಮಾತು ಬೆಳ್ಳಿಯು, ಮೌನವು ಚಿನ್ನವು."

ಈ ನೇಮಗಳನ್ನು ಲಕ್ಷ್ಯದಲ್ಲಿಟ್ಟು ನಡೆದವರು ಮಾತಾಡಿ ಬರೆ ಇಲ್ಲವೆ ಪರರು ಮಾತಾಡುವದನ್ನು ಕೇಳಿದರೆ ಅದರಿಂದ ತಪ್ಪದೇ ಹಿತವಾಗುವದು. ಅಹಿತವು ಎಂದಿಗೂ ಆಗದು. ಸಂಭಾಷಣೆಯು ಸತ್ಸಮಾಗಮದಿಂದ ಬಂದು ಪ್ರಕಾರ ಉಂಟು. ಅದನ್ನು ವಿಶೇಷ ಪ್ರಯತ್ನವಿಲ್ಲದೆ ಮನುಷ್ಯರು ಸಾಧಿಸಬಹುದು ಈಲೋ ಮನುಷ್ಯರು ಎಂದಿಗೂ ಅಭದ್ರ ಭಾಷಣ ಮಾಡುವದಿಲ್ಲ; ಯಾಕೆಂದರೆ ಕೆಟ್ಟ ವಿಚಾರಗಳು ಅವರ ಮನಸ್ಸಿನಲ್ಲಿ ಎಂದೂ ಬರುವದಿಲ್ಲ. ಬೀಜವೇ ಇಲ್ಲದ ಮೇಲೆ ಫಲ ಬರುವ ಬಗೆಯೀನು? ಅದ್ದರಿಂದ ಮನುಷ್ಯರು ತಮ್ಮ ಅಂತಃಕರಣವನ್ನು ಗಂಗಾಜಲದಂತೆ ನಿರ್ಮಲವಿಟ್ಟು, ಅದರಲ್ಲಿ ಎಳ್ಳಷ್ಟಾದರೂ ಹೊಲಸು ಕೂಡದಂತೆ ಪ್ರಯತ್ನ ಮಾಡಬೇಕು. ಅಂದರೆ ನಿಮ್ಮ ಭಾಷಣವು ಅಮೃತ ತುಲ್ಯವಾಗಿ ಎಲ್ಲರೂ ಆಪೇಕ್ಷಿಸುವಂಥಾದ್ದಾಗುವದು. ಜಗತ್ಕರ್ತನು ಇದಕ್ಕಾಗಿಯೇ ಜಿಹ್ವೆಯನ್ನು ಕೊಟ್ಟಿರುವನು. ಆವನ ಸಂಕೇತದಂತೆ ಅದನ್ನು ಉಪಯೋಗಿಸಿದರೆ .ಅದರಿಂದ ಮನುಷ್ಯರಿಗೆ ಸುಖವಾಗಿ ಅವನಿಗೆ ಸಂತೋಷವಾಗುವದು

ವೈದ್ಯನು ನಾಲಿಗೆಯನ್ನು ಪರೀಕ್ಷಿಸಿ ರೋಗಿಯು ಹೇಗೆ ವನ್ನು ಹೇಳುವಂತೆ ಇಲ್ಲವೆ ಮನುಷ್ಯನ ಮಾತಿನ ಧಾರಣೆಯಿಂದ ಅವನ ದೋಷವು ತಿಳಿಯುವಂತೆ, ಭಾಷಣದಿಂದ ಅವನ ನಿಜವಾದ ಯೋಗ್ಯತೆಯು ಪರೀಕ್ಷೆಯಾಗುವದು. ಈ ಬಗ್ಗೆ ಹಿಂದೀ ಭಾಷೆಯಲ್ಲಿ ಬಂದು ಪುರಾವನ ಮೋಹರಾ ಇರುವದು.

सज्जनकूं सज्जन मिले वडे ग्यानकी बात ।
दुर्जनकूं दुर्जन मिले दो मुक्की दो लात ॥

ಳಲ್ಲಿ ಬಿನ್‌ಇಯತ್ತೈಯಲ್ಲಿ ಅಂಕಲಿಪಿಯ ೭೧ ಪಾಠಗಳು
ಿರಬೇಕೆಂತಲೂ, ಸಾಭಿನಯ ಗೀತವು ಬೇಡೆಂತಲೂ, ಕ್ರ
ಎಕ ಪುಸ್ತಕಗಳಲ್ಲಿಯ ಸಂಭಾಷಣೆಯ ಪಾಠಗಳಲ್ಲಿಯ ಪು
ಂಗದ ಹೆಸರಿಗೆ ಬದಲಾಗಿ ಸ್ತ್ರೀಲಿಂಗದ ನಾಮಗಳಿರಬೇಕೆಂ
ಲೂ. ಸ್ತ್ರೀಧರ್ಮನೀತಿಯ ಪುಸ್ತಕದಂಥ ಒಂದು ಪುಸ್ತಕವ
ೃ ೪-೫-೬ ಇಯತ್ತೆಗಳಲ್ಲಿ ಓದಿಸಬೇಕೆಂತಲೂ, ಪದಾರ್ಥ
ಳನ್ನು ಸಾಲಿಗೆ ಪೂರೈಸಿಕೊಡಬೇಕೆಂತಲೂ, ವರ್ಗಕ್ಕೊಬ್ಬ
ಸ್ತ್ರೀಕಿಯು ಅವಶ್ಯವೆಂತಲೂ, ಶಿಕ್ಷಕಿಯರಿಗೆ ಇದಕ್ಕು ಹೆಚ್ಚಿ
ಶಿಕ್ಷಣ ದೊರೆಯಬೇಕೆಂತಲೂ ೭ನೇ ಇಯತ್ತೆಗೆ ಭೂ
ೋಲ ಬೇಡೆಂತಲೂ ಬರೆದಿದ್ದರು, ತರುವಾಯ ಮಕೀಲ
ೋವಿಂದರಾಯರು ಅಭ್ಯಾಸಕ್ರಮದಲ್ಲಿಯ ಶಬ್ದಗಳ ಸಂ
ಂಧವಾಗಿ ಕೆಲವು ಸೂಚನೆಗಳನ್ನು ಮಾಡಿ ಗ್ರಾಮ್ಯ ಕಾಲಿ
ನಲ್ಲಿ ೫ನೇ ಇಯತ್ತೆಯನ್ನು ಮುಗಿಸಿದವನನ್ನು ಇಂಗ್ಲಿಷ
ಶಾಲೆಯಲ್ಲಿ ಸೇರಿಸಿಕೊಳ್ಳಬೇಕೆಂದು ಹೇಳಿದರು. ಬಳಿಕ ಕೆಲ
ಾ ಮಾಸ್ತರರ ಹಲಕೆಲವು ಸೂಚನೆಗಳು ಸಭೆಯಲ್ಲಿ ಬಂದ
ಳಿಕ ಸಭೆಯ ಕೆಲಸವು ಮುಗಿಯಿತು.

(ಸಶೇಷ)

CONVERSATION.

ಸಂಭಾಷಣೆವು.

(೨೬೦ನೇ ಪುಟದಿಂದ ಮುಂದೆ ಸಾಗಿದ್ದು.)

ನಿಮ್ಮ ಭಾಷಣವು ಕೇಳುವವರಿಗೆ ಅನುಗುಣವಾಗಿ ಇರ
ತಕ್ಕದ್ದು. ಅಂದರೆ, ನೀವು ಒಕ್ಕಲಿಗರ ಕೂಡ ಮಾತಾಡುವಾ
ಗ್ಗೆ ಕೊಲ ಮನೆಯ ಬಗ್ಗೆಯೂ, ವ್ಯಾಪಾರಸ್ಥರ ಕೂಡ ಮಾ
ತಾಡುವಾಗ್ಗೆ ವ್ಯಾಪಾರ ಉದ್ದಿಮೆಯ ಬಗ್ಗೆಯೂ ಶಿಕ್ಷಕರ
ಕೂಡ ಶಿಕ್ಷಣದ ಬಗ್ಗೆಯೂ ಮಾತಾಡಬೇಕು. ಇದರಿಂ
ಅವರಿಗೆ ಮಾತಾಡಲಿಕ್ಕೆ ಅನುವಾಗುವದಲ್ಲದೆ ಉಭಯತರ
ಸ್ಥಾನಾಭಿವೃದ್ಧಿಗೆ ಸಹಾಯವಾಗಿ ಸರ್ವರಿಗೂ ಆನಂದವಾಗು
ವದು.

ದೇವರು ಮನುಷ್ಯನಿಗೆ ಒಂದು ಬಾಯನ್ನೂ ಎರಡು

ಕಿವಿಗಳನ್ನು ಕೊಟ್ಟಿರುವನು. ಇದರಿಂದ ಮನುಷ್ಯನು ಸ್ವಲ್ಪ ಮಾತಾಡಿ ಬಹಳ ಕೇಳಬೇಕೆಂಬುದು ಅತನ ಉದ್ದೇಶವಿದ್ದಂತೆ ತೋರುತ್ತದೆ. ಹಚ್ಚಿ ಭಾಷೆಯಲ್ಲಿ ಇದೇ ಅರ್ಥದ ಬಂದು ಗಾದಿಯುಂಟು. ಅದೇನೆಂದರೆ :— "ಮಾತು ಬೆಳ್ಳಿಯು, ಮೌನವು ಚಿನ್ನವು."

ಈ ನೇಮಗಳನ್ನು ಲಕ್ಷದಲ್ಲಿಟ್ಟು ನಡೆದವರಿಗೆ ಮಾತಾಡಿ ಹಿರಿ ಇಲ್ಲವೆ ಪರರು ಮಾತಾಡುವದನ್ನು ಕೇಳಿದರೆ ಅದರಿಂದ ತಪ್ಪದೇ ಹಿತವಾಗುವದು. ಅಹಿತವು ಎಂದಿಗೂ ಆಗದು. ಸಂಭಾಷಣವು ಸತ್ಸಮಾಗಮದ ಬಂದು ಪ್ರಕಾರ ಉಂಟು. ಅದನ್ನು ವಿಶೇಷ ಪ್ರಯತ್ನವಿಲ್ಲದೆ ಮನುಷ್ಯರು ಸಾಧಿಸಬಹುದು ಚಲೋ ಮನುಷ್ಯರು ಎಂದಿಗೂ ಅಭದ್ರ ಭಾಷಣ ಮಾಡುವದಿಲ್ಲ; ಯಾಕಂದರೆ ಕೆಟ್ಟ ವಿಚಾರಗಳು ಅವರ ಮನಸ್ಸಿನಲ್ಲಿ ಎಂದೂ ಬರುವದಿಲ್ಲ. ಬೀಜವೇ ಇಲ್ಲದ ಮೇಲೆ ಫಲ ಬರುವ ಬಗೆಯೇನು? ಅವರಿಂದ ಮನುಷ್ಯರು ತಮ್ಮ ಅಂತಃಕರಣವನ್ನು ಗಂಗಾಜಲದಂತೆ ನಿರ್ಮಲವಿಟ್ಟು, ಅದರಲ್ಲಿ ಎಳ್ಳಷ್ಟಾದರೂ ಹೊಲಸು ಕೂಡದಂತೆ ಪ್ರಯತ್ನ ಮಾಡಬೇಕು. ಅಂದರೆ ನಿಮ್ಮ ಭಾಷಣವು ಅಮೃತತುಲ್ಯವಾಗಿ ಎಲ್ಲರೂ ಅಪೇಕ್ಷಿಸುವಂಥಾದ್ದಾಗುವದು. ಜಗತ್ಕರ್ತನು ಇದಕ್ಕಾಗಿಯೇ ಜಿಹ್ವೆಯನ್ನು ಕೊಟ್ಟಿರುವನು. ಅವನ ಸಂಕೇತದಂತೆ ಅದನ್ನು ಉಪಯೋಗಿಸಿದರೆ .ಅದರಿಂದ ಮನುಷ್ಯರಿಗೆ ಸುಖವಾಗಿ ಅವನಿಗೆ ಸಂತೋಷವಾಗುವದು

ವೈದ್ಯನು ನಾಲಿಗೆಯನ್ನು ಪರೀಕ್ಷಿಸಿ ರೋಗಿಯ ರೋಗವನ್ನು ಹೇಳುವಂತೆ ಇಲ್ಲವೆ ಮನುಷ್ಯನ ಮಾತಿನ ಧಾಟಿಯಿಂದ ಅವನ ದೋಷವು ತಿಳಿಯುವಂತೆ, ಭಾಷಣದಿಂದ ಅವನ ನಿಜವಾದ ಯೋಗ್ಯತೆಯು ಪರೀಕ್ಷೆಯಾಗುವದು. ಈ ಬಗ್ಗೆ ಹಿಂದೀ ಭಾಷೆಯಲ್ಲಿ ಬಂದು ಪುರಾತನ ದೋಹರಾ ಇರುವದು.

सज्जनकू सज्जन मिले बडे ग्यानकी बात ।
दुर्जनकूं दुर्जन मिले दो कुळी दो लात ॥

ಇದರಂತೆಯೇ ಒಳಗಡೆಯ ಒಬ್ಬ ಚತುರ ಇಂಗ್ಲಿಷ ಕವಿಯಾದರೂ ತನ್ನ ಒಂದು ಪದ್ಯದಲ್ಲಿ ಇದೇ ಅರ್ಥವನ್ನು ತೋರಿಸಿರುವನು. ಅದರ ತಾತ್ಪರ್ಯವೇನಂದರೆ– " ದೇಶ ಕಾಲ, ಸ್ಥಳ, ರೀತಿ, ವಿಷಯ ಇವುಗಳನ್ನು ವಿಚಾರಿಸಿ ಮಾತಾಡುವವನು ಲೋಕದಲ್ಲಿ ಚತುರನೆನಿಸುವನು.

MANUAL OF METHOD.

ಶಿಕ್ಷಾಕ್ರಮ.

(೫೬ನೇ ಪುಸ್ತಕದ ೨೮೦ನೇ ಪುಟದಿಂದ ಮುಂದೆ ಸಾಗಿದ್ದು.)

(೫) ಗೃಹಶಿಕ್ಷಾ—ಊಡಕನಾದ ಹುಡುಗನನ್ನು ಕುರಿತು ತಾಯಿತಂದೆಗಳಿಗೆ ಬರೆದು ಅವರಿಗೆ ಛೆಟ್ಟಿಯಾಗಿ ಹುಡುಗನ ನಡತೆಯನ್ನು ಸವಿಸ್ತಾರವಾಗಿ ತಿಳಿಸಿ ಅಥವಾ ಅವರನ್ನು ಸಾಲಿಗೆ ಕರಿಸಿಕೊಂಡು ಊಡಕತನವನ್ನು ತೋರಿಸಿ ಈ ದೋಷವನ್ನು ತಿದ್ದುವದರಲ್ಲಿ ಅವರ ಸಹಾಯವನ್ನು ದೊರಕಿಸತಕ್ಕದ್ದು. ಊಡಕತನದಿಂದ ಸಾಲಿಗೆ ಆಗುವ ನಷ್ಟಕ್ಕಿಂತ ಕುಟುಂಬಕ್ಕೆ ಹೆಚ್ಚು ನಷ್ಟ ಸಂಭವಿಸುತ್ತದೆಂದು ತಾಯಿತಂದೆಗಳಿಗೆಮನಗಾಣಿಸಿ ಅಂಥ ಹುಡುಗರನ್ನು ಹಾದಿಗೆ ತರುವ ಭಾರವನ್ನೆಲ್ಲ ತಾಯಿತಂದೆಗಳಿಗೆ ಒಪ್ಪಿಸುವದೇ ಲೇಸು. ಊಡಕರಾದ ವಿದ್ಯಾರ್ಥಿಗಳನ್ನು ಶಿಕ್ಷಕನು ಸ್ವತಃ ಶಿಕ್ಷಿಸಿ ಸಾಲಿಯ ಬಗ್ಗೆ ಅವರ ಮನಸಿನಲ್ಲಿ ಅಪ್ರೀತಿಯನ್ನು ಹುಟ್ಟಿಸುವದಕ್ಕೆ ಬದಲಾಗಿ ಶಿಕ್ಷೆಯ ಕೆಲಸವನ್ನು ತಾಯಿತಂದೆಗಳ ಸ್ವಾಧೀನ ಮಾಡಿ ಸೌಮ್ಯೋಪಾಯಗಳಿಂದ ಅವರ ಮನಸ್ಸನ್ನೊಲಿಸಿ ಸಾಲಿಗೆ ಮೆಚ್ಚುವಂತೆ ಅವರನ್ನು ನಡಿಸಿಕೊಳ್ಳುವದೇ ವಿಹಿತವು

(೬) ಸಾಲಿಯನ್ನು ಬಿಟ್ಟು ಹೊರಗೆ ಹಾಕುವದು— ಎಷ್ಟು ಹೇಳಿದರೂ ಕೇಳದ ವಿದ್ಯಾರ್ಥಿಗಳನ್ನೂ ತಾನು ಕೆಡುವದಲ್ಲದೆ ಪರರನ್ನು ಕೆಡಿಸುವಂಥವರನ್ನೂ ಈ ಶಿಕ್ಷೆಗೆ ಗುರಿಮಾಡತಕ್ಕದ್ದು. ಕೆಲವರು ತಾಯಿತಂದೆಗಳು ತಮ್ಮ ಮಕ್ಕಳ ಮುನ್ನಡತೆಗಳನ್ನು ಎಷ್ಟು ಮಾತ್ರವೂ ಲೆಕ್ಕಿಸುವದಿಲ್ಲ. ಇಂಥವರನ್ನಾದರೂ ಹಾದಿಗೆ ತರಲಿಕ್ಕೆ ಈ ಉಪಾಯವು ಪ್ರಯೋಜನಕರವಾದದ್ದು.

(೭) ಊಡಕ ಹುಡುಗರಿಗಾಗಿ ಸ್ಥಾಪಿಸಿದ ಶಾಲೆಗಳು— ಕೆಲಕೆಲವು ಕಡೆಯಲ್ಲಿ ಊಡಕ ಹುಡುಗರಿಗಾಗಿಯೇ ಸ್ವತಂತ್ರ ಶಾಲೆಗಳು ಸ್ಥಾಪಿಸಲ್ಪಟ್ಟಿರುತ್ತವೆ. ಇವುಗಳಲ್ಲಿ ಯಾವ ಮಾತನ್ನೂ ಲೆಕ್ಕಿಸದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುತ್ತಾರೆ ಇಂಥವರನ್ನು ತಿದ್ದುವದೇ ಈ ಶಾಲೆಗಳ ಮುಖ್ಯ ಪ್ರಯೋಜನವು. ಆದ್ದರಿಂದ ಊಡಕ ಹುಡುಗರನ್ನು ಶಾಲೆಯಿಂದ ಹೊರಗೆ ಹಾಕುವದರ ಬದಲಾಗಿ ಇಂಥ ಶಾಲೆಗಳಲ್ಲಿ ಅವರನ್ನು ಇಟ್ಟುಕೊಂಡು ತಿದ್ದಬೇಕು. ಈ ಶಾಲೆಗಳ ಶಿಕ್ಷಣದಿಂದ ಎಷ್ಟೋ ಹುಡುಗರು ಹಾದಿಗೆ ಬಂದಿರುತ್ತಾರೆ.

ಚಟಗಳು—ಹುಡುಗರಿಗೆ ಒಳ್ಳೇ ಚಟಗಳನ್ನು ಹಚ್ಚಿಲಾಗಿ ತಿದ್ದುವಿಕೆಯು ನೆಲೆಗೊಳ್ಳುತ್ತದೆ. ಇದೇ ತಿದ್ದುವಿಕೆಯ ರಾಜಮಾರ್ಗವೆಂದು ಹೇಳಬಹುದು. ಆದ್ದರಿಂದ ಈ ಚಟಗಳ ಸ್ವರೂಪವನ್ನೂ, ಅವುಗಳನ್ನು ನೆಲೆಗೊಳಿಸುವ ಕ್ರಮವನ್ನೂ ಹೇಳುವದು ಅವಶ್ಯವಾಗಿ ತೋರುತ್ತದೆ.

ಚಟಗಳ ಸ್ವರೂಪವು—ಯಾವದೊಂದು ಕಾರ್ಯವನ್ನು ಒಂದೇ ಸವನೆ ಕೆಲವು ದಿವಸ ಮಾಡಲಾಗಿ ಅದನ್ನು ಅದೇ ಕಾಲಕ್ಕೆ ಅದೇ ರೀತಿಯಿಂದ ಮಾಡುವ ಹವ್ಯಾಸವು ನೆಲೆಗೊಳ್ಳುತ್ತದೆ. ಆ ರೀತಿಯು ಕೆಲವು ದಿವಸ ಮಾಡುವ ಪರಿಣತಿಯನ್ನಿಟ್ಟರೆ ಆ ಕಾಲಕ್ಕೆ ಅನಾಯಾಸವಾಗಿ ತನಗೆತಾನೇ ಸಂಭವಿಸುತ್ತದೆ. ಕಡೆಗೆ ಅದು ಒಂದು ಸ್ವಭಾವದ ಅಂಕವೇ ಆಗುತ್ತದೆ.

ವಸ್ತುತಃ ಯಾವದೊಂದು ಕೆಲಸ ಮಾಡಬೇಕಾದರೆ ಪ್ರೇರಕಕಾರಣವು ಬೇಕು. ಇಚ್ಛೆಯಾಗಲಿ ಒತ್ತಾಯವಾಗಲಿ ಈ ಪ್ರೇರಕಕಾರಣವನ್ನು ಪೂರೈಸುವದು ಆದರೆ ಯಾವದೊಂದು ಕಾರ್ಯವನ್ನು ತಪ್ಪದೆ ಮಾಡಹತ್ತಿದರೆ ಇಚ್ಛೆಯಾಗಲಿ ಒತ್ತಾಯವಾಗಲಿ ಬೇಕಾಗುವದಿಲ್ಲ. ಕಾರ್ಯವು ಸ್ವಭಾವದ ಭಾಗವಾಗಿ ರೂಢಿಯ ಬಲದಿಂದ ತನಗೆತಾನೆ ಘಟಿಸುತ್ತದೆ ಈ ವಿವೇಚನೆಯಿಂದ ಎರಡು ಅಂಗಗಳು ಅವಶ್ಯವಾಗಿ ತೋರುತ್ತವೆ ೧. ತಾತ್ಕಾಲಿಕ ಅಥವಾ ಮಾನಸಿಕ ಅಂಗ ೨. ಶಾರೀರಿಕ ಅಂಗ.

೧. ಯಾವದೊಂದು ಕೆಲಸವನ್ನು ಅಂತರ್ಬಾಹ್ಯೇಂದ್ರಿಯಗಳ ಸಹಾಯವಿಲ್ಲದೆ ಮಾಡುವ ವ್ಯಾಪಾರವು ಮಾನಸಿಕ ಅಂಗವೆನಿಸುವದು.

೨. ಶಾರೀರಿಕಾಂಗ— ಯಾವದೊಂದು ಕಾರ್ಯವಾಗಬೇಕಾದರೆ ಅದಕ್ಕೆ ಅನುಕೂಲವಾದ ಶರೀರಘಟನೆಯು ಬೇಕಾಗುತ್ತದೆ. ಈ ಘಟನೆಯು ಪೋಷಣವನ್ನು ಅವಲಂಬಿಸಿರುತ್ತದೆ. ಬಳಿತಾಗಿ ಪೋಷಿಸಲ್ಪಟ್ಟ ಶಿಶುವಿನಲ್ಲಿ ಚಟಗಳನ್ನು ನೆಲೆಗೊಳಿಸುವದು ಸುಕರವಾಗಿರುತ್ತದೆ.

ಇದರಿಂದ ಗೊತ್ತಾಗುವದೇನಂದರೆ, ಚಟಗಳಲ್ಲಿ ಮಾನಸಿಕ ಚಟಗಳಿಂತಲೂ, ಶಾರೀರಕ ಚಟಗಳಿಂತಲೂ ಎರಡು ವರ್ಗಗಳನ್ನು ಮಾಡಬಹುದು. ವಿವಕ್ಷಿತ ಮನಸಿನ ವ್ಯಾಪಾರಗಳನ್ನು ತಿರತಿರಿಗಿ ಪ್ರಯೋಗಿಸುವದರಿಂದ ಮಾನಸಿಕ ಚಟಗಳು ಹುಟ್ಟುತ್ತವೆ ಸಾಹಚರ್ಯವು ಮಾನಸಿಕ ಚಟಗಳ ಎರಡನೇ ಪ್ರಧಾನ ಸಾಧನವಾಗಿರುತ್ತದೆ. ವಿವಕ್ಷಿತಕಾರಣದಿಂದ ವಿವಕ್ಷಿತ ಮನಸಿನ ವ್ಯಾಪಾರವು ಪ್ರೇರಿತವಾಗುತ್ತದೆ; ಮತ್ತು ಇವುಗಳ ಸಾಹಚರ್ಯದ ಮೂಲಕವಾಗಿ ಒಂದರಿಂದ ಮತ್ತೊಂದರ ವ್ಯಾಪ್ತಿಯಾಗುತ್ತದೆ.

ಚಟಗಳನ್ನು ನೆಲೆಗೊಳಿಸುವ ಕ್ರಮವು— ಚಟಗಳ ವ್ಯಯೋಜನವು ಅಷ್ಟಿಷ್ಟೆಂದು ಹೇಳಕೂಡದು. ಯಾಕಂದರೆ ಚಟಗಳೇ ಮನುಷ್ಯನ ಎರಡನೇ ಪ್ರಕೃತಿಯೆನಿಸುತ್ತವೆ.

DEPARTMENTAL NOTICES.

ನೋಟೀಸುಗಳು.

ಸನ್ ೧೮೮೮ನೇ ಇಸವಿಯ ಎಪ್ರಿಲ ತಿಂಗಳ ೫ನೇ ತಾರೀಖಿನ ಮುಂಬಯಿ ಸರಕಾರೀ ಗ್ಯಾಝೆಟಿನಲ್ಲಿ ಪ್ರಸಿದ್ಧಿಸಲ್ಪಟ್ಟ ನೇಮಗಳಿಗನುಸರಿಸಿ ಕೆಳಗಿನ ತರಗತಿಯ ಸರಕಾರೀ ಕೆಲಸಗಳನ್ನು ಪೂರಕಿಸುವದಕ್ಕಾಗಿ ಬೇಕಾಗುವ ೧೯೦೧ನೇ ಇಸವಿಯಲ್ಲಿ ದಕ್ಷಿಣಭಾಗದಲ್ಲಿ (ಬೆಳಗಾವ, ಧಾರವಾಡ, ವಿಜಾಪೂರ, ಕಾರವಾರ. ರತ್ನಾಗಿರಿ, ಕುಲಾಬಾ,

ಕೊಲ್ಹಾಪೂರ ಮತ್ತು ಬೇರೆ ಸೆಂಸ್ಥಾನಗಳು) ಆಗುವ ಎನೇ ಮತ್ತು ಫಿನೇ ಗ್ರೇಡ ಪಬ್ಲಿಕ್ ಸರ್ವಿಸ ಸರಟಿಫಿಕೇಟ ಪರೀಕ್ಷೆಗಳಿಗಾಗಿ ಕೆಳಗೆ ಬರೆದ ಪುಸ್ತಕಗಳು ಗೊತ್ತು ಮಾಡಲಟ್ಟವೆ.

೨. ಪರೀಕ್ಷೆಯು ಬೆಳಗಾವ ಧಾರವಾಡ ಸೆಂಟರುಗಳಲ್ಲಿ ಮರಾಠಿ ಮತ್ತು ಕನ್ನಡ ಭಾಷೆಯ ಮುಖಾಂತರವಾಗಿಯೂ ಧಾರವಾಡ ಮತ್ತು ವಿಜಾಪೂರ ಸೆಂಟರುಗಳಲ್ಲಿ ಬರೇ ಕನ್ನಡ ಭಾಷೆಯ ಮುಖಾಂತರವಾಗಿಯೂ, ರತ್ನಾಗಿರಿ, ಕುಲಾಬಾ ಮತ್ತು ಕೊಲ್ಹಾಪೂರ ಸೆಂಟರುಗಳಲ್ಲಿ ಬರೇ ಮರಾಠಿಭಾಷೆಯ ಮುಖಾಂತರವಾಗಿಯೂ ತೆಗೆದುಕೊಳ್ಳಲ್ಪಡುವದು.

೩. ಧಾರವಾಡ ವಿಜಾಪೂರ ಜಿಲ್ಲೆಗಳಲ್ಲಿ ವಾಸವಾಗಿದ್ದ ಮರಾಠಿಯಬ್ಬಿ ಪರೀಕ್ಷೆ ಕೊಡಲಪೇಕ್ಷಿಸುವ ಉಮೇದವಾರರು ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರವರ ಸರವಾನಗಿ ಪಡಕೊಂಡು ಬೆಳಗಾವ, ಸೊಲ್ಹಾಪುರ ಕೊಲ್ಹಾಪೂರ, ಸಾತಾರಾ ಸೆಂಟರುಗಳಲ್ಲಿ ತಮಗೆ ಸವಿುಾಪವಾಪಂಥ, ಹೋಗಿ ಬರಲಿಕ್ಕೆ ಸುಲಭವಾಪಂಥ ಯಾವ ದೊಂದು ಸೆಂಟರಿನಲ್ಲಿ ಪರೀಕ್ಷೆಗೆ ಕೂಡ್ಡಬಹುದು.

ಎನೇ ಗ್ರೇಡ ಸರಟಿಫಿಕೇಟ ಪರೀಕ್ಷೆಯು
(ಶೆಡ್ಯೂಲ ಎ. — ೦)

(೧) ಇಂಗ್ಲಿಷ—ಓರಿಯಂಟಲ್ ರೀಡರ್ಸ ನಂ. ೬ ರಲ್ಲಿಯು ಕವಿತೆಗಳನ್ನು ಬಿಟ್ಟು ಮೊದಲಿನ ೪೦ ಪುಟಗಳು ಅಥವಾ ಟೇಲ್ಸ ಫ್ರಾಮ ಶೇಕ್ಸಪೀಯರ (ಮೆಕಬೆಥ, ಆಲ್ ಇಜ ವೆಲ್ ದ್ಯಾಟ ಎಂಡ್ಸ ವೆಲ್, ದಿ ಟೇಮಿಂಗ ಆಫ್ ದಿ ಷ್ರೂ, ದಿ ಕಾಮೆಡಿ ಆಫ್ ಎರರ್ಸ, ಮತ್ತು ವಿಾರ್ಚುರ ಫಾರ ವಿಾರ್ಚುರ) ಮತ್ತು ಗೋಲ್ಡಸ್ಮಿಥನ ಟ್ರ್ಯಾವ್ಹಲರದೊಳಗಿನ ಇಲ್ಲವೆ ಪೋಪ್ಸ ಹೋಮರ್ಸ ಇಲಿಯಡ್ ಎನೇ ಪುಸ್ತಕದೊಳಗಿನ ಮೊದಲಿನ ೪೦೦ ಪಂಕ್ತಿಗಳು.

(೨) ಮರಾಠಿ—ಕೊಲೇಟಕರರು ಭಾಷಾಂತರಿಸಿದ ಕೋಷ ಅಂಬಿಸನ ಚರಿತ್ರವು.

(೭) ಕನ್ನಡ—ಕನ್ನಡ ಸರಕಾರೀ ೬ನೇ ಫ್ಲಸ್ಟಕರ ಪಠ್ಯಪುಸ್ತಕ,

೪. ಉರ್ದೂ—ಗುಲದಸ್ತ್ಹಾ೦ಬಿ, ತಪಜ್ಜೋಬಿ.

೫ನೇ ಗ್ರೇಡ ಸರ್ಟಿಫಿಕೇಟು ಪರೀಕ್ಷೆಯು
(ಶಿಡಸ್ಯೂಲ ಬಿ. ೨)

೧. ಅಂಕಗಣಿತ ಪೂರ್ಣ, ಜಮಾಖರ್ಚು ಮಾಡುವುದು ಮುಳ್ಳಿನ ಸಿದ್ಧಾಂತದ ೧ನೇ ಪುಸ್ತಕ.

(೨) ಮರಾಠಿ—ವಾಚನಪುಸ್ತಕ–ಸರಕಾರೀ ೬ನೇ ಫ್ಲಸ್ಟಕ ಪೂರಾ,

ಕವಿತಾ—ಮರಾಠಿ ಸರಕಾರೀ ೬ನೇ ಪುಸ್ತಕದೊಳಗಿನ ಮೊದಲಿನ ೫೦ ಪಂಕ್ತಿಗಳನ್ನು ಬಾಯಿಪಾಠ ಅನ್ನುವದು, ಅರ್ಥ ಹೇಳುವದು.

(೩) ಹಿಂದಿನ ಪಾಠದ ಪುಸ್ತಕ—ಸರಕಾರೀ ೬ನೇ ಪುಸ್ತಕ ಪೂರಾ,

ಕವಿತೆ—ಸರಕಾರಿ ಕವಿತೆಯ ೬ನೇ ಪುಸ್ತಕದೊಳಗಿನ ೫೦—೬೦ ಪಂಕ್ತಿಗಳು ಸಂಪೂರ್ಣ ಬಾಯಿಪಾಠ ಅನ್ನುವದು ಅರ್ಥ ಹೇಳುವದೂ.

೪. ಉರ್ದೂ—ಗುಲದಸ್ತ್ಹಾ೦ಬಿ ತಪಜ್ಜೋಬಿ.

ಧಾರವಾಡ
ತಾ॥ ೪-೧೦-೧೯೦೦. } B. R. Sahasrabudhe,
ಎ. ಇನಸ್ಪೆಕ್ಟರ ದಕ್ಷಿಣಭಾಗ.

II

ಹಳೆಯ ಪದ್ಧತಿ ಧಾರವಾಡ ಸೆಂಟರಿನಲ್ಲಿ ಅದ ಕನ್ನಡ ಮುಲ್ಕೀ ಪರೀಕ್ಷೆಯಲ್ಲಿ ಆಪ್ತಮುನಿಕತನದ ವರ್ತನೆ ಕಾರಣದಿಂದ ಬೆಳಗಾಂವ ಜಿಲ್ಲಾ ಇನಿಗಿಯ ರಾಮಚಂದ್ರ ಬಾಳಾಚಿ ಬೆಟಗೇರಿ ಮತ್ತು ಅಣ್ಣಾಜಿ ಬಾಳಾಚಿ ಬೆಟಗೇರಿ ಎಂಬವರು ಒಬ್ಬರು ಅಣ್ಣತಮ್ಮಂದಿರಿಗೆ ಸರಕಾರದ ಯಾವ ಖಾತೆಯಲ್ಲಿಯೂ ಉದ್ಯೋಗ ಕೊಡಬಾರದೆಂತಲೂ ಅವರಿಗೆ ಸಿಕ್ಕ ಮುಲ್ಕೀ ಪರೀಕ್ಷೆಯ ಸರಟಿಫಿಕೇಟುಗಳನ್ನು ರದ್ದು ಮಾಡಿಸಲು

ಪ್ರಧಾನ : ಗಿಲಬಿ

ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು
ಶತಮಾನೋತ್ತರ ಬೆಳ್ಳಿ ಹಬ್ಬವ
ಪುಸ್ತಕ ಪ್ರದರ್ಶನ ಗರ್ಲ

ಶತಮಾನೋತ್ತರ ಬೆಳ್ಳಿ ಹಬ್ಬ
(ಎಸ್ಬಿಆ ಗರ್ಲ್ಸ ಏಂಜ)
ವರ್ಷ

ಡಿ. ಚನ್ನಬಸಪ್ಪನವರು
(ಗಲಿಜಿ—ಗಿಲಬಿಗ)
ವಿಯು ಸಂಪಾದಕರು



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ಶರಬೇತಿ ವಿದ್ಯಾಲಯ

ಡಿಪ್ಯೂಟಿ ಚನ್ನಬಸಪ್ಪ ವೃತ್ತ, ರಾಣಿವೀರಸ್ಪೆ, ಧಾರವಾಡ – ೮

367

367

1901

ಸಿದ್ಧನಾಥ ವಾಚನ ಮಂದಿರ
ಮೊರಬ. ಜಿ ಧಾರವಾಡ.

KANARESE
SCHOOL PAPER.

ಪುಟ ೩೭] ಜಾನ್ಯುಆರಿ ೧೯೦೧. [ಸಂಚಿಕೆ ೧.

ಅನುಕ್ರಮಣಿಕೆ.

	ಪುಟ.
ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು	೧-೫
ರಸಾಯನಶಾಸ್ತ್ರ	೪-೧೨
ವಿದ್ಯಾಧಿಕಾರಿಗಳ ಪರಿಷತ್ತು ಬ. ಭಾ. ೧೯೦೦.	೧೩-೧೬
ವಿಜ್ಞಾನವು	೧೬-೧೯
ಪೋಷ್ಟಾಫೀಸು	೨೦
ಪತ್ರವ್ಯವಹಾರ	೨೧-೩೧
ಪರೀಕ್ಷಾ ಯಿಚ್ಛಾ ಪರೀಕ್ಷೆಯ ಪ್ರಶ್ನೆಗಳು ...	೩೨-೩೪

CONTENTS.

Educational Intelligence and Useful Notes	1–7
Chemistry	8–12
S. D. Edl. Conference—1900	13–16
Manual of method	16–19
Departmental notice.	20
Correspondence.	21–31
Match Prize Examination Question Papers	32–34

DHARWAR

PRINTED AT THE ARYAPIC PRESS OF F. H.

1901.

ಜಾಹೀರಾತು

ನುಡಿಗಟ್ಟಿನ ರೀತಿ ಅವೃತ್ತಿ ಸುಧಾರಿಸಿ ಥಾಪಿಸಲ್ಪಟ್ಟಿದೆ. ಮೂಲ
ನವ್ಯ ಕಾಡಿಗೆ ಬದೆ. ಬೆಲೆ ೫ ಆಣೆ. ಯಾವತ್ತು ಸರಕಾರೀ ಶಾಲಾ
ಗಿ ಶಾಲೋಪಯೋಗ್ಗಿ ವ್ಯ. ಸೂಲಿಕೈತ ಗಣಿತಬೆಂಬ್ರಕ್ಕೆ, ಲಘು
ಬುಂಧ ಪುಸ್ತಕಗಳೂ, ಪ ಬಾಗಲ್ ಕೋಟ್ಟಾಕ್ಷ, ೧೯೦೧
ಪೀಲ್ಸ್ರವಾರಿ ಲಭ್ಯವಾಗಳಗೆ ಪ ಬದಲಾಯಿಸಿ ಸ್ಪಷ್ಟಕರ ಬೆಲೆ ೫॥
ಸ್ಪಿಡಿ ಗಾ ಬಾಲ್ವಿಂಗ್ಗಿ ಪಿಂಸ್ಟ್ರಾ ನಡ್ಯಾಳಿಸಾ ಸೇನೇ ಎ.
ವಿ ೨ ಥೆ ರಜಟ್ಟಿ ಬಗುವವ್ಯೆ.

೫ ॥ ೦ -೧೦- ೦ | ರಾಮಾಚಾರ್ಯ ತಮಣ ಚಾರ್ಯ
ತೆಗೆವಸಿ. ಬು. ಸೇ. ಧಾರವಾಡ.

ನ್ನಡ ಜಾಲಾಪತ್ರಿಕೆದ ವರ್ಗಣಾ ವರ್ಷಕ್ಕೆ ಮುಂಗಡ ೧೫ ಲಿ.
ಂ ಬಂಬ್ಲಿಕೇಶನ್ ... ... ೨ ಲಿ

ಪ್ರಕಟ ... ಪಿಸ ...
ಒಮ್ಮೆ ಪಟ್ಟಿರೆ ೪ ಪಂಕ್ತಿಗಳವರೆಗೆ ೦೫
ಇ ಸಾರಿ ಪಟ್ಟಿರೆ ೬ ,, ೦೮
ಆಕ್ಷ ಸಾರಿ ಪಟ್ಟಿರೆ ೮ ,, ೧೦

ಸೂಚನೆಗಳು.

೧. ಜಾಲಾಪತ್ರಿಕೆಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಥಾಪಿಸುವೆವು
೨. ಶಿರೋಲೇಖಕ್ಕೂ ಅವೂರ್ಣ ಪಂಕ್ತಿಗೂ ಪೂರ್ಣ ಪಂಕ್ತಿಯ ಹಾಸಲು ಬೀಳುವದು.
೩. ಥಾವಾಂತರ ಮಾಡಿ ಥಾಪಿಸುವದಾದರೆ ಮೇಲಿನ ದರದ ೧ ಮ್ಮಡಿ ಸೀ ಬೀಳುವದು.
೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.
೫. ಟೀಕೀಟು ಇಟ್ಟ ಹೊರ್ತು ಉತ್ತರ ಶಿಗಲಾರದು.

Kaoji B Karandikar
ಮುದ್ರಕರು ಕ. ಜಾಲಾಪತ್ರಿಕೆ

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಷ್ಯಜೋತ್ಕರ್ಷಮುಂ।
ಲಯಸುತ್ತಂ ಪ್ರತಿಭಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ಪಯುಬಿಂದಿತ್ತಪೆಪ್ರೋದುವರ್ಗಸುಗುಣಂ ಜೋರಲ್ಕೆಕೈಕೊಂಬುಮ್ಯೆ।
ದಯೆಯಿಂದೋಷವತಿದ್ದ ವೇಳ್ಪುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥

ಪುಸ್ತಕ ೩೭] ಜಾನ್ಯೂಆರಿ ೧೯೦೧. [ಸಂಚಿಕೆ ೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಹಿಂದುಸ್ತಾನದ ಗವ್ಹರ್ನರ ಜನರಲ್ಲರಾದ ನಾಮುದಾರ ಕರ್ಝನ್ ಪ್ರೊರೆಗಳು ದಕ್ಷಿಣ ಹಿಂದುಸ್ತಾನದಲ್ಲಿ ಸಂಚಾರ ಕ್ಕಾಗಿ ಹೊರಟು ತ್ರಾವಣಕೋರ ಸಂಸ್ಥಾನದ ರಾಜಧಾನಿ ಯಾದ ತ್ರಿವೆಂದ್ರಮುಕ್ಕೆ ಹೋದಾಗ್ಗೆ ಅಲ್ಲಿಯ ಕಾಲೇಜವ ನ್ನು ನೋಡಿ ಆನಂದಪಟ್ಟು ಅಲ್ಲಿಯ ವಿದ್ಯಾರ್ಥಿಗಳಿಗೆ ಉಪ ದೇಶಪರವಾದ ನಾಲ್ಕು ಮಾತುಗಳನ್ನು ಹೇಳಿದರು. ಅವು ಗಳ ಸಾರಾಂಶವೇನೆಂದರೆ:—

ಕಾಲೇಜದ ವಿದ್ಯಾರ್ಥಿಗಳೇ, ನಾನು ನಿಮಗೆ ಒಂದೇ ಸಂ ಗತಿಯನ್ನು ಕುರಿತು ಉಪದೇಶಮಾಡಲೀಕ್ಷಿಸುತ್ತೇನೆ. ಆ ಸಂಗತಿಯು ಯಾವದೆಂದರೆ, ನೀವೆಲ್ಲರೂ ಸುಖಮಾರ್ಗ ವಲಂಬಿಗಳಾಗತಕ್ಕದ್ದಲ್ಲ; ಅಂದರೆ ನೀವೆಲ್ಲರೂ ಒಂದೇ ಉದ್ಯೋಗವನ್ನುದ್ದೇಶಿಸಿ ಅಭ್ಯಾಸ ಮಾಡತಕ್ಕದ್ದಲ್ಲ. ನೀವು ನಿಮ್ಮ ದೇಶಕ್ಕೆ ಹಿತವಾಗುವಂಥ, ನಿಮಗೆ ಚಲಿಯಲಿಕ್ಕೆ ಉತ್ಸಾಹ ಬರುವಂಥ ಬೇರೆ ಬೇರೆ ವಿಷಯಗಳನ್ನು ಆರಿಸಿ ಕೈಕೊಳ್ಳತಕ್ಕದ್ದು. ಇಡೀ ಹಿಂದುಸ್ತಾನದಲ್ಲಿ ಈ ಸಂಸ್ಥಾ ನದಷ್ಟು ಫಲಭರಿತವಾದ ಭೂಮಿಯುಳ್ಳಂಥ, ಸುತ್ತಲೂ ವಿಶಾ ಲವಾದ ವನಶೋಭೆಯುಳ್ಳಂಥ, ಕೈಗಾರಿಕೆಯ ಹೊರೆಗಳಿ ಗೂ ಕೃಷಿಗಾರಿಕ್ಕೂ ಅನುಕೂಲವಾಗುವಂಥ ಭಾಗವು ಮತ್ತೊಂದಿ

ಲ್ಲ. ಇಲ್ಲಿಯೆಪ್ಪ ಸ್ವದೇಶಾಭಿಮಾನವೂ ಬೇರೆ ಕಡೆಯಲ್ಲಿ ಗೋಚರಿಸುವದಿಲ್ಲ. ಪ್ರತಿಯೊಬ್ಬ ತ್ರಾವಣಕೋರಸ್ಥನು, ತ್ರಾವಣಕೋರದಂಥ ದೇಶವಿಲ್ಲ, ತ್ರಿವೆಂದ್ರಮು ಕಾಲೇಜ ದಂಥ ಕಾಲೇಜವಿಲ್ಲ ಮತ್ತು ತಮ್ಮ ಮಹಾರಾಜರಂಥ ಅರ ಸನಿಲ್ಲೆಂದು ನೆನಿಸುವನು. ಈ ರೀತಿ ಸ್ವಾಭಿಮಾನವುಳ್ಳಂಥ ನೀವು ಕೇವಲ ಗತಾನುಗತಿಕರಾಗದೆ ಚಿಕ್ಕ ವಯಸ್ಸಿನಲ್ಲಿ ಯೇ ಸುತ್ತಲೇ ಕಣ್ಣಿರದು ನೋಡಿ ಸ್ವಂತ ಅಳವನ್ನೂ ಅಭಿ ರುಚಿಯನ್ನೂ ಪರೀಕ್ಷಿಸಿ ಕಾಲೇಜದಲ್ಲಿಯ ಅಭ್ಯಾಸವು ಮು ಗಿದಕೂಡಲೇ ಯಾವತರದ ದೇಶಸೇವೆಯನ್ನು ಮಾಡಬೇಕೆಂ ಬದನ್ನು ಈಗಿಂದಲೇ ಗೊತ್ತುಪಡಿಸಿರಿ. ಕುರಿಗಳು ಮುಂದಿ ನ ಕುರಿಯನ್ನು ಹಿಂಬಾಲಿಸಿ ಬಂದೇ ಮಾರ್ಗವನ್ನು ಹಿಡಿದು ದಡ್ಡಿಯನ್ನು ಕೇರುತ್ತವೆ. ಕುರಿಗಳಂತೆ ನೀವು ಬಂದೇ ಮಾ ರ್ಗವನ್ನು ಹಿಡಿಯುವದು ತರವಲ್ಲ. ಲೋಕಹಿತಕ್ಕೆ ಅನೇ ಕಮಾರ್ಗಗಳಿರುವವು ಅನೇಕ ಜನ ಸಂದಣಿತವಾದ ಈ ಸಂಸಾರದಲ್ಲಿ ಬಂದೇ ಮಾರ್ಗವನ್ನು ಹಿಡಿದು ಆ ಮಾರ್ಗ ವಿಂದ ಲೋಕಹಿತಸಾಧನಕ್ಕಾಗಿ ಪ್ರವೇಶಾವಸರವನ್ನು ಕಾ ಯುಹತ್ತಿದರೆ ಸ್ಥಲವು ದೊರಿಯದೆ ವೇಳೆಯು ಹಾಳಾಗು ವದು. ತರುಣರೇ, ಈ ರಮ್ಯವಾದ ಸಂಸ್ಥಾನಕ್ಕಾಗಿ ನೀವು ಮಾಡತಕ್ಕ ಕರ್ತವ್ಯದ ಬಗ್ಗೆ ಈಗಲೇ ವಿಚಾರ ಮಾಡಿರಿ. ಮನಸ್ಸುಟ್ಟು ಪ್ರಯತ್ನಿಸಿದರೆ ಸಾಧ್ಯವಾಗದಂಥ ಶಾಸ್ತ್ರೀಯ ವಾಗಲಿ ಔದ್ಯೋಗಿಕವಾಗಲಿ ಯಾವ ಸಂಗತಿಯೂ ಇಲ್ಲ. ಈ ತ್ರಾವಣಕೋರ ಸಂಸ್ಥಾನದಲ್ಲಿ ಎಷ್ಟೋ ಅಶೋಧಿತವಾ ದ ಖನಿಜಗಳಿರುವವು. ಬಗೆ ಬಗೆಯ ಅರ್ಥಸಾಧನಕ್ಕೂ ಯಾಂತ್ರಿಕ ಶಕ್ತಿಗಳನ್ನು ಹುಟ್ಟಿಸಲಿಕ್ಕೂ ಅನುಕೂಲವಾದ ನೀರಿನ ವಿಪುಲ ಸಂಗ್ರಹವಿರುವದು. ನಾನಾತರದ ಕೆಲಸಗ ಳಿಗೆ ಪ್ರಯೋಜನಕರವಾದಂಥ ತೇಗು ಮುಂತಾದ ವೃಕ್ಷಗ ಳೂ ಬೇರೆ ಗಿಡಗಳೂ ಅನೇಕ ಉಂಟು. ಈ ದೇಶದಲ್ಲಿ ಬಗೆ ಬಗೆಯ ಪಶುಪಕ್ಷಿ ಕೀಟಕಾದಿಗಳಿರುವವು. ಅದರಂ ತೆ ಬೇಸಾಯದ ಬಗೆ ಬಗೆಯ ಪ್ರಯೋಗಗಳನ್ನು ಮಾಡಲಿ ಕ್ಕೆ ಅನುಕೂಲಗಳುಂಟು. ಈ ಪ್ರಕಾರ ಹಲವು ಬಗೆಯಿಂ ದ ಈ ದೇಶದಲ್ಲಿ ಸುಧಾರಣೆ ಮಾಡಲಿಕ್ಕೆ ಅವಕಾಶವಿರುವ ದು. ಈ ಎಲ್ಲ ಕೆಲಸಗಳಲ್ಲಿ ನಿಮ್ಮ ಕಾಲೇಜದಲ್ಲಿಯ ಯೂ

ರೊಬಿಯನ್ ಪ್ರೊಫೇಸರರಿಂದಲೂ ಮಹಾರಾಜರವರಿಂದಲೂ ನಿಮಗೆ ತಕ್ಕಷ್ಟು ಸಹಾಯ ದೊರಿಯದೆ ಇರದೆಂದು ನಾನು ಖಂಡಿತವಾಗಿ ಹೇಳುತ್ತೇನೆ. ತ್ರಾವಣಕೋರದ ಮಹಾರಾಜರು ವಿದ್ಯಾಪಕ್ಷಪಾತಿಗಳಿಂದು ಬಹು ದಿವಸಗಳಿಂದ ಪ್ರಸಿದ್ಧರಾಗಿದ್ದಾರೆ. ಈಗಿನ ಮಹಾರಾಜರು ಈ ಕಾಲೇಜದ ಊರ್ಜಿತಕ್ಕಾಗಿ ಬಹಳ ಲಕ್ಷ್ಯ ಕೊಡುತ್ತಾರೆ ಮತ್ತು ನಾನು ಈಗ ಹೇಳಿದ ವಿದ್ಯಾಭ್ಯಾಸದ ಬೇರೆ ಬೇರೆ ಶಾಖೆಗಳಲ್ಲಿ ಒಂದಾದ ಅರಣ್ಯರಕ್ಷಣೆಯ ಶಾಸ್ತ್ರೀಯ ಅಭ್ಯಾಸಕ್ಕಾಗಿ ಮಹಾರಾಜರವರು ಹಿಂದುಸ್ತಾನ ಸರಕಾರದ ಡೆರಾಡೂನ ಕಾಲೇಜಕ್ಕೆ ನಾಲ್ಕು ಜನರನ್ನು ಕಳಿಸತಕ್ಕವರಿದ್ದಾರೆಂದು ಕೇಳಿ ನನಗೆ ಬಹಳ ಸಂತೋಷವಾಗಿದೆ. ಆದದ್ದರಿಂದ ನೀವು ಬರೇ ತ್ರಾವಣಕೋರದಂಥ ಬೇರೆ ದೇಶವಿಲ್ಲೆಂದು ಹೇಳಿ ಅಥವಾ ತಿಳಿದು ನಿಮ್ಮ ಸ್ವದೇಶಾಭಿಮಾನವನ್ನು ತೋರಿಸುವದರಿಂದ ಲಾಭವಿಲ್ಲ. ನಿಜವಾದ ಅಭಿಮಾನವನ್ನು ಅನೇಕ ವಿಧವಾಗಿ ಲೋಕಹಿತಸಾಧನದ ಕೃತಿಯಿಂದ ವ್ಯಕ್ತ ಪಡಿಸಬೇಕೆಂದು ನಾನು ನಿಮಗೆ ಆಗ್ರಹಪೂರ್ವಕವಾಗಿ ಹೇಳುತ್ತೇನೆ. ನೀವು ಬೇರೆ ಬೇರೆ ಜನರು ಬೇರೆ ಬೇರೆ ಮಾರ್ಗದಿಂದ ದೇಶ ಸೇವೆಯನ್ನು ಮಾಡಲಿಕ್ಕೆ ಯತ್ನಿಸತಕ್ಕದ್ದು. ಈ ಕಾಲೇಜದಿಂದ ನಿಮಗೆ ಅನೇಕ ತರದ ಲಾಭಗಳುಂಟು, ಮೇಲ್ತರದ ಶಿಕ್ಷಣವು ಒಂದು, ದಕ್ಷಿಣ ಹಿಂದುಸ್ಥಾನದಲ್ಲೆಲ್ಲ ಮೇಲಾದ ಪುಸ್ತಕಾಲಯದ ಲಾಭವು ಮತ್ತೊಂದು, ಉದಾರಬುದ್ಧಿಯಂಥ ಅರಸರ ಆಶ್ರಯವು ಮೂರನೇದು. ಈ ಲಾಭ ಸೌಲಭ್ಯಕ್ಕಾಗಿ ನೀವು ಸಂಸ್ಥಾನಕ್ಕೆ ಬಹಳವಾಗಿ ಉಪಕೃತರಾಗಿರುತ್ತೀರಿ. ಈ ಉಪಕಾರವನ್ನು ನೀವು ಕೆಲವಂಕದಿಂದಾದರೂ ತೀರಿಸಲಿಕ್ಕೆ ಪ್ರಯತ್ನಿಸುವದು ತಕ್ಕದ್ದು. ನೀವು ಬರೇ ಸರಕಾರೀ ನೌಕರರು ಇಲ್ಲವೆ ವಕೀಲರಾಗಲಿಕ್ಕೆ ಆಶಿಸಕೂಡದು. ನೀವು ಪ್ರತಿ ಒಬ್ಬರು ಬೇರೆ ಬೇರೆ ಉದ್ಯೋಗವನ್ನು ಕೈಕೊಳ್ಳಿರಿ. ಕಾರ್ಯಸಾಮರ್ಥ್ಯಾನುಕೂಲಗಳನ್ನು ಬದಗಿಸಿ ಕೊಡುವದು ಬೇರೆ ಜನರ ಕೆಲಸವು. ಅವನ್ನು ತಕ್ಕ ಕೆಲಸವನ್ನು ಕೈಕೊಳ್ಳುವದು ನಿಮ್ಮ ಕೆಲಸವು. ಬೇರೆ ಬೇರೆ ಮಾರ್ಗದಿಂದ ದೇಶ ಸೇವೆಯನ್ನು ಕೂಡಿದವ್ವ

ಮಾಡುವ ಪರಿಣಾಮವು ನಿಮ್ಮಲ್ಲಿ ಯಾವಾಗಲೂ ಜಾಗೃತವಾಗಿರಲೆಂದು ನಾನು ನಿಮಗೆ ಖಂಡಿತವಾಗಿ ಹೇಳುತ್ತೇನೆ.

ಸರ್ ಗರ್ಗಂ ನೇ ಇಸವಿಯ ಜ್ಯಾನ್ಯುಅರಿ ತಿಂಗಳಲ್ಲಿ ಆದ ಎರಡನೇ ಪ್ರಾವಿನ್ಶಿಯಲ್ ಸಿವಿಲ್ ಸರ್ವಿಸ ಪರೀಕ್ಷೆಗೆ ಹತ್ತು ಜನ ಉಮೇದವಾರರು ಬಂದಿದ್ದರು ಅವರಲ್ಲಿ ೭ ಮಂದಿ ಹಿಂದೂ ಜನರು, ಒಬ್ಬ ಪಾರ್ಸಿ, ಒಬ್ಬ ಮುಸಲ್ಮಾನ ಮತ್ತು ಒಬ್ಬ ಯೂರೇಸ್ಯ ಇಂಡಿಯನ್ನನು ಈ ಪ್ರಕಾರ ಇದ್ದರು. ಇವರಲ್ಲಿ ಮೂವರು ಮುಂಬೈ ವಿಶ್ವವಿದ್ಯಾಲಯದ ಎಮ್. ಎ. ಪರೀಕ್ಷೆಯಲ್ಲಿ ಪಾಸಾದವರೂ ಐವರು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರೂ ಒಬ್ಬನು ಪಿ ಈ. ಪಾಸಾದವನೂ ಒಬ್ಬನು ಸ್ಕೂಲ ಫೈನಲ್ ಪರೀಕ್ಷೆ ಕೊಟ್ಟವನೂ ಇದ್ದನು. ಮೇಲ್ಕಾಣಿಸಿದ ಗ್ರಾಜುಯೇಟರಲ್ಲಿ ಇಬ್ಬರು ವಿಲಸನ್, ಡೆಕ್ಕನ ಮತ್ತು ಎಲ್‌ಫಿನಸ್ಟನ್ ಕಾಲೇಜದಲ್ಲಿ ಕಲಿತವರೂ ಒಬ್ಬನು ದಯಾಬಾಯಿ ಜೆಟಮಲ ಕಾಲೇಜದಲ್ಲಿ ಕಲಿತವನೂ ಒಬ್ಬನು ಫರಗ್ಯೂಸನ್ ಕಾಲೇಜದಲ್ಲಿ ಕಲಿತವನೂ ಇದ್ದನು.

ಅಪೇಕ್ಷಕ ವಿಷಯಗಳ ಪರೀಕ್ಷೆಯಲ್ಲಿ ಇಬ್ಬರು ಎಮ್ ಎ. ಮತ್ತು ಒಬ್ಬ ಬಿ. ಎ. ಹೀಗೆ ಮೂರು ಜನ ಮಾತ್ರ ಎಲ್ಲ ವಿಷಯಗಳಲ್ಲಿ ಸಾಕಷ್ಟು ಗುಣಗಳನ್ನು ಪಡೆದರು ಇವರೆಲ್ಲರೂ ಬಿ ಎ ಪರೀಕ್ಷೆಯಲ್ಲಿ ಹೆಚ್ಚಿನ ಗುಣಗಳನ್ನು ಪಡೆದು ಒಂದೇ ವರ್ಗದಲ್ಲಿ ಬಂದವರು ಮತ್ತು ಇವರು ಎಲ್‌ಫಿನಸ್ಟನ್, ಡೆಕನ್ ಮತ್ತು ವಿಲಸನ್ ಕಾಲೇಜಗಳಲ್ಲಿ ಫೆಲೋಗಳಾಗಿದ್ದರು. ಆನಂತರ ಐಚ್ಛಿಕ ವಿಷಯಗಳಲ್ಲಿ ಈ ಮೂವರು ಪರೀಕ್ಷಿಸಲ್ಪಟ್ಟರು. ಮಿ ಫ್ಹಿ. ಕೆ. ನಾಮು ಜೋಸಿ ಎಂಬವರು ಎಲ್ಲ ವಿಷಯಗಳಲ್ಲಿ ಎಲ್ಲಕ್ಕೂ ಹೆಚ್ಚು ಗುಣಗಳನ್ನು ಪಡೆದದ್ದರಿಂದ ಅವರ ಹೆಸರು ಸರಕಾರಕ್ಕೆ ತಿಳಿಸಲ್ಪಟ್ಟಿತು.

ವಿದ್ಯಾಪೀಠದ ಪರೀಕ್ಷೆಗಳಲ್ಲಿ ಚಲೋ ರೀತಿಯಿಂದ ಪಾಸಾದವರೇ ಈ ಪರೀಕ್ಷೆಯಲ್ಲಾದರೂ ಚಲೋ ಗುಣಗಳನ್ನು ಪಡೆದದ್ದು ನೋಡಿ ಪರೀಕ್ಷಾಕವಿಯಾಟಿಯವರಿಗೆ ಸಂತೋಷ

ವಾಗಿರುತ್ತದೆ. ಪರೀಕ್ಷೆಯಲ್ಲಿ ನಾಪಾಸಾದಂಥ ಎಮ್. ಎ. ನು ಗಣಿತ ವಿಷಯವನ್ನು ಕೆಲವು ದಿವಸಗಳಿಂದ ನೋಡದೆ ಇರುವದರಿಂದ ನಾಪಾಸಾದಂತೆ ತೋರುತ್ತದೆ. ಮತ್ತು ಬಿ. ಈ. ಪಾಸಾದವನು ಎಲ್ಲ ವಿಷಯಗಳಲ್ಲಿಯೂ ನಾಪಾಸಾಗಿರುತ್ತಾನೆ. ಸ್ಕೂಲಫಾಯನಲ್ಲದವನು ಅವಶ್ಯವಾದ ಗಣಿತ ವಿಷಯದಲ್ಲಿ ಎಲ್ಲರಿಗಿಂತ ಹೆಚ್ಚು ಗುಣಗಳನ್ನು ಪಡೆದನು; ಆದರೆ ಭಾಷಾವಿಷಯವು ಅವನಿಗೆ ವಿಚಾರಿದ್ದಿದ್ದರಿಂದ ಆಪ ನು ಉತ್ತರಗಳನ್ನು ಬರೆಯದೆ ಹಾಗೇ ಎದ್ದು ಹೋದನು. ಇಂಗ್ಲಿಷ ನಿಬಂಧ ವಿಷಯದ ಪರೀಕ್ಷಕರು ಕೇವಲ ಇಬ್ಬರು ಮಾತ್ರ ಸಾಧಾರಣ ಸರಿಬರುವಂಥ ನಿಬಂಧಗಳನ್ನು ಬರೆದರೆಂದು ತಿಳಿಸುತ್ತಾರೆ.

ಈ ರಿಪೋರ್ಟನ್ನು ಲಕ್ಷ್ಯಕೊಟ್ಟು ಓದುವವರಿಗೆ ಶಾಲಾ ಭ್ಯಾಸಕ್ರಮದಲ್ಲಿ ಇರುವ ದೊಡ್ಡದೊಂದು ಕುಂದು ತೋರದೆ ಇರದು. ನಿಬಂಧ ಬರಿಯೋಣವು ಕನ್ನಡದಲ್ಲಾಗಲಿ, ಇಂಗ್ಲಿಷದಲ್ಲಾಗಲಿ ೧೦೦ ರಲ್ಲಿ ೯೯ ಜನ ವಿದ್ಯಾರ್ಥಿಗಳಿಗೆ ಬರುವದಿಲ್ಲೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ವಿದ್ಯಾಪೀಠದಿಂದ ಹೇಲಾದ ನಿಬಂಧ ಬರೆದವರಿಗೆ ವರ್ಷಾ ಸುವರ್ಷ ಎಷ್ಟೋ ಉಚಿತಗಳು ಸಿಗುವಂತಿವೆ. ಆದರೆ ನಿಬಂಧ ಬರೆಯುವವರು ಮೂಲತಃ ಕಡಿಮೆ. ಬರೆದ ನಿಬಂಧಗಳಾದರೂ ಸಮಂಜಸವಾಗಿರದ್ದರಿಂದ ಯಾರೂ ಬಹುಮಾನವನ್ನು ಹೊಂದದೆ ಉಚಿತದ ಹಣವು ಹಾಗೇ ಉಳಿಯುತ್ತದೆ. ವಿದ್ಯಾಪೀಠದ ಈ ದುಸ್ಥಿತಿಯನ್ನು ನೋಡಿ ಕಾಲೇಜದಲ್ಲಿ ಸಹ ಈ ವಿಷಯಕ್ಕೆ ಸರಿಯಾಗಿ ಲಕ್ಷ್ಯ ಕೊ ರೈಸಲ್ಪಡುವದಿಲ್ಲೆಂಬದನ್ನು ಕಂಡು ಸಖೇದಾಶ್ಚರ್ಯವಾಗದೆ ಇರದು. ನೂರುಜನ ಯುರೋಪಿಯನ್ ವಿದ್ಯಾರ್ಥಿಗಳಲ್ಲಿ ಒ ಬ್ಬನಾದರೂ ಹೇಳವಂಥ ವ್ಯಾಕರಣದ ಕೂಟ ಪ್ರಶ್ನೆಗಳನ್ನೂ ಭಾಷಾ ತಾರತಮ್ಯ ವಿಷಯದ ಪ್ರಶ್ನೆಗಳನ್ನೂ ನಮ್ಮ ವಿದ್ಯಾ ರ್ಥಿಗಳು ಸಹಜವಾಗಿ ಬಿಡಿಸುವರು. ಅವರ ಈ ವಿಷಯ ದಲ್ಲಿಯ ಕೌಶಲ್ಯವನ್ನು ಕಂಡು ಪಂಡಿತರು ಚಕಿತರಾಗುವರು. ಆದರೆ ನಿಬಂಧರಚನಾ ವಿಷಯವು ಇಷ್ಟು ಬಿಗಿಯಾಕರಿಸು

ತ್ತದೆ ಎಂಬದನ್ನು ಪೂರ್ಣವಾಗಿ ವಿಚಾರಿಸುವದೂ ಈ ಕುಂದನ್ನು ಹೋಗಲಾಡಿಸುವದೂ ಶಾಲಾಗುರುಗಳ ಅವಶ್ಯವಾದ ಕರ್ತವ್ಯವಾಗಿರುತ್ತದೆಂದು ನಾನು ಸಾರಿ ಹೇಳುತ್ತೇವೆ.

ಆಸ್ಟ್ರೇಲಿಯದ ಒಂದು ವರ್ತಮಾನಪತ್ರಿಕದಲ್ಲಿ ಕೆಳಗೆ ಬರೆದಂತೆ ಒಂದು ನೋಟೀಸು ಪ್ರಸಿದ್ಧವಾಗಿರುವದು:—

"ಒಂದು ಕುದುರೆ, ಕೆಲವು ಆಕಳು ಮತ್ತು ಹಂದಿಗಳನ್ನು ಕಾಯುವದಕ್ಕಾಗಿ ಒಬ್ಬ ಕಾಯುಂ ನೌಕರನು ಬೇಕಾಗಿರುವನು. ಹುಡುಗರಿಗೆ ಫ್ರೆಂಚ್ ಭಾಷೆಯ ಮೂಲತತ್ವಗಳನ್ನು ಗಾಯನವನ್ನು ಪಿಯಾನೊ ವಾದ್ಯವನ್ನು ಕಲಿಸಬಲ್ಲವನಿದ್ದರೆ ಹೆಚ್ಚು ಒಳ್ಳೇದು"

ಮೇಲಿನ ನೋಟೀಸಿನಂತೆ ಆಸ್ಟ್ರೇಲಿಯದಲ್ಲಿ ಆ ಕೆಲಸಕ್ಕೆ ತಕ್ಕ ಮನುಷ್ಯನಾದರೂ ಸಿಕ್ಕಿರಬಹುದು. ಈ ನೋಟೀಸಿನಿಂದ ತಿಳಿಯುವದೇನಂದರೆ, ಆಸ್ಟ್ರೇಲಿಯದಂಥ ಒಕ್ಕಲಾದ ಸೀಮೆಗಳಲ್ಲಿ ಕೈಯಿಂದ ಕೆಲಸ ಮಾಡುವವನಿಗೆ ಮಾತ್ರ ಅರ್ಥ ಪ್ರಾಪ್ತಿಯಾಗುತ್ತದೇ ಹೊರ್ತು ಬರೇ ಮಿದುಡಿನ ಉಪಯೋಗದಿಂದ ಜೀವಿಸುವವನು ಅನ್ನ ಕಾಣದೆ ಜೋಗುವನು. ಕೈಗಪ್ಪವೇ ಪ್ರಧಾನಜೀವನಸಾಧನವು. ಅದಕ್ಕೆ ಬುದ್ಧಿಯು ಸಹಾಯವಿದ್ದರಂತೂ ಮತ್ತೂ ಶ್ರೇಯಸ್ಕರವು. ನಮ್ಮ ದೇಶದಲ್ಲಿ ಈ ಸ್ಥಿತಿಯ ವಿಪರ್ಯಾಸವು ದೃಷ್ಟಿಗೆ ಬೀಳುತ್ತದೆ. ಇದನ್ನು ಸುಧಾರಿಸುವ ಉದ್ದೇಶದಿಂದ ಲಾರ್ಡ್ ರೇ ಧೊರೆಗಳು ಕೆಲವು ವರ್ಷಗಳ ಹಿಂದೆ ವಿದ್ಯಾಪೀಠದ ಪರಿಷತ್ತಿನಲ್ಲಿ ಉಪನ್ಯಾಸ ಮಾಡಿದರು. ಕ್ರಿಕೆಟಾದಿ ಆಟಗಳಿಗುತ್ತೇಜನ ಕೊಟ್ಟು ಶಾರೀರಸಾಮರ್ಥ್ಯವನ್ನು ಬೆಳಿಸುವ ಹವಣಿಕೆಯು ಇತ್ಯರ್ಥವಾದರೂ ನಮ್ಮ ಗ್ರಾಜುಯೇಟರಲ್ಲಿ ಕಂಡುಬರುವ ಕುಂದನ್ನು ದೂರ ಮಾಡುವದಿರುತ್ತದೆ. ನಮ್ಮ ತರುಣ ಜನರು ತಕ್ಕ ಶಾರೀರ ಬುದ್ಧಿ ಸಾಮರ್ಥ್ಯವುಳ್ಳವರಾಗಿ ಬೈಮುರಿದು ಮುಂಬರಹತ್ತಿದರೆ ನಮ್ಮ ಹಿಂದುಸ್ತಾನದ ದೈವವು ತೆರಿಯುವದೆಂದು ನಾವು ಖಂಡಿತವಾಗಿ ಹೇಳುತ್ತೇವೆ.

ಕಳೆದ ೩।೪ ವರ್ಷಗಳಿಂದ ನಮ್ಮ ಭಾಗದಲ್ಲಿ ಪ್ಲೇಗ ರೋಗವು ವ್ಯಾಪಿಸಿ, ಎಷ್ಟೋ ಜನರನ್ನು ಅಹುತಿಯಾಗಿ ತೆಗೆದುಕೊಂಡಿತು. ಅವರಲ್ಲಿ ನಮ್ಮ ಶಾಲಾಮಾಸ್ತರರೂ ಕೆಲವರಿರುವರು. ಇಂಥವರು ಪ್ಲೇಗಮೂಲಕವಾಗಿ ಸಾಲೆಗಳು ಬಂದಾದ್ದರಿಂದಲೂ ಪ್ಲೇಗಡ್ಯೂಟಿ ಮಾಡುವಾಗ್ಗೆ ಅವರಿಗೆ ಪ್ಲೇಗು ಬಂದು ಅಂಥಹ ಮರಣಪಟ್ಟಂಥವರ ನಿರಾಶ್ರಿತರಾದ ಹೆಂಡರುಮಕ್ಕಳಿಗೆ ನಮ್ಮ ಸಭೆಗಳು ಸರಕಾರದವರು ಅವರವರ ಕುಟುಂಬದ ಸ್ಥಿತಿಗತಿಗನುಸರಿಸಿ ಕೆಲವು ಪೆನಶನ್‌ವನ್ನಾಗಲಿ ಇಲ್ಲವೆ ಕೆಲವು ಉಚಿತ ಧನವನ್ನಾಗಲಿ ಕೊಡುತ್ತಿರುವರು. ಅದರಂತೆ ಧಾರವಾಡ ಜಿಲ್ಲಾ ನವಲಗುಂದ ತಾಲೂಕ ಮಣಕವಾಡದ ಶಾಲಾಮಾಸ್ತರನಾದ ಕೃಷ್ಣಾಜಿ ನರಸಿಂಹ ಎಂಬವನು ಅಲ್ಲಿ ಪ್ಲೇಗ ಶುರು ಇದ್ದ ಕಾಲದಲ್ಲಿ ಪ್ಲೇಗಡ್ಯೂಟಿ ಮಾಡುವಾಗ್ಗೆ ಪ್ಲೇಗ ಬಂದು ಸತ್ತನು. ಅದರಿಂದ ಅವನ ಹಿಂದೆ ಉಳಿದ ಅವನ ಒಬ್ಬ ಹೆಂಡತಿ ಮತ್ತು ಇಬ್ಬರು ಚಿಕ್ಕ ಮಕ್ಕಳ ಸಂರಕ್ಷಣೆಗಾಗಿ ಸರಕಾರದವರು ಅವನ ಹೆಂಡತಿಯು ಜೀವಂತವಿರುವವರೆಗೆ ಪ್ರತಿ ತಿಂಗಳಿಗೆ ೫॥ ರೂಪಾಯಿಯಂತೆ ಪೆನಶನ್ ಕೊಡಬೇಕೆಂದು ಗೊತ್ತು ಮಾಡಿರುವರು. ಇದೇ ಮೇರೆಗೆ ಇನ್ನೂ ಕೆಲ ಜನ ಮಾಸ್ತರರ ಕುಟುಂಬದವರಿಗೆ ಸರಕಾರದಿಂದ ಸಹಾಯ ದೊರೆಕಿರುವದು. ಸರಕಾರದ ನೌಕರಿಯನ್ನು ಒಳ್ಳೇ ಇಮಾನದಿಂದ ಮಾಡುವವರಿಗೆ ಆಪತ್ಕಾಲದಲ್ಲಿ ಸಹಾಯ ಸಿಗುತ್ತದೆಂಬದು ಈ ಉದಾಹರಣೆಗಳಿಂದ ತಾನೇ ಸಿದ್ಧವಾಗುತ್ತದೆ.

ಮು. ರಾ. ರಾ. ಅಣ್ಣಾರಾವ ಸಾದಿ ವೈ. ಪ್ರಿ. ಟ್ರೇ. ಕಾಲೇಜ ಧಾರವಾಡ ಇವರು ತಿಸೆಂಬರ ತಿಂಗಳ ೧೯ನೇ ತಾ॥ ಬುಧವಾರ ದಿವಸ ವೈಕುಂಠವಾಸಿಗಳಾದರೆಂದು ತಿಳಿಸಲಿಕ್ಕೆ ವಿಷಾದಿಸುತ್ತೇವೆ ಇವರ ಶ್ರೋಟಕ ಚರಿತ್ರವನ್ನು ಮುಂಬಿನ ಸಂಚಿಕೆಯಲ್ಲಿ ಕೊಡುವೆವು.

CHEMISTRY.

ರಸಾಯನಶಾಸ್ತ್ರ.

(೭೩೪ ನೇ ಪುಟದಿಂದ ಮುಂದೆ ಸಾಗಿದ್ದು.)

೪೯. ಕಾರ್ಬೊನ್ನು ಅಥವಾ ಇದ್ದಲಿ—ಇದು ಘನಪದಾರ್ಥವು. ಅಸಂಯುಕ್ತಸ್ಥಿತಿಯಲ್ಲಿ ಕಟ್ಟಿಗೆಇದ್ದಲಿ, ಕಲ್ಲಿದ್ದಲಿ; ಬಿಳೀಇದ್ದಲಿ ಎಂಬ ಮೂರು ರೂಪಗಳಿಂದ ದೊರೆಯುತ್ತದೆ. ಆದರೆ ಇದರ ಇನ್ನೂ ಎರಡು ರೂಪಗಳುಂಟು. ವರ್ಣಹೀನವಾದಂಥ ಬಳ್ಳೀ ಬಿರುಸಾದ ವಜ್ರವು ಕಾರ್ಬೊನ್ನಿನ ಮೊದಲನೇ ರೂಪವು. ಸೀಸಪೇನಸಲಲ್ಲಿರುವ ಕರೀ ಸೀಸು ಅಥವಾ ಪ್ಲಂಬೇಗೊ ಎಂಬ ಬಡವೆಯು ಇದರ ಎರಡನೇ ರೂಪವು. ಅಂದರೆ ಇದ್ದಲಿ, ವಜ್ರ, ಪ್ಲಂಬೇಗೋ ಎಂಬ ಬಡವೆ, ಇವು ಮೂರು ಒಂದೇ ಪದಾರ್ಥದ ರೂಪಾಂತರವೆಂದು ರಸಾಯನಶಾಸ್ತ್ರಜ್ಞರು ಹೇಳುತ್ತಾರೆ. ಆದರೆ ನಿಮಗೆ ಈ ಮಾತಿನಲ್ಲಿ ನಂಬಿಗೆ ಹುಟ್ಟುವದೋ? ಎರಡು ಮೊರ ಇದ್ದಲಿಯನ್ನು ಕೊಟ್ಟರೆ ಒಂದು ವಜ್ರದ ಹರಳನ್ನು ಕೊಡುವಿರೋ? ಎಂದಿಗೂ ಕೊಡಲಾರಿರಿ. ಆದರೆ ನಮ್ಮ ಮಾತು ಸುಳ್ಳಲ್ಲ. ಈ ಮೂರು ಪದಾರ್ಥಗಳು ಒಂದೇ ಎಂಬದನ್ನು ಮನಗಾಣುವದಕ್ಕಾಗಿ ಕೆಳಗಿನ ಪ್ರಯೋಗವನ್ನು ಮಾಡಿನೋಡಿರಿ. ತುಸು ಕಟ್ಟಿಗೆ ಇದ್ದಲಿಯನ್ನು ಆಕ್ಸಿಜನದಲ್ಲಿ ಚೆಲ್ಲಿದರೆ ಅದರಿಂದ ಕಾರ್ಬಾನಿಕ್ ಆಸಿಡ್ ವಾಯುವು ಉತ್ಪನ್ನವಾಗುತ್ತದೆ. ಇದರಂತೆ ಪ್ಲಂಬೇಗೋದ ಅಥವಾ ವಜ್ರದ ಚಿಕ್ಕ ತುಂಡನ್ನು ಆಕ್ಸಿಜನ ವಾಯುವಿನಲ್ಲಿ ಸುಡುವದರಿಂದ ಸಹ ಕಾರ್ಬಾನಿಕ್ ಆಸಿಡ ವಾಯುವು ಹುಟ್ಟುತ್ತದೆ. ಇದರಿಂದ ಈ ಮೂರು ವಸ್ತುಗಳಲ್ಲಿ ಕಾರ್ಬೊನ್ನು ಇರುತ್ತದೆಂದು ಗೊತ್ತಾಯಿತು. ಸರಿ. ಇವು ಮೂರರಲ್ಲಿ ಕಾರ್ಬೊನ್ನಿನ ಹೊರತಾಗಿ ಮತ್ತೇನಾದರೂ ಉಂಟೋ? ಇಲ್ಲವೋ? ಇಲ್ಲ. ಈ ಮೂರು ಪದಾರ್ಥಗಳನ್ನು ೧೨-೧೫ ಗ್ರೇನಿನಷ್ಟು ತಕ್ಕೊಂಡು ಬೇರೆ ಬೇರೆ ಸುಡಲಾಗಿ ಒಂದೊಂದರಿಂದ ೪೪ ಗ್ರೇನು ಕಾರ್ಬಾನಿಕ್ ಆಸಿಡವು ಉತ್ಪನ್ನವಾಗುತ್ತದೆ. ಇದರಿಂದ ಇದ್ದಲಿಯೂ

ವಜ್ರವೂ ಒಂದೇ ವಸ್ತುವಿನ ರೂಪಾಂತರಗಳೆಂದು ನಿಮಗೆ ಮನದಟ್ಟಾಯಿತಷ್ಟೇ?

ವನಸ್ಪತಿಗಳಲ್ಲಿಯೂ, ಪ್ರಾಣಿಶರೀರಗಳಲ್ಲಿಯೂ ಕಾರ್ಬೊನ್ನೇ ಮುಖ್ಯ ಘಟಕವಾಗಿರುತ್ತದೆ. ಕಟ್ಟಿಗೆಯಿಂದ ಇದ್ದಲಿಯಾಗುವದರಿಂದ ಅದರಲ್ಲಿ ಕಾರ್ಬೊನ್ನುಂಟೆಂದು ನೀವು ಸಹಜವಾಗಿ ಒಪ್ಪಬಹುದು. ಇದರಂತೆ ಪ್ರಾಣಿಗಳ ಮಾಂಸವನ್ನಾದರೂ ಸುಟ್ಟರೆ ಇದ್ದಲಿಯಾಗುತ್ತದೆ. ಆದರೆ ಕಾಷ್ಠಮಾಂಸಗಳನ್ನು ಪೂರ್ಣವಾಗಿ ಸುಟ್ಟರೆ ಇದ್ದಲಿಯಾಗುವದಿಲ್ಲ. ಯಾಕಂದರೆ ಕಾರ್ಬೊನ್ನೆಲ್ಲ ಕಾರ್ಬಾನಿಕ್ ಆಸಿಡಿನ ರೂಪದಿಂದ ಸುಟ್ಟುಹೋಗಿ ಬಿಳಿ ಬೂದಿ ಮಾತ್ರ ತಳಕ್ಕೆ ಉಳಿಯುವದು.

ಪ್ರಯೋಗ—೪೯. ವನಸ್ಪತಿಗಳಲ್ಲಿ ಕಾರ್ಬೊನ್ನು ಇರುತ್ತದೆಂದು ಕೆಳಗಿನ ಪ್ರಯೋಗದಿಂದ ಸಿದ್ಧವಾಗುತ್ತದೆ. ಒಂದು ಕಾಜಿನ ಪಾತ್ರೆಯಲ್ಲಿ ತುಸು ಬಿಳೇ ಸಕ್ಕರೆಯನ್ನು ಹಾಕಿ ಮೇಲೆ ಜಿನಿನೀರು ಸುರುವಿ ಪಾನಕ ಮಾಡು. ಬಳಿಕ ಆ ಪಾನಕದಲ್ಲಿ ತೀಕ್ಷ್ಣವಾದ ಗಂಧಕಾಮ್ಲವನ್ನು ಹಾಕು. ಆಗೋ ಆ ಪಾನೆಕವು ಕರ್ರಗಾಗಿ ಕುದಿಯಹತ್ತಿತು. ನೋಡು ಬಿಳೇ ಸಕ್ಕರೆಯು ಕರೇ ಇದ್ದಲಿಯ ರೂಪವನ್ನು ಧರಿಸಿತು. ಈ ಇದ್ದಲಿಯ ಅಂಶವು ಸಕ್ಕರೆಯಲ್ಲಿ ಮೊದಲಿಗೆ ಗುಪ್ತವಾಗಿ ಇತ್ತು. ಆದರೆ ಈಗ ಪ್ರತ್ಯಕ್ಷವಾಗಿ ಕಾಣಿಸಿತು.

ಈ ಕಾರ್ಬೊನ್ನೆಂಬ ಮೂಲತತ್ವವು ಮೂಲತಃ ಇಲ್ಲದಿದ್ದರೆ ಏನಾಗುತ್ತಿತ್ತು? ಭೂಮಿಯಲ್ಲಿ ಪ್ರಾಣಿಗಳೂ ವನಸ್ಪತಿಗಳೂ ಹುಟ್ಟುತ್ತಿಬ್ದೇ ಇಲ್ಲ. ಹೀಗಾಗುವದರಿಂದ ಭೂಲೋಕವ ಈಗಿನ ಸೌಂದರ್ಯವು ಗೋಚರವಾಗುವ ಬಗೆ ಏನು? ಅಥವಾ ನೋಡುವವರಾದರೂ ಯಾರು? ನಮ್ಮ ನಿಮ್ಮ ಜೀವನಾತ್ಪಯನವ ಸಂಭವವೆಂತು? ನೋಡಿರಿ ಕಾರ್ಬೊನ್ನಿನ ಮಹತ್ವವೆಷ್ಟುಂಟು. ಪ್ರಾಣಿಶರೀರದಲ್ಲಿಯೂ ವನಸ್ಪತಿಗಳಲ್ಲಿಯೂ ಮಾತ್ರ ಕಾರ್ಬೊನ್ನಿರುವದೆಂದು ತಿಳಿಯಲಾಗದು. ಹವೆಯೊಳಗಿನ ಕಾರ್ಬಾನಿಕ್ ಆಸಿಡ ವಾಯುವು ಕಾರ್ಬೊನ್ನಿನಿಂದ ಉತ್ಪನ್ನವಾಗಿರುತ್ತದಷ್ಟೇ? ಆ ವಾ

ಯುನಿನೊಳಗಿನ ಕಾರ್ಬೊನ್ನಿನಿಂದಲೇ ವನಸ್ಪತಿಗಳ ಪೋಷಣವಾಗುತ್ತದೆಂದು ಹಿಂದೆ ೯ನೇ ಪ್ರಯೋಗದಲ್ಲಿ ಹೇಳಿದ್ದು ನಿಮಗೆ ನೆನಪಿರಬಹುದು. ಖಡುವಿನ ಗುಡ್ಡ, ಸುಣ್ಣದ ಹರಳಿನ ಬಂಡೆ, (ಸುಣಬುರಲಿಯ ಬಂಡೆ) ಸಂಗಮರವರೀ ಕಲ್ಲು ಮುಂತಾದ ಪದಾರ್ಥಗಳಲ್ಲಿಯಾದರೂ ಕಾರ್ಬೊನ್ನಿನಿಂದ ಉತ್ಪನ್ನವಾದ ಕಾರ್ಬಾನಿಕ್ ಆಸಿಡ ವಾಯುವು ಇರುತ್ತದೆ.

೧೪ನೇ ಪಾಠ.

ಅಧಾತುವರ್ಗದ ಮೂಲತತ್ವಗಳು.

೫೯. ಕ್ಲೋರಿನ್ ಅಥವಾ ಹರಿತ್ ಪೀತಾಮ್ಲ— ಹಿಂದಿನ ಪಾಠದಲ್ಲಿ ವರ್ಣಿಸಿದ ಪದಾರ್ಥಗಳ ಗುಣಧರ್ಮಗಳಿಗೂ ಈ ಪದಾರ್ಥದ ಗುಣಧರ್ಮಕ್ಕೂ ಹೆಚ್ಚು ಕಡಿಮೆ ಉಂಟು. ಇದಕ್ಕೆ ಹಸುರು ಕೂಡಿದ ಹಳದೀ ಬಣ್ಣವೂ, ಉಗ್ರವಾದ ಗಂಧವೂ ಉಂಟು ಇದು ವಿಷದ ಪದಾರ್ಥವು. ಅಸಂಯುಕ್ತಸ್ಥಿತಿಯಲ್ಲಿ ದೊರಿಯುವದಿಲ್ಲ. ಇದನ್ನು ತಿನ್ನುವ ಉಪ್ಪಿನಿಂದ ತೆಗೆಯಬಹುದು. ಈ ವಾಯುವೂ ಸೋಡಿಯಂ ಧಾತುವೂ ಸಂಯೋಗವಾಗಿ ಉಪ್ಪು ಉತ್ಪನ್ನವಾಗಿರುತ್ತದೆ. ಆದ್ದರಿಂದ ರಸಾಯನಶಾಸ್ತ್ರಜ್ಞರು ಉಪ್ಪಿಗೆ ಸೋಡಿಯಂ ಕ್ಲೋರಾಯಿಡ್ ಎಂಬ ಅನ್ವರ್ಥಕನಾಮವನ್ನು ಕೊಟ್ಟಿದ್ದಾರೆ.

ಪ್ರಯೋಗ—೪೦. ಕ್ಲೋರಿನ ವಾಯುವನ್ನು ತೆಗೆಯುವ ಕೃತಿ–ತುಸು ಉಪ್ಪಿನಲ್ಲಿ ಬ್ಲ್ಯಾಕ್ ಆಕ್ಸಾಯಿಡ್ ಆಫ್ ಮ್ಯಾಂಗನೀಜ ಎಂಬ ಪುಡಿಯನ್ನು ಮಿಶ್ರಮಾಡಿ ಕಾಜಿನ ಹೂಜಿಯಲ್ಲಿ ಹಾಕು. ಬಳಿಕ ನೀರು ಗಂಧಕಾರ್ಕಗಳನ್ನು ಸಮಪ್ರಮಾಣದಲ್ಲಿ ಕೂಡಿಸಿ ಈ ಮಿಶ್ರಣವನ್ನು ಅದೇ ಪಾತ್ರೆಯಲ್ಲಿ ಸುರುವು. ಆಕೃತಿಯಲ್ಲಿ ತೋರಿಸಿದಂತೆ ಪಾತ್ರೆಯ ಬಾಯಿಗೆ ಸೊಟ್ಟ ಕೊಳವೆಯನ್ನು ಕೂಡಿಸಿ ಅಡ್ಡಣಿಗೆಯ ಮೇಲೆ ಪಾತ್ರೆಯನ್ನು ಇಟ್ಟು ಬುಡಕ್ಕೆ ದೀಪವನ್ನು ಇಡು. ಆಗೋ ಆ ಸೊಟ್ಟ ಕಳಿಗೆಯ ಎರಡನೇ ಬಾಯಿಂದ ಉಗ್ರ ಗಂಧವುಳ್ಳ ಪೀತವರ್ಣದ ವಾಯುವು ಹೊರಡಹತ್ತಿದೆ.

ಬರಡನೇದೊಂದು ಬಣಸೀಸೆಯನ್ನು ತಕ್ಕೊಂಡು ಅದರಲ್ಲಿ ಈ ವಾಯುವನ್ನು ಹಿಂಡಿದಿಡು. ಇದೇ ಕ್ಲೋರಿನ್ ವಾಯುವು. ಇದು ಉಪ್ಪಿನಲ್ಲಿ ಸೋಡಿಯಂ ಧಾತುವಿನೊಡನೆ ಬೆರತುಕೊಂಡಿತ್ತು. ಈ ವಾಯುವನ್ನು ಮೂಸಿ ನೋಡಬೇಡ. ಗಂಟಲು ಉರಿದೀತು ಇಲ್ಲವೆ ಕೆಮ್ಮು ಬಂದೀತು. ಈ ವಾಯುವು ಅನೇಕ ಧಾತುಗಳೊಡನೆ ಸಂಯೋಗವಾಗಿ ತರತರದ ಹರಿತ ಖೀತಾಮ್ಲದ ಮಿಶ್ರಣಗಳನ್ನು ಹುಟ್ಟಿಸುತ್ತದೆ. ಕ್ಲೋರಿನ್ ವಾಯುವಿನ ಸೀಸೆಯಲ್ಲಿ ಬಂದು ಚಿಮ್ಮಟಿಗೆಯಷ್ಟು ಅಂಟಿಮನಿಯೆಂಬ ಧಾತುವಿನ ಪುಡಿಯನ್ನು ಚಲ್ಲು. ಅದು ನೋಡು ಬಣ್ಣ ಬಣ್ಣ ಕಿಡಿಗಳು ಹುಟ್ಟಹತ್ತಿವೆ. ಮತ್ತು ಬಿಳೀ ಹೊಗೆಯೂ ಹೊರಡಹತ್ತಿದೆ. ಈ ಹೊಗೆಗೆ ಅಂಟಿಮನಿ ಕ್ಲೋರೈಡ್ ಎಂಬ ಹೆಸರು. ಈ ವಾಯುವಿನಲ್ಲಿ ಕೆಲವು ಪದಾರ್ಥಗಳು ಸುಡುತ್ತವೆ. ಮತ್ತು ಇದು ಅನ್ಯ ಪದಾರ್ಥದೊಡನೆ ರಸಾಯನಸಂಯೋಗವನ್ನು ಹೊಂದುವಾಗ ಶಕ್ತಿಯುಲುತ್ಪನ್ನವಾಗುತ್ತದೆ.

ಈ ವಾಯುವಿನಲ್ಲಿ ಪದಾರ್ಥಗಳನ್ನು ನಿರ್ಮಲ ಮಾಡುವಂಥ ಅಪರ್ಣಾನೀಯ ಶಕ್ತಿಯುಂಟು. ಆದ್ದರಿಂದ ವಿಧವಿಧದ ಬಣ್ಣವುಳ್ಳ ನೂಲುಣ್ಣೆಯ ಬಟ್ಟೆಗಳನ್ನು ನಿರ್ಮಲ ಮಾಡುವದಕ್ಕೆ ಇದನ್ನು ಉಪಯೋಗಿಸುತ್ತಾರೆ. ಇಗೋ ನಮ್ಮ ಈ ಕ್ಲೋರಿನ್ ವಾಯು ತುಂಬಿದ ಸೀಸೆಯಲ್ಲಿ ಈ ಬಣ್ಣದ ಚಿಂದಿಯನ್ನು ಚಲ್ಲಿ ಈ ಸೀಸೆಯನ್ನು ಗಲ್ಲಿಸುತ್ತೇನೆ. ಅಗೋ! ಆ ಚಿಂದಿಯನ್ನು ನೋಡು ಅದರ ಬಣ್ಣವೆಲ್ಲ ಹೋಗಿ ಪ್ಯಾಗೆ ನಿರ್ಮಲವಾಗಿ ಕಾಣುತ್ತದೆ?

ಕೋಟೆಯಲ್ಲಿ ವರ್ಣನಾಶಕ ಪುಡಿಯು ಮಾರಲಿಕ್ಕೆ ಸಿಗುತ್ತದೆಂದು ನಿಮಗೆ ಗೊತ್ತುಂಟು. ಅದರಲ್ಲಿ ಕ್ಲೋರಿನ್ ವಾಯುವು ಇರುತ್ತದೆ. ಈ ಪುಡಿಯನ್ನು ತುಸು ತಕ್ಕೊಂಡು ಬಂದು ಸೀಸೆಯಲ್ಲಿ ಹಾಕಿ ಮೇಲೆ ಜಲಮಿಶ್ರಿತ ಗಂಧಕಾಮ್ಲವನ್ನು ತುಸು ಸುರುವಬೇಕು. ಇದರಿಂದ ಪುಡಿಯೊಳಗಿರುವ ಕ್ಲೋರಿನ್ ವಾಯುವು ಬೇರೆಯಾಗಿ ಹೊರಬೀಳಹತ್ತುವದು. ಬಂದು ಬಣ್ಣದ ಚಿಂದಿಯನ್ನು ತೊಯಿಸಿ ಈ ವಾಯುವು

ಹಿಡಿ. ಅಂದರೆ ಅದು ನಿರ್ಮಲವಾಗುವದು. ಇದರಿಂದ ಇದು ಕ್ಲೋರಿನ್ ವಾಯುವೆಂದು ನಿನಗೆ ಮನವರಿಕೆಯಾಗುವದು.

(ಸಶೇಷ)

S. D. Edl CONFERNCE 1900.

ವಿದ್ಯಾಭಿವೃದ್ಧಿಗಳ ಪರಿಷತ್ತು ದ ಭಾ. ೧೯೦೦.

(೨೬ನೇ ಪುಟದಿಂದ ಮುಂದೆ ಸಾಗಿದ್ದು.)

೩ನೇ ದಿವಸ.

ಮಿ ಕಾದ್ರಿ (ವಿಜಾಪುರ ಜಿಲ್ಲೆಯ ಅ. ಡಿ.) ಯವರು ಪ್ರಾಥಮಿಕ ಉರ್ದು ಶಾಲೆಗಳ ಇಯತ್ತ್ಹೆಗಳ ಸಂಬಂಧದಿಂದ ಒಂದು ನಿಬಂಧವನ್ನೋದಿದರು. ಅದರಲ್ಲಿ ಅವರು "ಈಗಿರುವ ಕನ್ನಡ ವಾಚನ ಪುಸ್ತಕಗಳನ್ನೆ ಉರ್ದು ಭಾಷೆಯಲ್ಲಿ ಭಾಷಾಂತರಿಸಿ, ಉರ್ದು ಶಾಲೆಯಲ್ಲಿ ಉಪಯೋಗಿಸುವದು ಚಲೋದು, ಪೆಂಜಾಬದ ಅಥವಾ ಮುಂಬಯಿಯ ಪುಸ್ತಕಗಳನ್ನುಪಯೋಗಿಸುವದು ಲಾಭದಾಯಕವಲ್ಲ. ಮತ್ತು ಮೇಲಿನ ೩ ಇಯತ್ತ್ಹೆಗಳಲ್ಲಿ ಪಾರ್ಸಿ ಭಾಷೆಯನ್ನು ತಕ್ಕ ಮಟ್ಟಿಗೆ ಕಲಿಸುವದು ತಕ್ಕದ್ದು, ಉರ್ದು ಹೆಣ್ಣುಮಕ್ಕಳ ಶಾಲೆಯಲ್ಲಿ ಕುರಾನಿನ ಅಭ್ಯಾಸವನ್ನು ಅಲ್ಪಪ್ರಮಾಣದಿಂದ ಸಾಗಿಸಬೇಕು. ಉರ್ದು ಭಾಷೆಯ ವ್ಯಾಕರಣವು ಚಲೋದಿಲ್ಲ. ಈ ಕೊರತೆಯನ್ನು ಪೂರ್ಣ ಮಾಡಬೇಕು ಕನ್ನಡ ಹೆಣ್ಣುಮಕ್ಕಳ ಇಯತ್ತ್ಹೆಯಂತೇ ಉರ್ದು ಹೆಣ್ಣುಮಕ್ಕಳ ಇಯತ್ತ್ಹೆಗಳಿರಬೇಕು ಮೊದಲಿನ ೩ ಇಯತ್ತ್ಹೆಗಳಲ್ಲಿ ಕವಿತೆಗಳನ್ನು ಬಾಯಿಪಾಠ ಅಂದರೆ ಸಾಕು. ಅವುಗಳ ಅರ್ಥ ಭಾವಾರ್ಥಗಳನ್ನು ಕಲಿಯುವದು ಬೇಡ" ಎಂದು ಬರೆದಿದ್ದರು. ಬಳಿಕ ಬಂಕಾಪುರ ಹಿಂದೀ ಶಾಲೆಯ ಮಾಸ್ತರರು ಒಂದು ನಿಬಂಧವನ್ನೋದಿದರು. ಅವರು ತಮ್ಮ ನಿಬಂಧದಲ್ಲಿ ಮುಸಲ್ಮಾನರು ತೀರ ಬಡತನದ ಸ್ಥಿತಿಯಲ್ಲಿರುವದರಿಂದಲೂ, ಅವರಿಗೆ ಇನ್ನೂ ವಿದ್ಯದ ಅಭಿರುಚಿಯು ಸಾಕಷ್ಟು ಇಲ್ಲದ್ದರಿಂದಲೂ, ಈಗಿರುವ ವಿಷಯಗಳಿಗಿಂತ ಹೆಚ್ಚಿಗೆ ವಿಷಯಗಳನ್ನು ಸೇರಿಸುವದು ಅಗತ್ಯವಿಲ್ಲ. ಪ್ರಸ್ತುತದಲ್ಲಿ ಸೂಚಿಸಿನ ಇಯತ್ತ್ಹೆಗಳಲ್ಲಿ ಬೇಕಾದ್ದಕ್ಕಿಂತ ಹೆಚ್ಚಿನ

ಷಯಗಳು ಸೇರಿಸಲ್ಪಟ್ಟವೆ. ೩ನೇ ಇಯತ್ತ್ತಿಗೆ ಅಖಿಲಾ
ಕಾಶಿ ಪುಸ್ತಕವು ಹೆಚ್ಚು ಗಡಚಿನಿಸುವದು. ಕೆಲವ
ರ್ಗಗಳ ಮೊದಲು ಪ್ರೈಕ್ಟಿಸಿಂಗಸ್ಕೂಲಲ್ಲಿ ಐದು ರೂಪಾ
ಯ ಸಂಬಳದೊಂದಿಗೆ ಮುಸಲ್ಮಾನ ವಿದ್ಯಾರ್ಥಿಗಳನ್ನು
ಕ್ಕೊಂಡು ಅವರಿಗೆ ೬ನೇ ಇಯತ್ತ್ತೆಯನ್ನು ಕಲಿಸುತ್ತಿದ್ದಾಂ
ಈಗಾದರೂ ಕಲಿಸಲಾರಂಭಿಸಿದರೆ ಮುಸಲ್ಮಾನ ವಿದ್ಯಾ
ರ್ಥಿಗಳಿಗೆ ಉತ್ತೇಜನ ದೊರೆಯುತ್ತದೆ, ಎಂಬ ಅಭಿಪ್ರಾ
ಯವನ್ನು ಉಲ್ಲೇಖಿಸಿದ್ದರು, ಬಳಿಕ ಇದೇ ವಿಷಯದ ಸಂ
ಬಂಧದಿಂದಲೇ ಕಿಟ್ಟೂರ ಉರ್ದು ಶಾಲೆಯ ಮಾಸ್ತರರಾದ
ಎ. ಶಮಸುದ್ದೀನ ಎಂಬವರು ಒಂದು ನಿಬಂಧವನ್ನೋದಿದ
ರು. ಇವರ ಸೂಚನೆಗಳೆಲ್ಲ ಮೇಲೆ ಹೇಳಿದ ಎರಡು ನಿಬಂ
ಧಗಳಲ್ಲಿ ಬಂದುಹೋಗಿವೆ. ಆ ಮೇಲೆ ಮಿ. ರಾಣೀಬಿನ್ನಾ
ಶಿವಮೂರ್ತಯ್ಯನವರು ಒಂದು ನಿಬಂಧ ಓದಿದರು.
ದರಲ್ಲಿ ಅವರು ಮುಖ್ಯವಾಗಿ ಹಳ್ಳಿಗಾಡ ಜನರಿಗೆ ಅಂದರೆ
ಕ್ಕಲಿಗರಿಗೆ (ಯಾಕಂದರೆ ನಮ್ಮ ದೇಶದಲ್ಲಿ ೧೦೦ ರಲ್ಲಿ ೯೦
ಂದಿ ಒಕ್ಕಲಿಗರೇ) ಅವಶ್ಯಕವಾದ ಒಕ್ಕಲತನದ ನಿಯ
ಮದ ಪುಸ್ತಕವನ್ನೂ ವನದ ಬೇನೆಯ ಕಾರಣ ಲಕ್ಷಣನಿದಾ
ನಗಳನ್ನೂ ವಿವರಿಸುವ ಪುಸ್ತಕವನ್ನೂ, ಓದಿಸಿ ಅವುಗಳ
ನ್ನಾನ ಮಾಡಿಕೊಡುವದು ಅತ್ಯಾವಶ್ಯವೆಂದು ಹೇಳಿದರು.
ರುವಾದು ಮಿ. ಕೇತಕರ (ಬಾಗಲಕೋಟೆಯ ಅಂಗ್ಲೋ
ರ್ನಾಕ್ಯುಲರ ಸಾಲೆಯ ಮಾಸ್ತರರು; ತಮ್ಮ ಸಾಲೆಗೆಂದು
ರತ್ತುಪಡಿಸಿದ ಇಯತ್ತ್ತೆಗಳನ್ನು ಕುರಿತು ಒಂದು ನಿಬಂ
ಧವನ್ನೋದಿದರು. ಈಗ ಪ್ರಚಾರದಲ್ಲಿರುವ ಇಯತ್ತ್ತೆಗಳ
ನ್ನು ಬದಲಿಸಿ ಈ ಹೊಸ ಇಯತ್ತ್ತೆಗಳನ್ನು ಅಮಲಿನಲ್ಲಿ
ರುವದು ಒಳ್ಳೇದಲ್ಲ. ಮೊದಲಿದ್ದವುಗಳೇ ಚಲೋವವೆ.
ಸ್ಯದ ಮೂಲತತ್ವಗಳೆನಿಸುವ ಓದು, ಬರಹ, ಲೆಖ್ಖ, ಇ
ವೇ ಮೂರು ವಿಷಯಗಳು ಸರ್ವರು ತಮ್ಮ ತಮ್ಮ ನಿರ್ವಾ
ಹ ಸಾಗಿಸಿಕೊಳ್ಳುವದಕ್ಕೆ ತಕ್ಕವರನ್ನು ಮಾಡಲಿಕ್ಕೆ ಸಮ
ರ್ಥವಾಗಿರುತ್ತವೆ. ಬೇರೆ ಬೇರೆ ವರ್ಗದ ಜನರಿಗೆ ಅವರ
ರಿಗೆ ತಕ್ಕಂಥ ಬೇರೆ ಬೇರೆ ತರದ ಶಾಲೆಗಳನ್ನು ಸ್ಥಾಪಿಸಿ

ಬೇಕು. ಈ ಶಾಲೆಗಳು ಕೇವಲ ಸರಕಾರವನ್ನೇ ಅವಲಂಬಿಸದೆ ಸಪ್ಲೃಹಸರಿಂದ ನಡಿಸಲ್ಪಡಬೇಕು. ಫ್ರಾನ್ಸಿನಲ್ಲಿ ಕೆಲಕೆಲವು ವಿಷಯಗಳನ್ನು ಆಯಾ ವಿಷಯದಲ್ಲಿ ನಿಷ್ಣಾತರಾದ ಪಂಡಿತರು ವ್ಯಾಖ್ಯಾನರೂಪದಿಂದ ಜನರಿಗೆ ಕಲಿಸುತ್ತಿರುವಂತೆ ಈ ದೇಶದಲ್ಲಿಯಾದರೂ ಆ ಮಾದರಿಯ ಶಿಕ್ಷಣವು ಅವಶ್ಯವಾಗಿ ನಡೆಯಬೇಕೆಂದು ಸೂಚಿಸಿದರು. ತರುವಾಯ ಕಾರವಾಡ ಹಿಂದೂ ಶಾಲೆಯ ಮ್ಯಾನೇಜರರಾದ ಮಿ. ಕಾಮತ ಇವರು ಬರೆದ ಮಧ್ಯಮ ತರದ ಶಾಲೆಗಾಗಿ ಗೊತ್ತುಪಡಿಸಿದ ಇಯತ್ತೆಗಳು ಎಂಬ ವಿಷಯದ ನಿಬಂಧವನ್ನು ವಿಜಾಪುರದ ಡಿ ಇ. ರಾ ಸಾ. ಅಂಕಲೆಯವರು ಓದಿದರು. ಅದರಲ್ಲಿ ಶಾಲೆಯು ಕವಾಯಿತು ಅವಶ್ಯಕವಾಗಿರಬೇಕೆಂತಲೂ, ವಸ್ತುಸಾತವೊಂದು ಪುಸ್ತಕವು ಇರಬೇಕೆಂತಲೂ, ಈಗಿರುವ ಇಯತ್ತೆಗಳಲ್ಲಿ ಹೆಚ್ಚು ಕಡಿಮೆ ಮಾಡಲಿಕ್ಕೆ ಕಾರಣವಿಲ್ಲೆಂತಲೂ ಉಲ್ಲೇಖವಿತ್ತು. ತರುವಾಯ ಹಲಕೆಲವು ಹಿಂದೀ ಶಾಲೆಗಳ ಮಾಸ್ತರರು ಚಿಕ್ಕ ಪುಟ್ಟ ಸೂಚನೆಗಳನ್ನು ಮಾಡಿದರು. ಮುಖ್ಯವಾಗಿ ಪ್ರಾಕ್ಟಿಸಿಂಗಸ್ಕೂಲಿನಲ್ಲಿ ಸಂಬಳವೊಂದಿಗೆ ಮುಸಲ್ಮಾನೀ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಬೇಕೆಂಬದೇ ಅವರ ಭಾಷಣದ ಸಾರಾಂಶವಿತ್ತು. ಆ ಬಳಿಕ ಕಾಲೇಜದ ಶಾರೀರಶಿಕ್ಷಣದ ಶಿಕ್ಷಕರಾದ ಮಿ. ಖಾಂಡೇಕರರು ಒಂದು ನಿಬಂಧವನ್ನೋದಿದರು. ಅದರಲ್ಲಿ ಅವರು ಪ್ರಾಥಮಿಕ ಶಾಲೆಗಳಲ್ಲಿ ಶಾರೀರಶಿಕ್ಷಣವು ಅವಶ್ಯವಾಗಿ ಸಾಗುತ್ತಿರಬೇಕೆಂತಲೂ ಟ್ರೇಂಡರಾದ ಮಾಸ್ತರರು ಸುಲಭವಾಗಿ ಈ ಕಾರ್ಯವನ್ನು ನಡಿಸಬಹುದೆಂತಲೂ, ಅದರಿಂದ ಬಹಳ ಹಿತವುಂಟೆಂತಲೂ ಬರೆದಿದ್ದರು. ತರುವಾಯ ಅಧ್ಯಕ್ಷರು ಮೆಹರ್ಬಾನ ಮ್ಯಾರಸಾಹೇಬರು ಫಿ. ಟ್ರೇ. ಕ್ಲಾಸಕ್ಕೆ ಇಂದು ಇಟ್ಟ ಇನಾಮುಗಳನ್ನು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಮೂರು ಮಂದಿ ಹೆಣ್ಣುಮಕ್ಕಳಿಗೆ ಕೊಟ್ಟರು. ಅವರಲ್ಲಿ ಇಬ್ಬರು ತಮ್ಮ ನಿಬಂಧಗಳನ್ನು ಬಹು ಸರಸವಾಗಿ ಬರೆದು ತಮ್ಮ ಸಭೆಯಲ್ಲಿ ಓದಿದ್ದಕ್ಕಾಗಿ ಹೊಗಳಿದರು. ಅನಂತರ ಅಂಜ್ಯೆಗೇರಿ ಶಾಲೆಯ ಮಾಸ್ತರರಾದ ಮಿ. ಹೂಲಿ

ುವನ್ನು ಇಮುತ್ತುಗಳಲ್ಲ ಮಾಡಬೇಕಾದ ಸುಧಾರಣೆಗಳ
ಟ್ಟಿಯನ್ನೇ ಸಭೆಯು ಮುಂದಿಟ್ಟಿರು. ಈ ಪಟ್ಟಿಯು ಸಭೆ
ಬಂದ ಎಲ್ಲ ಅಧ್ಯಾಪಕರ ಅನುಮತಿಯಿಂದ ತಯಾರಿಸ
ಟ್ಟಿದ್ದು. ಅಮೇಲೆ ಪಟ್ಟಿ ಪೆಂಕಟರಾಯುರು ಮಾತಾಡಿ
ದರು ಇವರ ಸಾರಾಂಶವೆ—ಮರಾಠಿಯನ್ನು ಪ್ರೌಢಮಿಕ
ಶಾಲೆಗಳಲ್ಲಿಯೂ, ಟ್ರೇನಿಂಗಕಾಲೇಜದಲ್ಲಿಯೂ ಸೇರಿಸಬೇ
ಕು. ಸಾಭಿನಯ ಗೀತಗಳು ಬೇಕೆ, ನುಡಿಗಟ್ಟಿನಲ್ಲಿ ವಿಶೇಷ
ವಿಪ್ಪುಗಳಿರುವ ಕಾರಣ ಅದನ್ನು ಉಪಯೋಗಿಸುವ ಮೊದ
ಲು ತಿದ್ದಿಕೊಳ್ಳಬೇಕು. ಈ ಮಾದರಿಯು ಸಭೆಯು ವರ್ಷ
ಕ್ಕೊಮ್ಮೆ ಕೂಡುವದು ಒಳ್ಳೇದು, ವಾಯವ್ಯ ಇಲಾಖೆ
ಯ ಗವರ್ನರರಾದ ಸರ ಅಂಟೋನಿ ಮ್ಯಾಕ್‌ಡೋನಿಲ್
ರವರಿಗೆಳು ತಮ್ಮ ಪ್ರಾಂತದಲ್ಲಿ ಧರ್ಮಶಿಕ್ಷಣವನ್ನು ನಡಿಸಿ
ರುವ ಮಾದರಿಯಂತೆಯೇ ಈ ನಮ್ಮ ದಕ್ಷಿಣಭಾಗದಲ್ಲಿ
ಯೂ ಸಾಗಿಸಬೇಕೆಂದು ನಮ್ಮ ಅಪೇಕ್ಷೆ ಇರುತ್ತದೆ. ಔ
ದ್ಯೋಗಿಕ ಶಾಲೆಯನ್ನು ನಿಕೃಷ್ಟಪಕ್ಷಕ್ಕೆ ಜಿಲ್ಲೆಗೊಂದರಂ
ತಾದರೂ ಸ್ಥಾಪಿಸಬೇಕೆಂದು ನಮ್ಮ ಆಗ್ರಹಪೂರ್ವಕವಾದ
ಸೂಚನೆಯುಂಟು ಈ ಮೇರೆಗೆ ಇತ್ತು. ಬಳಿಕ ರಾ. ಸಾ.
ಕರಂದೀಕರರು ಭಾಷಣ ಮಾಡಿದರು. ಅವರು "ಪ್ರಸ್ತು
ತದಲ್ಲಿ ಸೂಚಿಸಿದ ಇಯತ್ತೆಗಳ ಅಭ್ಯಾಸಕ್ರಮದಲ್ಲಿ ವಿಶೇಷ
ವಿಷಯಗಳನ್ನು ಸೇರಿಸಿಲ್ಲ. ಆದರೆ ವಿಷಯಗಳನ್ನು ಸಶಾ
ಸ್ತ್ರವಾಗಿ ಹ್ಯಾಗೆ ಕಲಿಸಬೇಕೆಂಬದನ್ನು ವಿವರಿಸಿರುತ್ತದೆ.
ವಸ್ತುಪಾಠಗಳನ್ನೂ ಚಿತ್ರಕಲೆಯನ್ನೂ ಸೇರಿಸಿದ್ದು ಔದ್ಯೋ
ಗಿಕ ಶಿಕ್ಷಣವು ಆರಂಭದಲ್ಲಿಯೇ ದೊರೆಯಬೇಕೆಂಬ ಉ
ದ್ದೇಶದಿಂದಲೇ. ಸಾಭಿನಯ ಗೀತಗಳು ಚಿಕ್ಕ ಮಕ್ಕಳ
ಉಲ್ಲಾಸವೃತ್ತಿಯನ್ನು ಜಾಗ್ರತ ಪಡಿಸುವದಕ್ಕಾಗಿಯೇ ಸೇರಿ
ಸಲ್ಪಟ್ಟಿರುತ್ತವೆ. ಧರ್ಮಶಿಕ್ಷಣವು ಸರಕಾರೀ ಶಾಲೆಗಳಲ್ಲಿ
ಸಾಗುವದು ಅಸಂಭವವು, ಪಾಲಕರು ತಮ್ಮ ಮಕ್ಕಳಿಗಾಗಿ
ಬೇರೆವ್ಯವಸ್ಥೆಯನ್ನು ಮಾಡಿಕೊಳ್ಳಬಹುದು. ಕಾಲಾಪ್ಯವೇಕ್ಷ
ಯವು ಇಷ್ಟೇ ಇರಬೇಕೆಂದು ನಿರ್ಬಂಧ ಮಾಡುವದು ಸ
ರಕಾರದವರ ಮನಸ್ಸಿನಲ್ಲಿಲ್ಲ. ಇದ್ದರಿಂದ ಅವರು ನಾಲ್ಕು

ಎಷ್ಟೋ ಗಳಿಗೆ ತುಂಬಿದಬಳಿಕ ಬೇಕಾದ ವಯಸ್ಸಿನ ವಿದ್ಯಾರ್ಥಿಯನ್ನು ಶಾಲೆಯಲ್ಲಿ ತಕ್ಕೊಳ್ಳಬಹುದೆಂದು ಗೊತ್ತು ಮಾಡಿದ್ದಾರೆ. ಆದರೆ ಜನರು ತಮ್ಮ ತಮ್ಮ ಮಕ್ಕಳ ಸ್ಥಿತಿಗನುಸಾರವಾಗಿ ಬೇಕಾದಾಗ ಸಾಲೆಗೆ ಹಾಕಬಹುದು" ಅಂದರು.

(ಸಶೇಷ)

MANUAL OF METHOD.

ಶಿಕ್ಷಾಕ್ರಮ.

(೨೪೦ನೇ ಪುಟದಿಂದ ಮುಂದೆ ಸಾಗಿದ್ದು.)

ಮನುಷ್ಯರೆಲ್ಲರೂ ತಮ್ಮ ತಮ್ಮ ಚಟದ ಧೋರಣೆಯಿಂದ ನಡಿಯುತ್ತಾರೆ. ಆದರೆ ಕೇವಲ ಚಟಗಳಿಗೆ ಆಧೀನರಾಗಿ ನಡಿಯುವದು ಹಿತವಲ್ಲ. ಒಳ್ಳೇ ಚಟಗಳನ್ನು ಹಚ್ಚುವದೇ ಶಿಕ್ಷಕರ ಮೇಲಾದ ಕರ್ತವ್ಯವು. ಇದನ್ನು ಪೂರೈಸುವ ಶಿಕ್ಷಕನು ತನ್ನ ವಿದ್ಯಾರ್ಥಿಗಳಿಗೆ ಒಳ್ಳೇ ಚಟಗಳಿಂದ ಆಗುವ ಲಾಭಗಳನ್ನು ತಿಳಿಸಿ ಹೇಳಿ ಮನಗಾಣಿಸಿ, ಹುರಿದುಂಬಿಸಿ, ಆ ಚಟಗಳನ್ನು ಸಾಧಿಸುವ ಪ್ರಯತ್ನಕ್ಕೆ ಅವರನ್ನು ಪ್ರಚೋದಿಸಬೇಕು. ಮೇಲಾಗಿ ಇಚ್ಛೆಯ ಸಹಾಯವಿಲ್ಲದೆ ಒಳ್ಳೇ ಚಟಗಳನ್ನು ಸಾಧಿಸುವ ಬುದ್ಧಿಯು ಬಲಗೊಳ್ಳುವಂತೆ ಆ ಪ್ರಯತ್ನಗಳನ್ನು ಅವರಿಂದ ಪುನಃ ಪುನಃ ಮಾಡಿಸುವನು. ಚಟಗಳನ್ನು ನೆಲೆಗೊಳಿಸಲಿಕ್ಕೆ ಬಾಲ್ಯತ್ವವೇ ತಕ್ಕ ಕಾಲವು. ಆಗ್ಗೆ ಅನುಕರಣಸಾಮರ್ಥ್ಯವು ಬಲವಾಗಿರುತ್ತದೆ. ಸ್ವಂತ ಉದಾಹರಣೆಯಿಂದ ಈ ಸಾಮರ್ಥ್ಯಕ್ಕೆ ಕೆಲಸಗೊಟ್ಟು ಒಳ್ಳೇ ಚಟಗಳ ಬೆಳುವಣಿಗೆಯನ್ನು ಸಾಧಿಸತಕ್ಕದ್ದು. ವಿದ್ಯಾರ್ಥಿಗಳಲ್ಲಿ ಹುಟ್ಟಿದ ಒಳ್ಳೇ ಚಟಗಳ ಸಾಧನದ ಉತ್ಸಾಹಕ್ಕೆ ತತ್ಪರತೆಯು ನೆರವು ಬೇಕು. ಆಲಸ್ಯ ಅನಿಶ್ಚಯಗಳಿಂದ ಒಳ್ಳೇ ಚಟಗಳ ಸಾಧನಕ್ಕೆ ಅಡ್ಡಿಯಾಗುತ್ತದೆ ತಕ್ಕ ಕ್ರಮದಿಂದ ಒಳ್ಳೇ ಚಟಗಳನ್ನು ವಿದ್ಯಾರ್ಥಿಗಳಲ್ಲಿ ನೆಲೆಗೊಳಿಸಲು ಅದಕ್ಕೆ ವಿಪರೀತವಾಗಿ ನಡೆದುಬರುವದು ವಿದ್ಯಾರ್ಥಿಗಳಿಗೆ ಅಸಮ್ಮತಿಯೂ ಕಷ್ಟಪ್ರದವೂ ಆಗುತ್ತದೆ.

ದಾನತ್ ಅಥವಾ ಸುಶೀಲತೆ—ಈ ಗುಣವನ್ನು ಸಾಧಿಸು

ವದೇ ತಿದ್ದುವಿಕೆಯು ಮುಖ್ಯ ಪ್ರಯೋಜನವು. ಒಳ್ಳೇ ಚಟ
ಗಳನ್ನು ಸಾಧಿಸುವದರಿಂದ ಈ ಗುಣವು ತಾನೇ ಸಾಧ್ಯವಾ
ಗುತ್ತದೆ. ದಾನತ್ ಎಂಬ ಶಬ್ದವು ಬಹಳವ್ಯಾಪಕವಾಗಿರು
ವದು. ಆದರೆ ಶಿಕ್ಷಣದಲ್ಲಿ ಪ್ರವೃತ್ತಿ ಇಚ್ಛೆಗಳ ಮಾನ್ಯವಾದ
ಪ್ರತಿಪತ್ತಿಯೆಂಬ ಸಂಕುಚಿತವಾದ ಅರ್ಥದಿಂದ ಇ
ಯೋಗಿಸಲ್ಪಡುತ್ತದೆ.

ಉದ್ಯೋಗ, ಓರಣ, ಶಮೆ, ದಮೆ, ಸುವಿಚಾರಾವಲಂಬ
ಮುಂತಾದ ಆತ್ಮಹಿತಕ್ಕೆ ಅನುಕೂಲವಾದ ಒಳ್ಳೇ ಚಟಗ
ಳೂ, ವಿಧೇಯತ್ವ, ವಿನಯ, ನ್ಯಾಯ, ಸತ್ಯವಂತಿಕೆ, ಪರೋ
ಪಕಾರ ಮುಂತಾದ ಮನುಷ್ಯನ ಕರ್ತವ್ಯ ಪೂರ್ತಿಗೆ ಅನು
ಕೂಲವಾದ ಚಟಗಳೂ ದಾನತ್ ಎಂಬ ಗುಣದಲ್ಲಿ ಶೇರುತ್ತ
ವೆ. ಜೆನ್ಮಗರ್ಭಾಭಿನಿವೇಶನೇ ಈ ಗುಣದ ಮರ್ಮವು.
ಸತ್ಕೃತ್ಯಗಳನ್ನು ಮಾಡುವ ಪ್ರವೃತ್ತಿಗಳೂ ವಿಮೃಶ್ಯಕಾರಿ
ತ್ವವೂ ಈ ಗುಣದಲ್ಲಿ ಅಂತರ್ಭೂತವಾಗುತ್ತವೆ.

ದಾನತ್ ಅಥವಾ ಸುಶೀಲತೆಯು ಸಾಧನವು—ಆಯುಷ್ಯ
ಕ್ರಮದ ಆರಂಭವಷ್ಟು ವಿಚಾರಿಸಲು, ಆ ಕಾಲದ ಯಾವ
ತ್ತೂ ವ್ಯಾಪಾರಗಳು ಪರಪ್ರೇರಿತವಾಗಿರುತ್ತವೆಂದು ಸ್ಪಷ್ಟ
ವಾಗಿ ತೋರುತ್ತದೆ. ಚಿಕ್ಕ ಬಾಲಕರು ಎರಡನೆಯವರು
ಹೇಳಿದಂತೆಯೂ ಪ್ರೇರೆಪಿಸಿದಂತೆಯೂ ನಡಿಯುತ್ತಾರೆ. ಈ
ಗುಣದ ಉಪಕ್ರಮರೂಪವಾದ ವಿಧೇಯತ್ವವನ್ನು ಬಾಲಕ
ರಲ್ಲಿ ಹುಟ್ಟಿಸುವದೇ ಮೊದಲನೇ ಕಾರ್ಯವು. ಇದನ್ನು
ಪ್ರಸಂಗ ಬಂದಂತೆ ಅವರನ್ನು ಆಜ್ಞಾಪಿಸುತ್ತ, ನಿರಾಕರಿಸು
ತ್ತ, ಒಲಿಸುತ್ತ, ಬೋಧಿಸುತ್ತ, ತಿಳಿಸಿ ಹೇಳುತ್ತ ನೆರವೇರಿ
ಸಬೇಕು. ಇದಕ್ಕಾಗಿ ಪ್ರತಿಯೊಬ್ಬ ವಿದ್ಯಾರ್ಥಿಯು ಸ್ವಭಾವ
ವನ್ನು ತಿಳಕೊಳ್ಳುವದು ಅವಶ್ಯವು.

ಎರಡನೇಯವರಲ್ಲಿ ಒಳ್ಳೇತನವನ್ನು ಹುಟ್ಟಿಸಲಿಕ್ಕೆ ಸ್ವಂತ
ಒಳ್ಳೇತನವೇ ಬಲವಾದ ಸಾಧನವಾಗಿರುತ್ತದೆ. ಉತ್ತಮ
ಮನುಷ್ಯನ ಕೂಡ ಬಹುತರ ಎಲ್ಲರೂ ಒಳ್ಳೇತನದಿಂದ
ನಡಕೊಳ್ಳುವರು. ಆದರೆ ಪರಸ್ಪರ ಹಿತವನ್ನು ಸಂಪಾದಿಸು
ವ ಒಳ್ಳೇತನವನು ಬಗೆಯುವ ಅಧಮನನು ಬಯಬೀತಿ

ಯಿಂದಲೇ ಹಾದಿಗೆ ತರಬೇಕಾಗುವದು. ಇದಕ್ಕಾಗಿ ಉತ್ತಮಾಧಮರನ್ನು ವಿಂಗಡಿಸುವದು ಅವಶ್ಯವು. ಈ ವಿಶೇಷವನ್ನು ಮಾಡದಿದ್ದರೆ ಶಿಕ್ಷಕನು ಎಂಥವನಿದ್ದರೂ ಕೆಲಸವು ಕೈಗೂಡದು. "ತಪ್ಪು ಕೂಡ ಎರಡನೇಯವರು ನಡಕೊಂಡಂತೆ ತಾವು ಅವರ ಕೂಡ ನಡೆಯುತಕ್ಕದ್ದು" ಎಂಬ ನಿಯಮ. ಮಕ್ಕಿಂತ ಹೆಚ್ಚಿನ ಜ್ಞಾನವು ವಿದ್ಯಾರ್ಥಿಗಳಿಗೆ ಇರುವದಿಲ್ಲ. ಆದ್ದರಿಂದ ವಿದ್ಯಾರ್ಥಿಗಳ ಬೇರೆ ಬೇರೆ ಸ್ವಭಾವಗಳನ್ನರಿತು ತಕ್ಕ ಉಪಾಯವನ್ನು ಮಾಡದ ಶಿಕ್ಷಕನಿಂದ ವಿದ್ಯಾರ್ಥಿಗಳಲ್ಲಿ ಹೇಳಿಕೊಳ್ಳುವಂಥ ಸುಧಾರಣೆಯಾಗಲಾರದು.

ಕೇವಲ ಭೀತಿಯಿಂದಲೇ ಅಧಮತನ ಅಥವಾ ತಿಳಿಗೇಡಿತನವನ್ನು ಹೋಗಲಾಡಿಸುವದು ನಿಷ್ಪ್ರಯೋಜನಕರವಾಗಿರುವದು. ಇದರಿಂದ ಇಷ್ಟಕಾರ್ಯವು ಸಿದ್ಧವಾಗಲಾರದು. ಶಿಕ್ಷೆಯ ಉದ್ದೇಶ ಪ್ರಯೋಜನಗಳನ್ನೂ ತಾರತಮ್ಯವನ್ನೂ ಅರಿತು ವಿದ್ಯಾರ್ಥಿಗಳ ಸ್ವಭಾವವನ್ನು ಪರೀಕ್ಷಿಸಿ ಅವರಿಗೆ ಹಾದಿಗೆ ತರುವ ಯತ್ನ ಮಾಡುವದು ವಿಹಿತವು. ಆದರೆ ವಿದ್ಯಾರ್ಥಿಗಳ ಪ್ರವೃತ್ತಿಗಳನ್ನರಿತು ದುಷ್ಟ ಪ್ರವೃತ್ತಿಗಳು ತೋರಿದಾಗಲೇ ಕಿತ್ತುಹಾಕಿ ಒಳ್ಳೇ ಪ್ರವೃತ್ತಿಗಳನ್ನು ಬಲಗೊಳಿಸಿ ಆ ಮಾರ್ಗದಿಂದ ವಿದ್ಯಾರ್ಥಿಗಳನ್ನು ಹಾದಿಗೆ ತರುವದು ಹೆಚ್ಚು ಶ್ರೇಯಸ್ಕರವಾದದ್ದು. ಈ ರೀತಿಯಿಂದ ಸ್ವಭಾವಸುಧಾರಣೆಯು ಸಾಗಿರಲು ಯಾವ ಬಗೆಯ ಲಾಭದಾಕೆಯನ್ನೂ ತೋರಿಸಕೂಡದು. ಸಹಜವಾದಂಥ ಸಾಮಾಜಿಕ ಪ್ರವೃತ್ತಿಗಳನ್ನು ಬಲಗೊಳಿಸುವದರಿಂದ ಈ ಕೆಲಸವು ಅನಾಯಾಸವಾಗಿ ಕೈಸೇರುವದು.

ಹುಡುಗರು ಸುಮ್ಮನೇ ಕೂಡ್ರಲಾರರು. ಅವರಿಗೆ ಯಾವಾಗಲೂ ಕೆಲಸ ಬೇಕು. ಕಾರ್ಯಾಕುಲತೆಯೇ ಅವರ ಧರ್ಮವು. ಇದನ್ನು ಕೈಕೊಂಡು ಶಿಕ್ಷಕನು ಸ್ವಭಾವಸುಧಾರಣೆಯನ್ನು ಮಾಡುವದಲ್ಲದೆ ಇದನ್ನು ಮುರಿಬಡಿಯುವದು ಸರಿಯಲ್ಲ. ಆದರೆ ಕೆಲ ಹುಡುಗರು ಅಶಕ್ತರೂ ಸೋಮಾರಿಗಳೂ ಆಗಿರುವರು. ಅವರನ್ನು ಸೌಮ್ಯೋಪಾಯಗಳಿಂದ ನಡಿಸಿಕೊಂಡು ಅವರಲ್ಲಿ ಸ್ವಭಾವಸುಧಾರಣೆಯನ್ನು ನೆಲೆಗೊಳಿಸುವದು ಅವಶ್ಯವು.

ಪಿಂಡಗಳು ಭಿನ್ನವಿನ್ನಂತೆ ಪ್ರಕೃತಿಗಳಾದರೂ ಭಿನ್ನವಾಗಿರುತ್ತವೆ; ಕೆಲವರು ಉತ್ಕಟಾಶೆಯವರು, ಕೆಲವರು ಗರ್ವಿಷ್ಠರು ಕೆಲವರು ಪಂಡಿತಮ್ಮನ್ಯರು ಕೆಲವರು ಪುಕ್ಕರೂ ಅಂಜುಬುರುಕರೂ ನಾಚಿಕೆಯ ಸ್ವಭಾವದವರೂ ಇರುತ್ತಾರೆ. ಆದಕಾರಣ ಅವರವರ ಸ್ವಭಾವಗಳನ್ನು ಪರೀಕ್ಷಿಸಿ ಉತ್ಕಟಾಶೆಯವರಿಗೂ ಗರ್ವಿಷ್ಠರಿಗೂ ಪಂಡಿತಮ್ಮನ್ಯರಿಗೂ ಬಿಗಿಹಿಡಿದು ಪುಕ್ಕರನ್ನೂ ಅಂಜುಬುರುಕರನ್ನೂ ನಾಚಿಕೆಯ ಸ್ವಭಾವದವರನ್ನೂ ಧೈರ್ಯಗೊಳಿಸಿ ಸ್ವಭಾವಸುಧಾರಣೆಯನ್ನು ಮಾಡತಕ್ಕದ್ದು. ಚಿಕ್ಕವರಲ್ಲಿ ಕಂಡುಬರುವ ದೋಷಗಳನ್ನು ತಿರಸ್ಕಾರದಿಂದಲೂ ಪ್ರೀತಿಯಿಂದಲೂ ಶಾಳ್ಮೆಯಿಂದಲೂ ತಿದ್ದಿ ಅವರಲ್ಲಿ ಸುಗುಣಗಳನ್ನು ನೆಲೆಗೊಳಿಸತಕ್ಕದ್ದು. ಸ್ವಭಾವಸುಧಾರಣೆಯು ಸಹಜವಾದ ಕೆಲಸವಲ್ಲ. ಒಂದೆರಡು ದಿವಸಗಳಲ್ಲಿ ಅಥವಾ ಒಂದೆರಡು ವರುಷಗಳಲ್ಲಿ ಆಗುವದಲ್ಲ. ಇದು ಸಾವಕಾಶದಿಂದಲೇ ಸಾಧ್ಯವಾಗುವದು. ಇದನ್ನು ಸಾಧಿಸುವದೇ ಶಿಕ್ಷಕನ ಮೇಲಾದ ಕರ್ತವ್ಯವು.

ಒಂದೇ ಕೆಲಸವನ್ನು ಒಂದೇಸವನೇ ಒಂದೇ ಪ್ರಕಾರದಿಂದ ಮಾಡುವದರಿಂದ ಮನುಷ್ಯನಿಗೆ ಸೊಗಸಾಗುವದಿಲ್ಲ. ಅದರಲ್ಲಿ ಹೆಚ್ಚು ಕಡಿಮೆ ಮಾಡಿದರೆ ಮಾತ್ರ ಅವನಿಗೆ ಸಂತೋಷವಾಗುತ್ತದೆ. ವಿವಿಧತ್ವವು ಜೀವನಕ್ಕೆ ರುಚಿ ಕೊಡುತ್ತದೆಂಬ ಮಾತು ಅನುಭವಸಿದ್ಧವಾದದ್ದು. ಹುಡುಗರಿಗಾದರೂ ಈ ಸಿದ್ಧಾಂತವು ಹತ್ತುತ್ತದೆ. ಒಂದೇ ನೇಮಕ್ಕೆ ಒಳಗೊಳಿಸಿ ವಿದ್ಯಾರ್ಥಿಗಳಲ್ಲಿ ಹುಟ್ಟುವ ಶ್ರೇಷ್ಠ ವಿಕಾರಗಳನ್ನೂ ಶ್ರೇಷ್ಠ ವಿಚಾರಗಳನ್ನೂ ಮುರಿಬಡಿಯುವದು ಸರಿಯಲ್ಲ. ಯಾವದೊಂದು ಕೆಲಸವನ್ನು ಬಹಳ ಹೊತ್ತು ಒಂದೇಸವನೇ ಮಾಡುವದು ಹುಡುಗರಿಗೆ ದುಸ್ಸಾಧ್ಯವು, ಒಳ್ಳೇ ಕೆಲಸಗಳನ್ನು ಈ ರೀತಿ ಮಾಡುವದಂತೂ ಅಸಾಧ್ಯವು. ಈ ಮಾತನ್ನು ಶಿಕ್ಷಕರು ಧ್ಯಾನದಲ್ಲಿಟ್ಟು ಒಳ್ಳೇ ಪ್ರವೃತ್ತಿಗಳನ್ನೂ ಒಳ್ಳೇ ವಿಚಾರಗಳನ್ನೂ ಯುಕ್ತಿಯಿಂದ ನೆಲೆಗೊಳಿಸತಕ್ಕದ್ದು. ಈ ಕಾರ್ಯವು ಶ್ರಮಸಾಧ್ಯವಾಗಿರುತ್ತದೆ, ಸಾಧಿಸುವವನೇ ಧನ್ಯನು.

DEPARTMENTAL NOTICE.

ನೋಟೀಸು.

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ:—

ಮಿ। ಭೀಮಾಚಿ ಶ್ರೀನಿವಾಸ ಅಣಬಡ್ಡೀಕೃತ "ಕೆಣ್ಣಡಿಗ ನ್ನಡಿ" ಎಂಬ ಪುಸ್ತಕವನ್ನು ಮೋಹಬ್ಬಾನ ಡಾಯರೆಕ್ಟರ ಸಾಹೇಬ ಬಹದ್ದೂರವರು ಲಾಯಬ್ರರಿಯ ಪುಸ್ತಕವನ್ನಾ ಗಿ ಮಂಜೂರ ಮಾಡಿದ್ದಾರೆ.

ಧಾರವಾಡ.
ತಾ॥ ೮-೧೨-೧೯೦೦.

S. K. Rodda,
ಪ್ರಿನ್ಸಿಪಾಲ.

CORRESPONDENCE.

ಪತ್ರವ್ಯವಹಾರ.

(ಮೇಲಿನ ಸೀ ಹುಟದಿಂದ ಮುಂದೆ ಸಾಗಿದ್ದು.)

ಇಂಥ ಹುಡುಗರನ್ನು ಅವರ ತಾಯಿತಂದೆಗಳು ಹೊಡೆಯುತ್ತ ಸಾಲೆಯಲ್ಲಿ ಕರತಂದು "ಮಾಸ್ತರರೇ, ಇವನನ್ನು ಹೊಡೆಯಿರಿ. ಇವನು ಸಾಲೆಗೆ ಯಾಕೆ ಬರಲಿಲ್ಲ ಕೇಳಿರಿ, ಚೆನ್ನಾಗಿ ಬಂದೋಬಸ್ತ ಮಾಡಿರಿ" ಇತ್ಯಾದಿ ನುಡಿಗಳಿಂದ ಕಾಡುಜನರಂತೆ ಮಾಸ್ತರನಿಗೆ ಅಪ್ಪಣೆಮಾಡಿಸುವ ಜನರು ದೊಡ್ಡ ಯೋಗ್ಯತೆಯವರಿದ್ದರೂ ಅವರನ್ನು ನಾನು ಅವರ ಮುಂದೆ ತಿರಸ್ಕರಿಸದೆ ಬಿಟ್ಟಿಲ್ಲ. ಮತ್ತು ನನ್ನ ಪ್ರಕೃತ ಕೆಲಸವನ್ನು ಬದಿಗಿಟ್ಟು ಇನ್ನು ಮುಂದೆ ಹುಡುಗನಿಗೆ (ನಿದಾನ ಮಾಸ್ತರಪ ಮುಂದಾದರೂ) ಹೊಡೆಯದಂತೆಯೂ, ಸುಮ್ಮನೆ ಸಾಲೆಗೆ ಕಳಿಸಿ ಇದ್ದ ಅವನ ತಪ್ಪುಗಳನ್ನು ಯೋಗ್ಯರೀತಿಯಿಂದ ತಿಳಿಸಿಹೋಗುವದಷ್ಟೇ ನಿಮ್ಮ ಕೆಲಸವೆಂತಲೂ ಅವರಿಗೆ ತಿಳಿಸಿಹೇಳುವೆನು. ಮಾಸ್ತರನು ಸಾಲೆಯಲ್ಲಿ ಸರ್ವತಂತ್ರ ಸ್ವತಂತ್ರ ಅಧಿಕಾರಿಯಾದ್ದರಿಂದ ಅವನ ಮುಂದೆ ತಮ್ಮ ಮಕ್ಕಳನ್ನು ಬಡಿದು ಬೈದು ಮಾಸ್ತರನನ್ನು ಗಾಣಿವೇ ಮೇಲಿನ ಬೆದರಿನಂತೆ ಮಾಡಿ ದೊಡ್ಡ ಪಾಂಡಿತ್ಯದ

ಅಥವಾ ದೊಡ್ಡಿಸ್ತನೆದ ಹೆಮ್ಮೆಯಿಂದ ಮಾಸ್ತರನಿಗೆ ಆಜ್ಞಾಪಿಸುವದು ಮರ್ಯಾದೆಯಲ್ಲೆಂತಲೂ, ನಿಮ್ಮ ಮಕ್ಕಳ ತಪ್ಪುಗಳನ್ನೆಷ್ಟೇ ಮಾಸ್ತರನಿಗೆ ಮರ್ಯಾದೆಯಿಂದ ತಿಳಿಸುವದು ನಿಮ್ಮ ಕರ್ತವ್ಯವೆಂತಲೂ ಸಂದೇಹವಿಲ್ಲದೆ ಹಲವರಿಗೆ ನಾನು ಹೇಳಿದ್ದೇನೆ. ಇದರಿಂದ ಹಲವು ಲಾಭಗಳು ಆಗುವವು. ಅವುಗಳನ್ನು ವರ್ಣಿಸುತ್ತ ಕೂಡುವದು ಪ್ರಕೃತವಿಷಯವಲ್ಲ. ಈ ಪ್ರಕಾರ ನಾನು ಸಾಲೀ ತಪ್ಪಿಸುವವನನ್ನು ಹೊಡೆಯುಗೆ ಮನೆಯವರಿಂದ ಹೊಡೆಯಗೊಡದೆ ಉಪದೇಶದಿಂದಲೂ, ಅಲಕ್ಷಿಸದೆ ಅವನ ಯೋಗ್ಯತೆಯನ್ನರಿತು ಅವನಿಗೆ ಕಲಿಸುವದರಿಂದಲೂ ಅವನನ್ನು ಹಾದಿಗೆ ತರಲೆತ್ನಿಸುವೆನು. ನನ್ನ ಕಯ್ಯೊಳಗಿನ ಛಡಿಯು ನನ್ನ ವಿದ್ಯಾರ್ಥಿಯ ಹೊರತು ಅನ್ಯರ ಮೇಲೆ ಬೀಳಲಾರದೆಂದು ನಾನು ಆಗಾಗ್ಗೆ ನುಡಿಯುವೆನು ಕೆಲವೋ ವಿದ್ಯಾರ್ಥಿಗಳೇ ನನ್ನ ಪರೆಂದು ಕೆಟ್ಟ ಹುಡುಗರಿಗೆ ತಾನೇ ಹೊಳೆಯುವದು. ಈ ವ್ಯವಸ್ಥೆಯಿಂದ ಸಾಲೀ ತಪ್ಪಿಸುವವನ ಮೇಲಿ ಮಾಸ್ತರನ ಒಂದು ಬಗೆಯ ಉಪಕಾರವಾಗಿ ಅವನ ಮನಸ್ಸಿನ ಬಲವು ಬದಲಾದದ್ದನ್ನು ನಾನು ಮನಗಂಡಿದ್ದೇನೆ. ಅನ್ಯಾಯವಾಗಿ ಒಂದು ಕೆಟ್ಟು ಸಹ ಹಾಕದೆ ಈ ಉಪಾಯದಿಂದ ನನ್ನ ಕಯ್ಕೆಳಗಿನ ಕೆಲ ಹುಡುಗರು ಸಾಲೆಗೆ ಬರಹತ್ತಿದರು. ಈ ಸ್ಥಿತಿಗೆ ಬರಲಿಕ್ಕೆ ತಕ್ಕ ಅವಕಾಶವೂ ಜೇಕಾಗುವದೆಂದು ಬೇರೆಹೇಳುವ ಕಾರಣವಿಲ್ಲ. ಇಷ್ಟಾಗಿಯೂ ಕೆಟ್ಟ ಹುಡುಗರು ಸಾಲೆಗೆ ಬರದಿದ್ದರೆ ದನಗಳನ್ನು ಹೊಡೆದಂತೆ ಹುಡುಗರನ್ನು ಹೊಡೆಯುವದು ತಪ್ಪಿದ್ದೇ ಮಾಸ್ತರನಿಗೆ ಲಾಭವೆಂದು ನನ್ನ ತಿಳುವಳಿಕೆಯು. ಸಾರಾಂಶ ವಿದ್ಯಾರ್ಥಿಗಳ ಕಲ್ಯಾಣವನ್ನು ಬಯಿಸಿ ಚಾತುರ್ಯದಿಂದಲೂ, ಪ್ರೀತಿಯಿಂದಲೂ, ದೃಢನಿಶ್ಚಯದಿಂದಲೂ ಕೆಲಸ ಮಾಡಿದರೆ ವಿದ್ಯಾರ್ಥಿಗಳು ಆಜ್ಞಾಭಂಗ ಮಾಡರು, ಒಂದುವೇಳೆ ಮಾಡಿದರೆ ನಿರ್ದಯದಿಂದ ಅವರನ್ನು ದಂಡಿಸಬೇಕು.

(ಸಶೇಷ.)

WURTH PRIZE EXAMINATION
QUESTION PAPER I

ವರ್ಥ್‌ಪ್ರಾಯೋಜಿತ ಪರೀಕ್ಷೆಯ ಪ್ರಶ್ನೆಗಳು.

೧ನೆಯ ಕಾಗದ.

೧ ಪುತ್ರೋತ್ಸವ, ಪರ್ವತ, ನಿದಾಘಾತಪ, ಕಾಲೇಜವಾಸ, ಉಪವನ ಇವುಗಳಲ್ಲೊಂದನ್ನು ಪದ್ಯರೂಪದಿಂದ ವರ್ಣಿಸಿರಿ.

೨ ವಿನಯ, ಶಾರೀರಿಕಸಂಪತ್ತು, ಧಂದೇಶಿಕ್ಷಣ, ಸಂಪತ್ತು ವಿಪತ್ತುಗಳಿಗೆ ಮನುಷ್ಯನು ತಾನೇ ಕಾರಣನು, ಸಜ್ಜನರ ಸ್ನೇಹವು ಹೆಚ್ಚೀನು ಸವಿಯಂತೆ, ಸದ್ಯದ ಪ್ರಾಥಮಿಕ ಶಾಲೆಗಳ ಅಭ್ಯಾಸಕ್ರಮದಲ್ಲಿ ಅವಶ್ಯವಾಗಿ ಮಾಡತಕ್ಕ ಸುಧಾರಣೆಗಳು ಇವುಗಳಲ್ಲೊಂದನ್ನು ಕುರಿತು ನಿಬಂಧವನ್ನು ಬರೆಯಿರಿ.

೩ "ಉಪಮಾ," "ಅಪಹ್ನುತಿ," "ರೂಪಕ," "ಅತಿಶಯೋಕ್ತಿ" ಈ ಅಲಂಕಾರಗಳ ಲಕ್ಷಣೋದಾಹರಣೆಗಳನು ಬರೆಯಿರಿ.

೪ ಕೆಳಗಿನ ಪದ್ಯಗಳ ರಸ ಮತ್ತು ಅಲಂಕಾರಗಳನು ಬರೆಯಿರಿ.

ಭಾ. ಪ. ॥ ಬಿಡದು ಕರುಹಾಲಿರಲು ತಾಯನು ।
ಕಡೆಗೆ ಹೋಹುದು ಬಿಟ್ಟಿದರೆ ತಾ ।
ಕೆಡುವಕಾಲಕ್ಕಾರಿಗಾರ್ಯ ಮಗನೆ ಹೇಳೆಂದಾ ॥ ೧ ॥
ಅಳುವಳಾನಲ್ಲದಕೆ ಕೆಡಿಸಿದೆ ।
ನೆಳಿಗರುವಲೆ ನಿನ್ನನಾರ್ಯೆ ।
ಸಲಹುವರು ಊಡುವರು ಮೊಲೆಯನು ಹುಲ್ಲನೊಲ್ಲದಗೇ ॥
ಮೊಲೆಯನೂಡಿಯು ಬುದ್ಧಿಯನು ನೆರೆ ।
ಕಲಿಸಿ ಹೋಗಲು ಬಹಿಸುಂಟೈ ।
ಮೊಲೆಯು ಕೇಳ್ಕೈ ಮಾತನೆಂದಳು ಬಹುಲೆ ನಿಜಬಹುಲೇ ॥ ೨ ॥

ಪಾ. ಪ. ॥ ಮನವೋಲ್ದುಬಿನೆದದಿಂ ಬಿನೆಸಿರಿ ಮೆನೋಜಂ
ಗೆ । ಘನಸುರಪಮೋಹಿಗಳಿಂ ಮನೆಯನೆರೆ ರಚಿ
ಸಿದಳೊ । ಯಿನಿಪಕ್ವಫಲಗಳಂ ತಳೆದ ನೇರಿದ
ಮರಂ ಬನದೊಳಿನೆದುದು ಸೊಬಗಿನಿಂ ॥
ಇನಕರಗಳಾವನದ ತಮವ ಪರಿಹರಿಸೆವೆಂ ।
ದಿನುತೆಯ್ದಲಂಧಕಾರಮದಂದು ಪಿಡಿದವಂ ।
ವನದ ಮಧ್ಯದೊಳಿಟ್ಟುದೆಂಬವೋಲ್ ಮಿಗೆಪೂ
ತಸಂಪಗೆಗಳಿಸೆದವಲ್ಲಿ ॥ ೩ ॥

ಕು. ವೃ. ॥ ಸುರೆಯುಂ ಸೇಪಿಸಿದಾತಬಲ್ಲನೆ ಮಹಾಯೋ
ಗೀಂದ್ರರೆಂದೆಂಬುದಂ । ಧೊರೆಯೋಳ್ತೀಜವ
ನಾಂತವಂ ಬಡವರಂ ತಾಂ ನೋಳ್ಪನೇಕಂಗ
ಳಿಂ । ಪಿರಿಯಮರ್ಮಾನಿಗಳೆಂದುಕಾಂಬನೆ ಮಹಾ
ದುಮರ್ಮಾರ್ಗಿಯಂತಾಬೊಡಂ । ದುರುಳಂ ಬಲ್ಲ
ನೆ ಬಾಳ್ವರಂ ಜಗಜಗರಾ ಶ್ರೀಚನ್ನಸೋಮೇಶ್ವರಾ
॥ ೪ ॥

೫ ಕೆಳಗೆ ಕೊಟ್ಟ ಹಳೆಗನ್ನಡ ವಾಕ್ಯಗಳನ್ನು ಹೊಸಗ
ನ್ನಡದಲ್ಲಿ ಬರೆಯಿರಿ.

ಮತ್ತವೊರ್ಮೆ ಮಿಸುಗಿಸಳ ಪಸರದಿನೆಸೆವ ಪೊಸಪಸೆಯೊ
ಳ್ಕಯ್ಯ ನೀಡಾಡಿ ಪೊಳೆಪುವಡೆದ ಪಾಲ್ಗಡಲ ತೆರೆದುರುಗ
ಲೊಳ್ಪವಡಿಸುವ ಸಿರಿಯಂ ಪೋಲ್ತಿರ್ಪಳ್; ಒಡನಾಡಿಗಳಡಿಗ
ಡಿಗೆ ತಳಿವ ಪನ್ನೀರ ತುಂತುರ್ವನಿಗಳಿಂ ಪೊಸತಪ್ಪಕಾರಸಿರಿ
ಯಪರಿಯಂ ಪಡೆದಂತಿರ್ಪಳ್ ಅಂದಂಬಡೆದ ಕೆಂದಳಿರ
ಗೊಂದಣದೊಳೊಂದಿನಿಂದು ಸಂವಣಿಸಿ ನೆಗೆದ ಕೆಂಮುಗಿಲ
ನಡುವೆ ಪೊಳೆವೆಳವೆರಯಂತಿರ್ಪಳ್; ನಳಿನಳಿಸಿ ಬೆಳೆದ
ಬೆಳ್ದಾವರೆಯ ತೊಳಗುವೆಳದಾವರೆಯ ಬಳಗಮಂ ತಳೆದು
ಪಾವಿನಪಚ್ಚದಿನಚ್ಚರಿವಡೆದ ಜೋಗಿಣಿಯಂತಿರ್ಪಳ್; ಮು
ನ್ನಣೆವೆತ್ತ ಮೇಳದಕೆಳದಿಯರ್ಮಾಣಪೆ ಮೇಲೆ ಮೇಲೆ ತಂ
ದೊಟ್ಟಿದ ಸಿರಿಕಂಡದ ಕೋಳ್ಕೆಸರಿಂಪುದಿದು ಜಂತದಿಂ ಕಡೆ
ದು ಕಂಡರಿಸಿದ ಪುತ್ತಳಿಯಂತಿರ್ಪಳ್. ತಡಿತಡಿಯ ತೆಂಗಿ

ನೆಳನೀರ್ ಕೂಡಿ ಕಡೆಗುಣ್ಮುವ ಕೊಳಂಗಳೊಳ ಪೊಕ್ಕು ತಾವರೆಯ ಪಚ್ಚೆಲೆಯಂ ಮೆಯ್ಯೊಳಾಂತು ನುಣ್ಣನಪ್ಪಿಳವಿದಿರ ಬಣ್ಣಮುಂ ತಳೆದ ನೀರ್ಕೊಣಂತಿರ್ಪಳ್; ಅಂತುಮಲ್ಲದೆಯುಂ ॥

೬. ಕೆಳಗೆ ಕೊಟ್ಟ ಹೊಸಗನ್ನಡ ವಾಕ್ಯಗಳನ್ನು ಹಳಗನ್ನಡದಲ್ಲಿ ಬರೆಯಿರಿ.

ಅವನು ಒಂದು ರೇಸಿನೆಯ ಪಟವನ್ನು ಮಾಡಿ ಅದರ ನಡುವಿನ ಬಿದರಿನ ಸ್ಥಳದಲ್ಲಿ ಮೊನೆಯಾದ ತುದಿಯುಳ್ಳ ಕಬ್ಬಿಣದ ಕಡ್ಡಿಯನ್ನು ಇರಿಸಿ ಗುಡುಗು ಮಿಂಜು ಆಗುವ ಕಾಲಕ್ಕೆ ಮೇಲಕ್ಕೆ ಹಾರಿಸಿದನು. ಮೇಲೆ ಹಾರಿಸಲಿಕ್ಕೆ ವಿದ್ಯುದ್ವಾಹಕವಾದಂಥ ಸಣಬಿನ ಹುರಿಯನ್ನೇ ಉಪಯೋಗಿಸಿದನು. ಅದನ್ನು ತಾನು ಹಿಡಿಯುವಲ್ಲಿ ಮಾತ್ರ ರೇಸಿನೆಯ ದಾರವನ್ನು ಹಚ್ಚಿದನು. ಸಣಬು ಮುಗಿದು ರೇಸಿನೆಯ ದಾರವು ಆರಂಭವಾಗುವ ಸ್ಥಳದಲ್ಲಿ ಒಂದು ಕಬ್ಬಿಣದ ಕೀಲಿಕ್ಕೆಯನ್ನು ಕಟ್ಟಿದ್ದನು. ಜನರಲ್ಲಿ ತತ್ತ್ವಶೋಧದ ಕೆಲಸಕ್ಕೆ ಮನಃಪೂರ್ವಕವಾಗಿ ಸಹಾಯ ಮಾಡುವ ಜನರಿಗಿಂತ ಕೆಲಸವು ಒಮ್ಮೆ ಸಾಧಿಸದಿದ್ದರೆ ಆ ಶೋಧಕ ಮನುಷ್ಯನನ್ನು ಹಾಸ್ಯಕ್ಕೆ ಗುರಿಮಾಡುವವರು ಬಹು ಜನರು ಇರುತ್ತಾರೆ. ಅದರಿಂದ ತನ್ನ ಪ್ರಯೋಗವು ಸಾಧಿಸದಿದ್ದರೆ ಅಪಹಾಸ್ಯಕ್ಕೆ ಪಾತ್ರನಾದೇನೆಂಬ ಭೀತಿಯಿಂದ ಅವನು ತನ್ನ ಪ್ರಯೋಗದ ಗುಟ್ಟನ್ನು ತನ್ನ ಮಗನ ಹೊರತು ಯಾರಿಗೂ ತಿಳಿಸಲಿಲ್ಲ. ಈ ಪ್ರಕಾರ ಪಟವನ್ನು ಮೇಲೆ ಹಾರಿಸಿದ ಕೆಲವು ಹೊತ್ತಿನವರೆಗೆ ವಿದ್ಯುತ್ತಿನ ಕಿಡಿಗಳು ಕಾಣದಿರಿಂದ ಅವನು ನಿರಾಶನಾದನು. ಅಷ್ಟರಲ್ಲಿ ಹುರಿಯ ಸಣ್ಣ ಸಣ್ಣ ಎಳೆಗಳು ಕಟದು ನಿಂತದ್ದನ್ನು ಕಂಡು ಕೀಲಿಕ್ಕೆಗೆ ತನ್ನ ಬೊಟ್ಟು ಮುಡಿಸಿ ತುದಿಯನ್ನು ತೋರಿಸಿದನು ಕೂಡಲೆ "ಚಟ್" ಎಂದು ಸಪ್ಪಳವಾಗಿ ವಿದ್ಯುತ್ತಿನ ಕಿಡಿ ಹಾರಿತು, ಇದರಿಂದ ಅವನಿಗೆ ಆದ ಆನಂದವನ್ನು ವರ್ಣಿಸಲಳವಲ್ಲ.

ಶಾಲಾ ಪತ್ರಕೆ.

ಪದ್ಯಂ.

ಪ್ರಥಮವಿದ್ಯಾಗುರುವರ್ಯರುನ್ನತಿಕರಯಂ ಸಚ್ಛಿಷ್ಯಜನೋತ್ಕರ್ಷಮುಂ ।
ಜಯಸುತ್ತಂ ಪ್ರತಿಪಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಸಯದಿಂದಿತ್ತವೆಪ್ರೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವಶಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಯರಿ ॥

ಪುಸ್ತಕ ೩೭] ಫೆಬ್ರುಆರಿ ೧೯೦೧. [ಸಂಚಿಕೆ ೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿ ಹಾಯಕೋರ್ಟಿನ ಜಜ್ಜರಾದ ನಾವ ದಾರರಾನಡೆ ಮೊಹುವರಾಯರು ಈಳೆದ ತಿಂಗಳ ೧೬ನೇ ತಾರೀಖಿನ ರಾತ್ರೀ ಸುಮಾರು ೧೦॥ ಗಂಟೆಗೆ ಮುಂಬಯಿಯಲ್ಲಿ ನಿಷ್ಕರುಣಿಯಾದ ಮೃತ್ಯುವಿನ ಬಾಯಿಗೆ ತುತ್ತಾದರೆಂದು ಬರೆಯಲಿಕ್ಕೆ ನಮಗೆ ಪರಮಾವಧಿ ದುಃಖವಾಗುತ್ತದೆ. ಹಾಯ್! ಹಾಯ್!! ಭಾರತೀಯರನ್ನು ಕಣ್ದೆರಿಸಿ ಅವರಿಗೆ ಸುಖದ ಮಾರ್ಗವನ್ನು ನಿಚ್ಚಳವಾಗಿ ತೋರಿಸುತ್ತಿದ್ದ ಜ್ಞಾನ ಜ್ಯೋತಿಯು ನಂದಿಹೋಯಿತು! ರಸಾತಳಕ್ಕೆಳಿಯುಹತ್ತಿದ ನಮ್ಮ ದೇಶವನ್ನು ಉದ್ಧರಿಸಬೇಕೆಂದು ಪ್ರಯತ್ನಿಸುವ ನಮಾ ಜಧುರೀಣರ ಒಡಲೊಳಗಿನ ಜೀವರತ್ನವು ಕಳೆದುಹೋಯಿತು! ರಾಜಪ್ರಜೆಗಳೀರ್ವರಿಗೂ ಸರಿಯಾಗಿ ಹಿತ ಬಯಸುತ್ತ ಸ್ವೋನ್ನತಿ, ಸ್ವದೇಶೋನ್ನತಿ, ಸ್ವಧರ್ಮೋನ್ನತಿಗಳಿಗಾಗಿ ಜಗವೆಲ್ಲ ತ್ರೀಡತಕ್ಕಂಥ ಕೆತ್ತೆಯು ಹರಿದುಹೋಯಿತು! ನಿಷ್ಯದ ಸಂಗ್ರಹವನ್ನು ಸದ್ವ್ಯಯವನ್ನು ಮಾಡುವ ಬಗೆಯನ್ನು ಸ್ಪಷ್ಟವಾಗಿ ತೋರಿಸುವ ಮಾದರಿಯು ಮಾಜಿಹೋಯಿ

ತು! ವಿದ್ಯೆ, ಗುಣ, ವಿಚಾರ, ವರ್ತನೆ, ಸ್ವಭಾವೆ ಮುಂತಾದವುಗಳಲ್ಲಿರುವ ನ್ಯೂನತೆಗಳನ್ನು ನೋಡಿಕೊಳ್ಳತಕ್ಕ ರನ್ನಗನ್ನಡಿಯು ಒಡೆದುಹೋಯಿತು! ರಾಮ! ರಾಮ!! ಈ ಪುರುಷಶ್ರೇಷ್ಠರ ಗುಣಸ್ವಭಾವಗಳ ಚಿತ್ರಪಟವನ್ನು ರೇಖಿಸಬೇಕೆಂದು ಬಯಸಿ, ಬಣ್ಣದಂತಿರುವ ವಿಶೇಷಣ ಪದಗಳನ್ನು ಇವರ ನಾಮದ ಹಿಂದೆ ಜೋಡಿಸಬೇಕೆಂದು ನಾವು ನಮ್ಮ ಬುದ್ಧಿ ಹರಿಯುವ ಮಟ್ಟಿಗೂ ಹುಡಿಕಿ ಶಿಗಲಿಲ್ಲವೆಂದು ಕಡು ಖೇದಗೊಂಡೆವು. ಈ ಸತ್ಪುರುಷರು ವಿದ್ಯದ ನಿಧಿಯು ಜ್ಞಾನದ ಖನಿಯು, ಸುಪಕ್ವವಿಚಾರದ ಸಂಚಕಯೆವು, ಸಚ್ಛೀಲದ ಆಲಯವು, ಅಸುಭವದ ಆಗರವು, ಸೌಜನ್ಯದ ತವರ್ಮನೆಯು ಆಗಿದ್ದರೆಂದರೆ ಅತಿಶಯೋಕ್ತಿಯೆನಿಸದು, ಈ ಮಹಾರಾಯರ ಮರಣದಿಂದ ದುರ್ಭೈವಿಯಾದ ನಮ್ಮ ದೇಶಕ್ಕೆ ಬಹಳ ಹಾನಿಯೊದಗಿತೆಂದು ಹೇಳಬಹುದು. ಆದರೆ ಸತ್ಯಸಂಕಲ್ಪವನ್ನು ಮೀರುವದು ಮಾನವಪ್ರಾಣಿಯು ಅಳವಲ್ಲ; ಆದ್ದರಿಂದ ನಾವೆಲ್ಲರೂ ಹಳಹಳಿಸುತ್ತ ಸುಮ್ಮನೇ ಕೂಡ್ರಬೇಕಾಗುವದು. ಈಶಚಿತ್ತಕ್ಕೆ ಉಪಾಯವಿಲ್ಲ. ಪರಮೇಶ್ವರನ ಸಂಕಲ್ಪದಲ್ಲಿ ಯಾವಾಗಲೂ ನಂಬಿಗೆಯುಳ್ಳವರು ನಾವು ಪರಮಾತ್ಮನ ಚಮತ್ಕಾರಗಳನ್ನು ನೋಡುತ್ತಾ, ಈ ದೇವತಾಂಶರಾದ ಸತ್ಪುರುಷರನ್ನು ಕೊಂಡಾಡುತ್ತಾ, ಅವರಿಗೆ ಸಾಯುಜ್ಯಪದವಿಯನ್ನೀಯಲೆಂದು ಕೋರುತ್ತಾ, ಇವರಿಗಿಂತ ಮಿಗಿಲಾದ ಜನರನ್ನು ಈಶನೇ ಕೊಡೆಂದು ಹಾರೈಸುತ್ತಿರುವದೇ ನಮ್ಮ ಕರ್ತವ್ಯವು

ಕಳೆದ ಜನವರಿಯಲ್ಲಿ ಮುಂಬಯಿಯೊಳಗೆ ಮಿಶನರೀ ಜನರ ಸಭೆ ಕೂಡಿತ್ತು. ಆ ಸಭೆಯಲ್ಲಿ ಹಿಂದುಸ್ತಾನದಲ್ಲಿ ಸರಕಾರೀ ಸಾಲೆಗಳೊಳಗೆ ಕೊಡಲ್ಪಡುವ ಶಿಕ್ಷಣವು ಕೇವಲ ವ್ಯವಹಾರಿಕವಾದದ್ದರಿಂದಲೂ ಅದರಲ್ಲಿ ಧರ್ಮಶಿಕ್ಷಣವು ಕೇರದಿರುವದರಿಂದಲೂ ತರುಣ ಜನರ ನೀತಿಯು ಸಮಾಧಾನಕರವಾಗಿರುವದಿಲ್ಲೆಂದು ಕೆಲವರು ಆಕ್ಷೇಪಿಸಿದರು. ಈ ನಾನಾ ಧರ್ಮಪಂಥಗಳ ಸಮುಚ್ಚಯವುಳ್ಳ ಸಾಮ್ರಾಜ್ಯದಲ್ಲಿ

ಧರ್ಮಶಿಕ್ಷಣದಲ್ಲಿ ಸರಕಾರದವರು ತಟಸ್ಥವೃತ್ತಿಯನ್ನು ಸ್ವೀ
ಕರಿಸಿರುವದರಿಂದ ಧರ್ಮಶಿಕ್ಷಣದ ವ್ಯವಸ್ಥೆಯನ್ನು ಶಾಲೆಗಳ
ಲ್ಲಿ ಮಾಡುವದು ಅನನುಕೂಲವಾದರೂ ಉಚ್ಚಶಿಕ್ಷಣದ
ಕಾಲೇಜಗಳಲ್ಲಿ ಅಧ್ಯಾಪಕರ ಕೆಲಸಕ್ಕೆ ನೀತಿವಂತರಾದಂಥ
ಜನರನ್ನೇ ಆರಿಸಬೇಕೆಂದು ಅವರೊಳಗೊಬ್ಬರು ಪ್ರತಿಪಾ
ದಿಸಿದರು. ಒಟ್ಟಿಗೆ ನೀತಿಶಿಕ್ಷಣವು ವಿದ್ಯಾರ್ಥಿಗಳಿಗೆ ದೊರೆ
ಯುವದಿಲ್ಲೆಂದು ಬಹುಮತವಿದ್ದಂತೆ ತೋರಿತು.

ಈ ಉಪನ್ಯಾಸವು ವಿಷದೀಕರಣೀಯವಾಗಿರುವದೆಂತಲೂ
ವಸ್ತುಸ್ಥಿತಿಗೆ ವಿಪರೀತವಾಗಿರುತ್ತದೆಂತಲೂ ನೀತಿಶಿಕ್ಷಣವು
ಸರಕಾರದ ಬೊಮ್ಮತ್ತು ಉಚ್ಚನೀಚ ಶಾಲೆಗಳಲ್ಲಿ ಬಹು
ಎಚ್ಚರದಿಂದ ಕೊಡಲ್ಪಡುತ್ತಿರುವದೆಂತಲೂ ಈಗಿನ ತರುಣ
ಜನರಲ್ಲಿ ನೀತಿಪರಾಙ್ಮುಖರಾದವರು ಅಪರೂಪವಾಗಿರುವ
ರೆಂತಲೂ ಸರಕಾರದ ಒಂದು ದೊಡ್ಡ ಕಾಲೇಜದ ಅಧಿಕಾರ
ಸ್ಥರು ಟೈಮ್ಸ ಆಫ್ ಇಂಡಿಯಾದಲ್ಲಿ ಪತ್ರಮುಖವಾಗಿ ಬರೆದಿ
ರುವರು.

ಕಾಲೇಜದ ಅಧಿಕಾರಸ್ಥರ ಈ ಲೇಖನವು ನಮಗೆ ಯೋ
ಗ್ಯವಾಗಿ ತೋರುತ್ತದೆ. ಶಾಲೆಗಳಲ್ಲಿ ಧರ್ಮಶಿಕ್ಷಣ ಕೊಡ
ಲಿಕ್ಕೆ ಅನುಕೂಲವಿಲ್ಲೆಂಬದು ನಿಜವು. ಆದರೆ ನೀತಿಶಿಕ್ಷಣ
ವಿಲ್ಲೆಂದೆನ್ನಲಾರೆವು.

ವಿಶ್ವವಿದ್ಯಾಲಯಗಳ ಪರೀಕ್ಷೆಗಳೆಲ್ಲ ಮುಗಿದವು. ಪರೀ
ಕ್ಷಾಪರಿಣಾಮಗಳಾದರೂ ಗೊತ್ತಾದವು. ಆದರೆ ಈ ವರ್ಷ
ಪರೀಕ್ಷೆಗಳಲ್ಲಿ ನಕಲು ತಗೆಯುವ ದುರಾಲೋಚನೆಗೆ ಕೆಲ
ವರು ಒಳಗಾದರೆಂದು ಕೇಳಿ ವಿಷಾದಿಸುತ್ತೇವೆ. ಆ ಜನರ
ಹೆಸರು ಯಾವನೆಂದರೆ—

ಹೆಸರು.	ಕಾಲೇಜ.
೧ ಫಿರೋಜ ಸೋರಾಬಜೆ ವ ಕೀಲ	ಗ್ರ್ಯಾಂಟಮೋಡಿಕಲ್ ಕಾಲೇಜ
೨ ಫ್ರಾಮಜೆ ಪೆಸ್ತನಜೆ ಸೀರವೈ	ಎಲ್‌ಫಿನ್‌ಸ್ಟನ ಕಾಲೇಜ
೩ ವಿಯಿಲಿಯಮ್ ಜೆ. ಸಿ. ಹಸ್ಟ್	ಸೇಂಟರೆಕ್ಸವಿಯರ್ಸ ಕಾಲೇಜ

ದಿನಪಾ ಬಮ್ಮನಜಿ ಶ್ರಾಳ ಖಾಸಗಿ ಶಿಕ್ಷಣ
ಪಿರೋಜಶಾ ಸೋರಾಬಜಿ ಟ್ಯೂಟೋರಿಯಲ್ ಮ್ಯಾ
ಪ್ಪೋಚಕಖಿನವಾಲಾ ಟ್ರಕ್ಯುಲೇಶನ ಕ್ಲಾಸ
ಹಣಮಂತ ರಾಘವೇಂಬ್ರ ಪ್ರೈವೇಟ ಶಿಕ್ಷಣ
ಸಿಂಗಿತ

ಈ ಸ್ಥಿತಿಯನ್ನು ವಿಚಾರಿಸಲು ಸುಪರವೈಝುರರನ್ನು ನೇ ಮಿಸುವ ಕ್ರಮವು ದೋಷಾರ್ಹವಾಗಿರುತ್ತದೆಂದು ನಮಗೆ ಕಂಡುಬರುತ್ತದೆ. ಇದರಲ್ಲಿಯಾದರೂ ತಕ್ಕ ಸುಧಾರಣೆ ಯಾಗುವದು ಅವಶ್ಯವಾಗಿರುತ್ತದೆ.

ನಕಲು ತೆಗೆದು ದೋಷಕ್ಕೆ ಒಳಗಾದವರಿಗೆ ದಂಡರೂಪ ವಾಗಿ ಒಂದು ವರ್ಷ ಯಾವ ಪರೀಕ್ಷೆಗೂ ಕೂಡ್ರಲಿಕ್ಕೆ ಪರ ವಾನಗಿ ಶಿಗದೆಂದು ಗೊತ್ತು ಮಾಡಿರುತ್ತಾರೆ. ತಪ್ಪಿನ ಸ್ವರೂ ಪದಿಂದ ಈ ಶಿಕ್ಷೆ ಗೊತ್ತು ಮಾಡಿದ್ದರೆ ಸರಿಯೇ. ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಈ ದೋಷಕ್ಕೆ ಒಳಗಾಗದಂತೆ ವ್ಯ ವಸ್ಥೆಯನ್ನು ಮೊದಲಿನಿಂದ ಇಡುವರಾಗಿ ಕೋರುತ್ತೇವೆ.

ಧಾರವಾಡ ಜಿಲ್ಲೆಯಲ್ಲಿ ಹೆಸರು ವಾಸಿಯಾದ ರಾ. ರಾ. ವಿಠ್ಠಲ ವೈಕುಂಠ ವಾಗಳೇ ಧಾರವಾಡದ ಮಾಜೀ ಮುನೆ ಸೊಫ ಇವರ ಅಣ್ಣನ ಮಕ್ಕಳಾದ ರಾ. ರಾ ನೀಲಕಂಠ ಬಾಪುಜಿ ವಾಗಳೇ ಇವರು ಬಿ. ಏ. ಪರೀಕ್ಷೆಯಲ್ಲಿ ತೇರ್ಗ ಡೆ ಹೊಂದಿ ಕೆಲವು ದಿವಸ ಮುಂಬಯಿಯಲ್ಲಿ ಕಾಯದೆಯ ಅಭ್ಯಾಸವನ್ನು ಮಾಡಿದರು. ಆದರೆ ಗತಾನುಗತಿಕತ್ವವು ಅವರಿಗೆ ಸರಿದೋರಲಿಲ್ಲ. ಯಾವದೊಂದು ಸ್ವತಂತ್ರ ಉ ದ್ಯೋಗವನ್ನು ಕೈಕೊಂಡು ತರುಣ ಜನರ ಮೇಲಿರುವ ಸಾ ಮಾನ್ಯ ಆರೋಪವನ್ನು ಹೋಗಲಾಡಿಸುವ ಆತುರವು ಅವರ ಲ್ಲಿ ಅಂಕುರಿಸಿ ಆ ವ್ಯಾಸಂಗಕ್ಕೆ ಅವರು ಹತ್ತಿದರು ಈಡೆ ಗೆ ಮನೆಮನೆಯಲ್ಲಿ ಕಾಣಬರುವ ಚಿಮಣಿ ದೀಪಗಳ ಕಾಚೆ ನ ಚಿಮಣಿಗಳನ್ನು ತಯಾರಿಸುವ ಕಾರಖಾನೆ ಸ್ಥಾಪಿಸುವ ಉದ್ದೇಶದಿಂದ ಕಾಚು, ಕಾಚಿನ ಕಾರಖಾನೆಗಳು, ಕಾಚು ಮಾಡುವ ಕ್ರಮ ಇವುಗಳ ಬಗ್ಗೆ ಮಾಹಿತಿಯನ್ನು ದೊರಕಿಸಿ ದರು. ಬಳಿಕ ಮಿ ವಾಡಿಯಾ ಮಿ. ರಾನಡೆ ಮುಂತಾದ ದೊ

ಕ್ಕ ದೊಡ್ಡ ಗೃಹಸ್ಥರ ಸಹಾಯದಿಂದ ಮುಖ್ಯವಾಗಿ ಉತ್ತೇ
ಜನದಿಂದ ಕಾಜಿನ ಕಾರಖಾನೆಯಲ್ಲಿ ಕಾಜಿನ ಕೆಲಸವನ್ನು
ಕಲಿಯುವದಕ್ಕೆ ಮನಸ್ಸು ಮಾಡಿ ತಮ್ಮ ಕಕ್ಕಂದಿರ ಅಪ್ಪ
ಣೆಯನ್ನು ಪಡೆದು ಕಳೆದ ದಿಶಂಬರದಲ್ಲಿ ವಿಲಾಯತಿಗೆ
ಹೋದರು. ಅಲ್ಲಿ ಅವರಿಗೆ ಈ ವ್ಯಾಪಾರದ ಗುಟ್ಟು ತಿಳಿ
ಯಬೇಕಾದರೆ ಅನೇಕ ಅಡಚಣಿಗಳು ಸಂಭವಿಸಿದವು. ಆದ
ರೆ ಅವೆಲ್ಲವುಗಳಿಗೆ ಎದೆಗೊಟ್ಟು ನಿಂತು ಇಷ್ಟಕಾರ್ಯವ
ನ್ನು ಮುಂದಿಟ್ಟು ತೊಂದರೆಗಳನ್ನು ಲೆಕ್ಕಿಸದೆ ಬಹು ಚಾತು
ರ್ಯದಿಂದ ಅನುಕೂಲವಾದ ಮೇರಿಗೆ ಈ ಕಲೆಯನ್ನು
ತಕ್ಕ ಮಟ್ಟಿಗೆ ಸಾಧ್ಯ ಮಾಡಿಕೊಂಡಿರುವರು. ಇವರು
ಸ್ವಲ್ಪ ದಿವಸದಲ್ಲಿ ನಮ್ಮ ದೇಶಕ್ಕೆ ಬರುವರಾಗಿ ತಿಳಿದಿದೆ.
ಇವರಿಗೆ ಮುಂಬಯಿಯ ವಿದ್ಯಾಪೀಠದವರು ಮಂಗಳದಾಸ
ನಥೂಬಾಯಿ ಇವರ ಸ್ಕಾಲರಶಿಪ್ಪನ್ನು ಕೊಟ್ಟಿರುತ್ತಾರೆ.
ಈ ತರುಣ ಗೃಹಸ್ಥರು ಅಭೀಷ್ಟ ಕಲೆಯನ್ನು ಸಾಧಿಸಿ ನಮ್ಮ
ದೇಶಕ್ಕೆ ಬಂದು ಸುಖಸಂಪತ್ತಿಯನ್ನು ಪಡೆಯುವಲೆಂತಲೂ
ನಮ್ಮ ತರುಣ ಜನರಲ್ಲಿ ಸ್ವತಂತ್ರ, ಉದ್ಯೋಗದ ಅಭಿರುಚಿ
ಯನ್ನು ಹುಟ್ಟಿಸಲೆಂತಲೂ ದೇವರನ್ನು ಪ್ರಾರ್ಥಿಸುತ್ತೇವೆ.

ಖೈ. ವಾ. ಅಣ್ಣಾರಾವ ಸವದಿ ಇವರ ಚರಿತ್ರವು.

ಜಗತ್ತಿನಲ್ಲಿ ಯಾವಾಗಲೂ, ಎಲ್ಲರಕೂಡ ಆನಂದದಿಂದ
ಲೂ, ಪ್ರೀತಿಯಿಂದಲೂ, ನಡಕೊಂಡು ಕರ್ತವ್ಯ ಕರ್ಮ
ನನ್ನು ಒಳ್ಳೇ ರೀತಿಯಿಂದ ಜರಗಿಸಿ ಅಜಾತಶತ್ರುವೆಂದು
ಹೊಗಳಿಸಿಕೊಳ್ಳುವ ಜನರು ಸಾಂಪ ತಕ್ಕೆ ಕಡಿಮೆ. ಹೀ
ಗಿದ್ದರೂ ಟ್ರೇನಿಂಗಕಾಲೇಜದ ವ್ಹಾಯಿಸ್‌ಪ್ರಿನ್ಸಿಪಾಲರಾದ
ಖಾ. ಸಾ. ಶ್ರೀನಿವಾಸರಾವ ಸವದಿ ಇವರು ಆ ಜನರೊಳಗಿನ
ನರೊಬ್ಬರೆಂದೆನ್ನಬಹುದು; ಅವರ ಅಲ್ಪ ಚರಿತ್ರವನ್ನು ಇ
ಲ್ಲಿ ಬರೆಯುತ್ತೇವೆ.

ಇವರು ಸನ್ ೧೮೭೬ನೇ ಇಸವಿಯ ಅಕ್ಟೋಬರ ೬ನೇ
ನೇ ತಾರೀಖಿನ ದಿವಸ ಬೆಳಗಾಂವಿಯಲ್ಲಿ ಹುಟ್ಟಿದರು. ಇವ

ರ ಮಾತೋಶ್ರೀಯವರ ಹೆಸರು ಸೀತಾಬಾಯಿ. ಇವರ ಹಿರಿಯಣ್ಣನಾದ ರಾಮಚಂದ್ರರಾವ ಇವರು ಬೆಳಗಾಂವಿಯಲ್ಲಿ ಕಾರಕೂನರಿದ್ದರು. ಅದರಿಂದ ಇವರ (ಶ್ರೀನಿವಾಸರಾಯರ), ವಿದ್ಯಾಭ್ಯಾಸವು ಅಲ್ಲಿಯೇ ಆಯ್ತು; ಮೊದಲು ಮರಾಠಿ ಭಾಷೆಯ ಅಭ್ಯಾಸವನ್ನು ಮುಗಿಸಿ ಇಂಗ್ರೇಜೀ ಭಾಷೆಯ ಅಭ್ಯಾಸಕ್ಕೆ ಸರದಾರ ಹಾಯಸ್ಕೂಲಿಗೆ ಬೀರಿದರು. ಅಲ್ಲಿ ಚನ್ನಾಗಿ ಅಭ್ಯಾಸಮಾಡಿ ಎಂಟನೇ ವರ್ಷದ ವಯಸ್ಸಿನಲ್ಲಿಯೇ ಮ್ಯಾಟ್ರಿಕ್ಯೂಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಇದಲ್ಲದೆ ಇವರು ಮನೆಯಲ್ಲಿ ಒಬ್ಬ ಪಂಡಿತನ ಪತ್ತರ ಸ್ವಭಾಷೆಯಾದ ಕನ್ನಡವನ್ನು ಅಭ್ಯಾಸ ಮಾಡಿದ್ದರು. ಮತ್ತು ಇವರು ಅಲ್ಪಸ್ವಲ್ಪ ಗುಜರಾಥಿಯನ್ನು ಹಿಂದುಸ್ಥಾನಿಯನ್ನು ಅರಿತಿದ್ದರು. ಆಕಾಲಕ್ಕೆ ಅಲ್ಪಸ್ವಲ್ಪ ಇಂಗ್ರೇಜೀ ಬಲ್ಲವರು ಬಹಳ ಮರ್ಯಾದೆಯನ್ನು ಹೊಂದುತ್ತಿದ್ದರು ಅದರಂತೆ ಶ್ರೀನಿವಾಸರಾಯರಾದರೂ ಮ್ಯಾಟಿಕ್ಯೂಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರಿಂದ ಜನರಲ್ಲಿ ಇವರು ಬಹು ದೊಡ್ಡ ಮಾನವನ್ನು ಪಡೆದರು. ಅಭ್ಯಾಸ ಮಾಡುವಕಾಲಕ್ಕೆ ಇವರಿಗೆ ಸ್ಕಾಲರಷಿಪ್ಪುಗಳು ದೊರೆಯುತ್ತಿದ್ದವು. ಈ ಮೇರೆಗೆ ಇಂಗ್ರೇಜೀ ಪರೀಕ್ಷೆಯು ಇಳಿದಕೂಡಲೇ ಶ್ರೀನಿವಾಸರಾಯರು ಬೆಳಗಾವ ಹಾಯಸ್ಕೂಲಿನಲ್ಲಿ ಮೂವತ್ತೇ ಅಶಿಷ್ಟಂಟರಾಗಿ ನೇಮಿಸಲ್ಪಟ್ಟರು. ತಾವು ಅಭ್ಯಾಸಮಾಡಿದ ಸಾಲೆಯಲ್ಲಿ ಮಾಸ್ತರರಾದ ಕೂಡಲೇ ಕಲಿಸಲಿಕ್ಕೆ ಬಳ್ಳೀ ಹುರುವು ಉಂಟಾಯಿತು. ಎರಡು ವರ್ಷಗಳ ವರೆಗೆ ಆ ಸಾಲೆಯಲ್ಲಿ ಚನ್ನಾಗಿ ಕೆಲಸ ಮಾಡಿದ ಮೇಲೆ ಮೇಲಧಿಕಾರಿಗಳು ಇವರ ದಕ್ಷತೆ ನಿಯಮಿತತನ, ಚಟುವಟಿಕೆ, ಜಾಣತನ, ಆಸಕ್ತಿ, ಸೌಜನ್ಯ ಮುಂತಾದ ಸದ್ಗುಣಗಳನ್ನು ಕಂಡು ಶಿರಸಿಯ ಅಂಗ್ಲೋ ಸ್ಕೂಲಿಗೆ ಸ್ವತಂತ್ರ ಮಾಸ್ತರರನ್ನಾಗಿ ನೇಮಿಸಿದರು. ಅಲ್ಲಿ ಎರಡೂವರೆ ವರ್ಷ ಕೆಲಸ ಮಾಡಿದ ಬಳಿಕ ಸನ್ ೧೮೭೬ ರಲ್ಲಿ ೧೦೦ ರೂಪಾಯಿ ಪಗಾರದ ಮೇಲೆ ಟ್ರೇನಿಂಗ

ಕಾಲೇಜದ ವ್ಹಾಯಿಸ್ ಪ್ರಿನ್ಸಿಪಾಲರನ್ನು ಮಾಡಿದರು ಅಂದಿನಿಂದ ಕಡೆಯವರೆಗೆ, ನಡುವೆ ಕೆಲವು ಪರ್ಷಗಳು ಮಾತ್ರ ಹೊರತಾಗಿ, ಅಂದರೆ ೨೩ ವರುಷಗಳ ವರೆಗೆ ಕಾಲೇಜದಲ್ಲಿಯೇ ಇದ್ದರು ಆಗ ಟ್ರೇನಿಂಗಕಾಲೇಜವು ಬೆಳಗಾಂವಿಯಲ್ಲಿ ಇತ್ತು; ಆಮೇಲೆ ಈಗಿರುವ ಕಾಲೇಜವು ಕಟ್ಟಲ್ಪಟ್ಟಿತು. ಈಗ ಇಲ್ಲಿದ್ದ ಬೋರ್ಡಿಂಗ ಹೌಸನ್ನು ಆಗಿನ ಇಂಜನೀಯರ ಸಾಹೇಬರು ಯುರೋಪಿಯನ್ನರಿಗೆ ಉಪಯೋಗವಾಗುವಂತೆ ಕಟ್ಟಿಸಿದ್ದರು. ಆಗಿನ ಮೆಹಬ್ಬಾನ ಎ. ಇನಸ್ಪೇಕ್ಟರರಾದ ರಸಲ್‌ಸಾಹೇಬರವರು ಹೊಸ ಕಾಲೇಜದ ಕಟ್ಟಣೆಯಲ್ಲಿ ಅವಶ್ಯವಾದ ಸುಧಾರಣೆಗಳನ್ನು ಮಾಡಿಸಿಕೊಳ್ಳಿರೆಂದು ಶ್ರೀನಿವಾಸ ರಾಯರನ್ನು ಇಲ್ಲಿಗೆ ಕಳುಹಲು, ಆ ಪ್ರಕಾರ ಅವರು ಬಂದು ನಮ್ಮ ಜನರಿಗೆ ಅನುಕೂಲವಾಗುವಂತೆ ಅನೇಕ ಸುಧಾರಣೆಗಳನ್ನು ಮಾಡಿಸಿದರು. ೧೮೭೯ನೇ ಇಸವಿಯಲ್ಲಿ ಇವರು ಮುಂಬಯಿ ಹಾಯಿಕೋರ್ಟಿನ ಕನ್ನಡ ತ್ರಾನ್ಸಲೇಟರ ಕೆಲಸವನ್ನು ೭ ತಿಂಗಳು ಮಾಡಿದರು ಮತ್ತು ೧೮೮೪ರಲ್ಲಿ ಕೆಲವು ದಿವಸ ಕಲಾದಗಿ ಡಿಪ್ಯುಟಿ ಇನ್ಸಪೇಕ್ಟರರೂ ೧೮೮೪ರಲ್ಲಿ ಕೆಲವು ತಿಂಗಳು ಕಾರವಾರ ಡಿಪ್ಯು. ಇನ್ಸಪೇಕ್ಟರರೂ ೧೮೮೫ರಲ್ಲಿ ಕೆಲವು ದಿವಸ ಸೊಲ್ಲಾಪೂರ ಡಿಪ್ಯುಟಿ ಇನಸ್ಪೇಕ್ಟರರೂ ಆಗಿದ್ದರು. ಮುಂದೆ ತುಸು ದಿವಸಗಳಲ್ಲಿ ವಿಜಾಪೂರ ಜಿಲ್ಲೆಯ ಕಾಯಮು ಡಿ॥ ಇನಸ್ಪೇಕ್ಟರರನ್ನಾಗಿ ೧೬೫ ಪಗಾರಕ್ಕೆ ನೇಮಿಸಿದರು. ಆಗ್ಗೆಲ್ಲಿದ್ದಾಗ ಸರಕಾರದವರು ಇವರಿಗೆ ಬಹಳ ಶಿಫಾರಸು ಮಾಡಿದರು. ಯಾಕೆಂದರೆ, ಇವರು ಹೋದ ಹೋದಲ್ಲಿ ವ್ಯಾಖ್ಯಾನಗಳನ್ನು ಕೊಟ್ಟು ಶಾಸ್ತ್ರೀಯ ಪ್ರಯೋಗಗಳನ್ನು ಮಾಡಿ ತೋರಿಸಿ ಶಾಲೆಯ ಕೆಲಸಕ್ಕೆ ಮಾಸ್ತರ ಜನರಿಗೂ ಊರವರಿಗೂ ಬಹಳ ಉತ್ತೇಜನ ಕೊಡುತ್ತಿದ್ದರು. ಆದರೆ ಈ ಸೌಖ್ಯವು ಬಹಳ ದಿವಸ ನಿಲ್ಲಲಿಲ್ಲ "ಸುಖದ ಪರಮಾವಧಿಯಲ್ಲಿ ದುಃಖವು" ಎಂಬಂ

ತೆ ನಮ್ಮ ಚರಿತ್ರ ನಾಯಕರು ದುರ್ದೈವದಿಂದ ೧೦೦ ರೂ
ಪಾಯಿ ಐಗಾರದ ಮೇಲೆ ಪುನಃ ಟ್ರೇನಿಂಗ ಕಾಲೇಜದಲ್ಲ
ನೇ ಆ ಜಾಗಾಕ್ಕೆ ನೇಮಿಸಲ್ಪಟ್ಟರು. ಆದರೆ ಶ್ರೀಹರಿಯ
ದಯದಿಂದ ಸೊನ್ನೆ ಸೊನ್ನೆ ೫೦ ರೂಪಾಯಿ ಸಂಬಳ ಹ
ಚ್ಚು ಮಾಡಿ ವ್ಹಾಯಿಸ ಪ್ರಿನ್ಸಪಾಲ ಕೆಲಸಕ್ಕೆ ನೇಮಿಸಿದ
ರು. ಈ ಉತ್ಕರ್ಷದಿಂದ ಅವರಿಗೆ ಬಹಳ ಆನಂದವಾಗಿ
ತ್ತು. ಆದರೆ ಆ ಆನಂದವು ಕೆಲವು ತಿಂಗಳುಗಳವರೆಗೆ ಸ
ಹ ಅವರಲ್ಲಿ ಉಳಿಯಲಿಲ್ಲ. ದೇವರು ತಮ್ಮ ಮೇಲೆ ತನ್ನ
ಕರುಣಾಕಟಾಕ್ಷವನ್ನು ಬೆಳ್ಳಿದನೆನ್ನುವಷ್ಟರಲ್ಲಿ ಅವರಿಗೆ ಭ
ಯಂಕರವಾದದ್ದೂ ಪ್ರಾಣಾಂತ್ಯ ಸಮಯವನ್ನು ತರುವಂ
ಥಾದ್ದೂ ಇಹಲೋಕದ ಜೀವಿತ್ವವನ್ನು ಅಸಹ್ಯಕರವಾಗಿ
ಮಾಡುವಂಥಾದ್ದೂ ಆದ ಒಂದು ದೊಡ್ಡ ಧಕ್ಕೆ ತಗಲಿತು ಆ
ದಾವದೆಂದರೆ—ಅವರಿಗೆ ಪ್ರಿಯಕರನೂ ಸುಸ್ವಭಾವಪ್ರ
ನೂ ಪಿತೃಭಕ್ತಿಪರಾಯಣನೂ ಚಿಕ್ಕವನೂ ಆದ ಪಾಂಡು
ರಂಗರಾಯನು ಅಕಾಲಿಕ ಮರಣಹೊಂದಿದ ಸಂಗತಿಯು
ಈ ಮಗನನ್ನು ಶ್ರೀನಿವಾಸರಾಯರೂ ಅವರ ಪತ್ನಿಯರಾ
ಅಂಬಾಬಾಯಿಯವರೂ ಅಂಗೈಯೊಳಗಿನ ಅರಗಿಳಿಯಂತೆ
ಜೋಪಾನವಮಾಡುತ್ತಿದ್ದರು ಯಾಕಂದರೆ ಆ ದಂಪತಿಗ
ಳಿಗೆ ಪಾಂಡುರಂಗರಾಯನು ಒಬ್ಬನೇ ಮಗನಾಗಿದ್ದನು. ಆ
ವನ ಮರಣದಿಂದ ಶ್ರೀನಿವಾಸರಾಯರ ಕುಟುಂಬಕ್ಕೆ ಬಹ
ಳ ಕೇಡು ಸಂಭವಿಸಿತೆಂಬದನ್ನು ಹೇಳುವದೆಂದರೆ ಘಾಯ
ದ ಮೇಲೆ ಬರೆಕೊಟ್ಟಂತೆಯೇ ಸರಿ. ಈ ಮೈಮುಳ್ಳತರುವ
ಸಂಗತಿಯನ್ನು ಬರೆಯುವಾಗ ನಮ್ಮ ಲೇಖಣಿಕೆಯು ಮುಂ
ದಕ್ಕೆ ಸಾಗಲೊಲ್ಲದು; ಆದರೂ ಕರ್ತವ್ಯ ಪರಾಙ್ಮುಖತೆಯ
ಅಪವಾದ ಭಯದಿಂದ ಹಿಡಿದ ಕೆಲಸವನ್ನು ನೆರವೇರಿಸಲಿಕೆ
ಬೇಕು

ತಾರುಣ್ಯವು ಇವರ ಶರೀರವನ್ನು ಬಹಳ ಹಣ್ಣು ಮಾಡಿ
ತ್ತು. ಇದರಿಂದ ಅವರು ಬಹಳ ಅಶಕ್ತರಾಗಿದ್ದರು. ಗಡ್ಡ
ಖಿನಾಸೆಗಳು ಬೆಳ್ಳಗಾಗಿದ್ದವು. ಚರ್ಮಾಚ್ಛಾದಿತ ಅಸ್ಥಿಪಂಜರ

ನೇ ದೃಷ್ಟಿಗೆ ಬೀಳುತ್ತಿತ್ತು. ಇಂಥ ಸ್ಥಿತಿಯಲ್ಲಿ ಪುತ್ರವಿಯೋ
ಗವಾಯ್ತು. ಪುತ್ರನನ್ನು ಅಗಲಿ ಅರಗಳಿಗೆಯಾದರೂ ಇ
ಲಾರದ ಶ್ರೀನಿವಾಸರಾಯರು ಮಗನ ಮೋರೆಯನ್ನು ನೋ
ಡದೆ ೪ ತಿಂಗಳಾದವೆಂದು ವಿಯೋಗದುಃಖವು ಹೆಚ್ಚಾ
ವಶಂಬರೆ ತಿಂಗಳ ರ್ಯನೇ ಸಾರೀಖಿಗೆ ತಾವೂ ಮಗನನ್ನು
ಹಿಂಬಾಲಿಸಿ ಕುಟುಂಬವನ್ನೂ ಇಷ್ಟ ಮಿತ್ರರನ್ನೂ ಬಾಲ್ಯ
ನಸ್ಥಿಯಲ್ಲಿರುವ ಕನ್ನಡ ಭಾಷೆಯನ್ನೂ ಶೋಕಸಾಗರದಲ್ಲಿ
ನೂಕಿದರು. ಹಾ ! ಕಷ್ಟವೇ !! ಆ ಕುಟುಂಬದ ಸ್ಥಿತಿಯು ಏ
ನಾಯಿತು ಅಯ್ಯೋ ಮನೆತನದ ವ್ಯವಸ್ಥೆಯನ್ನು ನೋಡ
ಲಿಕ್ಕೆ ಒಬ್ಬನಾದರೂ ಇಲ್ಲವಲ್ಲ !! ದೈವಗತಿಗೆ ಉಪಾಯವಿ
ಲ್ಲ; ಸೂಜ್ಞರು ಈ ಪ್ರಕಾರ ಶೋಕಿಸುವದು ಒಳಿತಲ್ಲ
जातस्यमरणं ध्रुवं ಎಂಬಂತೆ ಮರಣವು ಯಾರಿಗೂ ತಪ್ಪಿಲ್ಲ
ಹೀಗೆ ತಿಳಿದು ಅವರ ಕುಟುಂಬದವರೂ ಇಷ್ಟ ಮಿತ್ರರೂ
ಭಾತ್ರವರ್ಗವೂ ಸಮಾಧಾನವನ್ನು ತಾಳಬೇಕು.

(ಸಶೇಷ)

CHEMISTRY.

ರಸಾಯನಶಾಸ್ತ್ರ.

(೧೬ನೇ ಪುಟದಿಂದ ಮುಂದೆ ಸಾಗಿದ್ದು.)

ಪ್ರಯೋಗ ೪೧—ವರ್ಣನಾಶಕ ಪುಡಿಯನ್ನು ನೀರಲ್ಲಿ ಕ
ಲಿಸಿ ರಾಡೀ ಮಾಡಿ, ಆ ರಾಡಿಯಲ್ಲಿ ಬಣ್ಣದ ಅರಿವೆಯನ್ನು
ಎದ್ದಿದರೆ ಅದರ ಬಣ್ಣವು ಹೋಗುವದಿಲ್ಲ ಆದರೆ ಆ ಮಿಶ್ರ
ಣದಲ್ಲಿ ತುಸು ಗಂಧಕಾಮ್ಲವನ್ನು ಬೆರಿಸಿ ಬಟ್ಟೆಯನ್ನೆದ್ದಿದರೆ
ಬೇಕಾದಂಥ ಗಟ್ಟಿ ಬಣ್ಣದ ಬಟ್ಟೆ ಇದ್ದರೂ ಅದರ ಬಣ್ಣವೆ
ಲ್ಲ ಅಳಿದುಹೋಗಿ ಅರಿವೆಯು ನಿರ್ಮಲವಾಗುವದು. ವಿಲಾ
ಯತಿಯೊಳಗಿನ ಅಗಸರು ಬಟ್ಟೆಗೆ ಬಿದ್ದ ತರತರದ ಕಲೆ
ಳನ್ನು ಈ ವಾಯುವಿನ ಸಹಾಯದಿಂದಲೇ ತೆಗೆಯುತ್ತಾರೆ

೫೦ ಗಂಧಕ—ಇದು ಅರಿಶಿನ ಬಣ್ಣದ ಅಪ್ರವಾಹಿ ಪದಾ
ರ್ಥವು. ಇದು ರಜಗಳ ರೂಪದಿಂದಲೂ, ಹಳಕಿನ ರೂಪದಿ

ಪಲೂ, ದೊಡ್ಡ ದೊಡ್ಡ ಉಂಡಿಗಳ ರೂಪದಿಂದಲೂ ದೊರೆಯುತ್ತದೆ. ಗಂಧಕದ ಹಳಕನ್ನು ಸೌಟಿನಲ್ಲಿಟ್ಟು ಬೆಂಕಿಯ ಮೇಲಿಡಲಾಗಿ ಅದು ಮೊದಲು ಕರಗುತ್ತದೆ, ಬಳಿಕ ಕುದಿಯುತ್ತದೆ, ಕಡೆಯಲ್ಲಿ ಉರಿಯುತ್ತದೆ. ಇದರ ಜ್ವಾಲೆಯು ಮಂದವಾದ ನೀಲವರ್ಣದ್ದುಂಟು. ಉರಿಯುವಾಗ ಉಗ್ರಗಂಧವು ನಾಲ್ಕೂ ಕಡಿಗೆ ಪಸರಿಸುತ್ತದೆ. ಗಂಧಕವು ಉರಿಯುವಾಗ ಹವೆಯೊಳಗಿನ ಆಕ್ಸಿಜನದೊಡನೆ ಸಂಯೋಗವಾಗಿ ಸಲ್ಫರ್ ಆಕ್ಸಾಯಿಡ ಎಂಬ ಮೂರನೇ ಪದಾರ್ಥ ಉಂಟಾಗುತ್ತದೆ.

ಸಲ್ಫರ್ ಆಕ್ಸಾಯಿಡ ಎಂಬ ವಾಯುವು ವರ್ಣಹೀನವಾದದ್ದು. ಗಂಧಕವು, ಜ್ವಾಲಾಗ್ರಾಹಿಯಾದ್ದರಿಂದ ದೀಪದ ಕಡ್ಡಿಯ ತುದಿಗೆ ಇದನ್ನು ಹಚ್ಚುತ್ತಾರೆ. ಆದ್ದರಿಂದ ಇದಕ್ಕೆ ತೀವ್ರ ಬೆಂಕಿ ಹತ್ತಿ ಕಡ್ಡಿಯು ಉರಿಯಹತ್ತುತ್ತದೆ. ಗಂಧಕ, ಸೋರುಪ್ಪು, ಇದ್ದಲಿ ಈ ಮೂರು ಪದಾರ್ಥಗಳನ್ನು ಮಿಶ್ರ ಮಾಡಿ ತುಬಾಕೆಯ ಮದ್ದನ್ನು ತಯಾರ ಮಾಡುತ್ತಾರೆ.

ಜ್ವಾಲಾಮುಖಿ ಪರ್ವತಗಳುಳ್ಳ ದೇಶದಲ್ಲಿ ಮುಖ್ಯವಾಗಿ ಸಿಸಲಿ ನಡುಗಡ್ಡೆಯಲ್ಲಿ ಶುದ್ಧ ಗಂಧಕವು ಹೇರಳವಾಗಿ ಬೊರಿಯುತ್ತದೆ. ಅನೇಕ ಧಾತುಗಳೊಡನೆ ಗಂಧಕವು ಸಂಯೋಗವಾಗಿ ತರತರದ ಸಲ್ಫಾಯಿಟ್ ಎಂಬ ಪದಾರ್ಥವನ್ನು ಹುಟ್ಟಿಸುತ್ತದೆ. ಬಹುತರವಾಗಿ ಅಶೋಧಿತ ಧಾತುಗಳು ಸಲ್ಫಾಯಿಟ್ ಅಂದರೆ ಗಂಧಕ ಮಿಶ್ರಿತರೂಪದಿಂದಲೇ ವರ್ತಿಸುತ್ತವೆ. ಅಶೋಧಿತ ಸೀಸವು ಸೀಸದ ಸಲ್ಫಾಯಿಡವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಗಂಧಕ, ಆಕ್ಸಿಜನ, ಹೈದ್ರೊಜನ್ ಈ ಮೂರು ಒಂದಾಗಿ ಗಂಧಕಾಮ್ಲವೆಂಬ ಅತ್ಯುಪಯುಕ್ತ ಪದಾರ್ಥವು ಹುಟ್ಟಿರುತ್ತದೆ. ಈ ಆಮ್ಲವು ಎಣ್ಣೆಯಂತೆ ಕಾಣುತ್ತದೆ. ಇದಕ್ಕೆ ಗಂಧಕಧೃತಿಯೆಂಬ ಪೆಸರು. ಒಂದು ವಾರದಲ್ಲಿ ಸಾವಿರಾರು ಖಂಡಗ ಗಂಧಕಧೃತಿಯು ಮಾರಾಟವಾಗುತ್ತದೆ. ಸಬಕಾರ, ಬಣ್ಣ ಮುಂತಾದವುಗಳನ್ನು ತಯಾರ ಮಾಡುವ ಕಾರಖಾನೆಯಲ್ಲಿಯೂ ಬಟ್ಟೆಗಳನು

ನಿರ್ಮಾಣ ಮಾಡುವ ಕಾರಖಾನೆಯಲ್ಲಿಯೂ ಇದರ ಅವಶ್ಯಕತೆ ಬಹಳ. ಇದಲ್ಲದೆ ಎಲ್ಲ ತರದ ಆಸಿಡ್ ಅಂದರೆ ಆಮ್ಲಗಳನ್ನು ಹುಟ್ಟಿಸಲಿಕ್ಕೆ ಗಂಧಕಾಮ್ಲವೇ ಮುಖ್ಯ ಸಾಧನವಾಗಿರುತ್ತದೆ. ಈ ಗಂಧಕಾಮ್ಲವು ಬೇರೆ ಬೇರೆ ಧಾತುಗಳಲ್ಲಿ ಸಂಯೋಗವಾಗಿ ತರತರದ ಸಲ್ಫೇಟುಗಳನ್ನು ಹುಟ್ಟಿಸುತ್ತದೆ. ಹಿರಾಕಸವು, ಅಂದರೆ ಅಯರ್ನ್ ಸಲ್ಫೇಟವು, ಗಂಧಕಾಮ್ಲವು ಕಬ್ಬಿಣದೊಡನೆ ಸಂಯೋಗವಾಗಿರುವದರಿಂದ ಹುಟ್ಟಿರುತ್ತದೆ. ತುತ್ಯವು ತಾಮ್ರಗಂಧಕಾರ್ಕಗಳ ಸಂಯೋಗದ ಪ್ರತಿಫಲವಿರುತ್ತದೆ.

೫೧ ಫಾಸ್ಪರವು ಅಥವಾ ಪ್ರಕಾಶಕವೆಂಬ ಮೂಲತತ್ವವು ಅಸಂಯುಕ್ತಸ್ಥಿತಿಯಲ್ಲಿ ದೊರಿಯುವದಿಲ್ಲ. ಇದು ಆಕ್ಸಿಜನ್‌ದಲ್ಲಿ ಸಂಯುಕ್ತವಾಗಿ ಪ್ರಾಣಿಗಳ ಎಲುವಿನಲ್ಲಿಯೂ, ಕ್ಯಾಲ್ಸಿಯುಂ ಎಂಬ ಧಾತುವಿನಲ್ಲಿ ಸಂಯುಕ್ತವಾಗಿ ಕ್ಯಾಲ್ಸಿಯುಂ ಫಾಸ್ಫೇಟ ಎಂಬ ಪದಾರ್ಥದಲ್ಲಿಯೂ ಇರುತ್ತದೆ. ಪ್ರಾಣಿಗಳ ಎಲುವುಗಳನ್ನು ಸುಡಲಾಗಿ ಭಿದ್ರಯುಕ್ತ ಶುಭ್ರ ಗೋಲಕಗಳು ತಳಕ್ಕೆ ಉಳಿಯುತ್ತವೆ. ಆ ಗೋಲಕಗಳಿಗೆ ಅಸ್ಥಿಗೋಲಕಗಳೆಂಬ ಹೆಸರು. ಅವುಗಳಿಂದಲೇ ಫಾಸ್ಪರವನ್ನು ತೆಗೆಯುತ್ತಾರೆ.

ಫಾಸ್ಪರವು ಎರಡು ಬಣ್ಣದ್ದುಂಟು. ಒಂದು ಹಳದಿಯದು, ಮತ್ತೊಂದು ಕೆಂಪದು. ಇವೆರಡೂ ಭಿನ್ನ ಧರ್ಮಿಗಳಾಗಿರುತ್ತವೆ.

ಪ್ರಯೋಗ—೪೨. ಒಂದು ಸಣ್ಣ ಕಬ್ಬಿಣ ಹಂಚನ್ನು ಅಡ್ಡಣಿಗೆಯ ಮೇಲಿಟ್ಟು ಒಂದು ಹೆಸರು ಕಾಳಷ್ಟು ಹಳದೀ ಬಣ್ಣದ ಫಾಸ್ಪರದ ಹಳಕನ್ನು ಅದರ ಮೇಲಿಡು. ಫಾಸ್ಪರದ ತುಂಡನ್ನು ನೀರೊಳಗೇ ಇಟ್ಟು ಒಡಕೊಳ್ಳಬೇಕು. ಯಾಕಂದರೆ ಅದಕ್ಕೆ ಹವೆಯ ಸಂಪರ್ಕವಾದ ಕೂಡಲೆ ಅದು ಹೊತ್ತಿ ಉರಿಯುವದು ಆ ವೇಳೆಯಲ್ಲಿ ಅದು ನಮ್ಮ ಕೈನೊಳಗಿದ್ದರಂತೂ ಕೇಳುವದೇನು? ಕೈಸುಟ್ಟು ಹುಣ್ಣಾಗುವದು ಆದ್ದರಿಂದ ಅದನ್ನು ನೀರೊಳಗಿಟ್ಟು ಅಲ್ಲೇ ಒಡೆದು ಇಕ್ಕಳದಿಂದ ಅದರ ಹಳಕನ್ನು ತಕ್ಕೊಂಡು ಒತ್ತಿ ಒರಡಿನ

ಲ್ಲಿ ಇಟ್ಟು ಒತ್ತಿ ಹಸಿಯನ್ನು ಕಳೆದು ಹಿಂದೆ ಹೇಳಿದಂತ ಕಬ್ಬಿಣದ ಪಂಚಿನ ಮೇಲೆ ಇಡಬೇಕು. ಆದರೆ ಕೆಂಪು ಫಾಸ್ಪರಕ್ಕೆ ಇಷ್ಟು ಅಂಜುವ ಕಾರಣವಿಲ್ಲ ಇದನ್ನು ನೀರೊಳಗೆ ಇಟ್ಟಿರುವದಿಲ್ಲ. ಯಾಕಂದರೆ ಹವೆಯ ಸಂಪರ್ಕದಿಂದ ಇದು ಉರಿಯುವ ಭಯವಿಲ್ಲ. ಒಮ್ಮೊಮ್ಮೆ ಈ ಫಾಸ್ಪರದ ಪುಡಿಯನ್ನೂ ಮಾಡಿರುತ್ತಾರೆ. ಈ ಫಾಸ್ಪರದ್ದೊಂದು ಪರಳನ್ನು ಅಥವಾ ತುಸು ಪುಡಿಯನ್ನು ಅದೇ ಕಬ್ಬಿಣ ಪಂಚಿನ ಮೇಲೆ ಇಟ್ಟು ಬುಡದಲ್ಲಿ ದೀಪವನ್ನು ಇಡು. ಅಗೋ ಹಳದಿಯ ಫಾಸ್ಪರವು ಉರಿಯಹತ್ತಿದೆ. ಅದರ ಪ್ರಕಾಶಮಾನವಾದ ಜ್ಯೋತಿಯು ಕಂಗೊಳಿಸಹತ್ತಿದೆ. ಶುಭ್ರವಾದ ಧೂಮವು ಹೊರಡಹತ್ತಿದೆ. ಆದರೆ ಈ ಕೆಂಪು ಫಾಸ್ಪರದ ಪರಳು ಇದ್ದಂತೆ ಅದೆ ಇದು ಉರಿದುಹೋಗಲಿಕ್ಕೆ ಸ್ವಲ್ಪ ಅವಕಾಶ ಬೇಕು. ತುಸು ಹೊತ್ತು ಸುಮ್ಮನೆ ಕೂಡು. ಅಗೋ, ಇದು ನೋಡು ಇದೂ ಹಿಂದಿನ ಫಾಸ್ಪರದಂತೆಯೇ ಉರಿಯಲಾರಂಭಿಸಿತು. ಈ ಪ್ರಯೋಗದಿಂದ ಹಳದೀ ಫಾಸ್ಪರವು ತೀವ್ರ ಜ್ವಾಲಾಗ್ರಾಹಿ ಇರುವದರಿಂದ ಯಾವಾಗಲೂ ಅದನ್ನು ನೀರೊಳಗೆ ಇಟ್ಟಿರಬೇಕೆಂತಲೂ ಕೆಂಪದು ಅಷ್ಟು ತೀವ್ರ ಧರ್ಮಿಯಲ್ಲದ್ದರಿಂದ ಹವೆಯಲ್ಲಿ ತೆರೆದಿಟ್ಟರೂ ಅಡ್ಡಿ ಇಲ್ಲೆಂತಲೂ ನಿಮಗೆ ಸ್ಪಷ್ಟವಾಗಿ ತಿಳಿಯುವದು.

ಪ್ರಯೋಗ—೪೫. ಹಳದೀ ಫಾಸ್ಪರವನ್ನು ಸಹಜ ಕೈಯಿಂದ ತಿಕ್ಕಿದರೂ ಅದು ಹೊತ್ತಿ ಉರಿಯುವದು ಒಂದು ಸಣ್ಣ ಹಳದೀ ಫಾಸ್ಪರದ ಪರಳನ್ನು ಒತ್ತಳಿರಡಿನಲ್ಲಿ ಮಡಚಿ ನೆಲದಮೇಲಿಟ್ಟು ಮಚ್ಚಿಗಾಲಿನಿಂದ ಇಲ್ಲವೆ ಸುತ್ತಿಗೆಯಿಂದ ಇಲ್ಲವೆ ಹಲಿಗೆಯಿಂದ ತಿಕ್ಕಿದರೂ ಅದು ಹೊತ್ತಿ ಉರಿಯಹತ್ತುವದು. ಫಾಸ್ಪರದಲ್ಲಿರುವ ಈ ಧರ್ಮವನ್ನು ಕಂಡುಕೊಂಡದ್ದರಿಂದಲೇ ಅದನ್ನು ದೀಪದಕಡ್ಡಿಯ ತುದಿಗೆ ಹಚ್ಚುತ್ತಾರೆ. ಆ ಕಡ್ಡಿಯ ತುದಿಯನ್ನು ತಿಕ್ಕಿದ ಕೂಡಲೆ ಫಾಸ್ಪರವು ಉರಿಗೊಳ್ಳುತ್ತದೆ. ಆ ಉರಿಯಿಂದ ಗಂಧಕವೂ ಗಂಧಕದ ಉರಿಯಿಂದ ಕಡ್ಡಿಯೂ ಉರಿಯಲಾರಂಭಿಸುತ್ತವೆ. ಕಡ್ಡಿಯ

ತುದಿಯಲ್ಲಿರುವ ಕೆಂಪು ಬಣ್ಣದ ಪದಾರ್ಥದಲ್ಲೀಯೇ ಫಾಸ್ಪರ್ ವಿರುವದು. ಈ ತುದಿಯನ್ನು ಕೆಟ್ಟಗೆಯ ಹುರುಬರಕು ಮೈಮೇಲೆ ಒತ್ತಿ ಎಳೆದ ಕೂಡಲೆ ಫಾಸ್ಪರವು ಹೊತ್ತಿ, ಉರಿಯಲಾರಂಭಿಸುತ್ತದೆ.

ಒಳಗಡೆಯಲ್ಲಿ ಕೆಟ್ಟಗೆಯ ಕರಿ ಮೈಮೇಲೆ ಮಾತ್ರ ಎಳೆದರೆ ಹೊತ್ತುವಂಥ ದೀಪದಕಡ್ಡಿಯು ಕೆಟ್ಟಗೆಗಳು ತಯಾರಾಗಿ ಮಾರಲಿಕ್ಕೆ ಬರುವದು ನಿಮಗೆ ಗೊತ್ತಿರಬಹುದು. ತುಸು ವಿಚಾರ ಮಾಡಿದರೆ ಈ ಕಡ್ಡಿಗಳನ್ನು ತಯಾರ ಮಾಡುವ ಹಂಬಿಕೆಯು ತಿಳಿಯುವದು. ಈ ಮಾದರಿಯದೊಂದು ಕಡ್ಡಿಯನ್ನು ಬೇಕಾದಂಥ ಹುರುಬರಕು ಸ್ಥಳದಲ್ಲಿ ತಿಕ್ಕಿದರೂ ಇವು ಹತ್ತುವದಿಲ್ಲ. ಆದರೆ ಅವುಗಳ ಕೆಟ್ಟಗೆಯ ಬದಿಗೆ ಹಚ್ಚಿರುವ ಕಪ್ಪು ಅಥವಾ ನಸುಗೆಂಪು ಬಣ್ಣದ ಕಾಗದದ ಮೇಲೆ ಎಳೆದ ಕೂಡಲೆ ಉರಿಗೊಳ್ಳುವದು. ಹೀಗಾಗುವ ಕಾರಣವೇನು? ಈ ಜಾತಿಯ ಕಡ್ಡಿಗಳ ತುದಿಯಲ್ಲಿ ಫಾಸ್ಪರವಿರುವದಿಲ್ಲ. ಜ್ವಾಲಾಗ್ರಾಹಿ ಪದಾರ್ಥವು ಇರುತ್ತದೆ. ಕೆಟ್ಟಗೆಯ ಬದಿಗಿರುವ ಕಾಗದದಲ್ಲಿ ಕೆಂಪು ಫಾಸ್ಪರದ ಪುಡಿಯನ್ನು ಹಚ್ಚಿರುತ್ತಾರೆ. ಕಡ್ಡಿಯನ್ನು ಎಳೆದಕೂಡಲೆ ಕಾಗದದೊಳಗಿನ ಫಾಸ್ಪರವು ಕಡ್ಡಿಯ ತುದಿಗೆ ಹತ್ತಿ, ಘರ್ಷಣದಿಂದ ಹೊತ್ತಿ ಕಡ್ಡಿಯ ತುದಿಯನ್ನು ಉರಿಗೊಳಿಸುತ್ತದೆ.

೫೦ ಸಿಲಿಕಾನವು—ಈ ತತ್ವವು ಶುದ್ಧ ಸ್ಥಿತಿಯಲ್ಲಿ ದೊರೆಯುವದಿಲ್ಲ. ಆಮ್ಲಜದ ಸಂಗಡ ಮಿಶ್ರವಾಗಿ ಜೇಂಬಿಗಲ್ಲಿನ ರೂಪದಿಂದ ವಿಪುಲವಾಗಿ ದೊರಿಯುತ್ತದೆ. ಸ್ಫಟಿಕ, ಗಾರಗಲ್ಲು, ಉಸುಬಿನ ಕಲ್ಲು ಇತ್ಯಾದಿಗಳಲ್ಲಿ ಸಿಲಿಕಾನವು ವಿಪುಲವಾಗಿ ದೊರೆಯುತ್ತದೆ. ಇದು ಧಾತುಗಳಲ್ಲಿ ಸಂಯೋಗವಾಗಿ ತರೆತರದ ಸಿಲಿಕೇಟುಗಳನ್ನು ಹುಟ್ಟಿಸುತ್ತದೆ. ಚಿನಯಿ ಮಣ್ಣಿನ ಪಾತ್ರೆಗಳಲ್ಲಿಯೂ ಇಟ್ಟಂಗಿಗಳಲ್ಲಿಯೂ ಸಿಲಿಕವು ಇರುತ್ತದೆ ಕಾಜು ಇದು ಸಿಲಿಕೇಟವು. ಬಿಳೇ ಉಸುಬು, ಸುಣ್ಣ, ಹಪ್ಪಳಕಾರ ಈ ಮೂರರ ಮಿಶ್ರಣದಿಂದ ಮತ್ತು ಉಸುಬು ಸೀಸದ ಆಮ್ಲಜ ವಿಕಾರ ಪೋಟ್ಯಾ

ಶ್ ಈ ಮೂರು ಒಡವೆಗಳ ಮಿಶ್ರಣದಿಂದ ಬೇರೆ ಬೇರೆ ತರದ ಕಾಜು ಸಿದ್ಧವಾಗುತ್ತದೆ.

ಮೊದಲನೇ ತರದ ಮಿಶ್ರಣದಿಂದ ಖಿಡಕಿ ಕಂದೀಲಗಳಿಗೆ ಹಚ್ಚುವ ಕಾಜನ್ನೂ ಎರಡನೇ ಮಿಶ್ರಣದಿಂದ ಬಿಲೋರಗಳನ್ನೂ ಮಾಡುತ್ತಾರೆ. ಸಿಲಿಕಾನವು ಕರೇ ಸ್ಫಟಿಕರೂಪವಸದಾರ್ಥವು. ಇದರೊಳಗಿನ ಆಕ್ಸಿಜನವನ್ನು ಬೇರೆ ಮಾಡಬಹುದು.

ಭೂಮಿಯಲ್ಲಿರುವ ಎಲ್ಲ ಬಂಡೆಗಳಲ್ಲಿಯೂ ಕಲ್ಲುಗಳಲ್ಲಿಯೂ ಸಿಲಿಕಾನವಾಗಲಿ ಅಥವಾ ಇತ್ತೊಂದು ಮೂಲತತ್ವವಾಗಲಿ ಇದ್ದೇ ಇರುತ್ತದೆ. ಅಥವಾ ಇಂಥ ಧಾತುಗಳು ಆಕ್ಸಿಜನದೊಡನೆ ಸಂಯೋಗವಾಗಿ ಉತ್ಪನ್ನವಾದ ಸಂಯುಕ್ತ ಪದಾರ್ಥವಾದರೂ ಇರುತ್ತದೆ. ಇದರಿಂದ ಭೂಮಿಯು ಸುಟ್ಟ ಪದಾರ್ಥಗಳಿಂದ ಉತ್ಪನ್ನವಾಗಿದೆಯೆಂದು ನಿರ್ವಿವಾದವಾಗಿ ಹೇಳಬಹುದು.

೧೯ ನೇ ಪಾಠ.

ಧಾತುಗಳು

ಕಬ್ಬಿಣವು ಬಹು ಉಪಯುಕ್ತವಾದ ಧಾತುವು. ಮೂಲತಃ ಈ ಸೃಷ್ಟಿಯಲ್ಲಿ ಕಬ್ಬಿಣವೇ ಇಲ್ಲದಿದ್ದರೆ ನಾವು ತೀರ ಕಾಡು ಸ್ಥಿತಿಯಲ್ಲಿಯೇ ಇರುತ್ತಿದ್ದೆವು. ಬಂಗಾರ ಮೊದಲಾದ ಬೆಲೆಯುಳ್ಳ ಧಾತುಗಳಿಗಿಂತ ಕಬ್ಬಿಣದ ಯೋಗ್ಯತೆಯು ಎಷ್ಟೋ ಪಾಲಿಗೆ ಮೇಲಾದದ್ದು. ಕಬ್ಬಿಣವಿಲ್ಲದಿದ್ದರೆ ಗುದಲಿ, ಕುಡ, ಕುಡಗೋಲು ಮುಂತಾದ ಬುಕ್ಕಲತನದ ಮುಟ್ಟುಗಳು ಆಗುತ್ತಿದ್ದಿಲ್ಲ. ಅಂದಬಳಿಕ ಭೂಮಿಯು ಸಾಗಾಗುವ ಬಗೆ ಏನು? ಭೂಮಿಯು ಪಡಬಿದ್ದ ಬಳಿಕ ಆಹಾರವೆಲ್ಲಿಹುದು? ಮನೆಗಳೂ, ಹಡಗುಗಳೂ ಶಿಲ್ಪಕೆಲಸಕ್ಕೆ ಸಾಧನವಾದ ಕೈದುಗಳು ಸಿದ್ಧವಾಗುವದೆಂತು? ಇಷ್ಟು ಏಕೆ? ವಿದ್ಯಾ ಕಲಾಕೌಶಲ್ಯಗಳು ವೃದ್ಧಿಯಾಗಿ ನಾವು ಅನುಭೋಗಿಸುವ ಈಗಿನ ಸುಸ್ಥಿತಿಯು ನಮಗೆ ಎಂದೂ ಪ್ರಾಪ್ತವಾಗುತ್ತಿದ್ದಿಲ್ಲ. ಆದ್ದರಿಂದ ಕಬ್ಬಿಣಕ್ಕೆ ಅದರ ಅಸಾಧಾರಣ ಉಪಯುಕ್ತ ಗುಣಗಳಿಂದ ಲೋಹಗಳಲ್ಲಿ ಪ್ರಥಮಸ್ಥಾನವನ್ನು ಕೊಟ್ಟಿದು

ತ್ತೇವೆ. ಅತಿ ನ್ಯಾಚೀನ ಕಾಲದಲ್ಲಿ ಮನುಷ್ಯರಿಗ ಯಾವ ಲೋಹವೂ ಗೊತ್ತಿದ್ದಿಲ್ಲ. ಆಗ ಮಾನವ ಪ್ರಾಣಿಯು ಗಾರ ಗಲ್ಲನ್ನು ಮಸೆದು ತನಗೆ ಬೇಕಾದ ಮುಟ್ಟುಗಳನ್ನು ಮಾಡಿ ಕೊಳ್ಳುತ್ತಿದ್ದನು. ಆ ಕಾಲವು ಪಾಷಾಣಯುಗವೆಂದು ಕರೆಯಲ್ಪಡುವದು. ಹೀಗೆ ಸಾವಿರಾರು ವರ್ಷಗಳು ಸಂದಬಳಿಕ ಮಾನವ ವರ್ಗದಲ್ಲಿ ತಕ್ಕಷ್ಟು ಸುಧಾರಣೆಯುಂಟಾಗಿ ತಾಮ್ರ, ಕಂಚುಗಳನ್ನು ಗೊತ್ತುಹಚ್ಚಿ ಅವುಗಳಿಂದ ತಮಗೆ ಬೇಕಾದ ಬಡವೆಗಳನ್ನು ಮಾಡಿಕೊಂಡನು. ಈ ಕಾಲಕ್ಕೆ ಕಂಚಿನ ಕಾಲವೆನ್ನಬಹುದು. ಬಳಿಕ ಕೆಲಕಾಲ ಸಂದಬಳಿಕ ಅವನಿಗೆ ಕಬ್ಬಿಣವು ಗೊತ್ತಾಯಿತು.

(ಸಶೇಷ.)

MANUAL OF METHOD.

ಶಿಕ್ಷಾಕ್ರಮ.

(೧೯ನೇ ಪುಟದಿಂದ ಮುಂದೆ ಸಾಗಿದ್ದು.)

ಪರೀಕ್ಷೆಯ ಪ್ರಶ್ನೆಗಳು.

(೧) ತರುಣಶಿಕ್ಷಕರಿಗೆ ದೇಹದಂಡನ ಶಿಕ್ಷೆಯನ್ನು ಮಾಡಗೊಡಬಾರದು. ಕೊಟ್ಟರೆ ಅಪರೂಪವಾಗಿ ಮಾಡಗೊಡತಕ್ಕದು. ಇದಕ್ಕೆ ಶಿಕ್ಷಕರ ಸಂಬಂಧವ ಕಾರಣಗಳನ್ನು, ವಿದ್ಯಾರ್ಥಿಗಳ ಸಂಬಂಧವ ಕಾರಣಗಳನ್ನು ಬೇರೆ ಬೇರೆಯಾಗಿ ಹೇಳಿರಿ.

(೨) ತಿದ್ದುವಿಕೆಯ ಭೇದಕಲಕ್ಷಣಗಳನ್ನು ಹೇಳಿರಿ. ಮುತ್ತು ವಿಧೇಯತ್ವದ ಚಿಟಕ್ಕೆ ಇದರಿಂದಾಗುವ ಬಗೆಬಗೆಯ ಅನುಕೂಲಗಳನ್ನು ವಿವರಿಸಿರಿ.

(೩) ವಿದ್ಯಾರ್ಥಿಗಳಲ್ಲಿ ಕೆಲಸ ಮಾಡುವ ಹುರುಪು ಹುಟ್ಟುವಂತೆ ಇನಾಮುಗಳನ್ನು ಕೊಡಬಹುದೆಂಬವನ್ನು ಸಿದ್ಧಮಾಡಿರಿ. ಶಾಲೆಯ ವಾಡಿಕೆಯ ಕೆಲಸದಲ್ಲಿ ಉಪಯೋಗಿಸಲ್ಪಡುವಂಥ ಇನಾಮುಗಳನ್ನು ಹೇಳಿರಿ.

(೪) ಸತ್ಯವಂತಿಕೆಗೂ ಪಿಶುಣತ್ವಕ್ಕೂ ಇರುವ ಹೆಚ್ಚು ಕಡಿಮೆಯನ್ನು ವಿವರಿಸಿರಿ. ತಿದ್ದುವಿಕೆಯನ್ನು ನೆಲೆಗೊಳಿ

ಸುವದರಲ್ಲಿ ಪ್ರಬುದ್ಧ ವಿದ್ಯಾರ್ಥಿಗಳಿಂದ ಆಗುವ ನೆರವನ್ನು ಹೇಳಿರಿ.

(೫) ವಿದ್ಯಾರ್ಥಿಗಳ ದುರ್ಲಕ್ಷವು ಅವರ ದೋಷವಲ್ಲದೆ ಮಾಸ್ತರನ ದೋಷಗಳಿಂದಾಗಲಿ ಬೇರೆ ದೋಷಗಳಿಂದಾಗಲಿ ಹುಟ್ಟಬಹುದೆಂಬದನ್ನು ವಿವರಿಸಿರಿ.

(೬) ಶಿಕ್ಷಕನ ಸುಳ್ಳುತನ ನಿಷ್ಕುರತನಗಳು ವಿದ್ಯಾರ್ಥಿಗಳ ಸಾಲಿಯ ಹೊರಗಿನ ವರ್ತನ ವ್ಯವಹಾರಗಳ ಮೇಲೆ ಪರಿಣಮಿಸುತ್ತವೆಂಬದನ್ನು ವಿವರಿಸಿರಿ.

(೭) ವಿದ್ಯಾರ್ಥಿಗಳು ಎರಡನೇದವರು ಮಾಡಿದ್ದನ್ನು ನೋಡಿ ನಕಲು ತೆಗೆಯುತ್ತಾರೆ. ಅಂಕಗಣಿತವಲ್ಲಿ ಈ ಕುಂದು ವಿಶೇಷವಾಗಿ ತೋರುವದು. ಇದಕ್ಕೆ ಕೆಟ್ಟ ಶಿಕ್ಷಣವಾಗಲಿ, ಕೆಟ್ಟ ತಿದ್ದುವಿಕೆಯಾಗಲಿ ಕಾರಣವಾಗಿರುತ್ತವೆಂಬದನ್ನು ಸ್ಪಷ್ಟೀಕರಿಸಿರಿ. ಈ ಕೆಟ್ಟ ಚಾಳಿಯು ಅಂಕುರಿಸದಂತೆ ಯಾವ ಪೂರ್ವೋಪಾಯಗಳನ್ನು ಕೈಕೊಳ್ಳುವಿರಿ?

(೮) ವಿದ್ಯಾರ್ಥಿಗಳ ಮೇಲೆ ಶಿಕ್ಷಕನು ನಡಿಸುವ ಅಧಿಕಾರವೇ ತಿದ್ದುವಿಕೆಯೆಂಬ ತಿದ್ದುವಿಕೆಯ ವ್ಯಾಖ್ಯೆಯು ಸರಿಯಾಗಿರುವದೋ? ಒಳ್ಳೇ ತಿದ್ದುವಿಕೆಯ ಸ್ಪಷ್ಟವಾದ ಲಕ್ಷಣಗಳನ್ನು ಬರೆಯಿರಿ.

(೯) ಮಂಡ್ಡತನವು ಶಿಕ್ಷಕರ ದೋಷಗಳಿಂದಾದರೂ ಹುಟ್ಟಬಹುದೆಂಬದನ್ನು ವಿವರಿಸಿರಿ.

(೧೦) ಊಡಕತನಕ್ಕೆ ಕಾರಣವಾದ ಶಿಕ್ಷಕನ ದೋಷಗಳನ್ನೂ ತಾಯಿತಂದೆಗಳ ದೋಷಗಳನ್ನೂ ವಿದ್ಯಾರ್ಥಿಗಳ ದೋಷಗಳನ್ನೂ ವಿವರಿಸಿರಿ ವಿದ್ಯಾರ್ಥಿಗಳು ಶಾಲೆಯನ್ನು ತಪ್ಪಿಸುವದನ್ನು ಅವರವರ ತಾಯಿತಂದೆಗಳಿಗೆ ತಿಳಿಸಲಿಕ್ಕೆ ನೀವು ಯಾವ ಉಪಾಯಗಳನ್ನು ಯೋಜಿಸುವಿರಿ? ಊಡಕ ಹುಡುಗರನ್ನು ನೀವು ದಂಡಿಸಿವ ಬಗೆಗಳನ್ನು ವಿವರಿಸಿರಿ.

(೧೧) ಸತ್ಯವಂತಿಕೆಯಿಂದರೇನು? ಬಾಯಿಂದ ಆಡದಿದ್ದರೂ ಕೈಯಿಂದ ಮಾಡಿದ ಕೃತ್ಯಗಳಿಂದ ಹುಡುಗನು ಆ ಸತ್ಯವಂತಿಕೆಯ ದೋಷಕ್ಕೆ ಗುರಿಯಾಗುವ ಬಗೆಗಳನ್ನು ವಿವರಿಸಿರಿ.

(೧೦) ನಿಮ್ಮ ವರ್ಗದ ವಿದ್ಯಾರ್ಥಿಗಳ ಹಾಯಿತಂದೆಗಳ ನೆರವನ್ನು ದೊರಕಿಸಲಿಕ್ಕೆ ನೀವು ಮಾಡಿದ ಉಪಾಯಗಳನ್ನೂ ಅವುಗಳ ಪರಿಣಾಮಗಳನ್ನೂ ವಿವರಿಸಿರಿ.

(೧೧) ನಿಮ್ಮ ವಿದ್ಯಾರ್ಥಿಗಳಲ್ಲಿ ಸತ್ಯವಂತಿಕೆ ಸಮಯ ನಿಷ್ಠತೆಗಳನ್ನು ಯಾವ ಉಪಾಯಗಳಿಂದ ಜೀಳಿಸುವಿರಿ? ಈ ಗುಣಗಳನ್ನು ಯಾವಾಗಲೂ ತಪ್ಪದೇ ಕಾಯ್ದುಕೊಳ್ಳುವ ಪ್ರವೃತ್ತಿಯನ್ನು ಹುಟ್ಟಿಸಲಿಕ್ಕೆ ಯಾವ ಉದ್ದೇಶಗಳನ್ನು ಅವರ ಮುಂದೆ ಇಡುವಿರಿ?

(೧೪) ಶಿಕ್ಷೆ ಇನಾಮುಗಳ ಉದ್ದೇಶವನ್ನು ಕುರಿತು ನಿಮ್ಮ ಅಭಿಪ್ರಾಯವೇನು? ಮತ್ತು ಇವುಗಳನ್ನು ನೀವು ಯಾವ ತತ್ವದ ಅನುರೋಧದಿಂದ ಉಪಯೋಗಿಸುವಿರಿ?

(೧೫) ನಿಮ್ಮ ಶಿಷ್ಯರನ್ನು ಅಂಕೆಯಲ್ಲಿ ಇಡುವ ಸಂಬಂಧದಿಂದ ನಿಮಗೆ ಉಂಟಾದ ತೊಂದರೆಗಳು ಯಾವವು? ಮತ್ತು ಅವುಗಳನ್ನು ಹ್ಯಾಗೆ ನೀಗುವಿರಿ?

(೧೬) ಶಾಲೆಯಲ್ಲಿ ಒಳ್ಳೇ ವ್ಯವಸ್ಥೆಯನ್ನು ಕಾಯ್ದುಕೊಳ್ಳುವದರ ಗೌರವವನ್ನು ವರ್ಣಿಸಿರಿ.

(೧೭) ಸ್ಥಿಮಿತ ಬುದ್ಧಿಯವರಾದಂಥ, ಸೋಮಾರಿಗಳಾದಂಥ, ಹಟಮಾರಿಗಳಾದಂಥ ವಿದ್ಯಾರ್ಥಿಗಳನ್ನು ತಿದ್ದುವ ಕ್ರಮವೆಂತು? ನಿಮ್ಮ ವರ್ಗದ ವಿದ್ಯಾರ್ಥಿಗಳು ನೀವು ಹೇಳಿದ್ದನ್ನು ಲಕ್ಷಪೂರ್ವಕವಾಗಿ ಕೇಳಿಕೊಳ್ಳುವದಕ್ಕೆ ನೀವು ಮಾಡಿದ ಉಪಾಯಗಳಾವವು?

(ಸಶೇಷ)

S. D. Edl. CONFERENCE 1900.

ವಿದ್ಯಾಭಿವೃದ್ಧಿನಿಗಳ ಪರಿಷತ್ತಿನ ಬೈ. ೧೯೦೦.

(೧೬ ನೇ ಪುಟದಿಂದ ಮುಂದೆ ಸಾಗಿದ್ದು.)

ಬಳಿಕ ರಾ. ಬಹದ್ದೂರ ಚಿಟಗುಬ್ಬಿ ಶ್ರೀನಿವಾಸರಾಯರು ಮಾತಾಡಿದರು. ಅವರು "ಹಳ್ಳಿಯ ಶಾಲೆಗಳಲ್ಲಿ ಒಕ್ಕಲತನದ ಶಿಕ್ಷಣಕ್ಕಾಗಿ ಸ್ವಲ್ಪು ಉತ್ತೇಜನ ಕೊಡಬೇಕು. ೫ ನೇ ಇಯತ್ತೆಯಲ್ಲಿ ಪಾಸಾದವರನ್ನು ಇಂಗ್ಲೀಷ ಶಾಲೆಯಲ್ಲಿ

ತಕ್ಕೊಳ್ಳಬೇಕೆಂದು ಮಾಡಿದ ನಿಯಮವು ಚಲಾವಣೆಯಲ್ಲಿದ್ದು, ಬಾಲಬೋಧ ಎಂಬ ಶಬ್ದದ ಬದಲಾಗಿ ಮೋಡಿ ಅಥವಾ ಮುರಾಠಿ ಎಂಬ ಶಬ್ದವನ್ನು ಸೇರಿಸಬೇಕು. ಧರ್ಮ ಶಿಕ್ಷಣದ ಹೊರೆಯನ್ನು ಶಾಲಾಧ್ಯಾಪಕರ ಮೇಲೆ ಹೊರಿಸುವದಕ್ಕಿಂತ ವಿದ್ಯಾರ್ಥಿಗಳ ಪಾಲಕರು ಹೊರುವದು ಹೆಚ್ಚು ಯೋಗ್ಯವಾದದ್ದೂ ಹಿತವಾದದ್ದೂ ಇರುತ್ತದೆ'' ಎಂದು ಅಂದರು. ಕಡೆಯಲ್ಲಿ ಅಧ್ಯಕ್ಷರು ಭಾಷಣಮಾಡಿ ಸಭಾ ಪರಿಸಮಾಪ್ತಿಯನ್ನು ಮಾಡಿದರು. ಅವರ ಭಾಷಣದ ಸಾರಾಂಶವು–ಸಭ್ಯರೇ ಹಿಂದಿನ ಸಭೆಯಂತೆ ಈ ಸಭೆಯಲ್ಲಿ ಅನೇಕ ವಿಷಯಗಳನ್ನು ಅರೆದಾಡದೆ ಒಂದೇ ವಿಷಯವನ್ನು ಚರ್ಚೆಗೆ ಇಟ್ಟದ್ದರ ಕಾರಣವೇನೆಂದರೆ, ಅನೇಕ ವಿಷಯಗಳಾಗುವದರಿಂದ ಒಂದೂ ವಿಷಯವು ಸರಿಯಾಗಿಯೂ ಸಮಾಧಾನಕರವಾಗಿಯೂ ಚರ್ಚಿಸಲ್ಪಡುವದಿಲ್ಲ. ಒಂದೇ ವಿಷಯವಾದರೆ ಅದು ಬಹುಜನ ಅನುಭವಿಕ ವಿದ್ವಾಂಸರ ಮನದಲ್ಲಿ ಶೇರುವದರಿಂದ ಅವರವರು ಆ ವಿಷಯವಾಗಿ ತಮತಮಗೆ ಸರಿದೋರಿದ ಸಾಧಕಬಾಧಕ ಪ್ರಮಾಣಗಳನ್ನು ತೋರಿಸುವದರಿಂದ ಆ ವಿಷಯವು ಬಹುತರವಾಗಿ ಎಲ್ಲ ಬಗೆಯಿಂದಲೂ, ಪೂರ್ಣವಾಗಿಯೂ ಚರ್ಚಿಸಲ್ಪಡುವದು. ಹೀಗಾಗುವದರಿಂದ ಅದರೊಳಗಿನ ತಪ್ಪುಗಳನ್ನು ಬದಿಗೊಗೆದು ತಕ್ಕ ಹಾದಿಯಿಂದ ಅದನ್ನು ಬಳಿಕೆಯಲ್ಲಿ ತರಲಿಕ್ಕೆ ಅಡ್ಡಿಯುಳಿಯುವದಿಲ್ಲ ಎಂಬೀ ಮಾತನ್ನು ಮನದಂದು ''ಈಗ ನಾವು ಬಳಿಕೆಯಲ್ಲಿ ತರಬೇಕೆಂಬ ಇಯತ್ತೆಗಳ ಅಭ್ಯಾಸ ಕ್ರಮ'' ವೆಂಬದೊಂದೇ ವಿಷಯವನ್ನು ಸಭೆಯ ಮುಂದಿಟ್ಟಿದ್ದೆವು. ಈ ಮೂರು ದಿವಸದೊಳಗೆ ಬಹಳಮಾಡಿ ಆ ವಿಷಯವು ಎಲ್ಲ ಬಗೆಯಿಂದಲೂ ಸಾಕಷ್ಟು ಚರ್ಚಿಸಲ್ಪಟ್ಟಿತೆಂದು ನನ್ನ ನಂಬಿಗೆಯುಂಟು. ಜಗವು ಕ್ರಮವಾಗಿ ಸುಧಾರಣೆಯಲ್ಲಿ ಮುಂದಡಿಯಿಕ್ಕುತ್ತ ನಡೆದಿರುವದರಿಂದ ಓದು, ಬರಹ, ಲೆಕ್ಕ ಈ ಮುರೇ ವಿಷಯಗಳಿಂದಲೇ ಜನರು ಸಮಾಧಾನ ಹೊಂದರು. ಹಾಗೂ ಅವರ ಎಲ್ಲ ಗರಜುಗಳೂ ಪೂರ್ಣವಾಗಲಾರವು. ಆದ್ದರಿಂದ ನಾವು ಈಗಿ

ನ ಅಭ್ಯಾಸಕ್ರಮದಲ್ಲಿ ಚಿತ್ರಕಲೆ, ವಸ್ತುಪಾಠ ಮುಂತಾದ ವಿಷಯಗಳನ್ನೂ ಕಿಂಡರಗಾರ್ಟನ್ ಪದ್ಧತಿಯನ್ನೂ ಸೇರಿಸಿದ್ದೇವೆ. ಇದರಿಂದ ಚಿಕ್ಕಮಕ್ಕಳಿಗೆ ಶಾಲೆಯು ಶೆರೆಮನೆಯೆನಿಸಲಾರದಿಷ್ಟೇ ಅಲ್ಲ, ಅನೇಕ ಮೂಲತತ್ವಗಳನ್ನು ತಿಳುಕೊಳ್ಳುವ ಹಾದಿಯೂ ಕೈ, ಕಣ್ಣು ಮುಂತಾದವುಗಳನ್ನು ಸರಿಯಾಗಿ ಕೆಲಸಕ್ಕೆ ಹಚ್ಚುವ ಚಟವೂ ನೆಲೆಗೊಳ್ಳುವವು. ಚಿಕ್ಕತನದಲ್ಲಿ ಸ್ಮರಣಾ ಶಕ್ತಿಯು ಹೆಚ್ಚಿರುವದರಿಂದ ಬಾಯಿಪಾಠ ಮಾಡಲಿಕ್ಕೆ ಹುಡುಗರಿಗೆ ಬಿಗಿಯೆನಿಸುವದಿಲ್ಲ. ಆದ್ದರಿಂದ ಆ ಕಾಲದಲ್ಲಿ ಹುಡುಗರಿಗೆ ಪಾಠವಮಾಡಿಸುವದು ಒಂತಪ್ಪ. ಬಾಯಿಪಾಠ ಮಾಡಿಸಲೇ ಬಾರದೆಂಬದು ಕೇವಲ ಹೆಡ್ಡತನವು. ಇದಕ್ಕಾಗಿ ಫ್ರೋಫೇಸರ ಮ್ಯಾಕ್ಸಮಿಲ್ಲರನು ಹೇಬದು ಬರೆದಿಟ್ಟದ್ದನ್ನು ಓದುತ್ತೇನೆ. (ಓದಿ ತೋರಿಸಿದರು.) ಬಣ್ಣ, ವಸ್ತುಪಾಠ, ಆಕೃತಿಗಳ ಸಂಬಂಧವಾಗಿ ಸಭಿಕರ ಮನದಲ್ಲಿರುವ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸಿದರು. ಇಂತಿಷ್ಟೇ ವರ್ಷದ ಹುಡುಗರನ್ನು ಶಾಲೆಗೆ ಕಳಿಸಬೇಕೆಂದು ನಮ್ಮ ಒತ್ತಾಯವಿಲ್ಲ. ಬಾಲಕರ ವರ್ಷದ ತಾಸುಗಳನ್ನು ಕಡಿಮೆ ಮಾಡಬಹುದು. ಮತ್ತು ಅಂಕಲಿಪಿಯನ್ನು ಬಿನ್ ಮತ್ತು ಇನ್ನೇ ಇಯತ್ತೆಗಳಲ್ಲಿ ವಿಭಾಗಿಸಬಹುದು. ಬೇರೆ ಬೇರೆ ಇಯತ್ತೆಗಳಿಗೆ ತಕ್ಕದ್ದಾದ ಯೋಗ್ಯವಾದ ಕವಿತೆಯ ಪುಸ್ತಕವನ್ನೂ ಸುಲಭವಾದ ಹಿಂದುಸ್ಥಾನದ ಇತಿಹಾಸ ಪುಸ್ತಕವನ್ನೂ ತಯಾರಿಸುವದು ಯೋಗ್ಯವದಿ. ಬೇರೆ ಬೇರೆ ಇಯತ್ತೆಗಳ ಸಂಬಂಧದಿಂದ ಬೇರೆ ಬೇರೆ ಜನರು ಮಾಡಿದ ಸೂಚನೆಗಳನ್ನು ಜಾಗ್ರತೆಯಿಂದ ವಿಚಾರಿಸುವೆವು. ಕಾಲೇಜದ ಶಾರೀರ ಶಿಕ್ಷಣದ ಶಿಕ್ಷಕನು ತನ್ನ ವಿಷಯದ ಸಂಬಂಧದಿಂದಲೂ ಹಲವು ಸೂಚನೆಗಳನ್ನು ಸಭೆಯ ಮುಂದಿಟ್ಟದ್ದು ಬಹು ಅಭಿನಂದನೀಯ ಸಂಗತಿಯು. ಧರ್ಮಶಿಕ್ಷಣನೀತಿಶಿಕ್ಷಣಗಳ ಸಂಬಂಧವಾಗಿ ನಮ್ಮ ಶಾಲೆಯಲ್ಲಿ ಪ್ರಸ್ತುತಕ್ಕಿಂತ ಹೆಚ್ಚಿನ ಸುಧಾರಣೆಗಳನ್ನು ಮಾಡುವದು ಅಸಂಭವವಾದದ್ದು. ತಂದೆಯಂತೆ ಮಗನೆಂಬ ನಾಣ್ನುಡಿಯನ್ನು ನೀವು ಬಲ್ಲಿರಿ. ಆದ್ದರಿಂದ ಈ ವಿ

ಪಯವಾಗಿ ಹೆಚ್ಚಿಗೆ ಹೇಳುವ ಪ ಯೋಜನವಿಲ್ಲ. ಬಾ
ಬೋಧದ ವಿಷಯವಾಗಿ ನಡೆದ ಚರ್ಚೆಯು ಕೇವಲ ನಿ
ರ್ಥಕವಾದದ್ದು. ಅದು ಐಚ್ಛಿಕ ವಿಷಯವಾಗಿ ಇಡಲ್ಪಟ್ಟಿದೆ
ನವ್ಮ ಇಯತ್ತೆಗಳು ನಾಲ್ಕೂ ಜಿಲ್ಲೆಗೆ ಹತ್ತು ವಂಥವು. ಆ
ದ್ದರಿಂದ ಆಯಾ ಸ್ಥಳದ ಸ್ಥಿತಿಗತಿಗನುಸಾರವಾಗಿ ಈ
ವಿಷಯವು ಬೇಕಾದರೆ ಕಲಿಸಲಿಕ್ಕೆ ಬರಬೇಕೆಂಬಂತಿರುವ
ಉದ್ದೇಶದಿಂದಲೇ ಇದನ್ನಿಟ್ಟಿರುತ್ತೇವೆ. ತಾವೆಲ್ಲರು ಈ
ಮೂರು ದಿವಸ ಸಭೆಗೆ ಬಂದು ವಿದ್ಯಾಸುಧಾರಣಾ ಸಂಗತಿಗ
ಳಲ್ಲಿ ನಮಗೆ ಮನಃಪೂರ್ವಕವಾಗಿ ಸಹಾಯ ಮಾಡಿದಿರಿ.
ಅದರಿಂದ ತಮ್ಮೆಲ್ಲರ ಉಭಾರವನ್ನು ಮನ್ನಿಸಿ ಸಭಾಕಾ
ರ್ಯವನ್ನು ಮುಗಿಸುತ್ತೇನೆ.

ಆ ಬಳಿಕ ರಾ. ಬಹಾದ್ದೂರ ಚಿಟಗುಬ್ಬಿ ಶ್ರೀನಿವಾಸರಾ
ಯರು ಅಧ್ಯಕ್ಷರ ಉಭಾರವನ್ನು ಮನ್ನಿಸಿದರು. ಅದಕ್ಕೆ
ರಾ ಸಾ. ಅಂತಾಜಿಪಂತರು ಅನುಮತಿಯನ್ನಿತ್ತರು. ಬಳಿ
ಕ ಸಭಾ ವಿಸರ್ಜನವಾಯಿತು.

CORRESPONDENCE.

ಪತ್ರವ್ಯವಹಾರ.

ಬಂದ ಪತ್ರಗಳ ಸಾರಾಂಶವು.

ಹುನಗುಂದ ತಾಲೂಕಿನೊಳಗಿನ ಚಿತ್ತರಗಿಯ ಸಾಲಿಯ
ಲ್ಲಿ ಮೊದಲಿಗೆ ೧೬ ಹುಡುಗರು ಇದ್ದರು. ಈಗಿರುವ ಮಾ
ಸ್ತರರು ಬಂದಂದಿನಿಂದ ಆ ಸಂಖ್ಯೆಯು ಬೆಳೆಯುತ್ತ ಬೆಳೆ
ಯುತ್ತ ೯೦ ರ ವರೆಗೆ ಏರಿದೆ. ವಾರ್ಷಿಕ ಪರೀಕ್ಷೆಗೆ ಬಂದ
ರಾವಸಾ॥ ಡಿಪೂಟಿಯವರು ಅ॥ ಕ॥ ರಾದ ಮೆ ಕಾವಮಾ
ಸಾ. ಬರು ಸ್ತ್ರೀ ಶಿಕ್ಷಣೋತ್ತೇಜನಕ್ಕಾಗಿ ಕೊಟ್ಟ ೧೦ ರೂ
ಪಾಯಿಗಳನ್ನು ಬೇರೆ ಜನರಿಂದ ವಂತಿಗೆಯ ಹಣದಿಂದ ಸಂ
ಗ್ರಹಿಸಿದ ಕುಪ್ಪಸಗಳನ್ನು ಶಾಲಾ ವಿದ್ಯಾರ್ಥಿಗಳಿಗೆ ಉಚಿತ
ವಾಗಿ ಕೊಟ್ಟರು ಮೆ ಕಾವಮಾ ಸಾ. ಬರು ಆಗಾಗ್ಗೆ ವಿದ್ಯ

ಜ್ಞೆ ಉತ್ತೇಜನ ಕೊಡುವದನ್ನು ಕಂಡು ನಮಗೆ ತುಂಬಾ ಸಮಾಧಾನವೆನಿಸುತ್ತದೆ.

ಮೈಸೂರ ಸೀಮೆಯ ದೊಡ್ಡಬಳ್ಳಾಪುರದ ಒಬ್ಬ ಸನ್ಮಿತ್ರರು, ಆ ಊರಿಗೆ ಮೈಸೂರ ಕೌನ್ಸಿಲರರಾದ ಮಹಾರಾಜಶ್ರೀ ಕೃಷ್ಣಮೂರ್ತಿಯವರು ಬಂದಾಗ, ಆ ಊರೊಳಗಿನ ಶಾಲೆಗಳೆಲ್ಲವುಗಳನ್ನು ನೋಡಿ ಹುಡುಗರಿಗೆ ಇನಾಮು ಕೊಡುವ ಕಾರ್ಯವನ್ನು ನೆರವೇರಿಸಿದರೆಂಬ ಸಂಗತಿಯನ್ನೂ ಆ ಸಮಾರಂಭದ ವೃತ್ತವನ್ನೂ ಮೊದಲಿಂದ ಕಡೆತನಕ ಬರೆ ಪುಕಳಿಸಿದ್ದಾರೆ. ಆದರೆ ನಮ್ಮ ಚಿಕ್ಕ ಪತ್ರಿಕೆಯು ಓಡಲು ಸಣ್ಣದಿರುವದರಿಂದ ಆ ಎಲ್ಲ ವೃತ್ತವನ್ನು ಹಿಡಿಸಲಾರದು. ಆದ್ದರಿಂದ ಅದರೊಳಗಿನ ಸಾರವನ್ನು ತೆಗೆದು ಇದರಡಿಯಲ್ಲಿ ಬರೆದಿದ್ದೇವೆ

ಈ ಮಚ್ಚು ಗೊಡುವ ಸಮಾರಂಭದಲ್ಲಿ ಮೊದಲು ಅ. ವ್ಹೆ. ಶಾಲೆಯ ಮುಖ್ಯಾಧ್ಯಾಪಕರಾದ ಕೊಂಗಾಡಿಯಪ್ಪನವರು ಎಲ್ಲ ಶಾಲೆಗಳ ವಾರ್ಷಿಕ ರಿಪೋರ್ಟುಗಳನ್ನು ಓದಿದರು. ಅದರಲ್ಲಿ ಬಾಳಾಪುರದಲ್ಲಿ ಒಟ್ಟಿಗೆ ಏಳು ಶಾಲೆಗಳುಂಟು. ಅವೆಲ್ಲ ಶಾಲೆಗಳಲ್ಲಿ ಓದುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯು ೬೯೦ ಉಂಟು. ಹೊಲಿಯರ ಶಾಲೆ, ಮಾದಿಗರ ಶಾಲೆ, ರಾತ್ರೀ ಶಾಲೆ, ಹಿಂದೀ ಶಾಲೆ, ಹೆಣ್ಣುಮಕ್ಕಳ ಶಾಲೆ, ಇಂಗ್ಲಿಷ ಶಾಲೆ ಮುಂತಾದ ಶಾಲೆಗಳಲ್ಲಿ ಅಭ್ಯಾಸವು ಸರಸಾಗಿ ನಡೆಯುತ್ತದೆಂಬ ಸಂಗತಿಯನ್ನು ತೇರ್ಗಡೆ ಹೊಂದಿದ ಹುಡುಗರ ಸಂಖ್ಯೆಯಿಂದ ತೋರಿಸಿದರು. ಬಳಿಕ ಹೆಣ್ಣುಮಕ್ಕಳು ಗಂಡುಮಕ್ಕಳು ಹೊತ್ತಿಗೆ ಸರಿಯಾದ ಸಂಸ್ಕೃತ ಕನ್ನಡ ಶ್ಲೋಕಗಳನ್ನು ಅಂದರು. ಆಮೇಲೆ ಕೃಷ್ಣಮೂರ್ತಿಯವರು ಮಾತಾಡಿ, ಇನಾಮುಗಳನ್ನು ಹಂಚಿ ಸಭಾಕಾರ್ಯವನ್ನು ಮುಗಿಸಿದರು. ಮತ್ತು ವ್ಹಿಜೆಟರ್ಸ ಬುಕ್ಕಿನಲ್ಲಿ ಮಿ. ಕೊಂಗಾಡಿಯಪ್ಪನವರು ಕರ್ತವ್ಯದಕ್ಷರೂ ಸದ್ಗುಣಿಗಳೂ ಇರುವರೆಂದು ಬರೆದರು ಇ.

ಆದರೆ ಈ ಅನರೇಬಲ್ ದೊರೆಗಳು ಆಡಿ ತೋರಿಸಿದ ಮಾತುಗಳಲ್ಲಿ ಎರಡು ಮಾತುಗಳನ್ನು ಎಲ್ಲರೂ ಧ್ಯಾನದಲ್ಲಿಡುವದು ಅವಶ್ಯವಾಗಿರುತ್ತದೆ.

೧. ಹೆಸರು ಪಡೆಯುವದು ಬಿಗಿಯಾದದ್ದು; ಆದರೆ ಪಡೆದ ಹೆಸರನ್ನು ಕಾಯ್ದುಕೊಳ್ಳುವದು ಅದಕ್ಕೂ ಹೆಚ್ಚು ಬಿಗಿಯಾದದ್ದು.

೨ ಓದು ಬರಹದ ಶಾಲೆಗಳಿಗೆ ಔದ್ಯೋಗಿಕ ಶಿಕ್ಷಣದ ವರ್ಗವನ್ನು ಜೋಡಿಸುವದು ಹಿತಕರವು. ಅಂದರೆ ಹಸ್ತ ಶಿಕ್ಷಣವು ಚಿಕ್ಕಂದಿನಿಂದ ದೊರೆಯುವದು ಒಳಿತು. ಈ ಸಾಲೆಯಲ್ಲಿ ನೇಕಾರರ ಮಕ್ಕಳು ಬಹಳ ಮಂದಿ ಉಂಟು. ಅವರಿಗೆ ನೇಗಿಯ ವಿದ್ಯವನ್ನು ಕಲಿಸುವದು ಲೇಸಲ್ಲವೋ? ವಿದ್ಯಕ್ಕೆ ಕಲಾಕೌಶಲ್ಯವು ಕೂಡಿದರೆ ಸುವರ್ಣಕ್ಕೆ ಸುಗಂಧವು ಸೇರಿದಂತಾಗುತ್ತದೆ.

(ಉಳಿದ ನೇ ಪುಟದಿಂದ ಮುಂದೆ ಸಾಗಿದ್ದು.)

ಹತ್ತರ ಪದ್ಧತಿಯಲ್ಲಿ ಬರೆದ ಕೆಲವು ಸಂಖ್ಯೆಗಳು ಬೇರೆ ಬೇರೆ ಪದ್ಧತಿಗಳಲ್ಲಿ ಎಷ್ಟಾಗುತ್ತವೆಂಬದು ಕೆಳಗಿನ ಕೋಷ್ಟಕದಿಂದ ತಿಳಿಯುತ್ತದೆ.

೧೦ರ ಪದ್ಧತಿ.	೪ರ ಪದ್ಧತಿ.	೮ರ ಪದ್ಧತಿ.	೧೬ರ ಪದ್ಧತಿ.	೯ರಪದ್ಧತಿ	೧೧ರ ಪದ್ಧತಿ.
೧	೧	೧	೧	೧	೧
೫	೧೧	೫	೫	೫	೫
೧೦	೨೨	೧೪	೧೦	೧೧	೦*
೧೧	೨೩	೧೩	೧೫	೧೨	೧೦
೨೦	೧೧೦	೨೪	೨೪	೨೨	೧೯
೨೦	೧೨೨೦	೨೦	೨೮	೨೩೦	೨೯
೧೦೦	೧೨೨೦೦	೩೪೪	೧೪೪	೧೨೧	೯೧

ಈ ಕೋಷ್ಟಕದಿಂದ ಪದ್ಧತಿಯ ಸಂಬಂಧದ ಎರಡು ನಿಯಮಗಳು ಹೊರಡುತ್ತವೆ. ಅವು ಯಾವವೆಂದರೆ :—

೧೧ರ ಪದ್ಧತಿಯಲ್ಲಿ ೧೦ ಗುರ್ತುಗಳೂ ಒಂದು ಪೂಜೆ ಇರಬೇಕಾದ್ದು ಆದಕಾರಣ ೧೦ ಬರೆಯಬೇಕಾದರೆ ಒಂದು ಹೊಸ ಗುರ್ತು ಕಲ್ಪಿಸಬೇಕಾಯಿತು.

(೧) ಯಾವದೊಂದು ಪದ್ಧತಿಯಿಂದ ಬರೆದ ಸಂಖ್ಯೆಯಲ್ಲಿ ಆ ಸಂಖ್ಯೆಯ ಪದ್ಧತಿ ದರ್ಶಕ ಚಿಹ್ನಕ್ಕಿಂತ ಹೆಚ್ಚು ಬೆಲೆಯುಳ್ಳ ಚಿನ್ಹವು ಬರಲಾರದು. ಅಂದರೆ ೭ರ ಪದ್ಧತಿಯಲ್ಲಿ ೫ ಚಿನ್ಹಗಳು ಒಂದು ಪೂಜೆ. ಇವುಗಳ ಹೊರತು ಹೆಚ್ಚಿನ ಗುರುತು ಬರಲಾರದು.

(೨) ದೊಡ್ಡ ಪದ್ಧತಿಯಲ್ಲಿದ್ದ ಸಂಖ್ಯೆಯನ್ನು ಸಣ್ಣ ಪದ್ಧತಿಯಲ್ಲಿ ಬರೆದರೆ ಅಂಕೆಗಳು ಹೆಚ್ಚಿಗೆ ಬರುತ್ತವೆ. ಮತ್ತು ಸಣ್ಣ ಪದ್ಧತಿಯಲ್ಲಿದ್ದ ಸಂಖ್ಯೆಯನ್ನು ದೊಡ್ಡ ಪದ್ಧತಿಯಲ್ಲಿ ಬರೆದರೆ ಅಂಕೆಗಳು ಕಡಿಮೆ ಬರುತ್ತವೆ

ಈ ಎರಡು ನಿಯಮಗಳ ಸಹಾಯದಿಂದ ವಿವಕ್ಷಿತ ಪದ್ಧತಿಯಲ್ಲಿ ಹೇಳಿದ ಸಂಖ್ಯೆಯನ್ನು ಯಾವ ಪದ್ಧತಿಯಲ್ಲಿ ಬರೆದರೆ, ಕೊಟ್ಟ ಸಂಖ್ಯೆಯಷ್ಟು ಆಗುವದೆಂಬದನ್ನು ಹೇಳಲಿಕ್ಕೆ ಬರುತ್ತದೆ.

ಉದಾ :—೮ರ ಪದ್ಧತಿಯಲ್ಲಿರುವ ೩೪೫೬ ಈ ಸಂಖ್ಯೆಯು ಯಾವ ಪದ್ಧತಿಯಲ್ಲಿ ೧೩೦೨೩ ಆಗುವದು.

ಈ ಎರಡು ಸಂಖ್ಯೆಗಳನ್ನು ನೋಡಿದರೆ :—೨ನೇ ನಿಯಮದ ಪ್ರಕಾರ ೧ನೇ ಸಂಖ್ಯೆಯು ೮ರೊಳಗಿನ ಪದ್ಧತಿಯ ಬೆಂತಲೂ ೧ನೇ ನಿಯಮದ ಪ್ರಕಾರ ೩ರ ಮೇಲಿನ ಪದ್ಧತಿಯದೆಂತಲೂ ಸ್ಪಷ್ಟವಾಗುತ್ತದೆ. ಅಂದರೆ ೪೫೬೨ ಈ ನಾಲ್ಕರಲ್ಲಿ ಯಾವದಾದರೂ ಒಂದು ಪದ್ಧತಿಯದು ಇರಬೇಕು.

(ಶೇಷ.)

WURTH PRIZE EXAMINATION
QUESTION PAPER II
೨ನೆಯ ಕಾಗದ.

ಪ್ರಶ್ನ-(೧) ನಿಮಗೆ ಗೊತ್ತಿದ್ದ ಲಿಂಗವಂತ ಜೈನ ಕವಿಗಳ ಚರಿತ್ರವನ್ನೂ ಅವರು ಮಾಡಿದ ಗ್ರಂಥಗಳನ್ನೂ ಬರೆಯಿರಿ.

(೨) ಪುರಂದರದಾಸರು ಯಾರು? ಅವರ ಮೂತ ಯಾವದು? ಅವರು ರಚಿಸಿದ ಗ್ರಂಥಗಳು ಯಾವ ವಿಷಯದ ಮೇಲೆ ಅವೆ

(೩) ಕೆಳಗಿನ ಪದಗಳ ಅರ್ಥವನ್ನು ಬರೆಯಿರಿ.

ಬಳ್ಳಮುಕ್ತಾಫಲ, ಮನುಜನಬಾಳ್, ಸಣಬುರಿದ ಬೂದಿಯಂತೆ, ಲಘನೆ, ತ್ರೈಜತ್ರ್ಯಯತ್ರಿಂಶತ್ಕೋಟಿ, ಎಡ್ಡನೆ, ಮುಮುಕ್ಷು, ಜಡದೇಹಂಗೆ, ಜರಾಜೆಟ್ಟಿಂ, ಸಹವಾಸಿವಂಶದ

(೪) (ಅ) ಕೆಳಗಿನ ಪದ್ಯಗಳ ಅರ್ಥವನ್ನೂ, ವಿಶೇಷನಾಮಗಳ ವ್ಯುತ್ಪತ್ತಿಕಾರಣವನ್ನೂ ಬರೆಯಿರಿ.

ವಾ, ಷ ॥ ಸ್ತಂಭದ್ವಯದ ನಡುವೆ ನಿಂದನ್ಯಪನಂ ತನ್ನ ।
ಸಂಭವಂ ಮಾಡದಿ ಪಿಡಿದೊಬ್ಬರೊಂದೊಂದು ಕ್ಕೆ । ಯಿಂ ಭೂಳಮಧ್ಯಮಂ ತೀಕ್ಷ್ಣಕರ ಪತ್ರದಿಂ ಫರಿಫರಿನೆ ಸೀಳ್ವುತಿರಲೂ ॥ ಜಂಭರಿಪುನಂದನ ಮುರಾರಿಗಳ್ ಬೆರಗಾದ । ರಂಭೋಧಿಘೋಷದಿಂ ದೆದ್ದು ಹಾಹಾಕಾರ । ದಿಂ ಭಯಂಗೊಂಡೊರಲುತಿರ್ದುದಾಸ್ಥಾನದೊಳ್ ಭೂಪ ಕೇಳ್ ಕೌತುಕವನೂ ॥ ೧೦॥

ಷಷ, ಮಾ ॥ ಜಲನಿಧಿ ಜಂಭವೈರಿಗರಿಯಂ ಗಿರಿಯಂ ಬಿಡು ಬೇಗಮುಂದು ಬಂ । ದುಲಿವಪೊಲೊಪ್ಪಿಸುಸ್ತನಿತ ಮುಚ್ಚತಟಿತ್ಕರವಾಳನಾಂತ ತ ॥ ಜ್ಜ್ವಲದಭಟಂಗದಂಕುಡದೆ ತನ್ನೆಯ ಜೀವನವಿತ್ತುದಬ್ಧಿ ಭೂತಲದೊಳಿಸತ್ಪ್ರಶಾಲಿಪಗೆಗ್ಕಂ ಮರೆವೊಕ್ಕನನೀಯಲಾಪನೇ ॥ ೧೦॥

ಷಂದ ॥ ಕಿರುಕಣಿಕೆಯು ಬಟ್ಟುದ್ದವೆ
ಕಿರಿಯಸಗಸ್ತ್ಯಂಪಯೋಧಿಯುಂ ಕುಡಿಯಲೊಡಂ॥
ನೆರದುದುದಕಕ್ಕುದರವೆನೆ ।
ನೆರೆಯಿದೆ ಗುಂಡಿಗೆಯುಮುಮದೇ ಭಕಂನ ಮಗಂ॥೩

(ಬ) ಕೆಳಗಿನ ಪದ್ಯವನ್ನು ಟೀಕಿಸಿರಿ.

ಷಂದ ॥ ಆ ಮುನಿಯು ಈಮಂಡಲದೊಳು ।
ಭೂಮಿನಡಾದಿ ವ್ಯಾಪ್ತಾಖಿಳನದಿವಾರಾಸಿ ॥
ಸ್ತೋಮವಿರಲಕ್ಕುಗಡನಾ ।
ವೀಮದಗಜವೆರಸು ಗುಂಡಿಗೆಯೊಳಿರಲರಿದೇ ॥೪॥

ಸಿದ್ಧನಾಥ ವಾಚನ ಮಂದಿರ.
ಧಾರವಾಡ.

ಪ್ರಾಥಮಿಕ ಶಿಕ್ಷಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕರಂ ಸಚ್ಛಿಷ್ಟಪೋಷ್ಟರ್ಮುಂ।
ಭಯಭೂತ್ಯಂ ಪ್ರತಿಮಾಸವಾದಿಗೊಲವಿಂದೀಪತ್ರಮಂ ಮುದ್ರಿಸಿ॥
ಸದಮಿಂದಿತ್ತಪಿಪ್ರೋದಮಪ್ಪಿನುಗುಣಂ ತೋರಲ್ಕೆ ಕೈಕೊಂಬುಮೈ।
ಪಯಿಂದೋಷಪತಿಪ್ರಬೇಳ್ವುದುಬುಧರಜ್ಞಾನಾಭಿವೃದ್ಧಿಪ್ರಿಯರ್॥೧

ಪುಸ್ತಕ ೩೭]　　ಮಾರ್ಚ ೧೯೦೧.　　[ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕೆಲವು ವರ್ಷಗಳ ಪೂರ್ವದಲ್ಲಿ ನ್ಯಾಯಮೂರ್ತಿಗಳಾದ ರಾನಡೆ ಮಾಧವರಾಯರೂ, ಪ್ರಿನ್ಸಿಪಾಲರಾದ ಸೋಡಕ ವಾಮನರಾಯರೂ, ಬೇಕಧಾಪೆಯು ಉತ್ಕರ್ಷವನ್ನು ಹೊಂದಬೇಕಾದರೆ ವಿದ್ಯಾಪೀಠದ ಪದವಿಯನ್ನು ಪಡೆದ ನವಿನ್ಯಾ ತರುಣಜನರು ಅದನ್ನು ಕಲಿಯಲಿಕ್ಕೆ ಮನ ಮುಟ್ಟಿ ಮುತ್ತಿಸಹತ್ತುವದೇ ಮುಖ್ಯ ಮಾರ್ಗವೆಂದೆಣಿಸಿ ವರು ಆದರೆ ಈ ಜನರ ಲಕ್ಷವನ್ನು ಅತ್ತಕಡೆಗೆ ಒಲಿಸುವ ಬಗೆ ಏನು? ಎಂದು ಆಲೋಚಿಸಿ ಕಡೆಗೆ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಈ ಭಾಷೆಗಳನ್ನು ಸೇರಿಸುವದೇ ಉತ್ತಮೋಪಾಯವೆಂದು ನಿರ್ಣಯಿಸಿದರು. ಅದರಂತೆ ವಿದ್ಯಾಪೀಠದ ಮುಂದೆ ತಮ್ಮ ಸೂಚನೆಗಳನ್ನಿಟ್ಟರು.

ಈ ಅಭಿಮಾನಿಗಳ ಸೂಚನೆಯಂತೆ ನವಿನ್ಯಾ ದಕ್ಷಿಣ ಭಾಗದಲ್ಲಿಯೂ ಕ್ಯಾನರೀಜ ಅಸೋಸಿಯೇಶನ್ ಎಂಬದೊಂದು ಸಂಘವು ಸ್ಥಾಪಿತವಾಯಿತು. ವಿದ್ಯಾಪೀಠದ ಅಭ್ಯಾಸಕ್ರಮದಲ್ಲಿ ಕನ್ನಡ ಭಾಷೆಯನ್ನು ಸೇರಿಸಬೇಕೆಂದು ಈ ಸಂಘದ ಕಾರ್ಯದರ್ಶಿಗಳಾದ ವಿ. ಕರಂದೀಕರರು

ಸುಮಾರು ೧೦ ವರ್ಷಗಳ ಕೆಳಗೆ ಬಂದು ಅರ್ಜಿಯನ್ನು ಕಳಿಸಿದ್ದರು.

ಆದರೆ ಆಕಾಲದಲ್ಲಿ ದೇಶಭಾಷೆಗಳಲ್ಲಿ ಸಾಕಷ್ಟು ಗ್ರಂಥಗಳಿಲ್ಲೆಂತಲೂ, ಹಿಂದುಸ್ಥಾನದಲ್ಲೆಲ್ಲ ಹೆಚ್ಚು ತಿದ್ದುಪಡಿ ಹೊಂದಿದ ಸಂಸ್ಕೃತ ಭಾಷೆಯಲ್ಲಿ ವಿದ್ಯಾರ್ಥಿಗಳು ಪರಿಶ್ರಮ ಮಾಡುವದು ಹಿತವೆಂತಲೂ ಇದರಿಂದ ಸುಲಭವಾಗಿ ಪ್ರಾಕೃತ ಭಾಷೆಗಳಲ್ಲಿ ಪ್ರಾವೀಣ್ಯವನ್ನು ಸಂಪಾದಿಸಬಹುದೆಂತಲೂ, ನಿರ್ಣಯವಾಗಿ ದೇಶಭಾಷಾಭಿಮಾನಿಗಳ ಸೂಚನೆಗಳೆಲ್ಲ ಮೂಲೆಗೆ ಬಿದ್ದವು

ಆದರೆ ಇಪ್ಪರಿಂದ ಈ ನಮ್ಮ ಮುಂದಾಳುಗಳು ಎದೆಗುಂದಿ ಹಿಮ್ಮೆಟ್ಟದೆ ಪ್ರತಿಸಃ ತಮ್ಮ ಸೂಚನೆಗಳನ್ನು ವಿದ್ಯಾಪೀಠದ ಮುಂದಿಟ್ಟರು ಒಳಗಡೆಯಲ್ಲಿ ಈ ಸೂಚನೆಗಳು ಸರಿಯಾಗಿ ಚರ್ಚಿಸಲ್ಪಟ್ಟು ಕಡೆಯಲ್ಲಿ ಬಿ. ಎ. ಪರೀಕ್ಷೆಯವರೆಗಾದ ಸಂಸ್ಕೃತದ ಅಭ್ಯಾಸವು ಸಾಕಾಗುವದೆಂತಲೂ, ಎಂ. ಏ ಪರೀಕ್ಷೆಯಲ್ಲಿ ದೇಶಭಾಷೆಗಳಿಗೆ ಅನುವು ಕೊಡುವದು ಅವಶ್ಯವೆಂತಲೂ ನಿರ್ಣಯವಾಯಿತು. ಈ ನಿರ್ಣಯದಿಂದ ಕನ್ನಡ, ಮಹಾರಾಷ್ಟ್ರ, ಗುಜರಾಥಿ ಈ ಮೂರು ಭಾಷೆಗಳು ವಿದ್ಯಾಪೀಠದೊಳಗೆ ಸೇರಿಕೊಂಡವೆಂದು ನಮಗೆ ತುಂಬಾ ಸಮಾಧಾನವಿನಿಸುತ್ತದೆ.

ಈ ಕೆಲಸದಲ್ಲಿ ನಮ್ಮ ಇಲಾಖೆಯ ಡಾಯರೆಕ್ಟರರಾದ ಮೆ॥ ಜಾಯಿಲ್ಲ ಸಾಹೇಬರು ವಿಶೇಷವಾಗಿ ನೆರವಾದರೆಂಬದನ್ನು ನಾವು ಅಭಿಮಾನದಿಂದ ತಿಳಿಸುತ್ತೇವೆ. ಇನ್ನು ನಮ್ಮ ತರುಣರಾದ ಪದವೀಧರರು ತಮ್ಮ ತಮ್ಮ ಮಾತೃಭಾಷೆಯನ್ನು ಅಭ್ಯಾಸಿಸಿ ತಮಗೆ ದೊರೆದ ಪಂಡಿತ್ಯ ಸ್ಥಾನವನ್ನು ಸರಳವಾದ ಸುಲಭಭಾಷೆಯ ಗ್ರಂಥಗಳ ದ್ವಾರದಿಂದ ಮುಗ್ಧರಾದ ತಮ್ಮ ದೇಶಬಾಂಧವರ ಅಜ್ಞಾನವನ್ನು ಹೋಗಲಾಡಿಸುವರೆಂದು ಕೋರುತ್ತೇವೆ.

ಹತ್ತೊಂಬತ್ತನೇ ಶತಕವು ಮುಗಿಯಿತು ಇದು ಮುಗಿದ ಕೂಡಲೆ ಮಾತಾಡಿಕೊಂಡಂತೆ ಹಲವು ಮಹಾತ್ಮರ ಬಾ

ಳಿಕೆಗಳೂ ಮುಗಿದವು. ನ್ಯಾಯಮೂರ್ತಿಗಳಾದ ರಾನಡೆ ಮಾಧವರಾಯರು ದೇಹವಿಟ್ಟದ್ದನ್ನು ಈ ಮೊದಲೇ ತಿಳಿಸಿರುವೆವು. ಈಗ ಈ ನಮ್ಮ ಭರತ ಖಂಡದ ಚಕ್ರವರ್ತಿನಿಯೂ ಇಂಗ್ಲಂಡದ ರಾಣಿಯೂ ಆದ ವಿಕ್ಟೋರಿಯಾ ರಾಜ್ಞಿಯವರು ಜನವರಿ ತಿಂಗಳ ೨೨ನೇ ತಾರೀಖಿನ ಸಂಜೇ ೬ ಘಂಟೆಗೆ ಪರಂಧಾಮಕೆ ಹೋದರೆಂದು ತಿಳಿಸಲಿಕ್ಕೆ ಅತೀವ ದುಃಖವಾಗುತ್ತದೆ. ಬರಪಿಡುಗುಗಳಿಂದ ನಾವ್ಹು ಕಷ್ಟ ಪಡುತ್ತಿರುವದನ್ನು ಅರಿತ ಕೂಡಲೆ ಇವರ ಅಂತಃಕರಣವು ಕಳವಳಿಸುತ್ತಿದ್ದದ್ದು ನಮ್ಮ ಯೋಗಕ್ಷೇಮವನ್ನು ಯಾವಾಗಲೂ ವಿಚಾರಿಸುತ್ತಿದ್ದದ್ದು ಸರ್ವರಿಗೂ ಅರಿಕೆಯಾದ ಸಂಗತಿಯು ಇವರ ಅಲ್ಪಚರಿತ್ರವನ್ನು ಮುಂದೆ ಬರೆದಿರುವೆವು. ಇವರ ಅಂತಿಮಸಂಸ್ಕಾರದ ಕೆಲಸವು ಫೆಬ್ರುವರಿ ತಿಂಗಳ ೨ನೇ ತಾರೀಖಿನ ದಿವಸ ಖಂಡಸರ ಕೆಲ್ಲೆಯಲ್ಲಿ ಬಹುಮಾನದೊಡನೆ ನಡೆಯಿತು. ಇವರ ಆತ್ಮಕ್ಕೆ ಶಾಂತಿಯನ್ನೀ ವೆಂದು ದೇವರನ್ನು ಪ್ರಾರ್ಥಿಸುತ್ತೇವೆ.

ಬ್ರಿಟಿಷ ಸಾಮ್ರಾಜ್ಯದ ಕಾರ್ಯ ನಿರ್ವಾಹಕನೆನ್ನಿಸಿಕೊಳ್ಳುವ ಪಾರ್ಲಮೆಂಟಿನವರು ಪಹಿಸಿರುವ್ಹಾರೆ ಇವರಿಗೆ ಅರಸಿನ ಸ್ವತ್ತಾದದ್ದೂ ಕಡಿಮೆ ಇಲ್ಲ. ಈ ಎರಡೂ ಸ್ವತ್ತಿಗೆಯು ಅಧಿಕಾರವನ್ನು ನಮ್ಮ ಮಹಾರಾಣಿಯವರ ಹಿರಿಯ ಮಕ್ಕಳು ಏಳನೇ ಎಡ್ವರ್ಡನೆಂಬ ಬಿರುದಿನಿಂದ ಕೈಕೊಂಡಿರುವರು ಇವರು ಮಹಾರಾಣಿಯವರಂಥ ಸುಶಿಕ್ಷಿತರ ಮಕ್ಕಳಾಗಿಯೂ, ಅವರ ಸಹವಾಸದಲ್ಲಿ ಬಹುಕಾಲ ಕಳೆದವರಾಗಿಯೂ, ಅರವತ್ತು ವರ್ಷದ ಅನುಭವಿಗಳಾಗಿದ್ದೂ ಇರುವದರಿಂದ ಮಾತೋಶ್ರೀಗಿಂತ ಹೆಚ್ಚು ಹುಷಾರಿನಿಂದ ನಮ್ಮನ್ನು ಕಾಪಾಡುವರೆಂದು ತುಂಬಾ ನಂಬಿಕೆಯಿದ್ದೇವೆ ದೇವರು ಇವರಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ದಯಪಾಲಿಸಲೆಂದು ಹಾರೈಸುತ್ತೇವೆ.

ಮೈ. ರಾ ಅಂಬಾರಾವ ನವದಿಬುವರು ಮಡಿದದ್ದರಿಂದ ಅವರ ಸ್ಥಳಕ್ಕೆ ಹುದ್ದಾರದ ಡಿ. ಎ. ಇ ಜೋಸೀ ವಿನಾಯರಾಯರನ್ನು ಇವರ ಸ್ಥಳಕ್ಕೆ ಬೆಜಾಪುರದ ೧ನೇ ಅ. ಡಿ ಎ. ಇ ರಾವ ರಾ. ನಾ ಗದ್ದೆ ಪಂಪೇರಾಯರನ್ನು ಇವರ ಸ್ಥಳಕ್ಕೆ

ಹುಬ್ಬಳ್ಳಿ ಇಂಗ್ಲೀಷ ಶಾಲೆಯ ಮಾಸ್ತರರಾದ ಮ. ರಾ. ಅನೀ ಪಿಂಡಿ ಕಂಭೂರಾಯರನ್ನು ನೇಮಿಸಿರುವರು.

ದಕ್ಷಿಣಭಾಗದ ಕಾಯಮಂ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾ. ಸಾ ಸಹಸ್ರಬುದ್ಧೆಯವರು ಅಜಾರೀ ಮೂಲಕ ಒಂದೂವರೆ ತಿಂಗಳ ಹಕ್ಕಿನ ರಜೆಯನ್ನು ತಕ್ಕೊಂಡಿರುವದರಿಂದ ಅವರ ಸ್ಥಳಕ್ಕೆ ಧಾರವಾಡ ಹಾಯಸ್ಕೂಲ ಹೆಡ್ ಮಾಸ್ತರರಾದ ರಾ ಸಾ. ಕರಂದೀಕರರು ನೇಮಿಸಲ್ಪಟ್ಟಿರುವರು.

ಸ್ವೈ. ವಾ. ಅಣ್ಣಾರಾವ ಸುಬಡಿ ಇವರ ಚರಿತ್ರವು.

(ಳೀಜೀ ಪುಟದಿಂದ ಮುಂದೆ ಸಾಗಿದ್ದು.)

ಇವರ ಸದ್ಗುಣಗಳನ್ನು ಎಷ್ಟು ವರ್ಣಿಸಿದರೂ ತೀರದು. ಇವರು ಶಾಂತರೂ, ಸದಾನಂದಿಗಳೂ ದಯಾವಂತರೂ, ವಿದ್ಯಾರ್ಥಿಗಳಲ್ಲಿ ಪುತ್ರವತ್ಸಲ್ಯವುಳ್ಳವರೂ, ಪ್ರಸಿದ್ಧ ವಕ್ತಾರರೂ ಆಗಿದ್ದರು. ಇವರ ಭಾಷಣದಲ್ಲಿ ಯುಮೆಕವೂ, ಹಾಸ್ಯರಸವೂ, ಪ್ರಪೂರಿತವಾಗಿದ್ದವೆಂಬದು ಅವರ ಭಾಷಣಗಳನ್ನು ಕೇಳಿದ ಪ್ರತಿಯೊಬ್ಬನಿಗೆ ಗೊತ್ತಾದ ಸಂಗತಿಯು. ಪುಣೆಯಲ್ಲಿ ನೆರೆದ ೧೧ನೇ ಸಾಮಾಜಿಕ ಪರಿಷತ್ತಿನಲ್ಲಿ ಇವರು "ಮದ್ಯಪಾನನಿಷೇಧ" ವೆಂಬ ಬಗ್ಗೆ ಇಂಗ್ಲೀಜೀ ಭಾಷೆಯಲ್ಲಿ ಬಹು ಸರಸವಾದ ಭಾಷಣವನ್ನು ಮಾಡಿದರು. ಮತ್ತು ಇವರಿಗೆ ಬೇಕಾದಾಗ ಬೇಕಾದ ವಿಷಯದ ಬಗ್ಗೆ ಕನ್ನಡ ಇಂಗ್ರೇಜಿ, ಮರಾಠಿ, ಹಿಂದುಸ್ಥಾನಿ, ಭಾಷೆಗಳಲ್ಲಿ ಜನಮನೋರಂಜನವಾಗುವಂತೆ ನಗಿಸುತ್ತ ಮಾತಾಡುವ ಶೈಲಿಯು ಒಳಿತಾಗಿ ಸಾಧಿಸಿತ್ತು. ಮತ್ತು ಅಂಥ ಪ್ರಸಂಗಗಳನ್ನು ಅವರು ವ್ಯರ್ಥವಾಗಿ ಎಂದೂ ಕಳೆಯುತ್ತಿದ್ದಿಲ್ಲ. ಧಾರವಾಡದಲ್ಲಿ ಆದ ಸಭೆಗಳಲ್ಲಿ ರಾ ಸಾ. ಸವದಿಯವರ ವ್ಯಾಖ್ಯಾನವಾಗದ ಸಭೆಯೇ ಇಲ್ಲವೆಂದು ಹೇಳಬಹುದು. ಇವರ ವ್ಯಾಖ್ಯಾನಗಳು ವಿಶೇಷವಾಗಿ ಆರೋಗ್ಯಶಾಸ್ತ್ರ ವಿಷಯದವೇ ಇರುತ್ತಿದ್ದವು. ಇವರು ತಮ್ಮ ಹಿರಿ

ಯರಿಂದ ಹರಿಕೀರ್ತನೆ ಮಾಡುವ ಬುದ್ಧಿವಂತಿಕೆಯನ್ನು ಕಲಿತಿದ್ದರು. ಮತ್ತು ಕೀರ್ತನವನ್ನು ಚಿನ್ನಾಗಿ ಮಾಡುತ್ತಿದ್ದರು. ಇವರು ಗಾಯನ ಕಲೆಯನ್ನು ತಕ್ಕಮಟ್ಟಿಗೆ ಅರಿತಿದ್ದರು. ಇವರಿಗೆ ಗಾಯನದಲ್ಲಿ ಅಭಿರುಚಿ ಬಹಳಿತ್ತು. ಮತ್ತು ಪ್ರಸಂಗವನ್ನು ಅನುಸರಿಸಿ ತಾತ್ಕಾಲಿಕ ಕವಿತ್ವವನ್ನು ಮಾಡುವ ಶಕ್ತಿಯು ಅವರಲ್ಲಿ ಚನ್ನಾಗಿ ನೆಲಸಿತ್ತು.

ಇವರಲ್ಲಿ ಲೇಖನ ಚಾತುರ್ಯವಿಲ್ಲವೆಂದರೂ ಇಲ್ಲವೆಂದು ಹೇಳಬಹುದು. ಇವರು ಬರೆದ ವಿದ್ಯಾಶಾಲಾಗುರುಮಿತ್ರ ಎಂಬ ಪುಸ್ತಕದೊಳಗಿನ ವಿಷಯಕ್ಕೆ ನ್ಯಾ. ಮೂ. ರಾನಡೆ ಮೊದಲಾದ ದೊಡ್ಡ ದೊಡ್ಡ ಪಂಡಿತರು ಉತ್ತಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ ಅವರಂತೆ ಪಾಶ್ಚಾತ್ಯದಲ್ಲಿ ಪ್ರಸಿದ್ಧವಾದ ವಿದ್ಯಾರ್ಥಿಯುಪಯೋಗಿ ಗುಟ್ಟುಗಳೂ ಅಂತ್ಯವಾಗಿರುತ್ತವೆ. ಇದಲ್ಲದೆ ವಿನೋದತರಂಗಿಣಿ ಮುಕುರನಂಕ್ಷಮಣ ಎಂಬ ಮನೋರಂಜನೆಯ ಸಣ್ಣ ಪುಸ್ತಕಗಳನ್ನು ಬರೆದಿರುತ್ತಾರೆ.

ಮತ್ತೆ ಭಾರವಾಡದಲ್ಲಿ ಪ್ಲೇಗಿನ ಹಾವಳಿಯು ಬಹಳವಾದಾಗ ಈ ರೋಗದಿಂದ ತಮ್ಮನ್ನು ತ್ಯಾಗ ಮಾಡಿಕೊಳ್ಳಬೇಕೆಂಬ ಬಗ್ಗೆ ಹಿಂದೆಲಿಂದ ಮುಂದಿನ ಜನರಿಗೆ ವ್ಯವಹಾರಗಳನ್ನು ಕೊಡುತ್ತಿದ್ದರು. ಆಗಾಗ ಆಪತ್ಪ್ರಸಂಗ ಜನರಿಗೂ ಕೂಡ ತಿಳಿಯುವಂಥ ಆರೋಗ್ಯ ಮಾರ್ಗದರ್ಶಕ ಲಾವಣಿಗಳನ್ನು ಮಾಡಿ ಪ್ಲೇಗಿನ ಹಾವಳಿಯಿಂದ ಜನರನ್ನು ಕೆಲಮಟ್ಟಿಗೆ ಉಳಿಸಿದರೆಂದರೆ ಅತಿಶಯೋಕ್ತಿಯಾಗಲಾರದು.

ಈ ಪುಸ್ತಕಗಳ ಬೆಲೆಯು ಬಹು ಅಲ್ಪವೆಂದು ತಿರಸ್ಕಾರ ಮಾಡಲಾಗದು. ಯಾಕಂದರೆ ಹಾಲು, ಸೀರು, ಇವುಗಳಿಗೆ ಎನೂ ಬೆಲೆ ಬೀಳುವದಿಲ್ಲವೆಂದು ಅವುಗಳ ಅವಶ್ಯಕತೆ ಇಲ್ಲೆಂದು ಅನ್ನಬಹುದೋ? ಈ ಪ್ರಕಾರ ಈ ಪುಸ್ತಕಗಳೊಳಗಿನ ವಿಷಯವು ಅತ್ಯವಶ್ಯವಾದದ್ದಿರುತ್ತದೆ.

ಇವರಿಗೆ ಶಾಸ್ತ್ರೀಯ ವಿಷಯದ ಮೇಲೆ ಬಹಳ ಶ್ರೀಮತಿತ್ತು. ಇವರು ವ್ಯವಹಾರದಲ್ಲಿ ಆಗಿಂದಾಗ್ಗೆ ಕಂಡು ಬಂದ ಸೃಷ್ಟಿಕಾರ್ಯಗಳಿಗೂ, ತಮ್ಮ ದೃಷ್ಟಿಗೆ ಬೀಳುವ ಸಂಗ

ತಿಗಳಿಗೂ ಶಾಸ್ತ್ರೀಯ ಕಾರಣಗಳನ್ನು ಶೋಧಿಸಿ ತಮ್ಮ ವಿದ್ಯಾರ್ಥಿಗಳಿಗೆ ತಪ್ಪದೆ ಹೇಳುತ್ತಿದ್ದರು. ಮತ್ತು ಎಷ್ಟು ಸಾರೆ ಕೇಳಿದರೂ ಹೇಳಿದ ಸಂಗತಿಯನ್ನು ಪುನಃ ಪುನಃ ಹೇಳಲಿಕ್ಕೆ ಅವರಿಗೆ ಬೇಸರಿಕೆಯೇ ಬರುತ್ತಿದ್ದಿಲ್ಲ. ಮೊದಲೇ ಇವರಿಗೆ ಶಾಸ್ತ್ರೀಯ ವಿಷಯದ ಸೇರಿಕೆ ಇತ್ತು. ಶಿಕ್ಷಕ ಶಿಕ್ಷಣಾಲಯದಲ್ಲಿ ಅದೇವಿಷಯದ ಅಧ್ಯಾಪಕರನ್ನಾಗಿ ನೇಮಿಸಿದರು. ಆದರಿಂದ ತಮ್ಮ ಪ್ರಿಯಕರವಾದ ವಿಷಯವನ್ನು ವಿದ್ಯಾರ್ಥಿಗಳಿಗೆ ಮನಮುಟ್ಟಿಸ ಪ್ರಯೋಗವಾಗಿ ಬೋಧಿಸಿದರು ಇದರಿಂದ ವಿದ್ಯಾರ್ಥಿಗಳು ಬೇಕಾದ ಪ್ರಯೋಗಗಳನ್ನು ಸುಲಭವಾಗಿ ಮಾಡುತ್ತಿದ್ದರು ೧೯೨೫ ರಲ್ಲಿ ಆದ ಜ್ಯುಬಲಿ ಸಮಾರಂಭದಲ್ಲಿ. ಕಾಲೇಜದಲ್ಲಿ ಶಾಸ್ತ್ರೀಯ ಪ್ರದರ್ಶನವನ್ನು ಮಾಡಿಸಿದಾಗ ಕಾಲೇಜದ ವಿದ್ಯಾರ್ಥಿಗಳೇ ಯಾವತ್ತೂ ಪ್ರಯೋಗಗಳನ್ನು ಮಾಡಿ ತೋರಿಸಿದರೆಂಬ ಸಂಗತಿಯೇ ಇದಕ್ಕೆ ಪ್ರಮಾಣವು.

ಈ ಮೇರೆಗೆ ಅವರಲ್ಲಿ ಅನೇಕ ಸದ್ಗುಣಗಳು ಇದ್ದವು. ಇದರಿಂದ ಅವರಲ್ಲಿ ದೋಷಗಳು ಇದ್ದೇ ಇಲ್ಲವೆಂದು ಹೇಳಲಾಗದು ಯಾಕಂದರೆ– ಮನುಷ್ಯನಲ್ಲಿ ಒಂದಿಲ್ಲೊಂದು ನ್ಯೂನತೆ ಇರುವದು ಸ್ವಾಭಾವಿಕವು. ಅಪ್ರಕಾರ ಶ್ರೀನಿವಾಸರಾಯರಾದರೂ ಈ ಸರ್ವಸಾಧಾರಣ ನಿಯಮದ ಹೊರಗಿದ್ದಿಲ್ಲ. ಇವರು ಒಮ್ಮೊಮ್ಮೆ ಅಕಾರಣವಾಗಿ ಸಿಟ್ಟುಗೇಳುತ್ತಿದ್ದರು. ಆಗ ಮೈಮೇಲೆ ಸ್ಮೃತಿಯು ಸಹ ಉಳಿಯುತ್ತಿದ್ದಿಲ್ಲ ಮತ್ತು ತಂಬಾಕ ತಿನ್ನುವದರಿಂದ ಯಾವ ಕೇಡುಗಳು ಸಂಭವಿಸುತ್ತವೆಂಬದನ್ನು ತರುಣ ಜನರಿಗೆ ಉಪದೇಶ ಮಾಡುವದರ ಸಲುವಾಗಿಯೇ ತಾವು ಅದರ ಅನುಭವವನ್ನು ತೆಗೆದುಕೊಳ್ಳುತ್ತಾರೋ ಏನೋ ಎಂಬಂತೆ ಅವರು ತಂಬಾಕವನ್ನು ತಿನ್ನುತ್ತಿದ್ದರು. ಮತ್ತು ಆಗಿಂದಾಗ್ಗೆ ತಮ್ಮ ವಾಖ್ಯಾನಗಳಲ್ಲಿ ಈ ವಿಷಯದ ಬಗ್ಗೆ ಹೇಳುತ್ತಿದ್ದರು. ಈ ದೋಷಗಳು ಕ್ಷುಲ್ಲಕವಾದಾಗ್ಯಾದರೂ ಚರಿತ್ರಲೇಖಕರು ಬರೀ ಗುಣಾನುವಾದ ಮಾಡಿದರೆಂಬ ಲೋಕಾಪವಾದಕ್ಕೆ ಹೆದರಿ ಬಹು ಕಷ್ಟದಿಂದ ಅವುಗಳನ್ನು ಉಲ್ಲೇಖಿ

ಸಿದ್ದೇವೆ ಒಟ್ಟಿಗೆ ಬಳ್ಳೇ ಮನುಷ್ಯರಿದ್ದರೆಂಬದನ್ನು ಹೇಳ ಲಿಕ್ಕೆ ಬೇಡ.

ಸಾಂಪ್ರತಕ್ಕೆ ಧಾರವಾಡ, ವಿಜಾಪೂರ, ಬೆಳಗಾವ, ಕಾ ರವಾರ ಜೆಲ್ಲೆಯೊಳಗಿನ ಯಾವತ್ತು ಶಿಕ್ಷಕ ಸಮೂಹವು ಇವರ ಛಾತ್ರವರ್ಗವಾಗಿರುತ್ತದೆನ್ನಲಿಕ್ಕೆ ಸಂದೇಹವಿಲ್ಲ. ವಿ ದ್ಯಾದಾನವೆಂಬ ಮಹತ್ಪುಣ್ಯದ ಕೆಲಸವನ್ನು ಮಾಡತೊಡ ಗಿದ ಇಪ್ಪ ದೊಡ್ಡ ಛಾತ್ರವರ್ಗವುಳ್ಳ ಸತ್ಪುರುಷನ ಪುಣ್ಯ ವನ್ನು ವರ್ಣಿಸುವದು ಅಶಕ್ಯವಾದದ್ದು.

ಇನ್ನು ಈ ಛಾತ್ರವರ್ಗದವರೆಲ್ಲರೂ ಮಾಡತಕ್ಕ ಕರ್ತ ವ್ಯವನ್ನು ಬರೆದು ವಾಚಕರಿಂದ ಅಪ್ಪಣೆಯನ್ನು ಪಡಕೊಳ್ಳು ತ್ತೇವೆ.

ಯಾವ ಸತ್ಪುರುಷರು ಟ್ರೇನಿಂಗಕಾಲೇಜದಲ್ಲಿ ೭೫ ವರ್ಷ ಕೆಲಸಮಾಡಿದರೋ ಅವರ ಸ್ಮಾರಕವನ್ನು ಕಾಲೇಜದಲ್ಲಿ ಇ ಡುವದು ಅವರ ಶಿಷ್ಯವರ್ಗದ ಕರ್ತವ್ಯವಬೆ ಅದಕ್ಕಾಗಿ ರಾ. ಸಾ. ಸವದಿಯವರ ಶಿಷ್ಯರೆಂದು ಅನ್ನಿಸಿಕೊಳ್ಳುವ ಪ್ರತಿ ಬಬ ಮನುಷ್ಯನು ಈ ಕೆಲಸಕ್ಕೆ ಸಹಾಯ ಮಾಡಬೇಕೆಂದು ಸೂ ಚಿಸುತ್ತೇವೆ.

ಕಡೆಗೆ ರಾ. ರಾ. ಶ್ರೀನಿವಾಸ ರಾಮಜಿಂಪ್ರ ಸವದಿ ಇವರ ಜೀವಾತ್ಮಕ್ಕೆ ಶ್ರೀಮನ್ನಾರಾಯಣನು ಸಾಯುಜ್ಯ ಪದವನ್ನು ಕೊಡಲೆಂದು ಆತನನ್ನು ಅನನ್ಯ ಭಾವದಿಂದ ಬೇಡಿಕೊಂಡು ಈ ಅಲ್ಪ ಚರಿತ್ರವನ್ನು ಮುಗಿಸುತ್ತೇನೆ.

ಶ್ರೀಮದ್ವಿಕ್ಟೋರಿಯಾ ಚಕ್ರವರ್ತಿನಿಯವರು

ಈ ಭಾಗ್ಯ ಶಾಲಿನಿಯಾದ ಅರಸಿಯು ಇಹಲೋಕದ ಸುಖವನ್ನು ಮನದಣಿಯುಂಡು ಪರಲೋಕದ ಸುಖೋಪ ಭೋಗಕ್ಕಾಗಿ ಜನವರೀ ತಿಂಗಳ ೨೨ನೇ ತಾರೀಖಿನ ದಿವಸ ಲೋಕಾಂತರವನ್ನೈದಿದಳೆಂಬ ಸಂಗತಿಯು ಎಲ್ಲರಿಗೂ ಗೊತ್ತುಂಟು ಈ ಮಹಾರಾಜ್ಞಿಯವರ ಚರಿತ್ರವು ಬಡವರಿ ಗೂ, ಬಲ್ಲಿದರಿಗೂ, ಅರಸರಿಗೂ, ಕೂಲಿಕಾರರಿಗೂ, ಯಾ ವತ್ತು ವರ್ಗದ ಜನರಿಗೂ ಬೋಧಪ್ರದವಾಗಿರುವದರಿಂದ ಎಲ್ಲರೂ ಮನಮುಟ್ಟಿ ಓದಿ ಮನನ ಮಾಡಿಕೊಳತಕ್ಕದ್ದು

ಇಂಗ್ಲಂಡದಲ್ಲಿ ಮೊದಲು ಹೆನರು ಪಡೆದು ಆಳಿ ಹೋದ ಇ
ಲಿಜಾಬೇಥ ರಾಣಿಯಂತೆ ಇವರು ಅವಿವಾಹಿತರಾಗಿದ್ದೆ ಮು
ಮುಪೆಯಾಗಿ ಒಂಬತ್ತು ಮಂದಿ ಮಕ್ಕಳನ್ನು ಹೆತ್ತಿರುವರು
ಆದ್ದರಿಂದ ಇವರು ನಾಚೊಡೆಯರೆಂಬದೊಂದೇ ರೂಪದಿಂ
ದ ಜಗದಲ್ಲಿ ಬಾಳಲಿಲ್ಲ ಮನೆಯೊಡತಿಯೂ ಮಕ್ಕಳೊಂ
ದಿಗಿತ್ತಿಯೂ ಎಂಬ ಜೋರೆ ಎರಡು ರೂಪದಿಂದ ವರ್ತಿಸಿ ಜ
ಗದೊಳಗಿನವರೆಲ್ಲರೂ ಮೂದದಿ ತಕ್ಕೊಳ್ಳಿತಕ್ಕಂಥ ತಮ್ಮ
ನೆಡೆನುಡಿಗಳನ್ನು ವ್ಯಕ್ತ ಮಾಡಿ ತೋರಿಸಿರುವರು. ಇವ
ರು ೪೦ ವರ್ಷ ಬಾಳಿ ೬೮ ವರ್ಷ ರಾಜ್ಯವಾಳಿದರು ಇವರ
ಆಳಿಕೆಯನ್ನು ವರ್ಣಿಸಬೇಕಾದರೆ ಬೇರೆ ಒಂದು ದೊಡ್ಡಗ್ರಂ
ಥವೇ ಆಗುವದು ಆದ್ದರಿಂದ ಇವರ ಚರಿತ್ರವನ್ನು ಅದಷ್ಟು
ಸಂಕ್ಷೇಪವಾಗಿ ವಿವರಿಸುತ್ತೇವೆ.

ಜನ್ಮವೂ ಬಾಲ್ಯವೂ.

ಇಂಗ್ಲಂಡಿನ ರಾಜನಾದ ಮೂರನೇ ಜಾರ್ಜನಿಗೆ ನಾಲ್ಕು
ಮಂದಿ ಗಂಡುಮಕ್ಕಳಿದ್ದರು. ಅವರಲ್ಲಿ ಮೂರನೆ ಮಗನಾ
ದ ಎಡ್ವರ್ಡನು ಜರ್ಮನಿಯೊಳಗಿನ ಸಾಕ್ಸಕೋಬರ್ಗವೆಂ
ಬ ಸಂಸ್ಥಾನದ ರಾಜನ ತಂಗಿಯನ್ನು ಮದುವೆಯಾಗಿದ್ದ
ನು. ಈ ಗಂಡ ಹೆಂಡತಿಗೆ ನಮ್ಮ ರಾಣಿಯವರ ತಂದೆ ತಾ
ಯಿಗಳು ಈ ಚಿಕ್ಕ ವರ್ತಮಾನಿಯವರ ತಂದೆಯು ತಮ್ಮ ತಂ
ಬೆಯು ಅಕ್ಕತಂಗೆಯು ಮಗನಲ್ಲದ್ದರಿಂದಲೂ ಆ ದೇಶದಲ್ಲಿ ಅರ
ಸು ಮನೆತನದವರಿಗೆ ಇಂತಿಷ್ಟು ಹಣವು ಸಲ್ಲತಕ್ಕದ್ದೆಂದು
ಕಟ್ಟಿರುವದರಿಂದಲೂ, ನಮ್ಮ ಕಡೆಯ ಅರಸು ಮಕ್ಕಳಂ
ತೆ ಇವರಿಗೆ ಜೀಕಾದಷ್ಟು ಸಂಪತ್ತಿಯು ಇದ್ದಿಲ್ಲ ಹೀಗೆ
ಯೇ ಕೆಲವು ದಿನಸ ಇರುವಷ್ಟರಲ್ಲಿ ಇವರ ಹೆಂಡತಿಯು ಬ
ಸುರಾವಳು ಆಗ ಆ ದಂಪತಿಗಳು ಜರ್ಮನಿಯಲ್ಲಿಯೇ ಇ
ದ್ದರು. ಆದರೆ ಎಡ್ವರ್ಡನ ಮನದಲ್ಲಿ ತನ್ನ ಹೆಂಡತಿಯು
ಇಂಗ್ಲಂಡನಲ್ಲಿಯೇ ಹಡೆಯಬೇಕೆಂಬದಿತ್ತು. ಆದ್ದರಿಂದ ಹೆಂ
ಡತಿಯನ್ನೊಡಗೊಂಡು ಇಂಗ್ಲಂಡಕ್ಕೆ ಬಂದು ಲಂಡನದೊ
ಳಗಿನ ಕೆನಸಿಂಗಟನ ಎಂಬ ರಾಜವಾಡೆಯಲ್ಲಿ ಇರುತ್ತಿದ್ದ
ರು. ದಿನತುಂಬಿದ ಬಳಿಕ ಅಂದರೆ ಸನ್ ೧೮೧೯ನೇ ಇಸ

ವಿಯು ಮೊದಲಿಂಗಳ ಎಲಿನೋ ಕಾರ್ಲಿಖಿನಸ್ಲಿ ಈ ನಮ್ಮ ಬರಿ ಪ್ರನಾದುಕೊಂಡಾದ ಅರಸಿಯು ಹುಟ್ಟಿದಳು. ಎಲಿನೋ ಜೂನ ದಿವಸ ಇವರಿಗೆ ವಿಕ್ಟೋರಿಯಾ ಎಂಬ ಹೆಸರನ್ನಿಟ್ಟರು ಮುಂದೆ ಎಂಟು ತಿಂಗಳಲ್ಲಿಯೇ ಇವನ ತಂದೆಯು ತೀರಿ ಕೊಂಡರು. ಆ ಮೇಲೆ ಇವರ ತಾಯಿಯು ಇಂಗ್ಲಂಡದಲ್ಲಿ ಯೇ ಇದ್ದು ತನಗೆ ದೊರೆಯುತ್ತಿರುವ ಹಣದಲ್ಲಿಯೇ ಮನೆ ಯು ವೆಚ್ಚವನ್ನು ಸಾಗಿಸುತ್ತ ಮಗಳಿಗೆ ಸುಶಿಕ್ಷಣವನ್ನು ಕೊ ಡುತ್ತ ಕಾಲಕ್ಷೇಪ ಮಾಡುತ್ತಿದ್ದಳು ಈ ಸ್ಥಿತಿಯಲ್ಲಿ ಈ ಕೂಸಿಗೆ ಇಂಗ್ಲಂಡದ ಅರಸೊತ್ತಿಗೆಯು ದೊರೆಯುವದೆಂ ಬ ಮಾತು ಯಾರ ಕನಸು ಮನಸಿನಲ್ಲಿಯೂ ಬರುವಂತಿ ದ್ದಿಲ್ಲ. ಯಾಕಂದರೆ ಮೂರನೇ ಜಾರ್ಜನಿಗೆ ನಾಲ್ಕು ಮಂ ದಿ ಗಂಡು ಮಕ್ಕಳೊಂದು ಮೇಲೆ ಹೇಳಿದ್ದೇವೆ. ಆದರೆ ಈ ಕರ್ತನ ಸಂಕೇತವು ಅಚಿಂತನೀಯವಾದದ್ದು. ಆ ಎಲ್ಲ ವಂಶ ವೃ ನಷ್ಟವಾಗಿ ಇವಳಿಗೇ ಪಟ್ಟವು ದೊರಕಿತು. ಇವರ ತಾ ಯಿಯು ಇವರು ಪುಟ್ಟಿಕ್ಕೆ ತೀರ ಸಮೀಪದ ಬಾಧ್ಯಸ್ಥರಿರು ವದೆಂಬ ಸಂಗತಿಯನ್ನು ಇವರು ಹನ್ನೆರಡು ವರ್ಷದವರಾ ಗುವವರೆಗೆ ಇವರ ಕಿವಿಗೆ ಮುಟ್ಟದಂತೆ ಮಾಡಿದ್ದಳು. ಆ ಬಳಿಕಾದರೂ ಅಂದರೆ ಹನ್ನೆರಡು ವರ್ಷದವರಾದಾಗ ಈ ಸಂಗತಿಯು ಇವರಿಗೆ ಇವರ ಪಾಠದ ಪುಸ್ತಕದ ಮೂಲಕ ವಾಗಿ ಕಿವಿಗೆ ಹಾಕಿದರು. ಆಗ ಈ ರಾಣಿಯವರು ತಮ್ಮ ವಯೋಧರ್ಮದಂತೆ ಹುಡುಗಾಟಿಕೆಯು ಅಥವಾ ಉದ್ದಟ ತನದ ನುಡಿಗಳನ್ನು ಆಡಲಿಲ್ಲ. ತಾವು ದೊಡ್ಡವರೆಂಬ ಗರ್ವದಿಂದ ಉಬ್ಬಲೂ ಇಲ್ಲ. ಈ ಕಾಲದಲ್ಲಿ ಇವರ ಬಾಯಿ ಯಿಂದ ಹೊರಟ ನುಡಿಗಳು ಇವರ ಶಾಂತವಾದ ಪಕ್ವವಿಚಾ ರವನ್ನು ಬಿಡದು ತೋರಿಸುತ್ತವೆ. ಆ ನುಡಿಗಳು ಯಾವ ವೆಂದರೆ " ಈ ಅರಸೊತ್ತಿಗೆಯು ವೈಭವವು ಘನವಾದದ್ದು ನರಿ. ಆದರೆ ಹೊರೆಯು ಮಾತ್ರ ಅದಕ್ಕೂ ಘನವಾದದ್ದುಂ ಟು. ಗ್ರೀಕ, ಲ್ಯಾತಿನ ಭಾಷೆಗಳನ್ನು ಕಲಿಸುವ ಉ ದ್ದೇಶವಾದರೂ ಈಗ ನನಗೆ ತಿಳಿಯಿತು, ನಾನು ಇನು

ಆದಪ್ಪ ದಾವತಿಮಾಡಿ ಒಳ್ಳೇತನವನ್ನು ನಂಪಾದಿಸುವೆನು" ಅಹಾ! ಹನ್ನೆರಡು ವರ್ಷದ ಕುಮಾರಿಕೆಯ ಬಾಯಿಯಿಂದ ಹೊರಬಿದ್ದ ಈ ನುಡಿಗಳು ಎಷ್ಟು ಬೆಲೆಯುಳ್ಳವಿರುತ್ತವೆಂಬದನ್ನು ವಾಚಕರೇ ತರ್ಕಿಸಬೇಕು. ಪ್ರಸಿದ್ಧಿಗೆ ಬರುವ ಜನರು ಚಿಕ್ಕವರಿದ್ದರೂ ಅವರ ವಿಚಾರಗಳು ಸ್ಪಾಷ್ಟವಾಗಿರುತ್ತವೆಂದು ಹಿರಿಯರು ಹೇಳುವ ಮಾತು ಸುಳ್ಳಲ್ಲ. ಬೀಜಕ್ಕೆ ಬಿಡುವ ಕಾಯಿಯನ್ನು ಹೀಚಿಕೆಯಲ್ಲಿ ನೋಡು ಎಂಬ ನಾಣ್ನುಡಿಯು ನಿಜವಾದದ್ದು ಇದಲ್ಲದೆ ಇವರ ತಾಯಿಯ ಶಿಕ್ಷಣವೂ ಮಾದರಿ ತಕ್ಕೊಳ್ಳತಕ್ಕಂಥಾದ್ದೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಇರಲಿ ಮುಂದೆ ನಾಲ್ಕನೇ ವಿಯಿಲ್ಯಮ ರಾಜನು ೧೮೩೭ನೇ ಜೂನ ೨೦ನೇ ತಾರೀಖಿನ ರಾತ್ರಿ ೪ ಘಂಟೆಗೆ ಮರಣ ಹೊಂದಲಾಗಿ ಕಾರಭಾರಿಗಳಲ್ಲಿ ಮುಂದಾಳುಗಳಾದ ಲಾರ್ಡ ಚೆಂಬರಲೇನರು ಕ್ಯಾಂಟರಬರಿಯ ಧರ್ಮಾಧ್ಯಕ್ಷರಿಂದೊಡಗೂಡಿ ಈ ರಾಣಿಯವರಿರುವ ಅರಮನೆಗೆ ಬಂದರು. ಆಗ ರಾಣಿಯವರಿಗೆ ಗಡದ್ದ ನಿದ್ದೆ, ಹತ್ತಿತ್ತು. ದಾಸಿಯರೊಬ್ಬರೂ ಎಬ್ಬಿಸಲಿಕ್ಕೆ ಮುಂದರಿಯಲಿಲ್ಲರು. ಹೀಗೆ ಕೆಲಹೊತ್ತು ಹೊರಗೆ ಗುಣುಗುಟ್ಟುತ್ತಿರುವ ಗದ್ದಲದಿಂದ ರಾಣಿಯವರ ತಾಯಿಯು ಎಚ್ಚತ್ತು ಹೊರಗೆ ಬಂದು ಕಾರಭಾರಿಯ ಮಾತುಗಳನ್ನಾಲಿಸಿ ಮಗಳನ್ನೆಬ್ಬಿಸಿದರು. ಅವರು ರಾತ್ರಿಯ ಉಡುಪುಗಳೊಂದಿಗೆ ಹಾಗೇ ಹೊರಗೆ ಬರಲು ಮುತ್ಸದ್ದಿಗಳು ಅರಸನ ಮರಣವನ್ನು ಅರುಹಿದರು. ಅದರಿಂದ ಈ ನಮ್ಮ ವಿಕ್ಟೋರಿಯಾ ಮಹಾರಾಣಿಯವರು ಸ್ವಭುತ್ವದ ಮದದಿಂದ ಅಂಧರಾಗದೆ ವಿವೇಕದಿಂದ ಮೊದಲು ದೇವರನ್ನು ಪ್ರಾರ್ಥಿಸಿ, ಬಳಿಕ ಉಯಿಲಿಯುಮ್ ಧೊರೆಯ ಹೆಂಡತಿಗೆ ಸುಃಖಶಾಮುಕ ಪತ್ರವನ್ನು ಬರೆದರು ಈ ಬರೆದ ಓಲೆಯಿಂದಲೂ ಇವರ ಚಾತುರ್ಯವೂ, ಸಭ್ಯತನವೂ, ಧೂರ್ತತ್ವವೂ ವ್ಯಕ್ತವಾಗುತ್ತವೆ. ಹ್ಯಾಗಂದರೆ ಒಕ್ಕಣಿಕೆಯನ್ನು ಬರೆಯುವಾಗ "ಇಂಗ್ಲಂಡದರಾಣಿ" ಎಂಬ ಪದವನ್ನು ಅವರ ಹೆಸರಿನ ಹಿಂದೆ ಜೋಡಿಸಿದರು. ಆಗ ದಾಸಿಯರು "ಇನ್ನು ಇಂಗ್ಲಂಡದ

ರಾಣಿಯವರು ತಾವಲ್ಲವೇ" ಎಂದು ಶಂಕಿಸಲು, "ಈ ಮಾತನ್ನು ಮೊದಲಿಗೆ ಅವರಿಗೆ ತಿಳಿಸತಕ್ಕವಳು ನಾನೆಲ್ಲ" ಎಂಬ ಉತ್ತರವನ್ನು ಕೊಟ್ಟರು ನೋಡಿರಿ ಎಲಿಜಬೇಥರವರ ಮನಸ್ಸನ್ನು ನೋಯಿಸಬಾರದೆಂಬ ಇವರ ಮನಸ್ಸಿನ ಒಲವು ಎಷ್ಟು ಘನವಾದದು?

ರಾಜ್ಯಪ್ರಾಪ್ತಿಯೂ, ವಿವಾಹವೂ,

ಸನ್ ೧೮೩೭ನೇ ಇಸವಿಯ ಜೂನ ೨೦ನೇ ತಾರೀಖಿಗೆ ರಾಣಿಯವರು ಪಟ್ಟಕ್ಕೆ ಬಂದರೆಂದು ದೇಶದ ತುಂಬಾ ಸಾರಿದರು. ಆ ನಾಡನಡಾವಳಿಯಂತೆ ರಾಣಿಯವರು ಸಭೆಯಲ್ಲಿ ಬಂದು ಗದ್ದುಗೆಯ ಮೇಲೆ ಕುಳಿತರು ಮುಂದೆ ಒಂದು ವರ್ಷಕ್ಕೆ ಅಂದರೆ ಸನ್ ೧೮೩೮ನೇ ಇಸವಿಯ ಜೂನ ೨೦ನೇ ತಾರೀಖಿನದಿವಸ ಪಟ್ಟಕ್ಕೇರಿದ ಸಮಾರಂಭವು ದೇಶದಲ್ಲೆಲ್ಲ ಬಹಳ ಸಡಗರದಿಂದ ನೆರವೇರಿಸಲ್ಪಟ್ಟಿತು ಈ ಒಂದು ವರ್ಷದಲ್ಲಿ ರಾಣಿಯವರು ತಮ್ಮ ಸೌಜನ್ಯದಿಂದಲೂ, ತಾಳ್ಮೆಯಿಂದಲೂ, ಪ್ರೌಢವಿಚಾರದಿಂದಲೂ, ಪ್ರಜೆಗಳ ಕ್ಷೇಮವನ್ನು ಬಲಿತಾಗಿ ಸಂಪಾದಿಸಿದ್ದರು. "ಗುಣಾಃ ಪೂಜಾಸ್ಥಾನಂ ಗುಣಿಷು ನಚಲಿಂಗಂ ನಚವಯಃ" ಎಂಬ ಭವಭೂತಿಯ ವಾಕ್ಯದಂತೆ ಇವರು ತಮ್ಮ ಸದ್ಗುಣಗಳಿಂದ ರೈತರಿಗೆಲ್ಲ ಪೂಜ್ಯರಾಗಿ ತೋರಿದರು. ಸದ್ಗುಣಗಳು ಹೆಗಲಿಗಳನ್ನು ಸಹ ಮಣಿಯು ಹಚ್ಚುತ್ತವೆಂಬ ಮಾತು ಸುಳ್ಳಲ್ಲ. ಸದ್ಗುಣಿಯಾದ ಗಂಡಿಸಿಗಿಂತ ಹೆಂಗಸಿನ ವರ್ಚಸ್ಸು ಜನರಲ್ಲಿ ಭಕ್ತಿಯನ್ನು ಬೇಗವಾಗಿ ಹುಟ್ಟಿಸುತ್ತದೆಂಬ ಸಂಗತಿಯು ಅನುಭವಸಿದ್ಧವಾದದ್ದು ಈ ಕಾಲದಲ್ಲಿ ಲಾರ್ಡ ಮೆಲಬೋರ್ನನೆಂಬ ಕಾನಸರವೇಟಿವ ಪಕ್ಷದ ಮುಖ್ಯಸ್ಥನು ಇವರ ಮಂತ್ರಿಯಾಗಿದ್ದನು. ರಾಣಿಯವರು ಸ್ವತಃ ಲಿಬರಲ್ ಪಕ್ಷದ ಮತಾನುಸಾರಿಗಳಿದ್ದರೂ ಈ ಮಂತ್ರಿಯ ಮಂತ್ರಾಲೋಚನೆಯಂತೆಯೇ ನಡೆಯುತ್ತಿದ್ದರು. ಈ ಕಾಲದಲ್ಲಿ ಇವರ ಮನಸ್ಸಿನ ಕೋಮಲತೆಯನ್ನು ಬೈಲಿಗೆ ತಂದದ್ದೊಂದು ಸೋಜಿಗದ ಸಂಗತಿಯು ವರ್ತಿಸಿತು. ಅದಾವದೆಂದರೆ, ಒಬ್ಬ ಶಿಪಾಯಿ

ಗೆ ಅವನ ತಪ್ಪಿಗಾಗಿ ಮರಣದ ದಂಡನೆಯು ವಿಧಿಸಲ್ಪಟ್ಟಿತು. ವಾಡಿಕೆಯಂತೆ ಆ ಕಟ್ಟಳೆಯನ್ನು ಮುಂಜೂರು ಮಾಡಿಸಿಕೊಳ್ಳುವದಕ್ಕಾಗಿ ಡ್ಯೂಕ್ ಆಫ್ ವೆಲಿಂಗಟನ್ ಎಂಬ ಪ್ರಧಾನಿಯು ಇವರೆದುರಿಗೆ ಕಾಗದವನ್ನು ತರಲು, ಇವರು "ಈ ಶಿಪಾಯಿಯ ಕಡೆಗಾಗಿ ಹೇಳುವವರು ಯಾರೂ ಇಲ್ಲವೋ?" ಈ ಬಡವನಿಗೆ ಅನುಕೂಲವಾದ ಸಂಗತಿಗಳು ಅವವೂ ಇಲ್ಲವೋ" ಎಂದು ಕೇಳಲು—ಪ್ರಧಾನರು—"ದೇವರೂ ಇವನು ಬಹಳ ಕೆಟ್ಟವನಿರುವನು. ಶಿಪಾಯೀ ಕೆಲಸಕ್ಕೆ ತೀರ ತಕ್ಕವನಲ್ಲ" ಎಂದು ಹೇಳಿದರು ಅದಕ್ಕೆ ಆ ರಾಣಿಯವರು "ಡ್ಯೂಕರೇ ಇನ್ನೊಮ್ಮೆ ನಿದಾನಿಸಿ ಹೇಳಿರಿ" ಎಂದು ಮರಳಿ ಕೇಳಲು; ದೇವರೂ-"ಮೊದಲಿಗೇ ಬಿನ್ನಹ ಮಾಡಿಕೊಂಡಿದ್ದೇನೆ ಇವನು ಮನೆಗೆಲಸದೊಳಗೆ ಮಾತ್ರ ತಕ್ಕವನು ಒಳ್ಳೇ ರೀತಿಯಿಂದ ನಡೆಯುತ್ತಿದ್ದನೆಂದು ಜನರು ಅನ್ನುತ್ತಾರೆ" ಎಂದು ಹೇಳಿದರು. ಇಷ್ಟು ಮಾತಿಗೆ ಕಿವಿಗೆ ಬಿದ್ದ ಕೂಡಲೆ ಈ ಕೋಮಲಾಂತಃಕರಣದ ಅರಸಿಯು ಮುಂಜೂರಿಗೆಂದು ತಂದ ಆ ಕಾಗದದ ಮೇಲೆ "ಕ್ಷಮಿಸಿದ್ದೇವೆಂದು" ಬರೆದು ರುಜು ಮಾಡಿದರು. ಇವನ್ನು ಕಂಡು ಪಾರ್ಲಿಮೆಂತಿನವರು ಇಂಥ ಕಠೋರ ಕಾರ್ಯಗಳನ್ನು ನಿರ್ವಹಿಸುವ ಹೊರೆಯನ್ನು ಇನ್ನು ಮುಂದೆ ಈ ಮೃದುಮನದ ಅರಸಿಯ ಮೇಲೆ ಹೊರಿಸುವದು ಸರಿಯಲ್ಲವೆಂದು ಬಗೆದು ರಾಯಲ್ ಕಮಿಷನ್ ಎಂಬದೊಂದು ಸಭೆಯನ್ನು ನಿರ್ಮಿಸಿ ಇಂಥ ಕೆಲಸಗಳನ್ನು ಆ ಸಭೆಯವರಿಗೆ ಒಪ್ಪಿಸಿದರು.

(ಸಶೇಷ)

CHEMISTRY.

ರಸಾಯನಶಾಸ್ತ್ರ.

(ಈ ನೇ ಪುಟದಿಂದ ಮುಂದೆ ಸಾಗಿದ್ದು.)

ಈ ಕಬ್ಬಿಣದಿಂದ ಪ್ರಸ್ತುತದಲ್ಲಿ ಎಂಥ ಎಂಥ ಸೋಜಿಗದ ಕೆಲಸಗಳು ನಡೆದಿರುತ್ತವೆಂಬದನ್ನು ನಾವು ಬಿಚ್ಚಿ ಹೇಳ

ಲಿಕ್ಕೆ ಬೇಡ. ಉಗೆಬಂಡಿ, ಉಗೆಹಡಗು, ನೂಲುವ, ನೇಯುವ ಯಂತ್ರಗಳು ಇವೇ ಮೊದಲಾದ ಅನೇಕ ಪದಾರ್ಥಗಳು ಸಾಫ್ಟೀ ಹೇಳಲಿಕ್ಕೆ ತುದಿಗಾಲ ಮೇಲೆ ನಿಂತಿರುತ್ತವೆ. ಕಬ್ಬಿಣವು ಬಹುತರವಾಗಿ ಸಂಯುಕ್ತ ಸ್ಥಿತಿಯಲ್ಲಿ ಸಿಗುತ್ತದೆ. ಇದು ಆಕ್ಸಿಜನದಲ್ಲಿ ಸಂಯೋಗವಾಗುವದರಿಂದ ಉಂಟಾದ ಜಂಗನ್ನು ಕಾಸಲಾಗಿ ಆಕ್ಸಿಜನವು ಹೊರಬಿದ್ದು ಹೋಗಿ ಶುದ್ಧ ಕಬ್ಬಿಣವು ಬೇರೆಯಾಗುತ್ತದೆ. ಈ ತರದ ಕಬ್ಬಿಣವು ಮಿದುವಿರುತ್ತದೆ. ಇದನ್ನು ಸಾಗ ಬಡಿದು ತಂತಿ, ತಗಡು, ಬಿಕ್ಕದೊಡ್ಡ ಸಳಿ, ಕೊಳಿವೆ, ಪಾತ್ರೆ ಮುಂತಾದ ತರತರದ ಒಡವೆಗಳನ್ನು ಮಾಡುತ್ತಾರೆ. ಹೊಯ್ದ ಕಬ್ಬಿಣವೆಂಬದೊಂದು ಎರಡನೇ ತರದ ಕಬ್ಬಿಣ ಉಂಟು. ಪ್ರಚಾರದಲ್ಲಿ ಇದಕ್ಕೆ ಬೀಡಿನ್ನುವರು. ಈ ಬೀಡನ್ನು ಕಾಸಿ ರಸವಾಡಿ ಪಡಿಯಚ್ಚಿನಲ್ಲಿ ಹೊಯ್ದು ದೀವದಕಂಬ ದೊಡ್ಡ ದೊಡ್ಡಗಾಲಿ, ಕೊಳಿವೆಯಂತ್ರಗಳಿಗೆ ಬೇಕಾಗುವ ಒಡವೆ ಮುಂತಾದ ಹಲವು ತರದ ಪದಾರ್ಥಗಳನ್ನು ತಯಾರ ಮಾಡುತ್ತಾರೆ. ಅಶೋಧಿತ ಕಬ್ಬಿಣದ ಕಲ್ಲುಗಳನ್ನು ಅಥವಾ ಅದರುಗಳನ್ನು ತಂದು ಒಡೆದು ಚೂರು ಮಾಡಿ ಅದರೊಳಗೆ ಸುಣ್ಣದ ಹರಳುಗಳನ್ನು ಬೆರಸಿ, ಇದ್ದಲಿಯ ತರಗಳ ನಡುನಡುವೆ ಹರವಿ ಭಟ್ಟಿಯೊಳಗೆ ಕಾಸಿ ಬೀಡು ಮಾಡುತ್ತಾರೆ.

ಜವಾರಿ ಕಬ್ಬಿಣವನ್ನು (ನಮ್ಮ ದೇಶದ ಕೃತಿಯಿಂದ ತೆಗೆಯುವ ಕಬ್ಬಿಣ) ಕಾಸಿ ಸುತ್ತಿಗೆಯಿಂದ ಸಾಗ ಬಡಿದು ಗಜ, ತಗಡುಗಳನ್ನು ಮಾಡುವಂತೆ ಬೀಡಿನಿಂದ ಮಾಡಲಿಕ್ಕೆ ಬರುವದಿಲ್ಲ. ಬೀಡು ಕಾಸಿ ಬಡಿದರೆ ಒಡೆಯುತ್ತದೆ. ಇದು ಶುದ್ಧ ಕಬ್ಬಿಣವಲ್ಲ, ಇದರಲ್ಲಿ ಕಾರ್ಬೊನ್ನು ಕೂಡಿರುತ್ತದೆ. ಈ ಕಾರ್ಬೊನ್ನವನ್ನು ಜೇರೆ ಮಾಡಿ ಬೀಡಿಗೆ ಜವಾರಿ ಕಬ್ಬಿಣದ ರೂಪ ಕೊಡಬಹುದು. ಕಬ್ಬಿಣದ ಮೂರನೇ ಜಾತಿಗೆ ಉಕ್ಕೆಂಬ ಹೆಸರು ಉಕ್ಕಿನಿಂದ ಕತ್ತಿ, ಕತ್ತರೆ, ಚೂರಿ, ಉಳಿ ಮೊದಲಾದ ಪದಾರ್ಥಗಳಾಗುತ್ತವೆ. ಇದು ಬಹಳ ಗಟ್ಟಿಯಾಗಿ ಬಿರುಸಿರುತ್ತದೆ. ಆದ್ದರಿಂದ ಇದ

ರಿಂದಾದ ಮುಟ್ಟುಗಳನ್ನು ಮಸೆದು ಹದನೆ ಮಾಡಬಹುದು. ಬೀಡಿನೊಳಗೆ ಕಾರ್ಬೊನ್ನವನ್ನು ತೆಗೆದು ಹಾಕಿ ಇಲ್ಲವೆ ಕಬ್ಬಿಣದಲ್ಲಿ ತುಸು ಕಾರ್ಬೊನ್ನವನ್ನು ಕೂಡಿಸಿ ಉಕ್ಕು ಮಾಡುತ್ತಾರೆ.

ಇನ್ನೇ ಪ್ರಯೋಗದಲ್ಲಿ ಹೇಳದಂತೆ ಕಬ್ಬಿಣವನ್ನು ಹವೆಯಲ್ಲಿ ಇಲ್ಲವೆ ಆಕ್ಸಿಜನದಲ್ಲಿ ಕಾಸಿದರೆ ಆಕ್ಸಾಯಿಡ ಆಫ್ ಆಯರ್ನ ಅಂದರೆ ಕಬ್ಬಿಣದ ಆಕ್ಸಾಯಿಡ ಅಥವಾ ಕಬ್ಬಿಣದ ಜಂಗು ಹುಟ್ಟುವದು ಲಕಲಕ ಹೊಳೆಯುವ ಕಬ್ಬಿಣವನ್ನು ಬೈಲೊಳಗೆ ಅಥವಾ ತೇವಿನ ಹವೆಯಲ್ಲಿ ಇಟ್ಟರೆ ಜಂಗು ತಿನ್ನುವದು. ಕೆಲವು ದಿವಸಗಳಾದ ಬಳಿಕ ಆ ಸ್ಥಳದಲ್ಲಿ ನೋಡಿದರೆ ಕಬ್ಬಿಣಕ್ಕೆ ಬದಲಾಗಿ ಜಂಗೇ ಕಾಣುವದು ಉಸ್ತೋವಸ್ತದ ಮೇಲೆ ನಸುಗೆಂಪಾದ ಬೂಳಸು ಕೂತದ್ದನ್ನು ನೀವು ನೋಡಿರಬಹುದು. ಅವಾದರೂ ಕಬ್ಬಿಣದ ಜಂಗೇ.

ಪ್ರಯೋಗ ೪೪:—ಕೆಲವು ಕಬ್ಬಿಣದ ಸಣ್ಣ ಸಣ್ಣ ಜೂರುಗಳನ್ನು ಒಂದು ಕೊಳಿವೆಯಲ್ಲಿ ಹಾಕಿ ಮೇಲೆ ಜಲಮಿಶ್ರಿತ ಗಂಧಕಾಮ್ಲವನ್ನು ತುಸು ಸುರುವು ಅಗೋ ಆ ಕೊಳಿವೆಯೊಳಗಿಂದ ಹೊಗೆ ಹೊರಡಹತ್ತಿದೆ. ಇನ್ನು ಇಕ್ಕಳದಿಂದ ಕೊಳಿವೆಯನ್ನು ಹಿಡಿದು ಮದ್ಯಾರ್ಕದ ದೀಪದ ಮೇಲೆ ಹಿಡಿ ಅದು ನೋಡು ಹೊಗೆಯು ಮೊದಲಿಗಿಂತ ಹೆಚ್ಚಾಗಿಯೂ ಒತ್ತರವಾಗಿಯೂ ಹೊರಡಹತ್ತಿತು. ಕಡ್ಡೀ ಕೊರೆದು ಆ ಹೊಗೆಗೆ ಹಚ್ಚು, ನೋಡು ಅದು ಹ್ಯಾಗೆ ಉರಿಯಹತ್ತಿದೆ. ಇದು ಹೈದ್ರೋಜನವಾಯುವಲ್ಲವೇ? ಗಂಧಕಾಮ್ಲದಲ್ಲಿ ಕಬ್ಬಿಣವು ಕರಗುವದರಿಂದ ಹಿರಾಕಸವೆಂಬ ಕಾರವು ತಳಕ್ಕೆ ಕೂತು ಗಂಧಕಾಮ್ಲದೊಳಗಿನ ಹೈದ್ರೋಜನವಾಯು ಹೊರಬಿತ್ತು.

ಮೇಲೆ ವರ್ಣಿಸಿದ ಕೊಳಿವೆಯನ್ನು ತಕ್ಕೊಂಡು ಅದರೊಳಗಿರುವದನ್ನು ಚೆಲ್ಲದೆ ನೀರು ತುಂಬು ಬಳಿಕ ಆ ನೀರನ್ನು ಸೋಸುವ ಕಾಗದದೊಳಗಿಂದ ಸೋಸಿ ತೆಗೆ ಬಳಿಕ ಈ ವರ್ಣಹೀನವಾದ ನೀರನ್ನು ದೀಪದ ಮೇಲೆ ಹಿಡಿದು ಕಾಸಿದರೆ ನೀರೆಲ್ಲ ಉಗಿಯಾಗಿ ಹಾರಿ ಹೋಗುವದು. ಸ್ಫಟಿಕಾಕೃತಿಯಾದ ಹಿರಾಕಸವು ತಳಕ್ಕೆ ಉಳಿಯುವದು.

ಹಿರಾಕಸದಲ್ಲಿ ಕಬ್ಬಿಣ ಉಂಟು. ಯಾಕಂದರೆ ಹಿರಾಕಸದ ದ್ರವದಲ್ಲಿ ನೈತ್ರಿಕ ಆಸಿಡಿನ ಮೂರು ನಾಲ್ಕು ಹನಿಗಳನ್ನು ಬಿಟ್ಟು ಅದರೊಳಗೆ ಪೋಟ್ಯಾಸಿಯಮ್ ಹೇರೂಸಾಯಿನಾಯಿಡ ಎಂಬ ಪದಾರ್ಥದ ನಾಲ್ಕಾರು ಹನಿಗಳನ್ನು ಹಾಕಿದರೆ ಅದು ನೀಲವರ್ಣದ್ದಾಗುವದು. ಈ ನೀಲವರ್ಣಕ್ಕೆ ಪ್ರಸಿಯನ್ನ ನೀಲಿ ಎಂಬ ಹೆಸರು.

೫೪. ಅಲ್ಯೂಮಿನಂ :—ಇದನ್ನು ಮಣ್ಣೊಳಗಿಂದಲೂ, ಬಂಡೆಗಳೊಳಗಿಂದಲೂ ತೆಗೆಯುತ್ತಾರೆ. ಇದು ಬೆಳ್ಳಿಯ ಹಾಗೆ ಲಕಲಕ ಹೊಳೆಯುತ್ತದೆ. ಇಂಥ ಧಾತುವನ್ನು ಮಣ್ಣೊಳಗಿಂದ ತೆಗೆಯುತ್ತಾರೆಂಬ ಮಾತು ನಿಮಗೆ ಸೋಜಿಗವಾಗಿ ತೋರಬಹುದು ಆದರೆ ಇದು ನಿಜವು ರಸಾಯನ ಶಾಸ್ತ್ರಜ್ಞರು ಇದನ್ನು ಮಣ್ಣಿನಿಂದಲೇ ತೆಗೆಯುವರು.

ಆಕ್ಸಿಜನ್ನವು ಮಣ್ಣೊಳಗೆ ವಿದ್ಯುತವಾಗಿರುವದರಿಂದ ಇದನ್ನು ಅಲ್ಪಾಯಾಸದಿಂದ ಬೇರೆ ಮಾಡಲಾರೆವು. ಇದಕ್ಕೋಸ್ಕರ ಈ ಧಾತುವನ್ನು ತೆಗೆಯಲಿಕ್ಕೆ ಹೆಚ್ಚು ವೆಚ್ಚ ಬೀಳುತ್ತದೆ. ಆದ್ದರಿಂದ ಇದು ಅತ್ಯುಪಯುಕ್ತವಾಗಿದ್ದರೂ ತುಟ್ಟಿಯಿರುವದರಿಂದ ಕೊಳ್ಳುವವರು ಕಡಿಮೆ.

೫೫. ಕ್ಯಾಲ್ಸಿಯಂ :—ಇದನ್ನು ತೆಗೆಯುವದು ಅತಿ ಪ್ರಯಾಸದ ಕೆಲಸವು. ಉಪಯೋಗ ಕಡಿಮೆ. ಈ ಧಾತುವಿನ ಮಿಶ್ರಣಗಳು ಸೃಷ್ಟಿಯಲ್ಲಿ ವಿಪುಲವಾಗಿರುತ್ತವೆ. ಸುಣ್ಣವು ಕ್ಯಾಲ್ಸಿಯಂ ಧಾತುವಿನ ಆಕ್ಸಾಯಿಡವಿರುತ್ತವೆ. ಖಡು, ಸಂಗಮರವರೀಕಲ್ಲು, ಸುಂಣದಕಲ್ಲು, ಬಂಕಿ, ಸಿಂಪ್ರು, ಮುತ್ತು ಮೊದಲಾದ ಯಾವತ್ತು ಪದಾರ್ಥಗಳು ಕ್ಯಾಲ್ಸಿಯಂ ಕಾರ್ಬಾನಿಕ್ ಆಸಿಡ ಇವೆರಡರ ಸಂಯೋಗದಿಂದುಂಟಾಪ ಬಿಡವೆಗಳು ಇವುಗಳಿಗೆ ಕ್ಯಾಲ್ಸಿಯಂ ಕಾರ್ಬೊನೇಟ ಎಂಬ ಹೆಸರು ಕೊಡಬಹುದು. ಈ ಧಾತುವು ಗಂಧಕಾಮ್ಲದಲ್ಲಿ ಸಂಯೋಗವಾಗಿ ಪ್ಲ್ಯಾಸ್ತರ ಆಫ್ ಪ್ಯಾರೀಸ ಎಂಬ ಪದಾರ್ಥವನ್ನುಂಟುಮಾಡುತ್ತದೆ. ಈ ಮಿಶ್ರಣವು ಕ್ಯಾಲ್ಸಿಯಂ ಸಲ್ಫೇಟವೆಂಗು ಕರೆಯಲ್ಪಡುತ್ತದೆ. ಎಲುವಿನಲ್ಲಿ ಕ್ಯಾಲ್ಸಿ

ಯುಮ್ಮೆಯೊ ಫಾಸ್ಪೊರಿಕ್ ಆಸಿಡವೂ ಇರುತ್ತವೆ. ಇವರಿಂ ದ ಎಲುವಿನ ಬೂದಿಗೆ ಕ್ಯಾಲ್ಸಿಯುಂ ಫಾಸ್ಫೇಟ ಎಂಬ ಹೆಸ ರು ಬಂದಿದೆ. ಈ ಬಗೆಯಾಗಿ ಈ ಧಾತುವು ಭೂಮಿಯೊ ಳಗಿನ ಅಸಂಖ್ಯ ಪದಾರ್ಥಗಳಲ್ಲಿ ಕೂಡಿರುತ್ತದೆಂದು ಸಿದ್ಧ ವಾಗುತ್ತದೆ.

ಪ್ರಯೋಗ ೪೫:—ಹಿಂದೆ ಒಂದನೇ ಪ್ರಯೋಗದಲ್ಲಿ ಎಲು ವಿನಲ್ಲಿ ಹೈದ್ರೋಕ್ಲೋರಿಕ್ ಆಸಿಡವನ್ನು ಹುಳ್ಳಗಾಡಿ ಕಾ ರ್ಬಾನಿಕ್ ಆಸಿಡ್ ಗ್ಯಾಸವನ್ನು ತೆಗೆಯುವ ಕ್ರಮವನ್ನು ವಿ ವರಿಸಿರುತ್ತೇವೆ, ಆ ಪ್ರಯೋಗದಲ್ಲಿ ನೀರಿನಲ್ಲಿ ತಳಕುಳಿದ ದ್ರವವೇ ಕ್ಯಾಲ್ಸಿಯುಂ ಕ್ಲೋರಾಯಿಡವೆಂದು ತಿಳಿಯುತಕ್ಕ ದ್ದು. ಆ ದ್ರವವನ್ನು ಹುಚ್ಚಿ ಬಣಗಿಸಿದರೆ ಬಿಳಿ ಪುಡಿಯಾ ಗುವದು. ಈ ಪುಡಿಗೆ ಕ್ಯಾಲ್ಸಿಯುಂ ಕ್ಲೋರಾಯಿಡವೆನ್ನುವ ರು: ಇದು ಒಂದು ಬಗೆಯ ಕ್ಷಾರವು ಇದರಲ್ಲಿ ಅಪ್ಪಟವಾ ಶೋಷಕ ಧರ್ಮವಿರುವದು ಆದಕ್ಕೋಸುಗವೇ ಹಿಂದೆ ಒಂದನೇ ಪ್ರಯೋಗದಲ್ಲಿ ಹೈದ್ರೋಜನ್ನ ದೊಳಗಿನ ಹನಿಯ ನ್ನು ಹೀರಿ ತೆಗೆಯಲಿಕ್ಕೆ ಇದನ್ನು ಉಪಯೋಗಿಸಿದ್ದೇವು ಈ ಪುಡಿಯನ್ನು ಕೆಲವು ಹೊತ್ತು ಹವೆಯಲ್ಲಿ ತೆರೆದಿಟ್ಟರೆ ಇದು ಹವೆಯೊಳಗಿನ ಹನಿಯನ್ನು ಹೀರಿಕೊಂಡು ಮುರಳಿ ದ್ರವ ರೂಪವನ್ನು ಧರಿಸುತ್ತದೆ.

(ಸಶೇಷ)

MANUAL OF METHOD.

ಶಿಕ್ಷಾಕ್ರಮ.

(೪೧ನೇ ಪುಟದಿಂದ ಮುಂದೆ ಸಾಗಿದ್ದು.)

ಪರೀಕ್ಷೆಯ ಪ್ರಶ್ನೆಗಳು.

(೧೪) ಮುರ್ಖತ್ವ ಸುಳ್ಳುತನ, ಸೋಮಾರಿತನ, ಉದ್ದಟತ ನ, ದುರ್ಮುಖತನ, ಮುಂತಾದವುಗಳನ್ನು ತಿದ್ದಲಿಕ್ಕೆ ನೀವು ಕೈಕೊಂಡ ಉಪಾಯಗಳಾವವು? ಅದರಿಂದಾದ ಫಲವೇನು?

(೧೫) ಶಾಲೆಯು ನೇಮಿಸಿದ ಅಭ್ಯಾಸವನ್ನು ಮಾಡಿಸುವದರಿಂದಲೇ ಅಲ್ಲ, ಅನ್ಯ ಬಗೆಗಳಿಂದಲೂ ವಿದ್ಯಾ

ರ್ಥಿಗಳ ಹಿತಕ್ಕೆ ನೆರವಾಗುತ್ತದೆನ್ನುತ್ತಾರೆ ಈ ಬಗೆಗಳು ಯಾವವು? ಇವುಗಳಿಂದ ಲಾಭವೇನು?

(೨೦) ವಿದ್ಯಾರ್ಥಿಗಳ ಚಟಗಳನ್ನು ನಡೆನುಡಿಗಳನು ವರ್ತನೆ ವ್ಯವಹಾರವನ್ನು ಸ್ವಭಾವವನ್ನು ಅಭ್ಯಾಸದ ಪಾಠಗಳಿಂದಲ್ಲದೆ ಬೇರೆ ಬಗೆಯಿಂದ ಶಿಕ್ಷಕನು ತಿದ್ದಬಹುದೆಂದೆನ್ನುವಿರಾ ಆದರೆ ಆ ಬಗೆಗಳು ಯಾವವು?

(೨೧) ಒಳ್ಳೇ ತಿದ್ದುವಿಕೆಯೆಂದರೇನು? ಅದನ್ನು ನೆಲೆಗೊಳಿಸುವ ಮಾರ್ಗಗಳು ಯಾವವು?

(೨೨) ಬೇಸರಗೊಂಡಂಥ ಅಥವಾ ಅವ್ಯವಸ್ಥಿತವಾದಂಥ ವರ್ಗದ ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಸೀಳ್ವು ಹೇಳುವ ಪಾಠಕ್ಕೆ ಲಕ್ಷ್ಯ ಕೊಡುವಂತೆ ಮಾಡುವ ಉಪಾಯಗಳು ಯಾವವು?

(೨೩) ಕೆಲವು ದೇಶಗಳಲ್ಲಿ ಶಿಕ್ಷಕರು ಬೇಡದಂಡವನ್ನು ಮಾಡಕೂಡದೆಂದು ಕಟ್ಟಪ್ಪಣೆಗಳನ್ನು ಮಾಡಿರುತ್ತಾರೆ. ಇಂಥ ದೇಶದ ಶಾಲೆಗಳಲ್ಲಿ ತಿದ್ದುವಿಕೆಯನ್ನು ಯಾವ ಉಪಾಯಗಳಿಂದ ನೆಲೆಗೊಳಿಸಬಹುದು?

(೨೪) ಟೀಕಾ ಪಾಠವೆಂದರೇನು? ತಿದ್ದುವಿಕೆಯ ಸಂದರ್ಭದಲ್ಲಿ ಈ ಪಾಠವು ಯಾವ ಯಾವ ಮಾತುಗಳ ಸಮಾವೇಶವಾಗುವದು?

(೨೫) ಪ್ರತಿ ಒಬ್ಬ ವಿದ್ಯಾರ್ಥಿಯು ಗುಣಾವಗುಣಗಳನ್ನು ಲಕ್ಷ್ಯಪೂರ್ವಕವಾಗಿ ತಿಳಿಕೊಳ್ಳುವದರಿಂದ ವರ್ಗಶಿಕ್ಷಣಕ್ಕಾಗುವ ಲಾಭವೇನು?

ಒಂಭತ್ತನೇ ಅಧ್ಯಾಯ

ವರ್ಗೀಕರಣ.

ಹತ್ತು ಮಂದಿ ವಿದ್ಯಾರ್ಥಿಗಳನ್ನು ತಕ್ಕೊಂಡರೆ ಅವರಲ್ಲಿ (೧) ಕೆಲವರು ಸಮನಾಗಿ ಕಲಿತವರೂ ಕೆಲವರು ಹೆಚ್ಚು ಕಡಿಮೆ ಕಲಿತವರೂ ಇರುತ್ತಾರೆ (೨) ಕೆಲವರು ಸ್ಥಿಮಿತ ಬುದ್ಧಿಯವರೂ ಕೆಲವರು ಚುರುಕು ಬುದ್ಧಿಯವರೂ ಇರುತ್ತಾರೆ. (೩) ಕೆಲವರು ಪ್ರಬುದ್ಧರೂ ಕೆಲವರು ಅಪ್ರಬುದ್ಧರೂ ಇರುತ್ತಾರೆ. (೪) ತಮ್ಮ ತಮ್ಮ ಪರಿಸ್ಥಿತಿಗೆ ಅನು

ಗುಣವಾಗಿ ಕೆಲವರಲ್ಲಿ ಒಂದು ವಿಷಯದ ಅಭಿರುಚಿಯೂ ಕೆಲವರಲ್ಲಿ ಬೇರೊಂದು ವಿಷಯದ ಅಭಿರುಚಿಯೂ ಕಂಡು ಬರುತ್ತದೆ. ಮತ್ತು ಅನುವಂಶ ಸಂಬಂಧದಿಂದ ಕೆಲವರಿಗೆ ವಿಷಯಗಳು ತೀವ್ರ ತಿಳಿಯುತ್ತವೆ. ಕೆಲವರಿಗೆ ತಡವಾಗಿ ತಿಳಿಯುತ್ತವೆ. ಆದ್ದರಿಂದ ಈ ಕಾರಣಗಳ ಮೂಲಕವಾಗಿ ವರ್ಗೀಕರಣವನ್ನು ಬಹು ಎಚ್ಚರದಿಂದ ಮಾಡಬೇಕಾಗುತ್ತದೆ.

ವರ್ಗೀಕರಣದ ಎರಡು ಪದ್ಧತಿಗಳು—ಮೇಲೆ ಬರೆದ ಸಂಗತಿಗಳ ಧೋರಣದಿಂದ ಮಾಡುವದು ಒಂದು. ಕಲಿಯುವವನಿಗೆ ಇಷ್ಟವಾದ ವಿಷಯವು ಕಲಿಸ್ಪಡುವ ವರ್ಗದಲ್ಲಿ ಕೂಡ್ರಿಸಿ ಅಭ್ಯಾಸ ಸಾಗಿಸುವದು ಮತ್ತೊಂದು. ಎರಡನೇ ಪದ್ಧತಿಯು ಬಹು ಸುಲಭವಾಗಿರುತ್ತದೆ. ಆದರೆ ಮೊದಲನೇ ಪದ್ಧತಿಯು ಬಹಳ ಬಿರಿಯಾದಾಗ್ಯೂ ಬಹು ಪ್ರಯೋಜನಕರವಾಗಿರುತ್ತದೆ. ಬಹುಶಃ ಎಲ್ಲ ಶಾಲೆಯ ವ್ಯವಸ್ಥಾಪಕರು ಇದನ್ನೇ ಅನುಸರಿಸುತ್ತಾರೆ.

ವಿದ್ಯಾರ್ಥಿಗಳು ಶಾಲೆಯಲ್ಲಿ ಕಳೆದ ಕಾಲವೂ ಅವರ ವಯಸ್ಸೂ ವರ್ಗೀಕರಣದ ಕೆಲಸದಲ್ಲಿ ವಿಶೇಷ ಚಿಂತನೀಯವಾಗಿಲ್ಲ. ಅವರ ವಿದ್ಯಾಪರಿಚಯ ಸಮಾನತ್ವವೇ ಚಿಂತನೀಯವಾದ ಮುಖ್ಯ ಸಂಗತಿಯು ವಿದ್ಯಾರ್ಥಿಗಳು ಶಾಲೆಗೆ ಬಂದಾಗ ಅವರನ್ನು ೧ ವಾಚನ (ಭಾಷಾ) ೨ ಗಣಿತ ಈ ವಿಷಯಗಳಲ್ಲಿ ಪರೀಕ್ಷಿಸಿ ಅವರ ಯೋಗ್ಯತೆಗೆ ಸರಿಯಾದ ವರ್ಗದಲ್ಲಿ ಸೇರಿಸುವದು ಪ್ರಯೋಜನಕರವಾಗುವದು. ಈ ದ್ವಿವಿಷಯ ಪದ್ಧತಿಯಿಂದ ಹುಡುಗರಿಗೂ ಶಿಕ್ಷಕರಿಗೂ ಬಹಳ ಅನುಕೂಲವಾಗುತ್ತದೆ. ಈ ಪದ್ಧತಿಯಿಂದ ವರ್ಗೀಕೃತರಾದ ಹುಡುಗರು ಇತರ ವಿಷಯಗಳಲ್ಲಿ ಇರುವ ಹೆಚ್ಚು ಕಡಿಮೆಗಳನ್ನು ತೀವ್ರ ಸರಿಮಾಡಿಕೊಂಡು ಕೆಲಸವು ಸರಸವಾಗಿ ಸಾಗುತ್ತದೆ ಕೆಲವು ಶಾಲೆಗಳಲ್ಲಿ ವಿಕವಿಷಯಪದ್ಧತಿಯನ್ನೇ ಅವಲಂಬಿಸುವರು. ಆ ಶಾಲೆಗಳಲ್ಲಿ ವಿದ್ಯಾರ್ಥಿಗಳನು ಅಂಕಗಣಿತದಲ್ಲಿ ಪರೀಕ್ಷಿಸಿ ಸಮಾನಯೋಗ್ಯತೆಯ ವಿದ್ಯಾರ್ಥಿಗಳನ್ನು ಒತ್ತಟ್ಟಿಗೆ ಸೇರಿಸುವದು ಶ್ರೇಯಸ್ಕರವು. ಇಷ

ಈ ಗಣಿತದ ಹೊರತು ಬೇರೆ ವಿಷಯವನ್ನು ಮುಖ್ಯ ಮಾಡಿದರೆ ಕೆಲಸವು ನೆಟ್ಟಗೆ ಸಾಗಲಾರದು. ಗಣಿತ ವಿಷಯಕ್ಕೆ ಬೇಕಾದಷ್ಟು ಮನಸಿನ ಏಕಾಗ್ರತೆಯು ಚುರುಕುತನವೂ ಬೇರೆ ವಿಷಯಗಳನ್ನು ಕಲಿಯಲಿಕ್ಕೆ ಬೇಕಾಗುವದಿಲ್ಲ. ಈ ವಿಷಯದ ಸಂಬಂಧದಿಂದ ಮಂದಬುದ್ಧಿಯು ಉದ್ಯೋಗಶೀಲರಾದ ವಿದ್ಯಾರ್ಥಿಗಳು ಶ್ರಮಬಡುವದೂ ಬಿಟ್ಟೀಬೀಸರದ ವಿದ್ಯಾರ್ಥಿಗಳು ಬಳಲುವದೂ, ದುರ್ಲಕ್ಷದ ವಿದ್ಯಾರ್ಥಿಗಳು ಪ್ರವೇಶ ಹೊಂದದೆ ಇದ್ದಕ್ಕಿದ್ದಹಾಗೆ ಉಳಿಯುವದು ಎಲ್ಲರಿಗೂ ಅನುಭವದ ಮಾತಾಗಿದೆ.

ಸದೋಷ ವರ್ಗೀಕರಣ—ಸದೋಷ ವರ್ಗೀಕರಣವೆಂಬ ಹೆಸರು ಅಸಂಬದ್ಧವಾಗಿರುತ್ತದೆ. ವಿದ್ಯಾಪರೀಕ್ಷೆಯು ಸಮಾನತ್ವವನ್ನು ಬುದ್ಧಿಸಮಾನತ್ವವನ್ನು ಅನುಲಕ್ಷಿಸಿ ವರ್ಗೀಕರಣವನ್ನು ಮಾಡಲಾಗಿ ದೋಷಸಂಭವಿಸುವ ಬಗೆಯೇನು? ವರ್ಗೀಕರಣದಲ್ಲುಂಟಾದ ದೋಷಗಳಿಂದ ಕೆಲವು ಅನರ್ಥಗಳು ಸಂಭವಿಸುತ್ತವೆ ಅದರಲ್ಲಿ ಮುಖ್ಯವಾದವುಗಳು ಯಾವವೆಂದರೆ—

೧ ಕಾಲಾಪವ್ಯಯ—ವಿದ್ಯಾರ್ಥಿಗಳು ಸಮಾನರಾಗಿರದ್ದರಿಂದ ಎಲ್ಲರ ಕಾಲಾಪವ್ಯಯವಾಗುತ್ತದೆ.

೨. ವಿದ್ಯಾರ್ಥಿಗಳನ್ನು ಹುರಿದುಂಬಿಸಿ ಅವರ ಬುದ್ಧಿಸಾಮರ್ಥ್ಯಗಳಿಗೆ ಚಾಲನೆ ಕೊಟ್ಟು ಅಭ್ಯಾಸವನ್ನು ಸಾಗಿಸುವದಕ್ಕೆ ಅನಾನುಕೂಲವಾಗಿ ವರ್ಗದ ಗೌರವವೂ ಸಹಾನುಭೂತಿಯೂ ಕಡಿಮೆಯಾಗುತ್ತವೆ.

೩. ವಿದ್ಯಾರ್ಥಿಗಳಿಗೆ ಸಾಧ್ಯವಾದಂಥ ಹುರುಪನ್ನು ಕಾಯ್ದುಕೊಳ್ಳುವಂಥ ಕೆಲಸವನ್ನು ಯಾವಾಗಲೂ ಕೊಡಲೇಬೇಕೆಂಬ ಮಹತ್ವದ ನಿರ್ಬಂಧಕ್ಕೆ ಇದರಿಂದ ಕುಂದು ಬರುತ್ತದೆ.

೪. ಇದು ತಿದ್ದುಪಿಕೆಗೆ ಭಂಗ ತರುತ್ತದೆ.

೫. ಇದರ ಮೂಲಕವಾಗಿ ತಾಯಿತಂದೆಗಳಿಗೆ ಅಸಮಾಧಾನವೂ ಶಾಲೆಗೆ ದುರ್ನಾಮಿಕವೂ ತಟ್ಟುತ್ತವೆ.

೬. ಹಣದ ಸಂಬಂಧದಿಂದ ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಹಾನಿ ಸಂಭವಿಸುತ್ತದೆ. ಶಿಕ್ಷಕನ ಲೌಕಿಕಕ್ಕೆ ಕೊರತೆ ಬರುತ್ತದೆ.

DEPARTMENTAL NOTICE.

ನೋಟೀಸು.

ಸರ್ಕಾರಿನೇ ಇಸವಿಯ ಅಕ್ಟೋಬರ ತಿಂಗಳ ಕನ್ನಡ ಶಾಲಾಪತ್ರಕದ ೧೪ರಿಂದ ೧೬ನೇ ಪುಟಗಳಲ್ಲಿ ಛಾಪಿಸಿರುವ ನಿಯಮಗಳಂತೆ "ವರ್ಡ್‌ಪ್ರೈಜ" ಎಂಬ ಇನಾಮುಗಳ ಸಲುವಾಗಿ ಪರೀಕ್ಷೆಯು ಕನ್ನಡದಲ್ಲಿ ಧಾರವಾಡ ಟ್ರೇನಿಂಗ ಕಾಲೇಜದೊಳಗೆ ತಾರೀಖು ೯ನೇ ದಿಸಂಬರ ಸರ್ಕಾರಿನೇ ಇಸವಿ ದಿವಸ ಕೆಳಗೆ ಸಹಿ ಮಾಡಿದವರಿಂದ ತೆಗೆದುಕೊಳ್ಳಲ್ಪಡುವದು. ೪೦ ರೂ. ಗಳ ಇನಾಮು ಒಂದು ಮತ್ತು ೨೦ ರೂ. ಗಳ ಇನಾಮು ಒಂದು ಈ ಪ್ರಕಾರ ಎರಡು ಇನಾಮುಗಳು ಇರುವವು. ಈ ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಪೋದವಾರರು ತಾರೀಖು ೫ನೇ ನವಂಬರ ಸರ್ಕಾರಿನೇ ಇಸವಿ ಒಳಗಾಗಿ ತಮ್ಮ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ಕಳುಹಿಸಬೇಕು. ಪರೀಕ್ಷೆಯು ಮುಂಜಾನೆ ೧೧ ಘಂಟೆಗೆ (ಮದ್ರಾಸ) ಟೈಮು ಸರಿಯಾಗಿ ಪ್ರಾರಂಭವಾಗುವದು.

ಧಾರವಾಡ
ತಾ|| ೩೧-೧೨-೧೯೦೦. } B. R. Sahasrabudhe,
ಎ. ಇ. ದಕ್ಷಿಣಭಾಗ.

CORRESPONDENCE.

ಪತ್ರವ್ಯವಹಾರ.

(೫೭ನೇ ಪುಟದಿಂದ ಮುಂದೆ ಸಾಗಿದ್ದು)

ಇನ್ನು ಹಿಂದೆ ಹೇಳಿದ ಪ್ರಕಾರ ಯಾವದೊಂದು ಪದ್ಧತಿಯಲ್ಲಿದ್ದ ಸಂಖ್ಯೆಯನ್ನು ಮತ್ತೊಂದು ಪದ್ಧತಿಗೆ ಬದ್ಲಾಯಿಸಬೇಕಾದರೆ ಕೊಟ್ಟ ಸಂಖ್ಯೆಯನ್ನು ೧೦ರ ಪದ್ಧತಿಗೆ ಬದ್ಲಾಯಿಸಬೇಕು. ಅದರಂತೆ ೩೪೫೬ ಇದನ್ನು ೮ರ ಪದ್ಧತಿಯಿಂದ ೧೦

ರ ಪದ್ಧತಿಗೆ ಬಿಯ್ಯಲು ೧೪೩೪ ಬಂತು ಈ ಸಂಖ್ಯೆಯನ್ನು ಬೇರೊಂದು ಪದ್ಧತಿಗೆ ಬಿಯ್ಯುವರೀತಿಯನ್ನು ಲಕ್ಷಕ್ಕೆತರಲು ಕಂಡುಬರುವದೇನಂದರೆ :—ಕೊಟ್ಟ ಎನೇ ಸಂಖ್ಯೆಯ ಮೊದಲನೇ ಸ್ಥಾನದ ಅಂಕೆಯು. ಈ ಸಂಖ್ಯೆಯ ಪದ್ಧತಿ ದರ್ಶಕ ಅಂಕೆಯಿಂದ ೧೪೩೪ಕ್ಕೆ ಭಾಗಿಸಿ ಬಂದ ಬಾಕಿಯು. ಮತ್ತು ಉಳಿದ ಅಂಕೆಗಳು ಭಾಗಾಕಾರಗಳಿಗೆ ಅದೇ ಅಂಕೆಯಿಂದ ಭಾಗಿಸಿ ಉಳಿಯುವ ಬಾಕಿಗಳು. ಅದಕಾರಣ ಕೊಟ್ಟ ಎನೇ ಸಂಖ್ಯೆಯಾದ ೧೪೩೭೭೭ ಇದರ ಮೊದಲನೇಸ್ಥಾನದ ಅಂಕೆಯನ್ನು ೧೪೩೪ರಲ್ಲಿ ಕಳೆದು ಉಳಿದ ಸಂಖ್ಯೆಗೆ ಮೂವ ಅಂಕೆಯಿಂದ ಭಾಗಹೋಗುವದೋ ಆ ಅಂಕೆಯಿಂದ, ಬರುವ ಭಾಗಾಕಾರದಲ್ಲಿ ೧೪೩೭೭೭ ಈ ಸಂಖ್ಯೆಯ ಎನೇ ಸ್ಥಾನದ ಅಂಕೆಯಾದ ೭ನ್ನು ಕಳೆದರೆ ಉಳಿಯುವ ಅಂಕೆಗೆ ಭಾಗ ಹೋಗಲಿಕ್ಕೆಬೇಕು. ಮತ್ತು ಬಂದ ಭಾಗಾಕಾರದಲ್ಲಿ ೭ನೇಸ್ಥಾನದ ಎನ್ನು ಕಳೆದರೆ ಉಳಿಯುವ ಬಾಕಿಗೆ ಅದೇ ಅಂಕೆಯಿಂದ ಭಾಗ ಹೋಗಲಿಕ್ಕೆಬೇಕು. ಈ ಪ್ರಕಾರ ಆ ಸಂಖ್ಯೆಯು ಯಾವತ್ತು ಅಂಕೆಗಳು ತೀರುವ ವರೆಗೆ ಕಾರ್ಯವನ್ನು ಮಾಡಿದರೆ, ೪೫೩೬೭೭ ಈ ನಾಲ್ಕು ಅಂಕೆಗಳಲ್ಲಿ ಯಾವ ಅಂಕೆಯಿಂದ ಕಡೆಯ ವರೆಗೆ ಭಾಗ ಹೋಗುವದೋ ಅದೇ ಈ ಸಂಖ್ಯೆಯ ಪದ್ಧತಿ ದರ್ಶಕ ಅಂಕೆಯು ೪ರಿಂದ ಭಾಗ ಹೋಗುವ ಕಾರಣ ಈ ಸಂಖ್ಯೆಯು ೪ರ ಪದ್ಧತಿಯದಿರುತ್ತದೆ.

ಸಂಖ್ಯಾವಾಚನ ಪದ್ಧತಿ.

ವ್ಯಾಖ್ಯೆ—ಗುರುತುಗಳಿಂದ ಬರೆದು ತೋರಿಸಿದ ಸಂಖ್ಯೆಯನ್ನು ಯಾವ ಕ್ರಮದಿಂದ ಓದಿ ಹೇಳುತ್ತಾರೋ ಆ ಕ್ರಮಕ್ಕೆ ಸಂಖ್ಯಾವಾಚನ ಪದ್ಧತಿ ಅನ್ನುತ್ತಾರೆ.

ದಶಕಪದ್ಧತಿಯನ್ನು ಹಿಂಬಾಲಿಸಿದ ಬೇರೆ ಬೇರೆ ಜನಾಂಗದವರು ಒಂದೇ ರೀತಿಯಾಗಿ ಬರೆಯುತ್ತಿದ್ದರೂ ಓದುವ ರೀತಿಯು ಬೇರೆಬೇರೆಯಾಗಿರುತ್ತದೆ. ಬರೆದಂತೆ ಓದುವದು ಮಾನ್ಯವಾದ ಕ್ರಮವು. ಕನ್ನಡದಲ್ಲಿ ಇದೇ ಕ್ರಮದಿಂದ ಓದುವರು. ಇಂಗ್ರೇಜಿಯಲ್ಲಿಯಾದರೂ ಬರೆದಂತೆ ಓದು

ತ್ತಾರೆ. ಆದರೆ ಸಂಸ್ಕೃತ ಅರಬೀ ಭಾಷೆಗಳಲ್ಲಿ ವಿರುದ್ಧ ಕ್ರಮದಿಂದ ಓದುವರು, ಮಹಾರಾಷ್ಟ್ರ ಭಾಷೆಯಲ್ಲಿ ಕೆಲವು ಬರೆದಂತೆಯೂ ಕೆಲವು ವಿರುದ್ಧ ಕ್ರಮದಂತೆಯೂ ಓದುವ ರೂಢಿಯುಂಟು.

ಕನ್ನಡ—೪೫೬೭—ನಾಲ್ವತ್ತೈ (೪) ದು (೫) ಸಾವಿರ ಆ ಎರಡು (೬) ನೂರಅರವತ್ತು (೭) ಮೂರು (೩)

ಇಂಗ್ರೀಜಿ—೪೫೬೭—ಫಾರಟಿ (೪) ಫಾಯ್‌ವ್ (೫) ಥೌಜಂಡ, ಟೂ (೬) ಹಂಡ್ರೆಡ್ ಸಿಕ್ಸಟಿ (೭) ಥ್ರೀ (೩)

ಅರಬಿ ಪದ್ಧತಿ—೧೬೩೬ । ಹಸನ್ನೆ ೬ ಸಲ್ಲಾಸ ೩೦ ಮಿಯಾತ್ಯೆನ ವ ಅಲ್ಲಫ ೧೦೦೦.

ಸಂಸ್ಕೃತ ಪದ್ಧತಿ—೮೩೬೯ ವಿಕೋನವಿಂಶಾಧಿಕ ಸಪ್ತ ಶತೋತ್ತರ ಅಷ್ಟಸಹಸ್ರ.

ಮರಾಠಿ ಪದ್ಧತಿ—೪೫೬೭ । ೪ ಪಂಚೇ ೪೦ ಚಾಳೀಸ ಹಜಾರ ೬೦೦ ದೋನಸೇ ೩ ತ್ರೇ ೭೦ ಸಪ್ತ.

ಈ ಎಲ್ಲ ಪದ್ಧತಿಗಳನ್ನು ನೋಡಲು ಇಂಗ್ಲಿಷ ಮತ್ತು ಕನ್ನಡ ಪದ್ಧತಿಗಳು ಒಂದನ್ನೊಂದು ಹೋಲುತ್ತವೆ. ಸಂಸ್ಕೃತ ಮತ್ತು ಅರಬೀ ಪದ್ಧತಿಗಳೂ ಒಂದನ್ನೊಂದು ಹೋಲುತ್ತವೆ. ಮರಾಠಿ ಪದ್ಧತಿಯು ತೀರ ಭಿನ್ನವಾಗಿರುತ್ತದೆ ಈ ಪದ್ಧತಿಯು ಕೆಲವು ಕನ್ನಡದಂತೆ ಕೆಲವು ಸಂಸ್ಕೃತದಂತೆ ವ್ಯವಹರಿಸುತ್ತದೆ. ಇದಕ್ಕೆ ಮಿಶ್ರಪದ್ಧತಿ ಎಂದರೂ ಸಲ್ಲುವದು.

ಈ ಬೇರೆ ಬೇರೆ—ಪದ್ಧತಿಗಳು ವ್ಯವಹಾರದಲ್ಲಿ ಹ್ಯಾಗೆ ಬಂದವೆಂಬದಕ್ಕೇನೂ ಹೇಳಲಿಕ್ಕಾಗದು ಮರಾಟರು ಮೊದಲು ಸಂಸ್ಕೃತ ಪದ್ಧತಿಯಿಂದ ಓದುತ್ತಿದ್ದರಂತೆ. ಅದು ತ್ರೇ ೩ ಸಪ್ತ ೭೦ ಬಾ ೬೦ ವನ್ನ ೩೦ ಚಾರ ೪.

ಸಂಖ್ಯಾವಾಚಕನದ ಪದ್ಧತಿಯಲ್ಲಿ ಇನ್ನೊಂದು ಸಂಗತಿಯನ್ನು ಕುರಿತು ವಿಚಾರ ಮಾಡತಕ್ಕದ್ದದೆ. ಅದು ಯಾವದೆಂದರೆ-ಕಾಲು, ಅರ್ಧ, ಮುಕ್ಕಾಲುಗಳೆಂದೊಡಗೂಡಿದ ಸಂಖ್ಯೆಗಳನ್ನು ಓದುವದು. ಈ ಶಬ್ದಗಳ ಅರ್ಥ.

ಕಾಲು = ¼; ಅರ್ಧ = ½; ಮುಕ್ಕಾಲು = ¾;

ಈ ಶಬ್ದಗಳು ಪರಿಮಾಣಗಳಿಗೆ ವಿಶೇಷಣಗಳಾದರೆ ಆ ಪರಿಮಾಣದ ಅಷ್ಟನೇ ಪಾಲೆಂದು ತಿಳಿಯಬೇಕು. ಹ್ಯಾಗಂದರೆ—ಕಾಲು ಶೇರೆಂದರೆ ಶೇರಿನ ೫ ನೇ ಪಾಲು ಇತ್ಯಾದಿ. ಒಮ್ಮೊಮ್ಮೆ ಇವು ಶತಕಗಳಿಗೆ ವಿಶೇಷಣಗಳಾಗುತ್ತವೆ. ಆಗ ಸಹ ಇದೇ ಅರ್ಥವನ್ನು ತಿಳಿದುಕೊಳ್ಳಬೇಕು. ಉದಾ—ಕಾಲುನೂರು = ೭೫, ಮುಕ್ಕಾಲು ಸಾವಿರ = ೭೫೦;

ಆದರೆ ಈ ಶಬ್ದಗಳು ಸಂಖ್ಯಾವಾಚಕಗಳ ಮುಂದೆ ಬಂದರೆ ಅಲ್ಲಿ ದ್ವಂದ್ವಸಮಾಸ ಮಾಡಬೇಕು. ಆಗ ಸಂಖ್ಯಾವಾಚಕದ ಅಂತ್ಯಸ್ವರ ದೀರ್ಘವಾಗುತ್ತದೆ. ಉದಾ–ಆರು + ಕಾಲು = ಆರೂಕಾಲು ಅಂದರೆ ಆರೂ ಮತ್ತು ಒಂದು ಕಾಲೂ (೬¼) ಕೂಡಿ ೬¼ ಇತ್ಯಾದಿ

ಇನ್ನು ನೂರುಕಾಲು ಕಾಲುನೂರು ಇವುಗಳ ಪರಸ್ಪರ ಭೇದವನ್ನು ತಿಳಿಯಬಹುದು.

ಸವ್ವಾ—ಈ ಶಬ್ದವು ಮರಾಠಿಯದಾದರೂ, ಕನ್ನಡದ ಸಂಖ್ಯಾವಾಚಕಗಳ ಹಿಂದೆ ಉಪಯೋಗಿಸುತ್ತಾರೆ. ಇದರ ಅರ್ಥ ಕಾಲು ಸಹ ಎಂದು ಇರುತ್ತದೆ. ಅಂದರೆ ಕಾಲುಶಬ್ದವು ಸಂಖ್ಯಾವಾಚಕಗಳ ಮುಂದೆ ಬಂದಾಗ್ಯೆ ಆ ಸಂಖ್ಯೆಯ ಜೊತೆ ಎಷ್ಟಾಗುವದೋ ಅಷ್ಟೇ ಎಂದು ತಿಳಿಯಬೇಕು. ಆದರೆ ಸವ್ವಾ ಈ ಶಬ್ದವನ್ನು ಸ್ವತಂತ್ರವಾಗಿ ಉಪಯೋಗಿಸಿದರೆ ಒಂದೂಕಾಲೆಂದು ಅರ್ಥವಾಗುತದೆ. ಕಾರಣ ಒಂದು ಈ ಸಂಖ್ಯೆಯ ವಾಕ್ಯನೆಕ್ಕೆ ಸವ್ವಾ ಶಬ್ದವನ್ನು ಕೂಡಿಸಬಾರದು.

WURTH PRIZE EXAMINATION
QUESTION PAPER II

೩ ನೆಯ ಕಾಗದ.

ವ್ಯಾಕರಣ.

(೧) ಕರ್ಮಧಾರಯ, ದ್ವಿಗು, ಅವ್ಯಯೀಭಾವ, ಕ್ರಿಯಾಸಮಾಸ ಇವುಗಳ ಲಕ್ಷಣಗಳನ್ನೂ ಒಂದೊಂದರ ಒಂದೊಂದು ಉದಾಹರಣೆಯನ್ನೂ ಬರೆಯಿರಿ.

(೨) ಪದಸಮುಚ್ಚಯ, ಪದಸಮುಚ್ಚಿಹಾರ, ಉಪವಾಕ್ಯ

ಸಮುಚ್ಚಯವೆಂದರೇನು? ಇವುಗಳ ಸಂಬಂಧವಾಗಿ ಗೊತ್ತಿದ್ದದ್ದನ್ನು ಉದಾಹರಣೆ ಸಹಿತವಾಗಿ ವಿವರಿಸಿರಿ.

(೩) ತೃತೀಯಾ, ಚತುರ್ಥಿ ವಿಭಕ್ತಿಗಳ ಕಾರಕಾರ್ಥಗಳನ್ನೆಲ್ಲಾ ಉದಾಹರಣೆ ಸಹಿತವಾಗಿ ಬರೆಯಿರಿ.

(೪) ತದ್ಧಿತಗಳಲ್ಲಿ ಭಾವಪ್ರತ್ಯಯ, ಅನ್ವರ್ಥಕಪ್ರತ್ಯಯ, ಆವೃತ್ತಿವಾಚಕಪ್ರತ್ಯಯಗಳಾವವು. ಒಂದೊಂದರ ಎರಡೆರಡು ಉದಾಹರಣೆಗಳನ್ನು ಬರೆಯಿರಿ.

(೫) ಹೋಗು ಧಾತುವಿನ ಭೂತಕಾಲವನ್ನು, ಮೂರು ಪುರುಷ ಎರಡು ವಚನಗಳಲ್ಲಿ ಹಳಿಗನ್ನಡದಿಂದ ನಡಿಸಿರಿ.

(೬) ವಿಕೃತವಿಧಿಕ್ರಿಯಾಪದಗಳು, ಅವ್ಯಯಕ್ರಿಯಾಪದಗಳು ಯಾವವು ಅವುಗಳನ್ನು ಉದಾಹರಣೆ ಸಹಿತವಾಗಿ ಬರೆಯಿರಿ.

ಕೆಳಗಿನ ಸೂತ್ರಗಳ ಅರ್ಥವನ್ನು ಸ್ಪಷ್ಟವಾಗಿ ಉದಾಹರಣೆ ಸಹಿತ ಬರೆಯಿರಿ.

ಪರಿಭಾವಿಸೆ ಕಾಲತ್ರಯದೊ।
ಪರಿಣಾಮಿಗಳೆನಿಸಿ ನೆಗಳ್ದ ಮೂರುಂ ಕ್ರಿಯೆಯೊಳ್॥
ನಿರುತಂ ಪ್ರತಿಷೇಧಕ್ರಿಯೆ।
ಬರೆ ಭೂತಾರ್ಥದೊಳೆ ಸಲ್ವುದೆಂಬರ್ ಪಿರಿಯರ್॥
ಸವನಾಗಿ ಭೂತದೊಳ್‌ಲಿಂ।
ಗವಚನದೊಳ್ ತಳ್ತು ವರ್ತಮಾನ ಭವಿಷ್ಯ॥
ದ್ವ್ಯಾವಹೃತಿಗಳಗುಂಕುಂ ಸ।
ಲ್ವುವು ತಾವನ್ಯೈಕವಚನದೊಳ್ ನೆಲಸಿದುರ್ಂ॥

(೮) ವಿಬುಧಪ್ರಿಯಾ ಮಾಲಿನಿ, ಶಿಖರಿಣಿ, ಮಂದಾನಿಲ, ವಾರ್ಧಿಕಪಟ್ಪದಿ, ಉತ್ಪಲಮಾಲಾ, ಮತ್ತೇಭವಿಕ್ರೀಡಿತ ಇವುಗಳ ಲಕ್ಷಣ ಸಹಿತ ಒಂದೊಂದು ಉದಾಹರಣೆಯನ್ನು ಬರೆಯಿರಿ.

(೯) ಕ್ಲಿಷ್ಟತ್ವ, ಪುನರುಕ್ತತ್ವ, ಸಂಧಿಗ್ಧಾರ್ಥತ್ವ, ಅವಿಶೇಷ ವಿಶೇಷತ್ವ, ಸಾಕಾಂಕ್ಷತ್ವ, ಅಶ್ಲೀಲತ್ವ, ಸಹಚರಭಿನ್ನತ್ವ ಅಂದರೇನು? ಪ್ರಸಿದ್ಧ ಕವಿಗಳ ಉದಾಹರಣೆ ಸಹಿತ ಬರೆಯಿರಿ.

ಶಾಲಾ ಪತ್ರಿಕೆ

ಪದ್ಯ.

ಪ್ರಥಮವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಕೋತ್ಕರ್ಷಮುಂ।
ಜಯಸಾತ್ಮಂ ಪ್ರತಿಪಾದನಾಖಮಿಗೊಲವಿಂವೀಪತ್ರಮುಂ ಮುದ್ರಿಸಿ॥
ಪಯದಿಂವಿತ್ತಪೆವೋದುಜಗೆಸುಗುಣಂ ತೋರಲ್ಕೆ ಕೈಕೊಂಮುದೈ।
ರಯದಿಂದೋಷವಶಿದ್ದೆಜೇಷ್ಯಡುಬುನರ್ಜ್ಞಾನಾಭಿವೃದ್ಧಿಪ್ರಿಯರ್॥೧

ಪುಸ್ತಕ ೩೭] ಏಪ್ರಿಲ ೧೯೦೧. [ಸಂಚಿಕೆ ೪.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬೈ ಇಲಾಖೆಯ ಮೊದಲ ವರ್ಷದ (೧೯೯೯-೧೯೦೦) ವಿದ್ಯಾಖಾತೆಯ ರಿಪೋರ್ಟು ಹೊರಬಿದ್ದಿದೆ. ಅದರಿಂದ ತಿಳಿಯುವ ಮುಖ್ಯ ಮುಖ್ಯ ಸಂಗತಿಗಳು ಯಾವವೆಂದರೆ:—

ನಮ್ಮ ಇಲಾಖೆಯೊಳಗಿನ ಸರಕಾರದ ಮೇಲ್ವಿಚಾರಣೆಗೆ ಒಳಪಟ್ಟ ಶಾಲೆಗಳಲ್ಲಿ ಅಭ್ಯಾಸ ಮಾಡುವ ಗಂಡು ಹುಡುಗರ ಸಂಖ್ಯೆಯು ಹೋದ ವರುಷ ೬,೮೮,೮೭೪ ಇತ್ತು, ಈ ವರ್ಷ ೪,೮೨,೮೦೪ ಆಗಿರುತ್ತದೆ; ಹೆಣ್ಣು ಮಕ್ಕಳ ಸಂಖ್ಯೆಯು ಹಿಂದಿನ ವರುಷ ೭೦,೦೪೬ ಇತ್ತು, ಈ ವರುಷ ೭೭,೮೯೪ ಆಗಿರುತ್ತದೆ. ಈ ಇಲಾಖೆಯಲ್ಲಿ ಯಾವತ್ತೂ ಪ್ರಕಾರದ ಸರಕಾರೀ ಖಾಸಗೀ ಶಾಲೆಗಳು ಕೂಡಿ ಹಿಂದಿನ ವರುಷ ೧೮,೬೪೯ ಇದ್ದವು; ಈ ವರ್ಷ ೧೮,೪೮೬ ಆಗಿರುತ್ತವೆ. ಸರಕಾರೀ ಶಾಲೆಗಳು ಹಿಂದಿನ ವರ್ಷ ೯,೬೬೮ ಖಾಸಗೀ ಶಾಲೆಗಳು ೮,೮೩೧ ಇದ್ದವು; ಈ ವರ್ಷ ಸರಕಾರೀ ಶಾಲೆಗಳು ೯,೬೬೩ ಖಾಸಗೀ ಶಾಲೆಗಳು ೮,೬೬೩ ಆಗಿರುತ್ತವೆ. ಹಿಂದಿನ ವರ್ಷ ಕನಿಷ್ಠಪ್ರತಿಯು ದೇಶಭಾಷೆಯ ಸರಕಾರೀ ಶಾಲೆಗಳು ೯,೮೩೩ ವಿದ್ಯಾರ್ಥಿಗಳು ೩,೦೮,೭೪೩ ಇದ್ದರು; ಈ ವರ್ಷ ಅನುಕ್ರಮವಾಗಿ ೯,೧೧೮ ಮತ್ತು ೩,೦೮,೫೦೪ ಇದ್ದಾರೆ.

ಈ ಇಲಾಖೆಯ ದಕ್ಷಿಣ ಭಾಗದಲ್ಲಿ ಜನಸಂಖ್ಯೆಯು ೬೯,೦೦,೪೧೩ ಇರುತ್ತದೆ. ಮತ್ತು ಯಾವತ್ತೂ ಪ್ರಕಾರದ ಶಾಲೆಗಳು ೦,೪೭೧ ವಿದ್ಯಾರ್ಥಿಗಳು ೧,೦೬,೧೬೪ ಇರುವರು. ಕನಿಷ್ಠ ಪ್ರತಿಯು ಗಂಡು ಹುಡುಗರ ಶಾಲೆಗಳು ೦,೦೬೪ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಕೂಡಿ ೧,೧೧,೪೭೩ ಇದ್ದಾರೆ. ಹೆಣ್ಣು ಮಕ್ಕಳ ಶಾಲೆಗಳು ೧೪೪ ವಿದ್ಯಾರ್ಥಿನಿಯರು ೩,೦೪೩ ಇರುವರು ಗಂಡು ಹುಡುಗರ ಶಾಲೆಗೆ ಹೋಗುವ ಹೆಣ್ಣು ಹುಡುಗರ ಸಂಖ್ಯೆಯು ೬,೪೪೪ ಇರುವದು.

ಈ ವರ್ಷ ನಮ್ಮ ದಕ್ಷಿಣ ಭಾಗದಲ್ಲಿ ಬರ ಬೇನೆಗಳು ಯಥಾಪ್ರಕಾರವಿದ್ದರೂ ಸಂಸ್ಥಾನಗಳಲ್ಲಿಯು ಶಾಲೆಗಳ ಹೊಸಾರ್ಗಿ ಉಳಿದ ಎಲ್ಲ ತರದ ಶಾಲೆಗಳಲ್ಲಿಯು ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿರುವದು. ಕಳೆದ ವರ್ಷಕ್ಕಿಂತ ಈ ವರ್ಷ ಎಲ್ಲ ಕೂಡಿ ೬೧ ಶಾಲೆಗಳು ಕಡಿಮೆ ಇದ್ದರೂ ವಿದ್ಯಾರ್ಥಿಗಳ ಸಂಖ್ಯೆಯು ೪,೯೪೪ಕ್ಕೆ ಹೆಚ್ಚಾಗಿರುವದು. ಆದರೂ ಸರ್ ೧೪೯೪-೯೬ ಇಸವಿಯಲ್ಲಿ ಇದ್ದ ವಿದ್ಯಾರ್ಥಿಗಳಿಗಿಂತ ಈ ವರ್ಷ ೩೧,೦೦೦ ವಿದ್ಯಾರ್ಥಿಗಳು ಕಡಿಮೆ ಇರುವರು.

ಸಿಂಧ ಪ್ರಾಂತದಲ್ಲಿ ಮಾತ್ರ ಈ ವರ್ಷ ೯೯ ಶಾಲೆಗಳೂ ೩,೦೪೪ ವಿದ್ಯಾರ್ಥಿಗಳೂ ಹೆಚ್ಚಾಗಿದ್ದು, ೧೪೯೪-೯೬ ಇಸವಿಯ ಸಂಖ್ಯೆಯಷ್ಟು ಆಗುತ್ತ ಬಂದಿರುವದು.

ಮುಂಬೈ ಇಲಾಖೆಯೊಳಗಿನ ವಿದ್ಯಾಖಾತೆಯ ಒಟ್ಟು ಖರ್ಚು ೩೩,೪೩,೧೩೦ ರೂಪಾಯಿ ಆಗಿರುತ್ತದೆ. ಈ ರಕಮಿನೊಳಗಿಂದ ಫೀ ಹಣ * ೧೪,೦೦,೯೬೬ ರೂಪಾಯಿ

---

* ಸರಕಾರದ ಖರ್ಚಿನಿಂದಲೇ ನಡೆಯುವ ಶಾಲೆಗಳ ಬಗ್ಗೆ ೮,೯೩೮ ರೂಪಾಯಿ, ಲೋಕಲ್‌ಬೋರ್ಡ ಶಾಲೆಗಳ ಬಗ್ಗೆ ೧೩,೩೩,೩೩೨ ರೂಪಾಯಿ, ಮ್ಯುನಿಸಿಪಲ್ ಶಾಲೆಗಳ ಬಗ್ಗೆ ೭,೬೯,೩೩೦ ರೂಪಾಯಿ, ಸಂಸ್ಥಾನದೊಳಗಿನ ಶಾಲೆಗಳ ಬಗ್ಗೆ ೧೩,೭೧,೬೧೧ ರೂಪಾಯಿ, ಗ್ರಾಂಟ ಇನ್ ಏಡ್ ಶಾಲೆಗಳ ಬಗ್ಗೆ ೧೯,೦೮,೩೦೩ ರೂಪಾಯಿ, ಅನ್ ಏಡೆಡ್ ಶಾಲೆಗಳ ಬಗ್ಗೆ

ಮತ್ತು ವರ್ಗಣಿ ಮುಂತಾದ ಬಾಬುಗಳಿಂದಾದ ಉತ್ಪನ್ನ ೦೪,೦೯,೭೪೪ ರೂಪಾಯಿ ವಜಾ ಹೋಗಲಾಗಿ ಉಳಿದ ಖರ್ಚಿನಲ್ಲಿ ಸರಕಾರಕ್ಕೆ ೭೧,೪೧,೪೦೬ ರೂಪಾಯಿ, ಲೋಕಲ್‌ಫಂಡಿಗೆ ೯,೬೦,೧೪೪ ರೂಪಾಯಿ, ಮ್ಯುನಸಿಪಾಲಿಟಿಗಳಿಗೆ ೪,೪೧,೯೦೪ ರೂಪಾಯಿ ಬಿತ್ತು. ಕನಿಷ್ಠಪ್ರತಿಯ ಶಿಕ್ಷಣಕ್ಕಾಗಿ ಒಟ್ಟು ೪೪,೫೬,೪೯೪ ರೂಪಾಯಿ ಖರ್ಚು ಆಯಿತು. ಇದರೊಳಗೆ ಫೀ ಉತ್ಪನ್ನ ೪,೬೪,೪೪೪ ರೂಪಾಯಿ ಮತ್ತು ಇತರ ಬಾಬುಗಳಿಂದ ಆದ ಉತ್ಪನ್ನ ೧೦,೯೪,೯೬೬ ರೂಪಾಯಿ ವಜಾ ಹೋಗಲಾಗಿ ಉಳಿದದ್ದರಲ್ಲಿ ಸರಕಾರಕ್ಕೆ ೪,೦೬,೧೬೦ ರೂಪಾಯಿ ಲೋಕಲಫಂಡಿಗೆ ೪,೧೯,೧೬೪ ರೂಪಾಯಿ ಮತ್ತು ಮ್ಯುನಿಸಿಪಾಲಟಿಗಳಿಗೆ ೪,೪೯,೬೪೪ ರೂಪಾಯಿ ಖರ್ಚು ಬಿತ್ತು.

ಕಳೆದ ವರ್ಷ ಮುಂಬೈ ಇಲಾಖೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯು ೪೫,೪೪೪,೪೦೦ ಇತ್ತು; ಈ ವರ್ಷ ೪೫,೬೧,೬೦೪ ಆಗಿರುತ್ತದೆ. ಇದರಲ್ಲಿ ಯುರೋಪಿಯನ್ ಮತ್ತು ಯುರೋಜಿಯನ್ ಜಾತಿಯ ವಿದ್ಯಾರ್ಥಿಗಳು ೬೧೪೪ ಪೋರ್ತುಗೀಜ ಮತ್ತು ನೇಟೀವ್ಹ ಕ್ರಿಸ್ತಿಯನ್ನರು ೧೧,೪೯೦ ಯಹುದಿಯರು ೧,೪೦೪ ಪಾರಸಿ ಜನರು ೧೪೬,೯೪೬ ಮುಸಲ್ಮಾನರು ೯೪೬,೪೪೬ ಹಿಂದು ಜನರು ೪,೦೬,೦೩೪ ಗುಡ್ಡಗಾಡ ಜಾತಿಯ ಜನರು ೬,೬೯೪ ಮತ್ತು ಇತರ ಜಾತಿಯ ವಿದ್ಯಾರ್ಥಿಗಳು ೧೦೧ ಇರುವರು.

ಮೇಲೆ ಕೊಟ್ಟ ಅಂಕಿಗಳನ್ನು ನೋಡಲಾಗಿ ಪೋರ್ತುಗೀಜ ಮತ್ತು ನೇಟೀವ್ಹ ಕ್ರಿಶ್ಚಿಯನ್ನ ಪಾರಸೀ ಯಹುದಿ ಹಾಗೂ ಹಿಂದೂ ಜನರ ಸಂಖ್ಯೆಯು ಕಳೆದ ವರ್ಷಕ್ಕಿಂತ ಹೆಚ್ಚಾದದ್ದೂ ಉಳಿದ ಜಾತಿಯವರ ಸಂಖ್ಯೆಯು ಕಡಿಮೆಯಾದದ್ದೂ ಕಂಡು ಬರುವದು. ಮುಸಲ್ಮಾನ ಹಾಗೂ ಗುಡ್ಡಗಾಡ ಜನರ ಸಂಖ್ಯೆಯು ಬಹಳ ಕಡಿಮೆಯಾಗಿದೆ.

೫,೯೯೪೫೫ ರೂಪಾಯಿ, ಮತ್ತು ಇತರ ೬,೧೭,೧೪೬ ರೂಪಾಯಿ, ಅಂತೂ ೭೫,೬೬,೧೫೨ ರೂಪಾಯಿ.

ಮುಂಬೈ ಇಲಾಖೆಯಲ್ಲಿ ೪ ಭಾಗಗಳಿರುತ್ತವೆ; ಆಯಾ ಭಾಗಗಳಿಗೆ ಸೇರಿದಂಥ ಸಾಲೆಗಳ ಹಾಗು ವಿದ್ಯಾರ್ಥಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿರುತ್ತೇವೆ. ಅದರಿಂದ ಆಯಾ ಭಾಗದೊಳಗೆ ವಿದ್ಯಾಪ್ರಸಾರವು ಹ್ಯಾಗಾಗುತ್ತದೆಂಬದು ಸ್ಪಷ್ಟವಾಗಿ ತಿಳಿಯುವದು.

ಭಾಗ.		ಕ್ಷೇತ್ರಫಲ ಚದರ ಮೈಲು.	†ಜನಸಂಖ್ಯೆ.	ಸರಕಾರೀ ಮತ್ತು ಪಿಸೇಡ್ ಶಾಲೆಗಳು.	ವಿದ್ಯಾರ್ಥಿಗಳು.	ಅನಾರೋಗ್ಯ ಶುಶ್ರೂಷಾ ಶಾಲೆಗಳು.	ವಿದ್ಯಾರ್ಥಿಗಳು.	ಶಾಲೆಗೆ ಹೋಗಲಿಚ್ಛಿಸುತ್ತಿರುವ ಹುಡುಗರ ಸಂಖ್ಯೆ + ಹುಡುಗಿಯರ ಸಂಖ್ಯೆ	ಶೇ. ಹೋಗುತ್ತಿರುವ ಹುಡುಗರು ಹುಡುಗಿಯರು
ಮಧ್ಯಭಾಗ.	ಮುಂಬಯಿ.	೨೨	೮೫೧೭೬೪	೨೮೨	೨೮೮೮೭	೧೯೯	೮೪೨೪	೧೨೩೨೬೪	೩೦ ೧
	ಇತರಜಿಲ್ಲೆಗಳು (೬)	೩೮೪೯೦	೬೨೩೭೬೬೬	೨೦೫೨	೧೧೬೪೯೯೯	೨೫೧	೪೪೨೮	೯೩೫೪೪೯	೧೨. ೪
	ಸಂಸ್ಥಾನಗಳು (೫)	೨೮೫೩	೪೦೮೨೯೦	೧೩೨	೫೭೦೦	೧೩	೩೦೬	೬೧೨೪೪	೯. ೫
ಉತ್ತರಭಾಗ.	ಜಿಲ್ಲೆಗಳು (೬)	೧೩೮೦೮	೭೯೪೪೦೫೯	೧೫೫೯	೧೫೬೯೭೯	೭೬೧	೧೨೦೨೬	೪೯೧೬೬೦೮	೨೧. ೯
	ಸಂಸ್ಥಾನಗಳು (೮)	೫೦೪೯೦	೨೮೪೪೨೭೬	೬೦೯	೨೮೪೪೫	೧೯೬	೨೬೧೬	೪೪೨೬೯೬	೮. ೩
	ಕಾಠೇವಾಡ	೨೦೫೫೯	೨೬೫೮೨೪೦೪	೯೪೭	೭೨೮೮೯	೨೩೮	೧೩೨೭೬	೪೧೨೪೬೦	೨೦. ೬
ಪಶ್ಚಿಮ ಭಾಗ.	ಜಿಲ್ಲೆಗಳು (೬)	೨೫೦೬೧	೪೯೯೬೬೭೬	೧೨೨೯	೯೧೯೭೫೫	೪೯೦	೯೪೪೭	೭೪೯೯೪೩	೧೩. ೫
	ಸಂಸ್ಥಾನಗಳು (೬)	೮೦೩೪	೧೯೨೫೮೯೧	೭೦೨	೭೪೧೯೦	೨೨೧	೪೪೦೫	೨೨೮೪೪೩	೧೩. ೪
ಸಂಯುಕ್ತಾಂಶ.	ಜಿಲ್ಲೆಗಳು (೫)	೪೬೭೫೮	೨೮೭೩೭೫೭	೧೨೨೨	೭೦೪೫೦	೬೫೨	೯೫೫೮	೪೩೦೭೬೬	೧೬. ೩
	ಸಂಸ್ಥಾನಗಳು	೬೧೦೯	೧೩೧೯೯೩	೧೨೨	೪೨೭೬	೦	೦	೧೯೭೯೦	೨೧. ೪
	ವಿಡನ.	೬೫	೩೫೦೦೫೫	೪೬	೨೦೫೩	೦	೦	೫೨೫೮	೩೯
ಒಟ್ಟು:		೧೯೩೧೪೯	೨೫೯೬೬೩೪೨	೯೬೬೩	೫೬೧೨೦೨	೨೩೬೬	೬೯೪೩	೪೦೪೪೯೬೦	೧೫. ೬

* ಡೀಸಾ. ಎಮಿಯಾ, ಬಡೋದಾದಂತಾ ಕ್ಯಾಂಪ ಸಮೇತ. † ಜನಸಂಖ್ಯೆಯು ಶೇಕಡಾ ೧೫ ಜನ ಶಾಲೆಗೆ ಹೋಗುವ ವಯಸ್ಸಿನ ಹುಡುಗರಿರುತ್ತಾರೆಂದು ಬಲ್ಲವರ ಅಭಿಪ್ರಾಯ ಉಂಟು.

ಮುಂದೆ ತಾಲೂಕಿನಲ್ಲಿ ಆಯಾ ಭಾಗದಲ್ಲಿ ಪ್ರಾಥಮಿಕ ಶಾಲೆಗಳ ಸ್ಥಿತಿಯು ಹ್ಯಾಗಿರುತ್ತದೆಂಬದನ್ನು ತಿಳಿಸುವ ಬಗ್ಗೆ ಕೆಳಗಿನ ಪಟ್ಟಿಯನ್ನು ಕೊಟ್ಟಿರುತ್ತೇವೆ.

ಭಾಗ	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳಸಂಖ್ಯೆ	೫ನೇ ೬ನೇ ಇಯತ್ತೆ ಕಲಿಯುವವರು.			೭ನೇ ೪ನೇ ಇಯತ್ತೆ ಕಲಿಯುವವರು.			೨ನೇ ಇಯತ್ತೆಯ ವರೆಗೆ ಕಲಿಯುವವರು.			ಒಂತೂ		
			ಗಂಡು	ಹೆಣ್ಣು	ಒಂತೂ.	ಗಂಡು	ಹೆಣ್ಣು	ಒಂತೂ.	ಗಂಡು	ಹೆಣ್ಣು.	ಒಂತೂ.	ಗಂಡು	ಹೆಣ್ಣು.	ಒಂತೂ.
ಮ. ಭಾಗ	೨೨೫೭	೧೨೪೮೧	೬೪೪೪	೨೭೬೭	೯೮೬೧೧	೪೪೨೦೦	೧೬೪೪೪	೪೪೪೪೪	೪೪೦೪೨	೨೮೦೪	೪೪೪೨೪	೧೪೪೦೬	೧೪೨೧೬	೧೪೪೪೨
ಉ. ಭಾಗ	೨೦೭೦	೧೪೪೪೪	೪೭೪೧೬	೪೪೪೧೪	೪೧೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪
ಕಾಲೆವಾಡ	೯೨೭	೬೪೪೭೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪
ದ. ಭಾಗ	೨೪೧೯	೧೧೪೯೪೪	೪೯೦೬೦	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪
ಸಿಂಧ.	೧೪೦೪	೬೦೪೪೧	೪೪೦೪೬	೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪	೪೪೪೪೪
ಪಡನ.	೪೦	೧೪೦೪	೪೦	೦	೪೦	೧೪೨೬	೧೦೬	೧೪೪೬	೧೪೦	೪೨	೨೨೪	೧೬೪೬	೧೪೪	೧೪೦

ಕಳೆದ ತಿಂಗಳ ೧ನೇ ತಾರೀಖಿಗೆ ದಶವಾರ್ಷಿಕ ಪ್ರಜಾಗ
ಣತಿಯ ಕೆಲಸವು ನೆರವೇರಿತು ಸರ್ ೧೪೪೧ರಿಂದ ೧೪೯೯
ರವರೆಗೆ ಸಂದಕಾಲದಲ್ಲಿ ಪ್ರಜಾವೃದ್ಧಿಯು ನೇಮಕ್ಕೆ ಸರಿಯಾ
ಗಿ ಅಂದರೆ ನೂರಕ್ಕೆ ೩ರಂತೆ ಆಯಿತು ಆದರೆ ಈ ವರ್ಷದ
ಗಣತಿಯಲ್ಲಿ ಮಾತ್ರ ಆ ಸಮಪಾಲು ಕೊನೆಗಂಡಂತೆ ತೋರ
ಲಿಲ್ಲ. ಈ ಹಾನಿಗೆ ಈ ಇಲಾಖೆಯಲ್ಲಿ ಕಳೆದ ೪೫ ವರ್ಷ
ಗಳಿಂದ ಕೆಡು ಮಾಡುತ್ತಿರುವ ಪ್ಲೇಗರಾಜನ ಹಾವಳಿಯೇ
ಕಾರಣವೆಂದೆನ್ನಬಹುದು. ನಮ್ಮ ಇಲಾಖೆಯ ಪ್ರತಿಯೊಂ
ದು ಜಿಲ್ಲೆಯ ಗಣತಿಯ ಅಂಕೆಗಳು ಪ್ರಸಿದ್ಧವಾಗಿರುತ್ತವೆ.
ಅವುಗಳನ್ನು ಹಿಂದಿನ (೧೯೧೧ನೇ ಇಸವಿಯ) ಖಾನೆಸು
ಮಾರಿಯ ಅಂಕೆಗಳೊಂದಿಗೆ ಕೆಳಗೆ ಕೊಟ್ಟಿರುತ್ತೇವೆ:—

ಜಿಲ್ಲೆ.	೧೯೨೧ ರಲ್ಲಿಯ ಜನಸಂಖ್ಯೆ.	೧೯೩೧ರಲ್ಲಿಯ ಜನಸಂಖ್ಯೆ.	ನೂರಕ್ಕೆ ಆದ ಹೆಚ್ಚು ಇಲ್ಲವೆ ಕಡಿಮೆ ಪ್ರ.
ಅಹಮದಾಬಾದ	೯೨೧೩೨೦	೭೯೫೦೪	– ೧೫.೭೩
ಖೇಡಾ	೮೭೧೫೯೯	೭೧೫೭೭೫	– ೧೭.೮೮
ಭಡೋಚ	೫೪೧೪೯೦	೪೯೧೪೪೮	– ೯೪.೦೫
ಪಂಚಮಮಹಾಲ	೫೧೫೪೧೭	೪೬೧೮೭೦	– ೧೬.೪೪
ಸೂರತ	೬೪೯೯೮೪	೬೭೬೬೦೪	– ೨.೦೫
ಠಾಣಾ	೯೦೪೪೬೮	೮೦೯೭೬೧	– ೧೦.೫೫
ಕೊಲಾಬಾ	೫೦೯೫೪೪	೬೦೫೧೬೫	+ ೧೪.೭೫
ಖಾನದೇಶ	೧೪೬೦೪೫೧	೧೪೪೨೫೧೪	– ೧.೨೪
ರತ್ನಾಗಿರಿ	೧೧೦೫೯೭೬	೧೧೬೬೪೯೦	+ ೫.೫೧
ಅಹಮ್ಮದನಗರ	೪೪೪೬೫೫	೪೩೭೭೭೪	– ೫.೭೩
ಸೊಲ್ಲಾಪುರ	೭೫೦೬೪೯	೭೨೦೯೭೪	– ೩.೯೫
ಸಾತಾರಾ	೧೨೭೫೯೪	೧೧೪೬೫೨೧	– ೬.೪೪
ನಾಶಿಕ	೪೪೬೦೪೨	೪೧೯೫೭೫	– ೨.೪೪
ಪುಣೆ	೧೦೬೭೪೦೦	೯೯೫೦೭೪	– ೬.೪೧
ಬೆಳಗಾವ	೧೦೧೬೭೬೧	೯೯೪೨೦೯	– ೧.೪೪

ಧಾರವಾಡ	೧೦೫೧೩೫೪	೧೧೧೩೪೪೨೬	+ ೫೯ · ೯೭
ವಿಜಾಪುರ	೭೯೬೩೭೯	೭೩೫೦೪೧	− ೭ · ೬೯
ಕಾರವಾರ	೪೪೬೩೫೧	೪೫೪೨೩೭೮	− ೧ ೭೮
ಒಟ್ಟು ...	೧೫೧೧೬೩೫೦೬	೧೪೫೫೪೦೯೯೯	− ೪ ೧೧
ಕರಾಚಿ	೫೬೪೮೮೦	೬೦೭೪೩೯	+ ೭ ೫೩
ಹೈದರಾಬಾದ	೯೧೮೬೪೬	೯೯೦೫೦೨	+ ೮ ೮೨
ತೀರ್ಥಹಳ್ಳಿ	೯೧೫೫೪೭	೧೦೧೮೨೩೭	+ ೧೧ . ೨೨
ಧರಪಾರಕರ	೨೯೮೨೨೦೩	೩೬೪೧೧೬೮	+ ೨೨ ೧೫
ಅಪ್ಪರಸಿಂಧ ಫ್ರಾಂತೀಯವ	೧೭೪೫೫೪೮	೨೩೨೪೪೬೨	+ ೨೭ · ೪೫
ಸಿಂಧಪ್ರಾಂತಕ್ಕೆ ಒಟ್ಟು ...	೨೮೮೭೧೭೭೪	೩೨೧೬೪೦೦	+ ೧೦ ೬೧
ಏಡನ	೪೪೦೭೯	೪೧೨೨೨	− ೬ · ೪೮
ಬಾಂಬಯಿ	೮೨೧೭೭೬	೭೭೦೮೪೩	− ೫ · ೧೯
ಒಟ್ಟು ...	೧೮೪೯೦೧೧೨೩	೧೮೪೫೬೪೮೮೨	− ೧ · ೭೭

ಸಂಸ್ಥಾನಗಳು.

ಕಚ್ಛ	೫೫೮೪೪೧೫	೪೮೭೭೭೪	− ೧೨ · ೭೨
ಪಾಲನಪುರ	೬೪೫೫೨೨೬	೪೬೭೬೯೧	− ೨೭ · ೬೨
ಮಹಿಕಾಂತಾ	೫೮೧೫೫೬೮	೫೬೧೫೦೦೮	− ೫೭ · ೮೪
ಸೇವಾಕಾಂತಾ	೭೫೫೫೦೬	೪೭೮೪೯೯೯	− ೫೪ ೭೧
ಕಾಠೆವಾಡ	೨೭೫೨೪೪೦	೨೫೨೭೪೪೫೬	− ೧೫ · ೪೫
ಖಂಬಾಯತ	೪೯೭೨೨೨	೭೫೧೨೨೨	− ೧೬ · ೨೭
ಸೂರತ ಎಜನ್ಸಿ	೧೮೮೨೦೮೮	೧೬೧೧೦೧೦	− ೧೫ · ೧೪
ಜವಾರ	೫೨೮೮೬೧	೪೭೨೬೬೪	− ೧೦ ೬೫
ಜಂಜೀರಾ	೮೧೭೭೦	೮೫೫೭೨೨	+ ೪ · ೪೧
ಸಾವಂತವಾಡಿ	೧೯೨೯೪೪೮	೨೯೭೪೦೦	+ ೧೨ · ೮೮
ಡಾಂಗನಾಡ್ಡು	೭೨೯೨೦	೧೮೬೭೪	− ೪೫ · ೭೯
ಸೂರಗಾಣಾ	೧೭೭೯೮೮	೧೧೫೫೭೪	− ೬ · ೯೬

ಭೋರ	೧೫೫೬೯	೧೩೭೫೯	– ೧೧.೮೧
ಅಕ್ಕಲಕೋಟ	೭೫೭೭೪	೮೫೦೫೫	+ ೮.೨೮
ಸಾತಾರಾ ಎಜನ್ಸಿ	೧೩೧೫೫೨	೧೦೯೬೮.೪	– ೧೬.೬೬
ಕೊಲ್ಹಾಪುರ	೯೧೩೧೫೧	೯೧೦೦೭೫೫	– .೭೨
ದಕ್ಷಿಣ ಮಹಾರಾಷ್ಟ್ರ ಜಹಾಗೀರಗಳು	೬೧೯೦೫೬	೬೯೪೮೮೬	– .೭೩
ಸವಣೂರ	೧೭೯೭೬	೧೮೪೪೪	+ ೮.೬೫
ಖೈರಪುರ	೧೩೧೯೩೭	೧೯೯೫೬೫	+ ೫೧.೨೫
ಸಂಸ್ಥಾನಗಳ ಒಟ್ಟು ...	೮೦೫೯೨೭೮	೭೮೪೧೬೯೧	– ೧೪.೪೮
ಮುಂಬಯಿ ಏಡನ ಸಹಿತ ಬ್ರಿಟಿಶ ಇಲಾಖೆಯ ಒಟ್ಟು	೧೪೯೦೮೧೫೭	೧೪೪೫೬೫೪೮	– ೧.೭೭
ಸಂಸ್ಥಾನಗಳ ಒಟ್ಟು ...	೮೦೫೯೨೭೮	೭೮೪೧೬೯೧	– ೧೪.೪೮
ಮುಂಬಯಿ ಇಲಾಖೆಯ ಒಟ್ಟು	೨೬೯೦೭೦೪೨೧	೨೫೪೪೫೭೩೫೫	– ೫.೫೭

ಇದೇ ಪ್ರಕಾರ ಇಡೀ ಹಿಂದುಸ್ಥಾನದ ಪ್ರಜಾಗಣತಿಯ ಸಂಖ್ಯೆಯಾದರೂ ಹೊರಬಿದ್ದಿದೆ. ಸನ್ ೧೯೧೧ನೇ ಇಸವಿಯಲ್ಲಿ ಈ ಸಂಖ್ಯೆಯು ೨೪೫,೭೩,೧೩,೦೪೪ ಇತ್ತು. ಈ ವರ್ಷ (೧೯೨೧) ಈ ಸಂಖ್ಯೆಯು ೨೪೯,೪೦,೬೬,೭೦೧ ಆಗಿದುವದು. ೧೯೧೧ನೇ ವರ್ಷ ಹಿಂದಿನ ಖಾನೇಸುಮಾರಿಗಿಂತ ಒಟ್ಟಿನ ಮೇಲೆ ನೂರಕ್ಕೆ ೧೧ ೨ ಜನಸಂಖ್ಯೆ ಬೆಳದಿತ್ತು. ಈ ವರ್ಷ ಒಟ್ಟು ಪ್ರಜಾಗಣತಿಯ ಸಂಖ್ಯೆಯ ಮೇಲೆ ನೂರಕ್ಕೆ ೨.೪೦ ರಂತೆ ಮಾತ್ರ ಸಂಖ್ಯಾಭಿವೃದ್ಧಿಯಾಗಿದಂತೆ ಕಂಡು ಬರುತ್ತದೆ

ಶ್ರೀಮದ್ವಿಕ್ಟೋರಿಯಾ ಚಕ್ರವರ್ತಿನಿಯವರು.

(೬೦ನೇ ಪುಟದಿಂದ ಮುಂದೆ ಸಾಗಿದ್ದು.)

ಈ ಮೇರೆಗೆ ನಾಡಾಡಿತನವನ್ನು ಸಾಗಿಸುತ್ತಿರುವಾಗ ಇವರ ಸೋದರಮಾವಂಬಿರಾದ ಲಿಯೊಪೋಲ್ಡ್ ಎಂಬವರು ರಾಣಿಯವರ ಸೋದರತ್ತೆಯು ಮಗನಾದ ಸಾಕ್ಸ್‌ಕೋಬರ್ಗ ಆಲ್ಬರ್ಟ್‌ನೆಂಬ ರಾಜಕುಮಾರನೊಡನೆ ಇವರ ಮದುವೆಯು ಜರಗಬೇಕೆಂದು ಬೋಧಿಸಿದರು. ಈ ರಾಜಪುತ್ರರು ರಾಣಿಯವರಿಗಿಂತ ಮೂರು ತಿಂಗಳಿಗೆ ಚಿಕ್ಕವರು ಸನ್ ೧೮೧೯ರಲ್ಲಿ ಇವರು ಇಂಗ್ಲಂದದಲ್ಲಿಯೇ ಇದ್ದರು. ಆವರೆಲಿಗ ಈ ಭಾವೀದಂಪತಿಗಳಲ್ಲಿ ಬರೇ ಗುರ್ತುಪರಿಚಯದ ಹೊರ್ತು ಹೆಚ್ಚಿಗೇನೂ ನಡಿಯಲಿಲ್ಲ. ರಾಣಿಯವರು ಗದ್ದಿಗೆಯನ್ನೇರಿದ ಬಳಿಕ ಅಂದರೆ ಸನ್ ೧೮೪೦ರಲ್ಲಿ ಈ ಅರಸು ಮಗನು ಇಂಗ್ಲಂಡಕ್ಕೆ ಬರಲಾಗಿ ಇವರೀರ್ವರಲ್ಲಿ ಪ್ರೇಮವು ಬೆಳೆಯುಹತ್ತಿತು. ಕಡೆಯಲ್ಲಿ ರಾಣಿಯವರೇ ವಿವಾಹದ ಮಾತು ತೆಗೆದರು. ಈ ಶರೀರಸಂಬಂಧದ ವಿಷಯವಾಗಿ ಪಾರ್ಲಿಮೆಂತಿನಲ್ಲಿ ಹಲಕೆಲವು ಸಾಧಕ ಬಾಧಕ ಮತಗಳು ಪ್ರಕಟವಾದರೂ ಈ ಸಂಬಂಧವು ಬಹುತರವಾಗಿ ಯಾವತ್ತೂ ಇಂಗ್ಲಂಡದ ಜನರ ಮನಸ್ಸಿಗೆ ಬಂತು. ಇಲ್ಲಿ ಇನ್ನೊಂದು ಮಾತನ್ನು ವಾಚಕರಿಗಾಗಿ ಸ್ಪಷ್ಟಮಾಡುವದು ಅವಶ್ಯವದೆ. ಇಂಗ್ಲಂಡದ ರಾಜ್ಯವು ಕಾಯಿದೆಯಂತೆ ನಡೆಯುತ್ತದೆ. ಅಂದರೆ ಅರಸನೂ, ಪ್ರಜೆಗಳೂ ಸರ್ವಮಾನ್ಯವಾದ ಕಾಯಿದೆಯ ನಿಯಮಗಳನ್ನು ಪಾಲಿಸಕ್ಕೇಬೇಕು. ಹಣವನ್ನು ಕೂಡಿಸುವದೂ ವೆಚ್ಚಮಾಡುವದೂ ಪಾರ್ಲಿಮೆಂತಿನವರ ಅಧಿಕಾರವು, ರಾಜಸತ್ತಾತ್ಮಕದೇಶದ ಅರಸರಂತೆ ಬಂಡಾರವನ್ನೆಲ್ಲ ಮನಬಂದಂತೆ ವೆಚ್ಚಮಾಡಿ, ಬರಿದು ಮಾಡುವ ಹಿರಿಯತನವು ಆ ದೇಶದ ಅರಸನಿಗಿರುವದಿಲ್ಲ. ಅರಸು ಮನೆತನಕ್ಕೆ ಇಂತಿಷ್ಟು ಹಣವ್ಯಕೊಡಲ್ಪಡಬೇಕೆಂದು ಗೊತ್ತಾಗಿರುತ್ತದೆ. ಆ ಹಣದೊಳಗೇ ಅರಸರು ತಮ್ಮ ಮನೆ ವೆಚ್ಚವನ್ನು ಸಾಗಿಸಿಕೊಳ್ಳಬೇಕು. ಇವೆಲ್ಲ ಕಾರಣಗಳಿಂದ ರಾಣಿಯವರಿಗೆ ಅರಂಭದಲ್ಲಿ ಗೊತ್ತುಪಡಿಸಿದ ಹಣದ ಹೊರ್ತು ವಿವಾಹ ನಂತರದ ವೆಚ್ಚಕ್ಕಾಗಿ ವರ್ಷಕ್ಕೆ

೫೦,೦೦೦ ಪೌಂಡು ಕೊಡಬೇಕೆಂದು ಕೆಲವರೂ, ೭೦,೦೦೦ ಪೌಂಡು ಕೊಡಬೇಕೆಂದು ಕೆಲವರೂ ಪ್ರತಿಪಾದಿಸಿದರು. ಕಡೆಯಲ್ಲಿ ೬೦,೦೦೦ ಪೌಂಡುಗಳನ್ನೇ ಕೊಡಬೇಕೆಂಬದು ಗೊತ್ತಾಯಿತು. ಬಳಿಕ ೧೮೫೬ನೇ ಇಸವಿಯ ಫೆಬ್ರುವರಿಯ ೧೦ನೇ ತಾರೀಖಿನಲ್ಲಿ ರಾಣಿಯವರ ಮದುವೆಯು ಬಹು ಸಡಗರದಿಂದ ನೆರವೇರಿತು. ಮುಂದೆ ರಾಣಿಯವರು ಇಪ್ಪತ್ತೊಂದು ವರ್ಷದವರೆಗೆ ಅಂದರೆ ೧೮೬೦ನೇ ವರ್ಷದವರೆಗೆ ತಮ್ಮ ಪ್ರಿಯ ಪತಿಯ ಸಮಾಗಮದಲ್ಲಿ ಬಹು ಸೌಖ್ಯದಿಂದ ಕಾಲಕಳೆದರು. ಈ ಇಪ್ಪತ್ತೊಂದು ವರ್ಷಗಳೇ ಇವರ ಬಾಳಿಕೆಯೊಳಗಿನ ಪರಮಾವಧಿಯ ಸುಖದಕಾಲವೆಂದು ಹೇಳಬಹುದು. ಈ ದಂಪತಿಗಳಲ್ಲಿರುವ ಸ್ವಭಾವೈಕ್ಯಗುಣೈಕ್ಯ ಮುಂತಾದವುಗಳಿಂದ ಇವರಿಬ್ಬರೂ ಒಂದೇ ವ್ಯಕ್ತಿಯಂತಿದ್ದರು. ಒಬ್ಬರಿಗೊಬ್ಬರು ಅತ್ಯಂತವಾಗಿ ಪ್ರೀತಿಸುತ್ತಿದ್ದರು. ತೋರಿಕೆಯಲ್ಲಿ ರಾಜ್ಯಭಾರವನ್ನು ರಾಣಿಯವರೇ ನಡಿಸುತ್ತಿದ್ದರಾದರೂ ಅವರಿಗೆ ಆಯಾಯಕಾಲಕ್ಕೆ ಸರಿಯಾದ ಮಂತ್ರಾಲೋಚನೆಯನ್ನು ಅಲ್ಬರ್ಟರವರಲ್ಲಿಯೇ ಹೇಳುತ್ತಿದ್ದರು. ದೇಶದೊಳಗೆ ಕಲಾಕೌಶಲ್ಯವು ಬೆಳೆದು ಸಂಪತ್ತಿಯು ಹೆಚ್ಚಾಗಬೇಕೆಂದು ಇವರು ೧೮೫೧ರಲ್ಲಿ ಲಂಡನದಲ್ಲಿ ದೊಡ್ಡದೊಂದು ಪ್ರದರ್ಶನವನ್ನು ತೋರಿಸಿದರು. ಇಂಥ ಪತಿಯೊಡನೆ ಸತೀ ಧರ್ಮವಂತೆ ವರ್ತಿಸುತ್ತ ಮಕ್ಕಳಂತೆ ಪ್ರಜೆಗಳನ್ನು ಸಲಹುತ್ತ, ಮಕ್ಕಳುಗಳೊಡನೆ ಸುಖದಿಂದ ಇರುವದನ್ನು ನೋಡಿ ಸಹಿಸಲಾರದೆ ನಿಷ್ಕರುಣಿಯಾದ ಕಾಲನು ಸನ್ ೧೮೬೧ರಲ್ಲಿ ಇವರ ಮಾಂಗಲ್ಯವನ್ನು ಮಣ್ಣುಗೂಡಿಸಿದನು. ಪತಿಮರಣದಿಂದ ರಾಣಿಯವರ ಉತ್ಸುಕತೆಯೆಲ್ಲ ಜಳದು ಹೋಯಿತು. ಮರಣದ ನಂತರ ಎರಡು ಮೂರು ಸಾರೆ ಮಾತ್ರ ಪಾರ್ಲಿಮೆಂಟಿನಲ್ಲಿ ಬಂದು ಕೂತಿದ್ದರು. ಆದರೂ ಆರಂಭದಲ್ಲಿ ಮಾತಾಡತಕ್ಕ ತಮ್ಮ ಭಾಷಣವನ್ನು ಅವರು ತಾವೇ ಓದಲಿಲ್ಲ. ಮನುಧರ್ಮಶಾಸ್ತ್ರದಲ್ಲಿ ವಿಧವೆಯರಿಗಾಗಿ ಹೇಳಿವ ವ್ರತ, ನಿಯಮಗಳನ್ನು ಇವರು ಪಾಲಿಸುತ್ತಿದ್ದರೆಂದು ಹೇಳಬಹುದು. ಆದ್ದರಿಂದ ಇವರಿಗೆ ಸತಿ ಶಿರೋಮಣಿಯೆಂಬ ವಿಶೇಷಣವು ಚನ್ನಾಗಿ ಒಪ್ಪುತ್ತದೆ ಇವರ ಈ ತರದ ನಡಾವಳಿಯೇ ಇವರ ಗೌರವವನ್ನು ಸ್ವದೇಶದಲ್ಲ

ಷ್ಟೇ ಅಲ್ಲ ಇತೀ ಜಗತ್ತಿನಲ್ಲಿಸಹ ಪೆಚ್ಚಿಸಿತು. ಯೌವನ, ಧನಸಂಪತ್ತಿ, ಪ್ರಭುತ್ವ ಎಂಬ ತ್ರಿದೋಷಗಳಿಗೆ ಬಳಗಾಗದೆ ನಿಷ್ಕಳಂಕದಿಂದ ನಡೆದು ಸಂಸಾರ ಸಮುದ್ರವನ್ನು ಸುರಕ್ಷಿತವಾಗಿ ದಾಟುವದು ಸಾಮಾನ್ಯವಾದ ಸಂಗತಿಯಲ್ಲ. ಮನೆತನದ ಕೆಲಸವನ್ನೆಲ್ಲ ಇವರು ತಾವೇ ನೋಡುತ್ತಿದ್ದರು. ಯಾವತ್ತು ಕೆಲಸದಲ್ಲಿ ಕೈ ಬಿಗಿ ಹಿಡಿದು ವೆಚ್ಚಮಾಡುತ್ತಿದ್ದರು. ಮಕ್ಕಳಾದ ಬಳಿಕಾದರೂ ಲಗ್ನಕಾಲದಲ್ಲಿ ಗೊತ್ತುಪಡಿಸಿದ ಹಣವನ್ನು ಹೆಚ್ಚಿಸಬೇಕೆಂದು ಪಾರ್ಲಿಮೆಂತಿನವರನ್ನು ಕೇಳಲಿಲ್ಲ. ಈ ತರದ ಇವರ ಮಿತವ್ಯಯವನ್ನು ರಾಬರ್ಟ ಪೀಲ ಧೊರೆಯು ಪಾರ್ಲಿಮೆಂತಿನಲ್ಲಿ ಆಗಾ ತೋರಿಸಿ, ರಾಣಿಯವರ ಆಭಾರವನ್ನು ಮನ್ನಿಸಿ, ಇವರ ಸದ್ಗುಣಗಳನ್ನು ಬಹಳವಾಗಿಕೊಂಡಾಡಿದನು. ಈ ಸದ್ಗುಣಗಳೇ ಇಡೀ ಯುರೋಪಖಂಡದಲ್ಲಿ ೧೮೪೮ರಲ್ಲಿ ಹಬ್ಬಿದ ಅರಾಜಕತೆಯು ಭಯವನ್ನು ಇಂಗ್ಲಂಡದ ದಂಡೆಗೆ ಸಹ ಸೊಂಕಗೊಡಲಿಲ್ಲ. ಈ ಮಾದರಿಯ ಅರಸಿಯು ಯಾವ ನಾಡಿಗೆ ಬೇಡಾದಾಳು?

ಸಂತತಿ

ಇವರು ಒಟ್ಟಿಗೆ ಒಂಭತ್ತು ಮಂದಿಮಕ್ಕಳನ್ನು ಪಡೆದರು. ಈಗಿರುವ ಜರ್ಮನಿಯ ಅರಸನ ತಾಯಿಯೇ ಚೊಚ್ಚಲ ಮಗಳು. ಈಗ ವಿಳನೇ ಎಡ್ವರ್ಡನೆಂಬ ಬಿರುದಿನಿಂದ ರಾಣಿಯವರ ಪಟ್ಟಕ್ಕೆ ಕುಳಿತಿರುವವರೇ ಮುರುಕಲ ಮಗನು. ಇವರಿಗೆ ಯುದ್ಧೋಪಯುಕ್ತ ಶಿಕ್ಷಣವು ದೊರೆತಿರುವದು. ಮೂರನೆಯವರು ಮೇರಿಯೆಂಬ ಹೆಣ್ಣುಮಗಳು ಮಡಿದಿರುವಳು. ನಾಲ್ಕನೆಯವರಾದ ಡ್ಯೂಕ್ ಆಫ್ ಎಡಿನಬರೋ ಎಂಬವರು ಹೋದವರ್ಷ ಜುಲೈ ತಿಂಗಳಲ್ಲಿ ತೀರಿಕೊಂಡರು. ಇವರು ಹಡಗವಡೆಯಲ್ಲಿ ಕೆಲವು ದಿವಸ ದುಡಿದು ಆ ಸಂಬಂಧದ ಜ್ಞಾನ ಸಂಪಾದಿಸಿದ್ದರು. ಐದನೇ ಅವನೆಯವರು ಹೆಣ್ಣುಮಕ್ಕಳು. ಇಬ್ಬರೂ ಸದ್ಯಕ್ಕೆ ಬಾಳಿರುವರು ವಿಳನೆಯವಳೇ ಡ್ಯೂಕ್ ಆಫ್ ಕೆನಾಟ ಎಂಬವರು. ಇವರು ಕೆಲವು ದಿವಸವ ಹಿಂದೆ ಮುಂಬಯಿ ಇಲಾಖೆಯ ಸೇನಾಧೀಶರಾಗಿದ್ದರು, ಈಗ ಇವರನ್ನು ಹಿಂದುಸ್ತಾನದ ಸೈ

ನ್ಯಾಧ್ಯಕ್ಷರನ್ನಾಗಿ ನೇಮಿಸುವ ವಿಚಾರವುಂಟು. ಎಂಟನೆಯ ವರುಷದ ಲಿಲ್ಬರ್ನನೆಂಬ ಮಗನು ೧೪ ೪೪ರಲ್ಲಿ ತೀರಿರುವನು. ಕಡೆಹುಟ್ಟಿದ ಮಗಳಾದ ಬಿಯಾಟ್ರೀಸ ಎಂಬುವರು ೧೪೫೩ರಲ್ಲಿ ಹುಟ್ಟಿರುವರು ಮಕ್ಕಳೂ, ಮೊಮ್ಮಕ್ಕಳೂ, ಮರಿಮಕ್ಕಳೂ ಇವರ ಮರಣ ಸಮಯದಲ್ಲಿ ಇವರ ಬಳಿಯಲ್ಲಿಯೇ ಇದ್ದರು. ಸಾರಾಂಶ ಸಂಸಾರದಲ್ಲಿ ಇಬ್ಬರು ಪ್ರಬುದ್ಧ ಮಕ್ಕಳು ತೀರಿಪ್ಪರಿಂದ ಇವರಿಗೆ ಪುತ್ರಶೋಕವು ಬಿದಗಿತೆಂಬ ಬೊಂದೇ ಕೊರತೆಯು ಕಂಡು ಬರುವದು.

(ಸಶೇಷ)

CHEMISTRY.

ರಸಾಯನಶಾಸ್ತ್ರ.

(೬೫ ನೇ ಪುಟದಿಂದ ಮುಂದೆ ಸಾಗಿದ್ದು.)

ಕ್ಯಾಲ್ಸಿಯಂಕ್ಲೋರಾಯಿಡವೆಂಬ ಪದಾರ್ಥದ ಬಿಂದು ೪೫ ಹರಳನ್ನು ತುಸು ನೀರುಳ್ಳ ಕೊಳಿಸೆಯಲ್ಲಿ ಹಾಕಿ ಕರಗಿಸು. ಇದರಲ್ಲಿ ಸೋಡಿಯಂ ಕಾರ್ಬೊನೇಟವ ದ್ರವವನ್ನು ತುಸು ಬೆರಿಸು. ನೋಡು, ಮೊದಲಿಗೆ ನಿರ್ಮಲವಾಗಿದ್ದ ಇವೆರಡು ದ್ರವಗಳು ಮಿಶ್ರವಾದ ಕೂಡಲೆ ನೀರೆಲ್ಲ ಕಲಕಾಗಿ ಹಾಲಿನಂತೆ ಬೆಳ್ಳಗಾಗಿ ನೊರೆಗಟ್ಟಿತೆ. ಈಗ ಈ ಕೊಳಿವೆಯಲ್ಲಿ ಕಾರ್ಬೊನೆಟ ಆಫವಾ ಖಡುವೆಂಬ ಪದಾರ್ಥವು ಉಂಟಾಗುವದು, ಖಡು ಅವಿದ್ರಾವ್ಯವೆಂಬರೆ ನೀರೊಳಗೆ ಕರಗದಂಥಾದ್ದೆಂದು ನಿಮಗೆ ಗೊತ್ತುಂಟು. ಸೋಡಿಯುಂಕ್ಲೋರಾಯಿಡವೆಂಬ ಪದಾರ್ಥವು ನೀರಲ್ಲಿ ಕರಗಿ ನಿಲ್ಲುತ್ತದೆ. ಆದರಿಂದ ಖಡು ತಳಕ್ಕೆ ಕೂಡುತ್ತದೆ.

ಕ್ಯಾಲ್ಸಿಯಂಕ್ಲೋರಾಯಿಡ (ನೀರೊಳಗೆ ಕರಗುವ ಒಡಪೆಯು)	ಮತ್ತು	ಸೋಡಿಯುಂ ಕಾರ್ಬೊನೇಟ (ನೀರೊಳಗೆ ಕರಗುವ ಒಡಪೆ)

ಇವೆರಡನ್ನು ಮಿಶ್ರಮಾಡಲಾಗಿ ಕೆಳಗಿನ ಸ್ಥಿತಿಯು ಉಂಟಾಗುತ್ತದೆ.

ಕ್ಯಾಲ್ಸಿಯುಂಕಾರ್ಬೊನೇಟು (ನೀರೊಳಗೆ ಕರಗದ ಒಡವೆ ತಳಕ್ಕೆ ಕೂಡುತ್ತದೆ,) ಮತ್ತು { ಸೋಡಿಯುಂ ಕ್ಲೋರಾಯಿಡ (ಉಪ್ಪು) (ನೀರೊಳಗೆ ಕರಗುವ ಪದಾರ್ಥ ಅಂದರೆ ನೀರೊಳಗೆ ಬೆರತು ನಿಲ್ಲುವಂಥಾದ್ದು).

ಇದರಿಂದ ತಿಳಿಯುವುದೇನೆಂದರೆ ಖಡುವಿನಂಥ ಒಂದೇ ಧಾತುವಿನ ಕೆಲವು ಕ್ಷಾರಗಳು ಅವಿದ್ರಾವ್ಯವಾಗಿಯೂ ಬೇರೆ ಕೆಲವು ಕ್ಷಾರಗಳು ಕರಗುವಂಥವಾಗಿಯೂ ಇರುತ್ತವೆ. ಎರಡು ಕ್ಷಾರಗಳನ್ನು ಮಿಶ್ರಮಾಡಲಾಗಿ ಭಿನ್ನ ಧರ್ಮದ ಬೇರೊಂದು ಪದಾರ್ಥವು ಉತ್ಪನ್ನವಾದರೆ ಮಿಶ್ರಮಾಡಿದ ಕ್ಷಾರಗಳಲ್ಲಿ ಈ ಪದಾರ್ಥದ ಅಂಶವಿದ್ದಿಲ್ಲವೆಂತಲೂ ಇದು ಹೊಸದಾಗಿಯೇ ಹುಟ್ಟಿರುವದೆಂತಲೂ ಹೇಳುವದು ಸರಿಯಲ್ಲ. ಭೂಮಿಯಲ್ಲಿ ಮೂಲತತ್ವಗಳು ಬಗೆಬಗೆಯಿಂದ ಸಂಯೋಗವಾಗಿ ತರತರದ ಮಿಶ್ರಪದಾರ್ಥಗಳನ್ನು ಹುಟ್ಟಿಸುತ್ತವೆ. ಆದರೆ ಮೂಲತತ್ವಗಳು ಬದಲಾಗುವದಿಲ್ಲ. ಕ್ಯಾಲಸಿಯುಂಕ್ಲೋರಾಯಿಡ ಎಂಬ ಪದಾರ್ಥದೊಳಗಿನ ಕಾಲ್ಸಿಯುಂ ತತ್ವವೂ ಸೋಡಿಯುಂ ಕಾರ್ಬೊನೇಟಿನೊಳಗಿನ ಕಾರ್ಬನಿಸಲಿಸಿಡ ಎಂಬ ಮಿಶ್ರಪದಾರ್ಥವೂ ಕೇವಲ ಸ್ಥಲಾಂತರ ಹೊಂದಿ ಖಡುವನ್ನುಂಟು ಮಾಡಿರುತ್ತವೆ.

೫೬ ಮ್ಯಾಗ್ನೇಸಿಯುಂ--ಇದು ಮಿದುವಾದ ಬಿಳಿ ಬಣ್ಣದ ಧಾತು. ಇದರಿಂದ ತಿಳುವಾದ ತಗಡುಗಳನ್ನೂ ಜಿನುಗಾವ ತಂತಿಗಳನ್ನೂ ಮಾಡುತ್ತಾರೆ.

ಪ್ರಯೋಗ ೮೬—ಮ್ಯಾಗ್ನೇಸಿಯುಂ ಧಾತುವಿನ ತಿಳುವಾದ ತಗಡನ್ನು ಅಥವಾ ತಂತಿಯನ್ನು ದೀಪದ ಕುಡಿಗೆ ಹಿಡಿದು ಸುಟ್ಟಿರೆ ಅದರ ಪ್ರಕಾಶವು ಕಣ್ಣು ಕುಕ್ಕುವಷ್ಟು ಬೆಳ್ಳಗಾಗಿ ಕಂಗೊಳಿಸುತ್ತದೆ ಸುಟ್ಟುಹೋದ ಬಳಿಕ ನೆಲದ ಮೇಲೆ ಬೀಳುವ ಬೂದಿಯು ಮ್ಯಾಗ್ನೇಸಿಯಾ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ಈ ಬೂದಿಯಲ್ಲಿ ಆಕ್ಸಿಜನವು ಮಿಶ್ರವಾಗಿರುತ್ತದೆ. ಮ್ಯಾಗ್ನೇಸಿಯುಂ ಧಾತುವು ಉರಿಯುವಾಗ ಕರೆ ಬಿಳೀ ಬಣ್ಣದ ಹೊಗೆಯು ಹೊರಡುತ್ತಿರುತ್ತದೆ. ಈ ಕರೇ ಹೊಗೆಯ ಮೇಲೆ ಬಿಳೀ ಕಾಗದವನ್ನು ಹಿಡಿದರೆ ಆದ

ಕ್ಕೆ ಕಪ್ಪು ಹತ್ತುವದಿಲ್ಲ. ಆದ್ದರಿಂದ ಇದರ ಕಾಬೋ
ನ್ನು ಇಲ್ಲಿಂದು ಸ್ಪಷ್ಟವಾಗುತ್ತದೆ. ಈ ಧಾತುವು ಪೂರಾ
ಸುಡದೆ ಕೆಲವು ಭಾಗವು ಕಪ್ಪು ಹೊಗೆದು ರೂಪದಿಂದ
ಹೊರಟುಹೋಗುತ್ತದೆ. ಮ್ಯಾಗ್ನೇಸಿಯಮ್ಮಿದ ಪುಡಿಯು
ಜ್ವಾಲೆಯ ಬಲದಿಂದ ಮೇಲೆ ಹಾಗುತ್ತದೆ. ಅದೇ ಬಿಳಿ
ಹೊಗೆದು.

ಪ್ರಯೋಗ ೭೬--ಮ್ಯಾಗ್ನೇಸಿಯಂ ಧಾತುವಿನ ಪುಡಿಯ
ನ್ನು ತುಸು ತಕ್ಕೊಂಡು ಬಂದು ಕೊಳವೆಯಲ್ಲಿ ಹಾಕಿ ಕಾಸ
ಬೇಕು. ಮತ್ತು ಅದರಲ್ಲಿ ತುಸು ಗಂಧಕಾಮ್ಲವನ್ನು ಹಾಕ
ಲಾಗಿ ಆ ಪ್ರತಿಯಿಲ್ಲ ಕರಗುತ್ತದೆ. ಬಳಿಕ ಆ ದ್ರವವನ್ನೆಲ್ಲ
ಚಿನಯಿ ಮಣ್ಣಿನ ಪಾತ್ರೆಯಲ್ಲಿ ಹಾಕಿ ನೀರೆಲ್ಲ ಉಗಿಯಾಗು
ವವರೆಗೆ ಕಾಯಿಸಿ ಕೊ[illegible] ಪಾತ್ರೆಯು ತಣ್ಣಗಾದ ಬಳಿಕ
ಕೆಳಗಿಳಿಸಿ ನೋಡಿ [illegible] ಉದ್ದವಾದ ಸ್ಫಟಿಕಗ
ಳು ಕಾಣಿಸುವವು. ಇವೆ ಮ್ಯಾಗ್ನೇಸಿಯಾ ಮತ್ತು ಗಂಧ
ಕಾಮ್ಲ ಇವರಡರ ಸಂಯೋಗದಿಂದ ಉತ್ಪನ್ನವಾದ ಮ್ಯಾ
ಗ್ನೇಸಿಯಂ ಸಲ್ಫೇಟ ಎಂಬ ಪದಾರ್ಥದಿಂದುಂಟಾಗುತ್ತವೆ.
ಭೂಮಿಯೊಳಗಿನ ಅನೇಕ ಖನಿಜಗಳಲ್ಲಿಯೂ ದೊಡ್ಡ ದೊ
ಡ್ಡ ಬಂಡೆಗಳಲ್ಲಿಯೂ ಮ್ಯಾಗ್ನೇಸಿಯಂ ಧಾತುವು ಮಿಶ್ರವಾ
ಗಿರುವಂಥ ಅನೇಕ ಮಿಶ್ರಪದಾರ್ಥಗಳನ್ನು ಕಾಣಬಹುದು.
ಇದು ಶುದ್ಧಸ್ಥಿತಿಯಲ್ಲಿ ಎಲ್ಲಿಯೂ ದೊರೆಯುವದಿಲ್ಲ. ಮ್ಯಾ
ಗ್ನೇಸಿಯಮೆಂಬ ಈ ಧಾತುವಿನ ಆಕ್ಸಯಿಡಿನಿಂದ ಅತಿ
ಪ್ರಯಾಸದಿಂದ ತೆಗೆದುಬರು. ಅದರಿಂದ ಇದಕ್ಕೆ ಹೆಚ್ಚು
ಬೆಲೆ ಬೀಳುವದು. ಮದ್ದಿನ ಕೆಲಸಕ್ಕೂ ವಿಶೇಷ ಪ್ರಕಾಶ
ವನ್ನುಂಟು ಮಾಡುವದಕ್ಕೂ ಇದು ಬೇಕಾಗುವದು.

ಎಂಟನೇ ಪಾಠ.

ಧಾತು.

೫೬ ಸೋಡಿಯಂ--ಹೈದ್ರೋಜನವನ್ನು ಹುಟ್ಟಿಸುವದಕ್ಕೆ
ಹಿಂದೆ ೧೨ನೇ ಪ್ರಯೋಗದಲ್ಲಿ ಸೋಡಿಯಂ ಧಾತುವನು
ಉಪಯೋಗಿಸಿದ್ದು ನಿಮ್ಮ ಸ್ಮರಣದಲ್ಲಿ ಇರಬಹುದು.
ಚಿನ್ನ, ಬೆಳ್ಳಿ, ಕಬ್ಬಿಣಗಳಂತೆ ಕೈಗಾರಿಕೆಯ ಕೆಲಸದಲ್ಲಿ ಇದ

ರ ಉಪಯೋಗವು ಬಹಳಿಲ್ಲ. ಇದನ್ನು ಹವೆಯಲ್ಲಿ ತೆರೆದಿಟ್ಟರೆ ಕೂಡಲೆ ಉರಿದು ಹೋಗುವದು. ತಳದಲ್ಲಿ ಬರೇ ಬೆಳ್ಳೀ ಹುಡಿಯು ಉಳಿಯುವದು. ನೀರಲ್ಲಿ ಚಲ್ಲಿದರೆ ಆಕ್ಸಿಜನದೊಡನೆ ಸಂಯೋಗವಾಗಿ ಹೈದ್ರೋಜನವನ್ನು ನಿಂಗಡಿಸುವದು. ಖನಿಜತೈಲ ಅಥವಾ ಚಿಮಣಿಎಣ್ಣೆಯಲ್ಲಿ ಆಕ್ಸಿಜನ ವಿರುವದಿಲ್ಲವಾದದರಿಂದ ಅದರೊಳಗೆ ಇದನ್ನಿಟ್ಟಿರುವರು. ಇದರದೊಂದು ಸಣ್ಣ ತುಂಡನ್ನು ನೀರೊಳಗೆ ಚಲ್ಲಿದರೆ ತೇಲುವದು ಮತ್ತು ಆ ಕ್ಷಣವೇ ಹೈದ್ರೋಜನ ಪಾದುವು ಹೊರಡಹತ್ತುವದು. ಕೆಂಪು ಲಿಟಮಸ್‌ದಿಂದ ಸಸುಗೆಂಪಾದ ನೀರು ಈ ಧಾತುವನ್ನು ಸುಡುವದರಿಂದ ನೀಲ ವರ್ಣದ್ದಾಗುವದು. ಇದು ಆಕ್ಸಿಜನದೊಡನೆ ಸಂಯೋಗವಾಗಿ ಸೋಡಾ ಎಂಬ ಸಬಲ ಕ್ಷಾರವನ್ನು ಹುಟ್ಟಿಸುವದು.

ಪ್ರಯೋಗ ೪೮—ಸೋಡಿಯಂ ಧಾತುವು ಶುದ್ಧ ಸ್ಥಿತಿಯಲ್ಲಿ ಸಿಗುವದಿಲ್ಲ. ಸೋಡಾ ಅಂದರೆ ಹಪ್ಪಳಕಾರದೊಳಗಿನ ಆಕ್ಸಿಜನವನ್ನು ಬೇರ್ಪಡಿಸಿ ಇದನ್ನು ತೆಗೆಯುತ್ತಾರೆ. ರಸಾಯನ ಶಾಸ್ತ್ರಜ್ಞರಿಗೆ ಮಾತ್ರ ಇದರ ಉಪಯೋಗವು ಬಹಳ. ಇದರ ಸಹಾಯದಿಂದಲೇ ಮ್ಯಾಗ್ನೇಸಿಯಂ ಅಲ್ಯೂಮಿನಂ ಎಂಬೆರಡು ಧಾತುಗಳನ್ನು ಶೋಧಿಸುವರು. ಇದರದೊಂದು ಚೂರನ್ನು ಸೌಟಿನಲ್ಲಿ ಹಾಕಿ ದೀವಿಗೆಯ ಮೇಲೆ ಹಿಡಿಯಲು, ಮೊದಲು ಕರಗುವದು, ಬಳಿಕ ಹೊತ್ತುವದು, ಕಡೆಯಲ್ಲಿ ಉರಿಯುವದು. ಉರಿಯು ಅರಿಶಿನ ಬಣ್ಣದ್ದಿರುವದು, ಹೊಗೆಯು ಬೆಳ್ಳಗಿರುವದು. ಈ ಹೊಗೆಯು ಸೋಡಿಯಮ್ಮದ ಆಕ್ಸಾಯಿಡವಿರುವದು.

ಈ ಧಾತುವಿನಿಂದ ಅನೇಕ ಕ್ಷಾರಗಳು ಉತ್ಪನ್ನವಾಗಿರುತ್ತವೆ. ಅವುಗಳಲ್ಲಿ ಮುಖ್ಯ ಮುಖ್ಯ ಕ್ಷಾರಗಳನ್ನೂ, ಪ್ರಚಾರದೊಳಗಿನ ಅವುಗಳ ಹೆಸರುಗಳನ್ನೂ, ಘಟಕಗಳನ್ನೂ, ಶಾಸ್ತ್ರೀಯ ನಾಮಗಳನ್ನೂ ಇದರಡಿಯಲ್ಲಿ ಬರದಿದ್ದೇವೆ.

ಪ್ರಚಲಿತ ನಾಮ	ರಾಸಾಯನಿಕ ನಾ	ಘಟಕಗಳು.
	ಮಗಳು.	
ಸಮುದ್ರ ಉಪ್ಪು ತಿ	ಸೋಡಿಯಂ ಕ್ಲೋ	ಸೋಡಿಯಂ ಮತ್ತು
ನ್ನುವ ಉಪ್ಪು ಸೈಂಧ	ರಾಯಿಡ.	ಕ್ಲೋರಿನ.
ಬಾವಿ		

ಜುಲಾಬಿನ ಉಪ್ಪು.	ಸೋಡಿಯಂ ಸಲ್ಫೇಟು.	ಸೋಡಿಯಂ ಮತ್ತು ಗಂಧಕಾಮ್ಲ.
ಸಜ್ಜೀಕಾರ ಅಥವಾ ಹಪ್ಪಳಿಕಾರ ಚಿನಯಿ ಉಪ್ಪು.	ಸೋಡಿಯಂ ಕಾರ್ಬನೇಟು.	ಸೋಡಿಯಂ ಮತ್ತು ಕಾರ್ಬನಿಕ್ ಆಸಿಡ.
	ಸೋಡಿಯಂ ನೈತ್ರೇಟು.	ಸೋಡಿಯಂ ಮತ್ತು ನೈತ್ರಿಕ ಆಸಿಡ.

ಇವುಗಳಲ್ಲಿ ಸೈಂಧವಲವಣವು ಕಣಿಯಲ್ಲಿ ಸಿಗುತ್ತದೆ. ಸಮುದ್ರ ನೀರನ್ನು ಬಿಸಿಗಿಸಿ ತಿನ್ನುವ ಉಪ್ಪನ್ನು ತಯಾರ ಮಾಡುತ್ತಾರೆ. ಮಿಕ್ಕ ಕ್ಷಾರಗಳು ಉಪ್ಪಿನಿಂದ ಸಿದ್ಧವಾಗುತ್ತವೆ. ಉಪ್ಪಿನ ಮೇಲೆ ತುಸು ಗಂಧಕಾಮ್ಲವನ್ನು ಹನಿಸಿದರೆ ಅದರೊಳಗಿಂದ ಹೈದ್ರೋ ಕ್ಲೋರಿಕ್ ಆಸಿಡಿನ ದಟ್ಟಾದ ಹೊಗೆಯು ಹೊರಬಿದ್ದು ಹೋಗಿ ಜುಲಾಬಿನ ಉಪ್ಪು ಅಥವಾ ಸೋಡಿಯಂ ಸಲ್ಫೇಟವು ಬುಡದಲ್ಲಿ ಉಳಿಯುವದು. ಈ ಪ್ರಯೋಗದಲ್ಲಿ ಸಂಯೋಗ ಹೊಂದುವ ಕ್ರಮವು ಹ್ಯಾಗಂದರೆ—

ಸೋಡಿಯಂ ಕ್ಲೋರಾಯಿಡ (ಉಪ್ಪು) ಮತ್ತು ಸಲ್ಫ್ಯೂರಿಕ್ ಆಸಿಡ (ಗಂಧಕಾಮ್ಲ) ಇವುಗಳಿಂದ ಸೋಡಿಯಂ ಸಲ್ಫೇಟ (ರೇಚಕಲವಣ) ಮತ್ತು ಹೈದ್ರೋಕ್ಲೋರಿಕ್ ಆಸಿಡಿನ ಹೊಗೆ ಇವೆರಡು ಉತ್ಪನ್ನವಾಗುತ್ತವೆ.

ನೀಲಿಯು ಬಣ್ಣದ ಲಿಟಮುಸವನ್ನು ಈ ಹೊಗೆಗೆ ಹಿಡಿದರೆ ಕೂಡಲೆ ಕೆಂಪಾಗುತ್ತದೆ. ಇದರಿಂದ ಈ ಹೊಗೆಯಲ್ಲಿ ಆಮ್ಲದ ಧರ್ಮವಿರುತ್ತದೆಂದು ಸ್ಪಷ್ಟವಾಗುತ್ತದೆ.

(ಸಶೇಷ.)

MANUAL OF METHOD.

ಶಿಕ್ಷಾಕ್ರಮ.

(೬೪ನೇ ಪುಟದಿಂದ ಮುಂದೆ ಸಾಗಿದ್ದು.)

೩. ಚಿಕ್ಕ ಬಾಲಕರ ಶಾಲೆಗಳೂ ವರ್ಗೀಕರಣವೂ—ಚಿಕ್ಕ ಬಾಲಕರ ಕೋಮಲವಾದ ಶರೀರಗಳಿಗೆ ಅನುಗುಣವಾಗಿ ಶಿಕ್ಷಣವನ್ನು ಸಾಗಿಸಬೇಕಾದರೆ ಶಿಕ್ಷಣದ ಪಾಠಗಳ

ಸಂಬಂಧದಿಂದ ವಿಚಾರ ಮಾಡತಕ್ಕ ಅಂಶಗಳು ಮೂರು ಇರುತ್ತವೆ. ೧ ಪರಿಮಾಣ, ೨ ವೈಚಿತ್ರ್ಯ, ೩ ಸ್ವರೂಪ.

ಪಾಠದ ಪರಿಮಾಣ—ಪಾಠವು ವಾಡಿಕೆಯಾಗಿ ಇಪ್ಪತ್ತು ಮಿನಿಟುಗಳಲ್ಲಿ ಮುಗಿಯುವಷ್ಟು ಉದ್ದವಾಗಿರಬೇಕು ಮೂವತ್ತು ಮಿನಿಟುಗಳಿಗಿಂತ ಹೆಚ್ಚು ಹೊತ್ತು ಹತ್ತುವಷ್ಟು ಉದ್ದವಾದದ್ದು ಎಂದಿಗೂ ಇರಕೂಡದು. ಮತ್ತು ಹುಡುಗರು ವಯಸ್ಸಿನಿಂದ ಚಿಕ್ಕವರಿದ್ದಂತೆ ಈ ಪರಿಮಾಣವು ಕಡಿಮೆಯೇ ಇರಲಿಕ್ಕೆ ಬೇಕು. ತೀರ ಚಿಕ್ಕ ಹುಡುಗರಿಗೆ ಪದಿನೈದು ಮಿನಿಟಿಗಿಂತ ಹೆಚ್ಚು ಹೊತ್ತು ಹಿಡಿಯುವಂಥ ಪಾಠವು ತೀರ ಅಸಮ್ಮತಿಯಾದದ್ದು. ಒಂದು ಪಾಠವು ಮುಗಿದ ಬಳಿಕ ಹುಡುಗರಿಗೆ ವಿಶ್ರಾಂತಿಗಾಗಿಯೂ ಹಾಡುಗಳಿಗಾಗಿಯೂ ತುಸು ವೇಳೆಯನ್ನು ನೇಮಿಸತಕ್ಕದ್ದು. ಪಾಠಗಳ ವಿಷಯಗಳು ಭಿನ್ನ ಭಿನ್ನವಾಗಿರಬೇಕು. ತೀರ ಚಿಕ್ಕ ಹುಡುಗರ ಪಾಠಗಳು ಪರಿಚಿತವಾದ ವಸ್ತು, ಪಶುಗಳ ಸಂಬಂಧದವೇ ಇರಬೇಕು. ಆ ಪಾಠಗಳಲ್ಲಿ ಆ ವಿಷಯಗಳಿಗೆ ಅನುಕೂಲವಾದ ಕಥೆಗಳೂ ಹಾಡುಗಳೂ ಇರಬೇಕು. ವಿದ್ಯಾರ್ಥಿಗಳ ಸ್ವಾಭಾವಿಕವಾದ ಒಲವುಗಳನ್ನೂ ಅವರಿಗೆ ಗೊತ್ತಿದ್ದ ಸಂಗತಿಗಳನ್ನೂ ಕೈಕೊಂಡು ಪಾಠಕ್ಕೆ ರಂಗೇರಿ, ಕಲಿತ ಜ್ಞಾನವು ಅವರ ಸ್ವತ್ತಾಗುವಂತೆ ಒಳ್ಳೇ ಹುರುಪಿನಿಂದ ಅಭ್ಯಾಸವು ಸಾಗಿಸಲ್ಪಡಬೇಕು.

ವಿದ್ಯಾರ್ಥಿಗಳ ಜ್ಞಾನವಲ್ಲದೆ ಅವರ ವಯಸ್ಸು ವರ್ಗೀಕರಣದ ಮೂಲಾಧಾರವಾಗದು. ಆದರೆ ಚಿಕ್ಕ ಬಾಲಕರ ಶಾಲೆಗಳಲ್ಲಿ ವರ್ಗೀಕರಣವು ಅವರ ವಯಸ್ಸನ್ನೇ ಅವಲಂಬಿಸಿರುವದು, ಇಂಥ ಶಾಲೆಗಳಲ್ಲಿ ವಾಚನ ಯೋಗ್ಯತೆಯಿಂದಲೇ ವರ್ಗೀಕರಣ ಮಾಡುವದು ಹಿತವು. ವಾಚನ ನೈಪುಣ್ಯವು ವಯಸ್ಸನ್ನವಲಂಬಿಸಿರುವದೆಂಬದು ಮನಗಂಡ ಮಾತು. ವಯೋನಿಷ್ಠ ವರ್ಗೀಕರಣವು ಇತರ ಶಾಲೆಗಳನ್ನಿ ಪ್ರಯೋಜನಕರವಾಗಲಾರದು. ಆದರೆ ತಡವಾಗಿ ವರ್ಗದಲ್ಲಿ ಸೇರಿಸಲ್ಪಟ್ಟಿದ್ದರಿಂದ ಅಥವಾ ನಡುವೇ ಶಾಲೆಗೆ ಬಂದು ವರ್ಗದಲ್ಲಿ ಸೇರಿಕೊಂಡದ್ದರಿಂದ ಅಭ್ಯಾಸದಲ್ಲಿ ಕೊರತೆಯು

ಳ್ಳಂಥ ಹುಡುಗರಿಗೆ ಕೆಳಗಿನ ವರ್ಗದಲ್ಲಿ ಚಲ್ಲುವದು ಸರಿಯಾಗಲಾರದು. ಯಾಕಂದರೆ ಚಿಕ್ಕ ಹುಡುಗರ ಶಿಕ್ಷಣವು ಈ ಪ್ರಬುದ್ಧ ಹುಡುಗರಿಗೆ ಎಲ್ಲ ಬಗೆಯಿಂದಲೂ ನಿಷ್ಪ್ರಯೋಜನಕರವಾಗುವದು. ಇಂಥ ಹುಡುಗರನ್ನು ಸ್ವತಂತ್ರ ವರ್ಗದಲ್ಲಿ ಕೂರಿಸುವದು ಇಲ್ಲವೆ ಅವರ ಸಂಬಂಧದಿಂದ ವಿಶೇಷ ವ್ಯವಸ್ಥೆಯನ್ನು ಮಾಡುವದು ಶ್ರೇಯಸ್ಕರವಾದ ಸಂಗತಿಯು. ಪ್ರಬುದ್ಧ ಹುಡುಗರ ವರ್ಗೀಕರಣಕ್ಕೆ ಅನುಕೂಲಿಸುವ ವಿಷಯವು ಗಣಿತವು. ಇದರ ಕಾರಣವೂ ಸ್ಪಷ್ಟವಾಗಿರುತ್ತದೆ. ಗಣಿತದಿಂದ ಜ್ಞಾನದ ಮೆಟ್ಟು ಗೊತ್ತಾಗುತ್ತದೆ. ಜ್ಞಾನದಿಂದಲೂ ಅಭ್ಯಾಸದಿಂದಲೂ ಸರಿಯಾದವರಿಗೆ ಒತ್ತಟ್ಟಿಗೆ ಕೂರಿಸುವದೇ ಪ್ರಬುದ್ಧ ಹುಡುಗರ ಸಂಬಂಧದ ವರ್ಗೀಕರಣದೊಳಗಿನ ಮುಖ್ಯ ನೇಮವೆಂದು ಹೇಳಬಹುದು.

೪. ಚಿಕ್ಕ ಹುಡುಗರ ಶಾಲೆಯೊಳಗಿನ ವರ್ಗಗಳೂ ಉಪವರ್ಗಗಳೂ—ಚಿಕ್ಕ ಹುಡುಗರ ಶಾಲೆಗಳಲ್ಲಿ ಮುಂದೆ ಬರೆದ ನಾಲ್ಕು ವಿಷಯಗಳಲ್ಲಿ ಅನುಕೂಲವಿದ್ದಂತೆ ಉಪವರ್ಗಗಳನ್ನು ಮಾಡುವದು ಅವಶ್ಯವಿರುವದು. ೧ ಹೊಲಿಗೆ, ೨ ಲೇಖನ, ೩ ವಾಚನ, ೪ ಚಿತ್ರಕಲೆ.

೧ ಹೊಲಿಗೆ—ಶಿಕ್ಷಕನು ವಿದ್ಯಾರ್ಥಿಗಳ ಎದುರಿಗೆ ಕೂತು ಬಗೆಯನ್ನು ತೋರಿಸಿ ಅವರಿಂದ ಕೆಲಸವನ್ನು ಎಚ್ಚರದಿಂದ ಮಾಡಿಸಿಕೊಂಡ ಹೊರ್ತು ಚಿಕ್ಕ ಮಕ್ಕಳಿಂದ ಈ ಕೆಲಸವು ಸರಿಯಾಗಿ ಸಾಗುವದು ದುಸ್ಸಾಧ್ಯವು. ಪ್ರತಿಯೊಬ್ಬ ಹುಡುಗನು ಮಾಡುವ ಕೆಲಸವನ್ನು ಲಕ್ಷವಿಟ್ಟು ಎಚ್ಚರದಿಂದ ನೋಡಲೇ ಬೇಕಾಗುತ್ತದೆ. ಆವರಿಂದ ಇಂಥ ವಿದ್ಯಾರ್ಥಿಗಳನ್ನು ವರ್ಗದಲ್ಲಿ ಬಹಳವಾಗಿ ಕೂರಿಸಿಕೊಂಡು ಅಂಥ ವರ್ಗದ ಅಭ್ಯಾಸವನ್ನು ಸರಿಯಾಗಿ ಸಾಗಿಸುವದು ಕಷ್ಟವಾಗುತ್ತದೆ. ಸಣ್ಣ ವರ್ಗಗಳೇ ಈ ವಿಷಯಕ್ಕೆ ತಕ್ಕವುಗಳಾಗಿರುತ್ತವೆ.

೨. ಲೇಖನ ನೈಪುಣ್ಯಕ್ಕೆ ೧ ಆಸನವು ಅಂದರೆ ಹುಡುಗರು ಕೂಡ್ರುವ ಬಗೆಯೂ ೨ ಲೆಕ್ಕಣಿಕೆ ಪೇನಶಿಲುಗಳನ್ನು ಹಿಡಿಯುವ ಪ್ರಕಾರಗಳೂ ಮೂಲಾಧಾರವಾಗಿರುತ್ತವೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಆದಕಾರಣ ಈ ಸಂಬಂಧದಿಂದ

ಎಚ್ಚರ ಪಟ್ಟಪ್ಪು ಬಳ್ಳೀದು. ಈ ಕಾಲದಲ್ಲಿ ಹತ್ತಿದ ಕೆಟ್ಟ ಚಟಗಳನ್ನು ಬಿಡಿಸುವದು ಕಷ್ಟವಾಗುವದಲ್ಲದೆ ಅದರಿಂದ ಶರೀರಕ್ಕಾದರೂ ಅನಾಯ ಸಂಭವಿಸುವದು. ಆದ್ದರಿಂದ ೧ ತಕ್ಕ ರೀತಿಯಿಂದ ಕೂಡ್ರುವ ಅಭ್ಯಾಸವನ್ನು ಮಾಡಿಸುವದು, ೨ ತಕ್ಕ ರೀತಿಯಿಂದ ಪೆನ್ ಪೇನೆಶೀಲುಗಳನ್ನು ಹಿಡಿಯುವ ರೂಢಿಯನ್ನು ಇಡಿಸುವದು ಇವೆರಡು ಕೆಲಸಗಳಿಗೆ ಶಿಕ್ಷಕನು ಬಹು ಎಚ್ಚರದಿಂದ ಲಕ್ಷಗೊಡುವದು ಅತ್ಯವಶ್ಯವಾದ ಸಂಗತಿಯು. ಇದಕ್ಕಾಗಿ ವರ್ಗಗಳು ಸಣ್ಣವಿದ್ದಷ್ಟು ಲೇಸು

೩ ವಾಚನ—ಈ ಕಲೆಯು ಕೇವಲ ಅಭ್ಯಾಸಸಾಧ್ಯವಾಪದ್ದು. ಅಂದರೆ ಪ್ರತಿ ಒಬ್ಬನು ಈ ಕಲೆಯಲ್ಲಿ ನೈಪುಣ್ಯವನ್ನು ಸಾಧಿಸಲಿಕ್ಕೆ ದಾವತಿ ಮಾಡಿದಷ್ಟು ಲಾಭವನ್ನು ಹೊಂದುವನು. ಪ್ರತಿ ಒಬ್ಬ ಹುಡುಗನಿಗೆ ಸರಿಯಾದ ಮಾರ್ಗವನ್ನು ತೋರಿಸಬೇಕಾದರೆ ವರ್ಗದಲ್ಲಿ ತುಸು ಹುಡುಗರಿರುವದೇ ವಿಹಿತವು. ಬಹಳ ಹುಡುಗರಾದರೆ ಕೈಮಿಾರಿ ವಾಚನವನ್ನು ತಿದ್ದುವ ಕೆಲಸವು ಗೊತ್ತಿಗೆ ಮುಟ್ಟಲಾರದು ಸ್ಪಷ್ಟವಾದಂಥ ಶುದ್ಧವಾದಂಥ ಉಚ್ಚಾರವನ್ನೂ ಸ್ವಾಭ್ಯವಾದ ನುಡಿಯನ್ನೂ ಆಗ್ರಹದಿಂದ ಹೊರಡಿಸಬೇಕಾದರೆ ಪ್ರತಿಬಿಬ್ಬ ವಿದ್ಯಾರ್ಥಿಗಾಗಿ ಶಿಕ್ಷಕನು ಕೆಲವು ಹೊತ್ತನ್ನು ವೆಚ್ಚ ಮಾಡಲೇ ಬೇಕಾಗುವದು. ಇದಕ್ಕೆ ತಪ್ಪಿದರೆ ನಷ್ಟ ತಪ್ಪದು.

೪ ಚಿತ್ರಕಲೆ—ಈ ಕಲೆಯನ್ನು ಕಲಿಸಲಿಕ್ಕೆ ಶಿಕ್ಷಕನ ಸಹಾಯವು ಆಗಾಗ್ಗೆ ಬೇಕಾಗುತ್ತದೆ. ಅದು ದೊರಿಯದಿದ್ದರೆ ಈ ಕಲೆಯು ಸಾಧಿಸದೆ ಹೊತ್ತು ವ್ಯರ್ಥ ಹೋಗುತ್ತದೆ. ಇಷ್ಟೇ ಅಲ್ಲ, ಆ ವಿಷಯದಲ್ಲಿ ಅಪ್ರೀತಿಯೂ ಹುಟ್ಟುತ್ತದೆ. ಆದಕಾರಣ ಈ ವಿಷಯದ ಸಂಬಂಧದಿಂದ ವರ್ಗಗಳು ಸಣ್ಣವಿದ್ದಷ್ಟು ಬಳ್ಳೀದು.

೫ ವರ್ಗದ ಆಕಾರ—ಹುಡುಗರನ್ನು ಶಿಕ್ಷಕರ ಮುಂದೆ ನಿಲ್ಲಿಸುವ ಅಥವಾ ಕೂಡ್ರಿಸುವ ರೀತಿಯು ಕೆಳಗೆ ಬರೆದ ನಾಲ್ಕು ಸಂಗತಿಗಳನ್ನು ಅವಲಂಬಿಸಿರುತ್ತದೆ. ೧ ವರ್ಗದೊಳಗಿನ ಹುಡುಗರ ಸಂಖ್ಯೆ, ೨ ವರ್ಗ ಕೂಡ್ರುವ ಸ್ಥಳ, ೩ ವರ್ಗ ಕೂಡ್ರುವ ಬೆಂಚುಗಳೂ ಡೆಸ್ಕುಗಳೂ

ಮತ್ತು ಅವುಗಳನ್ನಿಟ್ಟ ಕ್ರಮವೂ, ೪ ಶಿಕ್ಷಕರ ಸಂಖ್ಯೆಯೂ ಯೋಗ್ಯತೆಯೂ.

CORRESPONDENCE.

ಪತ್ರವ್ಯವಹಾರ.

ದಕ್ಷಿಣ ಭಾಗದ ಪ್ರಾಥಮಿಕ ಶಿಕ್ಷಣದ ಹೆಣ್ಣು ಮಕ್ಕಳ ಕನ್ನಡ ಶಾಲೆಗಳ ಬಗ್ಗೆ ಸೂಚಿಸಿದ ಇಯತ್ತೆಗಳಲ್ಲಿ ಮೊಡಶಕ್ಕ ವಿವಾದಗಳು.

ಅಧ್ಯಕ್ಷರೇ, ಸಭ್ಯಗೃಹಸ್ಥರೇ ಈ ಮೇಲ್ಕಾಣಿಸಿದ ವಿಷಯದ ವಿವೇಚನೆವು ಬಲು ಗೌರವದ್ದಾಗಿಯೂ, ಅತ್ಯುಪಯುಕ್ತವಾಗಿಯೂ, ಲೋಕಸುಧಾರಣೆಯ ಯಾವತ್ತು ಬೆಲೆಗಳ ಅನ್ವಿವಾರವಾಗಿಯೂ ಇರುತ್ತದೆ. ಇದನ್ನು ಕುರಿತು ವಿಚಾರಮಾಡುವದು. ಪ್ರತಿಯೊಬ್ಬ ಅಧ್ಯಾಪಕರ ಕರ್ತವ್ಯವಾಗಿರುವದರಿಂದ, ಆ ಕರ್ತವ್ಯಕ್ಕನುಸರಿಸಿ, ನಾನು ನನ್ನ ಅಲ್ಪವಿಚಾರದ ಹಿಂದಿರಡು ಸೂಚನೆಗಳನ್ನು ವಿದ್ವನ್ಮಣಿಗಳಿಂದ ಅಲಂಕೃತವಾದ ಈ ಮಹಾ ಸಭೆಯ ಮುಂದೆ ಅತಿ ವಿನಯದಿಂದ ಇಡುತ್ತೇನೆ ಇದರಲ್ಲಿ ಅನೇಕ ಕುಂದು ಕೊರತೆಗಳಿರಬಹುದು. ನೀರ ಕ್ಷೀರ ಪರೀಕ್ಷೆಗೈಯ್ಯುವ ಹಂಸ ಪಕ್ಷಿಯಂತೆ ಗ್ರಾಹ್ಯಾಂಶವನ್ನಷ್ಟೇ ಸ್ವೀಕರಿಸೋಣವಾಗಿ, ಅದರಂತೆ ವ್ಯವಸ್ಥೆಯಾದೀತೆಂದು ತುಂಬಾ ನಂಬಿರುವೆನು.

ಬಾಲಿಕೆಯರ ಇಯತ್ತೆ (ಬ) ಕನ್ನಡ ಮೂಲಾಕ್ಷರಗಳನ್ನು ಓದುವದು:—

ಈ ಪದರಿನಲ್ಲಿ " ಅಂಕಲಿಪಿಯೊಳಗಿನ ೩೧ ಪಾಠಗಳನ್ನು ಓದುವದು " ಇದೊಂದು ವಿಷಯವನ್ನು ಹೆಚ್ಚಿಗೇ ಜೋಡಿಸುವದು ಉತ್ತಮ ಯಾಕಂದರೆ ಇದು ಮುಂದಿನ ೧೯೦ ಇಯತ್ತೆಯ ವಿಷಯಗಳಿಗೆ ಸಹಾಯ ಭೂತವಾಗಿರುವದು

(ಕ ೧) ಗೋಲ, ಫನ, ಕೊಳವೆ ಮುಂತಾದ ಸುಲಭ ಆಕೃತಿಗಳನ್ನು ತಿಳಿಸಿ, ತರುವಾಯ ರೇಷೆ, ಬಿಂದು, ಕೋನ ಮುಂತಾದ ಸುಲಭ ಆಕೃತಿಗಳನ್ನು ತಿಳಿಸುವದು.

ಈ ವಿಷಯವು ಇನ್ನೂ ಮಾತಾಡಲಿಕ್ಕೇ ಚೆನ್ನಾಗಿ ಬಾರದಿದ್ದಂಥ ಚಿಕ್ಕವಯಸ್ಸಿನ ಅಜ್ಞಾನ ಬಾಲಿಕೆಯರಿಗೆ ತಿಳಿಯುವದು ಹ್ಯಾಗೆ? ಚತುರರಾದ ಅಧ್ಯಾಪಕರು ಬಿಂದು ಮೇಳೆ ಪ್ರಯತ್ನದಿಂದ ಕಲಿಸಿದಾಗ್ಯೂ, ಅದೇನು ಆ ಹನ:ಮಕ್ಕಳ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲಲಾರದು. ವಿದ್ಯಾರ್ಥಿನಿಯರಿಗೆ ಕಲಿಸುವ ವಿಷಯವು ಅವರ ಬುದ್ಧಿಶಕ್ತಿಗೆ ಒಳಗಾಗಿಯೂ, ಮುಂದಿನ ಮೆಟ್ಟಿಗೆ ಅಂದರೆ ಇಯತ್ತ್ತಿಗೆ ಅನುಗುಣವಾಗಿಯೂ ಇರತಕ್ಕದ್ದೆಂಬದು, ಈಗಿನ ಇಯತ್ತ್ತಿಗಳ ತಜ್ಞನಾಕರ್ತರ ಮುಖ್ಯ ಉದ್ದೇಶವು. ಹೀಗಿದ್ದು, ಈ ಮೇಲ್ಕಂಡ ಮಾತು ಯಾವ ಪತ್ರಕ್ಕೂ ಅನುಸರಿಸಿರುವದಿಲ್ಲಾದ್ದರಿಂದ, ಇದನ್ನು ಹುಡುಗಿಯರ ಇಯತ್ತ್ತಿಯೊಳಗಿಂದ ಕಡಿಮೆಮಾಡುವದು ನ್ಯಾಯವಾಗಿ ತೋರುತ್ತದೆ,

(ಕ ಪ್ರ ೪-೫) ಯಾವಾಗಲೂ ಕಂಣಿಗೆ ಬೀಳುವ ಬಿಡವೆಗಳ ಸಂಬಂಧದ ಪಾಠಗಳು, ಸುಲಭವಾದಂಥ ಮನೋರಂಜಕವಾದಂಥ ಕಥೆಗಳು. ಸುಲಭ ಪದಗಳನ್ನೂ, ಹಾಡುಗಳನ್ನೂ ಎಲ್ಲರೂ ಕೂಡಿ ಸ್ವರಮೇಳದಿಂದ ಹಾಡುವದು. ನಾಭಿನಡುವ ಗೀತಗಳನ್ನು ಅಭಿನಯ ಸಹಿತವಾಗಿ ಅನ್ನುವದು

ಬಿಡವೆಯ ಪಾಠಗಳನ್ನೂ ನೀತಿಪರವಾದ ಸಣ್ಣ ಸಣ್ಣ ಸುಲಭ ಕಥೆಗಳನ್ನೂ, ಪದ ಹಾಡುಗಳನ್ನೂ ಕಲಿಸಲಿಕ್ಕೆ ಆಯಾ ವಿಷಯಗಳಿಂದ ಯುಕ್ತವಾದ ಬೇರೆ ಬೇರೆ ಪುಸ್ತಕಗಳು ಹೊಸದಾಗಿ ಸಿದ್ಧವಾಗುವದು ಅಗತ್ಯವು. ಇನ್ನು ಅಭಿನಯ ಪೂರ್ವಕವಾಗಿ ಗೀತಗಳನ್ನು ಕಲಿಸುವ ಪದ್ಧತಿಗೆ ಜನರು ಬಹುಶಃ ಮೆಚ್ಚಲಿಲ್ಲ. ಹಾಗು ಈ ಪರಿ ಕಲಿಸುವದರಿಂದ, ಸಂಸಾರದಲ್ಲಿ ನಮ್ಮ ಹೆಂಣುಮಕ್ಕಳಿಗಾದರೂ ದೊರೆಯತಕ್ಕ ಫಲಾಂಶವು ಯಾವದೆಂಬದು, ನನಗೆ ಗೊತ್ತಾಗಲೊಲ್ಲದು. ಅಯ್ಯಾ, ಮಹನೀಯರೇ, ಸ್ತ್ರೀ ಶಿಕ್ಷಣವು ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಮೂಲಕ, ನಾವು ಜನರ ಬಲವುಗಳಿಗನುಸರಿಸಿ ನಡೆಯಬೇಕಾಗಿದೆ. ಆದದ್ದರಿಂದ ಈ ಸ್ತ್ರೀ ಶಿಕ್ಷಣವು, ಬಿಳ್ಳಿ ಮುಪತ್ವದ್ವಾಗಿಯೂ ಬಯಸತಕ್ಕಂ

ಥಾದ್ದಾಗಿಯೂ, ದೇಶ ಸುಧಾರಣೆಗೆ ಮೂಲ ಬೀಜವಾಗಿ ಯೂ ಇರುವದೆಂಬ ಭಾವನೆಯು, ಜನರ ಮನಸ್ಸಿನಲ್ಲಿ ಹುಟ್ಟುವವರೆಗೂ ಈ ಪದ್ಧತಿಯನ್ನು ಪ್ರಚಾರದಲ್ಲಿ ತರ ಬಾರದೆಂದು ಬಾರಿಬಾರಿಗೆ ಹೇಳುತ್ತೇನೆ.

(ಕ ೬) ಬಾಲಿಕೆಯರ ಕವಾಯಿತು:—

ಕವಾಯಿತನಲ್ಲಿ ಮೇಲ್ತರದ ಕವಾಯಿತವೆಂತಲೂ, ಕಡಿ ಮೇ ತರಗ ಕವಾಯಿತವೆಂತಲೂ ಎರಡು ಭಾಗಗಳನ್ನು ಮಾಡಬಹುದು. ಮೇಲ್ತರದ ಕವಾಯಿತವೆಂದರೆ ಕಾಲೇಜ ಹಾಗೂ ಇತರ ಗಂಡುಹುಡುಗರ ಶಾಲೆಗಳಲ್ಲಿ ಕಲಿಸತಕ್ಕ ಲಘ್ಯರೀ ಕವಾಯಿತು. ಈ ಮಾದರಿಯ ಕವಾಯಿತು ನ ನ್ನ ಹೆಣ್ಣುಮಕ್ಕಳಿಗೆ ಎಷ್ಟು ಮಾತ್ರವೂ ಸಲ್ಲುವಂಥಾದ್ದಲ್ಲ. ಇವರಿಗೆ ಕಡಿಮೇ ಪ್ರತಿಯ ಕವಾಯಿತವೆಂದರೆ, ವರ್ಗದ ಹುಡುಗಿಯರೆಲ್ಲರು ಫಳಕಾಲಕ್ಕೆ ವ್ಯವಸ್ಥೆಯಿಂದ ಕೂಡ್ರು ವದು, ಬಲಗ್ಯ ಮುಂದೆ ಮಾಡುವದು, ಎಡಗ್ಯೆ ಮುಂದೆಮಾ ಡುವದು, ಎರಡೂ ಕೈಗಳನ್ನು ಬೆನ್ನೆಲೆ ಮೇಲಕ್ಕೆ ಎತ್ತು ವದು, ಬೇರೆ ಬೇರೆ ದಿಕ್ಕುಗಳ ಕಡೆಗೆ ಮೋರೆ ಮಾಡಿ ನಿ ಲ್ಲುವದು, ಇವೇ ಮುಂತಾದ ಶರೀರ ಶಕ್ತಿಯನ್ನು ಬೆಳಿಸು ವಂಥ, ಆರೋಗ್ಯತೆಯನ್ನು ಕಾಯ್ದುಕೊಳ್ಳುವಂಥ ಕಾ ರ್ಯಗಳನ್ನು ಕಲಿಸುವದೇ, ಕಡಿಮೇತರದ ಕವಾಯಿತವೆಂ ದು ಹೇಳಬಹುದು. ಇದನ್ನೇ ನಮ್ಮ ಬಾಲಿಕೆಯರಿಗೆ ಕಲಿ ಸಿದರೆ ಸಾಕೆಂದು ನನ್ನ ಬುದ್ಧಿಗೆ ತೋಚುತ್ತದೆ.

(ಕ ೭) ಕಿಂಚರಗಾರ್ಟನ ಪಾಠಗಳು:—

ಈ ಪಾಠಗಳನ್ನು, ಯಾವ ಕ್ರಮದಿಂದ ಕಲಿಸತಕ್ಕದ್ದು ಯಾವ ಯಾವ ಉಪಕರಣಗಳು ಬೇಕಾಗುವವು? ಇವೇ ಮುಂತಾದ ಸಂಗತಿಗಳನ್ನು ಸುಬೋಧವಾಗಿ ಸೂಚಿಸುವಂಥ ಒಂದು ಪುಸ್ತಕವಿರುವದು ಅಗತ್ಯವದೆ.

ಕಾಗದಗಳನ್ನು ಕತ್ತರಿಸುವದು:— ಕತ್ತರಿಯನ್ನು ಸರಿ ಯಾಗಿ ಹಿಡಿಯಲಿಕ್ಕೆ ಬಂದರೇ ಮಾತ್ರ ಕಾಗದ ಕತ್ತರಿಸಲಿ ಕ್ಕೆ ಬರಬಹುದು. ಮೊಗಲು ಬಾಯಿಗೆ ಬಾಯಿ ಕೂಡುವ ಹಾಗೆ ಕತ್ತರಿ ಹಿಡಿಯಲಿಕ್ಕೆ ಕಲಿಸುವದೇ ಸರಮ ಪ್ರಯಾಸ

ವು. ಸದ್ಯಕ್ಕೆ ೪ನೇ ಇಯತ್ತ್ತಿಯ ವಿದ್ಯಾರ್ಥಿನಿಯರಿಗೆ ಈತ್ತ್ತರಿಯನ್ನು ಸರಿಯಾಗಿ ಹಿಡಿಯಲಿಕ್ಕೆ ಎಷ್ಟು ಎಡಬಿಡು ಹರಿಯುತ್ತದೆಂಬದು ಪರೀಕ್ಷೆಯೊಳಗೆ ನಮ್ಮ ಅಧಿಕಾರಿಗಳ ದೃಷ್ಟಿಗೆ ಬಿದ್ದಿರಬಹುದು. ಹೀಗಿದ್ದ ಪಕ್ಷದಲ್ಲಿ, ವಿದ್ಯಾ ಸಂಸ್ಕಾರವು ಏನೂ ಆಗದೆ ಇದ್ದಂಥ ಅಜ್ಞಾನ ಬಾಲಿಕೆಯರಿಗೆ ಈ ಕಠಿಣ ವಿಷಯವು ಹ್ಯಾಗೆ ಬರಬೇಕು?

(ಸಶೇಷ)

ಪ್ರಕಟನೆ.

ಹಿಂದುಸ್ಥಾನದ ರಾಜರಿಗೆ ಮತ್ತು ಪ್ರಜೆಗಳಿಗೆ ಮಲಿಕಮೂ ಆರ್ಮುಮು ಕ್ವೀನರೆ ಹಿಂದ ಇವರ ಕಡೆಯಿಂದ ಬಂದಿರುವ ಪತ್ರವು:—

ಹಿಂದುಸ್ತಾನದ ರಾಜರಿಗೆ ಮತ್ತು ಪ್ರಜೆಗಳಿಗೆ:—ನನ್ನ ಪರಮಪ್ರಿಯಳಾದ ಮಾತೋಶ್ರೀಯು ಅತ್ಯಂತ ದುಃಖಕರವಾದ ಮರಣದ ಕಾರಣದಿಂದ ಬಹಳ ಪುರಾತನ ಕಾಲದಿಂದ ವಂಶಪರಂಪರೆಯಾಗಿ ನಡೆದುಬಂದಿರುವ ಪಟ್ಟವು ನನಗೆ ಈಗ ದೊರಕಿರುತ್ತದೆ. ಆದದರಿಂದ ಹಿಂದುಸ್ತಾನದ ದೇಶಿ ರಾಜ್ಯಗಳನ್ನು ಆಳುತ್ತಿರುವ ರಾಜರಿಗೆ ಮತ್ತು ಹಿಂದುಸ್ತಾನದ ನನ್ನ ರಾಜ್ಯಗಳ ನಿವಾಸಿಗಳಿಗೆ ನನ್ನ ವಂದನೆಗಳನ್ನು ಕಳುಹಿಸಿ ಅವರ ಕಲ್ಯಾಣದ ಕುರಿತು ನನಗೆ ಇರುವ ಮನಃಪೂರ್ವಕವಾದ ಇಚ್ಛೆಯ ಸಂಬಂಧ ಅವರಿಗೆ ಆಶ್ವಾಸನ ಕೊಡಬೇಕೆಂಬದಾಗಿ ನನ್ನ ಪೂರ್ಣ ಅಪೇಕ್ಷೆ ಇರುತ್ತದೆ. ನನ್ನ ಪೂರ್ವಾಧಿಕಾರಿಯಾದ ವಿಖ್ಯಾತಪಟ್ಟ ಮತ್ತು ಯಾರ ಮರಣದ ಸಂಬಂಧದಿಂದ ಈಗ ದುಃಖ ಉಂಟಾಗಿರುತ್ತಹೋ ಆ ಮಹಾರಾಣಿಯು ಇಂಗ್ಲಾಂಡಿನ ಅರಸರ ಪೈಕಿ, ಹಿಂದುಸ್ತಾನದ ರಾಜ್ಯಕಾರ್ಯವನ್ನು ಪ್ರಥಮತಃ ಸ್ವತಹಾ ಕೈಕೊಂಡವಳಾಗಿ ಆ ದೊಡ್ಡ ಸಂಸ್ಥಾನದ ರಾಜ್ಯಕಾರಭಾರಕ್ಕೂ ತನಗೂ ಈ ಪ್ರಕಾರ ಉಂಟಾಗಿರುವ ಹತ್ತರದ ಸಂಬಂಧದ ಸೌಜನ್ಯಾರ್ಥವಾಗಿ ಚಕ್ರವರ್ತಿನಿ ಎಂಬ ಬಿರುದನ್ನು ಧರಿಸಿದಳು.

ಹಿಂದುಸ್ತಾನಕ್ಕೆ ಸಂಬಂಧಪಟ್ಟ ಎಲ್ಲ ಬಾಬತುಗಳಲ್ಲಿ, ಚಕ್ರ

ವರ್ತಿನಿಯಳಾದ ಅವಳು ಎಂದೂ ಬಡಲಾಗದ ಮತ್ತು ಮನಃಪೂರ್ವಕವಾದ ಚಿಂತೆಯನ್ನು ತೋರಿಸುತ್ತಿದ್ದಳು. ಮತ್ತು ಆ ದೇಶದ ಕೋಟ್ಯಾವಧಿ ಪ್ರಜೆಗಳಿಗೆ ಅವಳ ಆಳಿಕೆಯ ಸಂಬಂಧದಿಂದಲೂ, ಮತ್ತು ಖುದ್ದು ಅವಳ ಸಂಬಂಧದಿಂದಲೂ ಎಷ್ಟು ರಾಜನಿಷ್ಠೆಯು ಮತ್ತು ಮಮತೆಯು ಇತ್ತೆಂಬ ಸಂಗತಿಯು ನನ್ನ ಗೋಚರಕ್ಕೆ ಪೂರ್ಣವಾಗಿ ಬಂದಿರುತ್ತದೆ.

ಇವರ ಈ ರಾಜನಿಷ್ಠೆಯು ಮತ್ತು ಮಮತೆಯು ಅವಳ ಚಿರಕಾಲದ ಮತ್ತು ವೈಭವದ ಆಳುನಿಕೆಯ ಕಡೆಯ ವರ್ಷಪಲ್ಲಿ ದಕ್ಷಿಣ ಆಫ್ರಿಕದ ಯುದ್ಧದಲ್ಲಿ ಹಿಂದುಸ್ಥಾನದ ದೇಶೀ ಅರಸರು ಉದಾರ ಮನಸ್ಸಿನಿಂದ ಮತ್ತು ಸ್ವದೇಶಾಭಿಮಾನದ ಬುದ್ಧಿಯಿಂದ, ಸಹಾಯ ಮಾಡಲಿಕ್ಕೆ ಸಿದ್ಧರಾದರೆಂಬ ಸಂಗತಿಯಿಂದಲೂ, ಮತ್ತು ದೇಶಿಯ ಸೈನ್ಯದವರು ಹಿಂದುಸ್ಥಾನದ ಹದ್ದಿನ ಹೊರಗೆ ಮಾಡಿರುವ ತಮ್ಮ ಪರಾಕ್ರಮದ ಕೃತ್ಯಗಳಿಂದಲೂ ಪ್ರತ್ಯಕ್ಷವಾಗಿ ಕಂಡು ಬಂತು.

ನಾನು ಹಿಂದುಸ್ಥಾನಕ್ಕೆ ಬಂದು ಆ ಭೂಖಾತನದ ಮತ್ತು ಪ್ರಖ್ಯಾತ ಪಟ್ಟಿರುವ ಸಾಮ್ರಾಜ್ಯದ ರಾಜ್ಯಭಾರ ನಡಿಸುತ್ತಿರುವ ಅರಸರ ಮತ್ತು ಜನರ ಗುರ್ತನ್ನು ಮತ್ತು ಶಹರುಗಳ ಸಂಭಂಧದ ಮಾಹಿತಿಯನ್ನು ಸ್ವತಹಾ ಪಡಕೊಂಡದ್ದು ಮಹಾರಾಣಿಯವರ ಇಚೆಯ ಮತ್ತು ಪರವಾನಿಗೆಯ ಮೇಲೆಯೇ ಆಗಿರುತ್ತದೆ.

ಆ ವೇಳೆಯಲ್ಲಿ ಅಲ್ಲಿ ನನ್ನ ಮನಸ್ಸಿನ ಮೇಲೆ ಆಗಿದ್ದ ಪರಿಣಾಮಗಳನ್ನು ನಾನು ಎಂದೂ ಮರೆಯಲಿಕ್ಕಿಲ್ಲ. ಮತ್ತು ಮೊದಲನೇ ಚಕ್ರವರ್ತಿನಿಯಳಾದ ಮಹಾರಾಣಿಯು ಹಾಕಿ ಕೊಟ್ಟಿರುವ ಅತ್ಯುತ್ತಮ ಮಾದರಿಯನ್ನು ಅನುಸರಿಸಿ, ಸಾಮಾನ್ಯವಾಗಿ ಹಿಂದುಸ್ಥಾನದ ನನ್ನ ಎಲ್ಲ ದರ್ಜೆಯ ಪ್ರಜೆಗಳ ಕಲ್ಯಾಣವಾಗುವಂತೆ, ಮತ್ತು ಮಹಾರಾಣಿಯವರಂತೆಯೇ ಆ ಪ್ರಜೆಗಳ ಅಚಲವಾದ ರಾಜನಿಷ್ಠೆಗೆ ಮತ್ತು ಮಮತೆಗೆ ಪಾತ್ರನಾಗುವಂತೆ ನಾನು ನಡೆಯಲಿಕ್ಕೆ ಪ್ರಯತ್ನಿಸುವೆನು.

ಮುಕ್ಯಾಮ ಜಂಬೆರೆ ವಿಂಡ್ಸರ, } (ಸಹಿ) ಎಡ್ವರ್ಡ ರಾ. ಮತ್ತು
ತಾ॥ ೪ನೇ ಫೆಬ್ರುವರಿ ೧೯೦೧. } ಬಾ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮಂ।
ಜಯಸುತ್ತಂ ಪ್ರತಿಭಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ಪ್ರಯರಿಂದಿತ್ತವಿಪ್ರೋದುವರ್ಗಸುಗುಣಂ ತೋರಲ್ಕೆಕೈಕೊಂಬುದೈ।
ದಯೆಯಿಂದೋಷವತಿದ್ದ ವೇಳ್ವುಣುಬುಧರ್ಜ್ಞಾನಾಭಿವೃದ್ಧಿಪ್ರಯರಿ॥೧

ಪುಸ್ತಕ ೩೭] ಮೇ ೧೯೦೧. [ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಶ್ರೀಮನ್ಮಹಾರಾಣಿ ವಿಕ್ಟೋರಿಯಾ ಚಕ್ರವರ್ತಿನಿಯವರು ಕಳೆದ ಜಾನ್ಯುಅರಿ ೨೨ನೇ ತಾರೀಖಿಗೆ ಪರಲೋಕವನ್ನೈದಿದರು ಆ ಕೂಡಲೆ ರಾಜ್ಯದ ಘನವಂತರೂ ಪ್ರಿವಿ ಕೌನ್ಸಿಲಿನ ಸಭಾಸದರೂ ಗ್ರಾಮದ ಮುಖ್ಯಸ್ಥರೂ ಲಂಡನ ಪಟ್ಟಣದ ಸಾಹುಕಾರರೂ ಒಟ್ಟಿಗೆ ಶೇರಿ ಮಹಾರಾಣಿಯವರ ಜ್ಯೇಷ್ಠಪುತ್ರರಾದ ಶ್ರೀಯುತ ಆಲ್‌ಬರ್ಟ್ ಎಡ್ವರ್ಡರು ರಾಜ್ಯಕ್ಕೆ ಬಾಧ್ಯಸ್ಥರೆಂತಲೂ ಅವರೇ ಪಟ್ಟಕ್ಕೆ ತಕ್ಕವರೆಂತಲೂ ಪ್ರಕಟಿಸಿದರು. ಆ ಪ್ರಕಟನೆಗೆ ಸರಿಯಾಗಿ ರಾಜ್ಯದ ಆಡಳಿತವನ್ನು ಸ್ವೀಕರಿಸಿ ಉಚಿತವಾದ ಅಭಿವಂದನವನ್ನು ಎಡ್ವರ್ಡ ಮಹಾರಾಜರು ಇತ್ತರು.

ಇದರ ತಾತ್ಪರ್ಯವೇನೆಂದರೆ ನಮ್ಮ ಎಡ್ವರ್ಡ ಮಹಾರಾಜರು ಕೇವಲ ಚಕ್ರವರ್ತಿನಿಯವರ ಮಕ್ಕಳೆಂದು ಪಟ್ಟಕ್ಕೆ ಬಂದರೆಂಬುದಲ್ಲ; ಅವರೆ ಪ್ರಜೆಗಳ ಅನುಮತಿಯಿಂದಲೂ ಪಟ್ಟಕ್ಕೆ ಬಂದಿರುತ್ತಾರೆ. ಇದೇ "ಇಂಗ್ಲಿಷ ಕಾನ್‌ಸ್ಟಿಟ್ಯೂಶನ್" ಎಂದರೆ ರಾಜ್ಯಸಂಸ್ಥೆಯ ಭೇದಕ ಲಕ್ಷಣವು. ಅರಸುತನವು ಅನುವಂಶಿಕ ಹಕ್ಕಿಗಿಂತ ಪ್ರಜಾನುಮತಿಯನ್ನು ಹೆಚ್ಚು ಅವಲಂಬಿಸಿರುತ್ತದೆಂಬುದೇ ಇದರ ಮರ್ಮವು.

ಮೇಲ್ಕಾಣಿಸಿದ ಪ್ರಕಟನೆ ಅಭಿವಂದನೆಗಳನ್ನು ಈ ಸಂಚಿಕೆಯಲ್ಲಿ ಭಾಷಿಸಿರುತ್ತೇವೆ.

ಸನ್ ೧೮೮೯-೯೦ನೇ ಇಸವಿಯಲ್ಲಿ ಮುಂಬೈ ಇಲಾಖೆಯ ಬೇರೆಬೇರೆ ಭಾಗಗಳಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿಯ ಶಿಕ್ಷಕರ ಸಂಖ್ಯೆಯು ಕೆಳಗೆ ಬರೆದಂತೆ ಇರುವದು

		ಟ್ರೇಂಡ ಹೆಡ್ಡ ಮಾಸ್ತರರ ಸಂಖ್ಯೆ.	ಅಂಟ್ರೇಂಡ ಹೆಡ್ಡ ಮಾಸ್ತರರ ಸಂಖ್ಯೆ.	ಟ್ರೇಂಡ ಅಸಿಸ್ಟಂಟ ಮಾಸ್ತರರ ಸಂಖ್ಯೆ	ಅಂಟ್ರೇಂಡ ಅಸಿ. ಪಬ್ಲಿಕ ಸರ್ವಿಸ ಪರೀಕ್ಷೆ ಪಾಸಾದ ಅಸಿಸ್ಟಂಟರ ಸಂಖ್ಯೆ.	ಪಬ್ಲಿಕ ಸರ್ವಿಸ ಪರೀಕ್ಷೆಯಲ್ಲಿ ಪಾಸಾಗದ ಅಸಿಸ್ಟಂಟರ ಸಂಖ್ಯೆ.	ಒಟ್ಟು ಶಿಕ್ಷಕರ ಸಂಖ್ಯೆ.
ಸಾಮಾನ್ಯ ಶಾಲೆಗಳು	ಪುರುಷ ಶಿಕ್ಷಕರು.						
	ಲೋಕಲ ಬೋರ್ಡ ...	೮೪೩	೩೧೮	೨೬೧	೫೮೨	೩೩೬	೨೪೬೪
	ಮುಂಬೈ ಶಹರ ...	೨೯	೨೪	೪೦	೬೪	೪೩	೨೦೪
	ಜೇರೆ ಮುನಸಿಪಾಲಿಟಿ ನಗಳು	೧೩೫	೪೫	೧೬೮	೨೧೩	೨೬೪	೮೨೯
	ಸಂಸ್ಥಾನಗಳು ...	೫	೧೧೬	೫	೨೦	೫೦	೧೯೬
	ಒಟ್ಟು ...	೧೦೯೬	೩೦೩	೪೩೪	೮೦೩	೬೯೩	೩೬೯೩
ಉತ್ಕೃಷ್ಟ ಶಾಲೆಗಳು	ಲೋಕಲಬೋರ್ಡ ...	೮೦೬	೩೧೪	೯೩	೯೧೫	೧೫೨	೨೨೮೦
	ಮುನಸಿಪಾಲಟಿಗಳು ...	೧೩೬	೧೩	೧೪೮	೨೬೯	೧೬೧	೭೨೧
	ಸಂಸ್ಥಾನಗಳು ...	೨೧೧	೩೦೬	೨೮	೨೨೨	೨೫೬	೧೦೨೩
	ಒಟ್ಟು ...	೧೧೪೩	೬೩೩	೨೬೯	೧೪೦೬	೫೬೯	೪೦೨೪

ಗ	ಕಾಶೆವಾಡ ಎಜನ್ಸಿ ...	೫೭೨	೨೨೩	೧೧೪	೨	೧೫೧೦	೨೪೨೨
ಪೆಟ್ಟಿಗೆ ಭಾಗ.	ಲೋಕಲಬೋರ್ಡ ...	೪೯೧	೨೪೩	೨೬೯	೬೧೭	೯೯೫	೨೩೦೯
	ಮುನಸಿಪಾಲಿಟಿಗಳು ...	೧೦೫	೪೮	೯೪	೧೯೨	೧೪೬	೫೪೫
	ಸಂಸ್ಥಾನಗಳು ...	೧೪೬	೪೨೧	೭೪	೨೯೩	೭೫೭	೧೨೨೧
	ಒಟ್ಟು ...	೧೧೪೨	೭೧೨	೪೫೧	೧೦೫೨	೭೭೪	೪೧೧೫
ಸಂಧ.	ಲೋಕಲಬೋರ್ಡ ...	೨೬೪	೫೬	೭೪	೧೫೨	೭೪	೬೦೪
	ಮುನಸಿಪಾಲಟಿಗಳು ...	೪೧	೫	೭೪	೫೬	೩೪	೨೧೦
	ಒಟ್ಟು ...	೩೦೯	೬೧	೧೪೪	೧೪೪	೧೧೨	೪೧೪
	ಇಲಾಖೆಯ ಒಟ್ಟು ಪು ೨.	೪,೧೪೨	೨೨೩೬	೧,೪೭೯	೩,೪೭೧	೩,೬೭೬	೧೫೦೭೧
	ಸ್ತ್ರೀ ಶಿಕ್ಷಕರು.						
	ಮಧ್ಯಭಾಗ ...	೪೦	೭	೪	೦	೪೭	೧೦೨
	ಉತ್ತರಭಾಗ ...	೯೨	೧೪	೪	೦	೪೭	೨೦೫
	ಕಾಶೆವಾಡ ...	೫೬	೯	೧೧	೦	೪೫	೧೬೧
	ದಕ್ಷಿಣಭಾಗ ...	೧೪	೧೬	೧೨	೩	೫೭	೧೦೬
	ಸಿಂಧ ...	೧೪	೯	೧೪	೦	೪	೪೯
	ಒಟ್ಟು ...	೨೨೪	೫೯	೫೭	೩	೨೪೪	೬೨೩
	ಇ. ಒಟ್ಟು ಶಿಕ್ಷಕರು.	೪೪೦೭	೨೭೯೫	೧೪೪೯	೩೪೫೪	೩೯೫೦	೧೫೬೬೪

ಸನ್ ೧೮೮೯-೯೦ನೇ ಇಸವಿಯಲ್ಲಿ ಮುಂಬೈ ಇಲಾಖೆಯ ಬೇರೆ ಬೇರೆ ಭಾಗಗಳಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿಯ ಶಿಕ್ಷಕರ ಸರಾಸರಿ ಪಗಾರವು ಕೆಳಗೆ ಬರೆದಂತೆ ಇರುವದು.

		ಪ್ರೋಂಡ ಹೆಡ್ಡ ಮಾಸ್ತರರ ಸರಾಸರಿ ಪಗಾರವು.			ಅಂಪ್ರೋಂಡ ಹೆಡ್ಡ ಮಾಸ್ತರರ ಸರಾಸರಿ ಪಗಾರವು.			ಪ್ರೋಂಡ ಅಸಿಸ್ಟಂಟ ಮಾಸ್ತರರ ಸರಾಸರಿ ಪಗಾರವು.			ಅಂಪ್ರೋಂಡ ಅಂದರೆ ಪಬ್ಲಿಕ ಸರ್ವಿಸ ಪರೀಕ್ಷೆಯಲ್ಲಿ ಪಾಸಾದ ಅಸಿಸ್ಟಂಟರ ಸರಾಸರಿ ಪಗಾರವು.			ಪಬ್ಲಿಕ ಸರ್ವಿಸ ಪರೀಕ್ಷೆಯಲ್ಲಿ ಪಾಸಾಗದ ಅಸಿಸ್ಟಂಟರ ಸರಾಸರಿ ಪಗಾರವು.		
	ಪುರುಷ ಶಿಕ್ಷಕರು.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.	ರೂ.	ಆ.	ಪೈ.
ಮೊದಲನೆಯ ಭಾಗ.	ಲೋಕಲ ಬೋರ್ಡ	೧೭	೧೨	೦	೯	೧೫	೯	೧೨	೮	೩	೩	೫	೪	೩	೩	೬
	ಮುಂಬೈ ಶಹರ	೨೫	೦	೦	೬೨	೮	೦	೨೦	೦	೦	೧೩	೧೩	೮	೧೦	೧೦	೧೦
	ಬೇರೆ ಮುನಸಿಪಾಲಿಟಿಗಳು	೨೪	೩	೦	೧೦	೧೩	೦	೧೦	೧೨	೦	೩	೧೦	೦	೮	೪	೪
	ಸಂಸ್ಥಾನಗಳು	೧೪	೧೩	೪	೯	೩	೦	೮	೮	೯	೩	೧೦	೫	೬	೫	೧೧
ಎರಡನೆಯ ಭಾಗ.	ಲೋಕಲಬೋರ್ಡ	೧೮	೧೩	೧೧	೧೦	೯	೬	೧೧	೧೫	೪	೩	೩	೦	೩	೩	೨
	ಮುನಸಿಪಾಲಿಟಿಗಳು	೨೮	೫	೨	೧೦	೧೫	೧೩	೧೫	೧	೨	೧೦	೧೩	೯	೬	೮	೧೧
	ಸಂಸ್ಥಾನಗಳು	೧೫	೧೪	೧೦	೧೦	೧	೧೫	೦	೦	೦	೬	೯	೮	೯	೧೪	೭
	ಕಾಠೇವಾಡ ವಿಜನ್ಸಿ	೧೪	೭	೬	೧೧	೦	೩	೬	೬	೬	೧೦	೦	೦	೪	೧೨	೦
ಮೂರನೆಯ ಭಾಗ.	ಲೋಕಲ ಬೋರ್ಡ	೧೭	೯	೪	೧೦	೨	೦	೧೨	೧೨	೧	೭	೭	೦	೭	೭	೪
	ಮುನಸಿವಲಲಿಟಿಗಳು	೨೩	೧೫	೦	೧೦	೧೪	೮	೧೩	೧೭	೭	೮	೧೦	೧೦	೯	೯	೩
	ಸಂಸ್ಥಾನಗಳು	೧೭	೨	೯	೯	೧೪	೧೨	೧೪	೧೪	೭	೮	೮	೮	೭	೭	೦

೧೦೧ ೯

ಪು-ಸಂ	ಲೋಕಲಬೋರ್ಡ	...	೨೭	೧೨	೬	೧೧	೯೩	೭	೧೯	೨	೬	೯	೫	೦	೯	೮	೧೧		
	ಮುನಸಿಪಾಲಿಟಿಗಳು	...	೩೬	೧೦	೫	೨೬	೦	೮	೯೯	೧೨	೩	೧೦	೧೨	೮	೧೦	೧೦	೨		
ಮುಸ್ಲಿಮ್ಮರಿಗೆ.	ಸ್ತ್ರೀ ಶಿಕ್ಷಕರು.																		
	ಲೋಕಲಬೋರ್ಡ	...	೨೩	೯೪	೯	೯೦	೦	೦	೬	೦	೦	೦	೦	೦	೬	೫	೪		
	ಮುಂಬೈ ಶಹರ	...	೩೧	೨	೮	೨೮	೮	೦	೨೦	೦	೦	೦	೦	೦	೧೦	೧೦	೬		
	ಬೇರೆ ಮುನಸಿಪಾಲಿಟಿಗಳು		೨೧	೩	೮	೧೦	೦	೮	೧೫	೦	೦	೦	೦	೦	೩	೮	೦		
	ಸಂಸ್ಥಾನಗಳು	...	೦	೦	೦	೧೦	೦	೦	೦	೦	೦	೦	೦	೦	೦	೮	೦		
ಕೊಂಕಣಿ ಮುಸ್ಲಿಮ್ಮರಿಗೆ.	ಲೋಕಲಬೋರ್ಡ	...	೨೦	೮	೧೧	೧೦	೦	೦	೮	೦	೦	೦	೦	೮	೩	೦	೦		
	ಮುನಸಿಪಾಲಿಟಿಗಳು	...	೨೨	೧	೫	೧೦	೦	೦	೧೦	೦	೦	೦	೦	೦	೬	೩	೯		
	ಸಂಸ್ಥಾನಗಳು	...	೨೧	೧೪	೩	೯	೧೦	೮	೧೧	೩	೮	೦	೦	೦	೬	೨	೧		
	ಕಾಠೇವಾಡ ಏಜನ್ಸಿ	...	೧೬	೧೨	೮	೯	೧೧	೫೧	೧೪	೦	೧೮	೦	೦	೦	೪	೯	೫		
ಪಿಂಜಾರಿ ಮುಸ್ಲಿಮ್ಮರಿಗೆ.	ಲೋಕಲಬೋರ್ಡ	..	೧೩	೮	೪	೧೦	೦	೬	೦	೦	೮	೮	೦	೦	೩	೦	೦		
	ಮುನಸಿಪಾಲಿಟಿಗಳು	...	೧೩	೧೪	೩	೧೪	೪	೮	೧೩	೮	೦	೦	೦	೦	೩	೩	೫		
	ಸಂಸ್ಥಾನಗಳು	...	೨೧	೯	೩	೧೩	೫೫	೧೦	೧೦	೧೪	೦	೫	೮	೦	೫೫	೧೩	೫		
ಸಂಘ-ಸಂ	ಲೋಕಲಬೋರ್ಡ	...	೨೮	೦	೦	೧೦	೦	೦	೨೦	೦	೦	೦	೦	೦	೧೨	೦	೦		
	ಮುನಸಿಪಾಲಿಟಿಗಳು	...	೨೪	೯	೦	೧೪	೧೩	೯	೧೩	೯	೧೦	೦	೦	೦	೮	೧೪	೮		

ಶ್ರೀಮದ್ವಿಕ್ಟೋರಿಯಾ ಚಕ್ರವರ್ತಿನಿಯವರು

(೧೪೩೯ ಪುಟದಿಂದ ಮುಂದೆ ಸಾಗಿದ್ದು.)

ಆಡಳಿತವು.

ಇಂಗ್ಲಂಡದಂಥ ನಿಯತಸತ್ತಾತ್ಮಕ ರಾಜ್ಯವನ್ನಾಳುವದು ಜಗುರಾದ ಮಾತಲ್ಲ ಪಾರ್ಲಿಮೆಂತಿನಲ್ಲಿರುವ ಎರಡು ಬಣ ದವರಲ್ಲಿ ಯಾವ ಪಕ್ಷವು ಬಲವಾಗುವದೋ ಆ ಪಕ್ಷದವರ ಕೈಯಲ್ಲಿ ರಾಜ್ಯಕಾರಭಾರವು ಬರುತ್ತದೆ. ಈ ಎರಡು ಬಣದವರ ಮತಗಳು ಅಂದರೆ ಕಾರಭಾರದ ಪದ್ಧತಿಗಳು ಬೇರೆ ಬೇರೆ ಇರುತ್ತವೆ. ರಾಣಿಯವರು ಸಟ್ಟಕ್ಕೆ ಕೂತ ತಂದಿನಿಂದ ಮೆಲ್ಲಬೋರ್ನ್, ಪೀಲ, ರಸೆಲ, ಡರ್ಬಿ, ಆಬರ್ಡೀನ, ಪಾಮರಸ್ಟನ, ಡಿಝ್ರಾಯಿಲಿ, ಗ್ಲಾಡಸ್ಟನ್, ರೋಜಬರಿ, ಸಾಲಿಸಬರಿ ಮುಂತಾದ ಒಟ್ಟು ೧೦ ಮಂದಿ ಮಂತ್ರಿಗಳಾಗಿ ಹೋದರು. ಇವರಲ್ಲಿ ಹಲವರು ಎರಡೆರಡು ಮೂರು ಮೂರು ಸಾರಿ ಶಿರಃಪ್ರಧಾನರಾಗಿದ್ದರು. ಪತಿ ವಿಯೋಗದ ನಂತರ ರಾಣಿಯವರಿಗೆ ಯೋಗ್ಯವಾದ ಆಪ್ತಾಲೋಚನೆಯನ್ನು ಹೇಳುವಂಥ ನಂಬಿಗೆಯವರು ಯಾರೂ ಉಳಿಯಲಿಲ್ಲ. ಇಂಥ ಪ್ರಸಂಗದಲ್ಲಿ ಎರಡೂ ಬಣದವರಿಗೂ ಸರಿಬೀಳುವಂತೆಯೂ ಪ್ರಜಾಕ್ಷೇಮವು ಹೆಚ್ಚುವಂತೆಯೂ ಕಾರಭಾರವನ್ನು ಸಾಗಿಸಿದರು. ಈ ಸಂಗತಿಯನ್ನು ನಾ, ನೀ ಎಂದು ಎದೆ ತಟ್ಟಿಕೊಳ್ಳುವ ಅರಸರೆಲ್ಲರು ಲಕ್ಷ್ಯದಲ್ಲಿಡತಕ್ಕದ್ದೆಂದು ಸಾರಿ ಹೇಳುತ್ತೇವೆ. ಇವರ ಆಳಿಕೆಯಲ್ಲಿ ಇವರ ಸಾಮ್ರಾಜ್ಯವು ಐದೂ ಖಂಡಗಳಲ್ಲಿ ಹಬ್ಬಿರುವದೂ ವಿದ್ಯೆ, ನ್ಯಾಯಶೋಧ ಮುಂತಾದವುಗಳು ವೃದ್ಧಿ ಹೊಂದಿರುವದೂ ಎಲ್ಲರಿಗೂ ಗೊತ್ತುಂಟು. ಕೊಲೆ, ಸುಲಿಗೆ, ಕಡಿದಾಟ ಮುಂತಾದ ಕೀಳ ಕೆಲಸಗಳು ಕಮ್ಮಾಯವಾಗಿ ಸಾಮ್ರಾಜ್ಯದಲ್ಲೆಲ್ಲ ಸುಖಶಾಂತಿಗಳು ನೆಲೆಗೊಂಡು ವಿದ್ಯಾಕಲಾಕೌಶಲ್ಯಗಳು ವರ್ಧನವಾಗಿ ಪ್ರಜೆಗಳೆಲ್ಲ ಆನಂದದಲ್ಲಿ ಬಾಳಿರಬೇಕೆಂಬದೇ ಇವರ ಕಾರಭಾರದ ಮುಖ್ಯ ಧೋರಣವಿತ್ತೆಂದು ಹೇಳಬಹುದು. ಇದೇ ತತ್ವವನ್ನವಲಂಬಿಸಿ ಫ್ರಾನ್ಸ, ತುರ್ಕ

ಸ್ಥಾನ, ಇತಲಿ, ಆಸ್ಟ್ರಿಯ ಮುಂತಾದ ರಾಷ್ಟ್ರಗಳಿಂಗೆ ತಲೆ ದೋರಿದ ರಾಜಕಾರಣಗಳಲ್ಲಿ ತಮ್ಮ ದೇಶವನ್ನು ಎಂದೂ ಅಡಕಗೊಡಲಿಲ್ಲ. ಇಷ್ಟೇ ಅಲ್ಲ, ಪ್ರಧಾನರಿಗೆಲ್ಲ ಈ ತತ್ವ ದಂತೆಯೇ ಕಾರಭಾರವನ್ನು ಸಾಗಿಸಬೇಕೆಂದು ಆಗಾಗ್ಗೆ ಉಪದೇಶ ಮಾಡುತ್ತಿದ್ದರು. ಈ ಮಹಾರಾಣಿಯವರು ಸರ್ ಥಾಮಸ್ ರಲ್ಲಿ ಹಿಂದುಸ್ಥಾನದ ರಾಜ್ಯಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು. ಆ ಕಾಲದಲ್ಲಿ ಪ್ರಕಟಿಸಿದ ಜಾಹೀರನಾಮೆಯಿಂದ ಇವರ ಮನಸ್ಸಿನ ಔದಾರ್ಯವೂ ಕಳ್ಕುಲತೆಯೂ ಸರಸಾಗಿ ವ್ಯಕ್ತವಾಗುತ್ತವೆ. ಈ ಜಾಹೀರನಾಮೆಯ ಮಸೂದೆಯನ್ನು ಬರೆದು ಅಗಿನ ಮುಖ್ಯ ಮಂತ್ರಿಯಾದ ಡಬಿರ್ ಧೊರೆಯು ರಾಣಿಯವರಿಗೆ ತೋರಿಸಲು ರಾಣಿಯವರು ಅದರೊಳಗಿನ "ಹಿಂದುಸ್ಥಾನದೊಳಗಿನ ಪ್ರಜೆಗಳ ನಡೆನುಡಿಗಳಲ್ಲಿಯಾ ಧರ್ಮದಲ್ಲಿಯೂ ಅದಲು ಬದಲು ಮಾಡುವ ಅಧಿಕಾರವು ರಾಣಿಯವರಿಗುಂಟು" ಎಂಬ ವಾಕ್ಯವನ್ನು ನೋಡಿ, ಆ ಮಸೂದೆಯನ್ನು ಪ್ರಧಾನರ ಕಡೆಗೆ ತಿರಿಗಿ ಕಳಿಸಿದರು. ಮತ್ತು ಪ್ರಧಾನರಿಗೆ ಜಾಹೀರನಾಮೆಯಲ್ಲಿ ಬರೆಯಬೇಕಾದ ತಮ್ಮ ಮನೋಭಿಪ್ರಾಯವನ್ನು ಸಹ ಪತ್ರಮುಖದಿಂದ ಸೂಚಿಸಿದರು. ಆ ಪತ್ರದ ಸಾರಾಂಶವು— "ಭಯಂಕರವಾದ ಬಿಂಡಾಯದ ಹಾವಳಿಯನ್ನು ಮುರಿದು ಕೋಟ್ಯಾವಧಿ ಜನರನ್ನಾಳುವ ಅರಸಿಯ ಕಾರಭಾರದ ಧೋರಣವನ್ನೂ ಕೆಲವು ಕಾಲದಲ್ಲಿ ಲಿಕೆಯು ತನ್ನ ಕೈಕೆಳಗಿನ ಅಧಿಕಾರಿಗಳಿಂದ ನೆರವೇರಿಸಲ್ಪಡುವ ಪ್ರಜಾಹಿತದ ಸಂಗತಿಗಳನ್ನೂ ರಾಣಿಯವರ ರಾಜ್ಯದಿಂದುಂಟಾಗುವ ಭೂವೀ ಸುಖಗಳನ್ನೂ ವ್ಯಕ್ತಪಡಿಸುವಂಥ ಲೇಖವನ್ನು ಪ್ರಧಾನರು ಬರೆದು ಕಳಿಸಬೇಕು. ಸಾರಾಂತ, ಈ ಜಾಹೀರನಾಮೆಯು ಕ್ಷೇಮ, ಔದಾರ್ಯ, ನಿರ್ಮಲಾಂತಃಕರಣ ಪರೋಪಕಾರಬುದ್ಧಿ, ಅಭಿವಚನಗಳಿಂದ ತುಂಬಿರಬೇಕು. ಹೆದರಿಕೆಯನ್ನು ಹುಟ್ಟಿಸುವಂಥ, ಅವಿಶ್ವಾಸವನ್ನು ತೋರಿಸುವಂಥ, ಅಪ್ರೀತಿಯನ್ನು ಪ್ರಕಟಿಸುವಂಥ ಬಿರುನುಡಿಗಳನ್ನು ಎಷ್ಟುಮಾತ್ರಕ್ಕೂ ಇದರಲ್ಲಿ ಸೇರಗೊಡಬಾರದು."

ಈ ಪತ್ರವನ್ನು ಓದಿದ ಕೂಡಲೆ ಡರ್ಬಿ ಧೊರೆಯು ಫಕ್ಕನೆ ಕಣ್ಣೀರೆದು ರಾಣಿಯವರ ಮನೋಗತವನ್ನರಿತು ಅದಕ್ಕನುಸಾರವಾಗಿಯೇ ಜಾಹೀರನಾಮೆಯ ಮಸೂದೆಯನ್ನು ಬರೆದು ತಂದರು. ಆದರೆ ರಾಣಿಯವರು ಅದರ ಕುಡವಲ್ಲಿ "ಸರ್ವತ್ರಾಣಿಯೂದ ಪರಮೇಶ್ವರನು ಯಾವಾಗಲೂ ರೈತರ ಕಲ್ಯಾಣವನ್ನು ಮಾಡುವದಕ್ಕೆ ನಮಗೆ ಬುದ್ಧಿಯನ್ನೂ ಸಾಮರ್ಥ್ಯವನ್ನೂ ಕೊಡಲಿ" ಎಂಬ ವಾಕ್ಯವನ್ನು ತಮ್ಮ ಕೈಯಿಂದ ಬರೆದು ರುಜು ಮಾಡಿದರು. ಹಳ್ಳೀ ಐದನೇ ಪ್ರಸ್ತಾವದಲ್ಲಿ ಈ ಜಾಹೀರನಾಮೆಯ ಭಾಷಾಂತರವು ಬರೆಯಲ್ಪಟ್ಟಿದೆ. ಬೇಕಾದವರು ಓದಿಕೊಳ್ಳಬಹುದು. ರಾಣಿಯವರು ಬಹುತರವಾಗಿ ಜಾಹೀರನಾಮೆಯಲ್ಲಿ ಮಾತು ಕೊಟ್ಟಂತೆ ಕಾರಭಾರವನ್ನು ಸಾಗಿಸಿದರೆಂಬದು ಕಣ್ಣೆದುರಿಗೇ ಉಂಟು. ಜಾಹೀರನಾಮೆಯೊಳಗಿನ ಉಳಿದ ಸಂಗತಿಗಳಾದರೂ ಈ ಮಹಾರಾಣಿಯವರು ಬದುಕಿದ್ದರೆ ನಮಗೆ ಸ್ವಲ್ಪ ದಿವಸದೊಳಗೇ ದೊರಕುತ್ತಿದ್ದವು. ಆದರೆ ನಮ್ಮ ದುರ್ದೈವವು ಕೈಗೆ ಬಂದ ತುತ್ತನ್ನು ಬಾಯಿಗೆ ಬರಗೊಡಲಿಲ್ಲ ಉಪಾಯವಿಲ್ಲ. ಈಗಿನ ಬಾದಶಹರು ತಮ್ಮ ಮಾತೋಶ್ರೀಯವರ ವಚನವನ್ನು ಪೂರ್ತಿಸುವರೆಂದು ತುಂಬಾ ನಂಬುತ್ತೇವೆ. ಪ್ರಸ್ತುತದಲ್ಲಿ ಇಂಗ್ಲಂಡಕ್ಕೆ ಬಂದ ದೊಡ್ಡ ಸ್ಥಿತಿ, ಸಿರಿ, ಬಲ, ಜಳಕು ಮುಂತಾದವುಗಳೆಲ್ಲ ಇವರ ಸದಾಚಾರ, ಸದ್ವಿವೇಕಗಳಿಂದಲೇ ಎಂದು ನಿಶ್ಚಯವಾಗಿ ಹೇಳಬಹುದು. ಇವರ ಕಾಲದಲ್ಲಿ ಇಂಗ್ಲಂಡವು ಕೈಕೊಂಡ ಯಾವ ಸಂಗತಿಯಲ್ಲಾದರೂ ಯಶವು ತಪ್ಪದೆ ಬರುತ್ತಿತ್ತು. ೧೮೫೪ರಲ್ಲಿ ಬ್ರಿತಿಶ ಸಾಮ್ರಾಜ್ಯದ ಕ್ಷೇತ್ರವು ೪೧,೮೯೦೦೦ ಚ. ಮೈಲು ಇತ್ತು. ರಾಣಿಯವರ ಆಳಿಕೆಯಲ್ಲಿ ೫೦ ಲಕ್ಷ ಚ. ಮೈಲು ಪ್ರದೇಶವು ಸಾಮ್ರಾಜ್ಯಕ್ಕೆ ಕೂಡಿಸಲ್ಪಟ್ಟಿತು ಅಂದರೆ ಇವರ ಆಳಿಕೆಯು ಆರಂಭದಲ್ಲಿ ಭೂಗೋಲದ ೫ನೇ ಪಾಲಷ್ಟು ಪ್ರದೇಶವು ಬ್ರಿತಿಶ ಸಾಮ್ರಾಜ್ಯಕ್ಕೆ ಅಧೀನವಾಗಿತ್ತೆಂತಲೂ, ಈಗ ೫ನೇ ಪಾಲಷ್ಟು ಅಧೀನವಾಗಿದುವದೆಂತಲೂ ರಾಣಿಯವರ ಆಳಿಕೆಯಲ್ಲಿ ತಾನಿಗೆ

ಎರಡು ಎಕರೆಯಂತೆ ನೆಲವು ಜಂಯಿಸಲ್ಪಟ್ಟಿತೆಂತಲೂ ಸ್ಪಷ್ಟವಾಗುತ್ತದೆ. ಉತ್ಪನ್ನವಾದರೂ ಅದೇ ಪ್ರಮಾಣದಿಂದಲೇ ಬೆಳೆದಿರುವದು, ಮೊದಲು ೭೫ ಕೋಟಿ ರೂಪಾಯಿ ಉತ್ಪನ್ನವಿತ್ತು. ಈಗ ೧೦೦ ಕೋಟಿ ರೂಪಾಯಿಯಾಗಿರುತ್ತದೆ ಸೈನ್ಯವು ಇಮ್ಮಡಿಯಾಗಿದೆ. ಹಡಗುಪಡೆಯು ನಾಲ್ಕಷ್ಟಾಗಿದೆ. ಕಡಲಲ್ಲಿ ನಡೆದಾಡುವ ೧೦೦ ಹಡಗಗಳಲ್ಲಿ ೭೦ ಹಡಗುಗಳ ತುದಿಯಲ್ಲಿ ಇಂಗ್ಲಂಡದ ನಿಶಾನಿಗಳು ಹಂಗೊಳಿಸುತ್ತವೆ. ಸದ್ಯಕ್ಕೆ ರಾಣಿಯುವರ ಸಾಮ್ರಾಜ್ಯದಲ್ಲಿ ಒಂದು ಖಂಡವೂ, ನೂರು ದ್ವೀಪಕಲ್ಪಗಳೂ, ಐನೂರು ಭೂಶಿರಗಳೂ, ಒಂದು ಸಾವಿರ ಸರೋವರಗಳೂ, ಎರಡು ಸಾವಿರ ನದಿಗಳೂ, ಹತ್ತು ಸಾವಿರ ನಡುಗಡ್ಡೆಗಳೂ ಇರುತ್ತವೆ. ಬ್ರಿಟಿಷ್ ಸಾಮ್ರಾಜ್ಯವು ಫ್ರಾನ್ಸಿನ ೫೭ ಪಾಲಷ್ಟು, ಜರ್ಮನಿಯ ೫೦ ಪಾಲಷ್ಟು, ಯುರೋಪಖಂಡದ ಮೂರು ಪಾಲಷ್ಟು ವಿಸ್ತಾರವಾಗಿರುವದು ಬಹಳ ಹೇಳುವದೇನು? ಇಡೀ ಭೂಮಂಡಲದೊಳಗಿನ ೫ನೇ ಪಾಲಷ್ಟು ಪ್ರಜೆಗಳು ಇಂಗ್ಲಂಡದ ಅಧಿಕಾರಕ್ಕೊಳಪಟ್ಟಿರುತ್ತಾರೆಂದರೆ ಅತಿಕಯೋಕ್ತಿಯಾಗದು. ಇದರಿಂದ ವಿಕ್ಟೋರಿಯಾ ಮಹಾರಾಣಿಯವರು ಬ್ರಿಟಿಷ್ ಸಾಮ್ರಾಜ್ಯದ ಬರೀ ಚಕ್ರವರ್ತಿನಿಯಾಗಿರದೆ ಅಧಿದೈವತವಾಗಿದ್ದರೆಂದು ಹೇಳಲಿಕ್ಕೆ ಅಡ್ಡಿ ಇಲ್ಲ.

(ಸಶೇಷ)

CHEMISTRY.

ರಸಾಯನಶಾಸ್ತ್ರ.

(೧೧ ನೇ ಪುಟದಿಂದ ಮುಂದೆ ಸಾಗಿದ್ದು.)

೫೮. ಪೊಟ್ಯಾಸಿಯಮ್— ಇದು ಪೊಟ್ಯಾಶವೆಂಬ ತ್ರೀಷ್ಣ ಕ್ಷಾರದಲ್ಲಿಯೂ ಅದರಿಂದ ಹುಟ್ಟಿದ ಇತರ ಕ್ಷಾರಗಳಲ್ಲಿಯೂ ಇರುತ್ತದೆ. ಇದರದೊಂದು ಸಣ್ಣ ತುಂಡನ್ನು ನೀರೊಳಗೆ ಚೆಲ್ಲಲು, ಇದು ನೀರೊಳಗಿನ ಆಕ್ಸಿಜನ್ನಮೆಡನೆ ಭರದಿಂದ ಸಂಯೋಗವಾಗಿ ಹೈದ್ರೋಜನ್ನವನ್ನು ಬೇರ್ಪಡಿಸುತ್ತದೆ. ಈ ಬೇರೆಯಾದ ವಾಯುವು ಕಿರಮುಂಜಿ

ಬಣ್ಣದ ಜ್ವಾಲೆಯಿಂದ ಉರಿಯುವದು. ಈ ಧಾತುವು ವನಸ್ಪತಿಗಳ ಬೂದಿಯಲ್ಲಿಯೂ ಇರುವದು. ಪಾಟ್ (ಪಾತ್ರೆ) ಆ್ಯಶ್ (ಬೂದಿ) ಅಂದರೆ ಇಟ್ಟಿಗೆಯ ಬೂದಿಯೆನ್ನು ಪಾತ್ರೆಯಲ್ಲಿ ಹಾಕಿ ಕುಜ್ಜಿವದರಿಂದ ಈ ಧಾತುವು ಉತ್ಪನ್ನವಾಗುವ ಕಾರಣ ಇದಕ್ಕೆ ಪೊಟ್ಯಾಶವೆಂಬ ಹೆಸರು ಬಂದದೆ. ಈ ಧಾತುವಿನ ಉಪಯುಕ್ತ ಕ್ಷಾರಗಳು ಅನೇಕ ಉಂಟು. ಸೋಡಾ ಪೊಟ್ಯಾಶಗಳು ಸಬಲ ಕ್ಷಾರಗಳಲ್ಲಿ ಎಣಿಸಲ್ಪಡುತ್ತವೆ.

ಪ್ರಚಲಿತನಾಮಗಳು	ರಾಸಾಯನಿಕನಾಮಗಳು	ಘಟಕಗಳು
ಪೊಟ್ಯಾಶ	ಪೊಟ್ಯಾಸಿಯಂ ಕಾರ್ಬೋನೇಟ	ಪೊಟ್ಯಾಸಿಯಂ ಮತ್ತು ಕಾರ್ಬಾನಿಕ ಆಸಿಡ.
ಸೋರುಪ್ಪು ಅಥವಾ ಸೂರ್ಯಕ್ಷಾರ	ಪೋಟ್ಯಾಸಿಯಂ ನೈಟ್ರೇಟ	ಪೊಟ್ಯಾಸಿಯಂ ಹಾಗು ನೈಟ್ರಿಕ ಆಸಿಡ
ಕ್ಲೋರೇಟ ಆಫ್ ಪೊಟ್ಯಾಶ	ಪೊಟ್ಯಾಸಿಯಂ ಆಫ್ ಕ್ಲೋರಾಯಿಟ	ಪೊಟ್ಯಾಸಿಯಂ ಹಾಗು ಕ್ಲೋರಿನ ಮತ್ತು ಆಕ್ಸಿಜನ.

ಪ್ರಯೋಗ ೪೯—ಯಾವದೊಂದು ತರದ ವನಸ್ಪತಿಜನ್ಯ ತೈಲದಲ್ಲಿ ಅಥವಾ ಪ್ರಾಣಿಗಳ ಸೆಣಿದಲ್ಲಿ ಸಬಲ ಕ್ಷಾರಗಳಾದ ಹಪ್ಪಳಕಾರ ಇಲ್ಲವೆ ಪೊಟ್ಯಾಶ ಎಂಬ ಕ್ಷಾರಗಳನ್ನು ಕುದಿಸಿ ಸಬಕಾರವನ್ನು ಮಾಡುತ್ತಾರೆ. ಸೋಡಾ ಅಥವಾ ಹಪ್ಪಳಕಾರದಿಂದ ಮಾಡಿದ ಸಬಕಾರವು ಬಿರುಸಾಗಿಯೂ, ಪೊಟ್ಯಾಶ ಎಂಬ ಕ್ಷಾರದಿಂದ ಮಾಡಿದ ಸಬಕಾರವು ಮಿದುವಾಗಿಯೂ ಇರುವದು. ವಿಲಾಯತಿಯಲ್ಲಿ ವಾಡಿಕೆಯಾಗಿ ಸಬಲ ಕ್ಷಾರಗಳನ್ನು ಸೆಣಿದಲ್ಲಿ ಕುದಿಸಿ ಸಬಕಾರವನ್ನು ಮಾಡುತ್ತಾರೆ. ಸುಮಾರು ಅರ್ಧ ಪೌಂಸಿನಷ್ಟು ಕೊಬ್ಬರಿಣ್ಣೆಯನ್ನು ಒಂದು ತೆಳ್ಳನ್ನ ಪಾತ್ರೆಯಲ್ಲಿ ಹಾಕಿ ಮೇಲೆ ತುಸು ಬಿಸಿನೀರು ಹನಿಸು. ಬಳಿಕ ಅದರಲ್ಲಿ ತುಸು ಪೊಟ್ಯಾಶವನ್ನು ಹಾಕಿ ಕುದಿಸು. ಬಳಿಕ ತುಸು ಹೊತ್ತಿನಲ್ಲಿ ಎಣ್ಣೆಯಿ

ಲ್ಲ ಇಲ್ಲದಂತಾಗಿ ಸಬಕಾರವು ನೀರೊಳಗೆ ಕರಗಿ ನಿಲ್ಲುವದು. ಆ ಮಿಶ್ರಣವನ್ನು ಹಾಗೇ ಕುದಿಯಬಿಟ್ಟು ಅದರೊಳಗೆ ಅರ್ಧ ಮುಷ್ಟಿಯಷ್ಟು ಉಪ್ಪು ಹಾಕು. ಉಪ್ಪು ನೀರೊಳಗೆ ಕರಗಿ ನಿಲ್ಲುವದು, ಸಬಕಾರವು ತೇಲುವದು. ಬಳಿಕ ಪಾತ್ರೆಯನ್ನು ಕೆಳಗಿಳಿಸಿ ಆರಿದ ಮೇಲೆ ಸಬಕಾರವನ್ನು ತಕ್ಕೊ. ಇದು ಈಗ ಬಾಜಾರದೊಳಗಿನ ಸಬಕಾರದಂತೆ ಎಲ್ಲ ಕೆಲಸಕ್ಕು ಬರುತ್ತದೆ. ಬೇಕಾದ ಎಣ್ಣೆಯಿಂದ ಅಥವಾ ನೆಣದಿಂದ ಸಬಕಾರವನ್ನು ಮಾಡಬಹುದು. ಆದರೆ ಬೊಡ್ಲೆಣ್ಣೆಯಿಂದ ಮಾಡಲಿಕ್ಕೆ ದಾವತಿ ಕಡಿಮೆ ಹತ್ತುವದು ಆದ್ದರಿಂದ ನಾವು ಪ್ರಯೋಗದಲ್ಲಿ ಅದನ್ನೇ ಉಪಯೋಗಿಸಿದ್ದೇವೆ. ಇನ್ನು ಹೆಚ್ಚು ಉಪಯುಕ್ತವಾದಂಥ ಬೆಲೆಯುಳ್ಳ ಧಾತುಗಳ ವಿಷಯವಾಗಿ ಆಲೋಚಿಸುವ.

೨೧ ನೇ ಪಾಠ.

ಧಾತುಗಳು.

ತಾಮ್ರವು ನಸುಗೆಂಪು ಬಣ್ಣದ ಧಾತು. ಇದರಿಂದ ಹಂಡೆ, ಕೊಡ, ಬೋಗೋಣಿ ಮುಂತಾದ ಪಾತ್ರೆಗಳಾಗುತ್ತವೆ. ತಾಮ್ರದ ತಂತಿಯು ಮಿದುವಾಯೂ ಜಿಗಟಾಗಿಯೂ ಇರುವದರಿಂದ ಬಹಳ ಕೆಲಸಕ್ಕೆ ಬರುತ್ತದೆ. ಈ ಧಾತುವು ಬಹು ತರವಾಗಿ ಅಶೋಧಿತ ಸ್ಥಿತಿಯಲ್ಲಿಯೇ ದೊರಿಯುತ್ತದೆ. ಆದರೆ ಬಹ್ಮೊಮ್ಮೆ ಶುದ್ಧ ತಾಮ್ರದ ತುಂಡುಗಳನ್ನೂ ಸಂಗ್ರಹಿಸಬಹುದು. ಹಿಂದೆ ೫ ನೇ ಪ್ರಯೋಗದಲ್ಲಿ ನಾವು ತಾಮ್ರಗಂಧಕಗಳನ್ನು ಮಿಶ್ರಮಾಡಿಲ್ಲವೇ? ಪಾಡಿಕೆಯಾಗಿ ತಾಮ್ರವು ಅನೇ ರೂಪದಿಂದಲೇ ದೊರಿಯುತ್ತದೆ. ಆ ಮಿಶ್ರಣದೊಳಗಿನ ಗಂಧಕವನ್ನು ಬೇರೆ ಮಾಡಿದರೆ ಶುದ್ಧ ತಾಮ್ರವು ಉಳಿಯುತ್ತದೆ.

ತಾಮ್ರವು ಬೇರೆ ಧಾತುಗಳೊಡನೆ ಮಿಶ್ರವಾಗುವದರಿಂದ ಹಿತ್ತಾಳೆಯೂ ಕಂಚೂ ಎಂಬ ಹೊಸ ಮಿಶ್ರ ಧಾತುಗಳು ಉತ್ಪನ್ನವಾಗುತ್ತವೆ ಇದನ್ನು ಹವೆಯಲ್ಲಿ ಕಾಸಿದರೆ ಕರೇ ಬಣ್ಣದ ಜಂಗು ಹುಟ್ಟುತ್ತದೆ ಅದನ್ನು ಹಾಗೇ ಬಹಳ ಹೊತ್ತಿನ ವರೆಗೆ ಕಾಸುತ್ತ ನಡೆದರೆ ಹವೆಯೊಳಗಿನ ಆಕ್ಸಿಜನವು ತಾಮ್ರದೊಡನೆ ಸಂಯೋಗವಾಗಿ ಬ್ಲ್ಯಾಕ್ ಆಕ್ಸಾಯಿ

ಕ್ ಆಫ್ ಕಾಪರ್ ಅಥವಾ ತಾಮ್ರದ ಕರೇ ಜಂಗು ಎಂಬ ಪದಾರ್ಥದ ಸಣ್ಣ ಸಣ್ಣ ತುಂಡುಗಳಾಗುತ್ತವೆ. ಹಿಂದೆ ೬೦ನೇ ಪ್ರಯೋಗದಲ್ಲಿ ಉಪಯೋಗಿಸಿದ ಜಂಗು ಇದೇ

ಪ್ರಯೋಗ ೫೧೦—ತಾಮ್ರದ ಬಿಂದೆರಡು ಸಣ್ಣ ಚೂರುಗಳನ್ನು ತಕ್ಕೊಂಡು ಅದರ ಮೇಲೆ ನೈತ್ರಿಕ ಆಸಿಡದ ಎರಡು ಮೂರು ಹನಿಗಳನ್ನು ಬಿಡಲಾಗಿ ದಟ್ಟವಾದ ಬಿಳಿಗೆಂಪು ಹೊಗೆಯು ಹೊರಡಹತ್ತುತ್ತದೆ ಆ ಸಮಯದಲ್ಲಿ ತುಸು ನೀರನ್ನು ಅದರಲ್ಲಿ ಸುರುವಿದರೆ ನೈತ್ರಿಕ್ ಎಂಬ ನೀಲದ್ರವವು ಉತ್ಪನ್ನವಾಗುತ್ತದೆ. ತಾಮ್ರವು ಆಕ್ಸಿಜನ್‌ದೊಡನೆಯೂ ನೈತ್ರಿಕ ಆಸಿಡ್‌ದೊಡನೆಯೂ ಸಂಯೋಗವಾದ್ದರಿಂದ ಈ ವರ್ಣವು ಉಂಟಾಗಿದೆ. ಶುದ್ಧನೀರಿನಿಂದ ತುಂಬಿದ ಬಾಟಲಿಯಲ್ಲಿ ಈ ದ್ರವದ ಬಿಂದು ಹನಿಯನ್ನೂ ಅಮೋನಿಯಾ ಎಂಬ ಪದಾರ್ಥವನ್ನೂ ಹಾಕಿದರೆ ಆ ನೀರೆಲ್ಲ ನೀಲವರ್ಣವಾಗುತ್ತದೆ. ಈ ಕೃತಿಯಿಂದ ಸುಲಭವಾಗಿ ತಾಮ್ರವನ್ನು ಪರೀಕ್ಷಿಸಬಹುದು ೫೨೨ನೇ ಪ್ರಯೋಗದಲ್ಲಿ ವರ್ಣಿಸಿದ ತುತ್ಥವು ತಾಮ್ರ ಗಂಧಕಾಮ್ಲಗಳ ಮಿಶ್ರಣದಿಂದುಂಟಾಗಿರುತ್ತದೆ ತುತ್ಥದ ದ್ರವದೊಳಗೆ ಅಮೋನಿಯವನ್ನು ಹಾಕಿದರೆ ಮೇಲಿನ ದ್ರವದಂತೆ ಅದು ನೀಲವರ್ಣವಾಗುವದು.

೬೦ ಸತುವು—ಇದು ಬಹು ಉಪಯುಕ್ತವಾದ ಬಿಳೇ ಬಣ್ಣದ ಧಾತು ಇದರಿಂದ ಕಬ್ಬಿಣದ ಪಾತ್ರೆಗಳಿಗೆ ಕಲಾಯಿ ಮಾಡುತ್ತಾರೆ ಈ ಕಲಾಯಿಯು ಯೋಗದಿಂದ ಕಬ್ಬಿಣವು ಹವೆಯಲ್ಲಿ ಸಹ ಬೇಗ ಜಂಗು ತಿನ್ನುವದಿಲ್ಲ. ಇದು ಅಶೋಧಿತ ಸ್ಥಿತಿಯಲ್ಲಿ ಗಂಧಕದೊಡನೆ ಮಿಶ್ರವಾಗಿರುತ್ತದೆ ಸತುವು ಇತರ ಧಾತುಗಳೊಡನೆ ಮಿಶ್ರವಾಗಿ ತರತರದ ಹೊಸ ಧಾತುಗಳನ್ನು ಉತ್ಪನ್ನ ಮಾಡುತ್ತದೆ ಉದಾಹರಣಾರ್ಥವಾಗಿ ಹಿತ್ತಾಳೆಯು ತಾಮ್ರ ಸತುವುಗಳ ಮಿಶ್ರಣವಿರುತ್ತದೆ,

ಪ್ರಯೋಗ ೫೧೧–ಹಿಂದೆ ೧೫೬ನೇ ಪ್ರಯೋಗದಲ್ಲಿ ವರ್ಣಿಸಿದಂತೆ ಉದಕಮಿಶ್ರಿತ ಗಂಧಕಾಮ್ಲದಲ್ಲಿ ಸತುವನ್ನು ಕರಗಿಸಿದರೆ ಅದು ಕರಗಿ ಝಿಂಕ ಸಲ್ಫೇಟೆಂಬ ಪದಾರ್ಥ ಉತ್ಪನ್ನವಾಗುತ್ತದೆ. ನಾವು ಹೈದ್ರೋಜನ್ ವಾಯುವನ್ನು ಹುಟ್ಟಿಸುವದಕ್ಕಾಗಿ ಜಲಮಿಶ್ರಿತ ಗಂಧಕಾಮ್ಲದಲ್ಲಿ ಸತುವನ್ನು ಹಾ

ಕಿಬ್ಬೆವಷ್ಟೇ? ಆ ಸತುವು ಕರಗಿ ಉಂಟಾದ ದ್ರವವನ್ನು ಬೆಂಕಿಯ ಮೇಲಿಟ್ಟು ಕಾಸಿದರೆ ಅದರೊಳಗಿನ ನೀರೆಲ್ಲ ಉಗಿಯಾಗಿ ಹಾರಿಹೋಗುವದು ಬಳಿಕ ಆ ಪಾತ್ರೆಯನ್ನು ಕೆಳಗಿಳಿಸಿ ನೋಡಿದರೆ ಆ ಪಾತ್ರೆಯ ತಳದಲ್ಲಿ ಶುಭ್ರವಾದ ಸ್ಫಟಿಕರೂಪದ ಝಿಂಕ ಸಲ್ಫೇಟ್ ಎಂಬ ಪದಾರ್ಥವು ದೃಷ್ಟಿಗೋಚರವಾಗುವದು. ಸತುವಿಗೆ ಅರ್ಸೆನಿಂದ ತೆಕ್ಕೆದರೆ ಉಂಟಾಗುವ ಸಣ್ಣ ಚೂರುಗಳನ್ನು ಕಾಸಲಾಗಿ ಬಿಂದು ತರದ ಬಿಳೀ ಪುಡಿಯಾಗುವದು. ಆ ಪುಡಿಗೆ ಝಿಂಕ ಆಕ್ಸಾಯಿಡ್ ಅಥವಾ ಸತುವಿನ ಹೂವೆಂದೆನ್ನುವರು.

೬೧. ತವರು—ಇದು ಲಕಲಕ ಹೊಳೆಯುವ ಬಿಳೀ ಬಣ್ಣದ ಧಾತು. ತಾಮ್ರ, ಹಿತ್ತಾಳಿ, ಕಬ್ಬಿಣ ಮುಂತಾದ ಧಾತುವಿನ ಪಾತ್ರೆಗಳಿಗೆ ತವರಿನ ಕಲಾಯಿ ಮಾಡುವರು. ತವರಿನಿಂದ ಕಲಾಯಿ ಮಾಡಿದ ಕಬ್ಬಿಣದ ತಗಡುಗಳು ಬಾಜಾರದಲ್ಲಿ ಮಾರಲಿಕ್ಕೆ ದೊರಿಯುತ್ತವೆ. ತವರು ಕರಗಿಸಿ ಆ ದ್ರವದಲ್ಲಿ ಕಬ್ಬಿಣದ ಬಡವೆಗಳನ್ನು ಎದ್ದಿ ತೆಗೆಯುತ್ತಾರೆ. ಹೀಗೆ ಕಲಾಯಿ ಮಾಡಿದ ಕಬ್ಬಿಣವು ಜಂಗು ತಿನ್ನುವದಿಲ್ಲ. ತವರು ಮಿಕ್ಕ ಲೋಹಗಳಲ್ಲಿ ಮಿಶ್ರವಾಗಿ ಉಪಯುಕ್ತವಾದ ಮಿಶ್ರಧಾತುಗಳನ್ನು ಹುಟ್ಟಿಸುತ್ತದೆ. ಇದು ಅಶೋಧಿತ ಸ್ಥಿತಿಯಲ್ಲಿ ಆಕ್ಸಿಜನದೊಡನೆ ಮಿಶ್ರವಾಗಿರುತ್ತದೆ. ಆಗ ಆ ಮಿಶ್ರಣಕ್ಕೆ ತವರಿನ ಕಲ್ಲೆಂದೆನ್ನುವರು. ಈ ಕಲ್ಲುಗಳು ನಿಲಾಯುತೆಯಲ್ಲಿ ಕಾರ್ನವಾಲ ಪ್ರಾಂತದಲ್ಲಿ ಶಿಕ್ಕುತ್ತವೆ. ಆ ಕಲ್ಲಿನಿಂದ ಕಬ್ಬಿಣ ತೆಗೆದಂತೆ ತವರು ತೆಗೆಯುತ್ತಾರೆ. ತವರಿನ ಸಣ್ಣ ಚೂರುಗಳನ್ನು ಹವೆಯಲ್ಲಿ ಕಾಸಿದರೆ ತವರಿನ ಭಸ್ಮವಾಗುವದು. ಇದೇ ಪಸರಾದ ವಂಗಭಸ್ಮವು.

(ಸಶೇಷ.)

MANUAL OF METHOD.

ಶಿಕ್ಷಾಕ್ರಮ.

(೯೦ನೇ ಪುಟದಿಂದ ಮುಂದೆ ಸಾಗಿದ್ದು.)

೫೩. ಕಲಿಸುವ ವಿಷಯವಾದರೂ ವರ್ಗಗಳ ಆಕಾರವ ಸಂಬಂಧದಿಂದ ಅನುಲಕ್ಷಿಸತಕ್ಕ ೫ನೇ ಸಂಗತಿಯಾಗಿರುತ್ತದೆ.

೫. ವಾಚನೆ—ಈ ವಿಷಯವನ್ನು ಕಲಿಸುವಾಗ್ಗೆ ಬೆಂಚು ಡೆಸ್ಕುಗಳನ್ನಿಟ್ಟುಕೊಂಡು ಕಲಿಸುವದು ಪ್ರಶಸ್ತವಾಗುವದಿಲ್ಲ. ಡೆಸ್ಕುಗಳ ಹಿಂದೆ ಬೆಂಚಿನ ಮೇಲೆ ಕೂಡ್ರಿಸಿ ಈ ವಿಷಯವನ್ನು ಸಾಗಿಸಲು ನಂಬರುಗಳನ್ನು ಕೊಡಲಿಕ್ಕೆ ಅನನುಕೂಲವಾಗಿ ವಿದ್ಯಾರ್ಥಿಗಳ ಸೋಮಾರಿತನಕ್ಕೂ ದುರ್ಲಕ್ಷಕ್ಕೂ ಅವಕಾಶ ಸಿಗುತ್ತದೆ. ಡೆಸ್ಕುಗಳ ಮುಂದೆ ನಿಲ್ಲಿಸಿ ವಾಚನವನ್ನು ತೆಗೆದುಕೊಳ್ಳಲು ಅದಕ್ಕೆ ಆತುಕೊಳ್ಳುವದೂ ಅಡ್ಡಡ್ಡಾಗಿ ನಿಲ್ಲುವದೂ ಮುಂತಾದ ದುಶ್ಚಟಗಳು ತಲೆದೋರುತ್ತವೆ. ಆದಕಾರಣ ಶಿಕ್ಷಕನು ವಿದ್ಯಾರ್ಥಿಗಳನ್ನು ತನ್ನ ಮುಂದೆ ಅರ್ಧಚಂದ್ರಾಕೃತಿಯಾಗಿ ನಿಲ್ಲಿಸುವದೇ ವಿಹಿತವು. ಈ ರೀತಿಯಿಂದ ನಿಲ್ಲಿಸಲಾಗಿ ವಿದ್ಯಾರ್ಥಿಗಳಿಗೆ ಅವಶ್ಯವಾದ ಸ್ಥಾನಾಂತರಕ್ಕೆ ಅವಕಾಶ ದೊರಿಯುವದಲ್ಲದೆ ಎಲ್ಲರನ್ನು ಎಚ್ಚರದಿಂದ ನೋಡಲಿಕ್ಕೆ ಮಾಸ್ತರನಿಗೆ ಅನುವಾಗುತ್ತದೆ. ದುಶ್ಚಟಗಳಿಗೆ ಆಸ್ಪದವು ದೊರಿಯುವದಿಲ್ಲ. ಈ ವ್ಯವಸ್ಥೆಯು ದುಸ್ಸಾಧ್ಯವಾದರೆ ತನ್ನ ಎದುರಿನಲ್ಲಿ ಎತ್ತರವಾದ ಹುಡುಗರ ಮುಂದೆ ಗಿಡ್ಡ ಹುಡುಗರನ್ನು ನಿಲ್ಲಿಸಿ ಈ ವಿಷಯವನ್ನು ತೆಗೆದುಕೊಳ್ಳುವದು ಹಿತವು. ಒಟ್ಟಿಗೆ ಈ ವಿಷಯವು ನಡೆದಾಗ ಮಾಸ್ತರನು ಎಲ್ಲ ಹುಡುಗರನ್ನು ಎಚ್ಚರದಿಂದ ನೋಡುತ್ತ ಅವಗುಣಗಳಿಗೆ ಎಳ್ಳಷ್ಟು ಅವಕಾಶ ಕೊಡದೆ ಹುಡುಗರನ್ನು ಕಾಯುತ್ತ ಅವರ ಲಕ್ಷವನ್ನು ಯುಕ್ತಿಯಿಂದ ವಿಷಯದಲ್ಲಿ ತೊಡಕಿಸುತ್ತ ಕೆಲಸ ಮಾಡತಕ್ಕದ್ದು.

೬. ಗಣಿತ—ವಿದ್ಯಾರ್ಥಿಗಳಿಗೆ ಗಣಿತವನ್ನು ತಿಳಿಸಿಕೊಡುವಾಗ ಅಥವಾ ಕಲಿಸಿದ್ದನ್ನು ಕರೇ ಹಲಗೆಯ ಮೇಲಾಗಲಿ ಬಾಯಿಂದಾಗಲಿ ಪರೀಕ್ಷಿಸುವಾಗ ವಾಚನಕ್ಕೆ ಅನುಕೂಲವಾದ ವ್ಯವಸ್ಥೆಯೇ ಇದಕ್ಕೂ ಅನುಕೂಲಿಸುವದು. ಕಲಿಸಿದ್ದನ್ನು ಸ್ಥಿರಪಡಿಸುವದಕ್ಕಾಗಿ ಲೆಖ್ಖಗಳನ್ನು ಮಾಡಹೇಳಿದಾಗ ವಿದ್ಯಾರ್ಥಿಗಳಿಗೆ ಬೆಂಚುಗಳ ಮೇಲೆ ಕೂತು ಡೆಸ್ಕುಗಳ ಮೇಲೆ ಘಾಟಿಗಳನ್ನಿಟ್ಟುಕೊಂಡು ಕೆಲಸ ಮಾಡಹೇಳುವದು ವಿಹಿತವು ಸ್ಥಲಾನುಕೂಲವಿದ್ದರೆ ಬೆಂಚುಗಳನ್ನು ಉದ್ದಕ್ಕೆ ಸಾಲಾಗಿಟ್ಟು ವಿದ್ಯಾರ್ಥಿಗಳನ್ನು ದೂರ ದೂರ ಕೂಡ್ರಿಸತ

ಕ್ಕದ್ದು. ಆದರೆ ಈ ಅನುಕೂಲತೆಯು ಅಪರೂಪವಾಗಿರು ವದು. ಇಂಥ ಪ್ರಸಂಗದಲ್ಲಿ ವಿದ್ಯಾರ್ಥಿಗಳ ಎರಡು ಗುಂಪು ಗಳನ್ನು ಮಾಡಿ ಗುಂಪುಗುಂಪಿಗೆ ಬೇರೆ ಬೇರೆ ಲೆಖ್ಖಿಗಳನ್ನು ಹೇಳಿ ಒಂದೇ ಲೆಖ್ಖವನ್ನು ಮಾಡುವ ಒಂದೇ ಗುಂಪಿನ ಇಬ್ಬ ರು ವಿದ್ಯಾರ್ಥಿಗಳ ನಡುವೆ ಬೇರೆ ಗುಂಪಿನ ವಿದ್ಯಾರ್ಥಿಯ ನ್ನು ಕೂಡ್ರಿಸುವದು ಲೇಸು. ಈ ವಿಷಯವನ್ನು ಕಲಿಸು ವಾಗ್ಗೆ ನಕಲು ಮಾಡುವ ದುಷ್ಟಟಿಯನ್ನು ತಪ್ಪಿಸುವದಲ್ಲದೆ ಪ್ರಾಮಾಣಿಕತನವನ್ನೂ ಕಲ್ಪನಾಸಾಮರ್ಥ್ಯವನ್ನೂ ಸ್ವತಂ ತ್ರಲಂಬನವನ್ನೂ ಬೆಳಿಸುವ ಮೇಲಾದ ಕಾರ್ಯವನ್ನೂ ಸಾಧಿ ಸುವದು ಮಾಸ್ತರನ ಕರ್ತವ್ಯವಾಗಿರುತ್ತದೆ. ಇದಕ್ಕಾಗಿ ವೇಳೆಯೂ ಶ್ರಮವೂ ಎಷ್ಟು ಹತ್ತಿವರೂ ಹೆಚ್ಚು ಮಾಡಲೇ ಬೇಕು.

ಹ. ಭೂಗೋಲ—ಈ ವಿಷಯವನ್ನು ದೊಡ್ಡ ನಕಾಶದ ಸಹಾಯದಿಂದಾಗಲಿ ಅಟಲಸಿನ (ಸಣ್ಣ ಸಣ್ಣ ನಕಾಶಗಳುಳ್ಳ ಪುಸ್ತಕ) ಸಹಾಯದಿಂದಾಗಲಿ ಸಾಗಿಸತಕ್ಕದ್ದು. ದೊಡ್ಡ ನಕಾಶದ ಸಹಾಯದಿಂದ ಸಾಗಿಸುವಾಗ ವಿದ್ಯಾರ್ಥಿಗಳಿಗೆ ತಟ್ಟನೆ ಬಂದು ನಕಾಶವನ್ನು ತೋರಿಸಲಿಕ್ಕೆ ಅನುಕೂಲವಾ ಗುವಂತೆ ಕೂಡ್ರಿಸತಕ್ಕದ್ದು, ಇಲ್ಲವೆ ನಿಲ್ಲಿಸತಕ್ಕದ್ದು. ತಮ್ಮ ತಮ್ಮ ಅಟಲಸುಗಳಲ್ಲಿಯೇ ಸ್ಥಳಗಳನ್ನು ತೋರಿಸುವದು ಗೊತ್ತು ಮಾಡಿದರೆ ಅವರನ್ನು ಬೆಂಚುಗಳ ಮೇಲೆ ಕೂಡ್ರಿಸ ಲಿಕ್ಕೆ ಪ್ರತ್ಯವಾಯವಿಲ್ಲ.

೬. ಶಿಕ್ಷಕನ ಸ್ಥಳವನ್ನಾವರೂ ಗೊತ್ತು ಮಾಡುವದು ಅವಶ್ಯವು. (೫) ಪಾಠನ [illegible]ವನ್ನು ಸಾಗಿಸುವಾಗ ಶಿಕ್ಷ ಕನು ಮಧ್ಯದಲ್ಲಿ ಎಲ್ಲ ಹುಡುಗರಿಂ[illegible]ನಗೆ ಕಾಣಿಸುವಷ್ಟು ಅಂತರದ ಮೇಲೆ ನಿಲ್ಲತಕ್ಕದ್ದು. ಅರ್ಧ[illegible]ಕಾರವಾಗಿ ವಿದ್ಯಾರ್ಥಿಗಳು ನಿಂತಿದ್ದರೆ ಆ ವರ್ತುಳದ ಮಧ್ಯ[illegible]ನಿನ ಲ್ಲಿ ಮಾಸ್ತರನು ನಿಲ್ಲತಕ್ಕದ್ದು. ವರ್ತುಲಖಂಡಾಕಾರವಾ[illegible] ವಿದ್ಯಾರ್ಥಿಗಳು ಅವನೆದುರಿಗೆ ನಿಲ್ಲಬೇಕು. ವಾಡಿಕೆಯಾಗಿ ಮಾಸ್ತರನು ಹುಡುಗರ ಎದುರಿನಲ್ಲಿ ನಡುವೆ ನಿಲ್ಲಬೇಕು.

(೫) ಭೂಗೋಲ—ದೊಡ್ಡ ನಕಾಶದ ಮೇಲೆ ಹುಡುಗರು

ಸ್ಥಳಗಳನ್ನು ತೋರಿಸುವಾಗ ಶಿಕ್ಷಕನು ಆ ನಕಾಶವನ್ನು ತನ್ನ ಬಲಕ್ಕೆ ಹಚ್ಚಿ ಅದರ ಬಲಕ್ಕೆ ತಾನು ನಿಲ್ಲಬೇಕು. ಅಟಲಸುಗಳನ್ನು ಉಪಯೋಗಿಸಲಾಗಿ ಶಿಕ್ಷಕನು ಕ್ಲಾಸಿನ ಎದುರಿಗೆ ಇರುವದೇ ಉತ್ತಮವು.

(ಹ) ಗಣಿತ—ಕರೇ ಹಲಿಗೆಯನ್ನು ಮಾಸ್ತರನು ತನ್ನ ಬಲಕ್ಕೆ ಇಟ್ಟು ಅದರ ಬಲಕ್ಕೆ ತಾನು ನಿಂತು ಗಣಿತ ವಿಷಯವನ್ನು ತಿಳಿಸಿಕೊಡತಕ್ಕದ್ದು. ಇತರ ಪ್ರಸಂಗದಲ್ಲಿ ಅಂದರೆ ವಿದ್ಯಾರ್ಥಿಗಳು ಕರೇ ಹಲಿಗೆಯ ಮೇಲೆ ಲೆಖ್ಖ ಮಾಡುವಾಗ ಶಿಕ್ಷಕನು ಕ್ಲಾಸಿನ ಎದುರಿಗೆ ನಡುವೆ ನಿಲ್ಲತಕ್ಕದ್ದು.

ಸಾಮೂಹಿಕ ಪಾಠಗಳು—ಶಾಲೆಯಲ್ಲಿ ಕಲಿಸುವ ಕೆಲಸದ ಹೊರತು ಬೇರೆ ಕೆಲವು ಕೆಲಸಗಳನ್ನು ಮಾಡಬೇಕಾಗುತ್ತದೆ. ಅವು ಯಾವವೆಂದರೆ—(೧) ಬರಹ ಅಂದರೆ ಪತ್ರ ಲೇಖನ, ರಿಪೋರ್ಟ ಬರಿಯೋಣ ರಜಿಸ್ತರ ತುಂಬೋಣ ಮುಂತಾದ ಕೆಲಸಗಳು (೨) ಸಿದ್ಧತೆ ಅಂದರೆ ಉಪಕರಣ ಸಾಹಿತ್ಯಗಳನ್ನು ಕೂಡಿಸುವ ಕೆಲಸಗಳು (೩) ಸಂಶೋಧನ ಅಂದರೆ ಹುಡುಗರ ನಿಬಂಧಾದಿಗಳನ್ನು ತಿದ್ದುವ ಕೆಲಸಗಳು. ಈ ಕೆಲಸಗಳನ್ನಾದರೂ ಆಯಾ ಮಾಸ್ತರರೇ ಮಾಡತಕ್ಕವರು ಆದ್ದರಿಂದ ಅನುಕೂಲವಾದ ಮೇರೆಗೆ ಒಂದೆರಡು ವರ್ಗಗಳನ್ನು ಕೆಲವು ವಿಷಯಗಳ ಪೂರ್ತಿ ಒತ್ತಟ್ಟಿಗೆ ಸೇರಿಸಿ ಕಲಿಸುವದೂ ಅದರಿಂದ ಕೆಲ ಮಾಸ್ತರರಿಗೆ ಪಾಠ ಸೊತ್ತು (ಪ್ರತಿಸಾಹಿತ್ತ = ಸಾಕಷ್ಟು ಹೊತ್ತು) ಬಿಡಿಸಿ ಕೊಡುವದೂ ಅವಶ್ಯವಾಗಿರುತ್ತದೆ ಈ ಸಮ್ಮೇಲನವನ್ನು ಚಿಕ್ಕ ಹುಡುಗರ ಶಾಲೆಗಳಲ್ಲಿ ಗಾಯನ (ಸೋಪಾನ ಭೂಮಿಯ) ವ್ಯವಸ್ಥೆ ಇದ್ದಲ್ಲಿ ಅಲ್ಲಿಯೇ ಮಾಡತಕ್ಕದ್ದು. ಇತರ ಶಾಲೆಗಳಲ್ಲಿ ಸಿಹ್ಮ ಕೋಣೆಯಲ್ಲಿ ಮಾಡತಕ್ಕದ್ದು. ಈ ವರ್ಗಗಳಿಗೆ ಕಲಿಸುವ ವಿಷಯಗಳು ಯಾವವೆಂದರೆ—

(೧) ಗಾಯನ—ಈ ವಿಷಯವು ವಿಶೇಷವಾಗಿ ಅನುಕರಣಸಾಧ್ಯ ವಿಷಯವು. ಇದಕ್ಕೆ ಹುಡುಗರು ಬಹಳವಿದ್ದಷ್ಟು ಒಳ್ಳೇದು ಸಮೂಹದಲ್ಲಿ ಹುಡುಗರು ಮೈಲಿಗೆ ಬಿಟ್ಟು ಕಲಿಯುವರು

(೬) ಪದ್ಯಗಳನ್ನು ಅನ್ನುವದು–ಇದಾದರೂ ಅನುಕರಣ ಸಾಧ್ಯ ವಿಷಯವು. ಹುಡುಗರ ಸಂಖ್ಯೆ ಹೆಚ್ಚಿದ್ದಷ್ಟು ಈ ವಿಷಯದ ಅಭ್ಯಾಸಕ್ಕೆ ಧೈರ್ಯವೂ, ಬಲವೂ ಬರುತ್ತದೆ.

(೭) ಧರ್ಮವಿಷಯಕ ಪಾಠಗಳು—ಈ ವಿಷಯಗಳು ವಾಡಿಕೆಯಾಗಿ ಕಥೆಗಳಿಂದಲೂ ಇತಿಹಾಸ ಸಂಗತಿಗಳಿಂದಲೂ ಕಲಿಸಲ್ಪಡುತ್ತವೆ. ಇವನ್ನು ಹೇಳುವವನು ಮನೋರಂಜಸವಾಗುವಂತೆಯೂ, ಸರಸಾಗಿಯೂ ಹೇಳಿದರೆ ಸಾಕು. ಕೇಳುವವರು ಎಷ್ಟು ಮಂದಿ ಇದ್ದರೂ ಅದರಿಂದ ಪ್ರತ್ಯವಾಯವಿಲ್ಲ.

(೪) ಸಾಮಾನ್ಯ ಜ್ಞಾನದ ಪಾಠಗಳು—ಸಾಮಾನ್ಯ ಜ್ಞಾನದ ಪಾಠಗಳ ಬಿಲೆಯ ಕಲಿಸುವವನನ್ನು ಅವಲಂಬಿಸಿರುತ್ತದೆ. ತಕ್ಕ ಸಿದ್ಧತೆಯಿಂದ ಉಪಕರಣಗಳನ್ನು ಒದಗಿಸಿಕೊಂಡು ಹೊಸ ಸಂಗತಿಗಳನ್ನು ಸ್ಪಷ್ಟವಾಗಿಯೂ, ನಿಸ್ಸಂದೇಹವಾಗಿಯೂ, ಸರಳವಾಗಿಯೂ ಕಲಿಸಿದರೆ ಸಾಕು ಹುಡುಗರು ಇವುಗಳನ್ನು ತೀವ್ರ ಗ್ರಹಣ ಮಾಡುವರು. ಈ ಪಾಠಗಳನ್ನು ಈ ಮೇರೆಗೆ ಕಲಿಸಲು, ಎರಡು ಮೂರು ವರ್ಗಗಳನ್ನು ಒತ್ತಟ್ಟಿಗೆ ಸೇರಿಸಲಿಕ್ಕೆ ಪ್ರತಿಬಂಧವಿಲ್ಲ.

೫. ತಾಲಬದ್ಧ ಕವಾಯತು— ಈ ವಿಷಯದ ಸಂಬಂಧದಿಂದ ಸ್ಥಳಾನುಕೂಲವೇ ವಿದ್ಯಾರ್ಥಿಗಳ ಸಂಖ್ಯೆಯ ಪರಿಮಿತಿಯು.

೬ ಸಾದಾ ಕವಾಯತು—ಸ್ವಲ್ಪ ಹುಡುಗರಿಗೆ ಈ ಕವಾಯತನ್ನು ಕಲಿಸಲಾಗಿ ಅವರಿಗಾಗುವ ಆನಂದಕ್ಕಿಂತ ಹೆಚ್ಚು ಸುಂದಿಯನ್ನು ಒತ್ತಟ್ಟಿಗೆ ಕೂಡ್ರಿಸಿ ಕಲಿಸಲು ಹೆಚ್ಚು ಆನಂದವಾಗುತ್ತದೆ. ಹಾದೆನ್ನಿಸಿಕೊಳ್ಳುವ ಅಪೇಕ್ಷೆಯೂ ಉಲ್ಲಾಸವೂ ಬೆಳೆಯುತ್ತವೆ

೭. ಬಾಲೋದ್ಯಾನ ಶಿಕ್ಷಣ.

೮. ಕೆಲವು ವರ್ಗದ ವಿಷಯಗಳು– ಉದಾಹರಣಾರ್ಥವಾಗಿ ವ್ಯಾಕರಣ, ಭೂಗೋಲ, ಇತಿಹಾಸ, ಶಾಸ್ತ್ರೀಯ ವಿಷಯ ಮುಂತಾದ ವಿಷಯಗಳನ್ನು ಎರಡು ಮೂರು ವರ್ಗಗಳನ್ನು ಒತ್ತಟ್ಟಿಗೆ ಸೇರಿಸಿಕೊಂಡು ಕಲಿಸಬಹುದು.

೯ ಕೆಲವು ಆರಂಭದ ವಿಷಯಗಳು ಅಂದರೆ ಸುಲಭವಾದ ಬಾಯಿಲೆಕ್ಕ, ಲೇಖನ ಮುಂತಾದವುಗಳು. ವಿದ್ಯಾರ್ಥಿಗ

ು ಸ್ಥಾನಾಂತರವನ್ನು ಕೂಡಿದಷ್ಟು ಮೇಲಿಂದ ಮೇಲೆ ಮಾ
ಡುವದು ಅವಶ್ಯವಾದ ಸಂಗತಿಯೆಂಬದನ್ನು ಮರೆಯಕೂಡ
ದು. ಹುಡುಗರನ್ನು ಕೂತಲ್ಲೇ ಕೂಡಗೊಟ್ಟರೆ ಅವರಿಗೆ
ನರ್ಬಲ್ಯ ಮುಂತಾದ ದುಶ್ಚಟಗಳು ಹತ್ತುವದಲ್ಲದೆ ದೃಷ್ಟಿ
ನಾಂದ್ಯ ಅಗ್ನಿಮಾಂದ್ಯ ಮುಂತಾದ ಬೇನೆಗಳು ಸಂಭವಿಸು
ವವು.

ಪುರಸ್ಕಾರ ಅಥವಾ ಮೇಲಿನ ವರ್ಗದಲ್ಲಿ ಸೇರಿಸುವದು—
ಪುರಸ್ಕಾರವು ಪಾಯೋಶುದ್ಧವೂ, ನಿಯಮಬದ್ಧವೂ ಆಗಿರ
ಬೇಕು. ತ್ರೈಮಾಸಿಕ ಷಾಣ್ಮಾಸಿಕ ಅಥವಾ ವಾರ್ಷಿಕ
ಪರೀಕ್ಷೆಗಳನ್ನು ತೆಗೆದುಕೊಂಡು ಅದರಲ್ಲಿ ಒಳಿತಾಗಿ ಉತ್ತೀರ್ಣ
ತರಾದವರಿಗೆ ಮೇಲಿನ ವರ್ಗದಲ್ಲಿ ಸೇರಿಸಬಹುದು. ಇದಕ್ಕೆ
ತಪ್ಪಿದರೆ ಕೆಳಗೆ ತೋರಿಸಿದ ದುಷ್ಪರಿಣಾಮಗಳು ಸಂಭವಿಸು
ವವು.

೧. ಹುಡುಗರಿಗೆ ವರ್ಗದಲ್ಲಿ ತಕ್ಕ ಕೆಲಸವು ಸಾಕಷ್ಟು
ಸಿಗದ್ದರಿಂದ ಅವರು ಕುಚೇಷ್ಟಿಕೋರರು ಆಗುವರು.

೨. ಹೆಚ್ಚಿನ ಜ್ಞಾನವನ್ನು ಸಂಪಾದಿಸುವ ಪ್ರಸಂಗಗಳಿಲ್ಲ
ದೆ ಕಲಿತ ವಿಷಯಗಳಲ್ಲಿಯೇ ತಿರುಗಿ ತಿರುಗಿ ಸುತ್ತಾಡುವ
ಪ್ರಸಂಗಗಳೇ ಬರುವದರಿಂದ ಅವರು ಬೇಸರಿಯುವರು.

೩. ಶಾಲೆಗಳಲ್ಲಿ ಆನಂದಕ್ಕೂ ಉತ್ಸಾಹಕ್ಕೂ ಅಸ್ಪದವಿ
ಲ್ಲದ್ದರಿಂದ ಶಾಲಾವಿಮುಖರಾಗಿ ಶಾಲೆಯನ್ನು ತಪ್ಪಿಸಹತ್ತು
ವರು.

೪ ಅವರು ತಮಗಿಂತ ಮುಂದ ಬುದ್ಧಿಯ ವಿದ್ಯಾರ್ಥಿಗಳ
ನ್ನು ಛೇಡಿಸಹತ್ತುವರು.

೫ ಅಭ್ಯಾಸಕ್ಕೆ ವೈಚಿತ್ರ್ಯವಿಲ್ಲದ್ದರಿಂದ ಅಭಿರುಚಿಯು
ಕಟ್ಟಾಗಿ ಬರು ಕಲಿತದ್ದನ್ನು ಮರೆಯುವರು.

೬. ವಿದ್ಯಾರ್ಥಿಗಳನ್ನು ಅವರವರ ಯೋಗ್ಯತೆಯಂತೆ ಕಲಿ
ಸಿ ಪ್ರಬುದ್ಧರನ್ನು ಮಾಡುವದು ಶಾಲೆಯ ಆದ್ಯ ಕರ್ತವ್ಯವು.
ಒಳಿತಾಗಿ ಅಭ್ಯಾಸ ಮಾಡಿ ಪುರಸ್ಕಾರವನ್ನು ಹೊಂದುವದು
ವಿದ್ಯಾರ್ಥಿಗಳ ಹಕ್ಕೆಂದು ಹೇಳಬಹುದು. ಈ ಹಕ್ಕನ್ನು
ಮುಳುಗಿಸಿದರೆ ಹುಡುಗರಿಗೆ ಅನ್ಯಾಯವಾಗುವದಲ್ಲದೆ ಅವ
ರ ತಾಯ್ತಂದೆಗಳಿಗೂ ದೇಶಕ್ಕೂ ಹಾನಿ ಸಂಭವಿಸುತ್ತದೆ.

೬. ವಿದ್ಯಾರ್ಥಿಗಳು ಕಲಿಯುವ ಅವಧಿಯು ಮರ್ಯಾದಿತವಾಗಿರುತ್ತದೆ. ಆದಕಾರಣ ಅವರವರ ಯೋಗ್ಯತೆಯ ಮೇರೆಗೆ ಅವರಿಗೆ ಜ್ಞಾನಸಂಪಾದನದ ಅನುಕೂಲವನ್ನು ಮಾಡಿಕೊಡುವದು ಅವಶ್ಯವು. ಇದನ್ನು ಬಿಡಗಿಸಿಕೊಡದಿದ್ದರೆ ಅಂಗರೆ ಬಹು ಕಾಲದಲ್ಲಿ ಸ್ವಲ್ಪ ಅಭ್ಯಾಸದ ಸಾಧನವನ್ನು ಮಾಡಿಸಿದರೆ ಕಾಲ ವ್ಯಯದ ದೋಷವು ಸಂಭವಿಸುವದೆಂಬದು ಸ್ಪಷ್ಟವೇ.

ಗೃಹಪಾಠಗಳು.

೧ ಗೃಹಪಾಠಗಳ ವಿಷಯಗಳು—ಈ ಮನೆಯಲ್ಲಿ ಸಿದ್ಧ ಮಾಡಲಿಕ್ಕೆ ಕೊಟ್ಟ ಪಾಠಗಳು ಪೂರಕವಾಗಲಿ ಸಹಾಯಕವಾಗಲಿ ಇರತಕ್ಕವು ಅಂದರೆ ೧ ಭೂಗೋಲ, ಗಣಿತ, ವ್ಯಾಕರಣ, ಭಾಷಾವಿಷಯ ಮುಂತಾದ ಕಲಿಸಿದ ಪಾಠಗಳ ಅಭ್ಯಾಸದ ಸಂಬಂಧದವಾಗಲಿ ೨ ಕವಿತಾಪಠಣ, ಇತಿಹಾಸ, ಕೋಷ್ಟಕ, ವ್ಯಾಕರಣಸೂತ್ರ ಮುಂತಾದ ಕಲಿಸತಕ್ಕ ಪಾಠಗಳ ಪೂರ್ವಸಿದ್ಧತೆಯ ಸಂಬಂಧದವಾಗಲಿ ಇರತಕ್ಕವುಗಳು.

೩ ಗೃಹಪಾಠಗಳ ಸಂಶೋಧನ—ವಿದ್ಯಾರ್ಥಿಗಳು ಮನೆಯಿಂದ ಬರೆದುತಂದ ಪಾಠಗಳ ಸಂಶೋಧನಕ್ರಮವೂ ಕಾಲವೂ ಮುಖ್ಯವಾಗಿ ಶಾಲೆಯಲ್ಲಿ ನಡೆದಿರುವ ಶಿಕ್ಷಣದ ಪದ್ಧತಿಗಳನ್ನೂ ಕಲಿಸಲ್ಪಡುವ ವಿಷಯಗಳನ್ನೂ ಅವಲಂಬಿಸಿರುತ್ತವೆ. ಕೆಲವು ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆಯಾದರೂ ಈ ಸಂದರ್ಭದಲ್ಲಿ ನಿರ್ಧಾರಣೀಯ ಅಂಶವಾಗಿರುತ್ತದೆ. ಆದರೆ ಕೆಳಗೆ ಮಾಡಿದ ಸೂಚನೆಗಳಲ್ಲಿ ಶಿಕ್ಷಕರ ಸಂಖ್ಯೆಯು ಸಾಕಷ್ಟು ಇರುತ್ತದೆಂದು ಸ್ವೀಕರಿಸಿರುತ್ತೇವೆ.

ಗಣಿತ—ಈ ವಿಷಯದಲ್ಲಿ ವಿದ್ಯಾರ್ಥಿಗಳು ಮನೆಯಿಂದ ಬರೆದು ತಂದ ಪಾಠಗಳನ್ನು ಹಿರೇಮಣಿಗಳಿಂದ ತಿದ್ದಿಸಿ ಅದರೊಳಗಿನ ಸಾಮಾನ್ಯವಾದ ತಪ್ಪುಗಳನ್ನು ಕರಿಹಲಿಗೆಯ ಮೇಲೆ ತಿದ್ದಿ ಬರೆದು ತಿಳಿಸತಕ್ಕದ್ದು.

(ಸಶೇಷ)

CORRESPONDENCE.

ಪತ್ರವ್ಯವಹಾರ

(೧೫ನೇ ಪುಟದಿಂದ ಮುಂದೆ ಸಾಗಿದ್ದು)

೨ನೇ ಇಯತ್ತೆ—(೨ನೇ ಸದರು) ಕವಿತೆಯ ಮೊದಲನೇ ಪುಸ್ತಕದೊಳಗಿನ ಮೊದಲಿನ ನಾಲ್ಕು ಪಾಠಗಳ ಶಬ್ದಾರ್ಥ, ಭಾವಾರ್ಥ ಹೇಳುವದು :—

ಈ ವರ್ಗದ ವಿದ್ಯಾರ್ಥಿನಿಯರ ಜ್ಞಾನಶಕ್ತಿಯು ಇನ್ನೂ ಬಲತಿರುವದಿಲ್ಲಾದ್ದರಿಂದ, ಕವಿತೆಯ ಭಾವಾರ್ಥ ಹೇಳುವದು ಇವರಿಗೆ ಕಷ್ಟವೆನಿಸುವದು ಆ ಕಾರಣ, ಬರಿಯ ಶಬ್ದಾರ್ಥವನ್ನಷ್ಟೇ ಇಡಬೇಕೆಂದು ನನ್ನ ವಿನ್ನಹ ಉಂಟು.

೩ನೇ ಇಯತ್ತೆ—(೪ನೇ ಸದರು ಬ) ಶಿಕ್ಷಕರು ಕರೀ ಹಲಿಗೆಯ ಮೇಲೆ ತೆಗೆದ ಕರ್ನಾಟಕ ಪ್ರಾಂತದ ಸ್ಥೂಲ ನಕಾಶದೊಳಗೆ ಪರ್ವತ, ನದಿ, ಪಟ್ಟಣ ಮುಂತಾದವುಗಳನ್ನು ತಕ್ಕ ಸ್ಥಳದಲ್ಲಿ ವಿದ್ಯಾರ್ಥಿನಿಯರಿಂದ ಬರೆಸುವದು :—

ಈ ವರ್ಗದ ಹುಡುಗಿಯರಿಗೆ ಜಿಲ್ಲೆಯ ಭೂಗೋಲವನ್ನು ಕಲಿಸುವದೇ ಮುಖ್ಯವಾಗಿರುವದರಿಂದ, ಆ ಜಿಲ್ಲೆಯ ನಕಾಶವನ್ನೇ ಬೋರ್ಡಿನ ಮೇಲೆ ತೆಗೆದು, ಅದರಲ್ಲಿ ಮೇಲೆ ಹೇಳಿದ ಮೇರೆಗೆ ಪಟ್ಟಣ ಮುಂತಾದವುಗಳನ್ನು ವಿದ್ಯಾರ್ಥಿನಿಯರ ಕೈಯಿಂದ ಆಯಾಯ ಸ್ಥಳಗಳಲ್ಲಿ ಬರಿಸುವದು ಹಿತಕರವಾದಷ್ಟು, ಕರ್ನಾಟಕ ಪ್ರಾಂತದ ವಿಸ್ತಾರವಾದ ನಕಾಶದಲ್ಲಿ ಸದರೀ ಕಾರ್ಯಗಳನ್ನು ಯಥಾಕ್ರಮವಾಗಿ ಮಾಡಿಸುವದು ಹಿತಕರವಾಗಿಯೂ, ಸುಲಭವಾಗಿಯೂ ತೋರುವದಿಲ್ಲ ಆ ಕಾರಣ ಪ್ರಾಂತದ ನಕಾಶದ ಬದಲು, ಜಿಲ್ಲೆಯ ನಕಾಶವನ್ನೇ ಇಡುವದು ಹೆಚ್ಚು ಶ್ರೇಯಸ್ಕರವಾಗಿದೆ.

(೬ನೇ ಸದರ) ಸೃಷ್ಟಿಚಮತ್ಕಾರಗಳು :—

ಇವುಗಳ ಸ್ಪಷ್ಟಾರ್ಥವು ನನಗೆ ತಿಳಿದುದ್ದರಿಂದಲೋ ಏನೋ, ಈ ವಿಷಯವನ್ನು ಕಲಿಸುವದು ನನಗೆ ಸ್ವಲ್ಪ ನಿಗಿಯಾಗಿ ತೋರುತ್ತದೆ. ೨ನೇ ೩ನೇ ಇಯತ್ತೆಯ ಹುಡಿಗಿಯರಿಗೆ ಯಾವ ಭಿನ್ನಾವ ತರದ ಸೃಷ್ಟಿಚಮತ್ಕಾರಗ

ನ್ನು ಹ್ಯಾಗೆ ಹ್ಯಾಗೆ ಕಲಿಸಬೇಕು ? ಇದನ್ನಷ್ಟು ನನಗೆ ಯಾ ರಾದರು ಮಹಾತ್ಮರು ದಯವಾಡಿ ತಿಳಿಸಿದರೆ, ಅವರ ಉಪ ಕಾರವನ್ನು ಎಂದಿಗೂ ಮರೆಯುವಿಕ್ಕಿಲ್ಲ

೪ನೇ ಇಯತ್ತೆ—(೩ನೇ ಸದರು) ಪರೀಕ್ಷಕರು ೪ನೇ ಪುಸ್ತಕದೊಳಗಿನ ಓದಿಹೇಳಿದ ಕಥೆಯ ಸಾರಾಂಶವನ್ನು ಬ ರೆಯುವದು :—

ವ್ಯಾಕರಣ ಸೂತ್ರಗಳಿಗನುಸರಿಸಿ ಪದಗಳನ್ನು ಯೋಗ್ಯ ಸ್ಥಾನಗಳಲ್ಲಿಟ್ಟು, ವಾಕ್ಯರಚನೆ ಮಾಡುವಷ್ಟು ಜ್ಞಾನವು, ಈ ವರ್ಗದ ಹುಡುಗಿಯರಿಗೆ ಇನ್ನೂ ಉಂಟಾಗಿರುವದಿಲ್ಲಾದ ಕಾರಣ, ಈ ವಿಷಯವನ್ನು ಇದರೊಳಗಿಂದ ಕಡಿಮೆ ಮಾ ಡಿ, ಮುಂದಿನ ೫ನೇ ಇಯತ್ತೆಯ ವಿಷಯಗಳಲ್ಲಿ ಸಮಾವೇ ಶ ಮಾಡುವದು ಉಚಿತವಾಗಿ ತೋರುತ್ತದೆ.

(೪ನೇ ಸದರು ಬ) ಹಿಂದುಸ್ತಾನದ ಹಾಗು ಮುಂಬಯಿ ಇಲಾಖೆಯ ಭೂಗೋಲದ ಸಾಧಾರಣ ಜ್ಞಾನವು. ಕರ್ನಾಟಕ ಪ್ರಾಂತದ ಪ್ರಾಕೃತಿಕ, ರಾಜಕೀಯ ಹಾಗು ಔದ್ಯೋಗಿ ಕ ಭಾಗಗಳ ವಿಶೇಷ ಜ್ಞಾನವು :—

ಈ ವರ್ಗದ ಬಾಲಿಕೆಯರಿಗೆ ಮೂರೂ ಸಕಾಶಗಳ ಜ್ಞಾ ನವು ಒಮ್ಮೆಲೆ ಒಂದೇ ವರ್ಷದೊಳಗೆ ಹ್ಯಾಗ ಆಗಬೇಕು?

ಉಧ್ಯಾಪಕರೂ ವಿದ್ಯಾರ್ಥಿನಿಯರೂ ಕೂಡಾ, ಕೇವಲವು ಕ ಕೆಲಸವು ಇವುಗಳಲ್ಲಿ ಹಿಂದುಸ್ತಾನ ಸಕಾಶವು ೫ನೇ ಇಯತ್ತೆಗೆ ಈಗ ಹ್ಯಾಗೂ ಇಡಲ್ಪಟ್ಟಿರುವದರಿಂದ, ಅದನ್ನಷ್ಟು ಮಾತ್ರ ಈ ವರ್ಷದಿನೊಳಗಿಂದ ತೆಗೆದು ಹಾಕಿದರೆ ಬಹಳ ಹಾಗುವದು.

೫ನೇ ಇಯತ್ತೆ—(೧ನೇ ಸದರು ಅ) ವ್ಯವಹಾರೀ ಅ ಪೂರ್ಣಾಂಕವು :—

ಈ ಅಪೂರ್ಣಾಂಕದ ಮೇರೆ ಇಷ್ಟೇ ಎಂದು ಗೊತ್ತು ಪ ಡಿಸುವಂತೆ ಇಲ್ಲ. ಈ ವಿಷಯವು ವ್ಯಾಪಕವಾದದ್ದೂ, ಕಠಿ ಣವಾದದ್ದೂ ಇರುತ್ತದೆ. ಹ್ಯಾಗೆ ದಶಾಂಶ ಅಪೂರ್ಣಾಂಕ ವೋ ಹಾಗೇ ಈ ವ್ಯವಹಾರೀ ಅಪೂರ್ಣಾಂಕವು. ಈ ಜಾತಿ ಯ ಅನೇಕ ಕಠಿಣ ಉದಾಹರಣೆಗಳು ಮುಲ್ಕೀ ಪರೀಕ್ಷೆ

ಯು ಕಾಗದಗಳಲ್ಲಿ ಹಾಕಿದ್ದು ಕಾಣಬಹುದು. ಮುಂದಿನ ೬ನೇ ಇಯತ್ತೈಯೊಳಗಿನ ದಶಾಂಶ ಅಪೂರ್ಣಾಂಕದ ಕಠಿಣ ಭಾಗವನ್ನು ತೆಗಿದು ಹಾಕಿದಂತೆ, ಇದರೊಳಗೂ ವ್ಯವಸ್ಥೆ ಯಾದರೆ ಬಹಳೀ ಹಿತವಾಗುವದೆಂಬದಕ್ಕೆ ಸಂದೇಹವಿಲ್ಲ.

(ಸಶೇಷ)

PROCLAMATION & DECLARATION OF EMPEROR EDWARD VII.

ಶ್ರೀಯುತ ಚಕ್ರವರ್ತಿ ೭ನೇ ಎಡ್ವರ್ಡ ಮಹಾ ಪ್ರಕಟನೆಯೂ ಅಭಿವಚನವೂ.

ಗ್ರೇಟಬ್ರಿಟನ್ ಆಯರ್ಲಂಡಗಳ ಅರಸರೂ, ಹಿಂದುಸ್ಥಾನದ ಚಕ್ರವರ್ತಿಗಳೂ ಆದ ಕೃಪಾಸಾಗರ ೪ನೇ ಎಡ್ವರ್ಡ ರಾಜರವರು ಪಟ್ಟಕ್ಕೆ ಬಂದ ಬಗ್ಗೆ ನೇಕನಾಮದಾರ ಗವ್ನರ್ನರ ಇನ್ ಕೌನ್ಸಿಲ್ ಮುಂಬಯಿ. ಇವರ ಅಪ್ಪಣೆಯ ಮೇರೆಗೆ ತಾ॥ ೨೦ನೇ ಜನವರಿ ೧೯೦೧ನೇ ಇಸವಿಯ ದಿವಸ ಮುಂಬಯೀಯ ವಿಶೇಷವಾದ ಸರಕಾರೀ ಗೆಜೆಟಿನಲ್ಲಿ ಪ್ರಸಿದ್ಧಿಪಡಿಸಲ್ಪಟ್ಟಂಥ ಪ್ರಕಟನೆಯೂ ಅಭಿವಚನವೂ.

ಪ್ರಕಟನೆ.

ಸದ್ಯದಲ್ಲಿ ನಿವರ್ತಿಸಿದಂಥ ನಮ್ಮನ್ನು ಆಳುವ ಅರಸಿಯ ರಾದಂಥ ಚಿರಸ್ಮರಣೀಯರಾದಂಥ ಸುಯೆಶೋಭಾಕ್ರಾದಂಥ ವಿಕ್ಟೋರಿಯಾ ಮಹಾರಾಣಿಯವರನ್ನು ಸರ್ವಶಕ್ತಿವಂತನಾದ ದೇವರು ತನ್ನ ಕರುಣಾಸನ್ನಿಧಾನಕ್ಕೆ ಬರಮಾಡಿಕೊಳ್ಳಲು ಪ್ರೀತಿಸಿದ್ದರಿಂದ ಅವರ ಮರಣದ ಮೂಲಕ ಗ್ರೇಟ ಬ್ರಿಟನ್ ಆಯರ್ಲಂಡಗಳೆಂಬ ಸಂಯುಕ್ತ ರಾಜ್ಯದ ಸಾರ್ವಭೌಮತ್ವವು ಅನನ್ಯವಾಗಿಯೂ ಯಥಾನ್ಯಾಯವಾಗಿಯೂ ಮಹನೀಯರೂ ಪ್ರತಾಪಶಾಲಿಗಳೂ ಆದ ಆಲ್ಬರ್ಟ ಎಡ್ವರ್ಡ ಯುವರಾಜರಿಗೆ ಪ್ರಾಪ್ತವಾದ ಕಾರಣ ಈ ರಾಜ್ಯದ ಧರ್ಮ ಸಂಬಂಧದ ಪ್ರಭುಗಳೂ ಲೌಕಿಕ ಪ್ರಭುಗಳೂ ಆದಂಥ ನಾವು ಈಗ ನಿವರ್ತಿಸಿರುವ ರಾಜ್ಞಿಯವರ ವಿಶ್ವಾಸ

ನ್ಸಿಲ್ (ಲೆಪ್ಲಾಲೋಚೆನಾ ಸಭೆ) ದವರಿಂಡಲೂ, ಸ್ಥಿತಿವಂತರಾದಂಥ ಬೇರೆ ಅನೇಕ ಪ್ರಮುಖ ಗೃಹಸ್ಥರಿಂದಲೂ, ಲಂಡನ್ನಿನ ಲಾರ್ಡ್ ಮೇಯರ, ಅಲ್ಡರಮೆನ್ ಪುರನಿವಾಸಿಗಳಿಂದಲೂ ಒಡಗೂಡಿದವರಾಗಿ ವಾಙ್ಮನಸ್ಸುಗಳ ಐಕ್ಯಭಾವದಿಂದ ನಮ್ಮನ್ನು ತಿಸಿದವರಾಗಿ, ಸಾಂಪ್ರತದಲ್ಲಿ ಈ ಮೂಲಕವಾಗಿ ಪ್ರಕಟಿಸುವದೂ ಸಾರುವದೂ ಏನಂದರೆ-- ಮಹನೀಯರಾದಂಥ, ಶಕ್ತಿವಂತರಾದಂಥ ಆಲ್ಬರ್ಟ್ ಎಡ್ವರ್ಡ್ ಯುವರಾಜರು ನಮ್ಮನ್ನು ಗತಿಸಿ ಹೋದಂಥ ಸುಖಿಸಂಸ್ಮೃತಿವಿಷಯರಾದಂಥ ಅರಸಿಯವರ ಮರಣದಿಂದ ಯಥಾನೀತಿಯಾಗಿಯೂ ಯಥಾನ್ಯಾಯವಾಗಿಯೂ ದೇವರ ಕರುಣೆಯಿಂದ ನಮ್ಮ ಏಳನೇ ಎಡ್ವರ್ಡ್ ಪ್ರಭುಗಳೂ, ಒಡೆಯರೂ, ಗ್ರೇಟ್ ಬ್ರಿಟನ್ ಆಯರ್ಲಂಡಗಳ ಸಂಯುಕ್ತರಾಜ್ಯದ ಅರಸರೂ, ಧರ್ಮಸಂರಕ್ಷಕರೂ, ಇಂಡಿಯದ ಚಕ್ರವರ್ತಿಯರೂ ಆಗಿರುವರು. ಅರಸರೂ ಅರಸಿಯರೂ ಯಾವ ದೇವರ ಮಹಿಮೆಯಿಂದ ರಾಜ್ಯವಾಳುವರೋ ಆ ದೇವರು ಏಳನೇ ಎಡ್ವರ್ಡ್ ರಾಜರಿಗೆ ನಮ್ಮ ಮೇಲೆ ಬಹು ದಿವಸ ಸೌಖ್ಯದಿಂದ ಆಳುವ ಸಾಮರ್ಥ್ಯವನ್ನು ಈಯಲೆಂದು ಬೇಡಿಕೊಂಡು ಅವರಿಗೆ ನಾವು ಪೂರ್ಣಾಂತಃಕರಣವಿನಯಗಳಿಂದ ಯುಕ್ತವಾದ ಪ್ರೀತಿಯಿಂದ ವಿಶ್ವಸ್ತರಾಗಿರುವೆವೆಂತಲೂ, ಸದಾಕಾಲದಲ್ಲಿ ವಿಧೇಯರಾಗಿರುವೆವೆಂತಲೂ ಒಪ್ಪಿಕೊಳ್ಳುತ್ತೇವೆ.

ನಮ್ಮ ಪ್ರಭುವಿನ ಶಕದ ೧೮೦೧ನೇ ವರ್ಷದ ಜನವರಿ ತಿಂಗಳ ಈ ೨೨ನೇ ತಾರೀಖಿನ ದಿವಸ ಸೆಂಟಜೇಮ್ಸ್ ಅರಸ್ಥಾನದಲ್ಲಿ ಪ್ರಕಟಿಸಲ್ಪಟ್ಟದ್ದು.

ಆ ಭಿ ವ ಚ ನ ವು.

ರಾಜಕುಲಸಂಭೂತರಾದ ಮಹನೀಯರೇ, ಘನವಂತರೇ, ಗೃಹಸ್ಥರೇ,

ನಿಮಗೆ ನಾನು ನಿವೇದಿಸತಕ್ಕಂಥ ಈ ಹೊತ್ತಿನ ಪ್ರಸಂಗವು ಅತ್ಯಂತ ಕ್ಲೇಶಕರವಾಗಿದೆ. ನನ್ನ ಪ್ರಿಯ ಮಾತುಃಶ್ರೀಯವರಾದ ರಾಜ್ಞಿಯವರ ಮರಣದ ಸುದ್ದಿಯನ್ನು ತಮಗೆ ಅರುಹತಕ್ಕದ್ದೇ ನನ್ನ ಮೊದಲನೇ ಖೇದಕರವಾದ ಕರ್ತವ್ಯವು

ನಮ್ಮೆಲ್ಲರಿಗೂ ಸಂಘಟಿಸಿರುವಂಥ, ಎಂದೂ ತುಂಬಿ ಬಾಳ ವಂಥ ಹಾನಿಯಬಗ್ಗೆ ನೀವೂ ಸಮಸ್ತ ರಾಷ್ಟ್ರವೂ ಹಾಗೂ ನಾನು ಎಣಿಸುವಂತೆ ಇಡೀ ಜಗತ್ತೂ ನನ್ನನ್ನೂ ನಿರತಿಶಯ ವಾಗಿ ಅನುಕಂಪಿಸುತ್ತೀರೆಂಬದನ್ನು ನಾನು ಅರಿತಿರುವೆನು. ಈಗ ನನ್ನ ಮೇಲೆ ಬಿದ್ದಿರುವ ಕಾರ್ಯಭಾರವನ್ನು ನಿರ್ವಹಿ ಸುವಲ್ಲಿ ನಾನು ಯಾವಾಗಲೂ ಆಕೆಯ ಪದಪಂಬ್ತಿಗಳನ್ನೇ ಅನುಸರಿಸುವದಕ್ಕೆ ಪ್ರಯತ್ನಿಸುವೆನೆಂದು ಅಡಿತೋರಿಸುವದು ಬಹುಶಃ ಅನಾವಶ್ಯಕವೇ. ನಾನು ರಾಜ್ಯಸಂಸ್ಥೆಯ ಅತ್ಯಂತ ಸೂಕ್ಷ್ಮಾರ್ಥಕ್ಕೆ ಸರಿಯಾಗಿ ರಾಜ್ಯವ್ಯವಸ್ಥಾನುವರ್ತಿಯಾದ ಅರಸನಾಗಿರಬೇಕೆಂತಲೂ, ನನ್ನ ಶರೀರದಲ್ಲಿ ಪ್ರಾಣವು ಇರು ವವರೆಗೆ ನನ್ನ ಪ್ರಜೆಗಳ ಹಿತಕ್ಕಾಗಿಯೂ, ಅಭಿವೃದ್ಧಿಗಾಗಿ ಯೂ ಪರಿಶ್ರಮ ಮಾಡುತ್ತಿರಬೇಕೆಂತಲೂ ದೃಢವಾದ ಸಂಕ ಲ್ಪವನ್ನು ಮಾಡಿದ್ದೇನೆ. ನನ್ನ ಪೂರ್ವಜರಲ್ಲಿ ಅರು ಜನರು ಧರಿಸಿದಂಥ ಎಡ್ವರ್ಡ ಎಂಬ ನಾಮಾಭಿಧಾನವನ್ನೇ ನಾನು ಸ್ವೀಕರಿಸಬೇಕೆಂದು ನಿಶ್ಚೈಸಿದ್ದೇನೆ. ಇದರಿಂದ "ಒಳ್ಳೆಯವ ರಾದ ಆಲ್ಬರ್ಟ" ರೆಂಬ ಹೆಸರಿನಿಂದ ಜಗನ್ಮಾನ್ಯವಾಗಿ ಹೆಸರು ವಾಸಿಯಾಗಿರುವಂಥ, ಸತತ ಶೋಕವಿಷಯರಾದಂಥ, ಮಹಾ ನುಭಾವರಾದಂಥ, ಧೀಮಂತರಾದಂಥ ನನ್ನ ತಂದೆಯವರಿಂದ ನನಗೆ ಪರಂಪರಾಗತವಾಗಿ ಪ್ರಾಪ್ತವಾಗಿರುವ "ಆಲ್ಬರ್ಟ" ಎಂಬ ಹೆಸರನ್ನು ಹೀನಯಿಸುವದಿಲ್ಲ; ಅವರ ಹೆಸರು ಅದ್ವಿ ತೀಯವಾಗಿ ಬಾಳಬೇಕೆಂದು ಬಯಸುತ್ತೇನೆ. ಕಡೆಯಲ್ಲಿ, ನನಗೆ ವಂಶಪರಂಪರಾಗತವಾಗಿ ಪ್ರಾಪ್ತವಾಗಿರುವಂಥ, ನನ್ನ ಉಳಿದ ಆಯುರ್ಮಾನದಲ್ಲಿ ನನ್ನ ಯಾವತ್ತು ಸಾಮರ್ಥ್ಯ ವನ್ನು ಅರ್ಪಿಸಬೇಕೆಂದು ನಾನು ನಿಶ್ಚೈಸಿರುವಂಥ, ಶ್ರಮ ಪ್ರಜೆರವಾದಂಥ ಕರ್ತವ್ಯವನ್ನು ಜರುಗಿಸುವಲ್ಲಿ ನನಗೆ ಪಾ ರ್ಲಿಮೆಂಟಿನವರೂ ರಾಷ್ಟ್ರದವರೂ ಸಹಾಯ ಮಾಡುವರೆಂ ದು ನಂಬುತ್ತೇನೆ.

ನಿತ್ಯನಾಥ [redacted]

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮುಂ।
ಉಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ಜಯದಿಂದಿತ್ತೆವೊದುವರ್ಗಸುಗುಣಂ ತೋರಲ್ಕೆಕೈಕೊಂಬುದೈ।
ದಯೆಯಿಂದೋಷವತಿದ್ದವೇಳ್ವುದುಮಧರ್ಜ್ಞಾನಾಭಿವೃದ್ಧಿಪ್ರಿಯರಿ॥೧

ಪುಸ್ತಕ ೩೭] ಜೂನ ೧೯೦೧. [ಸಂಚಿಕೆ ೬.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈಗ ನಡೆಯುವ ೨೦ನೇ ಶತಮಾನದ ಮೊದಲನೆ ಸೂರ್ಯಗ್ರಹಣವು ಕಳೆದ ತಿಂಗಳ ೧೪ನೆ ತಾರೀಖಿನ ದಿವಸ ಆಯಿತಷ್ಟೆ. ಈ ಗ್ರಹಣವು ಹಿಂದುಸ್ಥಾನದ ಬಹುತರ ಯಾವತ್ತು ಭಾಗಗಳಲ್ಲಿ ಕಾಣಿಸಿತು. ಆದರೆ ಈ ದೇಶದಲ್ಲಿ ಅದು ಪೂರ್ಣಗ್ರಸ್ತವಾಗಿ ಕಾಣಿಸಿದ್ದಾಗ್ಯೂ ಪ್ಯಾಡಾಂಗ್ (ಸುಮಾತ್ರಾ) ಮಾರಿಶಸ್ ಇವೇ ಮೊದಲಾದ ಸ್ಥಳಗಳಲ್ಲಿ ಖಗ್ರಾಸವಾಗಿ ಕಾಣಿಸಿತು ಸೂರ್ಯನ ಖಗ್ರಾಸ ಗ್ರಹಣಗಳು ಮೇಲೆ ಮೇಲೆ ಆಗುವದಿಲ್ಲ. ಹಾಗೂ ಖಗ್ರಾಸದ ಪರಮಾವಧಿಕಾಲವು ೭ ಮಿನಿಟುಗಳಿಗಿಂತಲೂ ಎಂದೂ ಹೆಚ್ಚು ಇರುವದಿಲ್ಲ. ಎರಡು ಮೂರು ಮಿನಿಟುಗಳಿಗಿಂತ ಹೆಚ್ಚು ಕಾಲ ಖಗ್ರಾಸವಿರುವ ಗ್ರಹಣಗಳಾದದ್ದೂ ಬಹಳ ಅಪರೂಪವಾಗಿರುತ್ತವೆ. ಈಗಿನ ಸೂರ್ಯಗ್ರಹಣವು ಮಾರಿಶಸ್ ನಡುಗಡ್ಡೆಯಲ್ಲಿ ಮೂರೂವರೆ ಮಿನಿಟುಗಳವರೆಗೂ, ಪ್ಯಾಡಾಂಗದಲ್ಲಿ ಆರೂವರೆ ಮಿನೀಟುಗಳ ವರೆಗೂ ಖಗ್ರಾಸವಾಗಿ ಕಂಡದ್ದರಿಂದ ಅದು ಸೂರ್ಯನ ಪ್ರಕೃತಿ ಸ್ವರೂಪವನ್ನೂ ವಾತಾವರಣದ ಸ್ವರೂಪವನ್ನೂ ನಿಶ್ಚೈಸುವ ಬಗ್ಗೆ ಶೋಧಮಾಡುವಂಥ ಜ್ಯೋತಿಷಜ್ಞರಿಗೆ ಬಹಳ ಗೌರವವ

ಪ್ರಿದ್ದಾಗಿತ್ತು. ೧೪೯೪ ಇಸವಿಯಲ್ಲಿ ಅದ ಖಗ್ರಾಸ ಸೂರ್ಯಗ್ರಹಣದ ಕಾಲಕ್ಕೆ ಪ್ರಸಿದ್ಧರಾದ ಅನೇಕ ಜ್ಯೋತಿಷ ಶಾಸ್ತ್ರಜ್ಞರು ಬೇರೆ ಬೇರೆ ದೇಶಗಳಿಗೆ ಹೋಪಂತೆ ಈ ಸಾರೆ ಯಾವರೂ ಹಲವು ಹೆಸರಾದ ಜ್ಯೋತಿಷಜ್ಞರು ಮೇಲೆ ಕಾ ಶಿಸಿದ ಸ್ಥಳಗಳಿಗೆ ಹೋಗಿದ್ದರು. ಅವರ ಶೋಧಗಳಿಂದ ಸೂರ್ಯನ ಪ್ರಕೃತಿಸ್ವರೂಪದ ವಿಷಯದಲ್ಲಿ ನಮಗೆ ಈಗ ಇದ್ದ ಜ್ಞಾನವು ಬೆಳೆಯುವದೆಂದು ನಂಬುತ್ತೇವೆ. ಖಗ್ರಾಸ ಸೂರ್ಯಗ್ರಹಣವು ಇನ್ನೂ ಅನೇಕ ವರ್ಷಗಳ ವರೆಗೆ ಇ ರುವದಿಲ್ಲ.

ಈಗ ಕೆಲವು ದಿವಸದಿಂದ ಮೃಗನಕ್ಷತ್ರದ ಹತ್ತರ ಒಂ ದು ಧೂಮಕೇತುವು ಅಂದರೆ ಬಾಲ ಚಿಕ್ಕಿಯು ಕಾಣಿಸುತ್ತ ಲಿರುವದು ಆದರೆ ಇದು ಬರಬರುತ್ತಾ ತೀರ ಅಸ್ಪಷ್ಟವಾ ಗಿ ಕಾಣಿಸುತ್ತ ನಡೆದದೆ.

ವಿದ್ಯಾಖಾತೆಗೂ ರಾಜ್ಯದಾಜ್ಞೆಗೂ ಶಾಲೆಗಳಿಗೂ ಇರುವ ಸಂಬಂಧವನ್ನು ಎಷ್ಟೋ ಜನರು ಅರಿತಿರುವದಿಲ್ಲ. ಅವ್ಯರಿಂದ ಆ ವಿಷಯವಲ್ಲಿ ಒಂದು ಉದಾಹರಣೆಯನ್ನು ಇ ಲ್ಲಿ ಕೊಡುತ್ತೇವೆ ಈಗಿನ ೫೦ ವರ್ಷಗಳಲ್ಲಿ ಇಂಗ್ಲಂಡದ ಲ್ಲಿ ವಿದ್ಯಾಪ್ರಸಾರವು ಬಹಳ ಭರದಿಂದ ಸಾಗಿರುತ್ತದಷ್ಟೇ ಅಲ್ಲಿ ಸನ್ ೧೪೭೦ ರಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಗುವ ಬಾಲಕರ ಸಂಖ್ಯೆಯು ೧೪ ಲಕ್ಷ ಇತ್ತು ಈಗ ಆ ಸಂಖ್ಯೆ ಯು ೫೦ ಲಕ್ಷದ ಮೇಲೆ ಹೋಗಿರುತ್ತದೆ ಆದರೆ ಇದೇ ಅ ವಧಿಯಲ್ಲಿ ಸೆರೆಮನೆಯಲ್ಲಿದ್ದ ಕೈದಿಗಳ ಸಂಖ್ಯೆಯು ೨೧೦೦೦ ರಿಂದ ೧೫೦೦೦ ರಷ್ಟಕ್ಕೆ ಇಳಿದಿರುತ್ತದೆ. ದೇಶದೊಳಗಿನ ಜನ ಸಂಖ್ಯೆಯಂತೂ ಒಂದೇ ಸವನಾಗಿ ಬೆಳೆಯುತ್ತಲೇ ಇದೆ. ಜನಸಂಖ್ಯೆಯು ಮಾನದಿಂದ ಅಪರಾಧಿಗಳ ಸಂಖ್ಯೆಯೂ ಬೆಳೆ ಯುತ್ತ ಹೋಗಿದ್ದರೆ ಅದು ಮೊದಲಿನದಕ್ಕಿಂತ ಇಮ್ಮಡಿ ಅ ಥವಾ ಅದಕ್ಕೂ ಹೆಚ್ಚು ಬೆಳೆದು ಪೋಲೀಸ ಖಾತೆಯು ಖ ರ್ಚೂ, ನ್ಯಾಯಖಾತೆಯು ಖರ್ಚೂ, ಸೆರೆಮನೆಗಳ ಖ ರ್ಚೂ ಮಿತಿಮೀರಿ ಬೆಳೆಯುತ್ತಿತ್ತು. ಆದರೆ ದೇಶದೊಳಗ

ವಿದ್ಯಾಪ್ರಸಾರವು ಬಹಳ ಭರದಿಂದ ನಡೆದವರಿಂದ ಇಪ್ಪು ಖರ್ಚು ಉಳಿದಂತಾಯಿತು. ಈ ಸುಪರಿಣಾಮವು ಬಹಳ ಮಟ್ಟಿಗೆ ಹುಡುಗರು ಚಿಕ್ಕಂದಿನಲ್ಲಿ ಸಾಲೆಗಳಿಗೆ ಹೋಗುವ ದರಿಂದ ಅವರಿಗೆ ಉಡಾಳ ಜನರ ಸಹವಾಸವು ಕಡಿಮೆಯಾಗುವದರಿಂದಲೂ ಅವರು ಸತ್ಸಂಗತಿಯಲ್ಲಿ ಹೆಚ್ಚು ಸೇರುವದರಿಂದಲೂ ಉಂಟಾಗುತ್ತದೆಂದು ಹೇಳಬಹುದು. ಇದರಂತೆಯೇ ನಿದ್ಯೆಯಿಂದ ಪ್ರತ್ಯಕ್ಷವಾಗಿ ಕಂಡುಬಾರದಿದ್ದರೂ ವಿಚಾರ ಮಾಡಿದಲ್ಲಿ ಅಪ್ರತ್ಯಕ್ಷವಾಗಿ ಆಗುವಂಥ ಸುಪರಿಣಾಮಗಳು ಅನೇಕ ಇರುತ್ತವೆ.

ಇತ್ತಲಾಗಿ ಅಲ್ಯುಮಿನಿಯಮ್ ಎಂಬ ಹೊಸ ಬಿಳೇ ಧಾತುವಿನಿಂದ ಪಾತ್ರೆಗಳನ್ನು ಮಾಡುತ್ತಾರೆಂಬದನ್ನು ಅನೇಕ ಜನರು ಕೇಳಿದ್ದೂ ನೋಡಿದ್ದೂ ಇರಬಹುದು. ಈ ಧಾತುವಿನಿಂದ ಮಾಡಿದ ಪಾತ್ರೆಗಳು ಹಗುರವಾಗಿರುವದರಿಂದಲೂ, ಅವುಗಳಲ್ಲಿ ಇಟ್ಟ ದೂವ ಪದಾರ್ಥವೂ ಎಂದೂ ಕೆಲುಬುವ ಎಲ್ಲಮಾಧ್ಯರಿಂದಲೂ ಬರಬರುತ್ತಾ ಈ ಧಾತುವಿನ ಪಾತ್ರೆಗಳು ಬಹಳವಾಗಿ ಜನರ ಬಳಿಕೆಯಲ್ಲಿ ಬರುವ ಲಕ್ಷಣ ತೋರುತ್ತದೆ. ಈ ಧಾತುವಿನ ವಿಷಯದಲ್ಲಿ ಇಲ್ಲಿ ಹೇಳತಕ್ಕಂಥ ವಿಶೇಷ ಸಂಗತಿಯೇನೆಂದರೆ, ಈ ಧಾತುವಿನಿಂದ ತ್ರಿಶೂಲ ಉಂಗುರ ಕಿವಿಯ ತಗಡುಗಳನ್ನು ಮಾಡಿ ಅವುಗಳನ್ನು ಸುರಕೋಸುತ್ತಲಿಕ್ಕೂ ಬೇಕಾದಂತೆ ಮಡಿಚಲಿಕ್ಕೂ ಬರುತ್ತದೆ. ಇದಲ್ಲದೆ ಎಷ್ಟು ಕಾಗದಗಳಿಗಿಂತಲೂ ಹಗುರವಾಗಿ ಇವುಗಳಮೇಲೆ ಅಕ್ಷರಗಳನ್ನು ಮುದ್ರಿಸಲಿಕ್ಕೂ ಬರುತ್ತದೆ. ಈ ಧಾತುವಿನಿಂದ ಮಾಡುವಾಪ ಕಾಗದಗಳಿಗೆ ಚೆಂಕೆಯ ಭಯವೂ ಹರಿಯುವ ಸಂಶಯವೂ ಇಲ್ಲವೇ ಇಲ್ಲ. ಆಪ್ರಗಳನ್ನು ಬೇಕಾದಾಗ ತೊಳೆದು ಸ್ವಚ್ಛವಾಗಿಡಲಿಕ್ಕೂ ಬರುವದು. ಆದ್ದರಿಂದ ಮುಂಬೈಕಾಯಾನುಸಾರವಾಗಿ ವಾಚಕನ ಮುಂದಿನ ಪುಸ್ತಕಗಳಲ್ಲಿ ಇಷ್ಟಲ್ಲ ಇಂಥಾ ಈ ಧಾತುವಿನ ಕಾಗದಗಳಮೇಲೆ ಮುದ್ರಿಸಿದಂಥಾ ಗ್ರಂಥಗಳು ನಿಜವಾಗಿ ಅಜರಾಮರವಾಗುವವೆಂಬದಕ್ಕೆ ಏನು ಸಂದೇಹವಿಲ್ಲ.

ಕೆಲವು ಪದಾರ್ಥಗಳಲ್ಲಿ ಅವು ಪ್ರಕಾಶದಲ್ಲಿರುವಾಗ ಪ್ರಕಾಶವನ್ನು ಶೋಷಣೆ ಮಾಡುವ ಗುಣವಿರುತ್ತದೆ. ಈ ಪ್ರಕಾಶ ಅವು ಪ್ರಕಾಶವನ್ನು ಹೀರಿಕೊಂಡನಂತರ ಅವುಗಳನ್ನು ಕತ್ತಲೆಯಲ್ಲಿ ಬಿಟ್ಟು ಇಟ್ಟರೆ ಅವು ಆ ಪ್ರಕಾಶವನ್ನು ಹೊರಗೆ ಬಿಡುವವು. ಅದರಿಂದ ಮನುಷ್ಯನಿಗೆ ಕತ್ತಲೆಯಲ್ಲಿ ಕಾಣಿಸುವದು. ಬಾರಿಯಮ್, ಕಾಲಶಿಯಮ್ ಇವೇ ಮೊದಲಾದ ಹಲವು ಪದಾರ್ಥಗಳ ಸಲ್ಫಾಯಿಡಗಳು ಪ್ರಕಾಶವನ್ನು ಹೀರಿಕೊಳ್ಳುವವು, ಮತ್ತು ಅವುಗಳನ್ನು ಕತ್ತಲೆಯಲ್ಲಿ ಒಯ್ದು ಕೂಡಲೆ ಅದನ್ನು ಹೊರಗೆ ಬಿಡುವವು. ಗಡಿಯಾಲಗಳ ಮೇಲಣ ಮೈಯನ್ನು ಇಂಥ ಪದಾರ್ಥಗಳಿಂದ ಮಾಡಿದರೆ ಗಡಿಯಾಲಗಳಲ್ಲಿರುವ ಮುಳ್ಳುಗಳೂ ಅಂಕೆಗಳೂ ಕತ್ತಲಲ್ಲಿ ಕಾಣಿಸಲಿಕ್ಕೆ ಅಡ್ಡಿ ಇಲ್ಲ ಈ ಗುಣಕ್ಕೆ ಪ್ರಕಾಶವನು ನವೆಂದೆನ್ನುತ್ತಾರೆ ಇಂಥ ಪದಾರ್ಥಗಳಿಂದ ಶೋಷಣೆ ಮಾಡಲ್ಪಟ್ಟ ಪ್ರಕಾಶವು ಐದಾರು ತಾಸುಗಳಲ್ಲಿ ಹೊರಬಿದ್ದು ಹೋಗುವದು. ಆದರೆ ಮತ್ತೆ ಅವುಗಳನ್ನು ಪ್ರಕಾಶದಲ್ಲಿಟ್ಟರೆ ಅವು ಮತ್ತೂ ಪ್ರಕಾಶವನ್ನು ಶೋಷಣೆ ಮಾಡುವವು.

ಈಗಿನ ಕಾಲದಲ್ಲಿ ಮೇಲಿಂದ ಮೇಲೆ ಅನೇಕ ಹೊಸ ಶಾಸ್ತ್ರೀಯ ಶೋಧಗಳು ಆಗುತ್ತಾ ನಡೆದಿರುವದರಿಂದ ಬರಬರುತ್ತಾ ಪೃಥ್ವಿಯ ವಿಷಯದ ನಮ್ಮ ಜ್ಞಾನವೂ, ಇಡೀ ಜಗತ್ತಿನ ವಿಷಯದ ಜ್ಞಾನವೂ ಬೆಳಿಯುತ್ತಾ ನಡೆದಿರುತ್ತದೆಂದು ನಾವು ಪದೇಪದೇ ಸಾರಿ ಹೇಳಬಹುದು. ಆದರೆ ಪೃಥ್ವಿಯ ಲಯದ ವಿಷಯದಲ್ಲಿ ಅನೇಕ ಶಾಸ್ತ್ರಜ್ಞರು ಕಟ್ಟಿರುವಂಥ ಬಿಂದಕ್ಕೊಂದು ಮೇಳ ಕೂಡದಂಥ ಊಹೆಗಳನ್ನು ನೋಡಿದರೆ ಅರಿದಾಗುತ್ತದೆ. ಇವುಗಳಲ್ಲಿ ಕೆಲವುಗಳನ್ನು ಇಲ್ಲಿ ಕೊಡುತ್ತೇವೆ.

೧ ಭೂಮಿಯ ಮೇಲಿನ ಬಣಸಿಲದ ಭಾಗವು ಬರಬರುತ್ತಾ ಕಡಿಮೆಯಾಗಿ ಜಲಭಾಗವು ಹೆಚ್ಚುತ್ತಾ ನಡೆದದೆ. ಆದ್ದರಿಂದ ಕ್ರಮೇಣ ಕೆಲ ದಿವಸಗಳಲ್ಲಿ ಪೃಥ್ವಿಯೆಲ್ಲ ಜಲಮಯವಾಗಿ ಯಾವತ್ತೂ ಪ್ರಾಣಿಗಳು ಸತ್ತು ಹೋಗುವವು.

೨ ಉತ್ತರ ಧ್ರುವದ ಕಡೆಗೆ ದಿನದಿನಕ್ಕೆ ಹೆಚ್ಚು ಬರ್ಫದ ಸಂಚಯವು ಆಗುತ್ತ ನಡೆದದೆ. ಆದ್ದರಿಂದ ಕಾಲಾನುಸಾರವಾಗಿ ಆ ಕಡೆಗೆ ಪೃಥ್ವಿಯು ಹೆಚ್ಚು ಜಡವಾಗಿ, ಈಗಿದ್ದಪೃಥ್ವಿಯು ಸಮತೋಲವು ಇಲ್ಲದಂತಾಗಿ ಇತ್ತಲಾಗಿನ ಯಾವತ್ತು ಪದಾರ್ಥಗಳು ಆಕರ್ಷಣದಿಂದ ಬಮ್ಮಿಲಿ ಅತ್ತ ಕಡೆಗೆ ಎಳಿದೊಯ್ಯಲ್ಪಡುವವು. ಅದರಿಂದ ಮನುಷ್ಯ ಜಾತಿಯು ಸಮೂಲವಾಗಿ ನಾಶ ಹೊಂದುವದು.

೩ ಬರ ಬರುತ್ತ ಪೃಥ್ವಿಯು ಸೂರ್ಯನನ್ನು ಸಮೀಪಿಸುತ್ತಾ ಇದೆ. ಆದ್ದರಿಂದ ಕಡೆಗೆ ಪೃಥ್ವಿಯು ಸೂರ್ಯನಮೇಲೆ ಹೋಗಿ ಅಪ್ಪಳಿಸಿ ಯಾವತ್ತು ಜೀವಕೋಟಿಯು ಸಹಿತವಾಗಿ ಸುಟ್ಟು ನಾಶ ಹೊಂದುವದು.

೪ ಸನ್ ೨೦೦೦ನೇ ಇಸವಿಯಿಂದ ಮನುಷ್ಯ ಕುಲವು ಕುಂದುತ್ತಾ ಹೋಗಿ ಮುಂದೆ ಕೆಲವು ಕಾಲದಲ್ಲಿ ಮನುಷ್ಯರು ಕ್ರಿಮಿಕೀಟಕಗಳಷ್ಟು ಸಣ್ಣವರಾಗುವರು.

೫ ಬರ ಬರುತ್ತಾ ಪೃಥ್ವಿಯ ಮೇಲಿನ ನೀರಿನ ಸಂಚಯವು ಕಡಿಮೆಯಾಗುತ್ತಾ ನಡೆದದೆ ಆದ್ದರಿಂದ ಮುಂದೆ ಪೃಥ್ವಿಯ ಮೇಲೆ ಏನೂ ನೀರು ಇಲ್ಲದಂತಾಗಿ ಮನುಷ್ಯರೆಲ್ಲ ನೀರಡಿಸಿ ಸಾಯುವರು.

೬ ಸೂರ್ಯನು ಬಂದೇ ಸವನಾಗಿ ಸುಟ್ಟು ಹೋಗುತ್ತಿದ್ದಾನೆ. ಆದ್ದರಿಂದ ಬರ ಬರುತ್ತಾ ಸೂರ್ಯನು ಸಣ್ಣವನಾಗುತ್ತಾ ಅವನ ಉಷ್ಣತೆಯು ಕಡಿಮೆಯಾಗುತ್ತಾ ನಡೆದ ಹಾಗೆಲ್ಲ ಪೃಥ್ವಿಯ ಮೇಲೆ ಚಳಿಯು ಹೆಚ್ಚಾಗಿ ಪೃಥ್ವಿಯ ಮೇಲೆಲ್ಲ ಬರ್ಫವು ಪಸರಿಸಿ ಯಾವತ್ತು ಪ್ರಾಣಿಗಳು ಅಳಿದು ಹೋಗುವವು. ಆವರೂ ಇದರಿಂದ ನಾವೂ ನಮ್ಮ ಸಂತತಿಯವರೂ ಇನ್ನೂ ಸಾವಿರಾರು ವರ್ಷಗಳ ವರೆಗೆ ಭಯಪಡುವ ಕಾರಣವಿಲ್ಲ!

ಶ್ರೀಮದ್ವಿಕ್ಟೋರಿಯಾ ಚಕ್ರವರ್ತಿನಿಯವರು

(೧೫೫ನೇ ಪುಟದಿಂದ ಮುಂದೆ ಸಾಗಿದ್ದು.)

ಉಪಸಂಹಾರ—ನಾವು ಆರಂಭದಲ್ಲಿ ಮಾತು ಕೊಟ್ಟಂತೆ

ರಾಣಿಯವರ ಚರಿತ್ರವನ್ನು ಸಂಕ್ಷೇಪವಾಗಿ ಬರೆದೆವು. ಒಳ್ಳೆ ಗಡೆಯಲ್ಲಿ ಆಳಿ ಹೋದ ಅರಸರಲ್ಲಿ ಇವರಪ್ಪ ಕಾಲ ಇವರ ಪ್ಪ ಘನತೆಯಿಂದ ಇವರಪ್ಪ ವಿಸ್ತಾರವಾದ ರಾಜ್ಯವನ್ನು ಆಳಿದವರು ಅಪರೂಪ. ನಮ್ಮ ಶಾಸ್ತ್ರದಲ್ಲಿ ಪೂರ್ವಜನ್ಮದ ಸುಕೃತದಂತೆ ಸುಖದುಃಖಗಳು ಪ್ರಾಪ್ತವಾಗುತ್ತವೆಂದು ಹೇಳಿಯಿದೆ. ಮತ್ತು ತಪಸ್ಸಿನಿಂದ ರಾಜ್ಯಪ್ರಾಪ್ತಿಯಾಗುತ್ತದೆಂತಲೂ ಬರೆದದೆ. ಅದರಿಂದರಾಜ್ಞಿಯವರು ಮುಂಬಾಳ್ವೆಯಲ್ಲಿ ಘನವಾದ ತಪಸ್ಸನ್ನು ಎಸಗಿರಬಹುದೆಂದು ತರ್ಕಿಸುವದು ತಪ್ಪಿನಿಸದು. ಇದಲ್ಲದೆ ಸಂತತಿ, ಸಂಪತ್ತು, ಆಯುಷ್ಯ, ಆರೋಗ್ಯ, ಕೀರ್ತಿ ಮುಂತಾದವುಗಳಾದರೂ ಪುಣ್ಯವೃಕ್ಷದ ಫಲಗಳಾಗಿರುತ್ತವೆ. ಹೀಗೆ ನೋಡಿದರೂ ಇವರು ಘನವಾದ ಪುಣ್ಯಶಾಲಿಗಳೆಂದು ಸಿದ್ಧವಾಗುತ್ತದೆ ಇದು ಒತ್ತಟ್ಟಿಗಿರಲಿ, "ಶರಣರ ಸಾವು ಮರಣದಲ್ಲಿ" ಎಂಬ ನ್ಯಾಯವಿಯುಂತೆ ಪುಣ್ಯವಂತರು ಸಾಯುವಾಗ "ಎಮ್ಮೆಯ ಕರ ಕಸಬರಿಗೆ ತಿನ್ನುತ್ತದೋ" ಎಂದು ಬದರುತ್ತಾ, ಧನಕನಕಗಳನ್ನು ನೋಡಿ ಮರಗುತ್ತಾ ದೇವರ ನೆಲೆಯನ್ನರಿಯದೆ ಕೆಸವಿಸಿಗೊಂಡು ಬದ್ಧಾಡುತ್ತ ಪ್ರಾಣ ಬಿಡುವ ನುಷ ಜೀವಿಯಂತ ಸಂಕಟ ಪಡದೆ ಸಮಾಧಾನವ್ಯಕ್ತಿಯಿಂದಲೂ ಪರಮೇಶ್ವರನನ್ನು ನೆನಸುತ್ತಲೂ ಪ್ರಾಣಗಳನ್ನು ಬಿಡುವರು. ರಾಣಿಯವರು ಬಹುದಿವಸ ಹಾಸಿಗೆಯನ್ನು ಹಿಡಿಯದೆ ಬಳಗದವರ ನಡುವೆ ಬಹು ಸಮಾಧಾನದಿಂದ ದೇಹವಿಟ್ಟರೆಂಬ ಮಾತಿನಿಂದಲೂ ಇವರು ಪುಣ್ಯಶಾಲಿಗಳಾಗಿದ್ದರೆಂದು ಸಿದ್ಧವಾಗುತ್ತದೆ. ಈ ಬಗೆಯಾಗಿ ಪಾಪರಹಿತೆಯಾದ ರಾಣಿಯವರಿಗೆ ಈ ಲೋಕದಲ್ಲಿ ಅಪಾರ ಸುಖವನ್ನು ಕೊಟ್ಟ ವಿಶ್ವಂಭರನು ಪರಲೋಕದಲ್ಲಿಯಾದರೂ ಇವರಿಗೆ ನಿತ್ಯಸುಖವನ್ನು ಕೊಡುವನೆಂಬದಕ್ಕೆ ಸಂದೇಹವಿಲ್ಲ. ಅನಂತರ ನಾವು ಪ್ರಜಾಧರ್ಮದಂತೆ ಪರಮಾತ್ಮನು ಇವರಿಗೆ ಸದ್ಗತಿಯಂದವನು ದಯಪಾಲಿಸಲೆಂದು ಪ್ರಾರ್ಥಿಸಿಕೊಳ್ಳುವದು ಸಕ್ಕದ್ದಾಗಿರುತ್ತದೆ.

CHEMISTRY.

ರಸಾಯನಶಾಸ್ತ್ರ.

(೧೦೯ ನೇ ಪುಟದಿಂದ ಮುಂದೆ ಸಾಗಿದ್ದು.)

ಪ್ರಯೋಗ ೪೬—ತಪರಿನ ಕಲ್ಲನ್ನು ತಂದು ಪುಡಿಮಾಡಿ ಆ ಪುಡಿಯಲ್ಲಿ ಅದರಷ್ಟೇ ಹಪ್ಪಳಕಾರದ ಪುಡಿಯನ್ನು ಬೆರಿಸಬೇಕು. ಬಳಿಕ ಒಂದು ಇದ್ದಲಿಯಲ್ಲಿ ತಗ್ಗುಮಾಡಿ ಈ ಮಿಶ್ರಣವನ್ನು ಅದರಲ್ಲಿ ತುಂಬಬೇಕು. ಬಳಿಕ ಮದ್ಯಾಕ್ಕದೀಪದ ಜ್ವಾಲೆಯು ಅದಕ್ಕೆ ಮುಟ್ಟುವಂತೆ ಊದುಗೊಳವೆಯಿಂದ ಊದಿದರೆ ಆ ಮಿಶ್ರಣವು ತೀವ್ರವಾಗಿ ಕರಗುವದು ಆ ಮೇಲೆ ಸ್ವಲ್ಪ ಹೊತ್ತು ಹಾಗೇ ಕಾಸುತ್ತ ಕಡೆಯಲ್ಲಿ ಚಕೋರಿಯಿಂದ ತಪರಿದ್ದ ಇದ್ದಲಿಯ ಭಾಗವನ್ನು ಕತ್ತರಿಸಿಕೊಂಡು ಅದೆಲ್ಲಾ ಭಾಗವನ್ನು ಒಂದು ಕಲಬತ್ತಿನಲ್ಲಿ ಅರಿದು ಪುಡಿಮಾಡಬೇಕು. ಬಳಿಕ ಆ ಪುಡಿಯಲ್ಲಿ ನೀರು ಹಾಕಲಾಗಿ ಹಗುರಾದ ಇದ್ದಲಿಯ ಕಣಗಳು ಮೇಲೆ ತೇಲುವವು. ತವರು ತಳಕ್ಕೆ ಉಳಿಯುವದು. ನಾವು ತಕ್ಕೊಂಡ ತಪರದ ಕಲ್ಲಲ್ಲಿ ಅಕ್ಸಿಜನ್ ಇತ್ತು. ಇಕೆಯಿಂದ ಅದು ಬೂದಿರೂಪಾಗಿ ಇದ್ದಲಿಯಲ್ಲಿ ಮಿಶ್ರವಾಗಿ ಕಾರ್ಬಾನಿಕ್ ಆಕ್ಸೈಡ್ ಎಂಬ ಮಿಶ್ರಪದಾರ್ಥವಾಗಿ ಹಾರಿಹೋಯಿತು ತವರು ಮಾತ್ರ ತಳಕ್ಕೆ ಉಳಿಯಿತು.

೬೦-ನೀಸು—ಇದು ತುಸು ನೀಲೀ ಬಣ್ಣದ ಜಡವಾದ ಧಾತುವು ಇದನ್ನು ಸಹಜವಾಗಿ ಮುರಿಯಬಹುದು ಇದನ್ನು ಕರಗಿಸುವದು ಪ್ರಯಾಸವಲ್ಲ. ಇದು ಹವೆಯಲ್ಲಿ ಜಂಗು ತಿನ್ನುವದಿಲ್ಲ ಆದ್ದರಿಂದ ಈ ಧಾತುವಿನಿಂದ ಪಾತ್ರೆಗಳನ್ನೂ ನಳವ ಕೊಳವೆಗಳನ್ನೂ ಮನೆ ಮೊಗಿಕ್ಕುವ ತಗಡುಗಳನ್ನೂ ತುಬಾಕಿಯ ಗುಂಡುಗಳನ್ನೂ ಮಾಡುತ್ತಾರೆ. ಇದು ಆಕ್ಸೀಕೃತ ಸ್ಥಿತಿಯಲ್ಲಿ ಗಂಧಕವೊಡನೆ ವಿಶ್ರವವಾಗಿರುತ್ತದೆ. ಆ ಮಿಶ್ರಣಕ್ಕೆ ಗಲೀನವೆಂದೆನ್ನುತ್ತಾರೆ. ಆಕ್ಸೀಕೃತ ಸ್ಥಿತಿಯಲ್ಲಿರುವ ಯಾವುದೊಂದು ಧಾತುವನ್ನು ಶುದ್ಧಮಾಡುವ ಕೃತಿಯನ್ನು ಹೇಳುವದು ರಸಾಯನ ಶಾಸ್ತ್ರಜ್ಞರ ಕೆಲಸವಲ್ಲ ಅದು ಘಾತು ಶಾಸ್ತ್ರಜ್ಞರ ಕಾರ್ಯವಷ್ಟೆ. ನೀಸು ಕೂಡಿರುವ ಸಂಯುಕ್ತಪದಾರ್ಥಗಳು ಅನೇಕವುಂಟು.

ಪ್ರಚಲಿತ ಹೆಸರುಗಳು.	ರಾಸಾಯನಿಕ ಹೆಸರುಗಳು.	ಘಟಕಗಳು.
ಸಫೇತ್	ಲೇಡ್‌ಕಾರ್ಬೋನೇಟ್	ಸೀಸು ಮತ್ತು ಕಾರ್ಬಾನಿಕ ಆಸಿಡವು.
ಕೆಂಬೀಚಂದ್ರ	ಕೆಂಪುಲೆಡ್ ಆಕ್ಸಾಯಿಡ್	ಸೀಸೂ ಆಕ್ಸಿಜನವೂ
ಮುಡದಾರಸಿಂಗಿ	ಹಳದಿಯಲೇಡ್ ಆಕ್ಸಾಯಿಡ್	ಸೀಸು ಮತ್ತು ಆಕ್ಸಿಜನ್
ಶುಗರ ಆಫ್‌ಲೇಡ್ ಅಥವಾ ಸೀಸಿನ ಸಕ್ಕರೆ	ಲೇಡ್ ಆಶಿಟೇಟ್	ಸೀಸು ಮತ್ತು ಆಶಿಟೇಟ್ ಆಸಿಡ್
ಸೀಸಿನ ಪೇವಡಿ	ಲೇಡ್ ಕ್ರೋಮೇಟ್	ಸೀಸವೂ, ಕ್ರೋಮಿಕ್ ಆಸಿಡವೂ

ಈ ಪದಾರ್ಥಗಳನ್ನು ಸಫೇತವೂ ಸೇಂದುರವೂ (ಕೆಂಬೀಚಂದ್ರವೂ) ಪೇವಡಿಯೂ ಬಣ್ಣದ ಕೆಲಸಕ್ಕೆ ಬರುತ್ತವೆ. ಸೀಸಶೇನಸಿಲಿನಲ್ಲಿ ಇರುವ ಕಪ್ಪು ಬಡವೆಗೆ ಸೀಸವೆನ್ನುತ್ತಾರೆ, ಆದರೆ ಅದು ಸೀಸಲ್ಲ; ಇದ್ದಲಿಯು.

ಪ್ರಯೋಗ ೫೩—ಪೊಟ್ಯಾಸಿಯಂ ಕ್ರೋಮೇಟ್ ಎಂಬ ಪದಾರ್ಥದ ದ್ರವವನ್ನು ನೀರು ತುಂಬಿದ ಗ್ಲಾಸಿನಲ್ಲಿ ತುಸು ಪಾಕಿ ಅದರೊಳಗೆ ಲೇಡ್ ಆಶಿಟೇಟ್ ಎಂಬ ದ್ರವವನ್ನು ತುಸು ಹೂಡಿಸು. ಆ ಪಾತ್ರೆಯ ತಳದಲ್ಲಿ ಸುಂದರವಾದ ಅರಿಶಿಣ ಬಣ್ಣದ ಪೇವಡಿಯು ಕೂಡ್ರುವದು. ಅದೇ ಪೇವಡಿಯು. ಇದು ಕೂಡುವ ಕ್ರಮವು ಕೆಳಗೆ ಬರೆದಂತೆ

ಪೊಟ್ಯಾಸಿಯಂ ಕ್ರೋಮೇಟ್ ಮತ್ತು ಲೇಡ್ ಆಶಿಟೇಟ್ ಇವು ಒಂದಾದ ಬಳಿಕ ಪೇವಡಿ ಎಂಬ ಅವಿದ್ರಾವ್ಯ ಪದಾರ್ಥವೂ ಪೋಟ್ಯಾಸಿಯಂ ಆಶಿಟೇಟ್ ಎಂಬ ವಿದ್ರಾವ್ಯ ಪದಾರ್ಥವೂ ಉತ್ಪನ್ನವಾಗುತ್ತವೆ.

೬೫ ಪಾರಜ—ಇದು ದ್ರವರೂಪದ ಧಾತುವು. ಈ ದ್ರವ ಧರ್ಮದಿಂದಲೇ ಇದನ್ನು ಉಷ್ಣಮಾಪಕಯಂತ್ರ, ಭಾರಮಾಪಕಯಂತ್ರ ಮುಂತಾದ ಯಂತ್ರಗಳನ್ನು ಮಾಡಲಿಕ್ಕೆ ಉಪಯೋಗಿಸುತ್ತಾರೆ. ಈ ಯಂತ್ರಗಳ ರಚನೆ, ಉಪಯೋಗ ಮುಂತಾದವುಗಳನ್ನು ನೀವು ಪದಾರ್ಥವಿಜ್ಞಾನದ ೧ನೇ

ಪುಸ್ತಕದಲ್ಲಿ ಓದಿ ತಿಳುಕೊಂಡಿರುತ್ತೀರಿ. ಪಾರಜವು ಪ್ರವಾಹ ಇರುವದರಿಂದಲೇ ಕಾಜಿಗೆ ಇದರ ಕಲಾಯಿಯನ್ನು ಮಾಡಿ ನೋಡುವ ಕನ್ನಡಿಗಳನ್ನು ತಯಾರ ಮಾಡುತ್ತಾರೆ. ಇದು ಹವೆಯಲ್ಲಿ ಜಂಗು ತಿನ್ನುವದಿಲ್ಲ. ಆದರೆ ಹವೆಯಲ್ಲಿ ಕಾಸಿದರೆ ಆಕ್ಸಿಜನದೊಡನೆ ಮಿಶ್ರವಾಗಿ ರೆಡ್ ಆಕ್ಸಾಯಿಡ್ ಆಫ್ ಮರ್ಕ್ಯೂರಿ (ಇಂಗಳೀಕವು) ಎಂಬ ಮಿಶ್ರಪದಾರ್ಥ ಉತ್ಪನ್ನವಾಗುತ್ತದೆ ಹಿಂದೆ ೩೦ನೇ ಪ್ರಯೋಗದಲ್ಲಿ ಹೇಳಿದಂತೆ ಇಂಗಳೀಕವನ್ನು ಕಾಸಿ ಆಕ್ಸಿಜನವನ್ನೂ ಪಾರಜವನ್ನೂ ಬೇರೆ ಮಾಡಬಹುದು. ಪಾರಜಕ್ಕೆ ಶಕೆ ಕೊಟ್ಟರೆ ಅದು ನೀರಿನಂತೆ ಕುದಿಯುವದು. ಇದರ ಉಗಿದನ್ನು ಮಾಡಿ ಪುನ್ದ ಪಾರಜವನ್ನು ಸಂಗ್ರಹಿಸಬಹುದು. ಪಾರಜ ಕೂಡಿದ ಮಿಶ್ರ ಪದಾರ್ಥಗಳು ವಿಷವಸ್ತುಗಳಿರುತ್ತವೆ. ಆದರೂ ಅಲ್ಪಪ್ರಮಾಣದಿಂದ ಅವುಗಳನ್ನು ಔಷಧದಲ್ಲಿ ಉಪಯೋಗಿಸುತ್ತಾರೆ.

೬೪ ಬೆಳ್ಳಿ — ಇದು ಬೆಲೆಯುಳ್ಳ ಬಿಳೀ ಬಣ್ಣದ ಧಾತುವು. ಇದು ಅಮೇರಿಕದೊಳಗಿನ ಮೆಕ್ಸಿಕೋ ಪೀರೂ ದೇಶಗಳಲ್ಲಿ ಹೇರಳವಾಗಿ ದೊರೆಯುತ್ತದೆ. ಇದು ಆಕ್ಸಿಜನದ ಸಂಯೋಗದಿಂದ ಕೆಲಬುವದಿಲ್ಲ. ಆದರೆ ಗಂಧಕದ ಸಂಪರ್ಕದಿಂದ ಕಪ್ಪಾಗುತ್ತದೆ. ಪುರಾತನ ಕಾಲದಿಂದ ದೂವತ್ತು ಸುಧಾರಿಸಿದ ರಾಷ್ಟ್ರದವರು ಬೆಳ್ಳಿಯಿಂದ ಆಭರಣಗಳನ್ನೂ ನಾಣ್ಯಗಳನ್ನೂ ಮಾಡುತ್ತ ಬಂದಿದ್ದಾರೆ. ಸರಕಾರದವರ ಈಗಿನ ಬೆಳ್ಳಿಯ ನಾಣ್ಯಗಳಲ್ಲಿ ಅಚ್ಚು ಮೂಡುವಷ್ಟು ಬಿರುಸಾಗುವದಕ್ಕೂ ನಾದ ಹುಟ್ಟುವದಕ್ಕೂ ತುಸು ತಾಮ್ರವನ್ನು ಬೆರಿಸಿರುತ್ತಾರೆ.

ಪ್ರಯೋಗ ೫೪—ಬಂದು ಪಾವಲಿದನ್ನು ತಕ್ಕೊಂಡು ಇದರಲ್ಲಿ ತಾಮ್ರ ಬೆಳ್ಳಿಗಳೆರಡೂ ಉಂಟೋ ಇಲ್ಲೋ ಎಂಬದನ್ನು ಪರೀಕ್ಷಿಸುವ. ಪಾವಲಿದನ್ನು ಕತ್ತರಿಸಿ ಎರಡು ತುಂಡು ಮಾಡು. ಬಂದು ತುಂಡನ್ನು ಪರೀಕ್ಷಾ ನಳಿಕೆಯಲ್ಲಿ ಜಜ್ಜಿ ಮೇಲೆ ನೈಟ್ರಿಕ ಆಸಿಡದ ಬಂದೆರಡು ಹನಿಗಳನ್ನು ಹಾಕು. ನೋಡು! ಪಟ್ಟಾದ ಕೆಂಪು ಹೊಗೆಯು ಹೊರಡಹತ್ತಿತು. ಈ ನಳಿಕೆಯನ್ನು ಕ್ರಮವಾಗಿ ಕಾಸುತ್ತ ನಡಿಸಿದರೆ

ಬಳಿಕ ತಾಂಬ್ರಗಳೆರಡೂ ಆ ನೀರಲ್ಲಿ ಹದಗಿ ನಿಲ್ಲುತ್ತವೆ. ಬಳಿಕ ಈ ಆ ಮಿಶ್ರಣದೊಳಗೆ ಒಂದು ಹಬ್ಬಿಣದ ತುಂಡು ಚೆಲ್ಲಿದರೆ ಅದರೊಳಗಿನ ತಾಮ್ರದ ಕಣಗಳೆಲ್ಲ ಆ ತುಂಡಿಗೆ ಮೆತ್ತಿಕೊಳ್ಳುತ್ತವೆ. ಉಳಿದದ್ದೇ ಕಾಸ್ಟಿಕ ಅಥವಾ ಬೆಳ್ಳಿಯ ಕ್ಷಾರವು ನೀರೊಳಗಿನ ಉಪ್ಪನ್ನು ಪರೀಕ್ಷಿಸುವದಕ್ಕಾಗಿ ಹಿಂದೆ ೨೨ನೇ ಪ್ರಯೋಗದಲ್ಲಿ ಉಪಯೋಗಿಸಿದ ಕ್ಷಾರವು ಇದೇ.

೬೫ ಬಂಗಾರವು—ಇದು ಬೆಳ್ಳಿಗಿಂತ ಬೆಲೆಯುಳ್ಳ ಅರಿಸಿನ ಬಣ್ಣದ ಧಾತುವು. ಇದು ಯಾವಾಗಲೂ ಆಕೋಧಿತ ಸ್ಥಿತಿಯಲ್ಲಿಯೇ ದೊರೆಯುತ್ತದೆ. ಒಳಗಡೆಯಲ್ಲಿ ಕ್ಯಾಲಿಫೋರ್ನಿಯಾ, ಆಸ್ಟ್ರೇಲಿಯಾ ಮುಂತಾದ ದೇಶಗಳಿಂದ ಬಂಗಾರವು ಪರದೇಶಗಳಿಗೆ ಹೇರಳವಾಗಿ ಖರಹತ್ತಿಗೆ. ನಮಗೆ ಗೊತ್ತಿರುವ ಧಾತುಗಳಲ್ಲಿ ಚಿನ್ನವೇ ಎಲ್ಲಕ್ಕೂ ಜಡವಾದದ್ದು. ಬಂಗಾರದ ಸಳಿಯನ್ನು, ಕಂಬಿ ಆಚ್ಚಿನಲ್ಲಿ ಹಾಕಿ ಎಳೆದು ತೀರ ಜಿನುಗಾದ ತಂತಿಗಳನ್ನೂ, ಸುತ್ತಿಗೆಯಿಂದ ಬಡಿದು ತೀರ ತೆಳುವಾದ ತಗಡುಗಳನ್ನೂ ಮಾಡಬಹುದು. ಕೋಟೆಯಲ್ಲಿ ಮಾರಲಿಕ್ಕೆ ತೆಗುವ ಬಂಗಾರದ ಬರಕನ್ನು ನೀವು ನೋಡಿರಬಹುದು. ನೋಡಿರಿ, ಅವು ಎಷ್ಟು ತೆಳುವಾಗಿರುವವು? ಈ ಬರಕನ್ನು ಮುಖಾಮು ಮಾಡುವದಕ್ಕೂ ಔಷಧಕ್ಕೂ ಉಪಯೋಗಿಸುವದುಂಟು. ಅಚ್ಚಚಿನ್ನವು ಬಹು ಮೃದು ವಿರುವದರಿಂದ, ಅದಕ್ಕೆ ಮೂಡುನಷ್ಟು ಬಿರುಸಾಗುವಂತೆ ಅದರಲ್ಲಿ ತಾಮ್ರವನ್ನು ಬೆರಿಸುತ್ತಾರೆ. ಬಳಿಕ ಈ ಮಿಶ್ರಣದಿಂದ ತರತರದ ಸಾಮಾನುಗಳನ್ನು ಮಾಡುತ್ತಾರೆ.

ಪ್ರಯೋಗ ೫೫ —ಚಿನ್ನವು ಯಾವದಾವದೂ ಒಂದೇ ಆಸಿಡದಲ್ಲಿ ಎಂದೂ ಕರಗುವದಿಲ್ಲ ಒಂದು ಬಂಗಾರದ ವಡವೆಯ ಹಾಳಿಯನ್ನು ತೆಕ್ಕೊಂಡು ಅದರಲ್ಲಿ ಸರಿಯಾದ ಎರಡು ತುಂಡುಗಳನ್ನು ಮಾಡು. ಬಳಿಕ ಒಂದು ತುಂಡನ್ನು ಪರಿಕ್ಷಾನಳಿಕೆಯ ದ್ವಾರದಿಂದ ಒಂದು ಗ್ಲಾಸಿನಲ್ಲಿ, ಮತ್ತೊಂದನ್ನು ಅದರಂತೆಯೇ ಮತ್ತೊಂದು ಗ್ಲಾಸಿನಲ್ಲಿ ಹಾಕು. ಆಮೇಲೆ ಒಂದು ಗ್ಲಾಸಿನಲ್ಲಿ ನಾಲ್ಕಾರು ನೈಟ್ರಿಕ ಆಸಿಡದ ಹನಿಗಳನ್ನು ಮತ್ತೊಂದರಲ್ಲಿ ಹೈಡ್ರೋಕ್ಲೋರಿಕ ಆಸಿಡದ ಹನಿಗಳ

ನ್ನು ಬಿಡು. ನೋಡು ಅವೆರಡೂ ಗ್ಲಾಸಿನೊಳಗಿನ ಬರಕು ಕರಗಿಲ್ಲ, ಇದ್ದಂತೇ ಅಷೆ. ಇನ್ನು ಬಿಂದು ಗ್ಲಾಸನ್ನು ಎತ್ತಿ ಆ ಎರಡನೇ ಗ್ಲಾಸಿನಲ್ಲಿ ಸುರುವು ಅಗೋ ಅದು ನೋಡು ಇವೆ ರಡೂ ಆಸಿಡುಗಳು ಕೂಡಿಕೊಂಡು ಇಮ್ಮಡಿ ಕಸುವ್ಳುಳ್ಳವುಗ ಳಾಗಿ ಆ ಬಂಗಾರದ ಬರಕನ್ನು ಕರಿಗಿಸಿಬಿಟ್ಟವು. ಇದರಿಂದ ಬಂಗಾರವು ಯಾವದೇ ಆಗಲಿ ಬಿಂದೇ ಆಸಿಡಿನ ಸಂಯೋಗ ದಿಂದ ಕರಗದೆಂತಲೂ, ಎರಡು ಆಸಿಡುಗಳ ಮಿಶ್ರಣದಲ್ಲಿ ಮಾ ತ್ರ ಬಂಗಾರವನ್ನು ಕರಗಿಸುವ ತ್ರಾಣವುಂಟೆಂತಲೂ ಸಿದ್ಧವಾ ಗುತ್ತದೆ. ಚಿನ್ನವು ಹವೆಯಲ್ಲಿ ಜಂಗು ತಿನ್ನುವದಿಲ್ಲ ಹೂವು ಗಂಧಕದ ಸಂಪರ್ಕದಿಂದ ಬೆಳ್ಳಿಯಂತೆ ಕಪ್ಪು ಆಗುವದಿಲ್ಲ. ಆದ್ದರಿಂದ ಬಂಗಾರದಿಂದ ವಿಧವಿಧದ ಆಭರಣಗಳನ್ನೂ ನಾಣ್ಯ ಗಳನ್ನೂ ಮಾಡುವ ಸಾಂಪ್ರದಾಯವುಂಟು

೨೨ನೇ ಪಾಠ.

ಹಿಂದಿನ ಸಂಗತಿಗಳಿಂದ ಫಲಿತವಾದ ಸಿದ್ಧಾಂತಗಳು.

೬೬. ಮೂಲತತ್ವಗಳು ನಿಯಮಿತ ಪ್ರಮಾಣದಿಂದ ಮಿಶ್ರ ವಾಗುತ್ತವೆ.

ಬೆಂಕಿ, ಗಾಳಿ, ನೀರು, ನೆಲಗಳ ವಿಷಯವಾಗಿ ಪ್ರಯೋಗ ಪರೀಕ್ಷಣಗಳ ದ್ವಾರದಿಂದ ಹಲವು ಹೊಸ ಸಂಗತಿಗಳು ಗೊ ತ್ತಾದವು. ಮತ್ತು ಕೆಲವು ಗೌರವದ ಸಿದ್ಧಾಂತಗಳು ಪ್ರಕ ಟವಾದವು. ಅವುಗಳಲ್ಲಿ ಕೆಲವನ್ನು ಕುರಿತು ಆಲೋಚಿಸುವ ದು ಉಪಯುಕ್ತವಾದದ್ದು. ಈ ಜಗದೊಳಗಿನ ಅನೇಕ ಪದಾರ್ಥಗಳಲ್ಲಿ ಹಲವು ಬಡಕೆಗಳ ಸ್ವರೂಪವು ನಿಮಗೆ ಚೆನ್ನಾಗಿ ಗೊತ್ತಾಗಿದೆ ನೋಡಿರಿ ಯಾವದೇ ಪದಾರ್ಥವಾ ಗಲಿ ಅದು ಪ್ರವಾಹಿಯಾಗಿರಲಿ, ಅಪ್ರವಾಹಿಯಾಗಿರಲಿ, ವಾಯುರೂಪಿಯಾಗಿರಲಿ, ಪ್ರಾಣಿಕೋಟಿಯೊಳಗಿನದಿರಲಿ, ಖನಿಜಕೋಟಿಯೊಳಗಿನದಿರಲಿ, ಉದ್ಭಿಜ್ಜಕೋಟಿಯೊಳಗಿನ ದಿರಲಿ, ೬೩ ಮೂಲತತ್ವಗಳೊಳಗಿನ ಬಿಂದರಿಂದ ಅಥವಾ ಹಲವುಗಳ ಮಿಶ್ರಣದಿಂದ ಉಂಟಾಗಿರುತ್ತದೆ. ಬಿಂದು ಮೂ ಲತತ್ವವು ಅನೇಕ ಸಂಸ್ಕಾರಗಳಿಂದಲಾದರೂ ಜೇಕೊಂದು ಮೂಲತತ್ವದ ರಸ್ಯವನ್ನು ಪಡೆಯಲಾರದು. ಆದರೆ

ಒಂದು ಮೂಲತತ್ವದಿಂದ ಮತ್ತೊಂದು ಮೂಲತತ್ವವು ಎಂದಿಗೂ ಹುಟ್ಟಲಾರದು. ಈ ಮೂಲತತ್ವಗಳು ಒಂದರೊಳಗೊಂದು ಕೂಡಿಕೊಂಡು ಬೇರೆ ಬೇರೆ ಭಿನ್ನ ಭಿನ್ನ ಧರ್ಮದ ಸಂಯುಕ್ತ ಪದಾರ್ಥಗಳನ್ನು ಉಂಟು ಮಾಡುತ್ತವೆ. ಈ ಉಂಟಾದ ಸಂಯುಕ್ತ ಪದಾರ್ಥಗಳಲ್ಲಿ ಮಿಶ್ರವಾದ ಯಾವ ಮೂಲತತ್ವದ ಧರ್ಮಗಳೂ ಇರುವದಿಲ್ಲ. ಆದರೆ ಆ ಸಂಯುಕ್ತ ಪದಾರ್ಥಗಳನ್ನು ಪೃಥಕ್ಕರಿಸಿ ಮೂಲತತ್ವಗಳನ್ನು ಬೇರ್ಪಡಿಸಬಹುದು. ಮಿಶ್ರ ಪದಾರ್ಥಗಳ ತೂಕವು ಅವ್ಯಾ ಘಟಕ ಮೂಲತತ್ವಗಳ ತೂಕಗಳ ಒಟ್ಟಿಗೆ ಸರಿಯಾಗಿರುತ್ತದೆ. ಮತ್ತು ರಸಾಯನ ಸಂಯೋಗದಲ್ಲಿ ಪದಾರ್ಥಗಳ ಮೊದಲಿನ ತೂಕವು ಇದ್ದಂತಿರುತ್ತದೆ. ಈ ಸೃಷ್ಟಿಯಲ್ಲಿ ಯಾವದೊಂದು ಹೊಸ ದ್ರವ್ಯವು ಹುಟ್ಟಲಾರದು. ಮತ್ತು ಇದ್ದ ದ್ರವ್ಯಗಳು ಇಲ್ಲದಂತೆಯೂ ಆಗಲಾರವು. ಪದಾರ್ಥಗಳನ್ನು ತೂಗಲಿಕ್ಕೆ ತಕ್ಕಡಿ ಬೇಕೆಂಬದನ್ನು ಈ ಮೊದಲೇ ಹೇಳಿದ್ದೇವೆ. ರಸಾಯನ ಶಾಸ್ತ್ರಜ್ಞರಿಗೆ ಯಾವದೊಂದು ಪದಾರ್ಥವನ್ನು ಪರೀಕ್ಷಿಸುವದಕ್ಕೆ ತಕ್ಕಡಿಯ ಅವಶ್ಯಕತೆ ಬಹಳ ಈ ತಕ್ಕಡಿಯ ಸಹಾಯದಿಂದಲೇ ನಾವು ಹಿಂದಿನ ಪಾಠದಲ್ಲಿ ನೀರಿನ ಘಟಕಗಳ ಪ್ರಮಾಣವನ್ನು ಅರಿತುಕೊಂಡೆವು. ೧೬ ಪಾಲು ಆಕ್ಸಿಜನವೂ ೨ ಪಾಲು ಹೈದ್ರೋಜನವೂ ರಸಾಯನ ಸಂಯೋಗದಿಂದ ಒಂದಾಗಿ ೧೮ ಪಾಲು ನೀರನ್ನುಂಟು ಮಾಡಿತೆಂಬ ಸಂಗತಿಯನ್ನು ನೀವು ಮರೆತಿರಲಿಕ್ಕಿಲ್ಲ. ಇದಲ್ಲದೆ ಭೂಮಿಯೊಳಗಿನ ಬೇರೆ ಬೇರೆ ಕಡೆಯಲ್ಲಿರುವ ನೀರನ್ನು ಪೃಥಕ್ಕರಿಸಲಾಗಿ ಅದರಲ್ಲಿಯೂ ಇವೇ ಘಟಕಗಳು ಇವೇ ಪ್ರಮಾಣದಿಂದಲೇ ಇರುತ್ತವೆಂದು ಹೇಳಿದ್ದಾದರೂ ನಿಮ್ಮ ನೆನಪಿನಲ್ಲಿರಬಹುದು. ಮಿಕ್ಕ ಮಿಶ್ರ ಪದಾರ್ಥಗಳಿಗೂ ಈ ನೇಮವು ಹತ್ತೇ ಹತ್ತುತ್ತದೆ. ಹಿಂದಿನ ಪಾಠದಲ್ಲಿ ನೀರಿನ ಪ್ರಯೋಗದಲ್ಲಿ ನಾವು ಇಂಗಳೀಕವನ್ನು ಪೃಥಕ್ಕರಿಸಿ ಅದರಲ್ಲಿ ಆಕ್ಸಿಜನವೂ ಪಾರಜವೂ ಇರುತ್ತವೆಂದು ಗೊತ್ತು ಹಚ್ಚಿಲ್ಲವೇ? ಆದರೆ ರಸಾಯನ ಶಾಸ್ತ್ರಜ್ಞರು ಇಂಗಳೀಕದಲ್ಲಿ ಹದಿನಾರು ಪಾಲು ಆಕ್ಸಿಜನವೂ ಇನ್ನೂರು

ಟೂಲು ಪೌರಜವೂ ಯಾವಾಗಲೂ ಇರುತ್ತದೆಂದು ಸಿದ್ಧವಾ
ಡಿದ್ದಾರೆ.

ಈ ಸಂಯೋಜಕ ಪ್ರಮಾಣವು ನಿಯಮಿತವಾನದ್ದಿರು
ವದರಿಂದ ನವುಗೆ ಹದಿನಾರು ಪೌಂಡು ಆಕ್ಸಿಜನವು ಬೇಕಾ
ಗಿದ್ದರೆ ಇನ್ನೂರಾ ಹದಿನಾರು ಪೌಂಡು ಇಂಗಳೀಕವನ್ನು
ಕೃಥಕ್ಕರಿಸಬೇಕು. ಇಂಗಳೀಕದ ಪುಡಿಯಲ್ಲಿ ತುಸು ನವ
ಚಲ್ಲದೆ ಕೆಡದೆ ಇದ್ದರೆ ಇಷ್ಟು ತೂಕ ಇಂಗಳೀಕದಿಂದ
ನಮಗೆ ಬೇಕಾದಷ್ಟು ಅಂದರೆ ಹದಿನಾರು ಪೌಂಡು ಆಕ್ಸಿಜನ
ವು ನಿಃಸಂಶಯವಾಗಿ ದೊರೆಯುತ್ತದೆ. ಇದರಿಂದ ಇಂತಿಷ್ಟು
ಆಕ್ಸಿಜನವು ಬೇಕಾದರೆ ಇಂತಿಷ್ಟು ಇಂಗಳೀಕವನ್ನು ಕೃಥಕ್ಕ
ರಿಸಬೇಕೆಂಬದನ್ನು ತ್ರೈರಾಶಿಕದಿಂದ ಸಹಜವೇ ತೆಗೆದು
ಕೊಳ್ಳಬಹುದು.

ಈ ಮೇರೆಗೆ ರಸಾಯನ ಸಂಯೋಗವು ಯಾವಾಗಲೂ
ನಿಶ್ಚಿತ ಪ್ರಮಾಣದಿಂದಲೇ ಘಟಿಸುತ್ತದೆಂದು ಸಿದ್ಧವಾಗಿರು
ತ್ತದೆ. ಆದ್ದರಿಂದ ಯಾವದೊಂದು ಹೊಸ ಪದಾರ್ಥವನ್ನು
ಸಿದ್ಧಗೊಳಿಸುವದಕ್ಕೆ ಯಾವ ಯಾವ ಘಟಕಗಳನ್ನು ಎಷ್ಟೆ
ಷ್ಟು ತೆಗೆದುಕೊಳ್ಳಬೇಕೆಂಬದು ಸುಲಭವಾಗಿ ಗೊತ್ತಾಗುತ್ತ
ದೆ. ನೋಡಿರಿ! ನೈತ್ರಿಕ ಆಸಿಡವನ್ನು ಉಂಟು ಮಾಡಲಿಕ್ಕೆ
ಸೋರುಪ್ಪು ಎಷ್ಟು ಬೇಕು. ಗಂಧಕಾಮ್ಲವೆಷ್ಟು ಬೇಕು
ಎಂಬದನ್ನು ನಾವು ಸಹಜವಾಗಿ ಹೇಳಬಹುದು. ೯೮ ಭಾ
ಗ ಗಂಧಕಾಮ್ಲವನ್ನೂ ೧೦೦ ಭಾಗ ಸೋರುಪ್ಪನ್ನೂ ಮಿಶ್ರ
ಮಾಡಿದರೆ ೬೩ ಭಾಗ ನೈತ್ರಿಕ ಆಸಿಡವು ಉತ್ಪನ್ನವಾಗುತ್ತ
ದೆ. ೬೫ ಭಾಗ ಮ್ಯಾಗ್ನೇಸಿಯಂ ಧಾತುವಿನ ತಂತಿಯನ್ನು
ಸುಡಲಾಗಿ ಆ ತಂತಿಯ ನೈಲ್ಯಾಂಶವು ಸುಡ ಅನ್ಯ ಕಾರಣ
ದಿಂದ ನಾಶವಾಗದಿದ್ದರೆ, ೪೦ ಭಾಗ ಮ್ಯಾಗ್ನೇಸಿಯವು ಉಂ
ಟಾಗುತ್ತದೆ. ಇದರಿಂದ ಮಿಶ್ರ ಪದಾರ್ಥಗಳಲ್ಲಿ ಘಟಕ
ದ್ರವ್ಯಗಳು ಯಾವಾಗಲೂ ನಿಯಮಿತ ಪ್ರಮಾಣದಿಂದಲೇ
ಮಿಶ್ರವಾಗುತ್ತಿರುತ್ತವೆ. ಮ್ಯಾಗ್ನೇಸಿಯಮದಲ್ಲಿ ಆಕ್ಸಿಜನ
ವಾಯುವು ಯಾವಾಗಲೂ ಹದಿನಾರು ಪ್ರಮಾಣದಿಂದ ಮಿಶ

ಪಾಗುತ್ತಿರುವ ಕಾರಣ ೨೪ ಪಾಲು ಮ್ಯಾಗ್ನೇಸಿಯಂ ಧಾತು ವಿನಿಂದ ೪೦ ಪಾಲು ಮ್ಯಾಗ್ನೇಸಿಯವು ಹುಟ್ಟುತ್ತು.

೬೩. ಮೇಲೆ ಹೇಳಿದ ಸಂಗತಿಗಳಿಂದ ಮೂಲ ಪದಾರ್ಥಗಳ ತೂಕದಂತೆ ಅವುಗಳೊಳಗಿನ ಘಟಕಗಳ ಮಿಶ್ರಣ ಪ್ರಮಾಣವನ್ನು ರಸಾಯನ ಶಾಸ್ತ್ರಜ್ಞರು ಗೊತ್ತು ಹಚ್ಚಿದ್ದಾರೆ. ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಆ ಪದಾರ್ಥಗಳ ಹೆಸರಿನ ಪ್ರಥಮಾಕ್ಷರಗಳಿಂದ ಆ ಪದಾರ್ಥದ ಹೆಸರನ್ನೂ ಅವುಗಳ ಮುಂದೆ ಬರೆದಿರುವ ಅಂಕಿಗಳಿಂದ ಅವುಗಳ ಮಿಶ್ರಣ ಪ್ರಮಾಣಗಳನ್ನೂ ಬರೆದು ತೋರಿಸಿರುತ್ತೇವೆ.

(ಸಶೇಷ.)

MANUAL OF METHOD.

ಶಿಕ್ಷಾಕ್ರಮ.

(೧೧೫ನೇ ಪುಟದಿಂದ ಮುಂದೆ ಸಾಗಿದ್ದು.)

ವ್ಯಾಕರಣ–ವಾಕ್ಯಮಿಮಾಮಾಂಸಾ ಪನ-ವ್ಯಾಕರಣ ಮುಂತಾದ ಪಾಠಗಳನ್ನು (೧) ವ್ಯಾಕರಣದ ಪಾಠ ನಡೆದಾಗ ಶಿಕ್ಷಕನು ಸ್ವತಃ ತಾನು ತಿದ್ದಬಹುದು. (೨) ಹಿರೇಮಣಿಗಳಿಂದ ತಿದ್ದಿಸಬಹುದು. (೩) ವಿದ್ಯಾರ್ಥಿಗಳು ಪಾಠಗಳನ್ನು ಬರೆದು ತಂದನಂತರ ಆ ಪುಸ್ತಕಗಳಲ್ಲಿ ಒಬ್ಬನ ಪುಸ್ತಕವನ್ನು ಮತ್ತೊಬ್ಬನಿಗೆ ಮತ್ತೊಬ್ಬನ ಪುಸ್ತಕವನ್ನು ಬ್ಮಿ ಮೊಬ್ಬನಿಗೆ ಬೇರೊಬ್ಬನ ಪುಸ್ತಕವನ್ನು ಇನ್ನೊಬ್ಬನಿಗೆ ಈ ಮೇರೆಗೆ ಅದಲುಬದಲು ಮಾಡಿ ತಾನು ಕೊಟ್ಟ ಪಾಠವನ್ನು ಪೂರ್ಣವಾಗಿ ವಿವರಿಸಬೇಕು. ಮತ್ತು ಹೀಗೆ ತಾನು ವಿವರಿಸುವಾಗ ಗೊತ್ತಾದ ತಪ್ಪುಗಳನ್ನು ಮಸಿಯಿಂದಾಗಲಿ ಪೆನಸಿಲಿನಿಂದಾಗಲಿ ತಿದ್ದಲಿಕ್ಕೆ ಹುಡುಗರಿಗೆ ಹೇಳಬೇಕು. ಪಾಠ ಮುಗಿದ ಬಳಿಕ ತಪ್ಪುಗಳನ್ನು ಎಚ್ಚರದಿಂದ ಎಣಿಸಿ ಪಾಠದ ಬುಡದಲ್ಲಿ ತಪ್ಪಿನ ಸಂಖ್ಯೆಯನ್ನು ಬರೆದು ತಪಾಸು ಮಾಡಿದವನು ತನ್ನ ಹೆಸರಿನ ಅಕ್ಷರಗಳನ್ನು ಬರೆಯುವಂತೆ ಗೊತ್ತು ಮಾಡಬೇಕು. ಇದರಿಂದ ಮತ್ಸರಕ್ಕೂ ಅನ್ಯಾಯಕ್ಕೂ ಅವಕಾಶ ದೊರಿಯುವದಿಲ್ಲ.

ಅಪ್ಪಿತಪ್ಪಿ ಯಾರಾದರೂ ಈ ದೋಷಗಳಿಗೆ ಒಳಗಾದರೆ ಅ
ನ್ನು ಗೊತ್ತುಹಿಡಿದು ಬೈಲಿಗೆ ಹಾಕಲಿಕ್ಕೂ ಸುಲಭವಾಗು
ದು ಈ ಪದ್ಧತಿಯು ವಿದ್ಯಾರ್ಥಿಗಳ ನೀತಿಸುಧಾರಣೆಗೂ
ಅನುಕೂಲಿಸುತ್ತದೆ ಆದರೆ ವಿದ್ಯಾರ್ಥಿಗಳು ಸಾಧಾರಣವಾ
ಗಿ ಪ್ರಬುದ್ಧರಿರಲಿಕ್ಕೆ ಬೇಕು. ಕೇವಲ ಸ್ಮರಣಶಕ್ತಿಯನ್ನು
ಹೊಂದಿದ ಪಾಠಗಳನ್ನೂ ವ್ಯಾಕರಣದ ಪಾಠವನ್ನೂ ಹೇಳು
ವಾಗಲೇ ತಿಪ್ಪುವದು ಲೇಸು

ಭೂಗೋಲ—ಈ ವಿಷಯವನ್ನು ಕಲಿಸುವಾಗಲೇ ತಿದ್ದ
ಬೇಕು. ವಿದ್ಯಾರ್ಥಿಗಳು ಬರೆದುತಂದ ನಕಾಶೆಗಳನ್ನು ಹಿರೇ
ಮಣಿಗಳಿಂದಾಗಲಿ, ಪ್ಯೂಪಿಲ್ ಟೀಚರರಿಂದಾಗಲಿ ತಿದ್ದಿಸಿ ಮು
ಖ್ಯ ಮುಖ್ಯ ತಪ್ಪುಗಳನ್ನು ಕರೇ ಹಲಿಗೆಯ ಮೇಲೆ ತಾನೇ
ತಿಳಿಸಿ ಹೇಳಬೇಕು. ಕಲಿಸಿದ ಪಾಠದ ಸಾರವನ್ನು ಬರೆದು
ಕೊಂಡು ಬರಲಿಕ್ಕೆ ಹೇಳಿದ್ದರೆ ಅದನ್ನು ಶಿಕ್ಷಕನು ಸ್ವತಃ
ತಿದ್ದಬೇಕು, ಇಲ್ಲವೆ ವ್ಯಾಕರಣಪಾಠಗಳಲ್ಲಿ ಮಾಡಿದಂತೆ
ಪ್ರತಿಕಗಳನ್ನು ಅದಲು ಬದಲು ಮಾಡಿ ತಿದ್ದಬೇಕು.

ಸಿಬಂಧರಚನಾಪಾಠಗಳು– ಈ ಪಾಠಗಳನ್ನು ಮಾಸ್ತರ
ನು ತಿದ್ದಿ ಮುಖ್ಯ ಮುಖ್ಯ ದೋಷಗಳನ್ನು ಕರೇ ಹಲಿಗೆಯ
ಮೇಲೆ ತಿದ್ದಿ ಬರಿಸಬೇಕು ಇಲ್ಲವೆ ಸಿಬಂಧರಚನಾ ವಿಷಯ
ವನ್ನು ವರ್ಗದಲ್ಲಿ ಕಲಿಸುವಾಗ ಆ ಪಾಠವನ್ನು ತಿದ್ದಬೇಕು.

ಗ್ರಹಪಾಠಗಳ ಗುಣದೋಷಗಳು.

ಗುಣಗಳು— ೧ ಈ ಪಾಠಗಳಿಂದ ಸ್ವಾವಲಂಬನೆಪೂ
ರ್ವಕ ಪ್ರೀತಿಯೂ ಬೆಳೆಯುತ್ತವೆ, ೨ ಈ ಪಾಠಗಳ
ನ್ನು ವಿದ್ಯಾರ್ಥಿಯು ಸ್ವತಃ ಸಿದ್ಧ ಮಾಡಿದರೆ ಅದರಿಂದ ಅವ
ನ ಸಾಮರ್ಥ್ಯದ ಮೆಟ್ಟಿಲು ಗೊತ್ತಾಗುತ್ತದೆ. ೩ ಈ ಪಾಠಗ
ಳನ್ನು ನೀತಿ ಕೆಲವು ಜನರು ಸಾಲಿಯನ್ನು ಕುರಿತು ಸಭಾ
ಸ್ತರವನ್ನು ಹೊಂದುತ್ತಾರೆ. ೪ ಈ ಪಾಠಗಳಿಂದ ವಿದ್ಯಾ
ರ್ಥಿಗಳು ಚರಿತ ಸಂಗತಿಗಳೊಳಗಿನ ದೋಷಗಳು ಮೂರ
ನೆಯ ಸಿಜವಾದ ಜ್ಞಾನವು ಸಲೆಗೊಳ್ಳುತ್ತದೆ. ೫ ಶಿಕ್ಷಕನಿಗೆ
ಮಕ್ಕಳ ಕಲಸವನ್ನು ಮಾತಲಿಕ್ಕೆ ಈ ಪಾಠಗಳಿಂದ ಸಹಾ
ಯವಾಗುತ್ತದೆ. ೬ ವಿದ್ಯಾರ್ಥಿಗಳಿಗೆ ಮೈಕುಂಬ ಕೆಲಸ

ಳುಂಟಾಗುವದರಿಂದ ಊಡಕ ಹುಡುಗರ ಸಂಗತಿಯಿಂದ ಬರುವ ದುಷ್ಪರಿಣಾಮಗಳು ತಪ್ಪುತ್ತವೆ. ೬ ಜ್ಞಾನದ ಅಭಿರುಚಿಗೂ ಅಭ್ಯಾಸದ ಪ್ರೀತಿಗೂ ಜನರ ಮೆಚ್ಚಿಕೆಗೂ ಆಶ್ರಯವಾದಂಥ ಈ ಪಾಠಗಳು ಬಹುಜನಸಮ್ಮತವಾಗಿರುತ್ತವೆ.

ದೋಷಗಳು—೧ ಸಾಲೆಯ ಅಭ್ಯಾಸವೇ ಸಾಕಬೇಕಾಗಿರುತ್ತದೆ; ಈ ಪಾಠಗಳಿಗೆ ಅವಕಾಶವಿಲ್ಲ. ೨ ಇವುಗಳಿಂದ ವಿದ್ಯಾರ್ಥಿಗಳಿಗೆ ಕೆಲಸವು ಹೆಚ್ಚಾಗಿ ವಿದ್ಯಾರ್ಥಿಗಳಿಗೆ ಕಾಯಿಕ ಅಪಾಯವಾಗುವ ಸಂಭವವುಂಟು ೩ ಇವುಗಳಿಂದ ವಿದ್ಯಾರ್ಥಿಗಳಿಗೂ ಅವರ ತಾಯಿತಂದೆಗಳಿಗೂ ಶಿಕ್ಷಕರಿಗೂ ಮನಸ್ತಾಪವಾಗುವ ಸಂಭವವುಂಟು. ೪ ಈ ಪಾಠಗಳು ಬಹುಜನಸಮ್ಮತವಾಗಿಲ್ಲ. ೫ ಈ ಪಾಠಗಳನ್ನು ಸಿದ್ಧ ಮಾಡುವಾಗ ಮೇಲ್ವಿಚಾರಕರು ಯಾರೂ ಇಲ್ಲದ್ದರಿಂದ ಕೆಲವು ಕೆಟ್ಟ ಚಟಗಳು ನೆಲೆಗೊಂಡು ವಿದ್ಯಾರ್ಥಿಗಳ ಜ್ಞಾನ ನೀತಿಗಳ ಬೆಳವಣಿಗೆಗೆ ಕೊರತೆ ಬರುವ ಸಂಭವವುಂಟು. ೬ ಪಾಠಗಳನ್ನು ಸಿದ್ಧ ಪಡಿಸಲಿಕ್ಕೆ ಬಹು ಜನ ವಿದ್ಯಾರ್ಥಿಗಳಿಗೆ ಅನುಕೂಲವಿರುವದಿಲ್ಲ. ೭ ಮಿದುಳಿನ ಬೆಳುವಣಿಗೆಗೆ ವಿಚಾರ ವೈಚಿತ್ರ್ಯವು ಬೇಕು, ಸಾಲೆಯೊಳಗೂ ಸಾಲೆಯ ವಿಷಯುಗಳು, ಮನೆಯೊಳಗೂ ಸಾಲೆಯ ವಿಷಯುಗಳು ಹೀಗಾಗುವದರಿಂದ ವಿಚಾರದ ವೈಚಿತ್ರ್ಯವು ತಪ್ಪಿ ಮಿದುಳು ಕೆಡುವದು,

ವಿದ್ಯಾಭಿವೃದ್ಧಿಗೆ ಬಿದಗುವ ಎಡರುಗಳು—ಇವು ಎರಡು ತರದವಿರಬಹುದು.

೧, ಹುಡುಗರಿಂದಲೇ ಉಂಟಾಗುವಂಥವು— ಇವುಗಳಿಗಾನರೂ ಅನೇಕ ಕಾರಣಗಳಿರಬಹುದು.

(೫) ಹುಡುಗರ ಮಡ್ಡತನ (ಇದರ ಬಗ್ಗೆ ಹಿಂದೆ ಹೇಳಿದ್ದನ್ನು ನೋಡಿರಿ).

(೬) ಹುಡುಗರ ಬಡತನ—ತಾಯಿತಂದೆಗಳ ಬಡತನದ ಪುಲಕವಾಗಿ ಹುಡುಗರಿಗೆ ಸಾಕಷ್ಟು ಆರೋಗ್ಯಕರವಾದ ಊಟ ದೊರೆಯದೆ ಇದ್ದದರಿಂದ ಹುಡುಗರ ಮನಸ್ಸು ಅಭ್ಯಾಸದ ಕಡೆಗೆ ಎಳಿಸಪೆ ಇರಬಹುದು. ಇದಕ್ಕೆ ಲೋ

ಕೋಪಕಾರಿಗಳಾದಂಥ ಧನವಂತರು ಸಾಲಿಗೆ ಹೋಗುವ ಶೀರ ಬಡ ಹುಡುಗರ ಯೋಗ್ಯ ಪೋಷಣೆಯ ಬಗ್ಗೆ ಸಹಾ ನು ಮಾಡುವದೊಂದೇ ಉಪಾಯವು.

(೫) ವಸ್ತ್ರಗಳು—ಹುಡುಗರ ಮೈಮೇಲೆ ಸಾಕಷ್ಟು ಅರಿ ವಿಗಳು ಇಲ್ಲದೆ ಅವರು ಚಳಿಗಾಳಿಗಳಿಂದ ನಡುಗುತ್ತಿದ್ದರೆ ಇಲ್ಲವೆ ಅವರ ಮೈಯಲ್ಲಿ ಜಡ್ಡು ಉಂಟಾಗಿದ್ದರೆ ಅವರ ಮನಸ್ಸು ಅಭ್ಯಾಸಕ್ಕೆ ಎಂದೂ ಹತ್ತಲಿಕ್ಕಿಲ್ಲ. ಈ ಕೊರತೆ ಗಾದರೂ ಮೇಲೆ ಹೇಳಿದ ಅನ್ನದ ಕೊರತೆಯಂತೆಯೇ ನರೋಪಕಾರ ಬುದ್ಧಿಯುಳ್ಳ ಧನಿಕರಿಂದಲೇ ಸಹಾಯವಾಗ ಶಕ್ಕದ್ದು.

(೬) ಸಾಲೆ ತಪ್ಪಿಸೋಣ—ಹುಡುಗರ ಅಭ್ಯಾಸಕ್ಕೆ ಉಂ ಟಾಗುವ ಯಾವತ್ತು ಎಡರುಗಳಲ್ಲಿ ಇದು ದೊಡ್ಡದು. ಇದ ಕ್ಕೆ ಅನೇಕ ಕಾರಣಗಳಿರುವದರಿಂದ ಅವೆಲ್ಲವುಗಳಿಗೆ ಮಾಡ ತಕ್ಕ ಉಪಾಯಗಳನ್ನು ಇಲ್ಲಿ ಸಾಮ್ಯಂತವಾಗಿ ಹೇಳುವದು ಅಸಂಭಾವ್ಯವಾಗಿರುವದು. ಈ ಸಂದರ್ಭದಲ್ಲಿ ಶಿಕ್ಷಕನ ಮುಖ್ಯ ಕರ್ತವ್ಯಗಳು ಯಾವವೆಂದರೆ, ಅವನು ತನ್ನ ಸಾಲೆ ಯನ್ನು ಆದಷ್ಟು ಮನೋಹರವಾಗಿ ಮಾಡುವದು; ಚಂಡಿನ ಆಟ, ಈಸೋಣ, ಮೊದಲಾದ ಆಟಗಳ ಬಗ್ಗೆ ಹುಡುಗರೊ ಳಗೆ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ಅವುಗಳಲ್ಲಿ ತಾನು ಶೀರಿ ಹುಡುಗರ ಹಿತದ ಬಗ್ಗೆ ತಾನು ಪಡುವ ಉತ್ಸಾ ಹವನ್ನು ತೋರಿಸುವದು; ಹುಡುಗರು ಸಾಲೆ ತಪ್ಪಿಸಿದ ಬಗ್ಗೆ ತಕರಾರ ಮಾಡದೆ ಆಗಿಂದಾಗ್ಗೆ ಅವರ ಪಾಲಕರಿಗೆ ತಿಳಿಸು ವದು; ತನ್ನ ಕೈಲಾದ ಮಟ್ಟಿಗೆ ಹುಡುಗರ ಮನಸ್ಸಿನಲ್ಲಿ ಕ ರ್ತವ್ಯಜಾಗರೂಕತೆಯನ್ನು ಹುಟ್ಟಿಸಿ ಬೆಳಿಸುವದು; ಇಷ್ಟು ಮಾಡಿದ ನಂತರ ಇದಕ್ಕೂ ಹೆಚ್ಚಿನ ಸಂಗತಿಗಳನ್ನು ನೋಡಿ ಕೊಳ್ಳುವ ಕೆಲಸವನ್ನು ಶಿಕ್ಷಕನು ಹುಡುಗರ ತಾಯಿತಂದೆಗ ಳಿಗೂ ಸಾಲೆಯನ್ನು ನೋಡಲಿಕ್ಕೆ ಬರುವಂಥ ಸದ್ಗೃಹಸ್ಥರಿ ಗೂ ಬಿಟ್ಟು ಬಿಡಬಹುದು.

೨. ಶಿಕ್ಷಕನಿಂದ ಉಂಟಾಗುವಂಥವು—

(೫) ಕೆಟ್ಟ ವರ್ಗೀಕರಣ—ಇದು ಶಿಕ್ಷಕನ ತಪ್ಪು. ಇದ

ನ್ನು ವಿಚಾರದಿಂದಲೂ ಒಳ್ಳೇ ಮಾದರಿಗಳನ್ನು ಲಕ್ಷ್ಯಪೂರ್ವಕವಾಗಿ ನೋಡುವದರಿಂದಲೂ ಮಾತ್ರವೇ ತಿದ್ದಲಿಕ್ಕೆ ಬರಬಹುದು. ಇದಕ್ಕೆ ಬೇರೆ ಉಪಾಯವಿಲ್ಲ.

(೩) ಕಲಿಸುವ ಕೆಟ್ಟ ಪದ್ಧತಿಗಳು—ಈ ಸಂಬಂಧದಿಂದ ಶಿಕ್ಷಕನು ತಾನು ಸ್ವತಃ ಓದಬೇಕು, ಅಭ್ಯಾಸ ಮಾಡಬೇಕು, ಆಮೇಲೆ ಶಿಕ್ಷಣದ ಚಲೋ ಪದ್ಧತಿಗಳನ್ನು ಅನುಸರಿಸಿ ಹುಡುಗರನ್ನು ಕಲಿಸಬೇಕು.

(ಕ) ಕಠೋರವಾದ ನಿರ್ಬಂಧಗಳು— ಕಠೋರತನವು ಯಾವಾಗಲೂ ತನ್ನ ಉದ್ದಿಷ್ಟ ಕಾರ್ಯವನ್ನೇ ನಿಷ್ಫಲ ಮಾಡುವದು. ಕಠೋರತನದಿಂದ ಹುಡುಗರು ಸುಮ್ಮನೆ ಇರಬಹುದು. ಆದರೆ ಅರಿತವರಿಗೆ ಇದು ಯಾತರ ಪರಿಣಾಮವೆಂಬದು ತಿಳಿಯದೆ ಇರದು. ಇದರಿಂದ ಹುಡುಗರ ಓಜಸ್ಸು ಕುಂದುವದು. ಅದರಿಂದ ಅವರ ಅಭ್ಯಾಸ ಮಾಡುವ ಶಕ್ತಿಯು ಕಡಿಮೆಯಾಗುವದು ಇದಲ್ಲದೆ ಇದರಿಂದ ಅವರ ಮನಸ್ಸಿನಲ್ಲಿ ಬಲವಾದ ದುಷ್ಟ ಮನೋವಿಕಾರಗಳು ಉತ್ಪನ್ನವಾಗುವದರಿಂದ ವಿರೋಧ ಭಾವನೆಗಳು ಗುಪ್ತವಾಗಿ ತಿರುಗಿಬೀಳುವದು ಅಧ್ಯಾಯದಲ್ಲಿ ಈ ಬಗ್ಗೆ ಹೇಳಿದ್ದನ್ನು ನೋಡಿಕೊಳ್ಳಿರಿ

ವೇಳಾಪತ್ರಕಗಳು—೧. ಚಿಕ್ಕ ಬಾಲಕರ ಶಾಲೆಗಳ ವೇಳಾಪತ್ರಕಗಳಲ್ಲಿ ಹಸ್ತಕೃತಿಗಳಿಗೂ ಮನೋರಂಜಕವಾದ ಕೆಲಸಗಳಿಗೂ ತಕ್ಕಷ್ಟು ವೇಳೆಯನ್ನು ಕೊಡಬೇಕು. ಬೇರೆ ಶಾಲೆಗಳಲ್ಲಿ ಆಯಾ ಶಾಲೆಗಳಲ್ಲಿ ಕಲಿಸತಕ್ಕಂಥ ವಿಶೇಷ ವಿಷಯಗಳನ್ನು ಬಳಗೂಡಿಸಿ, ಯಾವತ್ತು ವಿಷಯಗಳಿಗೆ ಯೋಗ್ಯವಾದಷ್ಟು ವೇಳೆಯನ್ನು ಕೊಡಬಿಕ್ಕಬೇಕು. ಹುಡುಗರ ವರ್ಗಗಳನ್ನೂ ಶಿಕ್ಷಕರ ಸಾಮರ್ಥ್ಯಗಳನ್ನೂ ವಿಚಾರಿಸಿ ನೋಡಲಾಗಿ ಶಾಲೆಯ ಹೊತ್ತಿನಲ್ಲಿ ಉತ್ತಮವಾಗಿ ಕಲಿಸಲಿಕ್ಕೆ ಬಾರದೆ ಇದ್ದಂಥ ಯಾವ ಹೆಚ್ಚಿನ ವಿಷಯಗಳನ್ನೂ ವೇಳಾಪತ್ರಕದಲ್ಲಿ ಸೇರಿಸುವ ಹವ್ಯಾಸಕ್ಕೆ ಬೀಳಬಾರದು. ಹುಡುಗರನ್ನು ಶಾಲೆಯು ಗೊತ್ತುಪಡಿಸಿದ ವೇಳೆಗಿಂತಲೂ ಹೆಚ್ಚು ಹೊತ್ತು ಶಾಲೆಯಲ್ಲಿ ಎಷ್ಟು ಮಾತ್ರವೂ ಇಡಕೂಡದು. ವೇಳಾಪತ್ರಕವನ್ನು ಶಾಲೆಯೊಳಗಿನ ಮುಖ್ಯ

ಖ್ಯ ಸ್ಥಳದಲ್ಲಿ ಇಡಬೇಕು. ಮತ್ತು ಅದನ್ನು ಇಡೀ ವರ್ಷ ಅನುಸರಿಸಬೇಕು.

೭. ವೇಳಾಪತ್ರಕಗಳನ್ನು ಮಾಡುವ ಬಗ್ಗೆ ಸಾಮಾನ್ಯ ಸೂಚನೆಗಳು—ವೇಳಾಪತ್ರಕವನ್ನು ಮಾಡುವ ಕೆಲಸದಲ್ಲಿ ಅನೇಕ ಸಂಗತಿಗಳನ್ನು ವಿಚಾರಿಸತಕ್ಕದ್ದಿರುವದರಿಂದ ಈ ಕೆಲಸವು ಬಿರಿಯಾಗಿರುವದು. ಯಾವತ್ತು ಸಾಲೆಗಳಿಗೆ ಖಂಡಿತವಾದ ಒಂದೇ ವೇಳಾಪತ್ರಕವು ಎಂದಿಗೂ ಸರಿಬೀಳದು. ಯಾಕಂದರೆ ಬೇರೆ ಬೇರೆ ಸಾಲೆಗಳಲ್ಲಿ ಬೇರೆ ಬೇರೆ ಸಂಗತಿಗಳ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಅದಕಾರಣ ಇಲ್ಲಿ ಈ ವಿಷಯದಲ್ಲಿ ಅನುಸರಿಸತಕ್ಕ ಮುಖ್ಯ ತತ್ವಗಳನ್ನೂ ನಿಯಮಗಳನ್ನೂ ಮಾತ್ರ ಹೇಳುತ್ತೇವೆ.

೧. ಸಾಲೆಯ ಮನೆ—ಸಾಲೆಯಲ್ಲಿ ಎಷ್ಟು ಕೋಣೆಗಳುಂಟು? ಅವು ಎಷ್ಟೆಷ್ಟು ದೊಡ್ಡವು? ಸಾಲೆಯಲ್ಲಿ ಕುರ್ಚಿ ಮೇಜು ಮೊದಲಾದ ಸಾಮಾನುಗಳು ಎಷ್ಟು, ಯಾವ ತರದವುಂಟು? ಎಂಬ ಸಂಗತಿಗಳನ್ನು ವಿಚಾರಿಸಬೇಕು. ಬೇರೆ ಬೇರೆ ವರ್ಗಗಳಿಗೆ ಬೇರೆ ಬೇರೆ ಕೋಣೆಗಳಿದ್ದಂಥ ಸಾಲೆಯ ಬಗ್ಗೆ ವೇಳಾಪತ್ರಕವನ್ನು ಮಾಡುವದು ಇಂಥ ಕೋಣೆಗಳು ಇಲ್ಲದಂಥ ಸಾಲೆಯ ಬಗ್ಗೆ ಮಾಡಬೇಕಾಗುವ ವೇಳಾಪತ್ರಕಕ್ಕಿಂತಲೂ ಸುಲಭವಾಗಿರುವದು. ಸಾಲೆಯಲ್ಲಿದ್ದಂಥ ಕೂತು ಬರೆಯುವ ಮೇಜುಗಳು, ಹುಡುಗರಿಗೆ ಕೂಡ್ರಲಿಕ್ಕೆ ಬೆಂದರಹಿಂದೆ ಬಂದು ಎತ್ತರವಾದ ಬಾಕುಗಳು ಇವೇ ಮೊದಲಾದವುಗಳ ಮೇಲಿಂದ ಯಾವ ಯಾವ ಪಾಠಗಳನ್ನು ಯಾವ ಯಾವ ಕ್ರಮದಿಂದ ಕಲಿಸಬೇಕೆಂಬದನ್ನು ಗೊತ್ತು ಮಾಡಬೇಕಾಗುವದು.

೨. ಶಿಕ್ಷಕರು—ಶಿಕ್ಷಕರಿಗೆ ಅವರವರಿಗೆ ತಕ್ಕ ಕೆಲಸವನ್ನು ಕೊಡುವದು ಬಹಳ ಮಹತ್ವವುಳ್ಳ ಸಂಗತಿಯಾಗಿರುತ್ತದೆ. ಪ್ರತಿಬಿಬ್ಬ ಶಿಕ್ಷಕನಿಗೆ ಅವನಿಗೆ ಅತ್ಯುತ್ತಮವಾಗಿ ಕಲಿಸಲಿಕ್ಕೆ ಬರುವಂಥ ವಿಷಯವನ್ನು ಒಪ್ಪಿಸಬೇಕು. ಇದರ ಮೇಲಿಂದ ಉಪಶಿಕ್ಷಕರಿದ್ದಂಥ ಸಾಲೆಯ ವೇಳಾಪತ್ರಕವು ಉಪಶಿಕ್ಷಕರಿರದೆ, ಹಿರೇಮಣಿಗಳೂ, ಶಿಕ್ಷಕರೂ (ಪ್ಯೂ

ಪಿಲ್‌ಟೀಚರ) ಮಾತ್ರವೇ ಇದ್ದ ಸಾಲೆಯು ವೇಳಾಪತ್ರಕಕ್ಕೆ ಭಿನ್ನವಾಗಿರುವದೆಂಬದು ಸ್ಪಷ್ಟವದೆ.

೩. ಸಾಲೆಯ ಪ್ರಕಾರ–ಸಾಲೆಯು ಹುಡುಗರ ಸಾಲೆಯೋ ಹುಡುಗಿಯರ ಸಾಲೆಯೋ, ಬಾಲಕರ ಸಾಲೆಯೋ ದೊಡ್ಡ ಹುಡುಗರ ಸಾಲೆಯೋ, ಅಥವಾ ಮಿಶ್ರಶಾಲೆಯೋ; ಸಾಲೆಯು ಎರಡೂ ಹೊತ್ತು ಇರುವದೋ ಒಪ್ಪತ್ತು ಮಾತ್ರ ಇರುವದೋ; ಬಡ ಹುಡುಗರೇ ಬರುವ ಸಾಲೆಯೋ, ಉಂಡುಟ್ಟು ಸುಖದಿಂದಿರುವ ಜನರ ಮಕ್ಕಳ ಸಾಲೆಯೋ; ದೊಡ್ಡದೋ ಸಣ್ಣದೋ; ಮುಂದರಿಸಿದ್ದೋ, ಹಿಂದೆ ಬಿದ್ದದೋ ಎಂಬ ಸಂಗತಿಗಳನ್ನು ವಿಚಾರಿಸಬೇಕು.

೪. ಸಾಲೆ ಇರುವ ಸ್ಥಳ—ಶಹರದೊಳಗಿನ ಸಾಲೆಗೆ ಹಳ್ಳಿಯ ಸಾಲೆಯು ವೇಳಾಪತ್ರಕಕ್ಕಿಂತಲೂ ಬೇರೆ ತರದ ವೇಳಾಪತ್ರಕವು ಬೇಕಾಗುವದು. ಬೇರೆ ಬೇರೆ ವ್ಯಾಪಾರೋದ್ಯೋಗಗಳೂ ಕೈಗಾರಿಕೆಯ ಕೆಲಸಗಳೂ ಬೇಸಾಯದ ಕೆಲಸಗಳೂ ಕಣಿಗಳ ಕೆಲಸಗಳೂ ಮುಂತಾದ ಅನೇಕ ಕೆಲಸಗಳು ನಡೆಯುವಂಥ ಬೇರೆ ಬೇರೆ ಸ್ಥಳಗಳಲ್ಲಿರುವ ಸಾಲೆಗಳಿಗೆ ಬೇರೆ ಬೇರೆ ಬಗೆಯ ವೇಳಾಪತ್ರಕಗಳು ಬೇಕಾಗುವವು.

(ಸಹೀ)

DEPARTMENTAL NOTICE.

ನೋಟೀಸು.

ಜಾವಕ ನಂಬರ ೧.

ಗಣಿತಬೋಧಿನೀ ಭಾಗ ೧ (ಕಿಂಡ್ಲಬರಿ ಸಾಹೇಬರ ಅಂಕಗಣಿತದ ಭಾಷಾಂತರ) ಎಂಬ ಪುಸ್ತಕವನ್ನು ಮೆ. ಡಾಯರೆಕ್ಟರ ಆಫ ಪಬ್ಲಿಕ್ ಇನ್‌ಸ್ಟ್ರಕ್ಶನ್ ಸಾ. ಬ. ರವರು ಇನಾಮಿಗಾಗಿ ಮಂಜೂರ ಮಾಡಿದ್ದಾರೆ.

ಧಾರವಾಡ ಟ್ರೇ. ಕಾಲೇಜ,
ತಾ. ೧೩-೪-೧೯೦೧

S. K. Rolda,
ಪ್ರಿನ್ಸಿಪಾಲ.

CORRESPONDENCE.

ಪತ್ರವ್ಯವಹಾರ.

(೧೦೪ ನೇ ಪುಟದಿಂದ ಮುಂದೆ ಸಾಗಿದ್ದು.)

(೪ ನೇ ಸದರು ಅ) ಹಿಂದುಸ್ತಾನ ನಿವಾಸಿ:— ಈ ಗ್ರಂಥವು ಹೊಸದಾಗಿ ಜನ್ಮ ಹೊಂದಿರುವದು. ಇದರಲ್ಲಿ ಹಿಂದುಸ್ತಾನದ ಬ್ರಿಟಿಶ್ ರಾಜ್ಯದಾಡಳಿತೆಯ ಅತ್ಯುಪಯುಕ್ತವಾದ ಅನೇಕ ಸಂಗತಿಗಳು ಬಹು ಸರಸಾಗಿ ವಿವರಿಸಲ್ಪಟ್ಟಿರುತ್ತವೆ ಅವುಗಳನ್ನು ಮನಮುಟ್ಟಿ ಓದಿ ತಿಳುಕೊಂಡು, ಅದರಂತೆ ವರ್ತಿಸುವದು ಪ್ರತಿಯೊಬ್ಬ ಹಿಂದೂ ನಿವಾಸಿಯ ಮುಖ್ಯ ಕರ್ತವ್ಯವಾಗಿದೆ. ಇದರ ಜ್ಞಾನವು ಹೆಣ್ಣುಮಕ್ಕಳಿಗೆ ಸಹ ಇರುವದು ಅವಶ್ಯವೆಂದೆಣಿಸಿ, ನಮ್ಮ ದಯಾಳು ವಿದ್ಯಾಖಾತೆಯ ಅಧಿಕಾರಿಗಳು ಈ ಗ್ರಂಥವನ್ನು ಹೆಣ್ಣುಮಕ್ಕಳ ಶಾಲೆಯ ವಿಷಯಗಳಲ್ಲಿ ಸೇರಿಸಿದ್ದಾರೆ. ಈ ಬಗ್ಗೆ ಅವರ ಉಪಕಾರವನ್ನು ಎಷ್ಟು ಬಣ್ಣಿಸಿದರೂ ತೀರದು. ಇದರಲ್ಲಿ ಅನೇಕ ಪ್ರೌಢ ವಾಕ್ಯಗಳೂ, ದೃಷ್ಟಾಂತಗಳೂ, ಕಠಿಣ ಶಬ್ದಗಳೂ ಇರುವದರಿಂದ, ೪ ನೇ ಇಯತ್ತೆಯ ವಿದ್ಯಾರ್ಥಿನಿಯರಿಗೆ ಬೋಧವಾಗುವದು ಕಷ್ಟ. ಆ ಕಾರಣ ಇದನ್ನು ೬ ನೇ ಇಯತ್ತೆಯಲ್ಲಿ ಸೇರಿಸಬೇಕೆಂದು ಪ್ರಾರ್ಥಿಸುತ್ತೇನೆ. ಇದರ ಬೆಲೆ ಮಿತಿಮೀರಿ ಇರುವದು. ಸ್ವಲ್ಪ ಕಡಿಮೆ ಮಾಡಿದಲ್ಲಿ ಬಡ ವಿದ್ಯಾರ್ಥಿನಿಯರಿಗೆ ಕಲ್ಯಾಣ ಮಾಡಿದಂತಾಗುವದು

೬ ನೇ ಇಯತ್ತೆ (೪ ನೇ ಸದರು ಬ) ಪೃಥ್ವಿಯ ಭೂಗೋಲದ ಸಾಧಾರಣ ಜ್ಞಾನವು:— ಸಾಧಾರಣ ಜ್ಞಾನವೆಂದರೇನು? ಪೃಥ್ವಿಯ ಭೂಗೋಲದಲ್ಲಿ ಏಶಿಯ, ಯುರೋಪ, ಆಫ್ರಿಕ, ಅಮೇರಿಕ, ಆಸ್ಟ್ರೇಲೇಶಿಯಗಳೆಂಬ ೫ ದೊಡ್ಡ ದೊಡ್ಡ ಭೂಮಿಯ ವಿಭಾಗಗಳ ವರ್ಣನೆಯುಂಟು. ಇವಷ್ಟೂ ಭಾಗಗಳ ಜ್ಞಾನವು ಸಾಗ್ರವಾಗಿ ಆಗತಕ್ಕದ್ದೇ ಹ್ಯಾಗೆ? ಇಡೀ ಭೂಗೋಲವನ್ನು ಒಂದೇ ವರ್ಷದೊಳಗೆ ಕಲಿಸುವದು ಸುಸಾಧ್ಯವಾದ ಕೆಲಸವಲ್ಲ. ಈ ಸಂಬಂಧವಾಗಿ ನನ್ನ ತಿಳುವ

ಳಿಕೆಯೀ ವಿಪರೀತವಾಗಿದ್ದರೆ, ಈ ದೊಡ್ಡ ಭೂಗೋಲ ವರ್ಣನೆಯಲ್ಲಿ ಕಲಿಸತಕ್ಕದ್ದೇನು? ಬಿಡತಕ್ಕದ್ದೇನು? ಇದರದಷ್ಟು ಸ್ಪಷ್ಟೀಕರಣವಾದಲ್ಲಿ ನನಗೆ ಸಮಾಧಾನವಾಗುವದು.

ಇಯತ್ತೆಗಳಲ್ಲಿ ಅವಶ್ಯವಾಗಿ ಮಾಡತಕ್ಕ ಪೆಚ್ಚುಕಡಿಮೆಗಳ ಬಗ್ಗೆ ನನ್ನ ಅಲ್ಪಮತಿಗೆ ತಿಳಿದಷ್ಟು, ಈ ವರೆಗೆ ಸೂಚಿಸಿದೆನು. ಇನ್ನು ಇದೇ ಇಯತ್ತೆಗೆ ಸಂಬಂಧಿಸಿದ ಬೇರೆ ಬಂದೆರಡು ಮಾತುಗಳನ್ನು ಹೇಳಿ, ನಾನು ನನ್ನ ಲೆಕ್ಕಣಿಕೆಯನ್ನು ಕೆಳಗಿಡುತ್ತೇನೆ.

(೧ನೇದು)—ಈಗ ಶಾಲೆಯಲ್ಲಿ ಕಲಿಸಲ್ಪಡತಕ್ಕಂಥ ಬಂಜರಿಂದ ನಾಲ್ಕರ ವರೆಗಿನ ಕ್ರಮಿಕ ಪುಸ್ತಕಗಳು ಆಯಾ ಇಯತ್ತೆಗೆ ತಕ್ಕವುಗಳಾಗಿಯೂ, ಸುಬೋಧವಾಗಿಯೂ ಇರುತ್ತವೆಂದು ನಾನು ಪ್ರತ್ಯೇಕವಾಗಿ ಹೇಳಬೇಕೆಂಬುವ ಹಾಗಿಲ್ಲ. ಆದರೆ ಈ ಪುಸ್ತಕಗಳೊಳಗಿನ ಪುರುಷವಾಚಕ ಸಂವಾದದ ಪಾಠಗಳನ್ನೆಪ್ಪು ಬದಲಿಸಿ, ಸ್ತ್ರೀವಾಚಕದಲ್ಲಿಟ್ಟರೆ, ಇವೇ ಪುಸ್ತಕಗಳು ಹೆಣ್ಣು ಮಕ್ಕಳ ಶಾಲೆಯ ಪುಸ್ತಕಗಳೆನಿಸುವವು. ಸಾಧ್ಯವಾದರೆ ನನ್ನ ವಿಜ್ಞಾಪನೆಗೆ ಮನ್ನಣೆ ದೊರೆಯಬೇಕು.

(೨ನೇ)—ಇನೇ ಒನೇ ಪುಸ್ತಕಗಳೊಳಗಿನ ಕೆಲವು ಸ್ತ್ರೀಯ ಪಾಠಗಳು ಸ್ವಲ್ಪ ದುಬೋರ್ಧವಾಗಿವೆ. ಅವುಗಳನ್ನು ತೆಗೆದು ಹಾಕಿ, ಅವುಗಳ ಸ್ಥಳದಲ್ಲಿ ನನ್ನ ಭಗಿನಿಯರಾದ ಬಹು ಮರ್ಯಾದಿತ ಪಂಡಿತಾರಮಾಬಾಯಿಯವರಿಂದ ರಚಿಸಲ್ಪಟ್ಟ ಸ್ತ್ರೀಧರ್ಮನೀತಿ ಎಂಬ ಲೋಕಮಾನ್ಯ ಗ್ರಂಥದೊಳಗಿನ ಕೆಲವು ಪಾಠಗಳನ್ನು ಸೇರಿಸಿದ್ದುಂಟಾದರೆ, ನಮ್ಮ ಹೆಣ್ಣುಮಕ್ಕಳಿಗಾಗುವ ಲಾಭಗಳು ಎಷ್ಟೆಂತ ಹೇಳಲಿ!

(೩ನೇ)— ಹಾಡುಗಳನ್ನೂ, ಕವಿತೆಗಳನ್ನೂ, ಪದಗಳನ್ನೂ ಸ್ವರಯುಕ್ತವಾಗಿ ಅಂದರೇ ಮಾತ್ರ, ಅವುಗಳಲ್ಲಿಯ ರಸವು ಹೊರಬಿದ್ದು, ಕಲಿಸುವವರಿಗೂ ಕಲಿಯುವವರಿಗೂ ಕೇಳುವವರಿಗೂ ಕೂಡಾ ಆನಂದವೇ ಆನಂದವಾಗುವದು.

ಸೆಂದಪ್ಪ ಮನುಷ್ಯನ ಆಯುಷ್ಯ ವೃದ್ಧಿಯ ಮೂಲ ಗುಟ್ಟು ಆನಂದವೆಂಬ ಅಮೌಲ್ಯವಾದ ವಸ್ತುವನ್ನು ಪಡಕೊಳ್ಳಲಿಕ್ಕೆ ಯಾವ ಯಾವ ಉಪಾಯಗಳನ್ನು ಕೈಕೊಳ್ಳಬೇಕಾಗುವದೋ ಅವುಗಳಲ್ಲಿ ಗಾಯನಕಲೆ ಎಂಬದು ಎಲ್ಲಕ್ಕೂ ಹೆಚ್ಚಿನ ಉಪಾಯವೆಂದು ಹೇಳಬಹುದು. ಈ ಕಲೆಯನ್ನರಿತ ಅಧ್ಯಾಪಕಳ ಶಾಲೆಯು ಸೌಖ್ಯದ ಮಂದಿರವೂ ಸಂಪತ್ತಿಯು ಖಣಿಯು ಎಂದು ಹೇಳಲಿಕ್ಕೆ ಅನುಮಾನವಿಲ್ಲ. ಈ ತತ್ವವನ್ನು ತಿಳುಕೊಂಡೇ ಸರಕಾರದವರು ಇದನ್ನು ಶಾಲೆಯ ವಿಷಯಗಳಲ್ಲಿ ಸೇರಿಸಿ, ಅದಕ್ಕೆ ಇಷ್ಟು ಮಹತ್ವವನ್ನು ಕೊಟ್ಟಿರುವರು. ಆದರೆ ಯುದ್ಧವಿದ್ಯವನ್ನರಿಯದ ಮನುಷ್ಯನ ಕೈಯಲ್ಲಿ ಶಸ್ತ್ರವನ್ನು ಕೊಟ್ಟಂತೆ ನಮ್ಮ ಸ್ಥಿತಿಯಾಗುವದು. ನಮಗೆ ಇಂಥ ಉಪಯುಕ್ತ ಕಲಾಜ್ಞಾನವು ಎಷ್ಟು ಮಾತ್ರವೂ ಇಲ್ಲದ್ದರಿಂದ ನಾವು ವ್ಯಸನ ಪಡಬೇಕಾಗಿದೆ. ಈ ಕೊರತೆಯನ್ನು ಹೋಗಲಾಡಿಸುವದು ನಮ್ಮ ನ್ಯಾಯವೃತ್ತಿಯ ಮುಳ್ಳ ಅಧ್ಯಕ್ಷ ದೊರೆಗಳ ಸಾಹಸವನ್ನು ಅವಲಂಬಿಸಿರುವದು ಇದೇ ದಕ್ಷಿಣ ಭಾಗದ ಹೆಣ್ಣುಮಕ್ಕಳ ಕಾಲೇಜದಲ್ಲಿ ಒಬ್ಬ ಗಾಯಕಳನ್ನು ಇಟ್ಟು, ಈಗಿನಿಂದಲೇ ವಿದ್ಯಾರ್ಥಿನಿಯರಿಗೆ ಗಾಯನ ಕಲೆಯನ್ನು ಕಲಿಸಲಿಕ್ಕೆ ಉಪಕ್ರಮಿಸಿದರೆ, ಸ್ವಲ್ಪ ಕಾಲದಲ್ಲಿಯೇ ಈ ವಿದ್ಯೆಯಲ್ಲಿ ನಿಷ್ಣಾತರಾದ ಬೇಕಾದಷ್ಟು ಮಂದಿ ಉಪಶಿಕ್ಷಕರು ನಮಗೆ ದೊರೆಯುವರು. ಇದರಿಂದ ನಮಗೆ ಈಗಿದ್ದ ದೊಡ್ಡ ಗೋಳಾಟವು ಸಹಜವೇ ದೂರಾಗುವದು.

(೪ನೇ)—ಒಂದು ಕೈಯಲ್ಲಿ ಹಳೆ ಇಯತ್ತ್ರೆಗಳನ್ನೂ, ಮತ್ತೊಂದು ಕೈಯಲ್ಲಿ ಹೊಸ ಇಯತ್ತ್ರೆಗಳನ್ನೂ ತಗೆದುಕೊಂಡು ಸ್ವಲ್ಪು ಪರೀಕ್ಷಿಸಿ ನೋಡಿದರೆ, ಈಗಿನ ಹೊಸ ಇಯತ್ತ್ರೆಗಳು ಪೂರ್ಣವಾದವುಗಳಿಂತಲೂ, ಮೇಲಾದವುಗಳಿಂತಲೂ, ಜ್ಞಾನಶಕ್ತಿಯನ್ನು ಮೆಲ್ಲಮೆಲ್ಲನೆ ಬಲಪಡಿಸುವಂಥ ವಿಷಯು ಸಂಗ್ರಹವುಳ್ಳವುಗಳಿಂತಲೂ ಕಂಡು ಬರುವದು. ಇಷ್ಟೇ ಅಲ್ಲ, ಅವುಗಳನ್ನು ರಚಿಸಿದ ಸದ್ಗ್ರಹಸ್ಥರ ಬುದ್ಧಿಕೌಶಲ್ಯವು ಅನುಪಮೇಯವಾದದ್ದೆಂದು ತಾವೇ ಮನದಲ್ಲಿ ಹೊಳೆದು,

ವರ ಬಗ್ಗೆ ಪೂಜ್ಯಬುದ್ಧಿಯು ಹುಟ್ಟದೆ ಇರಲಾರದು. ಈ ಸೂತನೆವಾದ ಇಯತ್ತೆಗಳೊಳಗಿನ ಪಾಠಗಳನ್ನು ಅಚ್ಚುಕ ಟ್ಟಾಗಿ ಕಲಿಸಬೇಕಾದರೆ, ಶಾಲೆಯಲ್ಲಿ ವಿಧವಿಧದ ಪದಾರ್ಥ ಗಳ ಸಂಗ್ರಹವಿರುವದು ಅತ್ಯವಶ್ಯವಾಗಿದೆ. ಪದಾರ್ಥಗಳ ಸಂಗ್ರಹವಿದ್ದ ಹೊರತು, ಯಾವ ವಿಷಯವೂ ಎಷ್ಟು ಮಾತ್ರ ವೂ ಎಂದೂ ಸಮಂಜಸವಾಗಿ ಕಲಿಸಲ್ಪಡಲಾರದೆಂದು ಖಂ ಡಿತವಾಗಿ ಹೇಳುತ್ತೇನೆ. ಆದ್ದರಿಂದ ಮುಖ್ಯ ಮುಖ್ಯ ಊರು ಗಳೊಳಗಿನ ಒಂದೊಂದು ಶಾಲೆಯಲ್ಲಿಯಾದರೂ ಪದಾರ್ಥಗ ಳ ಸಂಗ್ರಹವಿರುವ ಹಾಗೆ ದೊರೆಗಳವರ ಕಡೆಯಿಂದ ವ್ಯವ ಸ್ಥೆಯಾಗಬೇಕು. ಅಂದರೆ ಎಲ್ಲ ಕಡೆಯಲ್ಲಿಯೂ ತೀವ್ರವೇ ವಿದ್ಯಾವೃದ್ಧಿಯಾಗಿ ಬಹುಕಾಲದಿಂದ ನಮ್ಮ ದೇಶದೊಳಗೆ ನೆಲೆಗೊಂಡಿದ್ದ ಅಜ್ಞಾನವೆಂಬ ಕಗ್ಗತ್ತಲೆಯು ದಿಕ್ಕಾಪಾಲಾ ಗಿ ಓಡಿಹೋಗುವದೆಂದು ಹೇಳಲಿಕ್ಕೆ ಬೇಡ,

ಈ ಮೇರೆಗೆ ಶಾಲಾಸುಧಾರಣೆಯ ಸಂಬಂಧವಾಗಿ ನನ್ನ ಬುದ್ಧಿಗೆ ತೋಚಿದ ಉಪಾಯಗಳನ್ನು ಸಭೆಯ ಮುಂದೆ ಇಟ್ಟಿ ರುವೆನು. ಇವುಗಳ ಯೋಗ್ಯಾಯೋಗ್ಯತೆಗಳ ಬಗ್ಗೆ ವಿಚಾ ರಾಗಿ ತೀವ್ರ ವ್ಯವಸ್ಥೆಯಾದೀತೆಂದು ನಂಬಿಗೆಯುಂಟು. ಹಾ ಗು ದೇಶೋನ್ನತಿಗೆ ಕಾರಣೀಭೂತವಾದ ಇಂಥ ಮಹಾ ಸಭೆ ಗಳನ್ನು ಕಾಲ ಕಾಲಕ್ಕೆ ಕೂಡಿಸುವಂತೆ ಜಗನ್ನಿಯಂತನು ನಮ್ಮ ದಯಾಳು ವಿದ್ಯಾಖಾತೆಯ ದಕ್ಷಿಣ ಪ್ರಾಂತದ ಅಧಿಪ ತಿಗಳಾದ ಮೆಹಬ್ರ್ಬಾನ ಇನಸ್ಪೇಕ್ಟರ ಸಾಹೇಬ ಬಹಾದ್ದೂ ರರವರಿಗೆ ಪ್ರೇರಣೆ ಮಾಡಲೆಂತಲೂ, ಆ ಲೋಕಪ್ರಿಯರ ಆಯುರಾರೋಗ್ಯವನ್ನು ವೃದ್ಧಿಪಡಿಸಲೆಂತಲೂ ಆ ಮಹಾರಾ ಯನನ್ನು ಅನನ್ಯಭಾವದಿಂದ ಪ್ರಾರ್ಥಿಸಿ, ಸಭೆಯ ಅಪ್ಪಣೆ ಯನ್ನು ಪಡೆದು, ಈ ಲೇಖವನ್ನು ಮುಗಿಸುತ್ತೇನೆ.

ಮುಕ್ಕಾಂ ಹುಬ್ಬಳ್ಳಿ.
ತಾ. ೮-೧೦-೧೯೦೦.

ಲಿಂಗವ್ವಾ ಬ. ನೂಲವಿ,
ಹೆ. ಮಿ. ಗರ್ಲಸ್ಕೂಲ ನಂಬರ ೧.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ।
ಜಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ಸಯದಿಂದಿತ್ತಪಿವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂಪೋಷಿಪತಿದ್ದವೇಳ್ವುದುಧರಜ್ಞಾನಾಭಿವೃದ್ಧಿಪ್ರಿಯರ್॥೧

ಪುಸ್ತಕ ೩೭] ಅಗಷ್ಟ ೧೯೦೧. [ಸಂಚಿಕೆ ೮.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಕೆಲವು ಜಾತಿಯ ಇರುವೆಗಳು ಬೇರೊಂದು ಇರುವೆಯ ಹಿಂಡಿನ ಮೇಲೆ ದಾಳಿ ಮಾಡಿ, ಅವುಗಳನ್ನು ಸೋಲಿಸಿ ಹಿಡಿದುತಂದು ತಮಗೆ ಸೆರೆಯಾಳಾಗಿ ಮಾಡಿಕೊಳ್ಳುತ್ತವೆಂಬ ಸಂಗತಿಯನ್ನು ಕೇಳಿ ಪಾಠಕರಿಗೆ ಅರಿವಿನಿಸಬಹುದು. ಆದರೆ ಸರ್ ೧೪ನೇ ಇಸವಿಯಲ್ಲಿ ಒಬ್ಬ ನೈಷ್ಟಿಕಯೋಧಕನು ಈ ಸಂಗತಿಯನ್ನು ಕಣ್ಣಾರೆ ನೋಡಿ ಬರ್ಣಿಸಿದ್ದು ವ್ಯಾಗೆಂದರೆ—ನಾನು ಒಂದು ದಿವಸ ಒಂದು ಇರುವೆಯ ದೊಡ್ಡ ಹಿಂಡು ನೆಲದ ಮೇಲೆ ಬರಬರನೆ ನಡೆಯುತ್ತ ಸಾಗುವದನ್ನು ನೋಡಿದೆನು. ಈ ಹಿಂಡು ಬಹಳೇ ದೊಡ್ಡದಿತ್ತು. ಅವೆಲ್ಲ ಇರುವೆಗಳು ಬಿಮ್ಮನೆನ್ನಿಸಿನಿಂತ ನಂಜಾಳುಗಳಂತೆ ಹುರಿಗಟ್ಟಿಕೊಂಡು ನಡೆದಿದ್ದವು. ಅದರೊಳಗೆ ಹೆಣ್ಣಿಗಳ್ಳ ಹೇಡಿ ಇರುವೆಯು ಒಂದೂ ಇದ್ದಿಲ್ಲ. ಈ ದಂಡು ನಡೆಯುತ್ತ ನಡೆಯುತ್ತ ಮತ್ತೊಂದು ಇರುವೆಯ ಹುತ್ತಿಗೆ ಬಂದು ಸೇರಿತು. ಆ ಹುತ್ತಿನಲ್ಲಿ ಬೇರೊಂದು ತರದ ಇರುವೆಗಳಿದ್ದವು. ಅವುಗಳೊಳಗಿನ ಕೆಲವು ಇರುವೆಗಳು ಹಗೆಗಳ ಪಾಳತಿಯನ್ನು ನೋಡುತ್ತ ನಿಂತಿದ್ದವು. ಎದುರಾಳಿಗಳು ತಮ್ಮ ಮೇಲೆ

ಏರಿ ಬರುವದನ್ನು ಕಂಡಕೂಡಲೆ ತಮ್ಮ ಒಡೆಯನಿಗೆ ಅಥವಾ ಹಿಂಡಿಗೆ ಈ ಸುದ್ದಿಯನ್ನು ಮುಟ್ಟಿಸುವದಕ್ಕಾಗಿ ಆಳು ಕಳುಹಿದವು. ಆಗ ಒಳಗಿನ ಹಿಂಡೂ ಬೈಲಿಗೆ ಬಂತು. ಕೂಡಲೆ ಎರಡೂ ಬಣಗಳಲ್ಲಿ ಕಡುತರದ ಕಾಳಗವೆಸಗಿ ಮೊದಲನೇ ಹಿಂಡು ಜಯಶಾಲಿಯಾಯಿತು. ಗೆದ್ದ ಇರುವೆಗಳು ಸೋತ ಇರುವೆಗಳನ್ನು ಬೆನ್ನಟ್ಟಿ ಅವುಗಳನ್ನು ಹುತ್ತಿನೊಳಗೆ ದೂಡುತ್ತ ಹೋಗಿ, ತಿರುಗಿ ಬರುವಾಗ ತಮ್ಮ ಬಾಯಿಯಲ್ಲಿ ಸೋತ ಇರುವೆಯ ಒಂದೊಂದು ಮರಿಯನ್ನು ಹಿಡುಕೊಂಡು ತಮ್ಮ ಸ್ಥಳಕ್ಕೆ ಬಂದವು. ಆ ಮರಿಗಳೇ ಆವುಗಳ ಕೆರೆಯಾಳುಗಳು, ಅಥವಾ ಗುಲಾಮರು.

ಹೀಗೆ ಎರಡು ದಿವಸಗಳಾದ ಬಳಿಕ ಈ ಇರುವೆಗಳು ತಮ್ಮ ಜೀವನ ಕಾರ್ಯವನ್ನು ತಾವೇ ಸಾಗಿಸಿಕೊಳ್ಳದಷ್ಟು ದುರ್ಬಲವಾದವು. ಇದರಿಂದ ಪ್ರತಿ ಒಂದು ಸಂಗತಿಗಾಗಿ ತಮ್ಮ ಕೆರೆಯಾಳುಗಳ ಮೋರೆಯನ್ನೇ ನೋಡುತ್ತ ಕೂಡ್ರಬೇಕಾಯಿತು. ಇವುಗಳಿಗೆ ಬರೇ ಕಾದಲಿಕ್ಕೆ ಮಾತ್ರ ಬರುತ್ತಿತ್ತು. ಮುಂದೆ ಈ ಕಾದಾಟದ ಪ್ರಸಂಗವು ಕಟ್ಟಾದ ಬಳಿಕ ಸೆರೆಯಾಳಾದ ಇರುವೆಗಳು ತಮ್ಮ ಒಡೆಯರನ್ನು ಬಿಟ್ಟು ಬಿಟ್ಟವು. ಬಳಿಕ ಇವು ಮನೆ ಮಾಡಿಕೊಳ್ಳುವಂಥ ಹಾಗು ಮಕ್ಕಳನ್ನು ಜೋಪಾನ ಮಾಡುವಂಥ ಕಾರ್ಯಗಳನ್ನು ಸಹ ಮರೆತು ಬಿಟ್ಟವು. ಒಂದು ದಿವಸ ನಾನು ಈ ಜಾತಿಯ ಕೆಲವು ಇರುವೆಗಳನ್ನು ಬೇಕಾದಷ್ಟು ಅನ್ನಸಾಮಗ್ರಿಯುಳ್ಳ ಒಂದು ಗುಲಾಮರಿಲ್ಲದ ಸ್ಥಳದಲ್ಲಿ ಬಯ್ದು ಇಟ್ಟಿನು. ಆದರೆ ಕೆಲವು ದಿವಸಗಳಲ್ಲಿ ಈ ಇರುವೆಗಳು ಹಸಿವೆಯಿಂದ ಬಳಲಿ, ಮಡಿದು ಹೋದವು.

ಮತ್ತೊಮ್ಮೆ ಈ ಜಾತಿಯ ಕೆಲವು ಇರುವೆಗಳನ್ನು ಬೇರೆ ಒತ್ತಟ್ಟಿಗೆ ಇರಿಸಿ, ಕೂಳಿಲ್ಲದೆ ಅವು ಸಾಯುಪಂತಾದ ಬಳಿಕ ಅವುಗಳ ಬಳಿಯಲ್ಲಿ ಒಂದು ಕೆರೆಯಾಳಾದ ಇರುವೆಯನ್ನು ಬಿಟ್ಟಿನು. ಈ ಕೆರೆಯಾಳಾದ ಒಂದೇ ಇರುವೆಯು ಇರಲಿಕ್ಕೆ ಬಂದು ಹುತ್ತನ್ನು ಕಟ್ಟಿತು; ದುಡಿದು ದುಡಿದು ಮುದಿ

ಇರುವೆಗಳಿಗೆ ಆಹಾರ ಹಾಕಿ ಉಪಚರಿಸಿತು. ಚಿಕ್ಕ ಮರಿಗಳನ್ನು ಜೋಗರಿಸಿತು.

ವಾಚಕರೇ, ಅಪೂರ್ವ ಯೋಗದಿಂದ ನಿಮಗೆ ಇರುವೆಯಾಗುವ ಪ್ರಸಂಗ ಬಂದರೆ ಯಾವತರದ ಇರುವೆಯಾಗುವಿರಿ? ಒಡಿಯನಿಗಿಂತ ಗುಲಾಮರಾಗುವದು ಒಳ್ಳೇದಲ್ಲವೋ?

ಕಡಲ ತೆರೆಯಿಂದ ಬಂಡೆ ಮೊರಡೆಗಳಿಗೆ ಚೆಂಕಿ ಹತ್ತುವದೆಂಬ ಮಾತು ಕೇಳಿ ವಾಚಕರು ಆಶ್ಚರ್ಯಪಡಬಹುದು. ಆದರೆ ಈ ಸಂಗತಿಯು ಆಯರ್ಲಂಡದಲ್ಲಿಯೂ ಉತ್ತರ ಧ್ರುವದ ನೆರೆಯ ಪ್ರದೇಶದಲ್ಲಿಯೂ ನಿಜವಾಗಿ ಸಂಭವಿಸಿರುವದು. ಆಯರ್ಲಂಡದ ಪಶ್ಚಿಮ ದಂಡೆಯಲ್ಲಿರುವ ಬಾಲಿಬಲಿಯೋನ್ ಎಂಬಲ್ಲಿ ಅತ್ಲಾಂತಿಕ ಮಹಾಸಾಗರದ ತೆರೆಗಳು ಈಗ ನೂರಾರು ವರ್ಷದಿಂದ ಬಂಡೆಯ ಮೇಲೆ ಅಪ್ಪಳಿಸುತ್ತಾ ಬಂದಿರುವವು. ಅದರಿಂದ ಆ ಬಂಡೆಯು ಒಡೆದು ಅದರೊಳಗೆ ದೊಡ್ಡ ದೊಡ್ಡ ಗುಹೆಗಳುಂಟಾಗಿವೆ. ಈ ಮೊರಡೆಯ ಕೆಳಗಿನ ನೆಲದೊಳಗೆ ಗಂಧಕ ಮತ್ತು ಸುಂಬಳಕಾರ ಕೂಡಿದಂಥ ಕಬ್ಬಿಣ ಹಾಗೂ ಘಟಕಗಳ ಕಣಿಗಳುಂಟು. ಅವುಗಳಿಗೆ ಸಮುದ್ರದ ನೀರು ತೆರೆಗಳ ಯೋಗದಿಂದ ಗುಹೆಯ ಮಾರ್ಗವಾಗಿ ತಲಪಿದ ಕೂಡಲೆ ಜ್ವಾಲೆಯು ಉತ್ಪನ್ನವಾಗಿ ಇಡೀ ಮೊರಡೆಯೇ ಉರಿಯುಹತ್ತಿತು. ಈ ಅಗ್ನಿಯು ಎಷ್ಟೋ ವರ್ಷಗಳವರೆಗೆ ಜ್ವಾಲಾಮುಖಿಯಂತೆ ಗವಿಯದ್ವಾರದಿಂದ ಉರಿಯನ್ನುಗುಳುತ್ತ ಪ್ರಜ್ವಲಿಸಿತು. ಈ ಉರಿಯು ನುಂದಿದ ಬಳಿಕ ಸುತ್ತು ಕಡೆಯಲ್ಲಿ ಬಿದ್ದಂಥ ಖನಿಜ ಪದಾರ್ಥಗಳ ರಸವನ್ನೂ ಸುಟ್ಟ ಮಣ್ಣಿನ್ನೂ ನೋಡಲು, ಮನಸ್ಸಿಗೆ ಬಹು ಆಶ್ಚರ್ಯವೆನಿಸಿತು ಇದರಂತೆ ಉತ್ತರ ಧ್ರುವದ ನೆರೆಯ ಪ್ರದೇಶದಲ್ಲಿ ಎಂಂಂ ಫೂಟು ಎತ್ತರವುಳ್ಳ ಮೊರಡೆಯು ಸುಡುವದು ದೃಷ್ಟಿಗೆ ಬಿತ್ತು ಇದರಲ್ಲಿಯಾದರೂ ಮೇಲೆ ವಿವರಿಸಿದಂತೆ ಕಡಲ ತೆರೆಗಳ ಹೊಡತದಿಂದಾದ ಗವಿಗಳ ಮಾರ್ಗವಾಗಿ ಹೊಕ್ಕ ಸಮುದ್ರದ ನೀರು ತಳದಲ್ಲಿರುವ

ಕಲ್ಲಿದ್ದಲಿ, ಗಂಧಕ ಮುಂತಾದ ಜ್ವಾಲಾಗ್ರಾಹಿ ಪದಾರ್ಥಗಳ ಕಣಿಯಲ್ಲಿ ಶೇರಿದ್ದರಿಂದ ಆ ಪೊರಡೆಗೆ ಬೆಂಕಿ ಹತ್ತಿರಬಹುದೆಂದು ಭೂಗರ್ಭ ಶಾಸ್ತ್ರಜ್ಞರು ತರ್ಕಿಸುತ್ತಾರೆ. ಈ ಉರಿಯು ಸುತ್ತಲು ಸುಮಾರು ೭೦ ಮೈಲುಗಳವರೆಗೆ ಕಾಣಿಸುತ್ತಿತ್ತು.

ಅಮೇರಿಕೆಯೊಳಗಿನ ಒಬ್ಬ ಡಬ್ಲ್ಯೂ. ಓ, ಅಟ್‌ವಾಟರ ಎಂಬ ಗುರುವರ್ಯನು ನ್ಯೂಯಾರ್ಕ ಪಟ್ಟಣದಲ್ಲಿ ೨೫ ಸೆಂಟುಗಳಿಗೆ ಬರುವ ಬೇರೆ ಬೇರೆ ತರದ ಆಹಾರ ಪದಾರ್ಥಗಳಲ್ಲಿ ಪ್ರೊಟಿನ ಎಂಬ ರಸಾಯನ ದ್ರವ್ಯವೂ ಅದರಿಂದ ಮನುಷ್ಯನ ಶರೀರದಲ್ಲಿ ಉಂಟಾಗುವ ಶಕ್ತಿಯೂ ಎಷ್ಟೆಷ್ಟೆಂಬದನ್ನು ಶೋಧಿಸಿ, ಪ್ರಸಿದ್ಧ ಪಡಿಸಿದ್ದಾನೆ. ಹಲನಚಲನಗಳಿಂದ ಉಂಟಾಗುವ ಶರೀರದ ಸವಕಳಿದನ್ನು ಪೂರೈಸುವದಕ್ಕಾಗಿ ನಾವು ಆಹಾರ ತಕ್ಕೊಳ್ಳಬೇಕಾಗುತ್ತದೆ. ಆದ್ದರಿಂದ ನಾವು ತಿನ್ನುವ ಆಹಾರದೊಳಗೆ ಪೋಷಕ ಸತ್ವವು ಎಷ್ಟಿರುವದೆಂಬದನ್ನು ಅರಿತುಕೊಳ್ಳುವದು ಅವಶ್ಯವು. ಅದಕ್ಕಾಗಿ ಈ ಅಮೇರಿಕನ್ ಪಂಡಿತನು ಗೂತ್ತು ಹಚ್ಚಿದ ಅನ್ನದೊಳಗಿನ ಪೋಷಕ ಸತ್ವದ ಪಟ್ಟಿಯನ್ನು ಕೆಳಗೆ ಕೊಟ್ಟಿದ್ದೇವೆ.

ಆಹಾರದ ಒಡನೆಗಳು.	ಸತ್ವಾಂಶ. ಗ್ರಾಮ (ಅಳತೆ)	ಶಕ್ತಿ. ಕಲೋರಿ (ಮೂವ)
ಹಾಲು ೩ ಸೆಂಟ (ದರ ಕ್ವಾರ್ಟಿಗೆ ೬೫ ಸೆಂಟು).	೧೦೯	೨೧೨೯
ಮೊಸರು ೧೫ ಸೆಂಟ.	೨೧೩	೩೪೨೦
ಸಿಂಪಿನೊಳಗಿನ ಹುಳ ೨೦ ಸೆಂಟ (೧ ಕ್ವಾರ್ಟಿಗೆ ೪೦ ಸೆಂಟು).	೩೬	೩೨೫
ಜೆಣ್ಣೆ ೩೦ ಸೆಂಟ.	೦	೩೦೮೦
ಸಕ್ಕರೆ ೫ ಸೆಂಟ.	೦	೯೦೫೫
ಕಣಕ ೩. ಸೆಂಟ	೪.೫೮	೧೩.೬೮೦
ಗೋದಿಯ ತೊಟ್ಟಿ ೬೬ ಸೆಂಟ.	೧೩೬	೪೨೫೫೫
ಗೋವಿನ ಜೋಳದ ಹಿಟ್ಟು ೨ ಸೆಂಟ.	೫.೧೮	೨೦೨೩೦

ಬಟಾಟೆ (ಆಲೂಗಡ್ಡೆ) ೧೬ ಸೆಂಟ (೧ ಬುಶೆಲಿಗೆ ೭೫ ಸೆಂಟ).	೧೬೩	೩೬೯೦
ಕೊಳೆತತ್ತಿ ೧೮೬ ಸೆಂಟ (ಡಜನಿಗೆ ೨೫ ಸೆಂಟ).	೨೩	೯೧೦
ಹಣ್ಣಿನೊಳಗಿನ ತಳಲಿನ ಹಿಟ್ಟು ೫ ಸೆಂಟು.	೩೪೫	೯೧೯೦
ಉಪ್ಪಿನ ಮಾನ ೩ ಸೆಂಟು.	೨೫೯	೧೧೦೫
ನಾಲ್ಮನ ಮಾನ ೩೦ ಸೆಂಟು.	೫೪	೫೩೦
ಕೊಳೆ ೨೨ ಸೆಂಟು.	೧೨೩	೬೯೫
ಉಪ್ಪು ಹಚ್ಚಿದ ಹಂದೀ ಮಾಂಸ ೧೨ ಸೆಂಟು.	೯	೩೨೯೫
ಕುರಿ ಮಾಂಸ (ಕಣಕಾಲು) ೧೨ ಸೆಂಟು.	೩೩	೧೦೩೫
ಗೋಮಾಂಸ (ಕುತ್ತಿಗಿ ಹತ್ತ್ಯರದ್ದು) ೮ ಸೆಂಟು.	೨೧೮	೨೩೯೫
ಗೋಮಾಂಸ (ನಡ) ೨೦ ಸೆಂಟು.	೬೩	೧೧೧೪
ಅಮೇರಿಕೆಯ ಕೂಲೀ ಆಳಿನ ದಿನದ ಅನ್ನದ ಮಾನ.	೧೨೫	೩೫೪೦

ಕಳೆದ ತಿಂಗಳ ೧೪ನೇ ತಾರೀಖಿನ ದಿವಸ ಗುಂಜೀಕರ ರಾಮಚಂದ್ರರಾಯರು ಪಕ್ಷಘಾತದಿಂದ ಸ್ವರ್ಗಾಮವನ್ನು ಸೇರಿದರೆಂದು ತಿಳಿಸಲಿಕ್ಕೆ ನಮಗೆ ಕಡು ವಿಷಾದವಾಗುತ್ತದೆ. ಇವರು ಬೆಳಗಾವಿಯ ನೆರೆಯಲ್ಲಿರುವ ಜಾಂಬೋಟಿ ಎಂಬ ಗ್ರಾಮದವರು. ಆರಂಭದಲ್ಲಿ ಸ್ವಗ್ರಾಮದಲ್ಲಿ ಕಲಿತು, ಮುಂದೆ ಬೆಳಗಾವಿಗೆ ಬಂದರು. ಅಲ್ಲಿ ಇಂಗ್ಲಿಷ ಭಾಷೆಯನ್ನು ಅಭ್ಯಾಸಿಸಿ, ಮುಲಖೀ ಪರೀಕ್ಷೆಯಲ್ಲಿ ಪಾಸಾದರು. ತರುವಾಯ ಹೆಚ್ಚಿನ ಅಭ್ಯಾಸಕ್ಕಾಗಿ ಮುಂಬಯಿಗೆ ಹೋಗಿ, ಎಲ್ಫಿನ್‌ಸ್ಟನ್ ಹಾಯಸ್ಕೂಲಿನಲ್ಲಿ ಅಧ್ಯಯನ ಮಾಡಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಮರುವರ್ಷ ಅಂದರೆ ಸನ್ ೧೮೬೬ನೇ ಇಸವಿಯಲ್ಲಿ ಅದೇ ಶಾಲೆಯಲ್ಲಿ ಉಪಶಿಕ್ಷಕರಾಗಿ ನೇಮಿಸಲ್ಪಟ್ಟರು. ಮುಂದೆ ವಿರುತ್ತೇರು

ತ್ತ ಹುಬ್ಬಳ್ಳಿಯ ಇಂಗ್ಲಿಷ ಶಾಲೆಯ ಮುಖ್ಯ ಶಿಕ್ಷಕರಾದರು. ಅಲ್ಲಿಂದ ಬೆಳಗಾವೀ ಜಿಲ್ಲೆಯಲ್ಲಿ ಅನಿಷ್ಟಂಟ ಡೆಪೂಟಿ ಕೆಲಸವನ್ನು ಮಾಡಿ, ಕಡೆಯಲ್ಲಿ ೧೮೯೪ನೇ ಇಸವಿಯಲ್ಲಿ ಪೆನಶನ್ನು ತೆಗೆದುಕೊಂಡು ಮುಂಬಯಿಯಲ್ಲಿ ಶೇಷಾಯುಷ್ಯವನ್ನು ಕಳೆಯುತ್ತ ಇದ್ದರು. ಮರಣಕಾಲಕ್ಕೆ ೫೪ ವರುಷದವರಿದ್ದರು.

ಇವರು ಸಂಸ್ಕೃತದಲ್ಲಿ ನಿಪುಣರಿದ್ದರು. ಕೌಮುದೀಮಹೋತ್ಸವ, ಮೋಹನಗಡ, ಭಗವತ್‌ಗೀತೆಯ ಮಹಾರಾಷ್ಟ್ರ ಭಾಷಾಂತರ ಮುಂತಾದ ಎಂಟು ಹತ್ತು ಪುಸ್ತಕಗಳನ್ನು ಬರೆದಿರುವರು. ಪ್ರಸ್ತುತದಲ್ಲಿ ಕಾಣಬರುವ ಗ್ರಂಥಕಾರರಲ್ಲಿ ಇವರು ಮೇಲಾದವರಿದ್ದರೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಇವರು ಸಭ್ಯರೂ, ಶಾಂತರೂ, ವಿದ್ಯಾವ್ಯಾಸಂಗಿಗಳೂ, ಜನಪ್ರಿಯರೂ, ಕರ್ತವ್ಯದಕ್ಷರೂ ಆಗಿದ್ದರು. ಬಾಯಿಂದ ನಿರರ್ಥಕವಾಗಿ ಬಡಬಡಿಸುವಂಥ ಕೈಯಿಂದ ಕೆಲಸ ಮಾಡದಂಥ ಮನುಷ್ಯರು ಇವರಿಗೆ ಸೇರುತ್ತಿದ್ದಿಲ್ಲ. ಒಮ್ಮೆ ಇವರು "ಹಿಂದುಸ್ತಾನದ ಉತ್ಕರ್ಷದ ಉಪಾಯವೆಂಬ" ವಿಷಯದಲ್ಲಿ ಬರೆದ ತಮ್ಮ ನಿಬಂಧದೊಳಗೆ ಪ್ರಕಟಿಸಿದ ಉದ್ಗಾರಗಳು ಬಹು ಮಹತ್ವವುಳ್ಳವುಗಳಾಗಿವೆ. ಅವು–"ನಮ್ಮ ಜನರು ಶುಕ್ರವಾರ ಕಡ್ಲಿಯನ್ನು ತಿಂದರೆ ಸಿರಿ ಬರುವದು, ಶನಿವಾರ ತಿಂದರೆ ಲಕ್ಷ್ಮಿಯು ಮೊಗತಿರುಹುವಳು; ಏಕಮುಖೀ ರುದ್ರಾಕ್ಷಿಯನ್ನಿಟ್ಟುಕೊಂಡವನಲ್ಲಿ ಸಂಪತ್ತಿಯು ಸ್ಥಿರವಾಗಿರುವದು; ಕರೆ ರುಮಾಲ ಸುತ್ತಿದರೆ ಶನಿಯು ಪೀಡಿಸುವದಿಲ್ಲ; ಮುಂತಾದ ಬಣ ಮಾತುಗಳ ಚರ್ಚೆಯಲ್ಲಿಯೇ ತಮ್ಮ ಪೌಂಡಿತ್ಯವನ್ನು ವೆರಿಸುತ್ತ ಹೊತ್ತುಗಳೆಯುವದಕ್ಕಿಂತ ತಮತಮಗೆ ಸೇರುವಂಥ. ನೀಗುವಂಥ ಒಂದೊಂದು ಕೆಲಸವನ್ನು ಅರಿಸಿ, ಕೈಕೊಂಡು ನಡುಕಟ್ಟಿಕೊಂಡು ಅದಕ್ಕೆ ಬೆಂಬತ್ತಿ ಸಾಗಿದರೆ ಸ್ವಲ್ಪ ಕಾಲದೊಳಗೇ ದೇಶವು ಊರ್ಜಿತಾವಸ್ಥೆಯನ್ನು ಪಡೆಯುವದು. ಈ ಬಣ ಬಡಬಡಿಕೆಯಿಂದೇನೂ ಲಾಭವಿಲ್ಲ" ಈ ಅಭಿಪ್ರಾಯದಂತೆ ಅವರು ಕೈಲಾ

ದಷ್ಟು ದೇಶಸೇವೆಯನ್ನು ನೆರವೇರಿಸಿದರೆಂಬದಕ್ಕೆ ಅವರು ಬರೆದ ಗ್ರಂಥಗಳೇ ಸಾಕ್ಷಿಯಾಗಿರುತ್ತವೆ.

ಇವರ ವಾರ್ಧಿಕ್ಯದಲ್ಲಿ ಇವರ ಕೈಗೆ ಬಂದ ಮಗನೊಬ್ಬನು ತೀರಿಕೊಂಡದ್ದರಿಂದ, ಇವರಿಗೆ ಬಹು ದುಃಖವಾಯಿತೆಂಬದು ಸ್ಪಷ್ಟವೇ! ಆದರೆ ಮಾನವ ಪ್ರಾಣಿಯು ವಸ್ತಿಯು ಇಹಲೋಕದಲ್ಲಿ ಶಾಶ್ವತವಾಗಿದ್ದಲ್ಲ. ಎಲ್ಲರೂ ಒಂದಿಲ್ಲೊಂದು ದಿನ ಮಡಿಯುವದಂತೂ ನಿಜವು. ಆದರೆ ನಮ್ಮಾದುರ್ದೈವ ಪೀಡಿತ ಭರತಖಂಡವನ್ನು ಉದ್ಧರಿಸಲಿಕ್ಕೆ ಯುಕ್ತಿಸುವ ಪುರುಷರು ಬಹು ದಿವಸ ಬಾಳಬಾರದೆಂದು ಈಶಸಂಕಲ್ಪವಿದ್ದಂತೆತೋರುತ್ತದೆ. ಉಪಾಯವಿಲ್ಲ. ಈ ಪುರುಷರ ಆತ್ಮಕ್ಕೆ ಜಗನ್ನಿಯಾಮಕನು ಅಖಂಡ ಸೌಖ್ಯವನ್ನು ಕೊಡಲೆಂದು ಪ್ರಾರ್ಥಿಸಿ ಈ ದುಃಖಕಾರಕ ಲೇಖನವನ್ನು ಮುಗಿಸುತ್ತೇವೆ.

CHEMISTRY.

ರಸಾಯನಶಾಸ್ತ್ರ.

(೧೫೫ ನೇ ಪುಟದಿಂದ ಮುಂದೆ ಸಾಗಿದ್ದು.)

(೫) ೭೯ ಪಾಲು ನೈತ್ರೋಜನವೂ ೨೧ ಪಾಲು ಅಂದರೆ ಐದಷ್ಟು ಪಾಲು ಆಕ್ಸಿಜನವೂ ಒಂದಾಗಿ ನೈತ್ರೋಜನ ಪಂಚ ಆಕ್ಸಾಯಿಡ (ನೈತ್ರೋಜನ್ ಪೆಂಟಆಕ್ಸಾಯಿಡ) ಎಂಬ ಐದನೇ ವಿಶ್ರಪದಾರ್ಥವು ಹುಟ್ಟುತ್ತದೆ ಇದಕ್ಕೆ ನೈತ್ರಿಕ್ ಆಸಿಡ ಎಂಬ ಹೆಸರು.

ಇನ್ನು ಸೆ = ೧೪ ಮತ್ತು ಳಿ = ೧೬ ಎಂಬ ಪ್ರಮಾಣವನ್ನು ನಾವು ಈ ಮೊದಲೇ ಸಿದ್ಧ ಮಾಡಿದ್ದೇವೆ. ಆದ್ದರಿಂದ ಮೇಲೆ ಹೇಳಿದ ಸಂಯುಕ್ತ ಪದಾರ್ಥಗಳನ್ನು ಇವರಡು ಚಿಹ್ನಗಳಿಂದ ಬರೆಯಬಹುದು. ಮೊದಲಿನ ಕಲವಿನಲ್ಲಿ ಹೇಳಿದ ಸಂಯುಕ್ತ ಪದಾರ್ಥಗಳಲ್ಲಿ ನೈತ್ರೋಜನವು ೭೯ ಪಾಲು ಇರುವದರಿಂದ ನೈತ್ರೋಜನವನ್ನು ಅದರ ಸಂಯೋಜಕ ಪ್ರಮಾಣದಿಂದ ಅದರ ಇಮ್ಮಡಿಯಷ್ಟು ತಕ್ಕೊಂಡಂತಾಯಿತು. ಅದರಿಂದ ಮೊದಲಿನ ವಿಶ್ರ ಪದಾರ್ಥವನ್ನು

(ನೈ ಂ ಆ) ಎಂಬ ಸಂಕೇತದಿಂದ ಬರೆದು ತೋರಿಸಬಹುದು. ಇದರಂತೆ ಮಿಕ್ಕ ನಾಲ್ಕೂ ಮಿಶ್ರ ಪದಾರ್ಥಗಳನು ಬರೆಯುವ ಬಗೆಯನ್ನು ಕೆಳಗೆ ತೋರಿಸಿದ್ದೇವೆ.

ನೈತ್ರೋಜನ್ ದ್ವಯ ಆಕ್ಸಾಯಿಡ = ನೈ ಂ ಆ ಂ
ನೈತ್ರೋಜನ್ ತ್ರಯ ಆಕ್ಸಾಯಿಡ = ನೈ ಂ ಆ ೩
ನೈತ್ರೋಜನ್ ಚತುರ್ ಆಕ್ಸಾಯಿಡ = ನೈ ಂ ಆ ೪
ನೈತ್ರೋಜನ್ ಪಂಚ ಆಕ್ಸಾಯಿಡ = ನೈ ಂ ಆ ೫

ಇದರಿಂದ ಆಕ್ಸಿಜನವನ್ನು ಎರಡಪ್ಪು, ನಾಲ್ಕಪ್ಪು, ಐದಪ್ಪು ಪ್ರಮಾಣದಿಂದ ನೈತ್ರೋಜನದಲ್ಲಿ ಕೂಡಿಸಿದರೆ ಬೇರೆ ಬೇರೆ ತರದ ಸಂಯುಕ್ತ ಪದಾರ್ಥಗಳು ಉತ್ಪನ್ನವಾಗುತ್ತವೆಂದು ಸ್ಪಷ್ಟವಾಗುತ್ತದೆ. ರಸಾಯನ ಶಾಸ್ತ್ರಜ್ಞರಾದರೂ ಎರಡಪ್ಪು, ಮೂರಪ್ಪು, ನಾಲ್ಕಪ್ಪು ಮುಂತಾದ ಪೂರ್ಣ ಸಂಖ್ಯೆಗಳ ಮಾನದಿಂದಲೇ ಆಕ್ಸಿಜನದ ಸಂಯೋಜಕ ಪ್ರಮಾಣವನ್ನು ಬೆಳಿಸಬೇಕಲ್ಲದೆ, ಒಂದೂಕಾಲು, ಒಂದೂವರೆ, ಎರಡೂವರೆ ಮುಂತಾದ ಅಪೂರ್ಣಾಂಕಗಳ ಮಾನದಿಂದ ಬೆಳಿಸಿದರೆ ಕೆಲವೊಂದು ಮಿಶ್ರ ಪದಾರ್ಥವು ಸಿದ್ಧವಾಗುವದಿಲ್ಲೆಂದು ನಿಶ್ಚಯಿಸಿದ್ದಾರೆ. ಹ್ಯಾಗಂದರೆ ೨೮ ಭಾಗ ನೈತ್ರೋಜನದಲ್ಲಿ ೨೦ ಭಾಗ ಆಕ್ಸಿಜನವನ್ನು ಬೆರೆಸಿದರೆ ೪೮ ಭಾಗ ತೂಕವುಳ್ಳ ಹೊಸ ಮಿಶ್ರ ಪದಾರ್ಥವು ಸಿದ್ಧವಾಗದೆ ಸಂಯೋಜಕ ಪ್ರಮಾಣಕ್ಕಿಂತ ಹೆಚ್ಚಾದ ನಾಲ್ಕು ಭಾಗ ಆಕ್ಸಿಜನವು ಬೇರೆಯಾಗಿ ನಿಲ್ಲುತ್ತದೆ. ಈ ಸಂಗತಿಯಿಂದ ರಸಾಯನ ಸಂಬಂಧದಿಂದ ಎರಡು ಗೌರವದ ನಿಯಮಗಳು ಪ್ರಕಟವಾಗುತ್ತವೆ.

೧. ಮೂಲತತ್ವಗಳು ಒಂದು ನಿಯಮಿತ ಮಾನದಿಂದ ತಮ್ಮ ತಮ್ಮೊಳಗೆ ಮಿಶ್ರವಾಗುತ್ತವೆ. ಈ ನಿಯಮಿತ ಪ್ರಮಾಣಕ್ಕೆ ಸಂಯೋಜಕ ಪ್ರಮಾಣವೆಂಬ ಹೆಸರು ಹ್ಯಾಗಂದರೆ:-ಆಕ್ಸಿಜನದ್ದು ೧೬ ನೈತ್ರೋಜನದ್ದು ೧೪.

೨. ಹಲವು ಮೂಲತತ್ವಗಳು ತಮ್ಮ ತಮ್ಮೊಳಗೆ ತಮ್ಮ ಸಂಯೋಜಕ ಪ್ರಮಾಣದ ೨ ಪ್ಪು, ೩ ರಪ್ಪು, ೪ ಪ್ಪು ಮುಂ

ತಾದ ಪೂರ್ಣ ಪಟ್ಟನಿಂದ ಮಿಶ್ರವಾಗುವವಲ್ಲದೆ ಕಾಲು, ಅರ್ಧ ಮುಂತಾದ ಅಪೂರ್ಣ ಪ್ರಮಾಣದಿಂದ ಮಿಶ್ರವಾಗುವದಿಲ್ಲ. ಘಟಕ ದ್ರವ್ಯಗಳು ಒಂದೇಯಾಗಿದ್ದರೂ ಅವುಗಳ ಭಿನ್ನ ಪ್ರಮಾಣಗಳ ಮಿಶ್ರಣದಿಂದ ಬೇರೆ ಬೇರೆ ತರದ ಸಂಯುಕ್ತ ಪದಾರ್ಥಗಳು ಉಂಟಾಗುತ್ತವೆ.

೬೯. ರಾಸಾಯನಿಕ ಸವಿಾಕರಣವೆಂದರೇನು?

ಮೂಲತತ್ವಗಳು ತಮ್ಮತಮ್ಮೊಳಗೆ ರಸಾಯನ ಸಂಯೋಗದಿಂದ ಕೂಡುತ್ತಿರುವಾಗ ಬಗೆಬಗೆಯಾದ ಅದಲುಬದಲುಗಳಾಗುತ್ತವೆಂದು ಮೇಲೆ ಹೇಳಿದ್ದೇವೆ. ಆದರೆ ಅವೆಲ್ಲ ಅದಲು ಬದಲುಗಳನ್ನು ರಾಸಾಯನಿಕ ಚಿಹ್ನೆಗಳಿಂದ ಬರೆದು ತೋರಿಸಬಹುದು. ಎಲ್ಲ ಸಂಯೋಗಗಳು ನಿಯಮಿತ ರೀತಿಯಿಂದ ಸಾಗುತ್ತಿರುತ್ತವೆ. ಮತ್ತು ಪ್ರತಿ ಒಂದು ಸಂಯೋಗಸಮಯದಲ್ಲಿ ಏನೇನಾಗುತ್ತದೆ? ಯಾವ ಪದಾರ್ಥವು ಎಷ್ಟು ಉತ್ಪನ್ನವಾಗುತ್ತದೆ? ಮುಂತಾದ ಸಂಗತಿಗಳು ಸ್ಪಷ್ಟವಾಗಿ ಕಾಣುಬರುತ್ತವೆ. ಹ್ಯಾಗೆಂದರೆ ಹಿಂದೆ ೫೪ನೇ ಪ್ರಯೋಗದಲ್ಲಿ ಹೇಳಿದಂತೆ ನೈತ್ರಿಕ ಆಸಿಡವನ್ನು ಸಿದ್ಧ ಮಾಡುವದಕ್ಕಾಗಿ ನಾವು ಸೋದುಪ್ಪನ್ನೂ ಗಂಧಕಾಮ್ಲವನ್ನೂ ಮಿಶ್ರ ಮಾಡುತ್ತೇವೆ. ಇವೆರಡರ ರಸಾಯನ ಸಂಯೋಗದಿಂದ ಉಂಟಾದ ನೈತ್ರಿಕ ಆಸಿಡವು ಉಗಿಯು ರೂಪದಿಂದ ಬೇರೆ ಕಡೆಯಲ್ಲಿ ಜಮೆಯಾಗಿ ಬಿ ಕ ಯುಂತ್ರದ ತಳವಲ್ಲಿ ಪೊಟ್ಯಾಸಿಯಂ ಸಲ್ಫೇಟ್ ಎಂಬ ಪದಾರ್ಥವು ಉಳಿಯುತ್ತದೆ. ಈ ಪ್ರಯೋಗದಿಂದ ಏನು ಫಲಿತವಾಯಿತೆಂಬದನ್ನು ನೋಡುವ. ಗಂಧಕಾಮ್ಲ ಸೋದುಪ್ಪುಗಳನ್ನು ವ್ಯರ್ಥವಾಗಿ ಹಾಳ ಮಾಡಬಾರದೆಂದು ಅವುಗಳನ್ನು ಎಷ್ಟೆಷ್ಟು ತೆಗೆದುಕೊಳ್ಳಬೇಕೆಂಬದನ್ನು ತಿಳಕೊಳ್ಳುವದಕ್ಕಾಗಿ ಗುರುತು ಮಾಡತಕ್ಕದ್ದು. ಸೋರುಪ್ಪಿನ ಸಾಂಕೇತಿಕ ಚಿನ್ನವು $ಥಿ, ಸೆ, ಹಾ_4$ ಎಂದು ಆಗುವದು. ಯಾಕಂದರೆ ಸೋರುಪ್ಪಿನಲ್ಲಿ ಈ ಮೂರು ಮೂಲ ಪದಾರ್ಥಗಳುಂಟು. (೧) $ಥಿ = ೩೯$ $ಸೆ = ೧೪$ $ಹಾ_3 = ೧೬ \times ೩ = ೪೮$. ಗಂಧಕಾಮ್ಲದ ಸಾಂಕೇತಿಕ ಚಿಹ್ನವು $ಎ ಸ ಹಾ ೪$ ಎಂಬದೆ. ಯಾಕಂದರೆ ಅದರಲ್ಲಿ ಹೈದ್ರೋಜನ್

ಎರಡು ಪಾಲು ಸ = ೩೦ ಆಕ್ಸಿಜನ ನಾಲ್ಕಪ್ಪು ಆ ೪ = ೧೬ × ೪ = ೬೪ ಇದರಿಂದ ಸೋರುಪ್ಪು ಗಂಧಕಾಮ್ಲಗಳೆಂಬ ಎರಡು ಸಂಯುಕ್ತ ಪದಾರ್ಥಗಳನ್ನು ಮಿಶ್ರ ಮಾಡಿದರೆ ಗಂಧಕಾಮ್ಲದೊಳಗಿನ ಒಂದು ಹೈದ್ರೋಜನವು (ಹೈ) ಹೋಗಿ ಪೊಟ್ಯಾಸಿಯಂ (ಪೊ), ಸೋರುಪ್ಪಿನೊಳಗಿಂದ ಬಂದು ಹೊಸವೆರಡು ಮಿಶ್ರ ಪದಾರ್ಥಗಳು ಉಂಟಾಗುತ್ತವೆ. ಹೈ, ನೈ, ಆ ೩ ಅಂದರೆ ನೈತ್ರಿಕ ಆಶಿಡದ ಹಳದಿಯು ರಸವು ಒತ್ತಟ್ಟಿಗೆ ಜಮೆಯಾಗಿ ಪೊ ಹೈ ಸ ಆ ೪ ಅಂದರೆ ಪೊಟ್ಯಾಸಿಯಂ ಸಲ್ಫೇಟು ಎಂಬ ಬಿಳೀ ಒಣ್ಣಾದ ಜಡವಾದ ಕ್ಷಾರವು ತಳಕ್ಕೆ ಉಳಿಯುತ್ತದೆ. ಈ ಅದಲುಬದಲನ್ನು ರಾಸಾಯನಿಕ ಸಮೀಕರಣದಿಂದ ಕೆಳಗೆ ಹೋರಿಸಿದಂತೆ ಬರೆದಿಡಬಹುದು. ಪೊ ನೈ ಆ ೩ + ಹೈ ೨ ಸ ಆ ೪ = ಪೊ ಹೈ ಸ ಆ ೪ + ನೈ ಹೈ ಆ ೩.

ಇದರಿಂದ ಯಾವ ಪದಾರ್ಥವೂ ತೀರ ಇಲ್ಲದಂತಾಗುವದಿಲ್ಲೆಂದು ಸ್ಪಷ್ಟವಾಗುತ್ತದೆ. ನೈತ್ರಿಕ ಆಶಿಡ್ ಪೊಟ್ಯಾಸಿಯಂ ಸಲ್ಫೇಟ್ ಇವೆರಡು ಹೊಸ ಪದಾರ್ಥಗಳು ಈಗ ನಮಗೆ ಕಾಣುತ್ತವೆ. ಆದರೆ ಇವುಗಳನ್ನು ಸಿದ್ಧ ಮಾಡುವದಕ್ಕಾಗಿ ಸೋರುಪ್ಪು ಗಂಧಕಾಮ್ಲಗಳನ್ನು ನಾವು ಮಿಶ್ರ ಮಾಡಿದ್ದೆವು. ನೋಡಿರಿ! ಮೊದಲು ನಾವು ಮಿಶ್ರ ಮಾಡಿದ ಪದಾರ್ಥಗಳ ತೂಕವೂ ಈ ಉಂಟಾದ ಪದಾರ್ಥಗಳ ತೂಕವೂ ಸರಿಯಾಗಿವೆ. ಈ ತೂಕಗಳನ್ನು ಕೆಳಗೆ ಬರೆದು ತೋರಿಸಿದ್ದೇವೆ.

$$(೩೯ + ೧೪ + ೪೮) + (೨ + ೩೦ + ೬೪) = (೩೯ + ೧ + ೩೦ + ೬೪) + (೧ + ೧೪) = ೧೩೬ + ೬೩ = ೧೯೯;$$

$$೧೦೦ + ೯೮ = ೧೯೯.$$

ಈ ಸಮೀಕರಣದಿಂದ ತಿಳಿಯುವದೇನೆಂದರೆ ೧೦೦ ಭಾಗ ಸೋರುಪ್ಪು ೯೮ ಭಾಗ ಗಂಧಕಾಮ್ಲವೂ ಮಿಶ್ರವಾಗಲು ಆ ಮಿಶ್ರಣದಿಂದ ಇವೆರಡು ಒಡವೆಗಳು ಸ್ವಲ್ಪಾದರೂ ನಾಶ ಹೊಂದದೆ ೬೩ ಭಾಗ ನೈತ್ರಿಕ ಆಸಿಡವೂ ೧೩೬

ಭಾಗ ಸಲ್ಫೇಟ್ ಆಫ್ ಪೋಟ್ಯಾಸಿಯಂ ಒಡವೆಯೂ ಉತ್ಪನ್ನವಾಗುತ್ತದೆ. ಆದ್ದರಿಂದ ಕೆಲವೊಂದು ಪದಾರ್ಥವು ಇಂತಿಷ್ಟು ಭಾರ ಬೇಕೆಂದು ಇಚ್ಛಿಸುವವರಿಗೆ ಘಟಕ ದ್ರವ್ಯಗಳನ್ನು ಇಷ್ಟಿಷ್ಟೇ ಪೌಲು ತಕ್ಕೊಂಡು ಕೂಡಿಸಬೇಕೆಂದು ಸಹಜವಾಗಿ ತಿಳಿಯುತ್ತದೆ. ಹ್ಯಾಗಂದರೆ ೧೦ ಪೌಂಡು ನೈತ್ರಿಕ ಆಸಿಡವು ಬೇಕಾಗಿದೆಂದು ಕಲ್ಪಿಸುವ. ೬೩ ಪೌಂಡು ನೈತ್ರಿಕ ಆಸಿಡವನ್ನು ಸಿದ್ಧ ಮಾಡಲಿಕ್ಕೆ ೧೦೧ ಪೌಂಡು ಸೋರುಪ್ಪು ೯೪ ಪೌಂಡು ಗಂಧಕಾಮ್ಲವೂ ಬೇಕೆಂದು ನಿಮಗೆ ಗೊತ್ತುಂಟು. ಆದರೆ ಇನ್ನು ೧೦ ಪೌಂಡು ನೈತ್ರಿಕ ಆಸಿಡಿಗೆ ಇವೆರಡು ಒಡವೆಗಳು ಎಷ್ಟೆಷ್ಟು ಬೇಕೆಂಬದನ್ನು ಪ್ರಮಾಣಗಣಿತದಿಂದ ಸುಲಭವಾಗಿ ತೆಗೆಯಬಹುದು.

೬೩ : ೧೦ :: ೧೦೧ = ೧೬ · ೦೩ ಸೋರುಪ್ಪು.
೬೩ : ೧೦ :: ೯೪ = ೧೫೧೯ ಗಂಧಕಾಮ್ಲ.

ಈ ಗಣಿತದಿಂದ ಸೋರುಪ್ಪು ಗಂಧಕಾಮ್ಲವೂ ಎಷ್ಟೆಷ್ಟು ಬೇಕೆಂಬದು ಸ್ಪಷ್ಟವಾಗಿ ತಿಳಿಯುತ್ತದೆ.

ಇದೇ ಮೇರೆಗೆ ಬೇಕಾದ ಪದಾರ್ಥಗಳ ಘಟಕಗಳ ಪ್ರಮಾಣವನ್ನು ತೆಗೆಯಬಹುದು.

ಇನ್ನೊಂದು ಉದಾಹರಣೆಯನ್ನು ತೆಗೆದುಕೊಳ್ಳುವ. ೧೫ನೇ ಪ್ರಯೋಗದಲ್ಲಿ ಹೈಡ್ರೋಜನ್ ತೆಗೆಯುವ ರೀತಿಯನ್ನು ವಿವರಿಸಿದ್ದೇವೆ. ಸತುವು, ಗಂಧಕಾಮ್ಲ, ನೀರು ಈ ಮೂರನ್ನು ಕೂಡಿಸಿ ಅದರಿಂದ ಹೈಡ್ರೋಜನವು ಹುಟ್ಟುತ್ತದೆಂದು ಪ್ರಯೋಗದಿಂದ ಸಿದ್ಧ ಮಾಡಿದ್ದೇವೆ. ಈ ಕೃತಿಯನ್ನು ಸಮೀಕರಣದಿಂದ ಕೆಳಗೆ ಬರೆದಂತೆ ತೋರಿಸಬಹುದು.

ಜ + ಹೈ ಂ ಸ ಆ ೪ = ಹೈ ಂ + ಜ ಸ ಆ ೪.

ತೂಕದ ಸಮೀಕರಣವು ಕೆಳಗೆ ಬರೆದಂತೆ.

೬೫ + (ಂ + ೩ಂ + ೬೪) = ಂ + (೬೫ + ೩ಂ + ೬೪)

೬೫ + ೯೪ = ಂ + ೧೬೦.

ಇದರಿಂದ ೬೫ ಪೌಂಡು ಸತುವನ್ನು ೯೪ ಪೌಂಡು ಗಂಧಕಾಮ್ಲವನ್ನು ತಕ್ಕೊಂಡು ಕೂಡಿಸಿದರೆ ಂ ಪೌಂಡು ಹೈ

ದ್ರೋಜನವೂ ೧೬೧ ಪೌಂಡ ಝಿಂಕ ಸಲ್ಫೇಟವೂ ಉತ್ಪನ್ನವಾಗುವದೆಂದು ಸ್ಪಷ್ಟವಾಗುತ್ತದೆ. ಇನ್ನು ೪ ಪೌಂಡು ಹೈದ್ರೋಜನವನ್ನು ಸಂಗ್ರಹಿಸಬೇಕಾದರೆ ಸತುವು ಗಂಧಕಾಮ್ಲಗಳನ್ನು ಎಷ್ಟೆಷ್ಟು ತೆಗೆದುಕೊಳ್ಳಬೇಕೆಂಬದನ್ನು ಪ್ರಮಾಣಗಣಿತದಿಂದ ಸುಲಭವಾಗಿ ತೆಗೆಯಬಹುದು.

ಈ ಮೇರೆಗೆ ಪ್ರತಿ ಬಿಂದು ರಸಾಯನ ಸಂಯೋಗವನ್ನು ಚಿಹ್ನೆಗಳಿಂದ ಬರೆದು ತೋರಿಸಬಹುದು. ಮತ್ತು ಈ ಚಿಹ್ನೆಗಳ ಸಹಾಯದಿಂದ ಸಂಯೋಗ ಕಾಲದಲ್ಲಿ ಆಗುವ ಕೃತಿಯ ಬಗೆಯನ್ನೂ ಘಟಿಕದ್ರವ್ಯಗಳ ಪ್ರಮಾಣವನ್ನೂ ಹೊಸದಾಗಿ ಹುಟ್ಟುವ ಪದಾರ್ಥಗಳ ಪ್ರಮಾಣವನ್ನೂ ಸಹಜವಾಗಿ ಅರಿತುಕೊಳ್ಳಬಹುದು. ಹೊಸ ಹೊಸ ರಸಾಯನ ಸಂಯೋಗಗಳನ್ನು ಹುಡುಕ್ಕಿತೆಗೆದು ಅದರೊಳಗಿನ ಕೃತಿಗಳನ್ನು ಉತ್ಸಾಹದಿಂದಲೂ, ನಂಬಿಗೆಯಿಂದಲೂ ಹೇಳತಕ್ಕ ಕೆಲಸವು ರಸಾಯನ ಶಾಸ್ತ್ರಜ್ಞರದು. ನಮ್ಮದಲ್ಲ. ರಸಾಯನ ಶಾಸ್ತ್ರಜ್ಞರಿಗೆ ಪ್ರತಿಬಿಂದು ರಸಾಯನ ಸಂಯೋಗಕ್ಕೆ ಇಂಥಿಂಥ ಪದಾರ್ಥಗಳನ್ನು ಇಷ್ಟಿಷ್ಟು ಭಾಗ ತೆಗೆದುಕೊಳ್ಳಬೇಕೆಂಬ ಸಂಗತಿಯು ಬಹಳ್ಮಂ ಗೊತ್ತಾಹರೆ ಸಾಕು. ಯಾಕಂದರೆ ಯಾವತ್ತೂ ರಸಾಯನಸಂಯೋಗಗಳು ಯಾವಾಗಲೂ ಕೆಲವೊಂದು ನಿಶ್ಚಿತ ಪ್ರಮಾಣದಿಂದಲೇ ಸಂಭವಿಸುತ್ತಿರುತ್ತವೆ.

MANUAL OF METHOD.

ಶಿಕ್ಷಾಕ್ರಮ.

(೧೬೦ನೇ ಪುಟದಿಂದ ಮುಂದೆ ಸಾಗಿದ್ದು.)

೪ನೇ ಅಧ್ಯಾಯ.

ಪಾಠದ ಟಿಪ್ಪಣಿಗಳು.

ಪಾಠವನ್ನು ಯಥಾಕ್ರಮವಾಗಿ ವಿದ್ಯಾರ್ಥಿಗಳಿಗೆ ಹೇಳಬೇಕಾದರೆ ತಕ್ಕ ಶಿಕ್ಷಣವು ಬೇಕು. ಅದಿಲ್ಲದಿದ್ದರೆ ಶಿಕ್ಷಕರು ಗೋಳದಲ್ಲಿ ಬಿದ್ದು ಅವರ ಆಯಾಸಕ್ಕೆ ತಕ್ಕ ಫಲವು

ಸಿಗುವದಿಲ್ಲ. ಈ ಸೋಪಾಟವನ್ನು ಲಕ್ಷಕ್ಕೆ ತಂದು ಅವರಿಗೆ ಯಥಾಶಾಸ್ತ್ರ ಕಲಿಸಲಿಕ್ಕೆ ಅನುಪಾಗುವಂತೆ ಕೆಲವು ಸೂಚನೆಗಳನ್ನು ಬರೆಯಲಿಕ್ಕೆ ಯತ್ನಿಸುವೆವು. ಈ ಸೂಚನೆಗಳನ್ನು ನಾವು ವಿಭಾಗಶಃ ರಚಿಸಿರುವೆವು ಆದ್ದರಿಂದ ಒಂದು ಭಾಗವನ್ನು ಪೂರಾ ಮನನ ಮಾಡಿಕೊಂಡ ಬಳಿಕ ಎರಡನೇ ಭಾಗಕ್ಕೆ ಕೈ ಹಾಕುವದು ವಿಹಿತವು.

ಮೊದಲನೇ ಭಾಗವು---ಪಾಠದ ಟಿಪ್ಪಣಿಗಳನ್ನು ಬರೆಯಲಿಕ್ಕೆ ಯತ್ನಿಸುವ ಪೂರ್ವದಲ್ಲಿ ಕೆಳಗಿನ ಸಂಗತಿಗಳನ್ನು ಕುಲಿತು ಚನ್ನಾಗಿ ಆಲೋಚಿಸಿ ಅವನ್ನು ನಿಷ್ಕರ್ಷವಾಗಿ ಗೊತ್ತು ಮಾಡಿಕೊಳ್ಳಲಿಕ್ಕೆ ಬೇಕು

(೫) ವರ್ಗ—ವಿದ್ಯಾರ್ಥಿಗಳ ಜ್ಞಾನವು ಅವರವರ ವರ್ಗದಂತೆ ಹೆಚ್ಚು ಕಡಿಮೆಯಾಗಿರುತ್ತದೆ. ಬುದ್ಧಿಸಾಮರ್ಥ್ಯವಾದರೂ ವರ್ಗದ ಮಾನದಿಂದ ಹೆಚ್ಚು ಕಡಿಮೆ ಇರುತ್ತದೆ. ಆದಕಾರಣ ಪಾಠವಿವರಣೆಯು ಭಾಷಾಶೈಲಿ, ವಿಷಯಗಳು ಆಯಾ ವರ್ಗಗಳಿಗೆ ತಕ್ಕಂತೆ ಇರಲಿಕ್ಕೆ ಬೇಕೆಂಬ ಮಾತು ಸ್ಪಷ್ಟವು. ತಾನು ಕಲಿಸುವ ವರ್ಗವನ್ನು ಗೊತ್ತು ಮಾಡುವದೇ ಈ ಸಂಬಂಧದ ಶಿಕ್ಷಕನ ಮೊದಲನೇ ಕಾರ್ಯವು. ವರ್ಗವನ್ನು ಗೊತ್ತು ಮಾಡಿ ಅವರಿಗೆ ಗೊತ್ತಿದ್ದ ಸಂಗತಿಗಳನ್ನೂ, ಹೇಳಬೇಕಾದ ಸಂಗತಿಗಳನ್ನೂ, ಬುದ್ಧಿಸಾಮರ್ಥ್ಯವನ್ನೂ ನಿಷ್ಕರ್ಷಿಸಿ ಪಾಠದ ಟಿಪ್ಪಣಿಯನ್ನು ತಯಾರಿಸತಕ್ಕದ್ದು

(೬) ಕಾಲ—ಹೇಳಬೇಕಾದ ಪಾಠದ ಭಾಗವೂ, ಅವನ್ನು ಕಲಿಸುವ ಕ್ರಮವೂ ಪಾಠಕ್ಕೆ ಗೊತ್ತು ಮಾಡಿದ ವೇಳೆಯನ್ನು ಅವಲಂಬಿಸಿರುವದರಿಂದ ಆ ಅವಧಿಯನ್ನು ತಿಳುಕೊಳ್ಳುವದು ಅವಶ್ಯವು. ವಿದ್ಯಾರ್ಥಿಗಳಿಗೆ ತಿಳಿಯದಂಥ ಅನೇಕ ಸಂಗತಿಗಳನ್ನು ಹೇಳಿ ಮುಗಿಯುವದೂ, ಮುಗಿಸುವದೂ ನಿಷ್ಫಲವು. ಅವರಿಗೆ ತಿಳಿಯುವಂಥ ಸ್ವಲ್ಪ ಸಂಗತಿಗಳನ್ನೇ ಹೇಳುತ್ತ ತನ್ನ ಕಾರ್ಯವನ್ನು ಸಾಗಿಸುವದು ಶ್ರೇಯಸ್ಕರವು. ಆದ್ದರಿಂದ ವರ್ಗದ ಯೋಗ್ಯತೆಗನುಸರಿಸಿ ಇಪ್ಪತ್ತು ಮಿನಿಟಿ

ನಿಂದ ನಾಲ್ವತ್ತೈದು ನಿಮಿಟುಗಳವರೆಗೆ ಒಂದು ಪಾಠವನ್ನು ಹೇಳುವದು ಸಮ್ಮತವಾದದ್ದು. ಮನಸ್ಸಿನ ಏಕಾಗ್ರತೆಯು ಸುಖಸಾಧ್ಯವಲ್ಲ. ಅದನ್ನು ಬಹಳ ಎಚ್ಚರದಿಂದ ಬಲಿಸಬೇಕಾಗುತ್ತದೆ. ಚಿಕ್ಕ ಚಿಕ್ಕ ವಿದ್ಯಾರ್ಥಿಗಳಲ್ಲಂತು ಇದು ಅಪರೂಪವಾಗಿರುವದು. ಇದನ್ನು ಎಚ್ಚರದಿಂದ ಬಲಿಸುವದೇ ಶಿಕ್ಷಕನ ಜಾಣತನದ ಕುರುಹಾಗಿರುವದು. ಬೇಸರ ಬರುವಂಥ ಪಾಠದಿಂದ ಪ್ರಯೋಜನವಾಗದೆ ನಷ್ಟವಾಗುವ ಸಂಭವವು ವಿಶೇಷವಾಗಿರುವದರಿಂದ ಈ ಮಾತಿಗೆ ಶಿಕ್ಷಕರು ತಕ್ಕ ಲಕ್ಷ್ಯ ಕೊಡಲಿಕ್ಕೆ ಬೇಕು.

(ಗ) ಉದ್ದೇಶ ಅಥವಾ ಪ್ರಯೋಜನ – ಪಾಠದ ಉದ್ದೇಶವು ವಿಚಾರಣೀಯ ಸಂಗತಿಗಳಲ್ಲಿ ಮೂರನೆಯದು. ಈ ಉದ್ದೇಶವು ಮಾಡಿಕೆಯಾಗಿ ಎರಡು ಪ್ರಕಾರದ್ದಿರುವದು. ೧. ಸಾಮಾನ್ಯ ಉದ್ದೇಶ; ೨. ವಿಶೇಷ ಉದ್ದೇಶ; ಸಾಮಾನ್ಯ ಉದ್ದೇಶವು ಸ್ಪಷ್ಟವಾಗಿರುವದು. ಹ್ಯಾಗಂದರೆ, ವಾಚನ ಪಾಠದಲ್ಲಿ ವಾಚನಾಭ್ಯಾಸವು ಸಾಮಾನ್ಯ ಉದ್ದೇಶವು. ವ್ಯಾಕರಣ ಪಾಠದಲ್ಲಿ ಭಾಷೆಯ ರಚನಾಕಾರ್ಯಗಳ ಜ್ಞಾನವು ಸಾಮಾನ್ಯ ಉದ್ದೇಶವು. ಈ ಸಾಮಾನ್ಯ ಉದ್ದೇಶವನ್ನು ಸ್ವಲ್ಪ ಮರೆ ಮಾಡಬಹುದು. ಆದರೆ ವಿಶೇಷ ಉದ್ದೇಶವನ್ನು ಯಾವ ಕಾರಣದಿಂದಲೂ ಮರೆ ಮಾಡಕೂಡದು. ಪದ್ಯಾಂಶ ಪಾಠದಲ್ಲಿ ಜೀವನ ಕ್ರಮಕ್ಕೂ ಶರೀರ ರಚನೆಗೂ ಇರುವ ನಿಕಟ ಸಂಬಂಧವನ್ನೂ ಧರ್ಮವಿಷಯಕ ಪಾಠದಲ್ಲಿ ವಿವಕ್ಷಿತ ನೀತಿ ತತ್ವವನ್ನೂ ಒಡವೇ ಪಾಠಗಳಲ್ಲಿ ಅನುಲಕ್ಷಿಸಿದ ಸೃಷ್ಟಿ ಧರ್ಮವನ್ನೂ ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ತಿಳಿಸಲಿಕ್ಕೆ ಬೇಕು. ಇದು ತಿಳಿಯದಿದ್ದರೆ ಗುಡ್ಡಕ್ಕೆ ಕಲ್ಲು ಹೊತ್ತಂತೆ ಆಗುವದು. ವಿಶೇಷ ಉದ್ದೇಶವನ್ನು ಲಕ್ಷ್ಯಕ್ಕೆ ತಂದು ಅದನ್ನು ವಿಶ್ವಪ್ರಯತ್ನದಿಂದ ಸಾಧಿಸಲಿಕ್ಕೆ ಬೇಕು. ಕ್ರಮ, ವಿಷಯಗಳನ್ನೆಲ್ಲ ಆ ಧೋರಣದಿಂದ ಗೊತ್ತು ಮಾಡಬೇಕು ಪಾಠದ ಸಂಬಂಧದಿಂದ ಮಾಡಿದ ಯಾವತ್ತು ರಚನೆಗಳ ಸಾಧ್ಯವು ಇದೇ. ಇದನ್ನು ಬಿಟ್ಟು ಮಾಡಿದ ಕೆಲಸವು ವ್ಯರ್ಥವು. ಪಾಠದ ಮಹತ್ವವೂ ಸ್ವರೂಪವೂ ಇದರಿಂದಲೇ ಮು

ದ್ರಿತವಾಗಿರತಕ್ಕದ್ದು. ಆರಂಭದ ಪಾಠದ ಟಿಪ್ಪಣಿಗಳು ಸಾಮಾನ್ಯ ಉದ್ದೇಶಗಳನ್ನು ಸಿದ್ಧಿಗೆ ಒಯ್ಯುವಂಥವು ಇರಬಹುದು. ರೂಢಿಯೊಳಗಿನ ಒಡವೆಗಳು ಸಾಮಾನ್ಯ ವಿಷಯಗಳು, ಇವುಗಳನ್ನು ಕುರಿತು ಆರಂಭದಲ್ಲಿ ಪಾಠದ ಟಿಪ್ಪಣಿಗಳನ್ನು ಬರೆಯಬಹುದು.

(೬) ಉಪಕ್ರಮ- ಪಾಠದ ಉಪಕ್ರಮವು ಅಥವಾ ಪ್ರಸ್ತಾವನೆಯು ಕೂಡಿದಷ್ಟು ಸಣ್ಣದಿರತಕ್ಕದ್ದು. ಅದನ್ನು ಬೆಳಿಸಿ ಅದರಲ್ಲಿ ಹೊತ್ತುಗಳೆಯುವದು ಸರಿಯಲ್ಲ. ಬಹುತರವಾಗಿ ಪಾಠದ ಹೆಸರನ್ನೇ ಹೇಳಿ ಪ್ರಸ್ತಾವನೆಯನ್ನು ಮಾಡದೆ ಒಮ್ಮೆಲೆ ಪಾಠವನ್ನೇ ಹೇಳುವದು ಹಿತಕರವಾಗುವದು. ಒಂದೇ ವಿಷಯವನ್ನು ಕುರಿತು ಅನೇಕ ಪಾಠಗಳನ್ನು ಕೆಲವು ದಿವಸಗಳವರೆಗೆ ಹೇಳುವ ಪ್ರಸಂಗವಿದ್ದಾಗ ಸಿಂಹಾವಲೋಕನರೂಪದಿಂದ ಹಿಂದೆ ಕಲಿಸಿದ್ದಕ್ಕೂ ಮುಂದೆ ಕಲಿಸುವ ಪಾಠಕ್ಕೂ ತಳಕು ಹಾಕಿ, ಲಕ್ಷವನ್ನು ಎಳಕೊಳ್ಳಲಿಕ್ಕೂ ಉತ್ಸಾಹವನ್ನು ಬೆಳಿಸುವದಕ್ಕೂ ಸ್ವಲ್ಪ ಪ್ರಸ್ತಾವನೆಯನ್ನು ಮಾಡುವದು ವಿಹಿತವು. ಆದರೆ ಉದ್ದನ ಉಪಕ್ರಮದಲ್ಲಿ ಹೇಳಿಯನ್ನು ಕಳಿಯುವದರಿಂದ ಲಕ್ಷವನ್ನು ಎಳಕೊಳ್ಳುವದಕ್ಕೆ ಬದಲಾಗಿ ಉತ್ಸಾಹವೂ ಲಕ್ಷವೂ ಕುಂದಿ ಕಾರ್ಯಹಾನಿಯಾಗುವದು.

ಪಾಠವನ್ನು ಚೆನ್ನಾಗಿ ಕಲಿಸಿದರೆ ಲಕ್ಷವೂ ಉತ್ಸಾಹವೂ ತಾನೇ ಬೆಳೆಯುತ್ತವೆ. ಪ್ರಸ್ತಾವನೆ ಸಂಬಂಧದಿಂದ ಮತ್ತೊಂದು ಮಾತನ್ನು ಧ್ಯಾನದಲ್ಲಿಡಲಿಕ್ಕೆ ಬೇಕು. ಅದು ಯಾವದಂದರೆ, ಅದರ ಪ್ರಸ್ತಾವನೆಯ ಸ್ಥಲವು. ಈ ಸ್ಥಲ ಸಂಬಂಧದಿಂದ ವಾಡಿಕೆಯಾಗಿ ಶಿಕ್ಷಕರಿಂದ ಮೂರು ತಪ್ಪುಗಳು ಮಾಡಲ್ಪಡುತ್ತವೆ. (೧) ಕೆಲವರು ವರ್ಗ, ಕಾಲ, ಪ್ರಯೋಜನ, ಉಪಕರಣ ಇವುಗಳಲ್ಲಿಯೇ ಪ್ರಸ್ತಾವನೆಯ ಸಮಾವೇಶವನ್ನು ಮಾಡಿ ಅದಕ್ಕೆ ಪಾಠದ ಟಿಪ್ಪಣಿಗಳ ಪೂರ್ವ ಸ್ಥಲವನ್ನು ಕೊಡುತ್ತಾರೆ. (೨) ಕೆಲವರು ಅದನ್ನು ವಿಷಯದ ಸದರಿನಲ್ಲಿ ಶೇರಿಸುತ್ತಾರೆ. (೩) ಕೆಲವರು ಅದನ್ನು ವಿಷಯ ಕ್ರಮಗಳೆರಡೂ ಸದರಿನಲ್ಲಿ ಸೇರಿಸುತ್ತಾರೆ. ಈ

ಮೂರೂ ಸ್ಥಲಗಳು ದೋಷಾರ್ಹವಾಗಿರುತ್ತವೆ. ಪ್ರಸ್ತಾವನೆಯು ಕ್ರಮದ ಭಾಗವಾಗಿರುತ್ತದೆ. ಆದ್ದರಿಂದ ಅದೇ ಸ್ಥಾನವು ಆದಕ್ಕೆ ತಕ್ಕದ್ದು ಹ್ಯಾಗೆಂದರೆ—

ವಿಷಯ.	ಕ್ರಮ.
ಉಪಕ್ರಮ—ಇಲ್ಲಿ ಈ ಹೆಸರನ್ನಷ್ಟೇ ನಿರ್ದೇಶಾರ್ಥವಾಗಿ ಬಳಕೆಯತಕ್ಕದ್ದು.	ವಿಷಯೋಪಕ್ರಮವನ್ನು ಮಾಡುವ ಸಂಗತಿಗಳು.

ಹೇಳತಕ್ಕ ಪಾಠವು ಪಾಠಪರಂಪರೆಯಲ್ಲಿ ಬಂದಾಗಿದ್ದರೆ ಪ್ರಸ್ತಾವನೆಯನ್ನು ಕೆಲವು ಸಂಗತಿಗಳನ್ನುದ್ದೇಶಿಸಿ ಮಾಡಬೇಕಾಗುತ್ತದೆ. ಅವು ಯಾವವೆಂದರೆ,—

(೫.) ಕಲಿಸಿದ ಪಾಠದ ಮಹತ್ವದ ಸಂಗತಿಗಳನ್ನೂ ಗೌರವದ ನಿಯಮಗಳನ್ನೂ ಪುನಃ ಹೊರಗೆಡವಿ ವಿದ್ಯಾರ್ಥಿಗಳ ಕಣ್ಣುಮುಂದೆ ನಿಲ್ಲಿಸುವದು.

(೬.) ವಿದ್ಯಾರ್ಥಿಗಳ ಉತ್ಸಾಹವನ್ನೂ ಬೆಳಿಸಿ ಅವರ ಮಾನಸಿಕ ಸಾಮರ್ಥ್ಯಗಳನ್ನೂ ಜಾರುಕುಗೊಳಿಸುವದು.

(೫.) ಜ್ಞಾನಾಭಿವೃದ್ಧಿಯ ಹಂಬಲವನ್ನು ಬೆಳಿಸುವದು; ಶಿಕ್ಷಕ ಶಿಕ್ಷಿತರ ತಾದಾತ್ಮ್ಯವನ್ನು ಹುಟ್ಟಿಸುವದು.

(೬.) ಪಾಠದ ವಿಷಯದ ಪ್ರವಾಹದ ಹರಿಯನ್ನು ಕಡಿಯದೆ ಜಾಣತನದಿಂದ ಅದನ್ನು ಮುಂದೆ ಸಾಗಿಸಿ ವಿದ್ಯಾರ್ಥಿಗಳ ಪ್ರೀತಿಯನ್ನೂ ಸಹಾಯವನ್ನೂ ಸಾಧಿಸಿ, ಆ ವಿಷಯವನ್ನು ಅವರ ಸ್ವತ್ತಾಗಿ ಮಾಡಿಕೊಡುವದು

ಪ್ರಸ್ತಾವನೆಯ ಬಗೆಗಳು:—ಕಲಿಸತಕ್ಕ ವಿಷಯಗಳು ಭಿನ್ನ ಭಿನ್ನವಿದ್ದಂತೆ ಪ್ರಸ್ತಾವನೆಯ ಬಗೆಗಳಾದರೂ ಭಿನ್ನ ಭಿನ್ನವಿರುವವು.

(೫.) **ವಾಚನ**:—ಈ ಪಾಠದಲ್ಲಿ ಪ್ರಸ್ತಾವನೆಯ ರೂಪದಿಂದ ಪಾಠದ ಸಾರಾಂಶವನ್ನಾಗಲಿ ಕರ್ತೃವಿನ ಸಂಕ್ಷಿಪ್ತ ವರ್ಣನೆಯನ್ನಾಗಲಿ ಮಾಡಿ ಆ ಪಾಠದ ಸ್ವರೂಪವನ್ನು ವಿದ್ಯಾರ್ಥಿಗಳ ಮುಂದೆ ಇಡಬಹುದು.

(ಚ.) ಲೇಖನ:—ಕಲಿಸಿದಂಥ ಪೂರ್ವ ದಿವಸದ ಪಾಠದಲ್ಲಿ ವಿದ್ಯಾರ್ಥಿಗಳು ಮಾಡಿದ ಸಾಮಾನ್ಯ ತಪ್ಪುಗಳನ್ನು ವಿಂಗಡಿಸಿ, ಅವುಗಳನ್ನು ಕರೇ ಹಲಿಗೆಯ ಮೇಲೆ ಬರೆದು, ಅವುಗಳಲ್ಲಿ ಇದ್ದ ದೋಷಗಳನ್ನು ತೋರಿಸಿ, ಅವುಗಳ ಸೆರೆಯಲ್ಲಿಯೇ ಶುದ್ಧ ರೂಪಗಳನ್ನು ಬರೆದು ಶುದ್ಧ ರೂಪಗಳಿಗೂ ತಪ್ಪುಗಳಿಗೂ ಇರುವ ವ್ಯತ್ಯಾಸವನ್ನು ಪ್ರಸ್ತಾವನೆಯ ರೂಪದಿಂದ ಸ್ಪಷ್ಟವಾಗಿ ಮನಗಾಣಿಸಬಹುದು.

(ಛ.) ಗಣಿತ:—ಕಲಿಸತಕ್ಕಂಥ ಗಣಿತದ ನಿಯಮವನ್ನು ಜೈಲಿಗೆ ಹಾಕುವಂಥ ಬಾಯಿಂದಾಗುವ ಸುಲಭ ಲೆಖ್ಖವನ್ನು ಹೇಳುವದು.

(ಜ.) ವ್ಯಾಕರಣ:—ಕಲಿತ ಪಾಠದ ತತ್ವಗಳನ್ನು ಹೊರಗ ಡಹುವಂಥ ಕಲಿಸತಕ್ಕ ಪಾಠದ ತತ್ವಗಳನ್ನು ಸಮಾವೇಶಿಸು ವಂಥ ಸಂಗತಿಗಳನ್ನು ಕರೇ ಹಲಿಗೆಯ ಮೇಲೆ ಬರೆದು ಅವುಗಳ ಸಹಾಯದಿಂದ ಪಾಠವನ್ನು ಉಪಕ್ರಮಿಸಬಹುದು.

(ಝ.) ಇತಿಹಾಸ:—ಪೂರ್ವದ ಪಾಠದ ಸಂಗತಿಗಳನ್ನು ಮನ ದಟ್ಟಾಗಿ ಮಾಡುವಂಥ ಹೊಸ ಪಾಠಕ್ಕೆ ಅನುಕೂಲಿಸುವಂಥ ಸಂಗತಿಗಳನ್ನು ಪ್ರಸ್ತಾವನೆಯ ರೂಪದಿಂದ ಹೇಳಬಹುದು ಮತ್ತು ಕೇಳಬಹುದು.

(ಞ.) ಭೂಗೋಲ:—ಪಾಠದ ವಿಷಯವು ಇದ್ದಂತೆ ಕೆಲವು ಪ್ರಸಂಗದಲ್ಲಿ ಪ್ರಸ್ತಾವನೆಯ ರೂಪದಿಂದ ಒಡವೆಗಳನ್ನು ತೋರಿಸಬಹುದು; ಕೆಲವು ಪ್ರಸಂಗಗಳಲ್ಲಿ ನಕ್ಷಾ, ಚಿತ್ರ ಗಳನ್ನು ತೋರಿಸಬಹುದು; ಕೆಲವು ಪ್ರಸಂಗಗಳಲ್ಲಿ ಮಾದ ರಿಗಳನ್ನು ತೋರಿಸಬಹುದು; ಕೆಲವು ಪ್ರಸಂಗಗಳಲ್ಲಿ ಬರೇ ಪ್ರಶ್ನಗಳನ್ನೂ ಮಾಡಬಹುದು.

(ಟ.) ಒಡವೇ ಪಾಠಗಳು:— ವಿವಕ್ಷಿತ ಒಡವೆಯನ್ನೂ ಇ ಲ್ಲವೆ ಅದರ ಚಿತ್ರವನ್ನೂ ತೋರಿಸಿ ಅದರ ಸಂಬಂಧದ ಕೆಲ ವು ಗೊತ್ತಿದ್ದ ಪ್ರಶ್ನಗಳನ್ನೂ ಮಾಡಿ ಪಾಠವನ್ನಾರಂಭಿಸಬ ಹುದು.

೨ನೇ ಭಾಗ:—ಸಾಮಾನ್ಯ ಒಡವೆಯ ಸಂಬಂಧದಿಂದ

ಬಲ್ಲವರು ತಯಾರಿಸಿದ ಟಿಪ್ಪಣಿಗಳನ್ನು ಹೊಸ ಶಿಕ್ಷಕರ ಕೈಯಲ್ಲಿ ಕೊಟ್ಟು ಅವುಗಳ ಪರಿಶೀಲನವನ್ನು ಮಾಡಲಿಕ್ಕೆ ಅವರಿಗೆ ಹೇಳಬೇಕು. ಈ ಪುಸ್ತಕದಲ್ಲಿ ಒಡವೇ ಪಾಠಗಳ ಅಧ್ಯಾಯದೊಳಗೆ ಸ್ಪಂಜವನ್ನು ಕುರಿತು ಪಾಠದ ಟಿಪ್ಪಣಿಗಳನ್ನು ಬರೆಯುವೆವು. ಅವುಗಳ ಪರಿಶೀಲನವನ್ನಾದರೂ ಮಾಡಬಹುದು. ಈ ಟಿಪ್ಪಣಿಗಳ ಭೇದಕ ಲಕ್ಷಣಗಳನ್ನು ತಿಳಿಸಿ ಅವುಗಳನ್ನು ಪೂರಾ ಲಕ್ಷದಲ್ಲಿಡಲಿಕ್ಕೆ ಅವರಿಗೆ ಹೇಳಬೇಕು ವಿಷಯದ ಸದರಿನಲ್ಲಿ ಟಿಪ್ಪಣಿಗಳು ಬರೆದಿರುತ್ತವೆ ವರ್ಣನೆಗಳು ಬರೆದಿರುವದಿಲ್ಲೆಂಬ ಮಾತನ್ನೂ, ಶಿಕ್ಷಣದಲ್ಲಿ ಗೊತ್ತಿದ್ದದ್ದರಿಂದ ಗೊತ್ತಿಲ್ಲದ್ದಕ್ಕೆ ಸಾಗಬೇಕೆಂಬ ಮಹತ್ತ್ವವನ್ನೂ ಅವರ ನಿದರ್ಶನಕ್ಕೆ ತಂದು ಕೊಡಬೇಕು. ಕ್ರಮದ ಸದರಿನಲ್ಲಿ ವಿದ್ಯಾರ್ಥಿಗಳಿಗೆ ವಿಷಯವನ್ನು ಸುಬೋಧವಾಗಿ ಹೇಳಿಕೊಡಲಿಕ್ಕೆ ಪ್ರಯೋಜನಕರವಾದ ನಿರೀಕ್ಷಣ, ಪರೀಕ್ಷಣ, ದೃಷ್ಟಾಂತ, ವರ್ಣನೆ, ಅನುಯೋಗ (ಪ್ರಶ್ನಪದ್ಧತಿ) ಮುಂತಾದ ಸಹಾಯ ಸಾಧನಗಳ ಸಮಾವೇಶವಾಗಿರುತ್ತದೆಂಬುದನ್ನು ತಿಳಿಸಿ ಕೊಡಬೇಕು.

ಸ್ಪಂಜದ ಪಾಠವು ಸುಲಭವಾಗಿರುವದಲ್ಲದೆ ಮಾದರಿಯ ರೂಪದಿಂದ ಕೊಡಲ್ಪಟ್ಟಿರುತ್ತದೆ. ಎಲ್ಲ ಹೊಸ ಶಿಕ್ಷಕರಿಗೆ ಇದರಿಂದ ತಕ್ಕ ಪ್ರಯೋಜನವಾಗುವದು. ಮೇಲೆ ವಿವರಿಸಿದ ಪಾಠದ ಸಾಧನಗಳು ಅದರಲ್ಲಿ ಸ್ಪಷ್ಟವಾಗಿ ತೋರಿಸಲ್ಪಟ್ಟಿರುತ್ತವೆ. ಅದನ್ನು ಪೂರ್ಣವಾಗಿ ಮನನ ಮಾಡಿಕೊಳ್ಳುವದು ವಿಹಿತವು.

ಈ ನಿರೀಕ್ಷಣ, ಅನುಯೋಗಾದಿ ಸಾಧನಗಳನ್ನು ವರ್ಗ ಶಿಕ್ಷಣದ ಅಧ್ಯಾಯದಲ್ಲಿ ವಿಶೇಷವಾಗಿ ವರ್ಣಿಸಿರುತ್ತೇವೆ. ಇವುಗಳನ್ನು ಚನ್ನಾಗಿ ತಿಳುಕೊಳ್ಳಲಾಗಿ ವಿದ್ಯಾರ್ಥಿಗಳಿಗೆ ಅನುಭವ ತಂದುಕೊಟ್ಟು ಅಂದರೆ ನಿರೀಕ್ಷಣ, ಪರೀಕ್ಷಣ, ದೃಷ್ಟಾಂತಗಳ ಸಹಾಯದಿಂದ ವಿಷಯವನ್ನು ಸರಿಯಾಗಿ ತಿಳಿಸಿ ಕಲಿಸುವದೇ ಮೇಲಾದ ಮಾರ್ಗವೆಂತಲೂ, ವಿದ್ಯಾರ್ಥಿಗಳಿಗೆ ಅದಷ್ಟು ಕಡಿಮೆ ಸಹಾಯ ಮಾಡಿ ಅವರಿಂದಲೇ ಹೊ

ಸ ಸಂಗತಿಗಳನ್ನು ಹೊರಡಿಸುವದೂ ಕೆಲವು ಮುಂದಿಟ್ಟ ಉ ದಾಹರಣೆಗಳಿಂದ ಸಾಮಾನ್ಯ ತತ್ವವನ್ನು ಹೊರಡಿಸುವದೂ ಶಿಕ್ಷಣದ ಮೇಲಾದ ಪದ್ಧತಿಯೆಂದು ಅವರು ತಿಳಿಸಿಕೊಡಬಹುದು.

DEPARTMENTAL NOTICE.

ನೋಟೀಸು.

P. S. C. EXAMINATION.

ಮುಲಖೀ ಪರೀಕ್ಷೆಯು.

ಈ ನೋಟೀಸಿನಿಂದ ಪ್ರಸಿದ್ಧಿಸಲ್ಪಡುವದೇನೆಂದರೆ, ಸರ್ ೧೮೮೫ನೇ ಇಸವಿಯ ಜಾನ್ಯುವರಿ ೧೫ನೇ ತಾರೀಖಿಗೆ ಮತ್ತು ಸರ್ ೧೮೮೬ನೇ ಇಸವಿಯ ಜುಲೈ ೧೪ನೇ ತಾರೀಖಿಗೆ ಥಾಪಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝಿಟಿನ ೧ನೇ ಭಾಗದಲ್ಲಿ ಪ್ರಸಿದ್ಧಿಸಲ್ಪಟ್ಟ ಹೊಸ ನಿಯಮಗಳ ೨ನೇ ಪರಿಶಿಷ್ಟದ ಅ, ಬ ಶೆಡ್ಯೂಲಗಳಿಗೆ ಸರಿಯಾಗಿ ಸರ್ ೧೮೯೦-೧೮೯೨ನೇ ಇಸವಿಯ ಪಬ್ಲಿಕ ಸರ್ವಿಸ ಸರ್ಟಿಫಿಕೇಟು ಪರೀಕ್ಷೆಗಳು ಸಪ್ಟಂಬರ ೯ನೇ ತಾರೀಖು ಸೋಮವಾರ ಮತ್ತು ತದುತ್ತರ ದಿವಸಗಳಲ್ಲಿ ಧಾರವಾಡದಲ್ಲಿ ತೆಗೆದುಕೊಳ್ಳಲ್ಪಡುವವು.

೨. ಮರಾಠಿ ಭಾಷೆಯಲ್ಲಿ ಪರೀಕ್ಷಿಸಿಲಪೇಕ್ಷಿಸುವ ಉಮೇದವಾರರು ಬೆಳಗಾವಿ ಶೆಂಟರಿನಲ್ಲಿ ಆಗುವ ಪರೀಕ್ಷೆಗೆ ಕೂಡ್ರಬಹುದು.

೩. ಪರೀಕ್ಷೆಗೆ ಕೂಡ್ರತಕ್ಕವರು ತಮ್ಮ ಅರ್ಜಿಗಳನ್ನು ತಾರೀಖು ೧ನೇ ಅಗಷ್ಟ ೧೮೯೧ನೇ ಇಸವಿಯ ದಿವಸ ಇಲ್ಲವೇ ತತ್ಪೂರ್ವದಲ್ಲಿ ತಲುಪುವಂತೆ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರಾದ ಧಾರವಾಡ ಕಾಲೇಜದ ಪ್ರಿನ್ಸಿಪಾಲರ ಕಡಿಗೆ ಕಳಿಸಬೇಕು. ಪ್ರತಿ ಒಂದು ಅರ್ಜಿದಲ್ಲಿ ವಿದ್ಯಾರ್ಥಿಯ ಪೂರ್ಣ ಹೆಸರೂ ಅವನು ಯಾವದೊಂದು ಸಾಲೆಯಲ್ಲಿ ಕಲಿಯುತ್ತಿದ್ದರೆ, ಆ ಸಾಲೆಯ ಹೆಸರೂ ಇರತಕ್ಕದ್ದು. ಮತ್ತು

ವಿದ್ಯಾರ್ಥಿಯು ತಾನು ಕೂಡ್ರಲಿಚ್ಛಿಸುವ ಪರೀಕ್ಷೆಯ ತರಗತಿಯನ್ನು (ಗ್ರೇಡು) ಅದರಲ್ಲಿ ತೋರಿಸಬೇಕು.

೪. ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಇರುವ ಜಿಲ್ಲೆಯಲ್ಲಿ ಆಗುವ ಪರೀಕ್ಷೆಗೆ ಕೂಡ್ರಬೇಕು; ಮತ್ತು ತಾನು ಕಳೆದ ಆರು ತಿಂಗಳಿಂದ ಆ ಜಿಲ್ಲೆಯಲ್ಲಿದ್ದನೆಂಬ ಬಗ್ಗೆ ತಾನು ಇರುವ ಊರ ಪಾಟೀಲನದಾಗಲಿ, ಸಾಲೆಯ ಮಾಸ್ತರನದಾಗಲಿ, ಸರಟಿಫಿಕೇಟನ್ನು ಹಾಜರಪಡಿಸಬೇಕು.

೫. ವಿದ್ಯಾರ್ಥಿಗಳ ವಯಸ್ಸು ಪರೀಕ್ಷೆಯ ಫೀ ಪರೀಕ್ಷೆಯ ವಿಷಯ ಮುಂತಾದ ಮಾಹಿತಿಯು ಸನ ೧೮೯೫ನೇ ಇಸವಿಯ ಜಾನ್ಯುವರಿ ೧೭ನೇ ತಾರೀಖಿಗೆ ಮತ್ತು ಸನ ೧೮೯೮ನೇ ಇಸವಿಯ ಜುಲೈ ೧೪ನೇ ತಾರೀಖಿಗೆ ಛಾಪಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ೧ನೇ ಭಾಗದಲ್ಲಿ ಛಾಪಿಸಲ್ಪಟ್ಟಿದೆ

೬. ಈ ವರ್ಷ ಆಗುವ ಪರೀಕ್ಷೆಗಳಿಗಾಗಿ ನೇಮಿಸಿದ ಪುಸ್ತಕಗಳು ಸನ ೧೮೯೯ನೇ ಇಸವಿಯ ನೊವ್ಹೆಂಬರ ೩೦ನೇ ತಾರೀಖಿನ ಮುಂಬೈ ಗವ್ಹರ್ನಮೆಂಟ ಗ್ಯಾಝೀಟಿನ ೧ನೇ ಭಾಗದಲ್ಲಿ ೧೦೪೩ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟವೆ.

ಧಾರವಾಡ
ತಾ॥ ೧೭–೩–೧೯೦೧.

(sd) M C G bb,
ಕಲೆಕ್ಟರ ಧಾರವಾಡ.

ಟೀಪು—ಇದೇ ಮೇರೆಗೆ ವಿಜಾಪುರ, ಬೆಳಗಾವ, ಕಾರವಾರ ಜಿಲ್ಲೆಗಳ ಕಲೆಕ್ಟರರಾದರೂ ನೋಟೀಸುಗಳನ್ನು ಪ್ರಸಿದ್ಧಿಸಿರುವರು ಎಲ್ಲ ಕಡಿಯಲ್ಲಿ ಆಗುವ ಪರೀಕ್ಷೆಗಳ ತಾರೀಖು ಒಂದೆ ಎಂಬದು ಎಲ್ಲರಿಗೂ ಗೊತ್ತೇ ಇರುವದು. ವಿಜಾಪುರ ಜಿಲ್ಲೆಯಲ್ಲಿ ವಾಸಿಸುವರು ಮರಾಠಿಯಲ್ಲಿ ಪರೀಕ್ಷೆ ಕೊಡಲಿಕ್ಕೆ ಅಪೇಕ್ಷಿಸಿದರೆ ಅವರು ಮೆ. ಎಜ್ಯೂಕೇಶನಲ್ ಇ. ದ. ಭಾಗ ಇವರ ಪರವಾನಗಿಯನ್ನು ಪಡಕೊಂಡು ಬೆಳಗಾವಿ ಇಲ್ಲವೆ ಸೊಲ್ಲಾಪುರ ಸೆಂಟರುಗಳಲಾಗುವ ಪರೀಕ್ಷೆಗೆ ಕೂಡ್ರಬಹುದು. (ವ್ಯಾ. ಶಾ. ಪ.)

CORRESPONDENCE.

ಪತ್ರವ್ಯವಹಾರ.

(೧೬೪ನೇ ಪುಟದಿಂದ ಮುಂದೆ ಸಾಗಿದ್ದು.)

ವಜಾಬಾಕಿ.

ಸಜಾತಿಯ ಎರಡು ಸಂಖ್ಯೆಗಳಲ್ಲಿ ದೊಡ್ಡದರಲ್ಲಿ ಸಣ್ಣದನ್ನು ಅಥವಾ ಅದರಷ್ಟು ಸಂಖ್ಯೆಯನ್ನು ಕಳೆದರೆ ಎಷ್ಟು ಉಳಿಯುತ್ತದೆಂಬುದನ್ನು ತೆಗೆಯುವ ರೀತಿಗೂ ಬಂದ ಉತ್ತರಕ್ಕೂ ವಜಾಬಾಕಿ ಅನ್ನುತ್ತಾರೆ.

ರೀತಿ—(೧) ದೊಡ್ಡ ಸಂಖ್ಯೆಯನ್ನು ಮೇಲೆ ಬರೆದು ಅದರ ಕೆಳಗೆ ಕಳೆಯುತಕ್ಕ ಸಂಖ್ಯೆಯನ್ನು ಒಂದೇ ಸ್ಥಾನದ ಅಂಕೆಗಳು ಒಂದರ ಕೆಳಗೊಂದು ಬರುವಂತೆ ಬರೆಯಬೇಕು. ಮತ್ತು (೨) ಬಲಗಡೆಯಿಂದ ಮೇಲಿನ ಅಂಕೆಗಳಲ್ಲಿ ಕೆಳಗಿನ ಅಂಕೆಯನ್ನು ಕಳೆದು ಅದೇ ಸ್ಥಾನದ ಕೆಳಗೆ ಬರೆಯಬೇಕು. (೩) ಒಂದು ಮೇಳೆ ಮೇಲಿನ ಅಂಕೆಯಲ್ಲಿ ಕೆಳಗಿನ ಅಂಕೆಯು ಹೋಗದಿದ್ದರೆ ಮೇಲಿನ ಅಂಕೆಯಲ್ಲಿ ೧೦ ಕೂಡಿಸಿ ಕೆಳಗಿನ ಅಂಕೆಯನ್ನು ಕಳೆದು ಆ ಸ್ಥಾನದ ಕೆಳಗೆ ಬರೆಯಬೇಕು. ಮತ್ತು ಅದರ ಹಿಂದಿನ ಸ್ಥಾನದಲ್ಲಿ ಕೆಳಗಣ ಸಾಲಿನೊಳಗಿನ ಅಂಕೆಯಲ್ಲಿ ೧ ಕೂಡಿಸಿ ಕಳೆಯಬೇಕು. ಈ ಪ್ರಕಾರ ಕಡೆಯವರೆಗೆ ಮಾಡುತ್ತ ಹೋಗಬೇಕು.

ಸಿದ್ಧತೆ:—ಮೊದಲಿನ ಎರಡು ಮಾತುಗಳ ಸಿದ್ಧತೆಯು ಬೇರೀಜವಲ್ಲಿ ಹೇಳಲ್ಪಟ್ಟಿದೆ.

ಕಳಿಸಿಕೊಳ್ಳುವ ಸಂಖ್ಯೆಯ ಯಾವದೊಂದು ಸ್ಥಾನದ ಅಂಕೆಯಲ್ಲಿ ಕಳೆಯುವ ಸಂಖ್ಯೆಯ ಅದೇ ಸ್ಥಾನದ ಅಂಕೆಯು ವಜಾ ಹೋಗದಿದ್ದರೆ ಮೇಲಿನ ಅಂಕೆಯಲ್ಲಿ ಪತ್ತು ಕೂಡಿಸಬೇಕು ಯಾಕಂದರೆ:—

ನಮ್ಮಲ್ಲಿ ಒಂದು ಪಾವಲಿ ಇದ್ದು ಎರಡನೇಯವರಿಗೆ ಒಂದು ಅಣೆ ಕೊಡಬೇಕಾಗಿದೆ. ಈ ಪ್ರಸಂಗದಲ್ಲಿ ನಾವು ನಮ್ಮಲ್ಲಿದ್ದ ಪಾವಲಿಯನ್ನು ಮುರಿಸಿ ಒಂದು ಅಣೆಯನ್ನು ಹ್ಯಾಗೆ ಕೊಡುತ್ತೇವೋ ಆ ಪ್ರಕಾರ ಬಿಡಿಕಾಳುಗಳಲ್ಲಿ ಬಿಡಿಕಾಳು

ವಜಾ ಹೋಗದಿದ್ದರೆ ಆ ಸಂಖ್ಯೆಯೊಳಗಿನ ಒಂದು ಹತ್ತರೆ ಗಂಟನ್ನು ಸಾಲವಾಗಿ ತೆಗೆದುಕೊಂಡು ಅದನ್ನು ಮುರಿಸಿದರೆ ಬಿಡಿಕಾಳು ಹತ್ತು ಬರುತ್ತವೆ. ಅದರಿಂದ ಮೊದಲಿದ್ದ ಬಿಡಿಕಾಳುಗಳಲ್ಲಿ ಈ ೧೦ ಬಿಡಿಕಾಳುಗಳನ್ನು ಕೂಡಿಸಿ ಕಳೆಯ ತಕ್ಕ ಬಿಡಿಕಾಳುಗಳನ್ನು ಕಳೆಯಬೇಕು. ಇನ್ನು ಮೇಲಿನ ಸಂಖ್ಯೆಯಲ್ಲಿ ಇದ್ದ ಹತ್ತರ ಗಂಟುಗಳೊಳಗೆ ೧ ಕಡಿಮೆಯಾಗಿರುತ್ತದೆ. ಅದನ್ನು ಅಲ್ಲಿ ವಜಾ ಕಳಿದು ಕೆಳಗಿನ ಸಂಖ್ಯೆಯಲ್ಲಿದ್ದ ಹತ್ತರ ಗಂಟುಗಳನ್ನು ಕಳೆಯಬೇಕು. ಈ ಪ್ರಕಾರ ಮಾಡುವ ಸಾಂಪ್ರದಾಯವಿಲ್ಲ. ಸಾಲವಾಗಿ ತಂದ ಒಂದು ಹತ್ತರ ಗಂಟನ್ನು ಕಳೆಯುವ ಸಂಖ್ಯೆಯ ಹತ್ತರ ಗಂಟುಗಳಲ್ಲಿ (ಕೈಲೆ) ಎಂದು ಕೂಡಿಸಿ ಕಳೆಯುತ್ತಾರೆ. ಇದು ಕೆಳಗಿನ ಉದಾಹರಣೆಯಿಂದ ಸ್ಪಷ್ಟವಾಗುತ್ತದೆ.

		− ೧	+ ೧೦			+ ೧೦
ಲಳವಿ	ಲ	ಳ	ವಿ	ಲ	ಳ	ವಿ
ಖವಿಲ	ಖ	ವಿ	ಲ	ಖ	ವಿ	ಲ
					+ ೧	
	ಖ	೧	ಳ	ಖ	೧	ಳ

ಈ ಉದಾಹರಣೆಯನ್ನು ಮೊದಲನೇ ಕೋಷ್ಟಕದಲ್ಲಿ ತೋರಿಸಿದಂತೆ ಮಾಡದೆ ಎರಡನೇ ಕೋಷ್ಟಕದಲ್ಲಿ ತೋರಿಸಿದಂತೆ ಮಾಡುತ್ತಾರೆ.

II

ಮಹಾರಾಜ ರಾಜಶ್ರೀ ಕನ್ನಡ ಶಾಲಾಪತ್ರಕದ ಎಡಿಟರವರ ಸೇವಿಗೆ—

ಶಿರಸಾಷ್ಟಾಂಗ ನಮಸ್ಕಾರಗಳು ವಿನಂತಿ ಬಿನ್ನಹವು

ಮಹಾರಾಯರೇ ನಮಗೆ ಬಂದ ಸಂಶಯವನ್ನು ಇದರಡಿ ನಿವೇದಿಸಿರುವೆವು. ಕೃಪಾಕಟಾಕ್ಷದಿಂದ ನಮ್ಮ ವಿಜ್ಞಪಿಯನ್ನಾಲಿಸಿ ಉತ್ತರ ದಯಪಾಲಿಸುವಿರೆಂದು ಬೇಡಿಕೊಳ್ಳುವೆವು.

ಸಂಪ್ರತದಲ್ಲಿ ನಮ್ಮ ಜನರಲ್ಲಿ ಯಾವದಾದರೊಂದು ವಿಷಯವನ್ನೋದಿ ಅಪ್ಪರಿಂದಲೇ ಸಮಾಧಾನ ಹೊಂದದೆ ಆ ವಿಷಯದ ಕಾರ್ಯಕಾರಣಭಾವವನ್ನು ತಿಳುಕೊಳ್ಳುವ ಛವಲವಕಿಯು ಬಹು ಜನರಲ್ಲಿ ಉಂಟಾಗಿರುವದನ್ನು ನಾವು ನಿನಾಲು ನೋಡುತ್ತೇವೆ.

ಅದರಂತೆ ಅಲ್ಪಮತಿಗಳಾದ ನಾವಾದರೂ ಈಗಿನ ಅತ್ಯುತ್ತಮವಾದ ಆರನೆಯ ಪುಸ್ತಕದಲ್ಲಿಯ ಶಾಸ್ತ್ರೀಯ ಪಾಠಗಳನ್ನೂ ಮತ್ತು ಕನ್ನಡ ಶಾಲಾಪತ್ರಿಕೆಯಲ್ಲಿಯ ರಸಾಯನ ಶಾಸ್ತ್ರದ ಪಾಠಗಳನ್ನೂ ಆವಷ್ಟು ಲಕ್ಷಪೂರ್ವಕ ಓದಿ ಅದರಲ್ಲಿಯ ಸುಲಭ ಪ್ರಯೋಗಗಳನ್ನು ಮಾಡಿನೋಡಿ ಸಾಧಿಸಿದ ಮೆಂದರೆ ನಮಗಾಗುವ ಆನಂದವನ್ನು ಹೇಳಲಾಸಲ್ಲ.

ಈ ಪ್ರಕಾರ ನಮ್ಮ ಕ್ರಮವಿರಲು ತಮ್ಮ ಶಾಲಾಪತ್ರಿಕೆಯ ಅಂಕದ ಹಾದಿಯನ್ನೇ ನೋಡುತ್ತಿರುವೆವು. ಮುಂದಿನ ಅಂಕದಲ್ಲಿ ಯಾವ ಸುಸಾಧ್ಯವಾದ ಹೊಸ ಪ್ರಯೋಗವು ನಿರೂಪಿಸಿರುವದೋ ಎಂಬ ಕುತೂಹಲವು ನೆಲೆಗೊಂಡಿರುವದು. ಆ ಮೇರೆಗೆ ತಮ್ಮ ಮೇ ತಿಂಗಳ ೧೯೦೧ ಶಾಲಾಪತ್ರಿಕವು ಬಂದ ಕೂಡಲೇ ಅದರಲ್ಲಿ ರಸಾಯನ ಶಾಸ್ತ್ರದ ವಿಷಯವನ್ನು ತೆಗೆದು ನೋಡಲು ಅದರಲ್ಲಿ ಸಾಬು ಮಾಡುವ ಕೃತಿಯು ಅತಿ ಸುಲಭ ಕಂಡಿತು.

ಯಾಕಂದರೆ ಪೋಟ್ಯಾಸಿಯಂ ಧಾತುವನ್ನು ತೆಗೆದರೆ ಉಳಿದೆಲ್ಲ ಸಾಹಿತ್ಯಗಳು ಸುಲಭಸಾಧ್ಯವೇ ಇರುವವು. ಮತ್ತು ಪೋಟ್ಯಾಸಿಯಂಕ್ಕಾದರೂ ವಿಶೇಷ ಶ್ರಮ ಮತ್ತು ಹಣದ ಕಾರಣವಿಲ್ಲ. ಯಾಕಂದರೆ ಕಟ್ಟಿಗೆಯಬೂದಿಯು ಅನಾಯಾಸವಾಗಿ ಬೇಕಾದಲ್ಲಿ ಬೇಕಾದಾಗ ಬೇಡಿದಷ್ಟು ಸಿಗುತ್ತದೆ. ಎಂದಬಳಿಕ ಈ ಪ್ರಯೋಗವನ್ನು ಮಾಡಿನೋಡಬೇಕೆಂಬ ಚತುರವು ಅತಿಶಯವಾದ ಮೂಲಕ ನಾವು ಕೂಡಲೇ ಸ್ವಚ್ಛವಾದ ಬೂದಿಯನ್ನು ಒಂದು ಪಾಲು ಬೂದಿಗೆ ೧೬ ಪಾಲು ನೀರು ಹಾಕಿ ಕುದಿಸಲಾರಂಭಿಸಿದೆವು. ಅದರಿಂದ ನಮಗೆ ಪೋಟ್ಯಾಸಿಯಂ ಹೊರಡಲಿಲ. ಯಾಕಂದರೆ ಅದರ ಲಕ್ಷ್ಯ

ಣವು ಬೆಳ್ಳಗಿನ ಮಿದುವಾದ ಪದಾರ್ಥವಿದ್ದು ಚೂರಿಯಿಂದ ಕೊಯ್ಯಲಿಕ್ಕೆ ಬರುವಷ್ಟು ಜಿಗುಟಾಗಿರುವದು ಅಂತಾ ಅದೆ. ಆದರೆ ನಾವು ತೆಗೆದ ಪದಾರ್ಥವು ವಿಶೇಷ ಬೆಳ್ಳಗೂ ಇದ್ದಿಲ್ಲ ಮತ್ತು ಅದನ್ನು ಒಡಿಯಲಿಕ್ಕೆ ಚೂರಿಯು ಕಾರಣವೇ ಬೀಳಲಿಲ್ಲ ಕಯ್ಯಿಂದ ಹಿಚಕಿದರೇ ಒಡಿಯುತ್ತದೆ. ಅದರಿಂದ ನಮ್ಮ ಮನಸ್ಸು ಗೊಂದಲದಿಂದೊಗೂಡಿ ಪುನಃ ಪುಸ್ತಕವ ನ್ನೋದತೊಡಗಲು ಫೋಟ್ಯಾಸಿಯುವು ಇದು ನೀರಿಗಿಂತ ಹಗುರಿದ್ದ ಮೂಲಕ ನೀರಿನ ಬುಡದಲ್ಲಿ ಕೂತು ರ್ಯಾವಿಯೀ ಹೊರತು ಇದರಿಂದ ಫೊಟ್ಯಾಶದ ಅಂಶವು ಹೊರಡಲಿಲ್ಲೆಂದು ತಿಳಿದು ಅದನ್ನು ಹ್ಯಾಗೆ ತೆಗೆಯಬೇಕೆಂಬದನ್ನು ತಿಳುಕೊಳ್ಳುವ ಕುತೂಹಲದಿಂದ ತಮ್ಮ್ಯಡೆಗೆ ಬಂದಿರುವೆವು. ಶುದ್ಧ ಫೊಟ್ಯಾಸಿಯುಂ ಹೊರಡಿಸುವ ಕ್ರಮ ಹ್ಯಾಗೆಂಬದನ್ನು ತಾವಾಗಲೀ ಅಥವಾ ನಮ್ಮ ಗುರುಗಳಾದ ಶಾಲಾಧ್ಯಾಪಕರಾಗಲೀ ಸವಿಸ್ತಾರವಾಗಿ ವಿವರಿಸುವಿರೆಂದು ನಂಬಿರುವೆವು. ಬರೇ ಬುಕ್ಕಿನಲ್ಲಿ ಓದಿದ ಸುಲಭ ಕೃತಿಯನ್ನೋದಿ ಇದೆಷ್ಟು ಸಾಧ್ಯವಾದ ಮಾತಾಗಿದೆಂಬದರಿಂದ ನಮಗೇನು ಸವಿಕಾಣುವದಿಲ್ಲ. ಅದಕ್ಕಾ ಮಹನೀಯರೇ ಪತ್ರವಿಸ್ತಾರಕ್ಕೆ ಕ್ಷಮೆ ಇರಲಿ ಇತಿ ನಮಸ್ಕಾರಗಳು.

ತಮ್ಮ ವಿಧೇಯರು,

ಹುನಗುಂದ
ತಾ|| ೬-೬-೧೯೧೧.

ಬಸಪ್ಪಾ ಮಾನಪ್ಪಾ ಪತ್ತಾರ ಇಂಗ್ಲೀಷ ಪ್ರಾಯಮ್ಹ್ಯಾಳ ಸ್ಕೂಲಮಾಸ್ತರ ಹುನಗುಂದ
ಭೀಮಾಜಿ ಕೃಷ್ಣ ಅವಿಾನಗಡ.
ರಂಗೋ ರಾಘವೇಂದ್ರ ಕೂಡಗಲಿ.
ಆರನೆಯ ಇಯತ್ತೆಯ ವಿದ್ಯಾರ್ಥಿಗಳು ಕನ್ನಡ ಶಾಲಾ ಹುನಗುಂದ.

ಲಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುಷ್ಣ ತಿಕೆಯಂ ಸಚ್ಛಿಷ್ಯಕೋತ್ಕರ್ಷಮುಂ।
ಉಯಸುತ್ತಂ ಪ್ರತಿಪಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ಪಯಣಿಂದಿತ್ತವೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುಭೈ।
ದಯೆಯಿಂದೋಷಪತಿದ್ದ ವೇಳ್ಯಾತುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧

ಪುಸ್ತಕ ೩೭]　　ಸಪಟೆಂಬರ ೧೯೧೧.　　[ಸಂಚಿಕೆ ೯.

EDUCATIONAL INTELLIGENCE AND USEFUL NOTES.

ವಿದ್ಯಾಸುಭಾರಣಾಲ ಸಂಬಂಧದ ವೃತ್ತಾಂತಗಳು.

ಬದಬದುತ್ತ್ಹೆ ಮಾನವಪ್ರಜೆಯ ಬುದ್ಧಿಯು ಹೆಚ್ಚು ಹೆಚ್ಚು ವಿಕಾಸ ಹೊಂದುತ್ತ ನಡೆದಿರುತ್ತದೆ. ಅದಕ್ಕನುಸಾರವಾಗಿಯೇ ಹೊಸ ಹೊಸ ಶಾಸ್ತ್ರೀಯ ಸಂಗತಿಗಳು ಪ್ರಕಟವಾಗುತ್ತ ನಡೆದವೆ. ಹೊಸ ವಿಚಾರ ಹೊಸ ಕಲ್ಪನೆಗಳು ಬಳಿಕೆಯಲ್ಲಿ ಬರಹತ್ತಿವೆ. ಅದರಿಂದ ಸುಖದ ಸಾಧನೆಗಳು ದಿನೂ ಹೆಚ್ಚಾಗಹತ್ತಿವೆ. ಆಗಿಯೂ ನಡೆಯುವದಿಂದ ನಾವು ಇನ್ನೀ ಪೃಥ್ವಿಯಲ್ಲಿ ನಿರಾಯಾಸವಾಗಿ ಸಂಚರಿಸಲಕ್ಕಾರಾಗಿರುತ್ತೇವೆ. ವಿದ್ಯುಚ್ಛಕ್ತಿಯು ನಮಾಯದಿಂದ, ಸಪ್ತಸಮುದ್ರದ ಆಚೆಗಿರುವ ಪ್ರದೇಶಗಳಿಗೆ ನಹ ನಿಮಿಷ ಮಾತ್ರದಲ್ಲಿ ವಾರ್ತೆಯನ್ನು ಮುಟ್ಟಿಸಲಿಕ್ಕೆ ಅನುಕೂಲವಾಗಿರುತ್ತದೆ. ಕ್ಷೋಭೆರೋಧಾರ್ಮದ ಯೋಗದಿಂದ ಮಾನವ ಪ್ರಜೆಯು ಜೀವವನ್ನು ಕೆಲವು ಭಯಂಕರ ರೋಗದಿಂದ ಉಳಿಸಿಕೊಳ್ಳಲಿಕ್ಕೆ ಅನುವಾಗಿರುತ್ತದೆ. ಇಷ್ಟೇ ಅಲ್ಲ, ಮನುಷ್ಯನ ಬುದ್ಧಿಶಕ್ತಿಯು ಇದಕ್ಕೂ ಗಹನವಾದ ವಿಚಾರದ ಉಚ್ಚತ್ತಕ್ಕೆ ತಲ್ಪಿ, ಹೊಸ ಹೊಸ ಸೊಬಗುಗಳನ್ನು ನೂಡಹತ್ತಿರುತ್ತದೆ. ಸಂಜೀವನ ನಿಬಿಗ್ರಹ ವೆನ್ನುವಗಳಂಗಳಲ್ಲಿ ಗುಣಧರ್ಮಗಳನ್ನು ಪರೀಕ್ಷಿಸಿ ಇವರಿಂದ ಸಮಾನ ಗುಣಧರ್ಮಗಳಿರುತ್ತವೆಂದು ೬.೪

ಗಡೆಯಲ್ಲಿ ಗೊತ್ತಾಗಿರುತ್ತದೆ. ಈ ಉಭಯ ಕೋಟಿಗಳಲ್ಲಿ ಒಂದು ಬಗೆಯ ವಿಲಕ್ಷಣ ಸಾಮ್ಯವನ್ನು ಶಾಸ್ತ್ರಜ್ಞರು ಮೊನ್ನೆ ಮೊನ್ನೆ ಗೊತ್ತು ಹಚ್ಚಿದ್ದಾರೆ. ಅದು ಯಾವದೆಂದರೆ:—

ಸಚೇತನ ವಸ್ತುಗಳ ಸ್ನಾಯು ಮತ್ತು ಜ್ಞಾನತಂತುಗಳ ಲ್ಲಿ ಕೆಲವೊಂದು ಕ್ರಿಯೆಯಿಂದುಂಟಾಗುವ ವ್ಯಾಪಾರವೈಚಿ ತ್ರ್ಯವು ಕಬ್ಬಿಣ ಮುಂತಾದ ಜಡಪದಾರ್ಥಗಳ ಕಣಗಳಲ್ಲಿ ಯಾದರೂ ಅಂಥ ಕ್ರಿಯೆಯಿಂದಲೇ ಘಟಿಸುತ್ತದೆಂಬದನ್ನು ಪ್ರಯೋಗದಿಂದ ಮನಗಂಡಿದ್ದಾರೆ. ಉದಾಹರಣಾರ್ಥವಾ ಗಿ-ಯಾವದೊಂದು ಪ್ರಾಣಿಗೆ ಚಿವುಟಲು ಅಥವಾ ಬಡಿಯಲು ಆ ಪ್ರಾಣಿಯ ಸ್ನಾಯುಗಳು ಆಕುಂಚಿತವಾಗುತ್ತವೆ. ಮು ತ್ತು ಅವುಗಳಲ್ಲಿ ವಿದ್ಯುತ್‌ಪ್ರವಾಹವು ಹುಟ್ಟುತ್ತದೆ. ಅಥವಾ ದರ್ಶನ ತಂತುಗಳ ಮೇಲೆ ಪ್ರಕಾಶ ಕಿರಣಗಳು ಬಿದ್ದವೆಂದ ರೆ ಆ ತಂತುಗಳಲ್ಲಿ ವಿದ್ಯುತ್ ಪ್ರವಾಹವು ಉತ್ಪನ್ನವಾಗು ತ್ತದೆ. ಇದೇ ಮೇರೆಗೆ ಕಬ್ಬಿಣ ಮುಂತಾದ ಧಾತುಗಳ ತುಂಡುಗಳನ್ನು ಬಡಿಯಲು ಅಥವಾ ಪ್ರಕಾಶದಲ್ಲಿಡಲು ಅದ ರಲ್ಲಿಯೂ ವಿದ್ಯುತ್ತು ಉತ್ಪನ್ನವಾಗುತ್ತದೆ. ಹೆಚ್ಚು ಕಡಿಮೆ ಯಾನದ ಶಕ್ತಿಯಿಂದ ವಿದ್ಯುತ್ತು ಅಥವಾ ಯಾಂತ್ರಿಕ ಪ್ರೇರ ಣೆಯ ಪರಿಣಾಮವು ಸ್ನಾಯು ಹಾಗು ಜ್ಞಾನತಂತುಗಳ ಮೇ ಲೆ ಪರಿಣಮಿಸುವಂತೆ ಧಾತುಗಳ ಮೇಲೆಯೂ ಪರಿಣಮಿಸು ತ್ತದೆ. ಶಕ್ತಿಯು ಕಡಿಮೆಯಾದ ಕೂಡಲೆ ಸ್ನಾಯುಗಳೂ ಜ್ಞಾನತಂತುಗಳೂ ನಿಶ್ಚಲವಾಗುವಂತ ಧಾತುಗಳಾದರೂ ತಿಗುತ್ತವೆ. ಕೆಲವು ವಿಷಪದಾರ್ಥಗಳ ಪರಿಣಾಮವು ಸ್ನಾ ಯುಗಳ ಮೇಲೆ ನಡೆದಂತೆ ಧಾತುಗಳ ಮೇಲೆಯೂ ನಡೆ ಯುತ್ತದೆ. ರಸಕರ್ಪೂರವು ವಿಷವೆಂಬದು ಸರ್ವರಿಗೂ ವಿದಿ ತವಿರುತ್ತದೆ. ಇದನ್ನು ತಿಂದ ಪ್ರಾಣಿಯ ಸ್ನಾಯುಗಳ ವ್ಯಾಪಾರವು ಕ್ರಮದಿಂದ ಕಟ್ಟಾಗುತ್ತ ಹೋಗುವದನ್ನು ಬಹು ಜನರು ನೋಡಿರಬಹುದು. ಅದರಂತೆ ಕಬ್ಬಿಣದ ತಂಬಿಯ ಮೇಲೆ ಈ ವಿಷ ಪದಾರ್ಥದ ಒಂದು ಚಿಮಟಿಗೆ ಯಷ್ಟು ಪುಡಿಯನ್ನು ಹಾಕಲಾಗಿ ಆ ಧಾತುವಿನಲ್ಲಿರುವ ವಿದ್ಯು ತ್ತು ಅಥವಾ ಕೃತಿಮ ಪ್ರೇರಣೆಯಿಂದ ಉತ್ಪನ್ನವಾಗುವ

ಚೇತನಾಂಶವು ನಷ್ಟವಾಗುತ್ತದೆ. ಈ ಮೇರೆಗೆ ಈ ಸಜೀವ ನಿರ್ಜೀವ ಪದಾರ್ಥಗಳಲ್ಲಿರುವ ಸಾಮ್ಯಗಳನ್ನು ಶಾಸ್ತ್ರಜ್ಞರು ಗೊತ್ತು ಹಚ್ಚಿ, ಅಷ್ಟಕ್ಕೆ ಬಿಟ್ಟರೆಂದು ತಿಳಿಯಕೂಡದು. ಒಬ್ಬ ಫನ ಪಂಡಿತನು ಒಂದು ಧಾತುವಿನಿಂದ ಮನುಷ್ಯನ ಕಣ್ಣಿನಂಥ ಕಣ್ಣನ್ನು ರಚಿಸಿರುವನು. ಸ್ವಾಭಾವಿಕ ಕಣ್ಣಿನ ದರ್ಶನ ತಂತುಗಳ ಮೇಲೆ ವಿದ್ಯುತ್ತು ಹಾಗು ಪ್ರಕಾಶ ಕಿರಣಗಳ ಅದ್ಭುತ ಕಾರ್ಯವು ಘಟಿಸುತ್ತಿರುವಂತೆ ಈ ಕೃತ್ರಿಮ ನೇತ್ರದಲ್ಲಿಯೂ ಘಟಿಸುತ್ತಿರುವದನ್ನು ಕಂಡು ಮನವು ದಂಗಾಗುತ್ತದೆ. ಈ ಬಗೆಯ ಶಾಸ್ತ್ರೀಯ ಶೋಧವು ದಿವಸ ದಿವಸಕ್ಕೆ ಮುಂದಡಿಯನ್ನಿಕ್ಕುತ್ತ ಸಾಗುವದನ್ನು ನೋಡಿದರೆ ಇದು ಎಲ್ಲಿಗೆ ಹೋಗಿ ಮುಟ್ಟೀತೆಂಬದನ್ನು ಊಹಿಸಲಿಕ್ಕೆ ನಮಗಂತೂ ಅಸಾಧ್ಯವು. ಯಾವನಾದರೊಬ್ಬ ಭವಿಷ್ಯವಾದಿಯು ಹೇಳಿದರೆ ಮಾತ್ರ ಹೇಳಬಹುದು.

ಕೂದಲುಗಳು ಹೊಳ್ಳಿರುವವೆಂತಲೂ ಅವುಗಳನ್ನು ಕೊಯ್ದರೆ ಹೊಳ್ಳಿನೊಳಗಿಂದ ರಕ್ತವು ಬರುವದೆಂತಲೂ ಆ ರಕ್ತವು ಬಹು ಸೂಕ್ಷ್ಮವಿರುವದರಿಂದ ನಮಗೆ ಕಾಣಿಸುವದಿಲ್ಲವೆಂತಲೂ ಬಹು ಜನರ ನಂಬಿಗೆಯುಂಟು. ಆದರೆ ಈ ನಂಬಿಗೆಯು ಕೇವಲ ತಪ್ಪಾದದ್ದೆಂದು ಹೇಳಬಹುದು. ಕೂದಲುಗಳು ಕೆಲವು ಪದಾರ್ಥದ ಸೂಕ್ಷ್ಮ ಕಣಗಳಿಂದ ಸಿದ್ಧವಾಗಿರುತ್ತವೆ. ಮತ್ತು ಅವು ಪೂರಾ ಕೊಳಿವೆಯಂತೆ ಇರದೆ ಹಲಚಿಯಾಗಿರುತ್ತವೆ. ಹೆಚ್ಚು ಹಲಚಿಯುಳ್ಳ ಕೂದಲುಗಳು ಸುರುಳಿ ಸುತ್ತುತ್ತವೆ. ಆವುಗಳಿಗೇ ನಾವು ಕುರುಳೆಂತಲೂ ಉಂಗರಗೂದಲವೆಂತಲೂ ಅನ್ನುತ್ತೇವೆ. ಕೂದಲುಗಳು ಒಂದು ವರ್ಷದಲ್ಲಿ ವಾಡಿಕೆಯಾಗಿ ಆರೇಳು ಇಂಚು ಬೆಳೆಯುವವು. ಆದರೆ ಮನುಷ್ಯನ ಬೆಳಿಗೆಗೆ ಮರ್ಯಾದೆ ಇದ್ದಂತೆ ಕೂದಲುಗಳ ಬೆಳಿಗೆಗಾದರೂ ಉಂಟು. ಬೆಳವಣಿಗೆಯು ಕಟ್ಟಾದ ಬಳಿಕ ಅವು ತಮಗೆ ತಾವೇ ಉದುರಿ ಬೀಳುತ್ತವೆ. ಕೂದಲನ್ನು ಬೇರು ಸಹಿತ ಕೀಳಿದರೂ ಮತ್ತೆ ಹುಟ್ಟುತ್ತವೆ. ಆದರೆ ಹೊಸ ಕೂದಲು ಮೊದ

ಲಿನ ಕೂದಲಿನಂತೆ ಮಿದುವಿರುವದಿಲ್ಲ. ಯಾಕಂದರೆ ಕೂದಲು ಎಲ್ಲಿಂದ ಉತ್ಪನ್ನವಾಗಿರುವದೋ ಅಂದರೆ ಅದರ ನಿಜವಾದ ಮೂಲವು ಎಲ್ಲಿರುವದೋ ಅಲ್ಲಿಂದ ಕಿತ್ತಲಿಕ್ಕೆ ನಮ್ಮ ಶಕ್ತಿ ಸಾಲದು. ಕೂದಲಿನ ಮೂಲವು ೧/೨ ಇಂಚು ಉದ್ದವಿರುವದು. ಕೂದಲು ಹುಟ್ಟಬಾರದೆಂದು ನಾವು ಚರ್ಮಕ್ಕೆ ಯಾವದೊಂದು ಲೇಪನವನ್ನು ತೊಡೆದರೂ ಅದು ಆ ಬೇರಿನ ವರೆಗೆ ಮುಟ್ಟಲಿಕ್ಕೆ ಬಹು ಪ್ರಯಾಸವಾಗುತ್ತದೆ.

ಹವಳಗಳನ್ನು ಎಲ್ಲರೂ ಬಲ್ಲರು. ಹೆಣ್ಣುಮಕ್ಕಳು ಕೊರಳಲ್ಲಿ ಹಾಕುವ ನರ ಕೈಯಲ್ಲಿಟ್ಟುಕೊಳ್ಳುವ ಬಂದು ತರದ ಬಳಿ (ಹವಳಮಾಲೆ) ವೃದ್ಧರಾದ ಬ್ರಾಹ್ಮಣರು ಕೊರಳಲ್ಲಿ ಹಾಕುವ ತುಳಸೀಮಣಿ ಮುಂತಾದವುಗಳಲ್ಲಿ ಹವಳಗಳನ್ನು ಉಪಯೋಗಿಸುತ್ತಾರೆಂಬದು ಬಹುತರವಾಗಿ ಎಲ್ಲರಿಗೂ ಗೊತ್ತಿರುವದು. ಇವು ಬೆಂಪು ಅಥವಾ ಗುಲಾಬಿ ಬಣ್ಣದವಿರುವವು. ನಮ್ಮ ಪ್ರಾಚೀನ ಕವಿಗಳು ಇದು ಬಂದು ತರದ ಬಳ್ಳಿಯಂತಲೂ (ವಿದ್ರುಮಲತಾ) ಸಮುದ್ರದ ದಂಡೆಯಲ್ಲಿ ಬೆಳೆಯುತ್ತದೆಂತಲೂ, ರಕ್ತವರ್ಣವಾಗಿ ಕಂಗೊಳಿಸುವದೆಂತಲೂ ತಮ್ಮ ಕಾವ್ಯಗಳಲ್ಲಿ ವರ್ಣಿಸಿರುವರು. ಇವುಗಳಲ್ಲಿ ಬಳ್ಳಿಯೆಂಬದೊಂದು ಮಾತ್ರ ಕೇವಲ ವಿನೋದವಾದ ಸಂಗತಿಯು. ಆದರೆ ಇದು ಗಿಡದ ಆಕಾರವನ್ನು ಹೋಲುವದರಿಂದ ಕವಿಯು ವರ್ಣಿಸಿರಬಹುದು. ಇದು ಉದ್ಭಿಜ್ಜವಲ್ಲ. ಪ್ರಾಣಿಜವಿರುತ್ತದೆ. ಸಮುದ್ರದ ತಳದಲ್ಲಿ ಬಂದು ತರದ ಕೀಟಗಳಿರುತ್ತವೆ. ಸಿಂಪಿನ ಹುಳಗಳು ಸಿಂಪನ್ನು ಮಾಡಿಕೊಂಡಂತೆ ಈ ಪ್ರಾಣಿಗಳು ಮುಟ್ಟಿದ ಕೂಡಲೆ ಸ್ವಸಂರಕ್ಷಣಾರ್ಥವಾಗಿ ಬಂದು ತರದ ಹೊದಿಕೆಯನ್ನು ಅಥವಾ ಮನೆಯನ್ನು ಮಾಡಿಕೊಳ್ಳಹತ್ತುತ್ತವೆ. ಈ ಹೊದಿಕೆ ಅಥವಾ ಮನೆಯೇ ಹವಳವೆಂದು ಹೇಳಲ್ಪಡುತ್ತದೆ. ಬಂದು ಹುಳದ ಮೈಯಿಂದ ಮತ್ತೊಂದು ಹುಳವು ಉತ್ಪನ್ನವಾಗುತ್ತದೆ. ಮೊದಲು ಬಂದು ಹುಳವು ಕಟ್ಟಿದ ಮನೆಗೆ ಹೊಂದಿಯೇ ಮತ್ತೊಂದು ಹುಳವು ಹುಟ್ಟಿ ತನ್ನ ಮನೆಯನ್ನು

ಕಟ್ಟಿಕೊಳ್ಳುತ್ತದೆ. ಇದರಿಂದ ಇವು ಬಂದರೊಳಗೊಂದು ಸೇರಿಕೊಂಡು ವೃಕ್ಷಾಕಾರವಾಗಿ ಕಂಗೊಳಿಸುತ್ತವೆ. ಈ ಅಂಟಿಕೊಂಡ ಹವಳದ ಹುಳಗಳ ಬಂಡೆಗಳು ಸುಮಾರು ಇಪ್ಪತ್ತು ಯಾರ್ಡುಗಳಿಂದ ಬಂದು ಮೈಲಿನವರೆಗೆ ಅಗಲವಾಗಿಯೂ, ಎಷ್ಟೋ ಮೈಲು ಉದ್ದವಾಗಿಯೂ ಸಮುದ್ರದೊಳಗೆ ಹಬ್ಬಿಕೊಂಡಿರುತ್ತವೆ. ಕೆಲವು ಕಡೆಯಲ್ಲಿ ಇವು ನೀರ ಮೇಲೆ ಕಾಣಿಸದೆ ಅಡ್ಡಾಡುವ ಹಡಗುಗಳನ್ನು ಒಡೆದು ಮುಳುಗಿಸಲಿಕ್ಕೆ ಕಾರಣವಾದ ಬಂಡೆಗಳಾಗಿರುತ್ತವೆ; ಕೆಲವೆಡೆಯಲ್ಲಿ ನೀರ ಮೇಲೆ ವಿಸ್ತಾರವಾಗಿ ಹಬ್ಬಿಸರಿಸಿದ್ದು ಪ್ರಾಣಿಗಳಿಗೆ ವಾಸಾರ್ಹವಾದ ನಡುಗಡ್ಡೆಗಳಾಗಿರುತ್ತವೆ. ಈ ಬಂಡೆಗಳು ಬಹ್ಮೊಮ್ಮೆ ಕಂಟಿಗಳಂತೆ ಕಂಗೊಳಿಸುತ್ತವೆ ಬಹ್ಮೊಮ್ಮೆ ಬೀಸಣಿಕೆಯ ಆಕಾರವನ್ನು ಧರಿಸುತ್ತವೆ. ಬಹ್ಮೊಮ್ಮೆಯಂತೂ ಮನುಷ್ಯನ ಮಿದುಳಿನ ಆಕೃತಿಯನ್ನು ಹೋಲುತ್ತವೆ. ಉತ್ತಮವಾದ ಹವಳಗಳು ಭೂಮಧ್ಯಸಮುದ್ರದಲ್ಲಿ ದೊರೆಯುತ್ತವೆ. ಈ ಸಮುದ್ರದೊಳಗಿನ ಹವಳದ ಬಂಡೆಗಳು ಎಲೆ ಇಲ್ಲದ (ಬರ್ಲ) ಗಿಡಗಳಂತೆ ಕಂಗೊಳಿಸುತ್ತವೆ. ಫ್ರಾನ್ಸ್ ದೇಶದಲ್ಲಿ ಹವಳಗಳ ಕಂಠಭೂಷಣಗಳನ್ನು ಮಾಡುವ ಪ್ರಚಾರವುಂಟು. ಪೂರ್ವಕಾಲದಲ್ಲಿ ಹವಳವನ್ನು ಔಷಧವೆಂದು ಜನರು ತಿನ್ನುತ್ತಿದ್ದರು; ಭೂತಬಾಧೆಯಾಗಬಾರದೆಂದು ರಟ್ಟಿಗೆ ಕಟ್ಟಿಕೊಳ್ಳುತ್ತಿದ್ದರು. ಹವಳದ ಕಂಠಾಭರಣದಿಂದ ಮಕ್ಕಳಿಗೆ ಬೇನೆ ಬರುವದಿಲ್ಲೆಂದು ತಿಳಿಯುತ್ತಿದ್ದರು. ರೋಮನ್ನರು ದೇವರು ಬಲಿಯಬೇಕೆಂದು ಇದನ್ನು ರಟ್ಟಿಗೆ ಕಟ್ಟಿಕೊಳ್ಳುತ್ತಿದ್ದರು. ಗಾಲರು ಢಾಲಿನ ಮೇಲೆ ಹವಳಗಳನ್ನು ಕೂರ್ಪಿಸಿಕೊಳ್ಳುತ್ತಿದ್ದರು. ನಮ್ಮ ದೇಶದಲ್ಲಿ ಪ್ರವಾಳ ಭಸ್ಮವನ್ನು ನವ್ಯಕ್ಕೆ ಔಷಧದಲ್ಲಿ ಉಪಯೋಗಿಸುವದು ಪ್ರಸಿದ್ಧವು.

೧೮೯೧ನೇ ಇಸವಿಯಲ್ಲಿ ಶಿಮೋರಿಕೆಯೊಳಗಿನ ಸೆಂಯುಕ್ತ ಸಂಸ್ಥಾನದವರು ಪತ್ತಿಯನ್ನು ಬೇರೆ ನಾಡುಗಳಿಗೆ ಮಾರಾಟಕ್ಕಾಗಿ ಕಳಿಸುವದಕ್ಕೆ ಆರಂಭಿಸಿದರು. ಆ ವರ್ಷ ಇವ

ರು ಬರೆ ತೊಂಬತ್ತೊಂದು ಟನ್ನ ಹತ್ತಿಯನ್ನು ಮಾರಿದರು. ಆದರೆ ಈಗ ಬರಬರುತ್ತ ಹೊಸ ಹೊಸ ಶಾಸ್ತ್ರೀಯ ಸಂಗತಿಗಳನ್ನು ಅರಿತುಕೊಂಡು ಒಕ್ಕಲತನದ ಉದ್ಯೋಗದಲ್ಲಿ ಋನವಾದ ಸುಧಾರಣೆಯನ್ನು ಉಂಟು ಮಾಡಿಕೊಂಡದ್ದರಿಂದ ಅವರು ಈಗ ಪ್ರತಿ ವರ್ಷ ಐದು ಲಕ್ಷ ನಾಲ್ವತ್ತು ಸಾವಿರ ಟನ್ನ ಹತ್ತಿಯನ್ನು ಮಾರಹತ್ತಿದ್ದಾರೆ. ಪಾಶ್ಚಿಮಾತ್ಯರ ಸಾಹಸವೂ, ಶಾಸ್ತ್ರೀಯ ಶೋಧವೂ, ದೇಶಾಭಿಮಾನವೂ ಅವರ್ಣನೀಯವಿರುತ್ತವೆ.

ಪಂಪಾಯೂತೆ.

(ಬರೆದು ಬಂದದ್ದು.)

ಹರಿಣೀವೃತ್ತ.

ಸುಜನಸುಖದಂ ಸುಪ್ರಖ್ಯಾತಂ ಸುಧಾಕರ ಶೇಖರಂ ।
ವಿಜಯವಿನುತಂ ವಿಶ್ವಾಧಿಕ್ಯಂ ವಿಭಾವಸುಲೋಚನಂ ॥
ಪ್ರಜೆತವುದನಂ ಪಂಪಾವಾಸಂ ಪರಂ ಪುರಮರ್ದನಂ ।
ನಿಜಸುಕೃಪೆಯಂ ನಿತ್ಯಾನಂದಂ ನಿರಂತರವಿಾಯುಗೆ ॥ ೧ ॥

ಶಿಖರಿಣೀವೃತ್ತ.

ಪರಂ ಪಂಪಾನಾಥಂ ವಿಮಲತರತುಂಗಾಶ್ರಿತಪದಂ ।
ಹರಂ ಗೌರೀನಾಥಂ ಮುರಹರಸಖಂ ಚಂದ್ರಮುಕುಟಂ ॥
ವರಂ ವಿಶ್ವಾಧಾರಂ ಮುನಿವರನತಂ ಕಂದುಗೊರಲಂ ।
ಕರಂ ವಿಶ್ವೇಶಂ ಪೊಲಿಸುಗೆ ವರ ಶಾಲಾ ಗುರುಗಳಂ ॥ ೨ ॥

ಭಾಮಿನೀಷಟ್ಪದಿ.

ಕರಣುಜನವಮಂದಾರ ಪಂಪಾ ।
ಪುರನಿವಾಸ ಸುರೇಶಪೂಜಿತ ।
ವರಪದಾಂಬುಜ ಪಾರ್ವತೀಶನ ನೆನೆದು ಮನ್ಮನದೆ ॥
ಕರುಣದಿಂದೆಮಗೆಲ್ಲರಿಗೆ ವರ ।
ಗುರುಗಳಿಂ ದೊರೆದಿಹ ಪ್ರವಾಸದ ।
ಸರಸಫಲಗಳನೀವೆ ನಿವನಾಸ್ವಾದಿಪುದು ಬುಧರು ॥ ೩ ॥
ನಿಂತ ನೀರಿಗಿಂತ ಹರಿಯುವ ನೀರು ನಿರ್ಮಲವಿರುವಂತೆ

ಬಂದೀ ಸ್ಥಳದಲ್ಲಿರುವವನಿಗಿಂತ ನಾಲ್ಕು ಕಡೆ ತಿರುಗಾಡಿದ ವನು ಹೆಚ್ಚು ಚತುರನಿರುವನೆಂಬದು ಎಲ್ಲರಿಗೂ ಗೊತ್ತಿದ್ದ ಮಾತೇ ಸರಿ. ಅದರಿಂದ ಸರ್ವಸಾಧಾರಣ ತಿಳುವಳಿಕೆಯು ಳ್ಳ ಮನುಷ್ಯನ ಲಕ್ಷ್ಯವು ಪ್ರವಾಸದ ಕಡೆಗೆ ಹೋಗುವದು ಸ್ವಾಭಾವಿಕವೇ. ನಮ್ಮಲ್ಲಿರುವ ಈ ಕುತೂಹಲವು ಕಾಲೇ ಜ ಪ್ರವೇಶವಾದಂದಿನಿಂದ ಬೆಳೆಯಹತ್ತಿತು. ಮತ್ತು ಕಾಲೇ ಜದ ಗುರುಗಳು ನಾತಾಳಿ ಮುಂತಾದ ಸೊಟಯು ವೇಳೆಗಳ ಲ್ಲಿ ವಿದ್ಯಾರ್ಥಿಗಳನ್ನೊಡಗೊಂಡು, ಪ್ರಸಿದ್ಧ ಸ್ಥಳಗಳಿಗೆ ಪ್ರವಾ ಸ ಮಾಡುತ್ತಿದ್ದರೆಂಬದನ್ನೂ, ಗುರುವರ್ಯ್ ಕರಂದೀಕರ ರಾಯರು ಮೈಸೂರು, ಕೊಲ್ಲಾಪುರ ಮುಂತಾದ ಸ್ಥಳಗಳಿಗೆ ಕರಕೊಂಡು ಹೋಗಿದ್ದರೆಂಬದನ್ನೂ ಕೇಳಿದ ಬಳಿಕಂತು ನಮ್ಮ ಕುತೂಹಲವು ಇಮ್ಮಡಿಯಾಯಿತು. ಆದರೆ ಮಾಡ ತಕ್ಕದ್ದೇನು? ದೇಶ ಕಾಲ ಮಾನವು ಪ್ರವಾಸಕ್ಕೆ ತಕ್ಕಂತೆ ಇದ್ದಿಲ್ಲ. ನಮ್ಮಾ ಹಿಂದುಸ್ಥಾನದ ಜನರಿಗೆ ಕಾಲಸ್ವರೂಪಿ ಗಳಾದ ಪ್ಲೇಗು ದುಷ್ಕಾಳಗಳು ಜನರನ್ನು ಬಹಳವಾಗಿ ಪೀಡಿಸಹತ್ತಿದ್ದರಿಂದ, ಕೃಷ್ಣಪಕ್ಷೇಂದುವಿನಂತೆ ಕಳೆಗುಂದು ತ್ತ ನಡೆದಿದ್ದ ನಮ್ಮ ಕುತೂಹಲವು, ಮೊದಲಿನಿಂದಲೇ ತಮ್ಮ ಮನಸ್ಸಿನಲ್ಲಿಯೂ ಇದ್ದ ಇದೇ ತರದ ಭಾವನೆಯ ನ್ನು ಗುರುವರ್ಯ್‌ರು ಪ್ರಕಟ ಮಾಡಿದ್ದರಿಂದ ಮನೋಗತ ವು ಕೊನೆಗಾಣುವ ಸಂಧಿಯು ತೀವ್ರವೇ ಬಂದೀತೆಂದು, ಶುಕ್ಲಪಕ್ಷದ ಚಂದ್ರನಂತೆ ಮತ್ತೆ ವೃದ್ಧಿಂಗತವಾಯಿತು. ಮುಂದೆ ತುಸು ದಿವಸಗಳಲ್ಲಿಯೇ ಪ್ರವಾಸದಿಂದಾಗುವ ಲಾಭ ಗಳನ್ನು ವಿದ್ಯಾರ್ಥಿಗಳ ಅನುಭವಕ್ಕೆ ತಂದು ಕೊಡಬೇಕೆಂಬ ಉದ್ದೇಶದಿಂದ ಹಿತಚಿಂತಕರಾದ ಗುರುವರ್ಯ್‌ರು ಇಂದಿಗೆ ನಾಲ್ಕನೇ ದಿವಸ ಮುಂಜಾನೆ ನಿಮ್ಮನ್ನು ಶ್ರೀ ಪಂಪಾಕ್ಷೇತ್ರ ಕ್ಕೆ ಕರೆದುಕೊಂಡು ಹೋಗುವೆವೆಂದು ಹೇಳಿದ ಕೂಡಲೆ ನಮಗಾದ ಆನಂದವನ್ನು ಬಣ್ಣಿಸಲಳವಲ್ಲ. ಎಲ್ಲರೂ ಹೊ ರಡತಕ್ಕ ತೃತೀಯದಶೀ ದಿನವನ್ನೇ (ತಾ॥ ೦೯।೩।೧೯೦೧) ನಿರೀಕ್ಷಿಸಹತ್ತಿದ್ದೆವು. ಪ್ರಯಾಣದ ಮೊದಲಿನ ದಿನದ ಸಾ ಯಂಕಾಲದಲ್ಲಿಯೇ ಗುರುವರ್ಯ್‌ರ ಅಪ್ಪಣೆಯು ಮೇರೆಗೆ

ನಾವೆಲ್ಲರೂ ಪ್ರವಾಸದ ಸಂಬಂಧದ ಎಲ್ಲ ಸಿದ್ಧತೆಯನ್ನು ಮಾಡಿಕೊಂಡೆವು. ಆ ದಿನದ ರಾತ್ರಿಯಲ್ಲಿ ನಾಳೆ ೪॥ ಘಂಟೆಗೆ ಪ್ರವಾಸಕ್ಕಾಗಿ ಹೊರಡುವವರೆಂದು ಆನಂದಾತ್ಮಿರತರಾದದರಿಂದಲೋ ಏನೋ ನಿದ್ರಾಂಗನೆಯು ದಯಿತಾಸ್ತ್ರೀಯಂತೆ ಬಹಳ ತಡವಾಗಿ ನಯನಾಭಿಮುಖಿಯಾದಳು. ಮರುದಿನ ಪ್ರಾತಃಕಾಲದ ೪ ಘಂಟೆಯೊಳಗಾಗಿಯೇ ಸ್ನಾನ ಭೋಜನಾದಿಗಳನ್ನು ತೀರಿಸಿಕೊಂಡು ತಪ್ಪದೆ ೪ ಘಂಟೆಗೆ ಗುರುಪರ್ಯ್ಯರ ಮನೆಯ ಎದುರಿಗೆ ಹೋಗಿ, ವ್ಯವಸ್ಥಿತರಾಗಿ ನಿಂತೆವು.

ವಾಚಕರೇ, ಈ ಕಾಲಕ್ಕೆ ಮಹತ್ವವಾದ ಇನ್ನೊಂದು ಸಂಗತಿಯು ನಮ್ಮ ಸುದ್ಯೆವದಿಂದ ಘಟಿಸಿದ್ದನ್ನು ಇಲ್ಲಿ ತಿಳಿಸದೆ ಇರಲಾರೆವು. ಅದೇನಂದರೆ, ನಮ್ಮ ಉಪಗುರುಗಳಾದ ಗಣಿತಮಾಸ್ತರರ ಪ್ರವಾಸದ ಸಂಬಂಧದ ಸಮಯೋಚಿತ ಸದುಪದೇಶವು. ಉಪಗುರುಗಳ ಈ ಸದುಪದೇಶವನ್ನು ಶಿರಸಾವಹಿಸಿ, ಗುರುವರ್ಯ್ಯರೊಡನೆ ಅತ್ಯಾನಂದದಿಂದ ನಾವೆಲ್ಲರೂ ಸ್ಟೇಶನದ ಹಾದೀ ಹಿಡಿದೆವು.

(ಸಶೇಷ)

MANUAL OF METHOD.

ಶಿಕ್ಷಾಕ್ರಮ.

(೧೪೩ನೇ ಪುಟದಿಂದ ಮುಂದೆ ಸಂಪೂರ್ಣ.)

೩ನೇ ಭಾಗ (೫) ವಿಷಯ—ಇದರಲ್ಲಿ ಕಲಿಸತಕ್ಕಂಥ ಯಾವತ್ತು ವಿಷಯಗಳ ಸಮಾವೇಶವಾಗುವದು. ವಿದ್ಯಾರ್ಥಿಗಳಿಗೆ ಕೆಲವೊಂದು ಮಾಹಿತಿಯನ್ನು ಹೇಳತಕ್ಕದ್ದೇ ಇರಲಿ, ವ್ಯಾಕರಣದ ತತ್ವಗಳನ್ನೂ ಗಣಿತದ ಉದಾಹರಣೆಗಳನ್ನೂ ತಿಳಿಸತಕ್ಕದ್ದೇ ಇರಲಿ ಅದೆಲ್ಲವೂ ವಿಷಯವೆಂಬ ಸಾಮಾನ್ಯ ಹೆಸರಿನೊಳಗೆ ಬರುತ್ತದೆ. ವಿಷಯದ ಟಿಪ್ಪಣಿಗಳು ಸ್ವಲ್ಪದರಲ್ಲಿ ಬಹಳ ಅರ್ಥವನ್ನು ಹೇಳುವಂಥ ವ್ಯಗಳೂ ಕಲಿಸುವ ವಿಷಯಕ್ಕೆ ಪೂರ್ಣವಾಗಿ ಸಂಬಂಧಿಸಿದಂಥವುಗಳೂ ಇರಬೇಕು. ಅಂದರೆ ಅವು ಲಕ್ಷ್ಯವನ್ನು

ಸಹಜವಾಗಿ ಎಳೆಕೊಳ್ಳುವವು. ಈ ಟಿಪ್ಪಣಿಗಳನ್ನು ಒಂದೇ ಕಲಮಿನಲ್ಲಿ ಬರೆಯುತಕ್ಕದ್ದು. ಎಷ್ಟೋ ನೂತನ ಶಿಕ್ಷಕರಿಗೆ "ವಿಷಯ" "ಕ್ರಮ" ಇವುಗಳೊಳಗಿನ ಭೇದವನ್ನು ತಿಳಿಕೊಳ್ಳುವದು ಬಹಳ ಹೋಗುತ್ತದೆ. ಕೆಲವರಂತೂ ಮುಂಗಾಣದೆ ಇವೆರಡನ್ನು ಒಂದೇ ಸದರಿನಲ್ಲಿ ಸೇರಿಸುತ್ತಾರೆ. ಅನೇಕ ಪ್ರಸಕ್ತಿಗಳಲ್ಲಿ ವಿಷಯವೂ ಕ್ರಮವೂ ಕೆಲಮಟ್ಟಿಗೆ ಒಂದರೊಳಗೊಂದು ಶೀರುವದೆಂಬದು ನಿಜ. ಇದರೂ ಕೂಡಿದ ಮಟ್ಟಿಗೆ ಇವೆರಡನ್ನೂ ವಿಂಗಡಿಸುವದಕ್ಕೆ ಅವಶ್ಯವಾಗಿ ಯತ್ನ ಮಾಡತಕ್ಕದ್ದು. ವಿಷಯದ ಟಿಪ್ಪಣಿಗಳನ್ನು ಯೋಗ್ಯವಾದ ಸದರುಗಳ ಕೆಳಗೆ ಜೇರೆ ಜೇರೆ ಲೇಖನಖಂಡಗಳಾಗಿ (ಅಂದರೆ ಪ್ಯಾರಾಗ್ರಾಫಗಳಾಗಿ) ಅಥವಾ ಸ್ವತಂತ್ರಮಾತುಗಳಾಗಿ ಬರೆಯಬೇಕು. ಅವುಗಳಲ್ಲಿ ಹೆಚ್ಚು ಮಹತ್ವವುಳ್ಳ ಸದರುಗಳನ್ನು ಕಡಿಮೆ ಮಹತ್ವವುಳ್ಳವುಗಳಿಂದ ವಿಂಗಡಿಸುವದಕ್ಕೋಸ್ಕರ, ದೊಡ್ಡ ಅಕ್ಷರಗಳಿಂದ ಬರೆಯಬೇಕು, ಮತ್ತು ಅವುಗಳಿಗೆ ಹೆಚ್ಚು "ಮಾರ್ಜಿನ" (ಎಡಗಡೆಗೆ ಬರೆಯದೆ ಬಿಡುವ ಸ್ಥಳ) ವನ್ನು ಬಿಡಬೇಕು. ಯಾವಾಗಲೂ ವಿಷಯವನ್ನು ಟಿಪ್ಪಣಿಯ ರೂಪದಿಂದ ಬರೆಯಬೇಕೇ ಹೊರತು ಅದನ್ನು ಕುರಿತು ಸಣ್ಣ ದೊಡ್ಡ ನಿಬಂಧಗಳನ್ನು ಬರೆಯಬಾರದು. ಸಾರಾಂಶ ಈ ಭಾಗದಲ್ಲಿ ಪಾಠಗಳ ಟಿಪ್ಪಣಿಗಳನ್ನು ಬರೆಯುತಕ್ಕದ್ದಿರುತ್ತದೇ ಹೊರತು ಪಾಠಗಳನ್ನು ಕುರಿತು ನಿಬಂಧಗಳನ್ನು ಬರೆಯುತಕ್ಕದ್ದಿರುವದಿಲ್ಲೆಂಬುವಾತನ್ನು ಚೆನ್ನಾಗಿ ನೆನಪಿಡಬೇಕು. ಈ ನಿಯಮವನ್ನು ಚೆನ್ನಾಗಿ ಅನುಸರಿಸಿದರೆ ಟಿಪ್ಪಣಿಗಳಲ್ಲಿ ಪ್ರಶ್ನೆಗಳೂ ಪರ್ಯಾಸೆಗಳೂ ಬರಲಾರವು. ಅಂಕಗಣಿತದ ನಿಯಮಗಳು ವ್ಯಾಕರಣದ ವ್ಯಾಖ್ಯೆಗಳು, ಸಾಮಾನ್ಯ ತತ್ವಗಳು ಇವೇ ಮೊದಲಾದ ಗೌರವದ ವಿಷಯಗಳ ಮಹತ್ವವನ್ನು ತೋರಿಸುವದಕ್ಕಾಗಿ ಅವುಗಳನ್ನು ದೊಡ್ಡ ಅಕ್ಷರಗಳಿಂದ ಬರೆಯುತಕ್ಕದ್ದು. ಪಾಠದಲ್ಲಿ ಹೇಳತಕ್ಕ ಮಾಹಿತಿಯು ಅಳತೆಗೆಟ್ಟಿರಬಾರದು. ಬರೇ ಬಹಳ ಮಾತುಗಳನ್ನು ಹೇಳಿದಷ್ಟಕ್ಕೆ ಶಿಕ್ಷಣವು ಬೆಲೆಯುಳ್ಳದ್ದಾಗಲಾರದು. ಅದರೆ ಶಿಕ್ಷಣದ ಬೆಲೆಯು ಕೊಟ್ಟ ನಿಯಮಿತ ವೇಳೆಯಲ್ಲಿ ವಿದ್ಯಾರ್ಥಿಗಳ ಮನಸ್ಸಿನೊ

ಳಗೆ ಚನ್ನಾಗಿ ನಡುವಂತೆ ಹೇಳಿದ ಮಾತುಗಳನ್ನು ಅವಲಂಬಿಸಿರುತ್ತದೆ. ಆದಕಾರಣ ಪಾಠಕ್ಕೆ ಸಂಬಂಧವಿಲ್ಲದಂಥ ಸಂಗತಿಗಳನ್ನು ತೆಗೆದುಹಾಕಬೇಕು. ಪಾಠವನ್ನು ಕಲಿಸುವಾಗ ಇಂಥ ಅನಾವಶ್ಯಕವಾದ ಸಂಗತಿಗಳನ್ನು ತೆಗೆದುಹಾಕುವದಕ್ಕಿಂತಲೂ ಅವನ್ನು ಮೊದಲೇ ಟಿಪ್ಪಣಿಗಳಿಂದಲೇ ತೆಗೆದುಹಾಕುವದು ಹೆಚ್ಚು ಸುಲಭವಾಗಿರುವದು. ಈ ವಿಷಯದಲ್ಲಿ ಇನ್ನೊಂದು ಹೇಳತಕ್ಕ ಸಂಗತಿ ಏನಂದರೆ ಪಾಠ ಕಲಿಸಲಿಕ್ಕೆ ಪ್ರಾರಂಭ ಮಾಡುವಾಗ ಶಿಕ್ಷಕನು ಆತ್ಮ ನಿರ್ದೇಶವನ್ನು ಮಾಡಬಾರದು, ಅಂದರೆ ತನ್ನ ವಿಷಯದಲ್ಲಿ ಏನೂ ಹೇಳಬಾರದು. ಉದಾಹರಣಾರ್ಥವಾಗಿ « ಇನ್ನು ನಾನು ನಿಮಗೆ ಈ ವಿಷಯವನ್ನು ಹೇಳುತ್ತೇನೆ. » ಎಂದು ತನ್ನ ಉದ್ದೇಶದ ವಿಷಯದಲ್ಲಿ ತಾನೇ ಹೇಳುವದು ಅನಾವಶ್ಯಕವಾದದ್ದೂ ಕರ್ಣಕಟುವಾದದ್ದೂ ಇರುತ್ತದೆ. ಇಂಥ ಸ್ವಂತ ಸಂಬಂಧದ ಉಕ್ತಿಗಳು ಶಿಕ್ಷಣದಲ್ಲಿ ಬರಬಾರದು.

(೪) ಕ್ರಮಬದ್ಧ ವಿಷಯಗಳು—ವಿದ್ಯಾರ್ಥಿಗಳಿಗೆ ಕ್ರಮವಿಲ್ಲದೆ ಹಾಗೂ ಹೀಗೂ ವಿಷಯವನ್ನು ಕಲಿಸಿದರೆ ಶಿಕ್ಷಕನಿಗೆ ಆಯಾಸವಾಗುತ್ತದೇ ಹೊರ್ತು ವಿದ್ಯಾರ್ಥಿಗಳಿಗೆ ಏನೂ ಫಲವಾಗುವದಿಲ್ಲ; ಆದರೆ ಇದಕ್ಕೆ ಬದಲಾಗಿ ವಿಷಯವನ್ನು ಕ್ರಮಗೊಳಿಸಿ ಆ ಕ್ರಮದಂತೆ ವಿಷಯವನ್ನು ವಿದ್ಯಾರ್ಥಿಗಳಿಗೆ ಹೇಳಿದರೆ ಅಲ್ಪಾಯಾಸದಿಂದ ಬಹು ಫಲವಾಗುತ್ತದೆ. ಈ ನಿಯಮವನ್ನು ಲಕ್ಷದಲ್ಲಿಟ್ಟು ಹೊಸ ಶಿಕ್ಷಕರಿಗೆ ಬರೇ ವಿಷಯವನ್ನು ಕಲಿಸಲಿಕ್ಕೆ ಹೇಳುವದಕ್ಕೆ ಬದಲಾಗಿ ವಿಷಯವನ್ನೂ ಅದರ ಕ್ರಮವನ್ನೂ ಹೇಳುವದು ಲೇಸು. ಈ ಮಾದರಿಯ ಶಿಕ್ಷಣದಿಂದಲೂ ಅಭ್ಯಾಸದಿಂದಲೂ ಅವನು ಕಲಿಸತಕ್ಕ ವಿಷಯಗಳ ಕ್ರಮವನ್ನು ಅರಿತುಕೊಳ್ಳುವನು. ಒಟ್ಟಿಗೆ ವಿಷಯರಚನೆಗೆ ಬೇಕಾಗುವ ತಾರ್ಕಿಕಶಕ್ತಿಯು ಹೊಸ ಶಿಕ್ಷಕನಲ್ಲಿ ಬೆಳೆಯುತ್ತಿರುವ ಕಾಲದಲ್ಲಿ ಅವನಿಗೆ ಮುಖ್ಯ ಶಿಕ್ಷಕನು ತಾನೇ ವಿಷಯದ ರಚನೆಯನ್ನು ಮಾಡಿಕೊಟ್ಟು ಸಹಾಯ ಮಾಡಬೇಕು. ಮೊದಲು ಹೊಸ ಶಿಕ್ಷಕನಿಗೆ ಮುಖ್ಯ ಶಿಕ್ಷಕನು ಯಾವದಾದರೊಂದು ಪಾಠವನ್ನು ಕಲಿಸ

ಲಿಕ್ಕೆ ಕೊಟ್ಟು ಆ ಪಾಠದ ಕ್ರಮವನ್ನು ತಿಳಿಸಿ ಟಿಪ್ಪಣಿಗಳನ್ನು ಬರೆಯಲಿಕ್ಕೆ ಹೇಳಬೇಕು. ಒಳಿಕ ಆ ಟಿಪ್ಪಣಿಗಳನ್ನು ಮುಖ್ಯ ಶಿಕ್ಷಕನು ನೋಡಿ, ಅವುಗಳೊಳಗಿನ ಗುಣದೋಷಗಳನ್ನು ತೋರಿಸಿ, ತಿದ್ದಬೇಕು; ಹಾಗೂ ಈ ಪ್ರಕಾರ ತಿದ್ದಿದ ಪಾಠದ ಟಿಪ್ಪಣಿಗಳನ್ನು ಹೊಸ ಶಿಕ್ಷಕನು ಮುಂದೆ ಬೇಕಾದಾಗ ನೋಡಿಕೊಳ್ಳುವ ಸಲುವಾಗಿ ಕಾದಿಡಬೇಕು. ಇದೇ ಮೇರೆಗೆ ಹಲವು ಬೇರೆ ಪಾಠಗಳ ಟಿಪ್ಪಣಿಗಳನ್ನೂ ಬರೆಯಿಸಬೇಕು.

೪ನೇ ಭಾಗ ಕ್ರಮದಿಂದ ಬರೆಯದಿದ್ದ ವಿಷಯ— ಇಷ್ಟಾದಮೇಲೆ ಹೊಸ ಶಿಕ್ಷಕನಿಗೆ ಸ್ವಲ್ಪ ಹೆಚ್ಚು ಕೆಲಸ ಬೀಳುವ ಪಾಠವನ್ನು ಕೊಡಲಿಕ್ಕೆ ಅಡ್ಡಿ ಇಲ್ಲ. ಈಗಾದರೂ ಕಲಿಸತಕ್ಕ ವಿಷಯವನ್ನು ಶಿಕ್ಷಕನೇ ನೇಮಿಸಿ ಕೊಡಬೇಕು. ಆದರೆ ಈ ವಿಷಯವು ಕಲಿಸಲಿಕ್ಕೆ ಯೋಗ್ಯವಾದ ಕ್ರಮದಿಂದ ರಚಿಸಿದ್ದಿರಬಾರದು. ಅದನ್ನು ಹೊಸ ಶಿಕ್ಷಕನು ಶಿಕ್ಷಣಕ್ಕೆ ಯೋಗ್ಯವಾಗುವಂತೆ ತಕ್ಕ ಸದರುಗಳ ಕೆಳಗೆ ರಚಿಸಿ ಪಾಠವನ್ನು ಮುಗಿಸಬೇಕು. ಇದರಲ್ಲಿ ಬೇಕಾದರೆ ಅವನು ಮುಖ್ಯ ಶಿಕ್ಷಕನ ಸಹಾಯವನ್ನು ತೆಗೆದುಕೊಳ್ಳಬಹುದು. ಕ್ರಮಿಕ ಪುಸ್ತಕಗಳೊಳಗೂ ಬೇರೆ ಪುಸ್ತಕಗಳೊಳಗೂ ಈ ಕೆಲಸಕ್ಕೆ ಬೇಕಾದಂಥ ವಿಷಯಗಳು ಬೇಕಾದಷ್ಟು ದೊರೆಯಬಹುದು. ಮತ್ತು ಸರ್ವಸಾಧಾರಣವಾಗಿ ನೂತನ ಶಿಕ್ಷಕನಿಗೆ ಇಂಥ ವಿಷಯಗಳ ಟಿಪ್ಪಣಿಗಳನ್ನೇ ತೆಗೆಯಬೇಕಾಗುತ್ತದೆ; ಹಾಗೂ ಈ ಪೂರ್ವದಲ್ಲಿ ಮೊದಲಿನ ಮೂರು ಭಾಗಗಳಲ್ಲಿ ಹೇಳಿದ ನಿಯಮಗಳನ್ನನುಸರಿಸಿ ಅಭ್ಯಾಸವನ್ನು ಮಾಡಿದ ಹೊಸ ಶಿಕ್ಷಕನಿಗೆ ಈ ಕಾರ್ಯವು ಕಠಿಣವೆನಿಸಲಾರದು. ಆದರೂ ಹೊಸ ಶಿಕ್ಷಕನು ತನ್ನ ಅಳವುಮೀರಿದ ಕೆಲಸಕ್ಕೆ ಎಂದೂ ಕೈಹಾಕಬಾರದು.

೫ನೇ ಭಾಗ ಪಾಠಗಳ ಸದರುಗಳು— ಹಿಂದಿನ ನಾಲ್ಕು ಭಾಗಗಳಲ್ಲಿ ಹೇಳಿದ ನಿಯಮಗಳ ಅಭ್ಯಾಸದಿಂದ ಹೊಸ ಶಿಕ್ಷಕನು ವಿಷಯವನ್ನು ಆರಿಸಲಿಕ್ಕೆ ಸಮರ್ಥನಾಗುವನೆಂದು ಊಹಿಸುತ್ತೇವೆ. ಈವರೆಗೆ ಕ್ರಮಬದ್ಧ ವಿಷಯವನ್ನು ಮೊ

ಬಲು ಕಲಿಸಿ ಅವನಿಗೆ ದೊಡ್ಡಿಯಾಗಿರುತ್ತದೆ. ಹಾಗು ಕ್ರಮವಿಲ್ಲದ ವಿಷಯವನ್ನು ಕೈಕೊಂಡು ಅದನ್ನು ಕ್ರಮಗೊಳಿಸಿ ಕಲಿಸುವ ಪರಿಶ್ರಮವೂ ಆಗಿರುತ್ತದೆ. ಅದೇ ಮೇರೆಗೆ ವಿದ್ಯಾರ್ಥಿಗಳ ಯೋಗ್ಯತೆಗೆ ಅನುಗುಣವಾದ ವಿಷಯವನ್ನು ಅರಿಸುವ ಜಾಣತನವಾದರೂ ತಕ್ಕ ಮಟ್ಟಿಗೆ ನೆಲೆಗೊಂಡಿರುತ್ತದೆ. ಇಷ್ಟಾದ ಮೇಲೆ ಅವನಿಂದ ಇದಕ್ಕೂ ಹೆಚ್ಚು ವ್ಯಾಪಕವಾದಂಥ ವಿಷಯಗಳ ಪೃಥಕ್ಕರಣವನ್ನು ಮಾಡಿಸಿ ಅವನ ಪೃಥಕ್ಕರಣಶಕ್ತಿಯನ್ನು ಬಲಪಡಿಸುವದಕ್ಕಾಗಿ ಇಂಥ ಪಾಠಗಳ ಟಿಪ್ಪಣಿಗಳನ್ನು ಯೋಗ್ಯವಾದ ಸದರುಗಳ ಕೆಳಗೆ ಬರೆಯುವ ಅಭ್ಯಾಸವನ್ನು ಮಾಡಿಸಬೇಕು. ತಕ್ಕ ವಿಷಯವನ್ನು ಅರಿಸಿಕೊಳ್ಳುವದಕ್ಕೂ, ಅದನ್ನು ಕ್ರಮದಿಂದ ಬರೆಯುವದಕ್ಕೂ ಅವನಿಗೆ ಈಗ ಬಂದೇಬರುತ್ತದೆ. ಇದು ಹೊಸ ಕೆಲಸವಲ್ಲ. ಆದರೂ ಈ ಪೃಥಕ್ಕರಣಶಕ್ತಿಯನ್ನು ಬೈಲಿಗೆಳೆಯುವದೂ ಬಲಪಡಿಸುವದೂ ಅವಶ್ಯವಿರುತ್ತದೆ.

ತಾನು ಕಲಿಸತಕ್ಕ ವಿಷಯವನ್ನೂ ಅದರ ಎಷ್ಟು ಭಾಗ ಕಲಿಸಬೇಕೆಂಬುದನ್ನೂ ಗೊತ್ತು ಮಾಡಿದನಂತರ ಹೊಸ ಶಿಕ್ಷಕನು ಅದನ್ನು ಲಕ್ಷ್ಯಪೂರ್ವಕವಾಗಿ ಪೃಥಕ್ಕರಣ ಮಾಡಿ ಅದರಲ್ಲಿ ಕ್ರಮವರಿದು ಭಾಗಗಳನ್ನೂ ಪ್ರತಿಭಾಗಗಳನ್ನೂ ಮಾಡಬೇಕು. ಅವುಗಳಲ್ಲಿ ಕಾರ್ಯಕಾರಣ ಸಂಬಂಧವನ್ನೂ ಶಿಕ್ಷಣದ ಅನುಕ್ರಮವನ್ನೂ ಚನ್ನಾಗಿ ಕಾಯಬೇಕು. ಶಿಕ್ಷಣದ ಅನುಕ್ರಮವು ಹಲವು ಗೌರವವುಳ್ಳ ತತ್ವಗಳನ್ನು ಅವಲಂಬಿಸಿರುವದಲ್ಲದೆ, ಈ ತತ್ವಗಳು ತಿಳಿಕೊಳ್ಳಲಿಕ್ಕೆ ಹಗುರವಾದವುಗಳೂ ಉಪಯೋಗಿಸಲಿಕ್ಕೆ ಸುಲಭವಾದವುಗಳೂ ಇರುವವು. ಈ ತತ್ವಗಳು ಯಾವವೆಂದರೆ:—

೧. ಸುಲಭವಿಷಯದಿಂದ ತೊಡಕಿನ ವಿಷಯಕ್ಕೆ ಹೋಗುವದು.

೨. ವ್ಯಕ್ತಿವಾಚಕದಿಂದ ಸಾಮಾನ್ಯವಾಚಕಕ್ಕೆ ತೆರಳುವದು.

೩. ವಸ್ತುವಾಚಕದಿಂದ ಭಾವವಾಚಕಕ್ಕೆ ಸಾಗುವದು.

೪. ಅನಿಯಮಿತದಿಂದ ನಿಯಮಿತಕ್ಕೆ ಗಮಿಸುವದು.

೫. ಅನುಭವಿಕದಿಂದ ಅನುಮಾನಕ್ಕೂ ಶಾಸ್ತ್ರಸಿದ್ಧಾಂತಕ್ಕೂ ಎಳಸುವದು.

೬. ಸ್ಥೂಲದಿಂದ ಸೂಕ್ಷ್ಮಕ್ಕೆ ಸಾಗುವದು.

೭. ಭೌತಿಕಸೃಷ್ಟಿಯಿಂದ ಮಾನಸಿಕಸೃಷ್ಟಿಗೆ ಲಕ್ಷ ಕೊಡುವದು.

೮. ಗೊತ್ತಿದ್ದದ್ದರಿಂದ ಗೊತ್ತಿಲ್ಲದ್ದಕ್ಕೆ ಸಾಗುವದು.

ಈ ಕಡೆಯ ತತ್ವದೊಳಗೆ ಮೊದಲಿನ ಏಳುಪು ತತ್ವಗಳು ಬರುತ್ತವೆ. ಇದರೂ ಹೊಸ ಶಿಕ್ಷಕನಿಗೆ ಅವುಗಳನ್ನು ತಿಳಿಕೊಳ್ಳಲಿಕ್ಕೂ ಉಪಯೋಗಿಸಲಿಕ್ಕೂ ಸುಲಭವಾಗಬೇಕೆಂದು ಅವುಗಳನ್ನು ಬೇರೆಯಾಗಿ ಹೇಳಿದ್ದೇವೆ.

ಪಾಠದ ಪದರುಗಳು ಕಡಿಮೆ ಇರತಕ್ಕದ್ದು. ಮಿತಿಮೀರಿದರೆ ತೊಂದರೆಯೂ ಸಂಕೀರ್ಣ ಭಾಗಗಳೂ ಸಂಭವಿಸುವವು. ಇದಲ್ಲದೆ ಅವುಗಳನ್ನು ಸ್ಪಷ್ಟವಾದ ಗೆರೆಗಳಿಂದ ವಿಂಗಡಿಸಬೇಕು. ಇದುವರೆಗೆ ಹೇಳಿದ ಕ್ರಮದಂತೆ ಹೊಸ ಶಿಕ್ಷಕನಿಗೆ ಇತಿಹಾಸ, ಭೂಗೋಲ, ನಿಬಂಧ ಇವೇ ಮೊದಲಾದ ವಿಷಯಗಳಿಗೆ ಸಂಬಂಧಿಸಿದ ಪಾಠಗಳನ್ನು ಪೃಥಕ್ಕರಣೆ ಮಾಡುವ ಶಕ್ತಿಯು ಉಂಟಾಗಿರಬಹುದಾದ್ದರಿಂದ ಪಾಠಗಳ ಟಿಪ್ಪಣಿಗಳಲ್ಲಿ ಯೋಗ್ಯವಾದ ಪದರುಗಳನ್ನು ಮಾಡುವದಕ್ಕೆ ಅವರಿಗೆ ಜಡ ಹೋಗಲಿಕ್ಕಿಲ್ಲೆಂದು ಎಣಿಸುತ್ತೇವೆ. ಈ ಗ್ರಂಥದಲ್ಲಿ ಅಲ್ಲಲ್ಲಿಗೆ ಅನೇಕ ಮಾದರಿಯ ಪಾಠಗಳನ್ನು ಕೊಟ್ಟಿದ್ದೇವೆ. ಹೊಸ ಶಿಕ್ಷಕನು ಅವುಗಳೊಳಗಿನ ಪದರುಗಳನ್ನು ಕ್ರಮದಿಂದ ಬರಕೊಂಡು ಅವುಗಳ ಮೇಲಿಂದ ಪಾಠಗಳನ್ನು ಬರೆಯಲಿಕ್ಕೆ ಯತ್ನ ಮಾಡಬಹುದು. ಅವಾದನಂತರ ಹೊರಗಿನ ಬೇರೆ ಪಾಠಗಳನ್ನು ಆರಿಸಿ ಅವುಗಳ ಪದರುಗಳನ್ನು ಬರೆಯಬೇಕು. ಬರೆದನಂತರ ಅವುಗಳನ್ನು ಮುಖ್ಯ ಶಿಕ್ಷಕನಿಗೆ ತೋರಿಸಿ ಅವುಗಳೊಳಗಿನ ನ್ಯೂನಾಧಿಕ್ಯಗಳನ್ನು ಪೂರೈಸಬೇಕು. ಈ ಪ್ರಕಾರ ತಿದ್ದಿದ ಪದರುಗಳನ್ನು ಮುಂದಿನ ಉಪಯೋಗಕ್ಕಾಗಿ ಕಾದಿಡಬೇಕು.

೬ ನೇ ಭಾಗ:—ಕರೇ ಹಲಿಗೆಯ ಮೇಲಿನ ಟಿಪ್ಪಣಿಗಳು—ಈ ಮೆಟ್ಟಿಗೆ ಬಂದನಂತರ ಹೊಸ ಶಿಕ್ಷಕನಿಗೆ ಕರೇ ಹಲಿಗೆಯ ಮೇಲಿನ ಕೆಲವು ಟಿಪ್ಪಣಿಗಳನ್ನು ಬರೆದುಕೊಟ್ಟು ಅವುಗಳ ಮೇಲಿಂದ ಪಾಠಗಳನ್ನು ರಚಿಸುವದಕ್ಕೆ ಹೇಳಬೇಕು. ಈ ಟಿಪ್ಪಣಿಗಳೂ ಪಾಠಗಳ ಸದರುಗಳೂ ಒಂದೇ ಇರುವ ಅವಶ್ಯವಿಲ್ಲ, ಹಾಗು ಬಹುತರವಾಗಿ ಅವು ಬೇರೆಯೇ ಇರುತ್ತವೆ. ಪಾಠಗಳ ಟಿಪ್ಪಣಿಗಳನ್ನು ಸಂಪೂರ್ಣವಾಗಿ ಬರೆಯಬೇಕಾದರೆ ಅವುಗಳಲ್ಲಿ ಈ ಟಿಪ್ಪಣಿಗಳು ಅವಶ್ಯವಾಗಿ ಬರಲಿಕ್ಕೇಬೇಕು. ಈ ಟಿಪ್ಪಣಿಗಳ ಎರಡು ಪೂರ್ವದರಿಗಳನ್ನು ಕೆಳಗೆ ಕೊಡುತ್ತೇವೆ.

DEPARTMENTAL NOTICES.

ನೋಟೀಸುಗಳು.

I

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ದಿಶಂಬರ ತಿಂಗಳ ೭ ನೇ ತಾರೀಖಿ (ಶನಿವಾರ) ನ ದಿವಸ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಮದ್ರಾಸ ಕಾಲಮಾನದ ೧೧ ಘೆಂಟೆಗೆ ಕನ್ನಡ ೬ ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೫ ನೇ ಅಥವಾ ೪ ನೇ ಗ್ರೇಡ ಮುಲ್ಕೀ ಸರ್ಟಿಫಿಕೀಟ ಪಡೆದವರೂ, ಸಶಕ್ತರೂ, ವ್ಯಂಗರಹಿತರೂ, ಐದು ಫೂಟಗಿಂತ ಎತ್ತರಿರುವವರೂ, ಹದಿನೇಳರ ಮೇಲೆ ಇಪ್ಪತ್ತೆಂಟರ ಒಳಗೆ ವಯಸ್ಸುಳ್ಳವರೂ ಇರಬೇಕು. ಅವರು ವಯಸ್ಸಿನ ದಾಖಲೆಯನ್ನೂ ಮುಲ್ಕೀ ಸರ್ಟಿಫಿಕೀಟನ್ನೂ ಸಂಗಡ ತಕ್ಕೊಂಡು ಮೇಲೆ ನಮೂದಿಸಿದ ಮುದ್ದತಿನ ಒಳಗಾಗಿ ಬಂದು ಹಾಜರಾಗಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ, ಉಮೇದ್ವಾರರೇ ಇರಲಿ ಅವರಲ್ಲಿ ಉತ್ತಮ ರೀತಿಯಿಂದ ಪಾಸಾದವರನ್ನೇ ಪಗಾರಿ ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳುವೆವು.

೬ ಈ ವರ್ಷ ಮುಲ್ಕೀ ಪರೀಕ್ಷೆಗೆ ಕೂತಂಥವರು ಸಹ ಪ್ರವೇಶ ಪರೀಕ್ಷೆಗೆ ಬರಬಹುದು; ಅವರು ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿ ಒಂದು ವೇಳೆ ಮುಲ್ಕೀ ಪರೀಕ್ಷೆಯಲ್ಲಿ ನಾಪಾಸಾದರೆ ಅವರನ್ನು ಕಾಲೇಜದಲ್ಲಿತೆಗೆದುಕೊಳ್ಳಲಿಕ್ಕಿಲ್ಲ.'

೫. ಪರೀಕ್ಷೆಗೆ ಬರುವ ಎಲ್ಲ ಉಮೇದವಾರರು ಬಿನ ಇಯತ್ತೆಯ ಅಂಕಲಿಪಿ ಮೊದಲ್ಗೊಂಡು ೬ನೇ ಇಯತ್ತೆಯ ವರೆಗೆ ಇರುವ ಯಾವತ್ತು ಅಭ್ಯಾಸದ ಪುಸ್ತಕಗಳನು ತಪ್ಪದೆ ತರಬೇಕು.

೪. ಹೊದ್ದುಕೊಳ್ಳುವದಕ್ಕೆ ಬೆಚ್ಚನ್ನೆ ಅರಿವೆಗಳನ್ನು ತರ್ನ ಬೇಕು. ಒಂದು ಚಲೋ ಹಚ್ಚಡ ಮತ್ತು ಎರಡು ಕಂಬಳಿ ಅವಶ್ಯವಾಗಿರಬೇಕು.

೫. ಕಾಲೇಜದಲ್ಲಿ ತೆಗೆದುಕೊಳ್ಳಲ್ಪಟ್ಟವರು ದಸ್ತೈವಜು ಗಳನ್ನು ಬರೆದುಕೊಡಬೇಕಾಗುತ್ತದಪ್ಪೆ, ಅದಕ್ಕೆ ೧೫೦ ರೂಪಾಯಿಗಳ ಲಾಯಖಿಯುಳ್ಳ ಇಬ್ಬರು ಜಾಮೀನದಾರರು ಬೇಕಾಗುವರು. ಅವರನ್ನು ಸಹ ಗೊತ್ತು ಮಾಡಿಕೊಂಡು ಬರಬೇಕು.

೬. ಕಾಲೇಜದಲ್ಲಿ ನಿಂತವರು ಕಾಲೇಜದ ನಿಯಮದಂತೆ ಅಡ್‌ವಾನ್ಸ ೧೦ ರೂ. ಸ್ಟ್ಯಾಂಪಿಗಾಗಿ ೧ - ೪ ರೂ. ಇಷ್ಟು ಹಣವನ್ನು ಕೊಡಬೇಕಾಗುವದು ಈ ಹಣವನ್ನೂ ತಮ್ಮ ಖರ್ಚುವೆಚ್ಚಕ್ಕಾಗಿ ಬೇಕಾಗುವ ಹಣವನ್ನೂ ತೆಗೆದುಕೊಂಡು ಬರಬೇಕು.

ಧಾರವಾಡ ಟ್ರೇ. ಕಾಲೇಜ,
ತಾ. ೨೭-೭-೧೯೦೧.

S. K. Rodda,
ಪ್ರಿನ್ಸಿಪಾಲ.

II

ಕಾಲೇಜದ ವಿದ್ಯಾರ್ಥಿಗಳಿಗೋಸ್ಕರವೇ ಆಗತಕ್ಕ ೧ನೇ ಗ್ರೇಡ ಚಿತ್ರಕಲೆಯ (ಡ್ರಾಯಿಂಗ) ಪರೀಕ್ಷೆಯು ಬರುವ ಅಕ್ಟೋಬರ ತಿಂಗಳ ೭ನೇ ತಾರೀಖು ಸೋಮವಾರ ದಿವಸ ಧಾರವಾಡ ಟ್ರೇನಿಂಗಕಾಲೇಜದಲ್ಲಿ ಮದ್ರಾಸ ಕಾಲಮಾನದ

೧೦೫ ಘಂಟೆಗೆ ಆರಂಭವಾಗುವದು. ಹೊರಗಿನಿಂದ ಬರುವ ವರು ಸಪಟಂಬರದ ಒಳಗಾಗಿ ತಮ್ಮ "ಹೆಸರನ್ನು ನಮ್ಮ ಕಡೆ ತಿಳುಹಿಸಬೇಕು.

ಧಾರವಾಡ ಟ್ರೇ. ಕಾಲೇಜ, } S. K. Rodda,
ತಾ॥ ೨೭-೭-೧೯೦೧. } ಪ್ರಿನ್ಸಿಪಾಲ.

III

ಈ ವರ್ಷದ ಧಾರವಾಡ ಟ್ರೇನಿಂಗ ಕಾಲೇಜದ ನರ ಟಿಫಿಕೇಟ ಪರೀಕ್ಷೆಯು ತಾರೀಖು ೧೪ನೇ ಅಕ್ಟೋಬರ ೧೯೦೧ನೇ ಇಸವಿಯುದಿವಸ ಆಗುವದು, ಪರೀಕ್ಷೆಯು ಧಾರವಾಡ ಟ್ರೇನಿಂಗಕಾಲೇಜದಲ್ಲಿ ಮದ್ರಾಸ ಕಾಲಮಾನದ ೧೦೫ ಘಂಟೆಗೆ ಆರಂಭವಾಗುವದು. ತಿಳಿಯುವದು ತಾರೀಖು ೭೪ನೇ ಜುಲಾಯಿ ೧೯೦೧.

ಧಾರವಾಡ ಟ್ರೇ. ಕಾಲೇಜ. } S. K. Rodda,
ತಾ॥ ೨೪ - ೬ - ೧೯೦೧ } ಪ್ರಿನ್ಸಿಪಾಲ.

IV

ಧಾರವಾಡ ಫೀಮೇಲ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ದಿಸಂಬರ ತಿಂಗಳ ೧೦ನೇ ತಾರೀಖಿನ (ಮಂಗಳವಾರ) ದಿವಸ ಧಾರವಾಡ ಫೀಮೇಲ ಟ್ರೇನಿಂಗ ಕ್ಲಾಸದಲ್ಲಿ ಮದ್ರಾಸ ಕಾಲಮಾನದ ೧೦ ಘಂಟೆಗೆ ಆರಂಭವಾಗುವದು, ಉಮೇದವಾರರು ೧೪ ವರ್ಷಕ್ಕೆ ಕಡಿಮೆ ಹೆಚ್ಚಿನವರೂ, ವೇಕಭೂಷೆಯು ೫ನೇ ಇಯತ್ತೆಯಲ್ಲಿ ತೇರ್ಗಡೆಯನ್ನು ಹೊಂದಿದವರೂ, ಒಳ್ಳೇ ನಡತೆಯುವರೂ, ಪ್ರತಿಷ್ಠೆಯುಳ್ಳ ಮನೆತನದವರೂ, ಶಾರೀರ ಸಂಬಂಧವಾದ ನ್ಯೂನಗಳಾವವೂ ಇಲ್ಲದವರೂ ಇರಬೇಕು. ಮಾಸ್ತರರ ಕಡೆಯಿಂದ ವಯಸ್ಸಿನ ಮತ್ತು ನಡತೆಯ ಸರಟೀಫಿಕೇಟಗಳನ್ನು ತರಬೇಕು. ಟ್ರೇನಿಂಗಕಾಲೇಜದಲ್ಲಿ ಹೋಗುವಬಗ್ಗೆ ಗಂಡನ ಇಲ್ಲವೆ ತಂದೆಯ ಸಮ್ಮತ ಪಡಕೊಂಡಬಗ್ಗೆ ಲೇಖ ಬರಬೇಕು.

೨೭ - ೬ - ೧೯೦೧ } S. K. Rodda,
ಪ್ರಿನ್ಸಿಪಾಲ.

V

ಧಾರವಾಡ ಜಿಲ್ಲೆಯೊಳಗಿನ ಎಲ್ಲಾ ಮಾಸ್ತರರಿಗೆ.

ಡಿಪ್ಯುಟಿ ಎಜ್ಯುಕೇಶನಲ್ ಇನಸ್ಪೇಕ್ಟರ ಜಿಲ್ಲಾ ಧಾರವಾಡ ಇವರ ಕಡೆಯಿಂದ ತಿಳಿಸುವದೇನಂದರೆ :—

ವಿದ್ಯಾರ್ಥಿಗಳ ಹಸ್ತಾಕ್ಷರ ಸುಧಾರಿಸುವ ಉಪಾಯಗಳಲ್ಲಿ ಉತ್ತಮ ಪುಸ್ತಿ ಬರೆಯುವ ವಿದ್ಯಾರ್ಥಿಗಳಿಗೆ ಬಕ್ಷೀಸು ಕೊಡುವದೊಂದು ಉಪಾಯವೆಂದೆಣಿಸಿ ಪ್ರತಿ ಒಂದು ಇಯತ್ತೆಯಲ್ಲಿ ಉತ್ತಮ ಮತ್ತು ಪ್ರದರ್ಶನಕ್ಕೆ ಯೋಗ್ಯವಾವ ಪುಸ್ತಿಗಳನ್ನು ಕಳುಹಿಸುವದಕ್ಕೆ ಕಳೆದ ವರುಷ ಎಲ್ಲ ಮಾಸ್ತರರಿಗೆ ತಿಳಿಸಿತ್ತು. ಅದರಂತೆ ಬಹಳವು ಮಾಸ್ತರರು ಪ್ರದರ್ಶನಕ್ಕೆ ಕಳುಹಿಸಿದ ಪುಸ್ತಿಗಳನ್ನು ಈ ಬಗ್ಗೆ ನೇಮಿಸಿದ ಕವಾದ ಕವಿಮಾಟಿಯ ಮುಂದೆ ಇಡಲು ಕೆಳಗೆ ಬರೆದ ವಿದ್ಯಾರ್ಥಿಗಳ ಹಸ್ತಾಕ್ಷರಗಳು ಅವರವರ ಇಯತ್ತೆಗಳಲ್ಲಿ ಉತ್ತಮವೆಂದು ನಿರ್ಣೈಸಲ್ಪಟ್ಟು, ಆಯಾಯ ವಿದ್ಯಾರ್ಥಿಯು ಹೆಸರಿನ ಮುಂದೆ ಬರೆದ ಬಕ್ಷೀಸು ಕೊಡಬೇಕೆಂದು ತರಾವು ಆಗಿರುತ್ತದೆ. ನಡೆಯುವ ವರ್ಷದಲ್ಲಿಯೂ ಇದೇ ತರದ ಪ್ರದರ್ಶನಕ್ಕೋಸ್ಕರ ಇಯತ್ತೆವಾರ ಉತ್ತಮ ಪುಸ್ತಿಗಳನ್ನು ಕಳುಹಿಸುವ ವಿಷಯದಲ್ಲಿ ಹಿಂದಿನಿಂದ ತಿಳಿಸೋಣಾದೀತು. ಆದ್ದರಿಂದ ಯಾವ ಮಾಸ್ತರರು ಹೋದ ವರ್ಷ ಪುಸ್ತಿಗಳನ್ನು ಕಳುಹಿಸಲಿಲ್ಲ ಅಥವಾ ಯಾವ ಕಾಲೆಗಳಲ್ಲಿ ಪ್ರದರ್ಶನಕ್ಕೆ ಕಳುಹಿಸುವಷ್ಟು ಯೋಗ್ಯತೆಯು ಬರಹ ಇರುವದಿಲ್ಲ ಅಂಥ ಮಾಸ್ತರರು ಈ ಹುಕುಮಿನ ಮೇಲಿಂದ ಈವರ್ಷ ಪಡೆದು ತಮ್ಮ ತಮ್ಮ ಕಾಲೆಯೊಳಗಿನ ವಿದ್ಯಾರ್ಥಿಗಳ ಅಕ್ಷರ ಸುಧಾರಿಸಿ ಅವರನ್ನು ಶಿಷ್ಯವೃತ್ತಿ ಮತ್ತು ಬಕ್ಷೀಸ ಹೊಂದಲಿಕ್ಕೆ ಅರ್ಜ ಮಾಡುವರೆಂದು ಕೋರುತ್ತೇವೆ.

ಧಾರವಾಡ
ತಾ|| ೨೭-೭-೧೯೦೧. } R. A. Savanur,
ಡೆ. ಎ. ಇ. ಜಿ. ಧಾರವಾಡ.

ಕ್ರಮ ಸಂಖ್ಯೆ	ಬಕ್ಷಿಸು ಪಡೆದ ವಿದ್ಯಾರ್ಥಿಗಳ ಹೆಸರುಗಳು.	ಯಾವ ಶಾಲೆಯ ವಿದ್ಯಾರ್ಥಿ.	ಸಂಖ್ಯೆ	ಬಕ್ಷಿಸ ಪಡೆದ ವಸ್ತು.
	೬ನೇ ಇಯತ್ತೆ			
೧	ಶ್ರೀನಿವಾಸ ಗೋಪಾಳ ಕರ್ಜಗಿ ...	ಕರ್ಜಗಿ	೧	ರೇಸಮೊ ಅಂಚಿನಳುಪಣ್ಣಿ
೨	ವೆಂಕಟೇಶ ವಿಠ್ಠಲ ದೇಸಾಯಿ ...	ಗದಗ ಕನ್ನಡ ೧ನೇ	೨	ಕನ್ನಡ ಕೈಪಿಡಿ
೩	ಕೃಷ್ಣಪ್ಪಾ ಹನಮಪ್ಪಾ ಜ್ಯಾಡರ ...	ತಿರ್ಲಾಪೂರ	೧	ರೇಶಮೊ ಅಂಚಿನಳುಪಣ್ಣಿ
೪	ಫಕೀರಪ್ಪಾ ಗಿರಿಯಪ್ಪಾ ಧಾರವಾಡ ...	ಸದರ	೨	ಕೈಪಿಡಿ
೫	ಮಹಮ್ಮದ ಇಸ್ಮಾಯಿಲ ವ॥ ದಾದಾಮಿಯಾ ...	ಮುಳಗುಂದ ಕನ್ನಡ ೧ನೇ	೧	ರೇಶಮೊ ಅಂಚಿನಳುಪಣ್ಣಿ
೬	ಪೀರಾ ತಾಯಿ ಪುಟ್ಟಾಸಾನಿ ಪಾತರದ ...	ನವಲಗುಂದ ಕನ್ನಡ	೨	ಕೈಪಿಡಿ
	೫ನೇ ಇಯತ್ತೆ			
೧	ಶಂಕರಯ್ಯಾ ಬಸಯ್ಯಾ ಕಿತ್ತೂರ ...	ಕರ್ಜಗಿ	೧	ರೇಶಮೊ ಅಂಚಿನಳುಪಣ್ಣಿ
೨	ಬಸಪ್ಪಾ ಫಕೀರಪ್ಪಾ ಮಲಿಗವಾಡ ...	ಶಿವಳ್ಳಿ	೨	ಜೋತಿಕೃತಲರೋಗ್ಯಶಾಸ್ತ್ರ
೩	ಫಕೀರಾ ದುರಗಪ್ಪಾ ಚವಕಿ ...	ರೋಣ	೧	ರೇಶಮೊ ಅಂಚಿನಳುಪಣ್ಣಿ
೪	ಬಸವಣ್ಣಾ ಫಕೀರಪ್ಪಾ ಸನಾದಿ ...	ಹುಬ್ಬಳ್ಳಿ ಕನ್ನಡ ೨ನೇ	೨	ಜೋತಿಕೃತಲರೋಗ್ಯಶಾಸ್ತ್ರ
೫	ದಾವಲ ವ॥ ಮದಾರಸಾಹೇಬ ದೇಸಾಯಿ ...	ಮುಳಗುಂದ ಕ. ಶಾ ನ. ೧	೧	ರೇಶಮೊ ಅಂಚಿನಳುಪಣ್ಣಿ
೬	ಇಮಾಮ ವ॥ ಹಜರತಸಾಹೇಬ ...	ಹಾಂಸಭಾವಿ	೨	ಕೈಪಿಡಿ

	ಹೆಣ್ಣು ಹುಡುಗರು				
೧	ಮದಾರಬಿ ತಂದಿ ಬಾಣಜಿಸಾಹೇಬ	...	ರೋಣ ಹೆಣ್ಣು ಹುಡುಗರ ಶಾಲೆ	೧	ಜರದ ಖಣ್ಣಾ
೨	ಗಂಗಾಬಾಯಿ ತಂದಿ ಕೃಷ್ಣಸಾ ಮಿ ಳನೇ ಇಯತ್ತೆ	....	ಸದರ	೨	ರೇಶಮೊ ಅಂಚಿನ ಖಣ್ಣಾ
೧	ಕರಬಶ್ಯಾ ಪರವ್ವಾ ಖಾಸಾಪೂರ	...	ಶಹಾಪುರಪೇಠ ಸ್ಕೂಲ ಗದಗ	೧	ರೇಶಮೊ ಅಂಚಿನಉಪರ್ಣಿ
೨	ವೆಂಕಟೇಶ ಹನುಮಂತಾಚಾರ್ಯ ಕುಂಬಾರ ಗೇರಿ	...	ತಿಗ್ಗಾಂವ ಕನ್ನಡು ಗಂಡು ಹುಡುಗರ ಶಾಲೆ	೨	ವೇಣೀಸಂಹಾರ ನಾಟಕ
೩	ಭೀಮಾ ತಾಯಿ ಡ್ಯಾವವ್ವಾ ಹುನಗುಂದ	...	ರೋಣ ಗಂಡು ಹುಡುಗರ ಶಾಲೆ	೧	ರೇಶಮೊ ಅಂಚಿನಉಪರ್ಣಿ
೪	ಕೃಷ್ಣ ಗೋವಿಂದವ್ವಾ ದಾಸರ	...	ಅಗಡಿ	೨	ವೇಣೀಸಂಹಾರ ನಾಟಕ
೫	ಹುಶೇನ ವ॥ ಮಖ್ತುಮಸಾಹೇಬ ಪಿಂಜಾರ	...	ಅದರಗುಂಚಿ	೧	ರೇಶಮೊ ಅಂಚಿನಉಪರ್ಣಿ
೬	ವಿಠಾಸಾ॥ ರಾಜಸಾ॥ ಮುಣಿಗಾರ	...	ಹುಬ್ಬಳ್ಳಿ ನಂಬರು ೨	೨	ಮೃಛಕಟಿಕ
	ಹೆಣ್ಣು ಹುಡುಗರು				
೧	ಲಕ್ಷ್ಮವ್ವಾ ತಂದಿ ರಾಜಪ್ಪಾ ಅಗಸರ	...	ಅಣ್ಣಿಗೇರಿ ಹೆಣ್ಣು ಹುಡುಗರ ಶಾಲೆ	೧	ಜರದ ಅಂಚಿನ ಖಣ್ಣಾ
೨	ಶುಂಗವ್ವಾ ತಂದಿ ನರಸಿಂಹಆಚಾರ್ಯ ಕುಂದಗೋಳ	...	ಗುತ್ತಲ ಗಂಡು ಹುಡುಗರ ಶಾಲೆ	೨	ರೇಶಮೊ ಅಂಚಿನಖಣ್ಣಾ

	೫ನೇ ಇಯತ್ತ				
೧	ಗುಂಡೋ ಗುರಾಚಾರ್ಯ ಇಟ್ಟಗಿ	...	ಹಾವೇರಿ ಕನ್ನಡು ಗಂಡು ಹುಡುಗರ ಶಾಲೆ	೧	ರೇಶಮಿ ಅಂಚಿನಉಪಣ್ಣಿ
೨	ಗದಗಯ್ಯಾ ಮುರಗಯ್ಯಾ ಮಟಪತಿ	...	ಹೆಬ್ಬಳ್ಳಿ	೨	ಮಾಲವಿಕಾಗ್ನಿಮಿತ್ರ
೩	ಬಸಪ್ಪಾ ಯಲ್ಲಪ್ಪಾ ಮಚ್ಚಿಗಾರ	...	ಹಿರೆಬೆಂಡಿಗೇರಿ	೧	ರುಮಾಲ
೪	ಲಿಂಗಪ್ಪಾ ಹನಮಪ್ಪಾ ಕಾಳಿ	...	ಸದರ	೨	ಮಾಲವಿಕಾಗ್ನಿಮಿತ್ರ
೫	ಅಬ್ದುಲ್ ವ॥ ಇಮಾಮಸಾ॥ ಹರಿಹರ	...	ಹಿರೇಕೇರೂರ	೧	ಉಪಣ್ಣಿ
೬	ಫಕೀರಾ ವ॥ ಹುಶೇನಸಾಹೇಬ ಪಿಂಜಾರ	...	ರೋಣ	೨	ಮಾಲವಿಕಾಗ್ನಿಮಿತ್ರ
	ಹೆಣ್ಣು ಹುಡುಗರು				
೧	ಯಮನಪ್ಪಾ ತಂದಿ ಈಮ್ಮಪ್ಪಾ ಬೆಲಾರ	...	ಅಣ್ಣಿಗೇರಿ ಹೆಣ್ಣು ಹುಡುಗರ ಶಾಲೆ	೧	ರೇಶಮಿ ಅಂಚಿನ ಖಣಾ
೨	ರಾಜವ್ವಾ ತಂದಿ ರಾಚಯ್ಯಾ ಗಂಟಿಮಠ	...	ರೋಣ ಹೆಣ್ಣು ಹುಡುಗರ ಶಾಲೆ	೨	ಸದರ
	೨ನೇ ಇಯತ್ತೆ				
೧	ಶಂಕರ ಮಲ್ಲಪ್ಪಾ ಧಾರವಾಡ	...	ಹೆಬ್ಬಳ್ಳಿ	೧	ಉಪಣ್ಣಿ
೨	ಶಂಕರ ಶಂಭುರಾವ ಅನಿಬಿಂಡಿ	...	ಹುಬ್ಬಳ್ಳಿ ಶಾಲೆ ನಂ. ೨	೨	ಉತ್ತರರಾಮಚರಿತ್ರ
೩	ವಾಸುದೇವ ಮಂಜಪ್ಪಾ ತಿಂಪಿ	...	ಹಿರೇಕೆರೂರ	೧	ರುಮಾಲ
೪	ಗುರುಶಾಂತ ಹಳಬಪಪ್ಪಾ	...	ಹೊಸರಿತ್ತಿ	೨	ಉತ್ತರರಾಮಚರಿತ್ರ
೫	ಅಬ್ದುಲ್‌ನಬಿ ವ॥ ಹೈದರಸಾ॥ ಧಾರವಾಡ	...	ನರೇಗಲ್ಲ-(ರೋಣ)	೧	ಉಪಣ್ಣಿ
೬	ಮದಾರ ವ॥ ಹುಶೇನಸಾ॥ ಕುಂದಗೋಳ	...	ದೇವಿಹೊಸೂರ	೨	ಮಾಲವಿಕಾಗ್ನಿಮಿತ್ರ

ಧಾರವಾಡ.
ತಾ॥ ೨೭-೨-೧೯೧೧

R. A. Savanur.
ಡಿ. ಎ. ಇನ್‌ಸ್ಪೆಕ್ಟರ ಜಿ. ಧಾರವಾಡ.

CORRESPONDENCE.

ಪತ್ರವ್ಯವಹಾರ.

ರಾವಸಾಹೇಬ ಈನ್ನಡ ಶಾಳಾಪತ್ರಕದ ಎಡಿಟರ ಧಾರವಾಡ ಗುರುಗಳವರ ಸನ್ನಿಧಿಗೆ—

ಗದಗ ಗರ್ಲಸ್ಕೂಲ ಹೆಡ್ ಮಿಸ್ತ್ರೆಸ್‌ಳಾದ ರಾಜಕವ್ವ ಕೋಂ ಶಿಂ ಹೊಸಮಠ ನಾನು ಮಾಡುವ ವಿನಯು ವಿಜ್ಞಾಪನೆಗಳು:—

ಈಗ ತಮ್ಮಿಡೆಗೆ ಈ ವಿನಂತಿ ಸೂಚಕ ಲೇಖನವನ್ನು ಬರೆದ ಅಂದವೇನೆಂದರೆ:—ಕೈಲಾದಮಟ್ಟಿಗೆ ಪ್ರಿಯ ಮಾತೃ ಭಾಷಾ ಸೇವೆಯನ್ನು ಮಾಡಲೋಸುಗವಾಗಿಯೂ, ಯನ್ನ ಭಗಿನಿಗಳಾದ ಸ್ತ್ರೀ ಜನರ ಹಿತಾಪೇಕ್ಷೆಯಾಗಿಯೂ, ಹಲ ಕೆಲವು ಉಪಯುಕ್ತ ವಿಷಯುಗಳ ಮೇಲೆ ನಿಬಂಧ ಮುಂತಾದವುಗಳನ್ನು ಎನ್ನ ಮಂದಮತಿಗೆ ಬಂದನಿತು ತಮ್ಮ ಅಶೀರ್ವಾದ ಬಲದಿಂದ ಬರೆದು, ಮಾಸಿಕ ಪುಸ್ತಕ ಮೊದಲಾದ ಪುಗಳ ಮುಖಾಂತರವಾಗಿ ಜ್ಞಾಲಗೆ ಹಾಕುವ ಉದ್ದೇಶದಿಂದ ಈಗ ತಮ್ಮ ಸನ್ನಿಧಿಗೆ ಕೆಳಗೆ ಬರೆದ ನಿಬಂಧವನ್ನು ಕಳುಹಿಸಿಕೊಟ್ಟಿರುವೆನು. ತಮ್ಮ ಇರಕುಂಜಾತ ಸಂಜಾತ ಮುಂ ಬಾಳತರ ಮಹಜಪತ್ರಿಕಾ ಮಧ್ಯದಲ್ಲಿ ಅದಕ್ಕೆ ಕುಂದಿನಿತು ಇಂಬನ್ನು ಇದೇ ಲಿಂಗಳಲ್ಲಿ ಕೊಟ್ಟಾರೆಂದು ಪ್ರಾರ್ಥಿಸುತ್ತೇನೆ.

ಗೃಹಿಣಿಯು.

(ಮನೆಯೊಡೆಯಳು.)

ಸ್ತ್ರೀಯರ ಪೆರ್ಮನವು.

ಈ ಜಗತ್ತಿನಲ್ಲಿ ನಮ್ಮ ಪೂರ್ವಜರಿಂದ ವಿಧಿಸಲ್ಪಟ್ಟ ನಾಲ್ಕು ಆಶ್ರಮುಗಳಲ್ಲಿ ಗೃಹಸ್ಥಾಶ್ರಮವೇ ಮೇಲಾದದ್ದೂ, ಪರಮ ಪಾಪಿಗಳಾದವರನ್ನೂ ಉಳಿಸುತ್ತದೆನ್ನಲು ಅಡ್ಡಿಯಿಲ್ಲ. ಪುರುಷನು ಮನೆಯಲ್ಲಿರುವದರಿಂದ ಅವನಿಗೆ ಗೃಹಸ್ಥನೆಂತಲೂ, ಸ್ತ್ರೀಯು ಅವನ ಪತ್ನಿಯಾಗಿ ಮನೆಯ ಒಡೆಯತನವನ್ನು ನಡಿಸುವದರಿಂದ ಅಕೆಗೆ ಗೃಹಿಣಿಯೆಂತಲೂ ಹೆಸರುಗಳು

ಬಂದವೆ. ಈ ಪ್ರಪಂಚದಲ್ಲಿ ಪರರಿಗೆ ಉಪಕಾರ ಮಾಡುವ ಕೆಲಸವೇ ಪುಣ್ಯಕರವಾದದ್ದೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಮದುವೆಯಾದ ಬಳಿಕ ಗಂಡಹೆಂಡರು ಪರಸ್ಪರ ಪ್ರೀತಿಯಿಂದಲೂ ವಿವೇಕದಿಂದಲೂ ನಡಕೊಂಡು ಸಂಸಾರಸಾಗರವನ್ನು ದಾಟುವದೇ ಸುವಿಚಾರದ ಕೆಲಸವು ಮತ್ತು ವಿವಾಹವಾದಂದಿನಿಂದ ಆದರದಿಂದಲೂ ಪ್ರೀತಿಯಿಂದಲೂ ತನ್ನ ಗಂಡನಿಗೆ ಸಕಲ ಕಾರ್ಯಗಳಲ್ಲಿ ಸಹಾಯಕಳಾಗಿರುವದೇ ಸ್ತ್ರೀಯ ಮುಖ್ಯ ಲಕ್ಷಣವು. ಈ ಪ್ರಕಾರದಿಂದಿರುವಾಕೆಗೇ ಗೃಹಿಣಿ ಎಂಬ ಬಹುಮಾನದ ಪದವಿಯು ಸಲ್ಲಬಹುದು. ಈ ಪದವಿಯನ್ನು ಹೊಂದಬೇಕಾದರೆ ಬಹಳೇ ಶ್ರಮ ಮಾಡಬೇಕಾಗುವದು ಸ್ತ್ರೀಯರು ಆಲಸ್ಯವೆಂಬ ಶತ್ರುವನ್ನು ಹೊಡೆದೋಡಿಸಿ, ತಮ್ಮ ಗುರುಹಿರಿಯರು ಮುಂತಾದವರ ಸಂಗಡ ಯಾವಾಗಲೂ ವಿಧೇಯತ್ವದಿಂದಲೂ, ಪ್ರೇಮದಿಂದಲೂ, ಆದರದಿಂದಲೂ ನಡಕೊಳ್ಳಬೇಕು. ಸತತ ಸದುದ್ಯೋಗಿಗಳಾಗಿರಬೇಕಾದರೆ ಕೆಳಗೆ ಬರೆದ ಕೆಲವು ಗುಣಗಳನ್ನು ಅವರು ಹಿಂದಕ್ಕೆ ಮಾಡಬೇಕಾಗುವದು. ಅವು ಯಾವವೆಂದರೆ–ಅಹಂಕಾರ, ಸಿಟ್ಟು, ಹಗೆತನ, ಕೊಲ್ಲುವಿಕೆ, ಹಿಂದಾಡಿಕೊಳ್ಳುವಿಕೆ, ಮೋಸ, ಸುಳ್ಳು, ಹೆಮ್ಮೆ, ಅನಿಯಮಿತತ್ವದ ಆಚರಣೆ, ಇವು ಮುಂತಾದ ದುರ್ಗುಣಗಳು. ಇವುಗಳಿಗೆ ಎಳ್ಳಷ್ಟಾದರೂ ಅವಕಾಶವನ್ನು ಕೊಡದೆ, ಇರುವದೇ ಹೆಂಗಸರ ಮುಖ್ಯ ಲಕ್ಷಣವಾಗಿದೆ.

ಸ್ತ್ರೀಯರು ಆಯಾ ಕಾಲಕ್ಕೆ ಮಾಡತಕ್ಕ ಕೆಲಸಗಳನ್ನು ಸರಿಯಾದ ಹೊತ್ತಿನಲ್ಲಿ ಮಾಡುವ ಅಭ್ಯಾಸವನ್ನಿಟ್ಟರೆ, ಅವರ ಶರೀರಗಳು ನಿರೋಗವಾಗಿಯೂ ಮನಸ್ಸು ಶಾಂತವಾಗಿಯೂ ನಿರ್ಮಲವಾಗಿಯೂ ಇರುವದಲ್ಲದೆ ಅವರಿಗೆ ಕೆಲಸ ಮಾಡಲಿಕ್ಕೆ ಉತ್ಸಾಹವೂ ಧೈರ್ಯವೂ ಹುಟ್ಟುವವು ಇದಲ್ಲದೆ ತಮ್ಮ ಮಕ್ಕಳ ಆರೋಗ್ಯವನ್ನೂ ನೀತಿಯನ್ನೂ ಸುಧಾರಿಸಲಿಕ್ಕೆ ಅನುಕೂಲವಾಗುವದು. ಇಂಥ ಪ್ರಸಂಗದಲ್ಲಿ ಸರ್ವರ ರಕ್ಷಣ್ಯಕರ್ತನಾಗಿಯೂ, ಜಗತ್ಪತಿಯಾಗಿಯೂ ಇರುವ ಪರಮೇಶ್ವರನ ಭಜನೆಯನ್ನು ಭಕ್ತಿಪೂರ್ವಕವಾಗಿ

ಮಾಡುವದಲ್ಲದೆ ಏಕಾಗ್ರಚಿತ್ತದಿಂದ ಆತನಲ್ಲಿ ನಿಮ್ಮ ಆತ್ಮ ಸಮರ್ಪಣ ಮಾಡಿ, ನೀವು ಮಾಡಿದಂಥ ಪಾಪಗಳಿಗೆ ಅತಿ ಪ್ರೇಮದಿಂದಲೂ ನಮ್ರತೆಯಿಂದಲೂ ಕ್ಷಮೆಯನ್ನು ಬೇಡಿ ಕೊಳ್ಳತಕ್ಕದ್ದು. ಇದೇ ಪ್ರಕಾರ ಸ್ತ್ರೀಯರು ತಮ್ಮ ಗಂಡಂದಿರ ಅಪ್ಪಣೆಗೆ ಅನುಸರಿಸಿ ನಡಿಯುವದೇ ಅವರ ಮೇಲಾದ ಸ್ತ್ರೀಧರ್ಮವಾಗಿದೆ.

ಪ್ರಪಂಚದಲ್ಲಿ ತೊಡಗಿದ ಮೇಲೆ ಇದನ್ನು ಮಾಡಬೇಕು, ಅದನ್ನು ಮಾಡಬಾರದು ಎಂಬ ಭೇದವನ್ನು ತಿಳಿದು ನಿಶ್ಚೈಸಿ ಕೊಂಡು ಆತ್ಮಸಂಯಮನವನ್ನು ಮಾಡಬೇಕು. ಈ ಗುಣವು ಸಂಸಾರಿಗಳಲ್ಲಿ ಅತ್ಯವಶ್ಯವಾಗಿ ಇರತಕ್ಕದ್ದು. ಯಾಕಂದರೆ ಒಂದಾನೊಂದು ಕೆಲಸವನ್ನು ಮಾಡಲಿಕ್ಕೆ ಆರಂಭಿಸಿ, ಅದರಲ್ಲಿ ನಡುವೆ ತುಸು ವಿಘ್ನವು ಬರಲು ಅದನ್ನು ಅಲ್ಲಿಯೇ ಕೈಬಿಟ್ಟು ಕೂತುಬಿಡುತ್ತಾರೆ. ಆದರೆ ಹೀಗೆ ಮಾಡದೆ ಆಲಸ್ಯವನ್ನು ಬಿಟ್ಟು ಅದನ್ನು ಕೈಕೊಂಡು ಆತ್ಮಸಂಯಮನದಿಂದ ಮಾಡುವದೇ ಲೇಸಾದ ಉಪಾಯವು. ಆದರೂ ಸ್ತ್ರೀಯರು ಸ್ವಬುದ್ಧಿಯಿಂದ ನಡಿಯಬಾರದು. ಯಾಕಂದರೆ ಒಂದು ಹೊಸ ಕೆಲಸವನ್ನು ಮಾಡುವ ಪ್ರಸಂಗ ಬಿದ್ದಲ್ಲಿ, ಅದನ್ನು ತಿಳುಕೊಳ್ಳಲಿಕ್ಕೆ ಬಲ್ಲವರ ಬಳಿಗೆ ಹೋಗಲೇಬೇಕಾಗುವದು. ಒಂದು ಪಕ್ಷದಲ್ಲಿ ಹಾಗೇ ಮಾಡದಿದ್ದರೆ ಅದು ಕೆಟ್ಟುಹೋಗುವದು. ಕೆಲವರು ಎರಡನೆಯವರಲ್ಲಿ ಕೇಳಲಿಕ್ಕೆ ಹೋದರೆ ತಮಗೆ ಅಪಮಾನವಾಗುವದೆಂದು ತಿಳಿಯುತ್ತಾರೆ ಹೀಗೆ ತಿಳಿಯುವದು ತಪ್ಪುಂಟು.

ಸ್ತ್ರೀಯರು ಮುಂಜಾನೆ ಬೇಗನೇ ಎದ್ದು, ಕಸ ತೆಗೆಯೋಣ ಮೊದಲಾದ ತಮ್ಮ ನಿತ್ಯದ ಕೆಲಸಗಳನ್ನೆಲ್ಲ ಜಾಗ್ರತೆಯಿಂದಲೂ ಜಾಣತನದಿಂದಲೂ ಕಡೆಗಾಣಿಸಬೇಕು. ಹಾಗೂ ತಮ್ಮ ಕೈಕೆಳಗಿನ ಜನರನ್ನು ಪ್ರೀತಿಯಿಂದ ನಡಿಸಿಕೊಂಡು ಅವರಲ್ಲಿ ಹುರುಪು ಹುಟ್ಟಿಸಿ, ಸಂತೋಷದಿಂದಲೇ ಅವರಿಂದ ಹೆಚ್ಚಿಗೆ ಕೆಲಸ ತಕ್ಕೊಳ್ಳಬೇಕು. ಹೀಗೆ ಮಾಡುವದರಿಂದ ತಮಗೂ ತಮ್ಮ ಮಕ್ಕಳಿಗೂ ಗಂಡಂದಿರಿಗೂ ಬಳಗದವರಿಗೂ ಹಿತವಾಗುವದಲ್ಲದೆ ಆರೋಗ್ಯವನ್ನು ಕಾ

ಬಂದವೆ. ಈ ಪ್ರಪಂಚದಲ್ಲಿ ಪರರಿಗೆ ಉಪಕಾರ ಮಾಡುವ ಕೆಲಸವೇ ಪುಣ್ಯಕರವಾದದ್ದೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಮದುವೆಯಾದ ಬಳಿಕ ಗಂಡಹೆಂಡರು ಪರಸ್ಪರ ಪ್ರೀತಿಯಿಂದಲೂ ವಿವೇಕದಿಂದಲೂ ನಡಕೊಂಡು ಸಂಸಾರಸಾಗರವನ್ನು ದಾಟುವದೇ ಸುವಿಚಾರದ ಕೆಲಸವು ಮತ್ತು ವಿವಾಹವಾದಂದಿನಿಂದ ಆದರದಿಂದಲೂ ಪ್ರೀತಿಯಿಂದಲೂ ತನ್ನ ಗಂಡನಿಗೆ ಸಕಲ ಕಾರ್ಯಗಳಲ್ಲಿ ಸಹಾಯಕಳಾಗಿರುವದೇ ಸ್ತ್ರೀಯ ಮುಖ್ಯ ಲಕ್ಷಣವು. ಈ ಪ್ರಕಾರದಿಂದಿರುವಾಕೆಗೇ ಗೃಹಿಣಿ ಎಂಬ ಬಹುಮಾನದ ಪದವಿಯು ಸಲ್ಲಬಹುದು ಈ ಪದವಿಯನ್ನು ಹೊಂದಬೇಕಾದರೆ ಬಹಳೇ ಶ್ರಮ ಮಾಡಬೇಕಾಗುವದು ಸ್ತ್ರೀಯರು ಆಲಸ್ಯವೆಂಬ ಶತ್ರುವನ್ನು ಹೊಡೆದೋಡಿಸಿ, ತಮ್ಮ ಗುರುಹಿರಿಯರು ಮುಂತಾದವರ ಸಂಗಡ ಯಾವಾಗಲೂ ವಿಧೇಯತ್ವದಿಂದಲೂ, ಪ್ರೇಮದಿಂದಲೂ, ಆದರದಿಂದಲೂ ನಡಕೊಳ್ಳಬೇಕು. ಸತತ ಸದುದ್ಯೋಗಿಗಳಾಗಿರಬೇಕಾದರೆ ಕೆಳಗೆ ಬರೆದ ಕೆಲವು ಗುಣಗಳನ್ನು ಅವರು ಹಿಂದಕ್ಕೆ ಮಾಡಬೇಕಾಗುವದು. ಅವು ಯಾವವೆಂದರೆ–ಅಹಂಕಾರ, ಸಿಟ್ಟು, ಹಗೆತನ, ಕೊಲ್ಲುವಿಕೆ, ಹಿಂದಾಡಿಕೊಳ್ಳುವಿಕೆ, ವೋಸ, ಸುಳ್ಳು, ಹೆಮ್ಮೆ, ಅನಿಯಮಿತತ್ವದ ಆಚರಣೆ, ಇವು ಮುಂತಾದ ದುರ್ಗುಣಗಳು. ಇವುಗಳಿಗೆ ಎಳ್ಳಷ್ಟಾದರೂ ಅವಕಾಶವನ್ನು ಕೊಡದೆ, ಇರುವದೇ ಹೆಂಗಸರ ಮುಖ್ಯ ಲಕ್ಷಣವಾಗಿದೆ.

ಸ್ತ್ರೀಯರು ಆಯಾ ಕಾಲಕ್ಕೆ ಮಾಡತಕ್ಕ ಕೆಲಸಗಳನ್ನು ಸರಿಯಾದ ಹೊತ್ತಿನಲ್ಲಿ ಮಾಡುವ ಅಭ್ಯಾಸವನ್ನಿಟ್ಟರೆ, ಅವರ ಶರೀರಗಳು ನಿರೋಗವಾಗಿಯೂ ಮನಸ್ಸು ಶಾಂತವಾಗಿಯೂ ನಿರ್ಮಲವಾಗಿಯೂ ಇರುವದಲ್ಲದೆ ಅವರಿಗೆ ಕೆಲಸ ಮಾಡಲಿಕ್ಕೆ ಉತ್ಸಾಹವೂ ಧೈರ್ಯವೂ ಹುಟ್ಟುವವು ಇದಲ್ಲದೆ ತಮ್ಮ ಮಕ್ಕಳ ಆರೋಗ್ಯವನ್ನೂ ನೀತಿಯನ್ನೂ ಸುಧಾರಿಸಲಿಕ್ಕೆ ಅನುಕೂಲವಾಗುವದು. ಇಂಥ ಪ್ರಸಂಗದಲ್ಲಿ ಸರ್ವರ ರಕ್ಷಣ್ಯಕರ್ತನಾಗಿಯೂ, ಜಗತ್ಪತಿಯಾಗಿಯೂ ಇರುವ ಪರಮೇಶ್ವರನ ಭಜನೆಯನ್ನು ಭಕ್ತಿಪೂರ್ವಕವಾಗಿ

ಮಾಡುವದಲ್ಲದೆ ಏಕಾಗ್ರಚಿತ್ತದಿಂದ ಆತನಲ್ಲಿ ನಿಮ್ಮ ಆತ್ಮ ಸಮರ್ಪಣ ಮಾಡಿ, ನೀವು ಮಾಡಿದಂಥ ಪಾಪಗಳಿಗೆ ಅತಿ ಪ್ರೇಮದಿಂದಲೂ ನಮ್ರತೆಯಿಂದಲೂ ಕ್ಷಮೆಯನ್ನು ಬೇಡಿ ಕೊಳ್ಳತಕ್ಕದ್ದು. ಇದೇ ಪ್ರಕಾರ ಸ್ತ್ರೀಯರು ತಮ್ಮ ಗಂಡಂದಿರ ಅಪ್ಪಣೆಗೆ ಅನುಸರಿಸಿ ನಡಿಯುವದೇ ಅವರ ಮೇಲಾದ ಸ್ತ್ರೀಧರ್ಮವಾಗಿದೆ.

ಪ್ರಪಂಚದಲ್ಲಿ ತೊಡಗಿದ ಮೇಲೆ ಇದನ್ನು ಮಾಡಬೇಕು, ಅದನ್ನು ಮಾಡಬಾರದು ಎಂಬ ಭೇದವನ್ನು ತಿಳಿದು ನಿಶ್ಚೈಸಿ ಕೊಂಡು ಆತ್ಮಸಂಯಮನವನ್ನು ಮಾಡಬೇಕು. ಈ ಗುಣವು ಸಂಸಾರಿಗಳಲ್ಲಿ ಅತ್ಯವಶ್ಯವಾಗಿ ಇರತಕ್ಕದ್ದು. ಯಾಕಂದರೆ ಒಂದಾನೊಂದು ಕೆಲಸವನ್ನು ಮಾಡಲಿಕ್ಕೆ ಆರಂಭಿಸಿ, ಅದರಲ್ಲಿ ನಡುವೆ ತುಸು ವಿಘ್ನವು ಬರಲು ಅದನ್ನು ಅಲ್ಲಿಯೇ ಕೈಬಿಟ್ಟು ಕೂತುಬಿಡುತ್ತಾರೆ. ಆದರೆ ಹೀಗೆ ಮಾಡದೆ ಆಲಸ್ಯವನ್ನು ಬಿಟ್ಟು ಅದನ್ನು ಕೈಕೊಂಡು ಆತ್ಮಸಂಯಮನದಿಂದ ಮಾಡುವದೇ ಲೇಸಾದ ಉಪಾಯವು. ಆದರೂ ಸ್ತ್ರೀಯರು ಸ್ವಬುದ್ಧಿಯಿಂದ ನಡಿಯಬಾರದು. ಯಾಕಂದರೆ ಒಂದು ಹೊಸ ಕೆಲಸವನ್ನು ಮಾಡುವ ಪ್ರಸಂಗ ಬಿದ್ದಲ್ಲಿ, ಅದನ್ನು ತಿಳುಕೊಳ್ಳಲಿಕ್ಕೆ ಬಲ್ಲವರ ಬಳಿಗೆ ಹೋಗಲೇಬೇಕಾಗುವದು. ಒಂದು ಪಕ್ಷದಲ್ಲಿ ಹಾಗೇ ಮಾಡದಿದ್ದರೆ ಅದು ಕೆಟ್ಟುಹೋಗುವದು. ಕೆಲವರು ಎರಡನೆಯವರಲ್ಲಿ ಕೇಳಲಿಕ್ಕೆ ಹೋದರೆ ತಮಗೆ ಅಪಮಾನವಾಗುವದೆಂದು ತಿಳಿಯುತ್ತಾರೆ ಹೀಗೆ ತಿಳಿಯುವದು ತಪ್ಪುಂಟು.

ಸ್ತ್ರೀಯರು ಮುಂಜಾನೆ ಬೇಗನೇ ಎದ್ದು, ಕಸ ತೆಗೆಯೋಣ ಮೊದಲಾದ ತಮ್ಮ ನಿತ್ಯದ ಕೆಲಸಗಳನ್ನೆಲ್ಲ ಜಾಗ್ರತೆಯಿಂದಲೂ ಜಾಣತನದಿಂದಲೂ ಕಡೆಗಾಣಿಸಬೇಕು. ಹಾಗೂ ತಮ್ಮ ಕೈಕೆಳಗಿನ ಜನರನ್ನು ಪ್ರೀತಿಯಿಂದ ನಡಿಸಿಕೊಂಡು ಅವರಲ್ಲಿ ಹುರುಪು ಹುಟ್ಟಿಸಿ, ಸಂತೋಷದಿಂದಲೇ ಅವರಿಂದ ಹೆಚ್ಚಿಗೆ ಕೆಲಸ ತಕ್ಕೊಳ್ಳಬೇಕು. ಹೀಗೆ ಮಾಡುವದರಿಂದ ತಮಗೂ ತಮ್ಮ ಮಕ್ಕಳಿಗೂ ಗಂಡಂದಿರಿಗೂ ಬಳಗದವರಿಗೂ ಹಿತವಾಗುವದಲ್ಲದೆ ಆರೋಗ್ಯವನ್ನು ಕಾ

[illegible]

ಪ್ಪಾಡಲ್ಲನುಕೂಲವಾದಷ್ಟು ಶಕ್ತಿ ಕೂಡಾ ಬರುವದು. ಸ್ತ್ರೀಯರು ಸದಾಕಾಲದಲ್ಲಿ ಮನೆಯಲ್ಲಿ ಇರುವದರಿಂದ ಹೀಗೆ ಮಾಡುತ್ತ ಹೋಗುವದು ಬಹು ಲೇಸುಂಟು. ಇವರಂತೆ ಗಂಡಸರು ಮನೆಯಲ್ಲಿ ಯಾವಾಗಲೂ ಇರುವದಿಲ್ಲ. ಆದಕಾರಣ ಈ ಹೆಣ್ಮಣಿಗಳೇ ಆ ಕೆಲಸಕ್ಕೆ ಮುಖ್ಯಸ್ಥರಾಗಿಯೂ ಅಧಿಪತಿಗಳಾಗಿಯೂ ಇರುವರೆಂಬದಕ್ಕೆ ಏನೂ ಅಡ್ಡಿ ತೋರುವದಿಲ್ಲ. ಇವರು ಎಲ್ಲ ತರದ ತಮ್ಮ ಕೆಲಸಗಳನ್ನು ವಿವೇಕದಿಂದ ಸರಿಯಾಗಿ ಮಾಡುತ್ತ ಹೋದಲ್ಲಿ 'ಗೃಹಿಣಿ' ಎಂಬ ಯೋಗ್ಯವಾದ ಪದವಿಯನ್ನು ಹೊಂದಲಿಕ್ಕೆ ಅಡ್ಡಿಯಿಲ್ಲ. ಇದಲ್ಲದೆ ಅಯೋಗ್ಯವಾದ ಕೆಲಸಗಳನ್ನು ಬಿಟ್ಟು, ಯೋಗ್ಯವಾದವನ್ನು ಕೈಕೊಂಡು ಮಾಡುವದರಿಂದ ಅವರು ದಯಾಳುವಿತರೂ ಆರೋಗ್ಯೋತ್ಸಾಹಗಳುಳ್ಳವರೂ ಮುಮತೆಯುಳ್ಳವರೂ ಆಗುವರು.

ತನ್ನ ಪತಿಗೆ ಏನಾದರೊಂದು ಜೀನೆ ಬಂದೊದಗಿದರೆ ಅನಾದರ ಮಾಡದೆ ಆತನ ಆಜ್ಞಾನುಸಾರವಾಗಿ ನಡಿಯುತ್ತ ಪ್ರೀತಿಯಿಂದಲೂ ಭಕ್ತಿಯಿಂದಲೂ ಆಸ್ಥೆಯಿಂದ ಆತನ ಶುಶ್ರೂಷೆಯನ್ನು ಮಾಡಿದವಳು ಮಾತ್ರ ಮನೆಯ 'ಒಡತಿ' ಎಂಬ ಬಿರುದನ್ನು ಏನೂ ಸಂಶಯವಿಲ್ಲದೆ ಪಡಿಯಬಹುದು. ಹಾಗು ಇಷ್ಟೇ ಮಾಡಿದರೆ ತೀರಲಿಲ್ಲ. ಆರೋಗ್ಯದ ಕೆಲವು ಸಂಗತಿಗಳು ಅಂದರೆ ಶುದ್ಧವಾದ ಹವೆ, ನಿರ್ಮಲವಾದ ನೀರು, ಸಮರ್ಪಕವಾದ ಆಹಾರ, ಸ್ವಚ್ಛತೆ, ಪ್ರಕಾಶ, ಪ್ರಾವರಣ, ವ್ಯಾಯಾಮ, ನಿದ್ರೆ, ಸ್ವಸ್ಥತೆ ಮುಂತಾದವುಗಳನ್ನು ಕುರಿತು ತಕ್ಕಷ್ಟು ತಿಳಿದಿರಬೇಕು. ಕೆಲವು ವಿಷಯಗಳು ತಿಳಿಯದೆ ಹೋದಲ್ಲಿ ಎದನೇಯವರನ್ನು ಕೇಳಿ ಅವರ ಮಾತುವಿಕಾಸನ್ನು ನೋಡಿ ತನ್ನ ಸ್ವಂತ ಪ್ರಯತ್ನದಿಂದ ಕೆಲಮುಖ್ಯಗಳನ್ನು ತಿಳಿದುಕೊಂಡು ತನ್ನ ಕುಟುಂಬದವರ ರಕ್ಷಣೆಗೆ ತಕ್ಕವಳನಿಸಿಕೊಳ್ಳಬೇಕು.

(ಸಶೇಷ)

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ವಿದ್ಯಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕರಂ ಸಚ್ಛಿಷ್ಟಸೋತ್ಕರ್ಷಮುಂ
ಜಯಸುತ್ತಂ ಪ್ರತಿಮಾಸದಿಗೊಲವಿಂದೀಪತ್ರಮುಂ ಮುದ್ರಿಸಿ ॥
ಸಯದಿಂದಿತ್ತವೆಪ್ರೋದಯರ್ಗೆಸುಗುಣಂ ತೋರಲ್ಕೆ ಕೈಕೊಂಬುದೈ।
ಜಯಮಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರಿ ॥೧

ಪುಸ್ತಕ ೩೭] ಅಕ್ಟೋಬರ ೧೯೦೧. [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈ ಇಲಾಖೆಯಲ್ಲಿ ವೈದ್ಯಕಶಾಸ್ತ್ರವನ್ನು ಕಲಿಸುವ ಕಾಲೇಜವೂ ಇಂಜಿನಿಯರಿಂಗ ಅಂದರೆ ಶಿಲ್ಪಕಲೆಯನ್ನು ಕಲಿಸುವ ಕಾಲೇಜವೂ ಉಂಟು. ಆದರೆ ಇವುಗಳಲ್ಲಿ ಕಲಿತವರ ಜ್ಞಾನವು ಏಕದೇಶೀಯವಾದ್ದರಿಂದ ಕೆಲವು ಪ್ರಸಂಗದಲ್ಲಿ ಅವರಿಂದ ತಕ್ಕಷ್ಟು ಪ್ರಯೋಜನವಾಗುವದಿಲ್ಲ. ಶಿಲ್ಪಶಾಸ್ತ್ರ ಬಲ್ಲವರಿಗೆ ಆರೋಗ್ಯಸಂರಕ್ಷಣದ ಜ್ಞಾನವು ಇಲ್ಲದಿರುವದರಿಂದ ಅವರಿಂದ ಆಗತಕ್ಕಷ್ಟು ಪ್ರಯೋಜನವು ಆಗುವದಿಲ್ಲ. ಈ ಕೊರತೆಯನ್ನು ದೂರ ಮಾಡುವದಕ್ಕಾಗಿ ಸ್ಯಾನಿಟರಿ ಇಂಜಿನಿಯರಿಂಗ ಎಂಬ ವಿಷಯವನ್ನು ಸಾಯನ್ಸ ಅಂದರೆ ಇಂಜಿನಿಯರಿಂಗ ಕಾಲೇಜದಲ್ಲಿ ಕಲಿಸುವ ಆಲೋಚನೆಯು ನಡೆದದೆ. ಈ ಸಂಬಂಧದಿಂದ ಒಂದು ಕಮಿಟಿಯನ್ನು ಸರಕಾರದವರು ನೇಮಿಸಿರುತ್ತಾರೆ. ಶಾಲಾಖಾತೆಯ ಮೆಜಿಷ್ಟ್ರೇಟರೆಕ್ಟರ ಸಾಹೇಬರವರು ಆ ಕಮಿಟಿಯ ಅಧ್ಯಕ್ಷರೂ ಸ್ಯಾನಿಟರಿ ಕಮಿಷನರ, ಸ್ಯಾನಿಟರಿ ಇಂಜನಿಯರರು ಈ ಕಮಿಟಿಯ ಸಭಾಸದರೂ ಆಗಿರುವರು ಈ ಕಮಿಟಿಯವರು ಆಲೋಚಿಸತಕ್ಕ ಮುಖ್ಯ ಸಂಗತಿಗಳು ಯಾವವೆಂದರೆ:—

(೧) ಅಭ್ಯಾಸಕ್ರಮ, ಅಭ್ಯಾಸಕಾಲ, ವಿಷಯಗಳು.

(೨) ಶಿಕ್ಷಣದ ಪದ್ಧತಿ.

(೩) ಈ ವಿಷಯವನ್ನು ಕಲಿಯಲಿಕ್ಕೆ ಸಾಕಷ್ಟು ವಿದ್ಯಾರ್ಥಿಗಳು ಬರುವಂತೆ ನೇಮಿಸತಕ್ಕ ಸ್ಕಾಲರಷಿಪ್ಪುಗಳೂ ಇನಾಮುಗಳೂ.

(೪) ನೇಮಿಸಿದ ವಿಷಯವನ್ನು ಕಲಿತು ತಯಾರಾದ ವಿದ್ಯಾರ್ಥಿಗಳು ಕೊಡತಕ್ಕ ಪರೀಕ್ಷೆಯೂ, ಅವರಿಗೆ ಕೊಡತಕ್ಕ ಸರಟೀಫಿಕೇಟುಗಳೂ, ಪರೀಕ್ಷಕರೂ.

(೫) ಸರಟೀಫಿಕೇಟು ಪಡೆದಂಥ ಜನರಿಗೆ ಲೋಕಲ್ ಬೋರ್ಡುಗಳಲ್ಲಿಯೂ ಮ್ಯುನಿಸಿಪಾಲಿಟಿಗಳಲ್ಲಿಯೂ ಕೊಡತಕ್ಕ ಸ್ಥಲಗಳೂ ಆ ಸಂಬಂಧದ ನೇಮಗಳೂ.

(೬) ಈ ವ್ಯವಸ್ಥೆಗೆ ಹತ್ತುವ ಖರ್ಚು.

ಈ ಆರು ಸಂಗತಿಗಳನ್ನು ಕುರಿತು ಕಮಿಟಿಯವರು ಮಾಡುವ ರಿಪೋರ್ಟನ್ನು ವಿಚಾರಿಸಿ ತಮ್ಮ ಕೊನೆಯ ಅಭಿಪ್ರಾಯವನ್ನು ಸರಕಾರದವರು ತರುವಮುಖದಿಂದ ಪ್ರಕಟಿಸುವರು.

ಮೈಸೂರ ಸರಕಾರದ ನೇತ್ರಶಾಸ್ತ್ರಪಂಡಿತರಾದ ರಾಮಸ್ವಾಮಿ ಅಯಂಗಾರರೆಂಬವರು ಸದ್ಯದ ಅಭ್ಯಾಸಪದ್ಧತಿಯೂ ಅನುಕೂಲಗಳು ಅವರಿಂದ ವಿದ್ಯಾರ್ಥಿಗಳ ಕಣ್ಣುಗಳ ಮೇಲೆ ಸಂಭವಿಸುವ ಪರಿಣಾಮವೂ ಎಂಬ ವಿಷಯವನ್ನು ಕೈಕೊಂಡು ಆ ಸಂಬಂಧದಿಂದ ಹಿಂದುಸ್ಥಾನವನ್ನೆಲ್ಲ ತಿರುಗಿ ಮೇರೆ ಬೇರೆ ಸ್ಥಳಗಳಲ್ಲಿಯು ಶಾಲಾ ಪಾಠಶಾಲೆಗಳನ್ನು ನೋಡಿ ಬಹು ಬಗೆಯ ಶೋಧಪ್ರಯೋಗಗಳಿಂದಲೂ ವ್ಯಷ್ಟ್ಯಂಕಾನುಭವಗಳಿಂದಲೂ ತನ್ನ ಅಭಿಪ್ರಾಯವನ್ನು ಸ್ಥಿರಪಡಿಸಿ ಒಂದು ರಿಪೋರ್ಟನ್ನು ಪ್ರಕಟಿಸಿರುವರು. ಅವರು ಸದ್ಯದ ಸಾಲಿನ ನೆಗಳೂ, ಅಭ್ಯಾಸದ ಬಗೆಯೂ ದೀಪಗಳೂ ಅವುಗಳನ್ನು ಉಪಯೋಗಿಸುವ ಪ್ರಕಾರಗಳೂ ಪಾಠನದ ಪುಸ್ತಕಗಳೂ ದೋಷಯುಕ್ತವಾಗಿರುವದರಿಂದ ಭಾವೀ ರಾಷ್ಟ್ರನ ದೃಷ್ಟಿ ಸಾಮರ್ಥ್ಯವು ಕುಂದುತ್ತ ನಡೆದಿರುವದೆಂತಲೂ ಸಕಾಲದಲ್ಲಿ ಅದರ ನಿವಾರಣೆ ಮಾಡಲೇಬೇಕೆಂತಲೂ ಸಾರಿ ಹೇಳುವರು.

ನೆಮ್ಮ ವಿದ್ಯಾರ್ಥಿಗಳಿಗೆ ಸವಿವಾಸದ ಪದಾರ್ಥಗಳನ್ನು ಮೇಲೆ ಮೇಲೆ ನೋಡುವದು ಅನಿವಾರ್ಯವಾಗುವದರಿಂದಲೂ ಹೊರಿನ ಪದಾರ್ಥಗಳನ್ನು ನೋಡುವ ಅವಶ್ಯಕತೆಯು ಕಡಿಮೆಯಾಗುವದರಿಂದಲೂ, ದಂಡಿದಾಗ್ಯಾದರೂ ಪರೀಕ್ಷೆಯ ಹವ್ಯಾಸದಿಂದ ಅಭ್ಯಾಸವು ತಪ್ಪದ್ದರಿಂದಲೂ ಸ್ವಲ್ಪ ಹೊಲ ಮೊಳೆದ ಕತ್ತಲೆಯುಮನೆ ಸಾಲೆಮನೆಗಳೊಳಗೂ ಅವ್ಯವಸ್ಥಿತವಾಗಿ ಇಟ್ಟ ಮಂದ ಪ್ರಕಾಶದ ದೀವಿಗೆಯು ಬೆಳಕಿಸಲ್ಲಿಯೂ ಸಣ್ಣಕ್ಷರದ ಪುಸ್ತಕಗಳನ್ನು ಮುದುಡಿಕೊಂಡು ಕೂತು ಓದಬೇಕಾಗುವದರಿಂದಲೂ ಕುಂದದೃಷ್ಟಿಯು ಸಂಭವಿಸುವದೆಂದು ಅವರು ಪ್ರತಿಪಾದಿಸುವರು. ಮತ್ತು ಈ ದುಷ್ಪರಿಣಾಮವನ್ನು ತಪ್ಪಿಸುವದಕ್ಕೆ ಹತ್ತು ವರುಷಕ್ಕಿಂತ ಚಿಕ್ಕ ವಯಸ್ಸಿನ ವಿದ್ಯಾರ್ಥಿಗೆ ಗ್ರಹಣಶಕ್ತಿಯನ್ನು ಕೊಡಗೂಡಿದ ಇರುವಷ್ಟೂ ದೀಕ್ಷಿತ ಸಂಬಂಧದಿಂದ ತಕ್ಕ ನಿಯಮಗಳನ್ನು ಎಲ್ಲರಿಗೂ ತಿಳಿಸಿ ಅವರಿಂತ ಅವರಿಂದ ಒತ್ತಾಯದಿಂದ ಮಾಡಿಸುವದೂ ಇವೇರಡು ದೃಢವಾದ ಉಪಾಯಗಳೆಂದು ಅವರು ಸೂಚಿಸುವರು. ಈ ಉಪಾಯಗಳಲ್ಲದೆ ಸಾಲೆ ಮನೆಗಳ ಹೊಸರಚನೆ, ಮೊಡ್ಡಕ್ಷರದ ಪುಸ್ತಕಗಳು, ಮುಂತಾದ ವ್ಯವಸ್ಥೆಗಳೂ, ಬೈಲ್ಲಿ ತಜ್ಞರಿಂದ ಹೊತ್ತು ಅನುಪರಿಶೀಲನೆಯೂ ಈ ದುಷ್ಟ ಪರಿಣಾಮವನ್ನು ತಪ್ಪಿಸಲಿಕ್ಕೆ ವಿಶೇಷ ಅನುಕೂಲವಾದ ಸಂಗತಿಗಳಿಗೆ ಹೋಲುತ್ತವೆ. ಈ ಸಂಗತಿಗಳನ್ನು ಕುರಿತು ಎಲ್ಲ ಶಿಕ್ಷಕರೂ ಆಯಿತೆಂದೆಗಳೂ ಆಲೋಚಿಸುವದು ತಕ್ಕದ್ದಾಗಿರುತ್ತದೆ.

ಎಷ್ಟು ಹೊತ್ತು ಮಲಗಬೇಕು?

ಮನುಷ್ಯರು ನಿದ್ರೆಗಾಗಿ ಒಂದು ದಿನದ ಬಾಳಿಕೆಯ ಹರೆ ದಿನಾ ಎಷ್ಟು ಹೊತ್ತು ನಿದ್ರೆ ಮಾಡಬೇಕೆಂಬದೊಂದು ಅತಿ ಗಂಭೀರವಾದ ವಿಚಾರಣೀಯವಾದ ಸಂಗತಿಯಾಗಿರುತ್ತದೆ. ಈ ವಿಷಯವಾಗಿ ಇನ್ನೂ ನಿಶ್ಚಯವಾಗಿ ಹೇಳಲಾಗಿಲ್ಲ. ಆದರೆ ತವನ್ನು ಯಾರೂ ಪ್ರಕಟಿಸಿಲ್ಲ. ಆಲಸ್ಯ [illegible] ಗೆ ಸರಿದೋರಿದ ನಿಯಮಗಳನ್ನು ಜನರಿಗೆ [illegible]

ಶಾರೀರಿಕ, ಮಾನಸಿಕ ಶ್ರಮಗಳನ್ನು ಮಾಡುವವರಿಗೆ ನಿದ್ದೆಯು ಬೇಕೇಬೇಕು. ಆದರೆ ಈ ತರದ ಯಾವದೊಂದು ಶ್ರಮ ಮಾಡದವರಿಗೆ ತುಸು ನಿದ್ದೆ ಮಾಡಿದರೂ ಸಾಕು. ಪ್ರತಿ ಒಬ್ಬರು ದಿನಾಲು ಎಷ್ಟು ತಾಸು ನಿದ್ದೆ ಮಾಡಬೇಕೆಂಬದನ್ನು ಅವನ ಶಾರೀರಿಕ ಮಾನಸಿಕ ಶ್ರಮಗಳನ್ನೂ, ಆಹಾರ ವಿಹಾರ ವ್ಯಾಯಾಮಗಳನ್ನೂ ಅನುಲಕ್ಷಿಸಿ ಗೊತ್ತು ಪಡಿಸಬಹುದು. ಅಲಫ್ರೆಡನೆಂಬ ಇಂಗ್ಲಂಡದ ಅರಸನು ಒಂದು ದಿವಸದ ೨೪ ತಾಸುಗಳಲ್ಲಿ ೩ ಸಮಭಾಗಗಳನ್ನು ಮಾಡಿ ಒಂದು ವಿಭಾಗವನ್ನು ರಾಜ್ಯಕಾರಭಾರದಲ್ಲಿ, ಮತ್ತೊಂದು ವಿಭಾಗವನ್ನು ಅಭ್ಯಾಸ ಹಾಗೂ ಈಶ್ವರಸೇವೆಯಲ್ಲಿ, ೩ನೇ ವಿಭಾಗವನ್ನು ಆಹಾರ ವಿಹಾರ ನಿದ್ರಾವ್ಯಾಯಾಮಗಳಲ್ಲಿ ಕಳೆಯುತ್ತಿದ್ದನು. ಈ ಬಗೆಯಾಗಿ ಬಿಗಿ ಕಟ್ಟಿನಿಂದ ನಡೆಯುತ್ತಿದ್ದ ಅರಸನು ೫೦ ವರ್ಷಗಳಿಗಿಂತ ಹೆಚ್ಚು ಬಾಳಲಿಲ್ಲ. ಜ್ಯೂಯಲ್ ಎಂಬ ಧರ್ಮಾಧ್ಯಕ್ಷನೂ, ಬರ್ನೆಟನೆಂಬ ರಾಜನೂ ಬೆಳಗಿನ ನಾಲ್ಕು ಗಂಟೆಗೆ ಏಳುತ್ತಿದ್ದರು. ಬ್ಯಾಕ್‌ಸ್ಪರನು ೪ ತಾಸು ಮಾತ್ರ ನಿದ್ದೆ ಸಾಕೆಂದು ಹೇಳುತ್ತಾನೆ. ೮೪ ವರ್ಷ ಬದುಕಿದ ವೆಲೆಸ್ಲಿಯು ೬ ತಾಸು ನಿದ್ದೆ ಸಾಕೆಂದು ಸಾರುತ್ತಾನೆ. ಸರಜಾನ ಸಿಂಕಲೇರನು ೮ ತಾಸುಗಳ ವರೆಗೆ ನಿದ್ದೆ ಮಾಡಬಹುದೆಂದು ಅನ್ನುತ್ತಾನೆ. ಮುಖ್ಯ ನ್ಯಾಯಾಧೀಶನಾದ ಲಾರ್ಡ ಕೋಕನು "೬ ತಾಸು ನಿದ್ದೆಗೆ, ೬ ತಾಸು ಅಭ್ಯಾಸಕ್ಕೆ, ೪ ತಾಸು ಪ್ರಾರ್ಥನೆಗೆ, ಉಳಿದ ೮ ತಾಸುಗಳನ್ನು ಆಹಾರವಿಹಾರಾದಿಗಳಿಗೆ ವೆಚ್ಚ ಮಾಡಬೇಕು" ಎಂದು ಹೇಳುತ್ತಾನೆ.

ಇಂದಿನ ವರೆಗೆ ಜಗತ್ತಿನಲ್ಲಿ ಹೆಸರು ಹೊಂದಿ ಮಡಿದವರೆಲ್ಲರು ದಿನಾ ೫ ತಾಸಿಗಿಂತ ಹೆಚ್ಚು ಕಾಲ ಎಂದೂ ನಿದ್ದೆ ಮಾಡಲಿಲ್ಲ. "ಗಂಡಸಿಗೆ ೬ ತಾಸು, ಹೆಂಗಸಿಗೆ ೭ ತಾಸು, ಮೂರ್ಖನಿಗೆ ೮ ತಾಸು ನಿದ್ದೆ ಬೇಕು" ಎಂಬ ಇಂಗ್ಲಿಷ ಭಾಷೆಯ ಗಾದೆಯಿಂದ ನಿದ್ದೆಯ ಮಿತಿಯು ಸ್ಪಷ್ಟವಾಗುತ್ತದೆ. ಹೆಂಗಸರಿಗೆ ಗಂಡಸರಿಗಿಂತ ಶಾರೀರಶ್ರಮವು ಹೆಚ್ಚು, ಮಾನಸಿಕ ಶ್ರಮವು ಕಡಿಮೆ ಘಟಿಸುವವರಿಂದ ಅವರಿಗಿಂತ ಹೆ

ಚ್ಚು ನಿದ್ದೆ ಬೇಕೆಂಬದು ಮೇಲೇ ಕಾಣುತ್ತದೆ. ಮಾನಸಿಕ ಶ್ರಮದಿಂದ ವೆಚ್ಚವಾದ ಶಕ್ತಿಯು ತುಸು ವಿಶ್ರಾಂತಿಯಿಂದ ಮರಳಿ ಬರುವದು; ಆದರೆ ಶಾರೀರಿಕ ಶ್ರಮದಿಂದ ಒದಗಿದ ಶಕ್ತಿಕ್ಷಯವು ಅಲ್ಪ ವಿಶ್ರಾಂತಿಯಿಂದ ಪೂರ್ವಸ್ಥಿತಿಯನ್ನು ಪಡೆಯಲಾರದು. ಕೂಲಿಯವರಿಗೆ, ವಿದ್ಯಾರ್ಥಿ, ಶಿಕ್ಷಕ, ಲೇಖಕ ಮುಂತಾದವರಿಗಿಂತ ಶಾರೀರಿಕ ದುಡಿತವು ಹೆಚ್ಚು ಬೀಳುತ್ತದೆ. ಆದ್ದರಿಂದ ಸ್ನಾಯುಬಲವು ಮೊದಲಿನಂತೆ ಪೂರ್ಣತ್ವವನ್ನು ಪಡೆಯಬೇಕಾದರೆ ವಿಶ್ರಾಂತಿಯು ಅಥವಾ ನಿದ್ದೆಯು ಅವನಿಗೆ ಹೆಚ್ಚು ಬೇಕೆಂಬದು ಸ್ಪಷ್ಟವದೆ. ನೇಪೋಲಿಯನ್ ಬೋನಾಪಾರ್ಟನು ಕಾಳಗದ ಸಮಯದಲ್ಲಿ ತೀರ ತುಸು ವಿಶ್ರಾಂತಿಯನ್ನು ತಕ್ಕೊಳ್ಳುವನು. ಪ್ರಸಿದ್ಧ ಗಾಯಕನಾದ ಪಾಗಾನಿನಿಯು ಹಾಡಿನ ಲಕ್ಕಿನಿಂದ ಎಪ್ಪೋ ದಿವಸ ಮುಟ್ಟಗಲೇ ಇಲ್ಲ. ಪ್ರಸ್ತುತದಲ್ಲಿ ಅಮೇರಿಕೆಯಲ್ಲಿ ಹೆಸರು ಹೊಂದಿದ ಶಾಸ್ತ್ರಕಲಾವಿಶಾರದನಾದ ಏಡಿಸನ್ ಸಾಹೇಬನು ದಿನಾಲು ಎರಡೇ ತಾಸು ಮಲಗುವನು. ಇಂಥಿಂಥ ಘನ ವಿದ್ವಾಂಸರು ಇಷ್ಟು ತುಸು ವಿಶ್ರಾಂತಿಯಿಂದ ತಮ್ಮ ತಮ್ಮ ವ್ಯವಹಾರವನ್ನು ಸುಯಂತ್ರವಾಗಿ ಸಾಗಿಸಿಕೊಳ್ಳಲಿಕ್ಕೆ ಸಮರ್ಥರಾಗಿದ್ದದ್ದನ್ನು ಕೇಳಿ ಯಾರಿಗಾದರೂ ಆಶ್ಚರ್ಯವಾಗಬಹುದು. ಆದರೆ ಇದೇನು ದೊಡ್ಡ ಮಾತಲ್ಲ. ಯಾಕಂದರೆ ಮನುಷ್ಯಶರೀರಕ್ಕೆ ಮಿತಿಯ ವಿಶ್ರಾಂತಿಯು ಹೊತ್ತು ಹೊತ್ತಿಗೆ ಗೊರೆದರೆ ಅದರಲ್ಲಿ ಮಾನಸಿಕ ಶಾರೀರಿಕ ಶ್ರಮಗಳನ್ನು ಬೇಕಾದಷ್ಟು ಮಾಡುವ ಸಾಮರ್ಥ್ಯ ಬರುತ್ತದೆ. ಇದರ ಕಾರಣವು ಮೇಲೆಯೇ ಕಾಣುತ್ತದೆ. ಶರೀರದೊಳಗಿನ ಪ್ರತಿ ಒಂದು ಭಾಗವು ನಿಯಮಿತ ಕಾಲದಲ್ಲಿ ನಿಯಮಿತ ಕಾರ್ಯವನ್ನು ನಿಯಮಿತ ರೀತಿಯಿಂದ ನಡಿಸುತ್ತಿರುವಂತೆ ಜಗನ್ನಿಯಾಮಕನಿಂದ ರಚಿಸಲ್ಪಟ್ಟಿರುತ್ತದೆ. ಎದೆ ಹಾರೋಣ, ಶ್ವಾಸೋಚ್ಛ್ವಾಸ, ಹಸಿವು, ನೀರಡಿಕೆ ಮುಂತಾದ ಶರೀರದ ವ್ಯಾಪಾರಗಳೆಲ್ಲ ಕೆಲವೊಂದು ನಿಯಮಿತ ರೀತಿಯಿಂದಲೇ ನಡೆದಿರುತ್ತವೆಂಬದು ಅನುಭವಸಿದ್ಧವಾದ ಸಂಗತಿಯು. ಅಂದಬಳಿಕ ನಿದ್ದೆ ಎಂಬದೊಂದು ಮಾತ್ರ ಅನಿಯಮಿತವಾಗಿ ಸಾಗುತ್ತದೆಂತಲೂ, ಈ ಸಂಬಂಧದಿಂದ ಯಾವ

ದೊಂದು ನಿರ್ಭಾಧವಾದ ನಿಯಮವನ್ನು ಕಟ್ಟುವದು ಅಸಾ
ಧ್ಯವೆಂತಲೂ ಪ್ರತಿಪಾದಿಸುವದು ಹೆಡ್ಡತನವು. ಸೃಷ್ಟಿನಿಯ
ಮದಂತೆ ವರ್ತಿಸುವವನಿಗೆ ಸುಖವೂ ಸಮಾಧಾನವೂ, ದೊ
ರೆಯುತ್ತವೆ ಆ ನಿಯಮಗಳನ್ನು ವಿಚಾರಿಸದೆಯವನಿಗೆ ವಿಪ
ತ್ತುಗಳು ಕೈಕೊಳಕೊಂಡು ಬೆನ್ನುಹತ್ತುತ್ತವೆ. ಈ ಆಹಾ
ರವಿಹಾರ, ನಿದ್ರೆ ಮುಂತಾದವುಗಳ ಸಂಬಂಧದಿಂದ ಮನು
ಷ್ಯೇತರ ಪ್ರಾಣಿಗಳು ಬುದ್ಧಿಕ್ರಿಯಾಶೂನ್ಯವಾದ ಮನುಷ್ಯನಿಗಿಂತ
ಹೆಚ್ಚು ನಿಯಮಿತ ರೀತಿಯಿಂದ ನಡಕೊಂಡು ಮನುಷ್ಯನಿ
ಗಿಂತ ಮೇಲಾದ ಶಾರೀರಸುಖವನ್ನು ಅನುಭೋಗಿಸುತ್ತವೆ.
ಟರ್ಕೋಲಾಸ ಎಂಬದೊಂದು ಹಕ್ಕಿಯುಂಟು ಅದರ
ಮಾಂಸವು ಇಂಗ್ಲಿಷ ಜನರಿಗೆ ಬಲು ಸವಿ ಹತ್ತುತ್ತಿರುವದ
ರಿಂದ ಅದನ್ನು ಅವರು ಕಣ್ಣು ಮುಚ್ಚಿ ಬಾಯಿ ಚಪ್ಪರಿಸಿ
ತಿನ್ನುತ್ತಾರೆ. ಆದರೆ ಈ ಮಾಂಸಕ್ಕೆ ಇಷ್ಟು ರುಚಿಯು
ಸ್ವಭಾವತಃ ಬಂದದ್ದಲ್ಲ. ಆ ಪಕ್ಷಿಗೆ ಅನ್ನ ನೀರು, ವಿಶ್ರಾಂ
ತಿ, ವ್ಯಾಯಾಮಗಳನ್ನು ನಿಯಮಿತವಾಗಿ ಒದಗಿಸಿಕೊಟ್ಟು,
ಒಳ್ಳೇ ರೀತಿಯಿಂದ ಸಾಕಿದರೆ ಮಾತ್ರ ಅದರ ಮಾಂಸದಲ್ಲಿ
ಮೇಲೆ ಹೇಳಿದ ರುಚಿಯು ಬರುತ್ತದೆ ಆ ಜನರು ಆ
ಪಕ್ಷಿಗೆ ಹೊತ್ತುಹೊತ್ತಿಗೆ ತಕ್ಕತಕ್ಕಷ್ಟು ತಿನಿಸು ಹಾಕು
ತ್ತಾರೆ. ಅನ್ನವು ಸರಿಯಾಗಿ ಪಚನವಾಗಬೇಕೆಂದು, ನಿಯ
ಮಿತ ಹೊತ್ತಿಗೆ ತಕ್ಕಷ್ಟು ನಿದ್ದೆ ದೊರೆಯಬೇಕೆಂದು ಅದ
ನ್ನು ಬುಟ್ಟಿಬಾಲ್ಲಿ ಮುಚ್ಚಿಡುತ್ತಾರೆ. ವ್ಯಾಯಾಮವಾದರೂ
ಹೊತ್ತುಹೊತ್ತಿಗೆ ಅವರ ಶರೀರಕ್ಕೆ ಅನುರೂಪವಾಗುವಷ್ಟು
ಸಿಗುವಂತೆ ವ್ಯವಸ್ಥೆ ಮಾಡಿರುತ್ತಾರೆ. ಜಳಿಗಾಳಿಗಳಿಂದ
ಮಕ್ಕಳಿಗಿಂತ ಹೆಚ್ಚು ಜಾಗ್ರತೆಯಿಂದ ಅದನ್ನು ಕಾಪಾಡು
ತ್ತಾರೆ ಈ ಬಗೆಯಾಗಿ ಆ ಪಕ್ಷಿಯನ್ನು ಕೆಲವು ದಿವಸ
ಜೋಪಾನ ಮಾಡಿದ ಬಳಿಕ ಆ ಪುಟ್ಟವಂದ ಪಕ್ಷಿಯನ್ನು
ಅವರು ಕೊಂದು ತಿನ್ನುತ್ತಾರೆ ಅದರ ಮಾಂಸವು ಬಾಯಿ
ಲ್ಲಿ ಪಾಕಿಕೊಂಡ ಕೂಡಲೆ ಬೆಣ್ಣೆಯಂತೆ ಕರಗಿ ಹೋಗುತ್ತ
ದಂತೆ.

(ಸಶೇಷ)

EXCURSION TO HAMPI.

ಹಂಪಾಯಾತ್ರೆ.

(ಬರೆದು ಒಂದದ್ದು.)

(೧೯೦ ನೇ ಪುಟದಿಂದ ಮುಂದೆ ಸಾಗಿದ್ದು.)

ಪ್ರಿಯವಾಚಕರೇ- ಉಪಗುರುಗಳಾದ ಗಣಿತ ವಾಸ್ತೋರ ರ ಸದುಪದೇಶವನ್ನು ಶಿರಸಾವಹಿಸಿ. ನಾವೆಲ್ಲರೂ ಸ್ಪೀಕಸದ ಹಾದಿ ಹಿಡಿದೆವೆಂದು ಹಿಂದೆ ತಿಳಿಸಿದುತ್ತದಷ್ಟೇ ; ಬಳಿಕ ೯ ಘಂಟೆಗೆ ಸರಿಯಾಗಿ ಅಲ್ಲಿಗೆ ಮುಟ್ಟಿದ ರ್ವಲ್ಪ ಹೇಳಿಯಲ್ಲಿಯೇ ರಾ. ಬ. ಹು ಡಿ ಕಲೆಕ್ಟರರಾದ ಭಾ ನಗಾಂವಕರರವರೂ, ರಾ. ಬ ಎ ಇ ದಕ್ಷಿಣಭಾಗರವರಾದ ಸದಸ್ಯಬುದ್ಧಿಯವರೂ ರಾ ಸಾ ಧಾರವಾಡ ಹೈಸ್ಕೂಲ ಹೆಡ್‌ಮಾಸ್ತರರಾದ ಗುರುನರ್ಯಾ ಕರಂದೀಕರರಾಯರೂ, ರಾ. ಸಾ. ಡಿ ಎ. ಇ ರಾದ ಸವಣೂರ ರಾಮಚಂದ್ರರಾಯರೂ ತಮ್ಮ ತಮ್ಮ ಪರಿವಾರ ಸಹಿತ ಅಲ್ಲಿಗೆ ಬಂದರು. ಅನುಭವಿಕರೂ ಸು ಜ್ಞರೂ ಹಿತಚಿಂತಕರೂ ಪೂಜ್ಯರೂ ಆದವರುಗಳ ಸಂಗಡ ಪ್ರವಾಸಮಾಡುವ ಉತ್ಸವ ಸಂಧಿಯನ್ನೊದಗಿಸಿಕೊಟ್ಟದ್ದಕ್ಕಾಗಿ ದೇವರ ವತ್ತು ಗುರುವರ್ಯರ ಮಹದುಪಕಾರವನ್ನು ನಾವೆಲ್ಲರೂ ತ್ರಿಕರಣಪೂರ್ವಕವಾಗಿ ಸ್ಮರಿಸಿದೆವು. ಮತ್ತು ನಾವು ಇಂತಹ ಮಹಾನುಭಾವರ ಸಂಗಡಿಗರಾದದರಿಂದ ಪ್ರವಾಸದ ನಿಜವಾದ ಲಾಭವು ಇಸ್ಪದು ದೊರೆಯುವದೆಂಬ ಆನಂದರಸವು ಮಾನಸ ಸರೋವರದಲ್ಲಿ ಹಿಡಿಸಲಾರದೆ ವಚನ ರೂಪ ತೊಂದಿ ಮುಖದಾರದಿಂದ ಹೊರ ಸೂಸಹತ್ತಿತು. ಗಾಯನ ಕಲಾವಿಶಾರದರೂ, ಆದೇ ನಮ್ಮ ಗಾಯನ ತಿಕ್ಷಕರೂ ಆದ ರಾ ರಾ. ಭಾಸ್ಕರರಾಯರು ತಮ್ಮ ಗಾಯನ ಸಾಹಿತ್ಯಗಳು ಸಹಿತ ಬಂದು ವರಿಷ್ಠರನ್ನು ಕೂಡಿದ ಬಳಿಕಂತೂ ನಮ್ಮ ಆನಂದ ರಸಪ್ರವಾಹವು ಮೇರೆವಟ್ಟು ಹರಿಯಹತ್ತಿತು.

ಸುಜ್ಞರೆ ಈ ಸ್ಥಳದಲ್ಲಿ ಗುರುವರ್ಯರ ಮತ್ತೊಂದು ಮಹದುಪಕಾರದ ಕೃತ್ಯವನ್ನು ತಿಳಿಸುವದಾವಶ್ಯಕವು ಆದೇನೆಂದರೆ ಮುಂಜಾಗ್ರತೆಯಿಟ್ಟು ಗುರುವರ್ಯರು ಟ್ರಿಕ್ ಮ್ಯಾನೇಜರರುಗ ಬರೆದು ಏಜೆಂಟಿಗಳಿಗಾಗಿ ಪತ್ರ ಹೊಸಲು

ಮಾಡಿಸಿದ್ದರಿಷ್ಟೇ ಅಲ್ಲ, ಸ್ಟೇಶನ್ ಮಾಸ್ತರರಿಗೆ ಬರೆದು ರಿಝರ್ವ್ ಗಾಡಿಗಳನ್ನಿಡಿಸುವಂತೆ ವ್ಯವಸ್ಥೆ ಮಾಡಿದ್ದರು. ಈ ಮೇರೆಗೆ ಸಿದ್ಧವಾದ ಗಾಡಿಯಲ್ಲಿ ನಾವೆಲ್ಲರೂ ಗುರುವರ್ಯರ ಅಪ್ಪಣೆಯಿಂದ ಹತ್ತಿ ಒಬ್ಬರೊಳೊಬ್ಬರು ಆನಂದ ಭಾಷಣಗಳನ್ನಾಡುತ್ತ ಲೋಂಡಾದ ಕಡೆಯಿಂದ ಬಹುವ ಗಾಡಿಯ ಹಾದೀಯನ್ನೇ ನೋಡುತ್ತ ಕೂತಿರುವಷ್ಟರಲ್ಲಿಯೇ ಗಾಡಿಯ ಸೀಟಿಯು ಕೇಳಬಂತು. ಬಳಿಕ ಹಿತಚಿಂತಕರಾದ ಗುರುವರ್ಯರು ಎಲ್ಲ ವಿದ್ಯಾರ್ಥಿಗಳೂ ವ್ಯವಸ್ಥಿತರಾಗಿ ಕೂತರೆಂಬುದನ್ನು ಮನಗಂಡು ತಮಗಾಗಿ ಮೊದಲೇ ಏರ್ಪಡಿಸಿದ II ಕ್ಲಾಸ ಗಾಡಿಯಲ್ಲಿ ತಮ್ಮ ಮಿತ್ರಮಂಡಳಿಯೊಡನೆ ಮಂಡಿಸಿದರು. ಬಳಿಕ ಬಂದ ಗಾಡಿಯು ಸಿದ್ಧವಾಗಿ ಎದುರು ನೋಡುತ್ತಿರುವ ನಮ್ಮ ಗಾಡಿಯನ್ನು ಸೀಟಿಯೆಂಬ ಆತಿಥ್ಯದೊಡನೆ ಬಂದು ವೈದು ತಮ್ಮೊಡನೆ ಕೂಡಿಸಿದ ಬಳಿಕ ಸ್ವಲ್ಪ ಹೊತ್ತಿನಲ್ಲಿಯೇ ಧಾರವಾಡ ಸ್ಟೇಶನವು ನಮಗೆ ಕಾಣಿಸದಹಾಗಾಯಿತು ನಮ್ಮಲ್ಲಿಯ ಕೆಲಮಿತ್ರರು ಗಾಯನ ಮಾಡುತ್ತಿದ್ದರು. ಕೆಲವರು ಆನಂದ ಭಾಷಣಗಳನ್ನಾಡುತ್ತಿದ್ದರು. ಕೆಲವರು ಸುರಸಕಥೆಗಳನ್ನೋದುತ್ತಿದ್ದರು. ಈ ಮೇರೆಗೆ ನಾನಾತರದ ಆನಂದಜನಕಕೃತಿಗಳನ್ನು ಮಾಡುತ್ತ, ಎಡಬಲದಲ್ಲಿ ತೋರುವ ದರ್ಶನೀಯ ಚಮತ್ಕಾರಗಳನ್ನು, ಅಲ್ಲಲ್ಲಿ ಆದ ಮಳೆಬೆಳೆಗಳನ್ನು ನೋಡುತ್ತ, ಅಮರಗೋಳ ಹುಬ್ಬಳ್ಳಿ, ದುಂದೂರ, ಅಣ್ಣಿಗೇರಿ ಹುಲಕೋಟಿ, ಗದಗ, ಹಲ್ಯಾಪುರ, ಬನ್ನೀಕೊಪ್ಪ, ಭಾನಾಪುರ ಕೊಪ್ಪಳ ಮುಂತಾದ ಸ್ಟೇಶನಗಳನ್ನು ಅಲ್ಲಲ್ಲಿ ಬಂದಿರುವ ವ್ಯವಸಾಯ ಬಂಧುಗಳಿಗೂ ಮಿತ್ರರಿಗೂ ಭೆಟ್ಟಿಯಾಗುತ್ತ ಹಿಂದುಳಿಸಿದೆವು. ಕೊಪ್ಪಳದ ಗುಡ್ಡಕ್ಕೆ ಹೊಂದಿ ಲಿಂಗಾಯತರದೊಂದು ದೊಡ್ಡ ಮಠವಿರುತ್ತದೆ. ಮತ್ತು ಅದೇ ಗುಡ್ಡದ ಮೇಲೆ ಹಳೆದಾದದ್ದೊಂದು ಕೋಟೆಯಿದ್ದದ್ದು ಸ್ಟೇಶನದಿಂದ ಕಾಣಿಸುತ್ತಿತ್ತು. ಧಾರವಾಡದಿಂದ ಕೊಪ್ಪಳದ ವರೆಗಿನ ಕರೇಬಣ್ಣದ ಹೊಲದಲ್ಲಿ ಕಾಲಿವೆ ಮುಂತಾದ ನೀರಿನ ಪೂರೈಕೆಯ ಸಾಧನಗಳೇನೂ ಇಲ್ಲದಿದ್ದರೂ ಗದಗ

ಮುಂತಾದ ಸ್ಥಳಗಳಲ್ಲಿಯ ಹೊಲಗಳು ಹೊರ್ತಾಗಿ ಉಳಿದ ಕಡಿಗೆ ಸಾಧಾರಣತರದ ಬೆಳೆಬಂದೀತೆಂದು ತಿಳಿಸಲಿಕ್ಕೆ ನಮಗೆ ಸಂತೋಷವಾಗುತ್ತದೆ. ಗದಗ ತಾಲೂಕಿನ ಹೊಲ ದಲ್ಲಿ ಇನ್ನೂ ಮಳೆಯಾಗದ ಮೂಲಕ ಜನರು ಬೀಜಗಳನ್ನು ಬಿತ್ತದೆ ಮಳೆಯು ದಾರಿಯನ್ನು ನೋಡುತ್ತ ಕಂಗಾಲಾಗಿ ಕೂತಿರುವದನ್ನು ನೋಡಿ ಬಹಳ ಖೇದವಾಯಿತು. ಆದರೆ ಮಾಡುವದೇನು; ವೃಷ್ಟಿರಾಜನ ದೃಷ್ಟಿಯೇ ಇಲ್ಲದ ಬಳಿಕ ಇಷ್ಟಸಿದ್ಧಿಯಾಗುವದು ಕಷ್ಟದ ಮಾತೇಸರಿ. ಕೊಪ್ಪಳದಿಂದ ಮುಂದಿನ ಸ್ಥಳಗಳಲ್ಲಿ ಉತ್ತಮ ಮಳೆಯಾಡದರಿಂದಲೂ ಕಾಲುವೆಗಳು ಬಹಳೇ ಇರುವದರಿಂದಲೂ ಭೂದೇವಿಯ ಸೌಂದರ್ಯ ಸಂಪತ್ತಿಯನ್ನು ವರ್ಣಿಸುವದಸಾಧ್ಯವು. ಅಲ್ಲಲ್ಲಿ ಭತ್ತದ ಕೈರು ಬೆಳೆದು ಪೂಡಾಗಿ ನಿಂತದ್ದನ್ನು ನೋಡಿ ದರೆ ಬಹಳೇ ಆನಂದವಾಗುವದು ಇದಲ್ಲದೆ ದೊಡ್ಡ ದೊಡ್ಡ ಕಬ್ಬಿನ ತೋಟಗಳು ಅಸಂಖ್ಯವಾಗಿದ್ದವು. ಸುತ್ತು ಮುತ್ತೆಲ್ಲ ಕಬ್ಬಿನ ತೋಟಗಳೇ ವಿಶೇಷ ತೋರಹತ್ತಿದ್ದರಿಂದ ಅಲ್ಲಿ ಈ ಬೆಳೆಯೇ ಮುಖ್ಯವಾದದ್ದಿರಬಹುದೆಂದು ತರ್ಕಿಸಲಿಕ್ಕೆ ಆಸ್ಪದವಾಗುತ್ತದೆ. ಜೋಳದ ಕೈರಾದರೂ ಚನ್ನಾಗಿತ್ತು. "ಕೈಕೆಸರಾದರೆ ಬಾಯಿ ಮೊಸರು" ಎಂಬ ಗಾದೆ ಗೊತ್ತುಂ ಟಪ್ಪೇ ಇದಕ್ಕನುಸರಿಸಿ ಸತತೋದ್ಯೋಗಿಗಳಾದ ಅಲ್ಲಿಯ ಜನರು ಸುಖಿಗಳಾಗಿರುವದು ಸ್ವಾಭಾವಿಕವು. ಈ ಗುಣ ವನ್ನು ಎಲ್ಲರೂ ಅನುಕರಣಮಾಡತಕ್ಕದ್ದು.

ಈ ಮೇರೆಗೆ ದರ್ಶನೀಯ ಚಮತ್ಕಾರಗಳನ್ನು ನೋಡುತ್ತ ಸಾಗುವದರೊಳಗೆ ಸಂಧ್ಯಾಕಾಲ ಸಮಯವು ಸನ್ನಿಹಿತವಾ ಗಲು ಮುಂಜಾನೆ ೮ ಘಂಟೆಗೆ ಊಟತೀರಿಸಿದ್ದ ನಮ್ಮೆಲ್ಲ ರಿಗೂ ಹಸಿವೆಯು ಮೆಲ್ಲನೆ ಬಾಧಿಸಹತ್ತಿದ್ದರಿಂದ ಸಂಜೆಯ ಮುಕ್ಕಾಮಿನ ಸ್ಥಳವು ಅದಪ್ಪ ಸಮೀಪವಿದ್ದರೊಳಿತೆಂದು ಆಲೋಚಿಸುತ್ತಿರುವಷ್ಟರಲ್ಲಿಯೇ ಹೊಸಕೋಟೆಯ ಸ್ಟೇಶ ನವು ನಮ್ಮೆದುರಿಗೆ ಬಂದು ನಿಂತಿತು. ಅಲ್ಲಿ ಇಳಿದಕೂಡಲೆ ಅಲ್ಲಿಯ ನಿಯಮದಂತೆ ಡಾಕ್ಟರ ಸಾಹೇಬರು ಬಂದು ತಪಾ

ಸುಮಾತಿಯ ಬಳಿಕ ಉಪಾಧ್ಯಾಯರ ಹೊಗಳುವದಕ್ಕಾಗಿ ಗುರು ವರ್ಯರ ಅಪ್ಪಣೆಯಿಂದ ನಾನೆಲ್ಲರೂ ತಯಾರಾಗಿದ್ದೆವು

ವಾಚಕರೇ ನಮ್ಮ ಗುರುವರ್ಯರಲ್ಲಿರುವ ವಿದ್ಯಾರ್ಥಿಗಳ ಸಂಬಂಧದ ಹಿತಾಸಕ್ತಿಯನ್ನು ಎಷ್ಟು ಪರಿಣಾಮಗೊಳಿಸಿತ್ತೆಂಬುದನ್ನು ಹೇಳಲಾವುದೂ ಅಸ್ಪಷ್ಟವೇ ಆಯ್. ಸರ್ವಸಮ್ಮತವಾದ ಹೊಣೆಗಾರಿಕೆಯ ವಿದ್ಯಾರ್ಥಿಗಳಿಗೆ ಕ್ರಮಮಾಗಿಯಾಗಬೇಕಾದರೆ ಅವರು ಬಹಳ ದಿವಸ ಒಂದೇ ಕಡೆಯಲ್ಲಿ ಇರಬೇಕು ಕಾಲೇಜಿನ ಕೋಣೆಯೊಳಗಿನಲ್ಲಿ ಪಾಠ ಹೇಳಿ, ಹಿಂದಿನ ಮುಂಜಾನೆ ಸಾಯಂಕಾಲಗಳನ್ನು ಕೆಲಸಿನ ಮಿ. ಟೆ ಗು. ಭಟ್ಟರಲ್ಲಿ ಇವರನ್ನು ಇ ಸಂಬಂಧದ ವ್ಯವಹಾರಕ್ಕಾಗಿ ನೇಮಿಸಿದ್ದರಿಂದ್ದೇ ಇವರು ಕಾಲೇಜಿನ ಅತಿಗೆಯವರನ್ನೂ ನೀರಿನವರನ್ನೂ ಕಾಮಾಠಿ ಜನರನ್ನೂ ಸಂಗಡ ಕರಕೊಂಡಿದ್ದರು, ಮತ್ತು ಸಂಧ್ಯಾಕಾಲಕ್ಕೆ ಹೊಸಕೋಟೆಗೆ ಹೊಂದಬಳಿಕ ಇಳುಸೊಳ್ಳತನಕ್ಕೆ ಜಾಗವನ್ನು ಗೊತ್ತುಮಾಡಲಿಕ್ಕೂ ಉಪಹಾರದ ಇತ್ತರ ಸಾಹಿತ್ಯಗಳನ್ನು ಸಿದ್ಧಮಾಡಲಿಕ್ಕೂ ಬೇಳೆ ಹತ್ತಿ ತ್ವರಿತವಾಗಬೇಕಾದರೆಂದು ಹೊರಡುವ ಮೊದಲನೇ ದಿವಸವೇ ನಮ್ಮ ವ್ಯವಸಾಯ ಬಂಧುಗಳಲ್ಲೊಬ್ಬರಾದ ಮಿ. ರಘುನಾಥ ಗಣೇಶ ವಿಜಾಪುರಕರ ಇವರನ್ನು ಸಂಗಡ ಕಾರ್ಯೋದ್ಯತ ಸಿದ್ಧಾಯನ್ನು ಕೊಟ್ಟು ಮುಂದೆ ಕಳಿಸಿದ್ದರು. ಅವರು ಎಲ್ಲ ತರದ ಸಿದ್ಧತೆ ಮಾಡಿಟ್ಟು ಗುರುವರ್ಯರನ್ನೂ ಸಹಪ್ರವಾಸಿಗಳನ್ನೂ ಕರದೊಯ್ಯುವದಕ್ಕಾಗಿ ಸ್ಟೇಶನಕ್ಕೆ ಬಂದಿದ್ದರು ಬಳಿಕ ಇವರು ಗೊತ್ತು ಮಾಡಿದ ಛತ್ರಕ್ಕೆ ಗುರುವರ್ಯರೂ ಸಂಗಡ ಸಾವಿಲ್ಲರೂ ಹೋಗಿ ಕಾಫಿಯ ಉಪಹಾರದ ವ್ಯವಸ್ಥೆಯು ಜರಗಿಸಲ್ಪಟ್ಟಿತು ಬಳಿಕ ಭೋಜನದ ವ್ಯವಸ್ಥಾಪಕರಾದ ಮಿ. ಬಾ. ಜೋಶಿಯವರ ಸೂಚನೆಯ ಮೇರೆಗೆ ನಾವೆಲ್ಲರೂ ಕೈಕಾಲು ಮೋರೆ ತೊಳೆದು ಸಂಧ್ಯಾವಂದನಾದಿ ನಿತ್ಯ ಕರ್ಮಗಳನ್ನು ತೀರಿಸಿ ಭೋಜನವಾದ ಬಳಿಕ ಸಭಾಭವನಕ್ಕೆ ಘಟಿಯು ಸುಮಾರಕ್ಕೆ ನಿದ್ರಾಸಕ್ತರಾದವರು ಉಪಹಾರಕ್ಕೆಂದು ಪ್ರತಿವಿಧಿ ಮುಖಮಾರ್ಜನಾದಿಗಳನ್ನು ತೀರಿಸಿ, ಗುರುವರ್ಯರ ಅಪ್ಪಣೆಯ ಮೇರೆಗೆ ಅವರು ಸಂಗಡ ಶ್ರೀಪಂಪಾಕ್ಷೇತ್ರದ ಹಾದೀಹಿಡಿದೆವು.

ಶ್ರೀ ಪಂಪಾಕ್ಷೇತ್ರವು ಹೊಸಪೇಟೆಯಿಂದ ಸುಮಾರು ೩ ಮೈಲು ದೂರವಿತ್ತು. ನಡುವೆ ನೋಡತಕ್ಕ ಸ್ಥಳಗಳು ಅಲ್ಲಲ್ಲಿಗೆ ಇವೆ. ಎಲ್ಲಕ್ಕೂ ಮೊದಲಿಗೆ ಹೊಸಪೇಟೆಯಿಂದ ಒಂದು ಮೈಲಿನಮೇಲೆ "ಅಂಜಿಣ್ಣನಗುಡಿ" ಎಂಬುದೊಂದು ಭವ್ಯ ಮಂಟಪವು ನಮ್ಮ ದೃಷ್ಟಿಗೆ ಬಿತ್ತು. ಇದರ ಹೊವಲಿನ ೪ ಭಾಗವು ಕಟ್ಟಿಯಾಗಿದ್ದು ಬೆಳ್ಳಿನಿಂದಲೂ ಮೇಲಿನ ೪ ಭಾಗವು ಇಟ್ಟಂಗಿಗಳಿಂದಲೂ ಕಟ್ಟಲ್ಪಟ್ಟಿದೆ. ಸಾಧಾರಣಕ್ಕೆ ಮೂರು ಎತ್ತರದ ಬಲ ಕಲ್ಲಿನ ಕಂಬಗಳುಳ್ಳ ಮುಖಮಂಟಪವು ವಿಶಾಲವಾಗಿದ್ದಿರುತ್ತದೆ. ನೆಲಕ್ಕೆ ಕಲ್ಲಿನ ಹಾಸಿಕೆ ಇರುತ್ತದೆ. ಕಂಬಗಳ ನಾಲ್ಕೂ ಬದಿಗಳು ಚಿತ್ರಗಳಿಂದ ತುಂಬಿವೆ. ಎತ್ತರವಾದ ಎರಡು ಮಗ್ಗಲಿನ ಗೋಡೆಗಳ ತಲೆಗಳು ಲಿಪಿಗಳಿಂದ ತುಂಬಿವೆ. ಅವನ್ನು ಓದಿ ಕಾಲವಾನವನ್ನು ನಿರ್ಣಯಿಸುವದಕ್ಕಾಗಿ ಗುರುವರ್ಯ ಕರಂದೀಕರ ರಾಯರೂ ರಾ. ಸಾ. ಸವಣೂರರಾಯರೂ ಬಹಳ ಪ್ರಯತ್ನವಾಡಿದಾಗ್ಯೂ ಹಳವಾದ ಕಾರಣ ಸಫಲವಾಗಲಿಲ್ಲ ಈ ಗುಡಿಯ ಒಳಗೆ ಪ್ರವೇಶಿಸಲಿಕ್ಕೆ ಎರಡು ಮಹಾದ್ವಾರಗಳಿವೆ ಒಳಮುಗ್ಗಲಿನ ಎತ್ತರವು ೯ ಅಡಿ ಹೊರಗಿಂತ ಕಡಿಮೆಯಾಗಲಿಕಿಲ್ಲ. ಒಳಗೆ ಬಹಳ ಮೂರ್ತಿಗಳ ಹೊರತು ಮತ್ತೇನೂ ಇದ್ದಿಲ್ಲ ಛಿನ್ನಭಿನ್ನವಾದ ವರಾಹ ನರಸಿಂಹ ಮುಂತಾದ ಮೂರ್ತವಿಗ್ರಹಗಳು ಮಾತ್ರ ಕಿಸ್ತವಸ್ತುವಿದ್ದಿದ್ದವು ಗುಡಿಯು ಬಹಳ ಜೀರ್ಣವಾಗಿದ್ದ ಕಾರಣ ಒಕ್ಕಳಿ ಹೊತ್ತು ಒಳಗೆ ಸಂದರಲಿಕ್ಕೆ ನಮಗೆ ಧೈರ್ಯ ಸಾಲಲಿಲ್ಲ. ಗುಡಿಯ ಸುತ್ತಲೂ ಕೋಟೆಯಂತೆ ಕಲ್ಲಿನ ಎತ್ತರವಾದ ಗೋಡೆ ಇತ್ತು. ಈ ಗುಡಿಯು ವಿಜಯನಗರದ ದೇವರಾಜನ ಕಾಲಕ್ಕೆ ಕಟ್ಟಲ್ಪಟ್ಟಿತೆಂತಲೂ ಟೀಪ್ಪು ಸುಲ್ತಾನನ ಕಾಲಕ್ಕೆ ಹಾಳಾಯಿತೆಂತಲೂ ಗುರುವರ್ಯ ಕರಂದೀಕರರಾಯರ ಹೇಳಿಕೆಯೆಂದು ತಿಳಿದು ಬಂತು. ಇದು ಸಪ್ಪಳಕ್ಕೆ ಕಾಯಿಪಲ್ಲೆಗಳ ವಾರಾಟದ ಸ್ಥಳವಾಗಿದೆ ಇಲ್ಲಿಂದ

ಮುಂದಕ್ಕೆ ಸಾಗಲು ಸ್ವಲ್ಪ ಅಂತರದಲ್ಲಿರುವ ಮಲಪಣ್ಣನ
ಗುಡಿಯಿಂಬಲ್ಲಿ "ಸೂಳೇಭಾವಿ" ಎಂಬುದೊಂದು ರಮ್ಯ
ವಾದ ಚಿಕ್ಕ ಸರೋವರವುಂಟು. ಇದರ ಮೇಲ್ಭಾಗವು
ಕಮಕೋನ ಅಪ್ಪಕೋನಾಕೃತಿಯಾಗಿಯೂ ಕೆಳಭಾಗವು
ಚೌರಸಾಕೃತಿಯಾಗಿಯೂ ಇರುತ್ತವೆ ಇದನ್ನು ಪಾತ್ರ
ವಾಕೆಯೊಬ್ಬಳು ಕಟ್ಟಿಸಿದರಿಂದ ಇದಕ್ಕೆ ಸೂಳೇಭಾವಿ
ಯೆಂಬ ಹೆಸರು ಬಂದದಂತೆ, ಈ ಕೆರೆಗೆ ಸವಿಾಪವಾಗಿ
ಮಲ್ಲಿಕಾರ್ಜುನನ ಗುಡಿಯುಂಟು. ಇದು ಹಳೆಯದಾದರೂ
ಸುರಸ್ತಿಯ ಕೆಲಸ ನಡೆದದೆ. ಗುಡಿಯಮುಂದೆ ಐದಂತಸ್ತಿ
ನದೊಂದು ಗೋಪುರವುಂಟು. ಈ ಗೋಪುರದ ಮೇಲೆಯೂ
ಗುಡಿಯ ಮೇಲೆಯೂ ಗುಡಿಯ ಸುತ್ತಲೂ ಇರುವ ಗೋಡೆ
ಯಮೇಲೂ ಬೌದ್ಧಾವತಾರದ ಚಿತ್ರಗಳು ತುಂಬಿವೆ. ಈ
ಗುಡಿಯ ಮುಂದಿರುವದೊಂದು ದೊಡ್ಡ ಶಿಲೆಯ ಮೇಲೆ ಈ
ಗುಡಿಯನ್ನು ವಿಜಯನಗರದ ದೇವರಾಜನು ಕಟ್ಟಿಸಿದನೆಂದು
ಬರೆದದೆ. ಇಲ್ಲಿಂದ ಮುಂದಕ್ಕೆ ಸಾಗಲು ಎಡಬಲಭಾಗಗಳ
ಭೂಸೌಂದರ್ಯವನ್ನು ವರ್ಣಿಸುವದಸಾಧ್ಯವು. ಪೂಡಾಗಿ
ಬೆಳೆದ ಭತ್ತದ ಗದ್ದೆಗಳೂ ದೊಡ್ಡ ದೊಡ್ಡ ಕಬ್ಬಿನ ತೋಟ
ಗಳೂ ಕಾಯಿಪಲ್ಲೆಗಳ ತೋಟಗಳೂ ಅಲ್ಲಲ್ಲಿಗೆ ಇರುವ
ಕಾಲಿವೆಗಳೂ ನಮ್ಮ ಮನಸ್ಸನ್ನು ಒಳಿತಾಗಿ ರಮಿಸಿದವು
ವಿಶೇಷ ವರ್ಣಿಸುವದೇನು? ಕವಿತೆಯ ಮೊದಲನೆಯ ಭಾಗ
ದಲ್ಲಿ "ಕರ್ನಾಟಕದ ವರ್ಣನೆ" ಎಂಬ ಪಾಠದಲ್ಲಿಯ ಕವಿ
ತೆಗಳನ್ನು ಈ ಸ್ಥಳವನ್ನೇ ನೋಡಿ ವರ್ಣಿಸಿದರೋ ಏನೋ
ಎಂಬಂತೆಭಾಸವಾಯಿತು, ಅಲ್ಲಿಯ ರೈತನೊಬ್ಬನು ನಮಗೆ
ಭೆಟ್ಟಿಯಾಗಲಾಗಿ ಇಲ್ಲಿಯ ಜನರು ವರ್ಷದೊಳಗೆ ಎಷ್ಟು
ಸಾರೆ ಬೆಳೆ ತಕ್ಕೊಳ್ಳುತ್ತಾರೆಂದು ಕೇಳಲಾಗಿ ೩-೪ ಸಾರೆ
ಎಂದು ಅವನು ಸಂತೋಷದಿಂದ ಹೇಳಿದನು. ನಿಮ್ಮ
ದುಷ್ಕಾಳ ಬರ ಮುಂತಾದ ಶಬ್ದಗಳು ಗೊತ್ತಿವೆಯೋ
ಎಂದು ಕೇಳಲಾಗಿ "ಹಾಗಂದರೇನು?" ಎಂದು ತಿರಿ
ನಮ್ಮನ್ನೇ ಕೇಳಹತ್ತಿದನು ನೋಡಿರಿ ದುಷ್ಕಾಳದ ದುಃ
ಗಳನ್ನನುಭವಿಸುವದನಕಾ ಇರಲಿ, ಆ ಶಬ್ದಗಳು ಸಹ

ಅವರಿಗೆ ಗೊತ್ತಿಲ್ಲ. ಶಾಬಾಸ್ ಇವರಿಗೇ ಧನ್ಯರೆನಬೇಕು. ಆ ರೈತನು ಮಾತಾಡುತ್ತ ಆಡುತ್ತ ಇಲ್ಲಿ ಸರಕಾರಕ್ಕೆ ಕೊಡ ತಕ್ಕ ತೆರಿಗೆ ಮಾತ್ರ ವಿಶೇಷವಿರುತ್ತದೆಂದು ತಿಳಿಸಿದನು. ಇದು ಸ್ವಾಭಾವಿಕವಾದದ್ದೇ ಹೊರ್ತು ವಿಶೇಷವಾದದ್ದಲ್ಲ. ಈ ಮೇರೆಗೆ ಎಡಬಲದ ಸೃಷ್ಟಿಸೌಂದರ್ಯವನ್ನು ನೋಡುತ್ತ ಅಲ್ಲಿಯ ನಿವಾಸಿಗಳಕೂಡ ಅದಷ್ಟೂ ಪ್ರಶ್ನೆಗಳನ್ನು ಮಾಡಿ ಸ್ಥಿತಿಯನ್ನು ತಿಳಿಯುತ್ತ ಮುಂದಕ್ಕೆ ಸಾಗಿದೆವು.

MANUAL OF METHOD.

ಶಿಕ್ಷಾಕ್ರಮ.

(೨೨೬ನೇ ಪುಟದಿಂದ ಮುಂದೆ ಸಾಗಿದ್ದು.)

ಕರೇ ಹಲಿಗೆಯ ಮೇಲೆ ಬರೆಯುತಕ್ಕ ಪಾಠದ ಟಿಪ್ಪಣಿಗಳನ್ನು ಎರಡು ರೂಪದಿಂದ ಬರೆಯಬಹುದು. (೧) ಪ್ರಥಕ್ಕರಣ ಅಥವಾ ವಿಗ್ರಹರೂಪ, ಅಂದರೆ ಪಾಠದ ಟಿಪ್ಪಣಿಗಳ ವಿಷಯವೆಂಬ ಸದರಿನಲ್ಲಿ ಬರುವಂಥ ಪಾಠದ ಮುಖ್ಯವಾದ ಭಾಗ ಪ್ರಭಾಗಗಳನ್ನು ವಿಂಗಡಿಸುವದು. (೨) ಸಂಗ್ರಹರೂಪ ಅಂದರೆ ಪಾಠದಿಂದ ತಿಳಿಯುತಕ್ಕಂಥ ಮುಖ್ಯ ಮುಖ್ಯ ಸಂಗತಿಗಳನ್ನು ಒಟ್ಟು ಗೂಡಿಸುವದು. ಶಿಕ್ಷಕನು ಪಾಠವನ್ನು ಸಿದ್ಧ ಮಾಡುವಾಗ ಅವನಿಗೆ ತೋರುವ ಎಲ್ಲ ಮಹತ್ವದ ಸಂಗತಿಗಳನ್ನು ಗೊತ್ತು ಹಚ್ಚಿ ಅವುಗಳನ್ನು ಈ ಕರೇ ಹಲಿಗೆಯ ಮೇಲಿನ ಟಿಪ್ಪಣಿಗಳಲ್ಲಿ ಸಂಗ್ರಹಿಸತಕ್ಕದ್ದು. ಈ ಎರಡು ಪಾಠದ - ಟಿಪ್ಪಣಿಗಳ ರೂಪಗಳಲ್ಲಿ ಸಂಗ್ರಹರೂಪವೇ ವಿಶೇಷ ಪ್ರಯೋಜನಕರವಾದದ್ದು.

ಈ ಕರೇ ಹಲಿಗೆಯ ಮೇಲಿನ ಪಾಠದ ಟಿಪ್ಪಣಿಗಳಿಂದ ಶಿಕ್ಷಕನ ವಿವರಣ ಸಾಮರ್ಥ್ಯವು ವ್ಯಕ್ತವಾಗುತ್ತದೆ.

ಕರೇ ಹಲಿಗೆಯ ಮೇಲಿನ ಪಾಠದ ಟಿಪ್ಪಣಿಗಳ ಕೆಲವು ಮಾದರಿಗಳನ್ನು ಇದರಡಿಯಲ್ಲಿ ಕೊಡುತ್ತೇವೆ. ಅವುಗಳನ್ನು ವಿಸ್ತರಿಸಿ ಹೊಸ ಶಿಕ್ಷಕನು ಪಾಠವನ್ನು ತಯಾರಿಸಿ, ಮುಖ್ಯ ಅಧ್ಯಾಪಕನಿಗೆ ತೋರಿಸಿ ನ್ಯೂನಾಧಿಕಗಳನ್ನು ತಿಳು ಕೊಳ್ಳಬಹುದು.

ಕಲ್ಲೀ ಹರಿಗೆಯ ಮೇಲಿನ ಮನಾದೆಯು ಪಾಠದ ಟಿಪ್ಪಣಿಗಳು.

ವಿಷಯ.	ವಿದ್ಯಾರ್ಥಿಗಳ ಚಟುವಟಿಕೆಗಳು.	ಟಿಪ್ಪಣಿಗಳು.
೫) ಉಸುಬು	೧ನೇ ಇಯತ್ತೆ.	೧ ಕಂದು ಬಣ್ಣದ್ದು. ಕಣಕಣಿತವಾದದ್ದು. ೨ ನೀರಿನಲ್ಲಿ ಕರಗಗಂಥಾದ್ದು. ೩ ನೀರನ್ನು ನಿರ್ಮಲ ಮಾಡುವದು. ೪ ಬದಾಮಿ ಕಲ್ಲಿನಂಥ ಉಸುಬಿನಿಂದಾದ ಕಲ್ಲುಗಳು ಹಲವೆ ಕೆಲಸಕ್ಕೆ ಬರುವವು.
೬) ಬರ್ಫ.	೨ನೇ ಇಯತ್ತೆ.	೧ ತಣ್ಣನದು. ೨ ಪಾರದರ್ಶಕವಾದದ್ದು. ೩ ಉಷ್ಣತೆಯಿಂದ ಕರಗುವಂಥಾದ್ದು. ೪ ನೀರಿಗಿಂತ ಹಗುರಾದದ್ದು. ೫ ನೀರಿಗಿಂತ ಹೆಚ್ಚು ಸ್ಥಳವನ್ನು ವ್ಯಾಪಿಸುವಂಥಾದ್ದು.
೭) ಪೆಟ್ಟಿಗೆ ಕೊಳವೆ.	೩ನೇ ಇಯತ್ತೆ.	೧ ಭಾಗಗಳು. (೧) ಕೊಳವೆಯ ಮುತ್ತು. ಅದರ ಬಾಯಿಗೆ ಜೋಡಿಸಿದ ದುಂಡನ್ನ ಕಾಯಿ ಇಲ್ಲವೆ ಕಾಗದದ ತುಂಡು. (೨) ಬಿಣಿ. ೨ ವ್ಯಾಪಾರ್ಥವು. (೧) ಬಣ್ಣಕಾಯುಸ್ಸು ಸರಿಸಲಾಗಿ ಕೊಳವೆಯೊಳಗಿನ ಹವೆಯು ಉತ್ತೇಜಿಸುವದು. (೨) ಸ್ಥಿತಿಸ್ಥಾಪಕತ್ವದ ಮೂ

ಒಕವಾಗಿ ಒಳ್ಳೆಯ ಪಟ್ಟಿ
ಸಹಾಯ ಪೂರ್ಣವಾಗಿ
ಬರೆಸಿ ಅಕ್ಕಸುಸಲಿಕ್ಕೆ
ಹವಣಿಸುವರು. ಈ
ಪ್ರಕಾರವಾಗಿ ಪೂರಕ
ವಾಗಿ ಒಂದು ಪಟ್ಟಿಯನ್ನು ಕೊ
ಟ್ಟಿರುವುದಾಗಿ ತೋರಿ
ಯಿಸಿ ಇಷ್ಟಕ್ಕೆ ಮಾತ್ರ
ದ ಕೆಲಸವನ್ನು ಸೂರಗೆ
ಬಿಟ್ಟು ಬಿಡಬೇಕು.

೭ನೇ ಭಾಗ — ಉಪಕರಣಗಳು — ಈ ಅವಧಿಯಲ್ಲಿ ಹೊಸ ಶಿಕ್ಷಕನು ತನ್ನ ಕೆಲಸದಲ್ಲಿ ತಕ್ಕಮಟ್ಟಿಗೆ ನಿಪುಣನಾಗಿರಬಹುದೆಂದು ಊಹಿಸಲಿಕ್ಕೆ ಪ್ರತ್ಯವಾಯವಿಲ್ಲ. ಇಂಥ ಶಿಕ್ಷಕನ ಕೈಯಲ್ಲಿ ಕೆಲವು ಉಪಕರಣಗಳನ್ನು ಕೊಟ್ಟು ಅವುಗಳಿಂದ ಒಂದು ಪಾಠವನ್ನು ಸಿದ್ಧಪಡಿಸಲಿಕ್ಕೆ ಹೇಳಬಹುದು. ವಾಡಿಕೆಯಾಗಿ ಪಾಠದ ಆದಿಯಲ್ಲಿ ಅದಕ್ಕೆ ಬೇಕಾಗುವ ಸಾಮಾನ್ಯ ರೂಪಾಗೂ ವಿಶೇಷ ಉಪಕರಣಗಳನ್ನು ಬರೆಯಲಿಕ್ಕೆ ಬೇಕು. ಪಾಠದ ಟಿಪ್ಪಣಿಗಳನ್ನು ಸಿದ್ಧ ಮಾಡುವದಕ್ಕಿಂತ ಮುಂಚೆ ಆ ಪಾಠವನ್ನು ಕುರಿತು ಚಿಕಿತ್ಸಾಗಿ ಆಲೋಚಿಸಿ ಪಾಠ ಮುಖದಲ್ಲಿ ಬರೆಯುತಕ್ಕ ಸಹಾಯಭೂತವಾದಂಥ ಪ್ರಧಾನ ಸಂಗತಿಗಳನ್ನು ಕೆಳಗೆ ಬರೆದಿರುತ್ತೇವೆ.

ಹೂವಿನ ವಿಷಯದಲ್ಲಿ ಪಾಠದ ಟಿಪ್ಪಣಿಗಳು

೧	ವರ್ಗ.	೩ನೇ ಇಯತ್ತೆ.
೨	ವೇಳೆ.	ನಾಲ್ವತ್ತು ನಿಮಿಷ
೩	ಉದ್ದೇಶ.	ಹೂವುಗಳ ವಿಷಯದಲ್ಲಿ ಪ್ರೀತಿಯನ್ನು ಹುಟ್ಟಿಸುವದು
೪	ಉಪಕರಣಗಳು	ಕಪ್ಪು ಹಲಗೆ, ಬಣ್ಣದ ಖಡು, ಸ್ಪಷ್ಟಿಟಿಕಿನ್ನಿ ಗಳು, ಹೂವುಗಳು, ಲೆಸ್ಸನಗಳು, ಸೂಜಿಗಳು, ಚರ್ಮ, ಕಾಕಂಬಿ ನೀರು ಹಾಕಲಕ್ಕೆ ಕಾಚಿನ ಪಾತ್ರೆ.

ವಿಷಯ.	ಕ್ರಮ.
ಇಲ್ಲಿ ವಿಷಯವನ್ನು ಪ್ರಾರಂಭಿಸಬೇಕು.	ಇಲ್ಲಿ ಕ್ರಮವನ್ನು ಪ್ರಾರಂಭಿಸಬೇಕು.

ಆ ಕಡೆಯ ಭಾಗ— ಸಂಪೂರ್ಣವಾದ ಪಾಠದ ಟಿಪ್ಪಣಿಗಳು—ಹಿಂದಿನ ಭಾಗಗಳಲ್ಲಿ ಹೇಳಿದಂತೆ ಕೆಲವು ಕಾಲ ರೂಢಿ ಮಾಡಿದ ನಂತರ ಶಿಕ್ಷಕನಿಗೆ ಪಾಠಗಳ ಸಂಪೂರ್ಣ ಟಿಪ್ಪಣಿಗಳನ್ನು ಪರರ ಸಹಾಯವಿಲ್ಲದೆ ಬರೆಯಲಿಕ್ಕೆ ಬರಬೇಕು. ಆದರೆ ಇನ್ನಾದರೂ ಅವನು ತೆಗೆದ ಯಾವತ್ತು ಟಿಪ್ಪಣಿಗಳನ್ನು ಅವುಗಳಲ್ಲೇನಾದರೂ ದೋಷವಿದ್ದರೆ ನೋಡುವದಕ್ಕಾಗಿ ಮುಖ್ಯ ಶಿಕ್ಷಕನಿಗೆ ತೋರಿಸಲಿಕ್ಕೇ ಬೇಕು. ಆದರೆ ಅವನ ತಯಾರಿಯು ಬಗ್ಗೆ ಅವನಿಗೆ ಹಿಂದೆ ಹೇಳಿದ ಭಾಗಗಳಲ್ಲಿ ವರ್ಣಿಸಿದಂಥ ವಿಶೇಷ ಸಹಾಯವು ಸಿಗಲಾರದು. ಈ ಪ್ರಕಾರ ಶಿಕ್ಷಕನು ಅಸಹಾಯವಾಗಿ ಬರೆದ ಟಿಪ್ಪಣಿಗಳಲ್ಲಿ ವಿಶೇಷ ನ್ಯೂನತೆಯು ಕಂಡು ಬಂದರೆ ಆ ನ್ಯೂನತೆಯ ಸಂಬಂಧದಿಂದ ಹಿಂದಿನ ಆಯಾ ಭಾಗಗಳಲ್ಲಿ ಹೇಳಿದಂತೆ ಅವನು ತಿರಿಗಿ ತನ್ನ ಅಭ್ಯಾಸ ಕ್ರಮವನ್ನು ನಡಿಸಲಿಕ್ಕೆ ಬೇಕು.

ಪಾಠಗಳ ಗುಣದೋಷಗಳ ವಿವೇಚನ:—

ಚಲೋ ಪಾಠ—ಪಾಠದ ಗುಣಾವಗುಣನಿರ್ಣಯವು ಕೆಲವು ಸಂಗತಿಗಳನ್ನವಲಂಬಿಸಿರುತ್ತದೆ. ಅವು ಯಾವವೆಂದರೆ—

೧. ಪಾಠದ ಮುಖ್ಯ ಸಂಗತಿಗಳು ಹೇಳಲ್ಪಟ್ಟಿರುವವೋ ವಿದ್ಯಾರ್ಥಿಗಳಿಂದ ಹೊರಡಿಸಲ್ಪಟ್ಟಿರುವವೋ? ವಿದ್ಯಾರ್ಥಿಗಳಿಂದ ಹೊರಡಿಸುವದೇ ಚಲೋ ಪಾಠದ ಭೇದಕಲಕ್ಷಣವು.

೨ ಪ್ರತಿಯೊಂದು ಸಂಗತಿಯು ಸಾಧ್ಯವಾಗಿ ಹುಡುಗರಿಂದಲೇ ಸಿದ್ಧ ಮಾಡಲ್ಪಟ್ಟಿರುವದೋ?

೩ ಪ್ರತಿಬಿಂದು ಸಂಗತಿಯು ವಿದ್ಯಾರ್ಥಿಗಳ ಮುಂದೆ ನಿಃಸಂದೇಹವಾಗಿ ಇರಿಸಲ್ಪಟ್ಟಿರುವದೋ?

೪ ಪ್ರತಿಬಿಂದು ಸಂಗತಿಯು ಕಾರಿಣ್ಯವು ಹುಡುಗರ ನಿದರ್ಶನಕ್ಕೆ ತಂದುಕೊಡಲಟ್ಟಿರುವದೋ?

೩ ಪ್ರತಿಬಿಂದು ಸಂಗತಿಯನ್ನು ಸ್ವತ್ತಾಗಿ ಸಾಧ್ಯಮಾಡಿ ಕೊಳ್ಳುವ ಕ್ರಮದಿಂದ ವಿಚಾರ ಶಾಸ್ತ್ರಕ್ಕೆ ಅನುರೂಪವಾಗಿ ವಿಚಾರಶಕ್ತಿಯು ಬೆಳಿಸಲ್ಪಟ್ಟಿರುವದೋ?

೪ ನಿಸ್ಸಂದಿಗ್ಧವಾದ ಜ್ಞಾನವನ್ನು ನೆಲೆಗೊಳಿಸಲಿಕ್ಕೆ ಪ್ರತಿ ಒಂದು ಸಂಗತಿಯು ಸಾಧ್ಯವಾದ ಮಟ್ಟಿಗೆ ಅವರ ಕಣ್ಣು ಮುಂದೆ ನಿಲ್ಲಿಸಲ್ಪಟ್ಟಿರುವದೋ?

೫ ಪ್ರತಿಯೊಂದು ಸಂಗತಿಯು ದೃಷ್ಟಾಂತ ಸಾದೃಶ್ಯದಿಂದ ಸ್ಪಷ್ಟವಾಗಿ ತಿಳಿಸಲ್ಪಡುವದಲ್ಲದೆ, ನೆಲೆಗೊಳಿಸಲ್ಪಟ್ಟಿರುವದೋ?

೬. ಪ್ರಯೋಗಗಳೂ ಆಕೃತಿಗಳೂ ಸರಿಯಾಗಿಯೂ ಯುಕ್ತೋಚಿತವಾಗಿಯೂ ಉಪಯೋಗಿಸಲ್ಪಟ್ಟಿರುವವೋ?

೭. ಪ್ರತಿಯೊಂದು ಸಂಗತಿಯು ಮುಗಿದ ಕೂಡಲೆ ಅದು ಹುಡುಗರಿಗೆ ತಿಳಿದದೆಯೋ ಇಲ್ಲವೋ ಎಂಬದನ್ನು ಕುಶಲ ಪ್ರಶ್ನೆಗಳಿಂದ ಹೊರಡಿಸಿರುತ್ತದೆಯೋ ಇಲ್ಲವೋ? ಮತ್ತು ಪಾಠದ ಕೊನೆಗೆ ಉಪಸಂಹಾರ ಮಾಡಲ್ಪಟ್ಟಿರುತ್ತದೆಯೋ ಇಲ್ಲವೋ?

೮. ನೀಗದ್ದನ್ನು ಸಾಧಿಸಲಿಕ್ಕೆ ಯತ್ನ ಮಾಡಲ್ಪಟ್ಟಿರುವದೋ?

೯. ಕರೇ ಹಲಿಗೆಯ ಉಪಯೋಗವು ಸರಿಯಾಗಿ ಮಾಡಲ್ಪಟ್ಟಿರುತ್ತದೆಯೋ ಇಲ್ಲವೋ?

೧೦. ನಿಶ್ಚಿತವಾದ ಪ್ರಯೋಜನವನ್ನುದ್ದೇಶಿಸಿ ಪಾಠವು ಸಾಗಿಸಲ್ಪಟ್ಟಿರುತ್ತದೋ? ಇಲ್ಲವೋ?

೧೧. ಪಾಠದ ಕ್ರಮವೂ ಸರಳವು ಸುಲಭವೂ ಸಹಜವೂ ಶಾಸ್ತ್ರಸಮ್ಮತವೂ ಆಗಿರುವದೋ? ಇಲ್ಲವೋ?

ಕೆಟ್ಟ ಪಾಠ—ಕೆಟ್ಟ ಪಾಠಗಳ ಲಕ್ಷಣಗಳನ್ನು ಈ ಪ್ರಕಾರ ಹೇಳಬಹುದು:—

೧. **ಪ್ರತಿಧ್ವನಿರೂಪ ಪಾಠ**—ಕೇವಲ ಸಂಗತಿಗಳನ್ನೂ ಮತ್ತು ಆ ಸಂಬಂಧದ ಕೆಲವು ಸಾಮಾನ್ಯ ಪ್ರಶ್ನೆಗಳನ್ನೂ ಮಾಡುವದು.

೨. **ವ್ಯಾಖ್ಯಾನರೂಪ ಪಾಠ**—ಶಿಕ್ಷಕನು ತಾನೇ ಸಂಗತಿಯುದ್ದಕ್ಕೆ ಹೇಳುತ್ತ ಹೋಗುವದು ಈ ಮಾದರಿಯ ಪಾಠವು

ನಿವೃತ್ತೀಕರಣವು. ಇದರಿಂದ ಹುಡುಗರ ಅಭಿರುಚಿಯು ನಷ್ಟವಾಗುವದಲ್ಲದೆ ಅವರು ಬೇಸತ್ತು ಒಮ್ಮೊಮ್ಮೆ ತೊಂದರೆಪಡಿಸಹತ್ತುವರು.

೩. ಅಸಂಗತ ಪಾಠ—ಇದರಲ್ಲಿ ಬಂದಕ್ಕೊಂದು ಸಂಬಂಧವಿಲ್ಲದಂಥ ಅನೇಕ ವಿಷಯಗಳು ಸೇರಿಸಲ್ಪಡುವವು.

೪. ಉಚ್ಚಾಂಕುಲ ಪಾಠ—ಇದು ಧೂಮಕೇತುವಿನಂತೆ ಅಸಿಯಮಿತವಾಗಿರುವದರಿಂದ ಇದಕ್ಕೆ ಧೂಮಕೇತು ಪಾಠವೆಂತಲೂ ಅನ್ನಬಹುದು.

೫. ವ್ಯಕ್ತಿಪಾಠ—ಇದರಲ್ಲಿ ಶಿಕ್ಷಕನು ಹುಡುಗರಿಗೆ ಕಲಿಸುವದನ್ನು ಬಿಟ್ಟು ನೋಡಬಂದವರಿಗೆ ಅನುಲಕ್ಷಿಸಿ ಪಾಠವನ್ನು ಸಾಗಿಸುವನು.

೬. ಲಳತಿಗೆಟ್ಟ ಪಾಠ—ಇದರಲ್ಲಿ ಪಾಂತರ ಸಂಗತಿಗಳ ವರ್ಣನೆಪ್ರಾ ಅಳತಿಗೆಟ್ಟು ಪ್ರಧಾನ ಸಂಗತಿಗಳು ಮರೆಮಾಡಲ್ಪಡುವವು

೭. ತಪ್ಪು ಗೃಹಿಕೆಯ ಪಾಠ ಇದರಲ್ಲಿ ಶಿಕ್ಷಕನು ಹುಡುಗರಿಗೆ ಏನೂ ಗೊತ್ತಿಲ್ಲವೆಂದು ಗ್ರಹಿಸಿ ಬುಡದಿಂದ ಕಲಿಸುವನು ಇಲ್ಲವೆ ತಮಗೆ ಗೊತ್ತಿದ್ದದ್ದಕ್ಕಿಂತಲೂ ಹೆಚ್ಚು ಗೊತ್ತುಂಟೆಂದು ಗ್ರಹಿಸಿಕೊಂಡು ಕಲಿಸುವನು

೮ ಯಂತ್ರದಂಥ ಪಾಠ . ಬುದ್ಧಿಯನ್ನು ಎಚ್ಚರಿಸಿ ಕೆಲಸಕ್ಕೆ ಹಚ್ಚುವ ಪ್ರಶ್ನೆಗಳಿಲ್ಲದ ಪಾಠವು.

೯. ವಿಸ್ಮಯೋದ್ರೇಕ ಪಾಠ—ಬುದ್ಧಿಯನ್ನು ಹೆಚ್ಚಿಸಾಡಲಿಕ್ಕೆ ಬೇಡಾದಂಥ ಸಂಗತಿಗಳನ್ನು ಕಲಿಸುವ ಪಾಠ ಅಂದರೆ ಉದ್ವಳತೆ ಅಗಲಳತೆಗಳ ಸಂಬಂಧದ ಪ್ರಶ್ನೆಗಳು

ಟೀಕಾ ಪಾಠ

ಟೀಕಾಪಾಠ ಅಂದರೇನು?—ಟೀಕಾಪಾಠವು ನಿಜವಾಗಿ ನೂತನ ಶಿಕ್ಷಕನಿಗೆ ಶಿಕ್ಷಣ ಕೊಡುವಂಥ ಪಾಠವಾಗಿರುವದು. ಇದರಲ್ಲಿ ಅವನು ತಾನುಬಲ್ಲಂಥ ಉತ್ತಮ ಕ್ರಮಗಳನ್ನೂ ತನ್ನ ಯಾವತ್ತು ಶಕ್ತಿಗಳನ್ನೂ ಉಪಯೋಗಿಸುವನು. ಇದು ಅವನ ವಿಶೇಷ ಪ್ರಯತ್ನದ ಫಲವಾಗಿರವದು. ಇದರಲ್ಲಿ ಅವನ ಪರಮಾವಧಿಯ ಕೌಶಲ್ಯವೂ ಧೈರ್ಯವೂ

ವ್ಯಕ್ತವಾಗುವದು. ಇದು ಅನೇಕಾಂಗಗಳುಳ್ಳಂಥ ಕಠಿಣ ಕೆಲಸವಾಗಿರುವದು. ಇದರಲ್ಲಿ ಯಶಸ್ಸು ಬರಬೇಕಾದರೆ ಸೋಪಪತ್ತಿಕವಾದಂಥ ಅನುಭವಜನ್ಯವಾದಂಥ ಶಿಕ್ಷಣದ ಜ್ಞಾನವೂ, ಮನಃಪೂರ್ವಕ ಕೆಲಸ ಮಾಡುವಂಥ ಕುಶಲನಾದಂಥ ಮುಖ್ಯ ಶಿಕ್ಷಕನ ಸಹಾಯವೂ, ಹುಡುಗರ ಮನಸ್ಸು, ಸ್ವಭಾವ ನಡತೆಗಳ ತಕ್ಕಷ್ಟು ಜ್ಞಾನವೂ ಬೇಕಾಗುವವು. ಇದಲ್ಲದೆ ಇದರ ಸಾಫಲ್ಯ ವೈಫಲ್ಯಗಳು ಮುಖ್ಯವಾಗಿ ಶಿಕ್ಷಕನನ್ನೇ ಅವಲಂಬಿಸಿರುತ್ತವೆ. ಶಿಕ್ಷಕನು ಹುಡುಗರ ಮನಸ್ಸನ್ನು ಎಳಕೊಳ್ಳುವದಕ್ಕೂ ಅವರಲ್ಲಿ ಪ್ರಯತ್ನ ಮಾಡುವ ಉತ್ಸಾಹವನ್ನು ಹುಟ್ಟಿಸುವದಕ್ಕೂ ಶಿಕ್ಷಕನಲ್ಲಿ ಬಲವಾದ ತಿದ್ದುವಿಕೆಯ ಶಕ್ತಿಗಳೂ ಪ್ರಸಂಗಾವಧಾನವೂ ಮನಸ್ಸಿನ ಔದಾರ್ಯವೂ ಅಕೃತ್ರಿಮ ಪ್ರೇಮವೂ ಇರಲಿಕ್ಕೆ ಬೇಕು. ಹೊಸ ಶಿಕ್ಷಕರು ಕಲಿಸುವ ಪೀಠಿಕಾ ಪಾಠಗಳನ್ನು ಮುಖ್ಯ ಶಿಕ್ಷಕನಾಗಲಿ ಉಪಶಿಕ್ಷಕನಾಗಲಿ ಕಲಿಸಿದ ಮಾದರಿಯ ಪಾಠದ ಧೋರಣದಿಂದಲೇ ಕಲಿಸುವದು ಶ್ರೇಯಸ್ಕರವು. ಬಳ್ಳೇ ಶಿಕ್ಷಣಪದ್ಧತಿಯನ್ನು ಕಲಿಸಲಿಕ್ಕೆ ವಾಚನದಿಂದಲೂ ವ್ಯಾಖ್ಯಾನದಿಂದಲೂ ಉಂಟಾಗುವ ನೆರವಿಗಿಂತ ಶಿಕ್ಷಣದ ಪ್ರತ್ಯಕ್ಷ ಉದಾಹರಣದಿಂದ ಬಲವಾದ ಸಹಾಯವಾಗುವದು. ಈ ಪ್ರತ್ಯಕ್ಷ ಉದಾಹರಣದಿಂದ ಕೆಲಸದ ಕ್ರಮ ಕೌಶಲ್ಯಗಳು ತಿಳಿಯುವದಲ್ಲದೆ ಹೊಸ ಶಿಕ್ಷಕನಲ್ಲಿ ನಂಬಿಕೆಯು ಹುಟ್ಟುತ್ತದೆ ಈ ನಂಬಿಕೆಯು ಬಹಳ ಪ್ರಯೋಜನಕರವಾದ ಸಂಗತಿಯು. (ಸಶೇಷ)

SELECTION FROM THE KARNATAKA GAZATTEER.

ಕರ್ನಾಡ ಗಝೇಟಿಯರದಿಂದ ಅವತರಣಗಳು.

(ಹಿಂದೇ ಪುಸ್ತಕದ ೨೩೫ನೇ ಪುಟದಿಂದ ಮುಂದೆ ಸಾಗಿದ್ದು.)

ಅಂಕೋಲಾ ತಾಲೂಕ.

ಕ್ಷೇತ್ರ—ಇದು ಸಮುದ್ರ ತೀರದಲ್ಲಿ ಕಾರವಾರ ತಾಲೂಕಿ

ನೆ ದಕ್ಷಿಣಕ್ಕಿರುತ್ತದೆ. ಇದರಲ್ಲಿ ಸರಕಾರಿ ಹಳ್ಳಿಗಳು ೯೦ ಉಂಟು. ಕ್ಷೇತ್ರ ೫೬೬ ಚ. ಮೈಲು ಜನಸಂಖ್ಯೆ ೩೪೧೪೯, ಭೂಮಿಯ ಕಂದಾಯ ೫೬೬೬೦ ರೂಪಾಯಿ.

ಸ್ವರೂಪ ಭೂಮಿ—ಸಮುದ್ರ ತೀರವು ದಕ್ಷಿಣ ಮೇರೆಯಲ್ಲಿ ಗಂಗಾವಳಿಯವರೆಗೆ ೧೬ ಮೈಲು ಇರುವದು. ಈ ತಾಲೂಕಿನಲ್ಲಿ ಒಂದೆರಡು ಸಣ್ಣ ಒತ್ತುಗಳು ಮಾತ್ರ ಸಮುದ್ರದಿಂದ ಭೂಮಿಯೊಳಗೆ ಬಂದಿರುತ್ತವೆ. ತೀರದಿಂದ ೪।೫ ಮೈಲಿನವರೆಗೆ ಮಾರ್ಗಕ್ಕೆ ಭತ್ತದ ಗದ್ದೆಗಳೂ ಅಡಿಕೆ, ಮಾವು, ಹಲಸು ಮುಂತಾದ ಫಲಗಳ ತೋಟಗಳೂ ಇರುತ್ತವೆ. ಅವುಗಳ ಪೂರ್ವಕ್ಕೆ ಸಣ್ಣ ಸಣ್ಣ ಗುಡ್ಡಗಳು ಆರಂಭವಾಗಿ, ಮುಂದ ಮುಂದಕ್ಕೆ ಹೋದ ಹಾಗೆ ಎತ್ತರವಾದ ಬೆಟ್ಟಗಳು ತಲೆದೋರುತ್ತವೆ. ಕೆಲವು ಕಡೆಯಲ್ಲಿ ಸಹ್ಯಾದ್ರಿಯಿಂದ ಗುಡ್ಡ ಸಾಲುಗಳು ಪಶ್ಚಿಮಕ್ಕೆ ಸಮುದ್ರದವರೆಗೆ ಹಬ್ಬಿರುವವು.

ಹವೆ, ಮಳೆ, ನೀರು—ಸಮುದ್ರತೀರದ ಹವೆಯು ಆರೋಗ್ಯದ್ದು, ಜ್ವರವಿಲ್ಲ; ಸಹ್ಯಾದ್ರಿಯ ಸಮೀಪದಲ್ಲಿ ಜ್ವರೋಪದ್ರವವಾಗುತ್ತದೆ. ಮಳೆಯು ಬಹುತರ ಕಾರವಾರದ ಹಾಗೇ; ನೀರಿನ ಆಶ್ರಯವು ಸಮುದ್ರ ತೀರದಲ್ಲಿ ಬಾವಿಗಳು ಬೇರೆ ಕಡೆಯಲ್ಲಿ ಸರವುಗಳು. ನೀರಿಗೆ ಕೊರತೆಯಿಲ್ಲ.

ಜನರು—ಒಟ್ಟು ಜನಸಂಖ್ಯೆದಲ್ಲಿ ಹಿಂದೂ ಜನರು ೬೯ ಪಾ೯೪, ಮುಸಲ್ಮಾನರು ೩, ಕ್ರಿಸ್ತಿಗಳು ೧,೧೪. ಹಿಂದೂಗಳಲ್ಲಿ ಬ್ರಾಹ್ಮಣರು ೫೮೬೬ ಹಾಲ್ವಕ್ಕೀ ಒಕ್ಕಲಿಗರು ೮೦೧೧, ಸಾಡೋರು ೧೪೪೩, ಕುಣಬಿಗಳು ೧೦೧೮. ಕರೇಒಕ್ಕಲಿಗರು ೧೧೦೧, ಸೋನಾರರು ೧೪೦೧ ಕೂಮಾರಸ್ವೈಕರು ೦೩೦೩, ಹಳೆಸ್ವೈಕರು ೧೯೪೯, ಆರೇರು ೧೪೦೦ ಇತ್ಯಾದಿ.

ದೊಡ್ಡ ಊರುಗಳು.

ಅಂಕೋಲಾ—ಕಾರವಾರದ ಆಗ್ನೇಯಕ್ಕೆ ೧೪ ಮೈಲಿನ ಮೇಲೆ ಜ ಸ. ೮೧,೦೪೬. ಇದು ತಾಲೂಕಿನ ಮುಖ್ಯಗಾವು; ತಾಲೂಕ ಕಚೇರಿಯಲ್ಲದೆ ಟಪಾಲಕಚೇರಿ, ಫೌಜದಾರ ಕಚೇರಿ, ಕಷ್ಟಮಕಚೇರಿ, ಇಂಗ್ರೇಜಿ ಶಾಲೆ, ಮುಖ್ಯ

ಘಂ ಬಂಗಲೆ ಇರುತ್ತವೆ. ಬಜಾರಿನಲ್ಲಿ ೬೦ ಅಂಗಡಿಗಳಿವೆ. ಅಡಿಕೆ ತಂಗು, ತಂಬಾಕ ಕಿರಾಣಿ, ವಸ್ತ್ರಗಳ ವ್ಯಾಪಾರವಾಗುತ್ತದೆ ಸ್ಟ ೧೪೪೧ - ೪೨ ವರೆಗೆ ೪ ವರುಷದಲ್ಲಿ ಸಮುದ್ರಮಾರ್ಗವಾಗಿ ಆಯಾತವುಮಾಲು ಸರಾಸರಿ ೫೬೪೦ ರೂಪಾಯಿದ್ದು, ನಿರ್ಗತಮಾಲು ಸರಾಸರಿ ೬೪೯೬೦ ರೂಪಾಯದ್ದು ಆಮದ ರಫ್ತುವಾಯಿತು. ಅಂಕೋಲೆಯ ಹಾಳು ಕೋಟೆಯು ಊರಿಂದ ೪೦೦ ಯಾರ್ಡಿನ ಮೇಲೆ ೬೦೦ ಯಾರ್ಡು ಸುತ್ತಳತೆಯುಳ್ಳದ್ದಿರುತ್ತದೆ. ಇದರಲ್ಲಿ ರುದ್ರೇಶ್ವರನೆಂಬ ದೇವಸ್ಥಾನದ ಹೊರತು ಬೇರೆ ಮನೆಮಾರುಗಳೇನೂ ಇಲ್ಲ. ಇದನ್ನು ಸ್ವಾದೆಯ ಅರಸನೊಬ್ಬನು ಅಂಕೋಲೆಯಲ್ಲಿ ಇರುತ್ತಿದ್ದ ತನ್ನ ಉಪಪತ್ನಿಗಾಗಿ ಕಟ್ಟಿಸಿದನೆಂದು ಹೇಳುತ್ತಾರೆ. ಸ್ಟ ೧೬೬೫ರಲ್ಲಿ ಶಿವಾಜಿಯು ಅಂಕೋಲೆಯನ್ನು ಸುಲಿದು ಬಿಟ್ಟನು. ಆಗ ಇದು ವಿಜಾಪುರದ ರಾಜ್ಯಕ್ಕೆ ಸೇರಿತ್ತು. ಸ್ಟ ೧೭೬೪ರಲ್ಲಿ ಹೈದರನು ಅಂಕೋಲೆಯನ್ನು ತಕ್ಕೊಂಡಾಗ ೬೦೦೦ ಜನ ಕ್ರೈಸ್ತಮತಸ್ಥರು ಇಲ್ಲಿ ಇರುತ್ತಿದ್ದರು, ಟೀಪೂನು ಕ್ರೈಸ್ತ ಜನರ ಗುಡಿಯನ್ನು ಸುಲಿದು ಸುಟ್ಟು, ಯಾವತ್ತು ಕ್ರೈಸ್ತಿಗಳನ್ನು ಶರೆ ಹಿಡಿದುತಕ್ಕೊಂಡು ಹೋದನು.

ಅವರ್ಸೆ—ಅಂಕೋಲೆಯು ಉತ್ತರಕ್ಕೆ ೫ ಮೈಲಿನ ಮೇಲೆ ಇಲ್ಲಿ ಹಡಗದ ಆಕಾರದ್ದೊಂದು ಶಾಂತಾದೇವಿ ಎಂಬ ದೇವತೆಯ ಗುಡಿಯುಂಟು ಈ ದೇವತೆಗೆ ಕಾರ್ವಿ ಜನರೂ ಪಾತರದವರೂ ಭಕ್ತಿಯಿಂದ ನಡಕೊಳ್ಳುವರು. ನವರಾತ್ರಿಯಲ್ಲಿ ಉತ್ಸವವಾಗುತ್ತದೆ.

ಬೇಲಿಕೇರಿ—ಅಂಕೋಲೆಯು ಉತ್ತರಕ್ಕೆ ನಾಲ್ಕು ಮೈಲಿನ ಮೇಲೆ, ಜ. ಸ. (೧೦೬೬) ಇದು ಸಣ್ಣ ಬಂದರವಿರುತ್ತದೆ ಸರಕಾರೀ ಕಪ್ಪಮಕಚೇರಿಯುಂಟು. ಇಲ್ಲಿಯು ಹವೆಯು ಆರೋಗ್ಯದ್ದೆಂದು ಎಣಿಸಲ್ಪಡುತ್ತದೆ ಸಮುದ್ರದಂಡೆಯಲ್ಲಿ ಆಲದ ಬನದೊಳಗೆ ಸರಕಾರೀ ಬಂಗಲೆಯುಂಟು.

ಗಂಗಾವಳಿ—ಅಂಕೋಲೆಯು ಉತ್ತರಕ್ಕೆ ೫ ಮೈಲಿನಮೇಲೆ ಸರಕಾರೀ ಕಪ್ಪಮ್ ಕಚೇರಿಯುಂಟು ಆಶ್ವಿನ ವದ್ಯ ಅಪ್ಪಮಿಯಲ್ಲಿ ಈ ಗುಡಿಯ ಎದುರಿಗೆ ಜನರು ಗಂಗಾವಳಿ

ಯಲ್ಲಿ ಸ್ನಾನಮಾಡುವರು. ಆ ದಿವಸ ಗೋಕರ್ಣದಿಂದ ಮಹಾಬಳೇಶ್ವರನ ಮೂರ್ತಿಯನ್ನು ಪಲ್ಲಕ್ಕಿಯೊಳಗೆ ಕುಳ್ಳಿರಿಸಿಕೊಂಡು ಇಲ್ಲಿಗೆ ಸ್ನಾನಕ್ಕೆ ತರುವರು.

ಸಿರಸೀ ತಾಲೂಕು

ಕ್ಷೇತ್ರ—ಘಟ್ಟದ ಮೇಲೆ ಮಧ್ಯಭಾಗದಲ್ಲಿ ಎಲ್ಲಾಪುರ ತಾಲೂಕಿನ ದಕ್ಷಿಣಕ್ಕೆ; ಹಳ್ಳಿಗಳು ೮೯, ಕ್ಷೇತ್ರ ೬೬೯ ಚ. ಮೈಲು ಜನಸಂಖ್ಯೆ ೬೦೪೦೦, ಭೂಮಿಯ ಕಂದಾಯ ೧೩೧೯೬೦ ರೂಪಾಯಿ

ಸ್ವರೂಪ, ಭೂಮಿ—ಪೂರ್ವಭಾಗದಲ್ಲಿ ಗುಡ್ಡಗಳು ಕಡಿಮೆ; ಪಶ್ಚಿಮಭಾಗದಲ್ಲಿ ಸಹ್ಯಾದ್ರಿಯ ಕಡಿಗೆ ಗುಡ್ಡಗಳೂ ತಪ್ಪಲ ಭೂಮಿಗಳೂ ಹೆಚ್ಚಾಗುತ್ತ ಹೋಗುತ್ತವೆ. ಆದರೆ ಅಡಿವೆ ಕಡಿಮೆ; ಸಹ್ಯಾದ್ರಿಯ ಬುಡದಲ್ಲಿ ಸಹ ಕೊಳ್ಳಗಳಲ್ಲಿ ಬಹು ಬೆಳೆಯುಳ್ಳ ಭೂಮಿಯನ್ನು ಅದರಲ್ಲಿ ಅದಿಕೆ, ಯಾಲಕ್ಕಿ ಮುಂತಾದವುಗಳ ತೋಟಗಳನ್ನು ಗದ್ದಿಗಳನ್ನು ಕಾಣಬಹುದು ಪೂರ್ವಭಾಗದ ಭೂಮಿ ವಾಡಿಕೆಯಾಗಿ ಎರೆ; ಪಶ್ಚಿಮದಲ್ಲಿ ಉತ್ತರದಲ್ಲಿ ಕೆಂಪು ಭೂಮಿ, ತಗ್ಗುಗಳಲ್ಲಿ ಕರೆ ಭೂಮಿಯುಂಟು.

ಹವೆ, ಮಳೆ, ನೀರು—ಬೇಸಿಗೆಯಲ್ಲಿ ಹವೆಯು ಆರೋಗ್ಯವಿರುತ್ತದೆ; ಆದರೆ ಜಳಿಗಾಲದಲ್ಲಿ ರೋಗಕಾರಕ, ಜ್ವರೋಪದ್ರವ ಬಹಳ. ಮಳೆಯು ಪೂರ್ವಕ್ಕಿಂತ ಪಶ್ಚಿಮದಲ್ಲಿ ಹೆಚ್ಚು, ಸಿರಸಿಯಲ್ಲಿ ೬೪ ರಿಂದ ೧೧೦ ಇಂಚಿನ ವರಗೆ ಸರಾಸರಿ ಳಿಕ್ಕುತ್ತದೆ. ವರದಾ ನದಿಯು ಈ ತಾಲೂಕಿನೊಳಗಿಂದ ಹರಿಯುತ್ತದೆ; ತಡಸಿಯೆಂಬ ಹೊಳೆಯು ಇದೇ ತಾಲೂಕಿನಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುತ್ತದೆ ಇವಲ್ಲದೆ ಹಸ್ಕಿರಡು ತೊಂಗಳೂ ಹರಿಯುವ ಸರಪ್ರಗಳು ಹಲವುಂಟು. ಹಳ್ಳಗಳಿಗೆ ಕೆರೆಗಳೂ ಭಾವಿಗಳೂ ಇರುತ್ತವೆ. ಒಟ್ಟಿಗೆ ನೀರಿನ ಸಮೃದ್ಧಿಯುಂಟು

ಜನರು—ಒಟ್ಟು ಜನಸಂಖ್ಯೆಯಲ್ಲಿ ಹಿಂದೂ ಜನರು ೨೯೫೫೫, ಮುಸಲ್ಮಾನರು ೫೮೮೮, ಕ್ರಿಸ್ತಿಗಳು ೧೮೦ ಹಿಂದೂ ಜನರಲ್ಲಿ ಬ್ರಾಹ್ಮಣರು ೧೫೯೦ ಮರಾಠರು ೧೮೦೫ ಲಿಂಗವಂತರು ೧೦೪೪, ಬಣಜಿಗರು ೧೦೫೦,

ಶೇದು ೩೭೧೨, ಕರೇ ಬಿಕ್ಕಲಿಗರು ೩೪೭೦ ಕುಣಬಿಗಳು ೨೩೧೩, ಸೋಸಾರರು ೧೮೦೦, ಪಳಕ್ಯೆಕರು ೪೪೪೩, ಬಗಸರು ೧೬೯೩, ಹೊಲಿಯರು ೩೩೭೪, ಚಲುವಾದಿಗಳು ೨೦೭೪ ಇತ್ಯಾದಿ (ಸಶೇಷ).

CORRESPONDENCE.

ಪತ್ರವ್ಯವಹಾರ.

(೯೯೦ ನೇ ಪುಟದಿಂದ ಮುಂದೆ ಸಾಗಿದ್ದು.)

ಈ ವಿಚಾರದಿಂದ ವಜಾಬಾಕಿಯನ್ನು ಕಲಿಯುವ ಪೂರ್ವದಲ್ಲಿ ೧೪ ರ ವರೆಗೆ ಕ್ರಮಾಂಕಿಗಳ ವಜಾಬಾಕಿಯನ್ನು ಕಲಿಯುವದು ಅವಶ್ಯವೆಂದು ಸಾಜವಾಗಿ ಗೊತ್ತಾಗುವದು.

ವಜಾಬಾಕಿಯ ತಾಳೆಗಳು :- (೧) ಕಳಿಸಿಕೊಂಡ ಸಂಖ್ಯೆಯಲ್ಲಿ ಉಳಿದ ಸಂಖ್ಯೆಯನ್ನು ಕಳೆದರೆ ಕಳೆದ ಸಂಖ್ಯೆಯಷ್ಟು ಉಳಿದರೆ ವಜಾಬಾಕಿ ಸರಿಯಾಯಿತೆಂದು ತಿಳಿಯಬೇಕು.

(೨) ಕಳೆದ ಸಂಖ್ಯೆಯಲ್ಲಿ ಉಳಿದ ಸಂಖ್ಯೆಯನ್ನು ಕೂಡಿಸಲು ಬಂದ ಬೇರೀಜು ಕಳಿಸಿಕೊಂಡ ಸಂಖ್ಯೆಗೆ ಸರಿಯಾಗಿದ್ದರೆ ವಜಾಬಾಕಿ ಸರಿಯಾಯಿತೆಂದು ತಿಳಿದುಕೊಳ್ಳಬೇಕು.

ಈ ತಾಳೆಗಳ ವಿವರಣೆಗಳು.

ವಜಾಬಾಕಿಯು ದೊಡ್ಡ ಸಂಖ್ಯೆ ಮತ್ತು ಸಣ್ಣ ಸಂಖ್ಯೆ ಇವುಗಳ ಅಂತರವಾಗಿರುತ್ತದೆ ಈ ಅಂತರವನ್ನು ದೊಡ್ಡದರಲ್ಲಿ ಕಳೆದರೆ ಬಾಕಿಯು ದೊಡ್ಡ ಸಣ್ಣ ಸಂಖ್ಯೆಗೆ ಸರಿಯಾಗಲಕ್ಕ ಬೇಕು.

ಉದಾಹರಣೆ ೪ ಅಂತರವನ್ನು ಸಣ್ಣದರಲ್ಲಿ ಕೂಡಿಸಿದರೆ ಬೇರೀಜು ದೊಡ್ಡ ಸಂಖ್ಯೆಗೆ ಸಮವಾಗಬೇಕು.

ಬೇರೀಜು, ವಜಾಬಾಕಿಗಳ ಲೆಕ್ಕಗಳಿಂದ ಇನ್ನೊಂದು ಮಾತು ಬೈಲಿಗೆ ಬರುತ್ತದೆ ಅದು ಯಾವದೆಂದರೆ :—

ಸಂಖ್ಯೆಗಳ ಭಾಗಗಳ ಬೇರೀಜು ಅಥವಾ ವಜಾಬಾಕಿಗಳು ಕ್ರಮದಿಂದ ಇದೇ ಸಂಖ್ಯೆಗಳ ಬೇರೀಜು ವಜಾಬಾಕಿಗಳಿಗೆ ಸರಿ ಇರುತ್ತವೆ. ಉದಾ :—

ಯಲ್ಲಿ ಸ್ನಾನವಮಾಡುವರು. ಆ ದಿವಸ ಗೋಕರ್ಣದಿಂದ ಮಹಾಬಳೀಶ್ವರನ ಮೂರ್ತಿಯನ್ನು ಪಲ್ಲಕ್ಕಿಯೊಳಗೆ ಕುಳ್ಳಿರಿಸಿಕೊಂಡು ಇಲ್ಲಿಗೆ ಸ್ನಾನಕ್ಕೆ ತರುವರು.

ಸಿರಸೀ ತಾಲೂಕು

ಕ್ಷೇತ್ರ—ಘಟ್ಟದ ಮೇಲೆ ಮಧ್ಯಭಾಗದಲ್ಲಿ ಎಲ್ಲಾಪುರ ತಾಲೂಕಿನ ದಕ್ಷಿಣಕ್ಕೆ; ಹಳ್ಳಿಗಳು ೮೯, ಕ್ಷೇತ್ರ ೬೬೯ ಚ. ಮೈಲು ಜನಸಂಖ್ಯೆ ೬೭೪೦೦, ಭೂಮಿಯ ಕಂದಾಯ ೧೩೧೬೦ ರೂಪಾಯಿ

ಸ್ವರೂಪ, ಭೂಮಿ—ಪೂರ್ವಭಾಗದಲ್ಲಿ ಗುಡ್ಡಗಳು ಕಡಿಮೆ; ಪಶ್ಚಿಮಭಾಗದಲ್ಲಿ ಸಹ್ಯಾದ್ರಿಯ ಕಡಿಗೆ ಗುಡ್ಡಗಳೂ ತಪ್ಪಲ ಭೂಮಿಗಳೂ ಹೆಚ್ಚಾಗುತ್ತ ಹೋಗುತ್ತವೆ. ಆದರೆ ಅಡಿವೆ ಕಡಿವೆ; ಸಹ್ಯಾದ್ರಿಯ ಬುಡದಲ್ಲಿ ಸಹ ಕೊಳ್ಳಗಳಲ್ಲಿ ಬಹು ಬೆಳೆಯುಳ್ಳ ಭೂಮಿಯನ್ನು ಅದರಲ್ಲಿ ಅಡಿಕೆ, ಯಾಲಕ್ಕಿ ಮುಂತಾದವುಗಳ ತೋಟಗಳನ್ನು ಗದ್ದಿಗಳನ್ನು ಕಾಣಬಹುದು. ಪೂರ್ವಭಾಗದ ಭೂಮಿ ವಾಡಿಕೆಯಾಗಿ ಎರೆ; ಪಶ್ಚಿಮದಲ್ಲಿ ಉತ್ತರದಲ್ಲಿ ಕೆಂಪು ಭೂಮಿ, ತಗ್ಗುಗಳಲ್ಲಿ ಕರೆ ಭೂಮಿಯುಂಟು.

ಹವೆ, ಮಳೆ, ನೀರು—ಬೇಸಿಗೆಯಲ್ಲಿ ಹವೆಯು ಆರೋಗ್ಯವಿರುತ್ತದೆ; ಆದರೆ ಚಳಿಗಾಲದಲ್ಲಿ ರೋಗಕಾರಕ ಜ್ವರೋಪದ್ರವ ಬಹಳ. ಮಳೆಯು ಪೂರ್ವಕ್ಕಿಂತ ಪಶ್ಚಿಮದಲ್ಲಿ ಹೆಚ್ಚು, ತೆರಸಿಯಲ್ಲಿ ೬೪ ರಿಂದ ೧೧೦ ಇಂಚಿನ ವರಗೆ ಸರಾಸರಿ ಆಗುತ್ತದೆ. ವರದಾ ನದಿಯು ಈ ತಾಲೂಕಿನೊಳಗಿಂದ ಹರಿಯುತ್ತದೆ; ತಡಸಿಯೆಂಬ ಹೊಳೆಯು ಇದೇ ತಾಲೂಕಿನಲ್ಲಿ ಹುಟ್ಟಿ ಪಶ್ಚಿಮಕ್ಕೆ ಹರಿಯುತ್ತದೆ ಇವಲ್ಲದೆ ಹಣ್ಣಿಗಡು ತೆಂಗುಗಳೂ ಹರಿಯುವ ಸರಪುಗಳು ಹಲವುಂಟು. ಹಳ್ಳಿಗಳಿಗೆ ಕೆರೆಗಳೂ ಬಾವಿಗಳೂ ಇರುತ್ತವೆ. ಬಟ್ಟೆಗೆ ನೀರಿನ ಸವಲತ್ತಿಯುಂಟು.

ಜನರು—ಒಟ್ಟು ಜನಸಂಖ್ಯೆಯಲ್ಲಿ ಹಿಂದೂ ಜನರು ೬೬ ೫೫೬ - ೪೯, ಮುಸಲ್ಮಾನರು ೪ - ೦೯ ಕ್ರಿಸ್ತಿಗಳು ೧ - ೦೧ ಹಿಂದೂ ಜನರಲ್ಲಿ ಬ್ರಾಹ್ಮಣರು ೧೫೯೯೦ ಮರಾಠರು ೦೯೦೪ ಲಿಂಗವಂತರು ೧೦೪೪, ಬಣಜಿಗರು ೧೦೫೦, ಆ

ಕೇರು ೫೪೧೨, ಕರೇ ಬಕ್ಕಲಿಗರು ೫೪೭೦ ಕುಣಬಿಗಳು ೧೫೫೩, ಸೋನಾರರು ೧೯೦೦, ಹಳಬೈಕರು ೪೪೪೫, ಅಗಸರು ೧೬೯೩, ಹೊಲಿಯರು ೫೫೩೪, ಚಲವಾದಿಗಳು ೧೦೩೪ ಇತ್ಯಾದಿ (ಸಚೇಷ).

CORRESPONDENCE.

ಪತ್ರವ್ಯವಹಾರ.

(೧೯೦ ನೇ ಪುಟದಿಂದ ಮುಂದೆ ಸಾಗಿದ್ದು.)

ಈ ವಿಚಾರದಿಂದ ವಜಾಬಾಕಿಯನ್ನು ಕಲಿಯುವ ಪೂರ್ವದಲ್ಲಿ ೧೪ ರ ವರೆಗೆ ಕ್ರಮಾಂಕಿಗಳ ವಜಾಬಾಕಿಯನ್ನು ಕಲಿಯುವದು ಅನಶ್ಯವೆಂದು ಸಹಜವಾಗಿ ಗೊತ್ತಾಗುವದು.

ವಜಾಬಾಕಿಯ ತಾಳೆಗಳು – (೧) ಕಳಿಸಿಕೊಂಡ ಸಂಖ್ಯೆಯಲ್ಲಿ ಉಳಿದ ಸಂಖ್ಯೆಯನ್ನು ಕಳೆದರೆ ಕಳೆದ ಸಂಖ್ಯೆಯಷ್ಟು ಉಳಿದರೆ ವಜಾಬಾಕಿ ಸರಿಯಾಯಿತೆಂದು ತಿಳಿಯಬೇಕು.

(೨) ಕಳಿದ ಸಂಖ್ಯೆಯಲ್ಲಿ ಉಳಿದ ಸಂಖ್ಯೆಯನ್ನು ಕೂಡಿಸಿದ ಬೇರೀಜು ಕಳಿಸಿಕೊಂಡ ಸಂಖ್ಯೆಗೆ ಸರಿಯಾದರೆ ವಜಾಬಾಕಿ ಸರಿಯಾಯಿತೆಂದು ತಿಳಿಯಬೇಕು.

ಈ ತಾಳೆಗಳ ವಿವರಣೆಗಳು.

ವಜಾಬಾಕಿಯು ದೊಡ್ಡ ಸಂಖ್ಯೆ ಮತ್ತು ಸಣ್ಣ ಸಂಖ್ಯೆ ಇವುಗಳ ಅಂತರವಿರುತ್ತದೆ ಈ ಅಂತರವನ್ನು ದೊಡ್ಡದರಲ್ಲಿ ಕಳೆದರೆ ಬಾಕಿಯು ಕೊಟ್ಟ ಸಣ್ಣ ಸಂಖ್ಯೆಗೆ ಸರಿಯಾಗಲಿಕ್ಕ ಬೇಕು.

ಅಥವಾ ಆ ಅಂತರವನ್ನು ಸಣ್ಣದರಲ್ಲಿ ಕೂಡಿಸಿದರೆ ಬೇರೀಜು ದೊಡ್ಡ ಸಂಖ್ಯೆಗೆ ಸಮವಾಗಬೇಕು.

ಬೇರೀಜು, ವಜಾಬಾಕಿಗಳ ರೀತಿಗಳಿಂದ ಇನ್ನೊಂದು ಮಾತು ಬೈಲಿಗೆ ಬರುತ್ತದೆ ಅದು ಯಾವದೆಂದರೆ :—

ಸಂಖ್ಯೆಗಳ ಭಾಗಗಳ ಬೇರೀಜು ಅಥವಾ ವಜಾಬಾಕಿಗಳು ಕ್ರಮದಿಂದ ಇಡೀ ಸಂಖ್ಯೆಗಳ ಬೇರೀಜ ವಜಾಬಾಕಿಗಳಿಗೆ ಸರಿ ಇರುತ್ತವೆ. ಉದಾ :—

ಬೇರೀಜ—೪೩೭ = ೪೦೦ + ೩೦ + ೭
೩೭೧ = ೩೦೦ + ೭೦ + ೧
೧೧೪ = ೧೦೦ + ೧೦ + ೪
---
೮೬೭ = ೮೦೦ + ೬೦ + ೭

ವಜಾಬಾಕಿ—೪೩೭ = ೪೦೦ + ೩೦ + ೭
೩೭೧ = ೩೦೦ + ೭೦ + ೧
---
೧೧೧ = ೧೦೦ + ೧೦ + ೧

ಗುಣಾಕಾರ.

ವ್ಯಾಖ್ಯೆ—ಒಂದೇ ಸಂಖ್ಯೆಯನ್ನು ಹಲವು ಸಾರೆ ಇಟ್ಟು ಕೂಡಿಸಿದರೆ ಎಷ್ಟು ಬರುತ್ತದೆ ಎಂಬುದನ್ನು ತೆಗೆಯುವ ಸುಲಭ ರೀತಿಗೂ ಬಂದ ಉತ್ತರಕ್ಕೂ ಗುಣಾಕಾರ ಅನ್ನುತ್ತಾರೆ.

೪ + ೪ + ೪ + ೪ + ೪ = ೨೦ } ಈ ಎರಡು ಬೇರೀ
೫ + ೫ + ೧ + ೪ + ೫ = ೨೦ } ಜಗಳಲ್ಲಿ ೧ನೇ ಬೇರೀಜೆನ ಸುಲಭರೀತಿಗೆ (೪ × ೫ = ೨೦) ಗುಣಾಕಾರ ಅನ್ನುತ್ತಾರೆ.

ಇದರಿಂದ ಗುಣಾಕಾರವು ಒಂದೇ ಸಂಖ್ಯೆಯ ಬೇರೀಜದ ಸಂಕ್ಷಿಪ್ತ ರೀತಿ ಎಂಬದು ಸ್ಪಷ್ಟವಾಯಿತು.

ಈ ಕೃತಿಯಲ್ಲಿ—ಯಾವ ಸಂಖ್ಯೆಯನ್ನು ಹೇಳಿದಷ್ಟು ಸಾರೆ ಇಡಬೇಕಾಗಿರುವದೋ ಆ ಸಂಖ್ಯೆಗೆ ಗುಣ್ಯವೆಂದೆನ್ನುತ್ತಾರೆ. ಮತ್ತು ಕೊಟ್ಟ ಸಂಖ್ಯೆಯನ್ನು ಇಂತಿಷ್ಟು ಸಾರೆ ಇಟ್ಟು ಕೂಡಿಸು ಎಂದು ಹೇಳಿದಲ್ಲಿ ಸಾರೆ ತೋರಿಸುವ ಸಂಖ್ಯೆಗೆ ಗುಣಕವೆಂಬ ಹೆಸರು. ಉದಾ:— ೭ ಗುಣ್ಯ
೮ ಗುಣಕ
---
೫೬ ಗುಣಾಕಾರ.

ಗುಣಾಕಾರಗಳನ್ನು ಕಲಿಸುವ ಮೊದಲು ಮುಗ್ಗಿಗಳನ್ನು ಕಲಿಸಲಿಕ್ಕೆಬೇಕು.

ಮುಗ್ಗಿ—ಕ್ರಮದಿಂದ ಬರೆದ ಕ್ರಮಾಂಕಿಗಳ ಗುಣಾಕಾರದ ಸಾಲಿಗೆ ಮುಗ್ಗಿ ಅನ್ನುತ್ತಾರೆ.

(ಸಶೇಷ.)

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುಪರ್ಯಾರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ।
ಉದಯಿಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮುಂ ಪುಟ್ಟಿಸಿ॥
ಪಯಬಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆಕೈಕೊಂಬುದೈ।
ದಯೆಯಿಂಬೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರಿ॥೧

ಪುಸ್ತಕ ೩೭] ನವಂಬರ ೧೯೦೧. [ಸಂಚಿಕೆ ೧೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ಈ ದೇಶದಲ್ಲಿ ಈಗ ನಡೆದಿರುವ ಶಿಕ್ಷಣ ಕ್ರಮವನ್ನು ಆಲೋಚಿಸಿ ಅದರಲ್ಲಿ ಮಾಡತಕ್ಕ ಅವಶ್ಯವಾದ ಸುಧಾರಣೆಗಳನ್ನು ಕುರಿತು ವಿಚಾರಮಾಡುವದಕ್ಕಾಗಿ ಕಳೆದ ತಿಂಗಳಲ್ಲಿ ವ್ಹಾಯಿಸರಾಯರಾದ ಲಾರ್ಡ ಕರ್ಝನ್ ಧೊರೆಗಳ ಸಿಮಲಾ ಪಟ್ಟಣದಲ್ಲಿ ಒಂದು ಚಿಕ್ಕ ವಿದ್ಯಾಪರಿಷತ್ತನ್ನು ಕೂಡಿಸಿದ್ದರು. ಇದಕ್ಕೆ ಈ ದೇಶದೊಳಗಿನ ಯಾವತ್ತು ಯುನಿವರ್ಸಿಟಿ (ವಿದ್ಯಾಪೀಠ) ಗಳ ವ್ಹಾಯಿಸಚ್ಯಾನ್ಸಲರರನ್ನೂ, ಯಾವತ್ತು ಇಲಾಖೆಗಳ ವಿದ್ಯಾಖಾತೆಯ ಡಾಯರೆಕ್ಟರರನ್ನೂ ಬರಮಾಡಿಕೊಂಡಿದ್ದರು. ಈ ಪರಿಷತ್ತಿನ ಕೆಲಸಕ್ಕೆ ಪ್ರಾರಂಭ ಮಾಡುವಾಗ ಮೊದಲು ವ್ಹಾಯಿಸರಾಯರು ಧೊರೆಗಳು ಈ ಪರಿಷತ್ತಿನಲ್ಲಿ ವಿಚಾರಿಸತಕ್ಕಂಥ ಸಂಗತಿಗಳನ್ನು ಕುರಿತು ಮಾಡಿದ ಭಾಷಣವು ಬಹಳ ಗಾಂಭೀರವುಳ್ಳದ್ದಿರುವದರಿಂದ ಅದರೊಳಗಿನ ಮುಖ್ಯ ಸಂಗತಿಗಳನ್ನು ಇಲ್ಲಿ ಸಂಗ್ರಹಿಸಿ ಬರೆಯುತ್ತೇವೆ.

ಶಿಕ್ಷಣಕ್ರಮದ ಸದ್ಯಸ್ಥಿತಿಯು.

ಈಗ ಕಳೆದು ಹೋದ ಎಪ್ಪತ್ತು ವರ್ಷ ನಡೆದಿರುವ ಶಿಕ್ಷಣಪದ್ಧತಿಯನ್ನು ವಿಚಾರಿಸಲಾಗಿ, ಒಟ್ಟಿಗೆ ನಾವು ಈ ಯಾವತ್ತು ಅವಧಿಯನ್ನು ವಿಶೇಷಖಂಡದ ನಿವಾಸಿಗಳಿಗೆ ಇಂಗ್ಲೀಷ ವಿದ್ಯಾಭ್ಯಾಸವನ್ನು ಮಾಡಿಸುವದರಲ್ಲಿಯೇ ಕಳೆದಿದ್ದೇವೆಂದು ಸಾಮಾನ್ಯವಾಗಿ ಹೇಳಬಹುದು. ಈ ಪ್ರಕಾರ ನಾವು ಪ್ರಯೋಗಮಾಡಿ ನೋಡಿದ್ದು

ತಪ್ಪಾಯಿತೆಂತಲೂ, ಈ ತಪ್ಪಿನ ಪರಿಣಾಮಗಳು ಬಹಳ ಭಯಂಕರವಾಗಿವೆಯೆಂತಲೂ ಹಲವರು ಪ್ರತಿಪಾದಿಸುತ್ತಾರೆ ಆದರೆ ಈ ಅಭಿಪ್ರಾಯವನ್ನು ನಾನು ಸರ್ವಾಂಶದಿಂದ ಅಂಗೀಕರಿಸಲಾರೆನು. ಈಗಿನ ಶಿಕ್ಷಣಪದ್ಧತಿಯನ್ನು ಪ್ರಾರಂಭಿಸುವಾಗ ತಪ್ಪುಗಳಾಗಿರುವವೆಂಬದು ನಿಜವು; ಹಾಗು ಅದರಿಂದ ಹಲವು ದುಷ್ಪರಿಣಾಮಗಳಾದರೂ ಆಗಿರುವವು. ಇಲ್ಲದಿದ್ದ ಪಕ್ಷಕ್ಕೆ ಈ ಹೊತ್ತು ಈ ಪರಿಷತ್ತನ್ನು ಕೂಡಿಸುವ ಅವಶ್ಯವೇ ಉಳಿಯುತ್ತಿದ್ದಿಲ್ಲ, ಆದರೆ ಈಗಿನ ಶಿಕ್ಷಣ ಪದ್ಧತಿಯಿಂದ ಕೆಲವು ಮಟ್ಟಿಗೆ ಹಾನಿಯಾಗಿದ್ದರೂ ಅದರಿಂದುಂಟಾದ ಲಾಭವನ್ನು ಮರೆಯಲಾಗದು. ಈಗಿನ ಪದ್ಧತಿಯಿಂದುಂಟಾದ ಹಾನಿಗಳಿಗಿಂತಲೂ ಲಾಭವು ಅನಂತಪಾಲು ಹೆಚ್ಚು ಇರುವದೆಂಬದಕ್ಕೆ ಏನೂ ಸಂದೇಹವಿಲ್ಲ.

ಈಗಿನ ಪದ್ಧತಿಯ ನ್ಯೂನತೆಗಳು.

ಆದರೂ ಈಗಿನ ಪದ್ಧತಿಯಲ್ಲಿಸ್ಸಂಧ ದೋಷಗಳನ್ನು ದೂರಮಾಡುವದು ನಮ್ಮ ಕರ್ತವ್ಯವಾಗಿರುವದರಿಂದ ಅವುಗಳನ್ನು ಇಲ್ಲಿ ದಿಗ್ದರ್ಶನಮಾಡುವದು ಅವಶ್ಯವಿರುತ್ತದೆ. ಈ ದೋಷಗಳಲ್ಲಿ ಕೆಲವು ಮೇಲೆಯೇ ಇರುತ್ತವೆ. ಮೊದಲನೇ ದೋಷವ್ಯಾವದಂದರೆ ನಾವು ಇಲ್ಲಿಯ ಶಿಕ್ಷಣ ಪದ್ಧತಿಯನ್ನು ತೀರಾ ಇಂಗ್ಲೀಷ ಪದ್ಧತಿಯನ್ನೇ ಅನುಸರಿಸಿ ಪ್ರಾರಂಭಿಸಿದೆವು. ಈ ದೋಷವು ಈಗಲೂ ಕಂಡು ಬರುವದು. ಉದಾಹರಣಾರ್ಥವಾಗಿ ಉಚ್ಚ ಶಿಕ್ಷಣದ ವಿಷಯದಲ್ಲಿ ಲಂಡನ್ ಯುನಿವ್ಹರ್ಸಿಟಿ (ವಿದ್ಯಾಪೀಠ) ಯ ಅನುಕರಣ ಮಾಡಿದರೆ ತೀರಿತೆಂದು ತಿಳಿದು ಅದರ ಸಂಪೂರ್ಣ ಅನುಕರಣವನ್ನು ಮಾಡಿದೆವು. ಇದರಂತೆಯೇ ಸರಕಾರೀ ನೌಕರಿಗಳು ಸಿಗಬೇಕಾದರೆ ಪರೀಕ್ಷೆಯೊಂದನ್ನೇ ಮಾರ್ಗಮಾಡಿ ಇಟ್ಟಿದ್ದರಿಂದ, ನಮ್ಮ ಮನಸ್ಸಿನಲ್ಲಿಲ್ಲದಿದ್ದರೂ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದೊಂದೇ ವಿದ್ಯೆಯ ಕುರುಹಾಯಿತು. ವಿದ್ಯೆಯ ಸಂಬಂಧದಿಂದ ನಾವು ಈಗ ವಿಚಾರ ಮಾಡತಕ್ಕ ಹಾನಿಗೆ ಈ ಸಂಗತಿಯೇ ಮೂಲಕಾರಣವಿರಬಹುದೆಂದು ಹೇಳಬಹುದು. ವಿದ್ಯೆಯೆಂಬದು ಜೀವ ಕಳೆಯು. ಇದು ಜೀವಿಗಳಿಂದ ಜೀವಿಗಳ ಮುಖಾಂತರವಾಗಿ ಜೀವಿಗಳಿಗೆ ಸಲ್ಲತಕ್ಕದ್ದು. ಹೀಗಿದ್ದು ವಿದ್ಯಾರ್ಜನದಿಂದ ಪಡೆಯತಕ್ಕಂಥ ಪರಮಾರ್ಥವು ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವದೊಂದೇ ಎಂಬ ಗ್ರಹಿಕೆಯು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನೆಲೆ

ಗೊಂಡಿದ್ದದ್ದರಿಂದ, ಅವರ ಸಂಪೂರ್ಣ ಲಕ್ಷ್ಯವು ಪರೀಕ್ಷೆಗಳಲ್ಲಿ ಅಪೇಕ್ಷಿತವಾದ ಗುಣಗಳನ್ನು ಸಂಪಾದಿಸುವದರ ಕಡೆಗೆ ಹೋಗಿ ಸಾವಿರಗಟ್ಟಲೆ ವಿದ್ಯಾರ್ಥಿಗಳು ತಮ್ಮ ಜೀವವನ್ನು ವ್ಯರ್ಥ ಅರಿಯುತ್ತಿರುವದನ್ನು ನೋಡಿ ವ್ಯಸನವಾಗುತ್ತದೆ. ಇದರಿಂದ ಅವರ ಸ್ಮರಣಶಕ್ತಿಯು ಬಲಪಡುವದೇ ಹೊರತು ಬುದ್ಧಿಯು ವಿಕಾಸ ಹೊಂದುವದಿಲ್ಲ, ಈ ಪದ್ಧತಿಯಿಂದ ಜಲೋ ಕಾರಕೂನರೂ, ಮುನಸೂಫರೂ, ವಕೀಲರೂ ಉಂಟಾದಾಗ್ಯೂ ಇದರಿಂದ ಇಡೀ ರಾಷ್ಟ್ರದ ಬುದ್ಧಿಯು ಲಯ ಹೊಂದುತ್ತ ನಡೆದರೆ, ಅದರಿಂದ ಏನು ಫಲ? ಬರೀ ಸ್ಮರಣ ಶಕ್ತಿಯನ್ನು ಬಲಪಡಿಸುವದರಿಂದ ಯಾವ ರಾಷ್ಟ್ರದವರೂ ಬುದ್ಧಿವಂತರಾಗಲಾರರು. ಆದ ಕಾರಣ ಈಗಿನ ಶಿಕ್ಷಣ ಪದ್ಧತಿಯನ್ನು ಈ ದೋಷದಿಂದ ಹ್ಯಾಗೆ ಮುಕ್ತಮಾಡಬೇಕೆಂಬದನ್ನು ಈ ಪರಿಷತ್ತಿನಲ್ಲಿ ವಿಚಾರಿಸುವದು ಅವಶ್ಯವಿರುತ್ತದೆ,

ಈವರೆಗಾದ ವಿದ್ಯಾಪ್ರಸಾರ.

ಈಗ ನಾವು ಎಪ್ಪತ್ತು ವರ್ಷ ವಿದ್ಯಾದಾನವನ್ನು ಮಾಡುತ್ತಿದ್ದೇವೆಂದು ಮೇಲೆ ಹೇಳಿದ್ದೇನೆ. ಆದರೆ ಈವರೆಗೆ ಹಿಂದುಸ್ಥಾನದ ಒಟ್ಟು ಜನಸಂಖ್ಯೆಯಲ್ಲಿ ೪೫ ಲಕ್ಷ ಜನರಿಗೆ ಮಾತ್ರ ವಿದ್ಯೆದೊರೆಯುತ್ತಾ ಇದೆ. ಈ ಪ್ರಮಾಣವೆ ಸಾಕಷ್ಟು ಯೋಗ್ಯವಾದದ್ದು ಇರುತ್ತದೋ? ಕಳೆದ ವರ್ಷ ವಿದ್ಯಾಖಾತೆಗೆ ಸರಕಾರದ ಖಜಾನೆಯಿಂದ ೧೫,೪೦,೦೦೦ ಪೌಂಡುಗಳೂ ಫೀ ಮುಂತಾದವುಗಳಿಂದ ೧೩,೬೦,೦೦೦ ಪೌಂಡುಗಳೂ ಖರ್ಚುಮಾಡಲ್ಪಟ್ಟವು. ಇದರಲ್ಲಿ ಸರಕಾರದಿಂದ ಕೊಡಲ್ಪಟ್ಟ ಧನದ ಭಾಗವು ಸಾಕಷ್ಟು ಇರುವದೋ? ಅಥವಾ ಅದನ್ನು ಹೆಚ್ಚಿಸಬೇಕೋ? ಹಿಂದುಸ್ಥಾನ ಸರಕಾರದಿಂದ ನಿರ್ಮಾಣಮಲ್ಪಟ್ಟಂಥ ಶಿಕ್ಷಣ ಪದ್ಧತಿಯೆಂಬದೇನಾದರೂ ಇರುತ್ತದೋ? ಇದ್ದರೆ, ಅದರಂತೆ ಈಗ ಯಾವತ್ತು ಕೆಲಸ ನಡೆದಿರುತ್ತದೋ? ಈ ಕೆಲಸವನ್ನು ಜರುಗಿಸಲಿಕ್ಕೆ ಯಾವತರದ ಅಧಿಕಾರಿ ವರ್ಗವು ನೇಮಿಸಲ್ಪಟ್ಟಿರುತ್ತದೆ? ಇವೇ ಮೊದಲಾದ ಪ್ರಶ್ನೆಗಳಿಗೆ ಈಗಿನ ಸ್ಥಿತಿಯನ್ನು ನೋಡಿದರೆ ಸಮಾಧಾನಕರವಾದ ಉತ್ತರಗಳನ್ನು ಕೊಡಲಿಕ್ಕೆ ಬಂದೀತೆಂದು ತೋಯುವದಿಲ್ಲ ಈ ವಿಷಯದಲ್ಲಿ ಈಗಿನ ಮಾರ್ಗವು ತಪ್ಪಿರುವದೆಂತಲೂ, ಕೆಲವೆಡೆಗಳಲ್ಲಿ ವಿದ್ಯಾದಾನಶಕ್ತಿಯು ವ್ಯರ್ಥವೆಚ್ಚ ಮಾಗುತ್ತಿರುವದೆಂತಲೂ, ಯಾವತ್ತು ಪ್ರಾಂತಗಳಲ್ಲಿರುವಂಥ ಶಿಕ್ಷಣಪದ್ಧತಿಗಳು ಒಂದೇ

ತತ್ವವನ್ನನುಸರಿಸುವಂತೆ ಒಂದೇ ಉದ್ದೇಶವನ್ನು ಕೊನೆಗಾಣಿಸು ವಂತೆ ಇರುವದಿಲ್ಲೆಂತಲೂ ನನಗೆ ತೋರುತ್ತದೆ. ಆದಕಾರಣ ನಾವು ಈ ವಿಷಯದಲ್ಲಿ ವಿಚಾರಮಾಡತಕ್ಕದ್ದು. "

ವ್ಹಾಯಿಸರಾಯ ಭೂರೆಗಳು ಮೇಲೆ ಬರೆದ ಆಶಯದ ಉಪ್ಪೋ ದ್ಘಾತವನ್ನು ಮಾಡಿದ ನಂತರ ಕ್ರಮವಾಗಿ ಯುನಿವ್ಹರ್ಸಿಟಿಯ ವಿದ್ಯೆ ಅಂದರೆ ವಿದ್ಯಾಪೀಠಗಳಿಂದ ಕೊಡಲ್ಪಡುವ ಉಚ್ಚ ಪ್ರತಿಯ ಇಂಗ್ಲೀಷ ಶಿಕ್ಷಣ, ಹಾಯಸ್ಕೂಲುಗಳಲ್ಲಿ ಕೊಡಲ್ಪಡುವ ಮಧ್ಯಮತರದ ಇಂಗ್ಲೀಷಶಿಕ್ಷಣ, ಪ್ರಾಥಮಿಕಶಿಕ್ಷಣ, ಔದ್ಯೋಗಿಕ ಶಿಕ್ಷಣ, ಈ ವಿಷಯಗಳನ್ನು ಇವುಗಳಲ್ಲಿ ಬರೆದ ಹಲವು ಅವಾಂತರ ವಿಷಯಗಳನ್ನು ಕುರಿತು ವಿಚಾರಣೀಯವಾದಂಥ ಪ್ರಶ್ನೆಗಳ ದಿಗ್ದರ್ಶನವನ್ನು ಮಾಡಿದರು. ಅವೆಲ್ಲವುಗಳನ್ನು ಇಲ್ಲಿ ಕೊಡುವದಕ್ಕೆ ಸ್ಥಳಸಾಲದೆ ಇರುವದರಿಂದ ಪ್ರಾಥಮಿಕ ಶಿಕ್ಷಣಕ್ಕೂ ಮಹತ್ವವುಳ್ಳ ಕೆಲವು ಅವಾಂತರ ವಿಷಯಗಳಿಗೂ ಸಂಬಂಧಿಸಿದ ಭಾಗದ ಸಾರಾಂಶವನ್ನು ಮಾತ್ರ ಈ ಸಂಚಿಕೆಯಲ್ಲಿ ಕೊಡುತ್ತೇವೆ

ಪ್ರಾಥಮಿಕಶಿಕ್ಷಣ.

ಪ್ರಾಥಮಿಕಶಿಕ್ಷಣವೆಂದರೆ ದೇಶೀಯಭಾಷೆಗಳಿಂದ ಸಾಮಾನ್ಯ ಜನಸಮುದಾಯಕ್ಕೆ ಕೊಡತಕ್ಕಂಥ ಶಿಕ್ಷಣವೆಂದು ನಾವು ತಿಳಿಯುತ್ತೇವೆ. ಈ ವಿಷಯದಲ್ಲಿ ಸರಕಾರದವರು ಮಾಡಬೇಕ್ಕ ಕರ್ತವ್ಯವನ್ನು ಮಾಡಲಿಲ್ಲವೆಂದು ಪ್ರತಿಪಾದಿಸುವವರಿಗೆ ತಕ್ಕ ಕಾರಣವಿರುತ್ತದೆ. ಜನರಿಗೆ ಸ್ವಭಾಷೆಯಲ್ಲಿ ಕೊಡತಕ್ಕಂಥ ಶಿಕ್ಷಣವು ಹೀನದಶೆಯಲ್ಲಿರುವದು. ಇದು ಸರಿಯಲ್ಲ. ಇದಕ್ಕೆ ಎರಡು ಮುಖ್ಯ ಕಾರಣಗಳುಂಟು. ಈ ಹಿಂದುಸ್ಥಾನವೆಂಬ ಮಹಾಭೂಖಂಡದಲ್ಲಿ ದೇಶೀಯ ಭಾಷೆಗಳು ಸಜೀವ ಅಥವಾ ಪ್ರಚಲಿತ ಭಾಷೆಗಳಾಗಿರುವವು; ಮೃತಭಾಷೆಗಳಲ್ಲ; ಹಾಗೂ ವಿದ್ಯಾರ್ಜನಕ್ಕೂ ವಿದ್ವತ್ತಿಗೂ ಇಂಗ್ಲೀಷ ಭಾಷೆಯೆಂಬ ಸಾಧನವು ಬಹು ಸ್ವಲ್ಪ ಮಂದಿಗೆ ಮಾತ್ರ ದೊರಕುವಂತಿರುವದು, ಉಳಿದ ಬಹು ಜನಸಮಾಜಕ್ಕೆ ಇದು ಕ್ಲಿಷ್ಟತವಾಗಿಕಿವಿಗೆ ಬೀಳುವಂಥ ಪರಕೀಯ ಭಾಷೆಯಾಗಿರುವದು. ಇದಲ್ಲದೆ ದೇಶೀಯ ಭಾಷೆಗಳು ತಿದ್ದುಪಡಿಯಿಲ್ಲದ ಭಾಷೆಗಳಲ್ಲ, ಅವುಗಳಲ್ಲಿ ಅನೇಕ ಸದ್ಗ್ರಂಥಗಳಿರುವವು. ಮತ್ತು ಈಗಿನ ಕಾಲದ ಜ್ಞಾನವನ್ನು ಕೂಡ ಜನರಿಗೆ ಅವರವರ ಭಾಷೆಗಳಿಂದ ಮಾಡಿಕೊಡಲಿಕ್ಕೆ ಬಹಳಸ್ಟು ಸುಲಭವಾಗಿ ಇಂಗ್ಲೀಷ ಭಾಷೆಯಿಂದ ಕೊಡಲಿಕ್ಕೆ ಎಂ

ದಿಗೂ ಬರಲಾರದು. ಜನರಿಗೆ ದೇಶೀಯ ಭಾಷೆಗಳಿಂದ ಹೆಚ್ಚು ಶಿಕ್ಷಣಕೊಡುವದಕ್ಕೆ ನನ್ನ ಎರಡನೇ ಕಾರಣವು ಇದಕ್ಕೂ ಹೆಚ್ಚು ವ್ಯಾಪಕವಾಗಿರುವದು. ಸಾಮಾನ್ಯ ಜನರೊಳಗಿನ ಸಂಶಯವೃತ್ತಿ, ಮೂಢಭಕ್ತಿ, ದಂಗೆಗಳು, ಗುನ್ನೆಗಳು, ಒಕ್ಕಲಿಗರೊಳಗಿನ ಅಸಪಾಧಾನವೃತ್ತಿ, ಜನರ ಕೀಳುಸ್ಥಿತಿ ಇವೆಲ್ಲವುಗಳಿಗೆ ಕಾರಣವ್ಯಾವದು? ಅವರ ಅಜ್ಞಾನವು. ಈ ಅಜ್ಞಾನವೇ ದೊಡ್ಡ ಗಂಡಾಂತರವಾಗಿರುವದು. ಇದಕ್ಕೆ ಪರಮೌಷಧವುತಕ್ಕಷ್ಟು ಜ್ಞಾನವಲ್ಲದೆ ಬೇರೊಂದಿಲ್ಲ. ಸಾಮಾನ್ಯ ಜನಸಮೂಹಕ್ಕೆ ನಾವು ಹೆಚ್ಚು ಜ್ಞಾನಕೊಟ್ಟ ಹಾಗೆ ಅವರೊಳಗಿನ ಮೇಲೆ ಹೇಳಿದಂಥ ದುರ್ಗುಣಗಳು ಕಡಿಮೆಯಾಗಿ ಅವರು ಹೆಚ್ಚು ಸುಖಿಗಳಾಗುವರು. ಪ್ರಾಥಮಿಕಶಿಕ್ಷಣದ ಅಭಿವೃದ್ಧಿಗೆ ಸಾಂಪ್ರತಕ್ಕೆ ಮುಖ್ಯ ಅಡ್ಡಿಯು ಜನರಿಂದಲೇ ಬರುತ್ತಿರುವದು. ಯಾಕಂದರೆ ಜನರ ಸ್ಥಿತಿಯು ಸುಧಾರಿಸಿದ ಹಾಗೆ ಅವರು ತಮ್ಮ ಮಕ್ಕಳಿಗೆ ದೇಶೀಯ ಭಾಷೆಯ ಹೆಚ್ಚು ಅಭ್ಯಾಸ ಮಾಡಿಸುವದನ್ನು ಬಿಟ್ಟು ಇಂಗ್ಲೀಷ ಕಲಿಯಲಿಕ್ಕೆ ಹಾಕುತ್ತಾರೆ. ಈ ಪ್ರವೃತ್ತಿಯನ್ನು ತಡಿಯಲಿಕ್ಕೆ ಡಿಸ್ತ್ರಿಕ್ಟ ಲೋಕಲ್ ಬೋರ್ಡುಗಳೂ, ಮ್ಯುನಿಸಿಪಾಲಿಟಿಗಳೂ ಏನೊಂದು ಪ್ರಯತ್ನವನ್ನು ಮಾಡುವದಿಲ್ಲ. ಶ್ರೀಮಂತರಂತೂ ಇದಕ್ಕೆ ಮತ್ತಿಷ್ಟು ಉತ್ತೇಜನ ಕೊಡುವರು. ಇದರಿಂದ ಆಗಿರುವ ದುಷ್ಪರಿಣಾಮವೇನಂದರೆ ಕೆಲವು ಪ್ರಾಂತಗಳಲ್ಲಿ ಪ್ರಾಥಮಿಕ ಶಿಕ್ಷಣವು ಎಷ್ಟು ಪಾತ್ರವೂ ಮುಂದರಿಸದೆ ಇದ್ದಷ್ಟೇ ಇರುತ್ತದೆ. ಬೇರೆ ಕೆಲವುಗಳಲ್ಲಿ ಕಿತ್ಯಲ್ಪ ಸುಧಾರಣೆಯಾಗಿರುತ್ತದೆ. ಆದರೆ ಈ ವಿಷಯವು ಮುಖ್ಯವಾಗಿ ಹಣವನ್ನು ಅವಲಂಬಿಸಿ ಇರುತ್ತದೆ. ಆದಕಾರಣ ಜನರು ಹಣಕೊಡುವದಕ್ಕೆ ಸಿದ್ಧರಾದರೆ ಇದಕ್ಕೆ ತಕ್ಕಂತೆ ಸ್ಥಾನಿಕಸರಕಾರದವರೂ ಹೆಚ್ಚು ಔದಾರ್ಯದಿಂದ ಸಹಾಯವನ್ನು ಮಾಡುವರು.

ಟ್ರೇನಿಂಗ ಕಾಲೇಜುಗಳೂ ನಾರ್ಮಲ್ ಸ್ಕೂಲುಗಳೂ.

ಇವುಗಳ ಸಂಖ್ಯೆಯು ಸಂಬಂಧದಿಂದ ವಿಶೇಷ ಕೊರತೆ ಇದ್ದಂತೆ ಕಾಣುವದಿಲ್ಲ ಆದರೆ ಇವುಗಳಲ್ಲಿ ದೊರೆಯುವಂಥ ಶಿಕ್ಷಣವಲ್ಲಿ ಇನ್ನೂ ಬಹಳ ಸುಧಾರಣೆಯಾಗತಕ್ಕದ್ದುಂಟೆಂದು ತೋರುತ್ತದೆ. ಹಾಗೂ ಇನ್ನು ಮುಂದೆ ಈ ಸಂಸ್ಥೆಗಳ ಸಂಖ್ಯೆಯನ್ನು ಹೆಚ್ಚಿಸುವದಕ್ಕಿಂತಲೂ ಅವುಗಳ ಸ್ಥಿತಿಯನ್ನು ಸುಧಾರಿಸುವದರ ಕಡೆಗೆ ಲಕ್ಷ ಕೊಡುವದು ಅವಶ್ಯವಿರುತ್ತದೆ.

ಸ್ತ್ರೀಶಿಕ್ಷಣ.

ಸ್ತ್ರೀಶಿಕ್ಷಣ ಸಂಬಂಧದ ಅಂಕೆಗಳನ್ನು ನೋಡಿದರೆ ಇದು ಇನ್ನೂ ಬಹಳ ಹಿಂದುಳಿದಿರುತ್ತದೆಂದು ಕಂಡು ಬರುತ್ತದೆ. ಮಿ. ಕಾಟನ್ ರವರು ಮಾಡಿದ ಕಳೆದ ಪಂಚವಾರ್ಷಿಕ ರಿಪೋರ್ಟಿನಲ್ಲಿ ಅವರು "ಈ ಸ್ಥಿತಿಯು ಹಿಂದುಸ್ತಾನದೊಳಗಿನ ವಿದ್ಯಾದಾನ ಪದ್ಧತಿಗೆ ಬಹಳ ಲಾಂಛನಾಸ್ಪದವಾದದ್ದೆಂದು" ಬರೆದಿರುತ್ತಾರೆ. ಕಳೆದ ವರ್ಷ ಎಲ್ಲಾತರದ ಶಾಲೆಗಳನ್ನು ಹಿಡಿದು ದೇಶದೊಳಗಿನ ಒಟ್ಟು ಜನಸಂಖ್ಯೆಯಲ್ಲಿ ೪,೫೫,೦೦೦ ಹುಡುಗಿಯರು ಮಾತ್ರ ಶಾಲೆಗೆ ಹೋಗುತ್ತಿದ್ದರು. ಮತ್ತು ಇವರಲ್ಲಿ ಮೂರರಲ್ಲಿ ಒಂದು ಪಾಲು ಹುಡುಗಿಯರು ಮದ್ರಾಸ ಇಲಾಖೆಯೊಳಗೇ ಇದ್ದರು. ಯಾಕಂದರೆ ಮದ್ರಾಸ ಇಲಾಖೆಯಲ್ಲಿ ನೇಟಿವ್ ಕ್ರಿಶ್ಚನ್ನ ಹಾಗೂ ಯುರೇಸಿಯನ್ ಜನರ ಸಂಖ್ಯೆಯು ಬಹಳ ಹೆಚ್ಚು ಇರುವದು.

ನೀತಿ ಶಿಕ್ಷಣ

ಈ ಪ್ರಸಕ್ತಿಯಲ್ಲಿ ಧರ್ಮಶಿಕ್ಷಣದ ಸಂಬಂಧದಿಂದ ಮಾತಾಡುವದು ಅವಶ್ಯ ತೋರುವದಿಲ್ಲ. ಯಾಕಂದರೆ ಬಾಲಕರ ಶಿಕ್ಷಣವು ಧರ್ಮಶಿಕ್ಷಣದಿಂದ ಒಡಗೂಡಿದ ಹೊರ್ತು ಅದರಿಂದ ಇಷ್ಟಫಲ ಪ್ರಾಪ್ತಿಯು ಎಂದಿಗೂ ಆಗಲಾರದೆಂದು ನಾನು ಖಂಡಿತವಾಗಿ ನಂಬುತ್ತಿದ್ದರೂ ಸರಕಾರೀ ಶಾಲೆಗಳಲ್ಲಿ ಪರಕೀಯ ಧರ್ಮಶಿಕ್ಷಣವನ್ನು ಕೊಡುವದು. ನಾವು ಮಾಡತಕ್ಕ ಕೆಲಸವಲ್ಲ. ಎಜ್ಯುಕೇಶನ್ ಕಮಿಶನ್ನದವರು ಸೂಚಿಸಿದಂತೆ ನೀತಿ ಶಿಕ್ಷಣದ ಬಗ್ಗೆ ಒಂದು ಪುಸ್ತಕವನ್ನು ಬರೆಯಿಸಿ ಶಾಲೆಗಳಲ್ಲಿ ಓದಿಸುವದಂರಿದ ವಿಶೇಷ ಪ್ರಯೋಜನವಾದೀತೆಂದು ನನಗೆ ತೋರುವದಿಲ್ಲ ಈ ಸಂಬಂಧದಿಂದ ಒಟ್ಟು ಹೇಳುವದೇನಂದರೆ ನೀತಿ ಗ್ರಂಥಗಳಿಂದ ಸ್ವಲ್ಪ ಪ್ರಯೋಜನವಾಗಬಹುದು; ಆದರೆ ಈ ಅವಾಂತರ ಸಾಧನಗಳಿಗಿಂತ ಶಿಕ್ಷಕರಿಂದ ಗೌರವದಕಾರ್ಯವಾಗುವದೆಂದು ನನ್ನ ದೃಢವಾದ ನಂಬಿಗೆಯುಂಟು. (ಸಶೇಷ)

ನಿದ್ದೆ (ಅಂಬೀ ಪುಟದಿಂದ ಮುಂದೆ ಸಾಗಿದ್ದು.)

ಜಗತ್ತಿನಲ್ಲಿ ಬೇರೆಬೇರೆ ಜನರ ವ್ಯವಹಾರವೂ, ಪ್ರಕೃತಿಮಾನವೂ ಬೇರೆಬೇರೆ ಇರುವದರಿಂದ ನಿದ್ದೆಯ ಸಂಬಂಧದಿಂದ ಒಂದೇ

ಧಾರಣ ನಿಯಮವನ್ನು ಹೇಳುವದು ಸರಿಯಾದದ್ದೂ ಪ್ರಯೋಜನಕರವಾದದ್ದೂ ಆಗಲಾರದು. ಚಿಕ್ಕಮಕ್ಕಳಿಗೂ ಬೇನೆಯವರಿಗೂ ಹೆಚ್ಚು ನಿದ್ದೆಬೇಕು. ತೀರಹಸುಕೂಸುಗಳಿಗಂತೂ ೨೦ ತಾಸು ನಿದ್ದೆ ಬೇಕು. ಯಾಕಂದರೆ ಅವುಗಳ ಶಾರೀರಿಕ ಇಂದ್ರಿಯಗಳು ಪೂರ್ಣತ್ವವನ್ನು ಹೊಂದಬೇಕಾಗಿರುತ್ತದೆ. ರೋಗಿಗಳಿಗೂ, ಅಶಕ್ತರಿಗೂ ನಿಕೃಷ್ಟ ಪಕ್ಷಕ್ಕೆ ೧೫ - ೧೬ ತಾಸು ನಿದ್ದೆಬೇಕು. ಆದರೆ ಸಶಕ್ತನೂ ನಿರೋಗಿಯೂ ಆದಂಥ ಶಾರೀರಿಕ ಮಾನಸಿಕ ದುಡಿಮೆಯನ್ನು ಮಾಡದಂಥ ಮನುಷ್ಯನು ತೀರಕಮ್ಮಿ ನಿದ್ದೆ ಮಾಡಿದರೂ ಸಾಕು. ನಮ್ಮ ದೇಶದಂಥ ಸಮಶೀತೋಷ್ಣ ಪ್ರದೇಶದಲ್ಲಿ ಎಲ್ಲರೂ ೭ ತಾಸು ನಿದ್ದೆ ಮಾಡುವದು ಅವಶ್ಯವು. ನಾಲ್ಕು ತಾಸು ರಾತ್ರಿಗೆ ಮಲಗಿ ೩ ಅಥವಾ ೬ ಹೊತ್ತಿನ ಸುಮಾರಕ್ಕೆ ಏಳಬೇಕು ಆದರೆ ಈ ನಿಯಮವು ಎಲ್ಲರಿಂದಲೂ ಪಾಲಿಸುವದಾಗದು ಭಾರವಾಸ್ತರರು ಉಗೆ ಹಡಗದ ಮೇಲಿರುವ ಅಂಬಿಗರು ಉಗೆ ಬಂಡಿಯ ನೌಕರರು ಇಂಥವರಿಗಂತೂ ಈ ನಿಯಮವನ್ನು ಪಾಲಿಸಲಿಕ್ಕೆ ಎಳ್ಳಷ್ಟು ಅಸ್ಪದವಿಲ್ಲ. ದೇವರು ಕ್ಷಣವಾರಿಸಿಕೊಳ್ಳಬೇಕೆಂದು ರಾತ್ರಿಯನ್ನೂ, ದುಡಿಯಬೇಕೆಂದು ಹಗಲನ್ನೂ ನಿರ್ಮಿಸಿದ್ದಾನೆ. ಯಾವನು ರಾತ್ರಿಯಲ್ಲಿ ಕ್ಷಣವಾತಿಸಿಕೊಳ್ಳುವದಿಲ್ಲವೋ ಅವನ ಶರೀರ ರಥವು ಎಂದೂ ಸರಿಯಾಗಿ ನಡೆಯಲಾರದು ಉಗೆ ಬಂಡಿ, ಉಗೆ ಹಡಗ, ತಾರೆ ಆಫೀಸುಗಳಲ್ಲಿ ಕೆಲಸ ಮಾಡುವವರಿಗೆ ರಾತ್ರಿಯಲ್ಲಿ ವಿಶ್ರಾಂತಿಯು ತಕ್ಕಷ್ಟು ಸಿಕ್ಕುವದಿಲ್ಲದ ಕಾರಣ ಅವರ ಮೈಯಲ್ಲಿ ಯಾವದೊಂದು ಬೇನೆಯು ಬೇರೂರುವ ಅಂಜಿಕೆಯು ಬಹಳವಾಗಿರುವದು ಹೀಗೆ ಸೆಲೆಗೊಂಡ ಬೇನೆಯು ಅವರನ್ನು ತುಸು ದಿವಸಗಳಲ್ಲಿ ಮಣ್ಣುಪಾಲು ಮಾಡಿದ್ದನ್ನು ಸಹ ಎಷ್ಟೋ ಮಂದಿ ಕೇಳಿರಬಹುದು.

ಹಗಲಿನ ಮಲಗುವದು ಪ್ರಯೋಜನಕರವಲ್ಲ, ಇಷ್ಟೇ ಅಲ್ಲ, ಆದರಿಂದ ಪಚನಕಾರ್ಯವು ಕೆಡುತ್ತದೆ. ಉಂಡಬಳಿಕ ದೊಡ್ಡ ಖುರ್ಚಿಯ ಮೇಲೆ ಅಡ್ಡಾಗಿ ವರ್ತಮಾನ ಪತ್ರವನ್ನು ಹಿಡುತ್ತ ಬಿದ್ದುಕೊಳ್ಳುವದು ಕೆಲವಂಶದಿಂದ ಪಚನಕ್ರಿಯೆಗೆ ಅನುಕೂಲವಾಗುತ್ತದೆಂದು ಹೇಳಬಹುದು. ಉಂಡಬಳಿಕ ತುಸು ಹೊತ್ತು ಎಡಮಗ್ಗಲಾಗಿ ಮಲಗಿಕೊಳ್ಳಬೇಕೆಂದು ಪೂರ್ವಜರು ಗೊತ್ತು ಮಾಡಿದ್ದಾರೆ. ಇದಕ್ಕೆ ವಾಮಕುಕ್ಷಿ ಎಂಬ ಹೆಸರು. ಈ ವಾಮ

ಕುಕ್ಷಿಯ ಕಾಲವನ್ನು ನಾಲ್ಕಾರು ತಾಸುಗಳವರಗೆ ಬೆಳೆಸುವ ಪಂಥ
ರನ್ನು ಕಾಣಬಹುದು. ವಾಚಕರೇ ನೀವು ಮಾತ್ರ ಈ ದೀರ್ಘ
ಕಾಲದ ವಾಮಕುಕ್ಷಿಯ ಬಲೆಯುಲ್ಲಿ ಸಿಗಬೇಡಿರಿ. ಇದರಿಂದ ಲಾಭ
ವಂತೂ ಇಲ್ಲೇ ಇಲ್ಲ. ಅಗ್ನಿಮಾಂದ್ಯವೂ, ಜಾಡ್ಯವೂ ಮಾತ್ರ ಗಂಟು
ಬೀಳುತ್ತವೆ. ಅನ್ನಪಚನವು ಸರಿಯಾಗಿ ಆಗದ್ದರಿಂದ ರಾತ್ರಿ ಹೊಟ್ಟೆ
ಹಸಿಯುವದಿಲ್ಲ. ಮತ್ತು ನಿದ್ದೆ ಬಾರದ್ದರಿಂದ ಬೆಳತನಕ ಹಾಸಿ
ಯ ಮೇಲೆ ಈ ಮಗ್ಗಲಿಂದ ಆ ಮಗ್ಗಲಿಗೆ ಆ ಮಗ್ಗಲಿಂದ ಈ ಮ
ಗ್ಗಲಿಗೆ ರಾತ್ರಿಯಲ್ಲಿ ಚಡಪಡಿಸುತ್ತ ಬಿದ್ದು ಕೊಳ್ಳಬೇಕಾಗುತ್ತದೆ.

ಬೇಕಾದಷ್ಟಕ್ಕಿಂತ ಕಡಿಮೆ ನಿದ್ದೆ ಮಾಡುವದರಿಂದ ಕೇಡಾಗ
ವಂತೆ ಹೆಚ್ಚು ನಿದ್ದೆ ಮಾಡುವದರಿಂದಲೂ ಆಗುತ್ತದೆ. ಹೆಚ್ಚು ಹೊ
ತ್ತು ನಿದ್ದೆ ಮಾಡುವದರಿಂದ ಮೈಯಲ್ಲಿ ಮೇದಸ್ಸು ಬೆಳೆಯುತ್ತದೆ
ಮಿದುಳಿಗೆ ಜಡತ್ವವು ಬರುತ್ತದೆ. ಮೈಯು ಸ್ಥೂಲವಾಗುವದರಿಂ
ದದಕ್ಕೆ ತುಸು ವ್ಯಾಯಾಮವನ್ನು ಸಹ ಸಹನವಾಗುವದಿಲ್ಲ. ಕಡೆ
ಯಲ್ಲಿ ಬಹು ಮೂತ್ರದಂಥ ಭಯಂಕರ ರೋಗವನ್ನು ಅಂಟಿಕೊಳ್ಳು
ವ ಸಂಭವವುಂಟು. ಬಹುತರವಾಗಿ ಎಲ್ಲ ಶ್ರೀಮಂತರ ಹಾಡು
ಇದೇ? ಕೆಲವು ಸೊಗಸುಗಾರರು ರಾತ್ರಿಯನ್ನೆಲ್ಲ ಗಾಯನ, ವಾ
ದನ, ನೃತ್ಯ ಮುಂತಾದ ದುಂದುಗಾರಿಕೆಗಳಲ್ಲಿ ಕಳೆಯುತ್ತಾರೆ
ಇದರಿಂದ ಹೊತ್ತನ್ನು ನಿರರ್ಥಕವಾಗಿ ಕಳೆದಂತಾಗುವದಲ್ಲದೆ ರಾ
ತ್ರಿಯ ಜಾಗರಣೆಯಿಂದ ಪ್ರಕೃತಿಯು ಕೆಡುತ್ತದೆ. ಒಮ್ಮೆ ಕೆಟ್ಟ
ದ್ದನ್ನು ಸುಧಾರಿಸುವದು ಕಠಿಣವು. ಮನುಷ್ಯನಂಥ ಬುದ್ಧಿಶಾಲಿ
ಯಾದ ಪ್ರಾಣಿಯು ಸೃಷ್ಟಿಯ ನಿಯಮಗಳನ್ನು ವಿಾರಿನಡೆದು ಶರೀ
ರವನ್ನು ಹಾಳುಮಾಡಿಕೊಂಡು ಅಕಾಲಮೃತ್ಯುವನ್ನು ಬರಮಾಡಿ
ಕೊಳ್ಳುವದು ತೀರತಿಳಿಗೇಡಿತನವಲ್ಲವೇ? ಇಂಥವನು ತನ್ನ ಶರೀ
ರಿಸಲ್ಲಿ ಅತ್ಮಘಾತದ ದ್ರೋಹವನ್ನು ಕಟ್ಟಿಕೊಳ್ಳುತ್ತಾನೆಂದು ಹೇ
ಳಲಿಕ್ಕೆ ಅಡ್ಡಿ ಇಲ್ಲ. ಆದ್ದರಿಂದ ಹೊತ್ತು ಹೊತ್ತಿಗೆ ಸೃಷ್ಟಿನಿಯ
ಮಾನುಸಾರವಾಗಿ ತಮ್ಮ ತಮ್ಮ ಶರೀರಕ್ಕೆ ಬೇಕಾಗುವಷ್ಟು
ಆಹಾರ ವಿಹಾರ ನಿದ್ರಾ ವ್ಯಾಯಾಮಗಳನ್ನು ದೊರಕಿಸಿಕೊಂಡು
ದೀರ್ಘಾಯುಷ್ಯವನ್ನು ಪಡಕೊಳ್ಳುವದು ಎಲ್ಲರ ಆದ್ಯಕರ್ತವ್ಯವಾ
ಗಿರುತ್ತದೆಂದು ಹೇಳಬಹುದು.

FORMS FOR CRITICISM LESSONS.
ಟೀಕಾ ಪಾಠಗಳ ನಮೂನೆಗಳು.

ಶಿಕ್ಷಣವು ಒಂದು ಗೌರವದ ಸಂಗತಿಯಾಗಿರುತ್ತದೆ. ರಾಷ್ಟ್ರದ ಹಿತಾಹಿತವು ವಿಶೇಷವಾಗಿ ಈ ಸಂಗತಿಯನ್ನೇ ಅವಲಂಬಿಸಿರುತ್ತದೆ. ಮನುಷ್ಯರಿಗೆ ಪ್ರಯೋಜನಕರವಾದ ಅನೇಕ ಶಾಸ್ತ್ರಗಳಲ್ಲಿ ಇದೇ ಮೇಲಾದದ್ದೆಂದು ಹೇಳಲಿಕ್ಕೆ ಪ್ರತಿಬಂಧವಿಲ್ಲ. ಈ ಶಾಸ್ತ್ರದ ಶೋಧವನ್ನು ಪಂಡಿತರು ಹಗಲಿರುಳು ನಡಿಸೇ ಇರುವರು. ಅಲ್ಪಾಯಾಸದಿಂದ ಬಹು ಫಲವನ್ನು ಮಾಡಿಕೊಳ್ಳುವದೇ ಇವರ ಹವ್ಯಾಸದ ಮರ್ಮವು. ಇದಕ್ಕನುಸಾರವಾಗಿ ಮಿಸ್ಟರ ಜೆ. ವೆಲ್ಟನ್ ಎಮ್. ಏ. ಎಂಬವರು ಪ್ರಕಟಿಸಿದ ಟೀಕಾಪಾಠದ ನಮೂನೆಗಳು ಪ್ರಯೋಜನಕರವಾದಂಥವೂ ಗೌರವದವೂ ಇರುತ್ತವೆಂದು ಕಂಡುಬಂದದರಿಂದ ಅವುಗಳನ್ನು ಪ್ರಸ್ತಾವನೆಯೊಂದಿಗೆ ಇದರಡಿಯಲ್ಲಿ ಬರೆದಿರುತ್ತೇವೆ.

ಪ್ರಸ್ತಾವನೆ.

ಶಿಕ್ಷಕರು ಶಿಕ್ಷಣಕಲೆಯಲ್ಲಿ ನಿಪುಣರಾಗಿರುವದು ಅತ್ಯವಶ್ಯವೆಂದು ಬಿಚ್ಚಿ ಹೇಳುವ ಪ್ರಯೋಜನವಿಲ್ಲ. ಈ ಕಲೆಯಲ್ಲಿ ಪ್ರಾವೀಣ್ಯವನ್ನು ಪಡೆಯಲಿಕ್ಕೆ ಅನೇಕ ಸಾಧನಗಳುಂಟು. ಅದರೆ ಹೊಸ ಶಿಕ್ಷಕರಿಗೆ ಟೀಕಾಪಾಠವನ್ನು ಸಾಗಿಸಲಿಕ್ಕೆ ಹಚ್ಚಿ ಅವನ ಸಹವ್ಯವಸಾಯಿಗಳೂ ಮುಖ್ಯ ಗುರುಗಳೂ ಕೂಡಿ ಆ ಕಲಿಸಿದ ವಿಷಯವನ್ನು ಸರ್ವತೋಮುಖವಾಗಿ ಚರ್ಚಿಸುವದೇ ಪ್ರಧಾನ ಸಾಧನವೆಂದು ಹೇಳಬಹುದು. ಈ ಚರ್ಚೆಯನ್ನು ಹೊಸ ಶಿಕ್ಷಕನು ಸಮಾಧಾನದಿಂದ ಕೇಳಿ ಮನನ ಮಾಡಿಕೊಳ್ಳುವದು ಅತಿ ಪ್ರಯೋಜನಕರವಾದ ಸಂಗತಿಯಾಗಿರುವದು. ಟೀಕೆಯನ್ನು ಮಾಡುವವರಾದರೂ ಆ ಪಾಠದ ಸಂಬಂಧದಿಂದ ಇಂಥ ಹಾದಿಯನ್ನೇ ಹಿಡಿಯತಕ್ಕದ್ದು, ಈ ಬಗೆಯ ಪ್ರಶ್ನೆಗಳನ್ನೇ ಕೇಳತಕ್ಕದ್ದು, ಇಂಥ ದೃಷ್ಟಾಂತಗಳನ್ನೇ ಕೊಡತಕ್ಕದ್ದು, ಮುಂತಾದ ತಾವು ಮೊದಲಿಗೇ ಗೊತ್ತು ಮಾಡಿಟ್ಟುಕೊಂಡ ಹಲಕೆಲವು ನಿಯಮಿತ ಸಂಗತಿಗಳಿಗೆ ಅನುಗುಣವಾಗಿ ಕಲಿಸಿದರೆ ಮಾತ್ರ ಗ್ರಾಹ್ಯವೂ, ತದ್ವಿಪರೀತವಾದದ್ದು ತ್ಯಾಜ್ಯವೂ ಎಂದು ಹೇಳುವದು ಸರಿಯಾದ ಟೀಕೆಯೆಂದು ಹೇಳಲಾಗದು ಕಲಿಸುವ ಪದ್ಧತಿಗಳೂ, ಕ್ರಮಗಳೂ, ವಿಷಯಸಿದ್ಧತಾ ರೀತಿಯೂ ಹಲವು ಪ್ರಕಾರದವಿರುತ್ತವೆ. ಪಾಠವನ್ನು ನಡಿಸುವವನು ತನಗೆ ಬೇಕಾದ ಪದ್ಧತಿಯಿಂದ ಕೆಲವೊಂದು ವರ್ಗಕ್ಕೆ ಕೆಲವೊಂದು ವಿಷ

ಯವನ್ನು ಕಲಿಸುತ್ತಿರಲು, ಆ ಪಾಠವನ್ನು ಅವನು ಸಮರ್ಪಕವಾಗಿ ಹೇಳದನೋ ಎಂಬದನ್ನು ಬೈಲಿಗೆ ಹಾಕುವದಕ್ಕಾಗಿ ವಿಷಯದ ಸಿದ್ಧತೆ, ಕಲಿಸುವ ಪದ್ಧತಿ, ಜ್ಞಾನಸಂಕ್ರಮಣ ಕ್ರಮ; ಪ್ರಶ್ನೆ, ದತ್ತಾಂತ ಮುಂತಾದವುಗಳನ್ನು ಪೂರ್ಣವಾಗಿ ಟೀಕಿಸುವದು ನಿಜವಾದ ಟೀಕೆಯೆಂದು ಹೇಳಲ್ಪಡುವದು. ಶಿಕ್ಷಕನು ಶಿಕ್ಷಣಕಾರ್ಯದಲ್ಲಿ ಪೊರಕಿಸಿದ ಯಶವನ್ನು ವಿವರಿಸುವದಿಷ್ಟೇ ಟೀಕೆಯ ಮುಖ್ಯ ಉದ್ದೇಶವಲ್ಲ. ಆ ಯಶವನ್ನು ದೊರಕಿಸಿಕೊಟ್ಟ ಕಾರಣಗಳನ್ನು ಬೈಲಿಗಿಟ್ಟು ಅವುಗಳ ಯೋಗ್ಯಾಯೋಗ್ಯತೆಗಳನ್ನು ಚರ್ಚಿಸುವದೇ ಮುಖ್ಯವಾಗಿರುವದು. ಈ ತತ್ವವನ್ನು ಮನವರಿಕೆ ಮಾಡಿಕೊಂಡವನು ವ್ಯಕ್ತಿವಿಷಯಕವಾಗಿ ಬಹುತರ ಟೀಕೆಯನ್ನು ಮಾಡಲಾರನು. ಅವನ ಕೆಲಸದ ಗುಣದೋಷಗಳನ್ನಷ್ಟೇ ವಿವರಿಸುವನು. ಅದರಲ್ಲಿ ವ್ಯಕ್ತಿಯ ಸಂಬಂಧವೇನೂ ಇರಲಾರದು. ಮೇಲಾದ ಟೀಕೆಯಲ್ಲಿ ೧ ನ್ಯಾಯ, ೨ ಪೂರ್ಣತ್ವ, ೩ ಪ್ರಯೋಜಕತ್ವ ಎಂಬ ಮೂರು ಲಕ್ಷಣಗಳಿರುವವು.

೧ ನ್ಯಾಯ:—ಶಿಕ್ಷಕನು ಹೇಳಿದ ಪಾಠದೊಳಗಿನ ದೋಷಗಳನ್ನಷ್ಟೇ ಬೈಲಿಗೆಳೆಯುವದು ನ್ಯಾಯವಾದ ಟೀಕೆಯೆನಿಸಲಾರದು. ಆದರೆ ಶಿಕ್ಷಕ, ಶಿಷ್ಯವರ್ಗ, ದೇಶ, ಕಾಲ, ಪರಿಸ್ಥಿತಿ ಮುಂತಾದ ಯಾವತ್ತು ಸಂಗತಿಗಳನ್ನೂ ಟೀಕಾವಿಷಯಕ ಸಂಗತಿಗಳ ಗೌರವವನ್ನೂ ತಾರತಮ್ಯವನ್ನೂ ಸರಿಯಾಗಿ ಆಲೋಚಿಸಿ ಗುಣದೋಷಗಳನ್ನು ಹೊರಗೆಡಹುವಂಥ ಟೀಕೆಯೇ ನ್ಯಾಯವಾದ ಟೀಕೆಯೆನಿಸುವದು. ಮುಖ್ಯವಾಗಿ ವ್ಯಕ್ತಿಸಂಬಂಧದ ದೋಷಗಳನ್ನು ಲೆಕ್ಕಿಸದೆ ಅವನ ಶಿಕ್ಷಣದಲ್ಲಿ ಕಂಡು ಬರುವ ದೋಷಗಳನ್ನು ಪ್ರಸಿದ್ಧ ಮಾಡಬಹುದೆಂಬ ತತ್ವವನ್ನು ಯಾವತ್ತು ಟೀಕಾಕಾರರು ಮರೆಯಲಾಗದು.

೨ ಪೂರ್ಣತ್ವ:—ಕಲಿಸಿದ ಪಾಠವಾಗಲೀ ಅದರ ಅಂಗವಾಗಲೀ ಸಮರ್ಪಕವಾಯಿತು, ಸಾಮಾನ್ಯವಾಯಿತು, ಎಂಬ ನಿದರ್ಶನವು ಕೇವಲ ಅಭಿಪ್ರಾಯವು, ಟೀಕೆಯೆನಿಸಲಾರದು. ಪೂರ್ಣತೆಯಂತೂ ದೂರಾಪಾಸ್ತವು. ಸಾಧಾರವಾದ ಅಭಿಪ್ರಾಯವೂ, ಅಂದಗೆ ಪಾಠದ ಸಂಬಂಧದ ನಿರ್ಣಯವೂ ಅದರ ಕಾರಣಗಳೂ ಕೂಡಿದ ಟೀಕೆಯೆನಿಸುವವು. ಮಾನಸಶಾಸ್ತ್ರ, ತರ್ಕಶಾಸ್ತ್ರಗಳಿಂದೊಡಗೂಡಿದ ಟೀಕೆಯು ಪೂರ್ಣ ಟೀಕೆಯೆನಿಸುವದು, ಅಂದರೆ ಪ್ರತಿಯೊಂ

ದು ಮಾತಿನಲ್ಲಿರುಗಮುವನ್ನು ಗೊತ್ತುಹಚ್ಚಿ ಮಾನಸ ತರ್ಕಶಾಸ್ತ್ರಗಳ ಅನುಸೋಧದಿಂದ ಅದರ ಗುಣಾವಗುಣಗಳನ್ನು ಹೇಳುವದು ಪೂರ್ಣವಾದ ಟೀಕೆಯ ಲಕ್ಷಣವು.

ವಿಷಯವನ್ನು ಪೂರ್ಣವಾಗಿ ಪರಿಶೀಲನ ಮಾಡಿದ ಹೊರ್ತು ಈ ಮಾದರಿಯ ಟೀಕೆಯನ್ನು ಮಾಡುವದು ದುಸ್ಸಾಧ್ಯವು. ಪಾಠ ಹೇಳುವ ಶಿಕ್ಷಕನೇ ವಿಷಯದ ಅಂಗೋಪಾಂಗಗಳನ್ನು ನೋಡಿರುವದರಿಂದ ತನ್ನ ಕೆಲಸದ ಯೋಗ್ಯವಾದ ನಿರ್ಣಯವನ್ನು ಮಿಕ್ಕವರಿಗಿಂತ ಸರಸಾಗಿ ಹೇಳಬಹುದು. ಟೀಕೆಯನ್ನು ಮಾಡುವ ಪ್ರಸಕ್ತಿಯಲ್ಲಿ ಪಾಠ ಹೇಳುವ ಶಿಕ್ಷಕನು ಪಾಠದ ಸಂಬಂಧದ ಪೃಥಕ್ಕರಣದ ಟಿಪ್ಪಣಿಯನ್ನು ತಯಾರಿಸಿ ಒಂದು ದಿವಸ ಮುಂಚಿತವಾಗಿ ಟೀಕೆ ಮಾಡುವ ಎಲ್ಲ ಸಹವ್ಯವಸಾಯಿಗಳಿಗೆ ಅದನ್ನು ತೋರಿಸಬೇಕೆಂಬ ನಿರ್ಬಂಧವಿರಲಿಕ್ಕೆ ಬೇಕು. ಇದೇ ಮೇರೆಗೆ ಆ ಸಹವ್ಯವಸಾಯಿಗಳಾದರೂ ಆ ಪಾಠವನ್ನೂ ಆ ಪಾಠದ ಪೃಥಕರಣದ ಟಿಪ್ಪಣಿಯನ್ನೂ ಚನ್ನಾಗಿ ವಿಚಾರಿಸಿ ಪ್ರಯೋಜನಕರವಾದ ಟೀಕೆಯನ್ನು ಮಾಡುವ ಸಾಮರ್ಥ್ಯವನ್ನು ಪಡಕೊಳ್ಳಬೇಕು,

೩ ಪ್ರಯೋಜಕತ್ವ:—ಪೂರ್ಣವಾದ ಟೀಕೆಯಿಂದ ಶಿಕ್ಷಣದ ನೈಪುಣ್ಯಕ್ಕೆ ಅನುಕೂಲವಾದ ಅನೇಕ ಸಂಗತಿಗಳು ತಮಗೆ ತಾವೇ ಹೊರಬೀಳುವವು. ಮಾಡಿದ ಕೆಲಸದ ಗುಣಾವಗುಣಗಳನ್ನು ಹೇಳುವದರಲ್ಲಿಯೇ ಮೇಲಾದ ಕೆಲಸದ ಸ್ವರೂಪವೂ, ಅದರ ನ್ಯೂನಾಧಿಕ್ಯಗಳೂ ತಾವಾಗಿಯೇ ಬೈಲಿಗೆ ಬರುತ್ತವೆ. ಶಿಕ್ಷಕನು ಅವಲಂಬಿಸಿದ ಪದ್ಧತಿಯೂ ಅದಕ್ಕೂ ಸುಗಮವಾದ ಪದ್ಧತಿಯೂ ಕೊಟ್ಟ ದೃಷ್ಟಾಂತಗಳೂ ಕೊಡಬೇಕಾದ ಸಮರ್ಪಕ ದೃಷ್ಟಾಂತಗಳೂ ವಿದ್ಯಾರ್ಥಿಗಳ ಲಕ್ಷವನ್ನು ಎಳಕೊಂಡು ಬುದ್ಧಿಯನ್ನು ಬೈಲಿಗೆಳೆಯಲಿಕ್ಕೆ ಮಾಡಿದ ಉಪಕ್ರಮವೂ ಅದರಿಂದಾದ ಪ್ರಯೋಜನವೂ ಹೆಚ್ಚು ಪ್ರಯೋಜನವನ್ನು ಸಾಧಿಸಲಿಕ್ಕೆ ಮಾಡಬೇಕಾದ ಉಪಾಯಗಳೂ ಇವುಗಳ ತಾರತಮ್ಯ ವಿಚಾರವು ಚರ್ಚಿಸಲ್ಪಡುವದರಿಂದ ಮಾತ್ರ ಟೀಕಾಪಾಠದಿಂದ ಪ್ರಯೋಜನವಾಗುತ್ತದೆ. ಈ ಪ್ರಕಾರದಿಂದ ಟೀಕಾಪಾಠವು ಸಾಗಬೇಕಾದರೆ ಎಲ್ಲರೂ ಪಾಠವನ್ನು ಮುಂದಾಗಿ ಸಿದ್ಧ ಮಾಡಿಟ್ಟುಕೊಳ್ಳಬೇಕೆಂದು ಪ್ರತ್ಯೇಕವಾಗಿ ಹೇಳುವದು ಅವಶ್ಯವಿಲ್ಲ.

ಈ ಬಗೆಯಿಂದ ನಡಿಸಿದ ಟೀಕೆಯು ಬಹಳ ಗೌರವದ್ದಿರುವದು. ಇದರ ಟಿಪಣಿಗಳನ್ನು ಪ್ರತಿಯೊಬ ಹೊಸ ಶಿಕ್ಷಕನು ಜತನದಿಂದ

ಕಾದಿಡತಕ್ಕದ್ದು. ಅವನು ಈ ಕೆಲಸಕ್ಕಾಗಿಯೇ ಒಂದು ಪುಸ್ತಕವನ್ನು ಕಟ್ಟಿ ಆದರಲ್ಲಿ ತಾನು ಮಾಡಿದ ಟೀಕೆಯನ್ನು ಬರೆಯುವದಲ್ಲದೆ ಆ ಟೀಕಾವಾಠ ಪ್ರಸಕ್ತಿಯಲ್ಲಿ ನಡೆದ ಯಾವತ್ತು ಗೌರವದ ಚರ್ಚೆಗಳನ್ನು ಬರೆದಿಡತಕ್ಕದ್ದು. ಕೆಲವರು ಸಾಮಾನ್ಯ ಒಪ್ಪಿಗೆಯ ನಿರ್ದೇಶವನ್ನಷ್ಟೇ ಬರೆಯುವರು. ಆದರೆ ಇದು ಸರಿಯಲ್ಲ. ಟೀಕೆಗಳೂ ಅವುಗಳಿಗೆ ಆಧಾರಭೂತವಾದ ಕಾರಣಗಳೂ ಒಟ್ಟಾಗಿ ಬರೆಯುವದೇ ಪ್ರಯೋಜನಕರವಾದದ್ದು.

ಮುಂದೆ ಕೊಟ್ಟ ನಮೂನೆಗಳಲ್ಲಿ ಕೆಲವು ಪಾರಿಭಾಷಿಕ ಶಬ್ದಗಳು ಪ್ರಯೋಗಿಸಲ್ಪಟ್ಟಿರುತ್ತವೆ. ಅವುಗಳನ್ನು ವಿವರಿಸುವದು ಉಚಿತವಾಗಿದೆ.

೧ ಆದುಕೊಂಡ ವಿಷಯವಿಚಾರ:—ಈ ಭಾಗದಲ್ಲಿ ವಿದ್ಯಾರ್ಥಿಗಳ ಯೋಗ್ಯತೆಗೆ ಅನುಸರಿಸಿ ಹೇಳತಕ್ಕ ಸಂಗತಿಗಳೂ ಅವುಗಳ ಪರಿಮಿತಿಯೂ ಪರಸ್ಪರ ಸಂಬಂಧವೂ ಅಚ್ಚುಕಟ್ಟುತನವೂ ಬರುವವು.

೨ ವಿಷಯವ್ಯವಸ್ಥೆ (ಪದ್ಧತಿ)—(೧) ವಿಷಯದ ಸಿದ್ಧತೆ, (೨) ಕಲಿಸಿದ ವಿಷಯವು ಎಷ್ಟರಮಟ್ಟಿಗೆ ಮನದಟ್ಟಾಗಿರುವದೆಂಬದನ್ನು ನೋಡಿ ವಿದ್ಯಾರ್ಥಿಗಳ ಲಕ್ಷವನ್ನು ಎಳಕೊಂಡು ಹೊಸ ವಿಷಯವನ್ನು ತಿಳುಕೊಳ್ಳುವ ಲವಲವಿಕೆಯನ್ನು ಹುಟ್ಟಿಸುವದು, ಕಲಿಸುವ ಹೊಸ ವಿಷಯವನ್ನು ಮನಸಿಗೆ ಸೊಗಸಾಗುವಂತೆ ವಿದ್ಯಾರ್ಥಿಗಳ ಮುಂದೆ ಇಡುವದು, (೩) ಈ ಹೊಸ ವಿಷಯವನ್ನು ಸಮರ್ಪಕವಾಗಿ ಹೊಂದಿಸುವದು, (೪) ಜ್ಞಾನವನ್ನು ಉಪಯೋಗಿಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸುವದು, (೫) ಮೊದಲು ಕಲಿತಂಥ ತತ್ವಾಲಕ್ಕೆ ಕಲಿಸಿದಂಥ ಸಂಗತಿಗಳ ಸಂಬಂಧವು ಮನದಟ್ಟಾಗುವಂತೆ ಪಾಠದ ಉಪಸಂಹಾರವನ್ನು ಮಾಡುವದು ಮುಂತಾದ. ಐದು ಸಂಗತಿಗಳು ಈ ಭಾಗದಲ್ಲಿ ಬರುತ್ತವೆ.

೩ ವಿವರಣಕ್ರಮ:—೧ ಸಾಮಾನ್ಯಸ್ವರೂಪ, ೨ ಪ್ರಶ್ನೆಗಳು ಪರೆ, ೩ ವಿಷಯ ವಿವರಣೆ, ೪ ದೃಷ್ಟಾಂತ, ೫ ಕರೇ ಹಲಿಗೆಯ ಪ್ರಯೋಜನ ಇವೈದು ಸಂಗತಿಗಳು ಈ ಭಾಗದಲ್ಲಿ ಬರುತ್ತವೆ.

೪ ಶಿಷ್ಯಶಾಸ್ತೃಗಳ ಸಂಬಂಧ:—(೧) ಶಿಕ್ಷಕನ ಆಕೃತಿಯ ಸಾಮರ್ಥ್ಯ, ಭಾಷೆ, ರೀತಿ, ಜ್ಞಾನ, ವಿಚಾರ ಮುಂತಾದ ಸಂಗತಿಗಳು. (೨) ವರ್ಗಕ್ಕಾದ ಪ್ರಯೋಜನ, ಹುಡುಗರ ಲಕ್ಷ್ಯ, ಬುದ್ಧಿಗಾದ ಸಂಸ್ಕಾರ, ಬುದ್ಧಿಯ ಬೆಳುವಣಿಗೆ, (೩) ಕಲಿಸುವ ಕೆಲಸದಲ್ಲಿ ಬಂದ ಯಶಾಪಯಶವು ಈ ಮೂರು ಸಂಗತಿಗಳು ಈ ಭಾಗದಲ್ಲಿ ಬರುತ್ತವೆ.

ಶಿಕ್ಷೆಕನು ಕಲಿಸಿದ ಪಾಠಗಳನ್ನು ಕುರಿತು ಚರ್ಚೆ ಮಾಡುವವರಿಗೋಸ್ಕರ ನಮೂನೆಯು.

ವಿಷಯ ವರ್ಗ ಶಿಕ್ಷಕ ತಾರೀಖು

ಟೀಕಾ.	ಸೂಚನೆಗಳು	ಚರ್ಚೆಯಿಂದ ಶೈಲಿಗೆ ಬಂದ ಗೌರವದ ಸಂಗತಿಗಳು.	ಪಾಠಗಳ ಪ್ರಥಕ್ಕರಣದ ಸ್ಥೂಲ ಟಿಪ್ಪಣಿಯು.
ಚರ್ಚೆಯ ಸಂಗತಿಗಳು. ೧ ಆದುಕೊಂಡ ವಿಷಯ ವಿಚಾರವು. ವಿಚಾರಣೀಯ ಅಂಶಗಳು. ಅ ಗುಣ. ಆ ಪರಿಮಾಣ. ಇ ಸುಸಂಗತತ್ವ. ಈ ನಿಜತ್ವ.			

೧ ನಿಮಿಷ ನಿಲ್ಲು ಅಷ್ಟರಲ್ಲಿ ಬರು.

ವಿಚಾರಣೆಯ ಅಂಶಗಳು.

ಅ ನಿಲ್ಲು.ಹೊರಡು.
C ೧ ನಿಮಿಷ.ಅರ್ಧ ಗಂಟೆ.
೯ ಬಸ್ಸು.ಕಾರು.
ಆ C ಬರುವುದು.ಹೊರಡುವುದು.
C ಬಹಳ.
೧ ಇಂದು.ನಿನ್ನೆ.
೯ ಆಗಾಗ.ಆಗೊಮ್ಮೆ.
ಇ C ಬರುವುದು.ನಿಲ್ಲುವುದು.
೧ ಸಾಲಿನಲ್ಲಿ (ಬಂದು)
ಈ C ನಿಮಿಷ.ಗಂಟೆ.
೧ ಹೊರಡು.
೯ ಬರುವುದು.

ಜ್ಞಾನಸಂಕ್ರಮಣ ರೀತಿ.

ವಿಚಾರಣೀಯ ಅಂಶಗಳು.

ಅ ಸಾಮಾನ್ಯಸ್ವರೂಪ.

ಆ ಪ್ರಶ್ನೆಗಳು.

೧ ರೂಪ.

೨ ಕಾರ್ಯ. { (ಅ) ಕಲಿಸುವ ಪ್ರಶ್ನೆ. (ಬ) ಮಾರ್ಗಿಕ ಪ್ರಶ್ನೆ.

೩ ಫಲ ಅಥವಾ ಗೌರವ.

ಇ ವಿವರಣೆ.

೧ ಕಥನ.

೨ ವಿವರಣ.

ಈ ದೃಷ್ಟಾಂತಗಳು.

೧ ಯೋಗ್ಯತೆ.

೨ ಸಂಖ್ಯೆ.

೩ ಪ್ರಯೋಜನ.

ಉ ಕರಿ ನಲಿಗೆಯ ಉಪಯೋಗ.

೧ ಆಕೃತಿಗಳು.

೨ ಸಾರನಿರೂಪಣ.

೩ ಬರಹ.

೫. ತಿಥಿಯ ತಿಥಿಯ ಸಂಖ್ಯೆಯು.
ನಿಘಂಟಿನಲ್ಲಿರುವ ಅಂಶಗಳು.
ಅ ತಿಥಿಯ ಹೆಸರು ಹುಟ್ಟು.
೧ ಸಹಜವಾಗಿರುವಂಥ.
೨ ಪಕ್ಷಿಯ ಹೆಸರು.
೩ ಪಾಪವಿಮೋಚನೆ.
೪ ಬೀಜ.
೫ ಭೂಮಿ.
೬ ಸಂಖ್ಯೆ.
೭ ಜ್ಞಾನ.
೮ ಸಮಭಾಜಕ.
ಆ ಹೆಸರು.
೧ ಪಕ್ಷಿಯ ಹೆಸರು.
೨ ಗಿಡ.
೩ ಮರ.
ಇ ಸಂಖ್ಯಾವಾಚಕ ಶಬ್ದಗಳು.
೧ ಯಾವುದೋ ಸಂಖ್ಯೆಯನ್ನು.
೧ ಅಮಾವಾಸ್ಯೆಯ ಸಂಖ್ಯೆಯನ್ನು.

ನಮೂನೆಯಲ್ಲಿ ಕೊಟ್ಟ ವಿಚಾರಣೀಯ ಅಂಶಗಳನ್ನು ಕುರಿತು ವಿಶೇಷ ಮಾಹಿತಿಯು.

I ಆದುಕೊಂಡ ವಿಷಯ.

(ಅ). ಗುಣ.

(ಅ) ಆದುಕೊಂಡ ವಿಷಯವು ಪರ್ಗದ ಯೋಗ್ಯತೆಗೆ ಅನು ಗುಣವಾಗಿರುವದೋ ?

(ಬ) ಮನೋರಂಜಕವಾಗಿರುವದೋ ?

(ಕ) ಪ್ರಯೋಜಕವಾಗಿರುವದೋ ?

(ಡ) ಇದ್ದರೆ ಯಾವ ಬಗೆಯಿಂದ ?

ಎಂಬ ವಿಚಾರಗಳು ಈ ಸದರಿನಲ್ಲಿ ಬರುತ್ತವೆ.

(ಆ) ಪರಿಮಾಣ.

ಆದುಕೊಂಡ ಹೊಸ ವಿಷಯವು ಗೊತ್ತಾದ ಅವಧಿಗೆ ಸರಿಯಾಗಿರುವದೋ ? ಅಂದರೆ

(ಅ) ಕೆಲಸವು ತೀರಿ ಹೊತ್ತು ಉಳಿಯದಂತೆಯೂ,

(ಬ) ಗಡಿಬಿಡಿಯಾಗದಂತೆಯೂ,

ಪಾಠವು ವೇಳೆಗೆ ಸರಿಯಾಗಿರುವದೋ ?

ಎಂಬ ವಿಚಾರಗಳು ಈ ಭಾಗದಲ್ಲಿ ಬರುತ್ತವೆ.

(ಇ) ಸುಸಂಗತತ್ವ.

(ಅ) ಹೇಳತಕ್ಕ ಯಾವತ್ತು ಸಂಗತಿಗಳು ಪಾಠಕ್ಕೆ ಸಂಬಂಧಿಸಿವವೋ ?

(ಬ) ಅಗ್ರಹಪೂರ್ವಕವಾಗಿ ಹೇಳಿದ ಸಂಗತಿಗಳೆಲ್ಲ ಮಹತ್ವ ವುರುವವೋ ?

ಈ ವಿಚಾರಗಳು ಈ ಸದರಿನಲ್ಲಿ ಬರುತ್ತವೆ.

(ಈ) ನಿಜತ್ವ.

(ಅ) ಪಾಠಕ್ಕೆ ಕೊಟ್ಟ ಮಹತ್ವವು ನಿಜವಾಗಿರುವದೋ ?

(ಬ) ವಿಷಯವೆ ಸ್ಪಷ್ಟ ತಿಳುವಳಿಕೆಗಾಗಿ ಹೇಳಿದ ಸಣ್ಣ ದೊಡ್ಡ ಸಂಗತಿಗಳೆಲ್ಲ ನಿಜವಾಗಿರುವವೋ ?

ಈ ವಿಚಾರಗಳು ಈ ಸದರಿನಲ್ಲಿ ಬರುವವು.

II ವಿಷಯ ಸ್ಥೈವಸ್ಥೆ ಅಥವಾ ಪದತಿ.

(ಅ) ಸಿದ್ಧತೆ.

(ಅ) ಮೊದಲು ಕಲಿತ ಸಂಗತಿಗಳ ಪುನರಾವರ್ತನವು ಸ್ಪಷ್ಟವಾಗಿರುವದೋ ?

(ಬ) ನಿಶ್ಚಿತವಾಗಿರುವದೋ ?

(ಕ) ನಡೆಯುವ ಪಾಠಕ್ಕೆ ಹೊಂದಿರುವದೋ ?

(ಡ) ತಕ್ಕಷ್ಟಿರುವದೋ ?

(ಇ) ಚುರುಕಾಗಿರುವದೋ ?

(ಎ) ಸಹಜವಾಗಿರುವದೋ ?

(ಯ) ಸುವ್ಯವಸ್ಥಿತ ಅಥವಾ ಕ್ರಮಬದ್ಧವಾಗಿರುವದೋ ?

(೨) ಸುಸಂಬದ್ಧತಾ

(ಅ) ಪಾಠದ ಉದ್ದೇಶವು ಸ್ಪಷ್ಟವಾಗಿ ತಿಳಿಸಲ್ಪಟ್ಟಿರುವದೋ ?

(ಬ) ಪ್ರೋತ್ಸಾಹಕತ್ವ

(ಅ) ಕುತೂಹಲವು ಬೆಳೆಯುವಂತೆಯೂ, ಆಸ್ಥಾಪೂರ್ವಕವಾದ ಲಕ್ಷ್ಯವು ನೆಲೆಗೊಳ್ಳುವಂತೆಯೂ, ವಿಷಯಗ್ರಹಣದ ಆತುರವೂ ಜ್ಞಾನಾಭಿರುಚಿಯೂ ಸ್ಥಿರಗೊಳ್ಳುವಂತೆಯೂ, ಪಾಠದ ಉದ್ದೇಶವು ಸರಿಯಾಗಿ ತಿಳಿಸಲ್ಪಟ್ಟಿರುವದೋ ?

ಈ ವಿಚಾರಗಳು ಈ ಸದರಿನಲ್ಲಿ ಬರುವವು.

(೩) ವಿಷಯೋದ್ಘಾಟನ.

(೧) ರಚನಾ.

(ಅ) ಕಲಿತ ಹಳೆ ಸಂಗತಿಗಳಿಗೂ ಹೊಸದಾಗಿ ಕಲಿಸುವ ಸಂಗತಿಗಳಿಗೂ ಸಾಧ್ಯವಾದ ಮಟ್ಟಿಗೆ ಬಗೆಬಗೆಯಿಂದ ಸರಿಯಾಗಿ ತಳಕು ಹಾಕಲ್ಪಟ್ಟಿರುವದೋ ?

(೨) ಭಾಗೋಪಭಾಗಗಳು.

(ಅ) ಭಾಗಗಳು ಸರಿಯಾಗಿರುವವೋ ?

ಅಂದರೆ

(೧) ಶಾಸ್ತ್ರಸಮ್ಮತವಾಗಿರುವವೋ ?

(೨) ತಕ್ಕಷ್ಟಾಗಿರುವವೋ ?

(೩) ಸ್ಫುಟವಾಗಿರುವವೋ ?

(ಬ) ಉಪಭಾಗಗಳು.

(೧) ವಿಷಯವು ನಿಸ್ಸಂದೇಹವಾಗಿಯೂ ಪೂರ್ಣವಾಗಿಯೂ ತಿಳಿಯುವಂತೆಯೂ.

(೨) ಉದ್ದಿಷ್ಟಜ್ಞಾನವು ಪೂರ್ಣವೂ ಸ್ಪಷ್ಟವೂ ಆಗುವಂತೆಯೂ ಒಂದಕ್ಕೊಂದು ಹೊಂದಿರುವವೋ ?

(೩) ಆವರ್ತನ.

(ಅ) ನಡೆದ ಭಾಗವು ಮನದಟ್ಟಾದ ಹೊರತು ಎರಡನೇ ಭಾಗಕ್ಕೆ ಹೋಗಕೂಡದೆಂಬ ನಿರ್ಬಂಧವು ಕಾದುಕೊಳ್ಳಲ್ಪಡುವದೋ ? ಈ ವಿಚಾರಗಳು ಈ ಸದರಿನಲ್ಲಿ ಬರುವವು.

(೪) ವಿಧಿಯುಕ್ತ ವಿಷಯವಿನ್ಯಾಸವು.

(೧) ಯೋಜನೆ.

(ಅ) ಸಾಮಾನ್ಯಸಿದ್ಧಾಂತವನ್ನು ಕಂಡು ಹಿಡಿಯುವ ಸಾಮರ್ಥ್ಯವನ್ನು ಬೆಳೆಸುವದಕ್ಕಾಗಿ ಉಚಿತವಾದಂಥ, ಸಮರ್ಪಕವಾದಂಥ ತುಲನೆಗಳು ಹೇಳಲ್ಪಡುವವೋ ?

(೨) ಸಾರ್ಥಕ್ಯ.

(ಅ) ಸಾಮಾನ್ಯಸಿದ್ಧಾಂತವು.

(೧) ವಿದ್ಯಾರ್ಥಿಗಳಿಂದಲೇ ಕಂಡು ಹಿಡಿಯಲ್ಪಟ್ಟಿರುವದೋ ?

(೨) ಪಾಠದಿಂದ ಸ್ಪಷ್ಟವಾಗಿ ಫಲಿತವಾಗಿರುವದೋ ?

(೩) ಸ್ಪಷ್ಟವಾಗಿರುವದೋ ?

(೪) ನಿಶ್ಚಿತ ಅಥವಾ ಅಚ್ಚು ಕಟ್ಟಾಗಿರುವದೋ ?

ಈ ವಿಚಾರಗಳು ಈ ಸದರಿನಲ್ಲಿ ಬರುವವು.

(೩) ಜ್ಞಾನಯೋಜನೆಯು.

(ಅ) ಹೊಸದಾಗಿ ಸಾಧ್ಯವಾದ ಜ್ಞಾನದ ನಿರ್ದೇಶಿಸಿದ ಪ್ರಯೋಗಗಳು.

(೧) ಸಾಧುವಾಗಿರುವವೋ ?

(೨) ತಕ್ಕಷ್ಟಾಗಿರುವವೋ ?

(೩) ಸೂಕ್ಷ್ಮವಾಗಿರುವವೋ ?

(೪) ಬಗೆಬಗೆಯಾಗಿರುವವೋ ?

ಇವೇ ಮೊದಲಾದ ವಿಚಾರಗಳು ಈ ಸದರಿನಲ್ಲಿ ಬರುತ್ತವೆ.

(೪) ಉಪಸಂಹಾರ.

(ಅ) ಭಾಗಗಳ ಪರಂಪರೆಯು ಸಯುಕ್ತಿಕವಾಗಿ ಶಾಸ್ತ್ರಸಮ್ಮತವಾಗಿರುವದೋ ?

(ಬ) ವಿಷಯದ ತಿಳುವಳಿಕೆಗಾಗಿ ಹೇಳಿದ ಸಣ್ಣ ದೊಡ ಸಂಗ

ತಿಗಳು ತಕ್ಕಷ್ಟಿರುವವೋ? ಅಂದರೆ ಪ್ರಧಾನವಿಷಯವನ್ನು ಮು
ಮಾಡದಂತೆಯೂ ತಮ್ಮ ಪ್ರಾಧಾನ್ಯವನ್ನೇ ಮೀರಿಸದಂತೆಯೂ ಇ
ರುವವೋ?

(ಕ) ಉಪಸಂಹಾರದಿಂದ ಹಳೆ ಜ್ಞಾನವೂ ಹೊಸ ಜ್ಞಾನವ
ಕೂಡಿ ಸ್ಪಷ್ಟವಾದಂಥ ಸಂಕಲಿತವಾದಂಥ ವಿಕರೂಪವನ್ನು ಹೊ
ದುವವೋ? ಹೊಂದದೆ ಇದ್ದರೆ ಯಾಕೆ?

ಈ ವಿಚಾರಗಳು ಈ ಸದರಿನಲ್ಲಿ ಬರುವವು.

III ಜ್ಞಾನಸಂಕ್ರಮಣದ ರೀತಿ.

(೫) ಸಾಮಾನ್ಯಸ್ವರೂಪ.

(ಅ) ವಿಷಯವು ಸಯುಕ್ತಿಕವಾಗಿಯೂ ವಿವಿಧರೂಪವಾ
ಯೂ ಮಂಡಿಸಲ್ಪಡುವದೋ?

(೧) ವಿದ್ಯಾರ್ಥಿಗಳ ಸಂಬಂಧದಿಂದ.

(೨) ವಿಷಯದ ಸಂಬಂಧದಿಂದ.

(ಬ) ಜ್ಞಾನಸಂಕ್ರಮಣದ ಸಾಧನಗಳು ಅಳತೆ ಮೀರದಂ
ಪ್ರಯೋಗಿಸಲ್ಪಡುವವೋ? ಆ ಸಾಧನಗಳು ಯಾವವಂದರೆ;—

(೧) ಸಂಭಾಷಣೆ.

(೨) ಸೂಚಕ ಅಥವಾ ಕಲಿಸುವ ಪ್ರಶ್ನೆಗಳು.

(೩) ವ್ಯಾಖ್ಯಾನ ಅಥವಾ ಸ್ಪಷ್ಟ ಹೇಳುವದು.

(೪) ವಿವರಣ ಅಥವಾ ತಿಳಿಸಿಕೊಡುವದು.

(೫) ದೃಷ್ಟಾಂತಗಳು.

(೬) ಮಾರ್ಮಿಕ ಪ್ರಶ್ನೆಗಳು.

(ಕ) ಪಾಠದಿಂದ ಶಿಕ್ಷಕ ಶಿಕ್ಷಿತರ ಮನೋಮನವ್ಯಾಪಾರವ
ವ್ಯಕ್ತವಾಗುವದೋ?

(ಡ) ತತ್ಕಾಲಕ್ಕೆ ಕಲಿಸಿದ ಭಾಗದ ಪುನರಾವರ್ತನವನ್ನು ಮಾ
ಡುವಾಗ ಹೇಳಿದ ಸಂಗತಿಗಳನ್ನು ಕುರಿತು ವಿಚಾರ ನಡಿಸುವ ಪ
ಪಾಠವು ಹುಟ್ಟಿಸಲ್ಪಡುವದೋ? ಅದೇ ಮೇರೆಗೆ ಇಡೀ ಪಾಠದ
ಪುನರಾವರ್ತನವನ್ನು ಮಾಡುವಾಗ ಭಾಗಭಾಗಗಳ ಪರಸ್ಪರ ಸಂ
ಬಂಧವನ್ನೂ, ಭಾಗಗಳಿಗೂ ಇಡೀ ಪಾಠಕ್ಕೂ ಇರುವ ಸಂಬಂಧವ
ನ್ನೂ, ಹೊಸದಾಗಿ ಕಲಿತ ಸಂಗತಿಗಳಿಗೂ, ಮೊದಲು ಕಲಿತ ಸಂ
ಗತಿಗಳಿಗೂ ಇರುವ ಸಂಬಂಧವನ್ನೂ, ಸ್ಪಷ್ಟವಾಗಿ ಹೊರಗೆಡಹಿ
ಕ್ಯೆವಶ ಮಾಡಿಕೊಳ್ಳುವಂತೆ ಪಾಠವನ್ನು ಸರಿಯಾಗಿ ಹೊಂದಿಸಿ

ಧ್ಯ ಮಾಡಿಕೊಳ್ಳುವ ರೂಢಿಯು ಅಗ್ರಹಪೂರ್ವಕವಾಗಿ ಬಲಿಸ
ಡುವದೋ ?

ಎಂಬ ವಿಚಾರಗಳು ಈ ಪದರಿನಲ್ಲಿ ಬರುವವು.

(೫) ಪ್ರಶ್ನೆಗಳು.

ಈ ಪದರಿನಲ್ಲಿ.

(ಅ) ಪ್ರಶ್ನೆಯ ರೂಪ,

(ಆ) ಸ್ಪಷ್ಟವಾಗಿರುವವೋ ?

(ಇ) ನಿಶಿತವಾಗಿರುವವೋ ?

(ಈ) ಒಂದೇ ಸಂಗತಿಯನ್ನು ಅನುಲಕ್ಷಿಸಿರುವವೋ ?

(ಉ) ಸಂಕ್ಷಿಪ್ತವಾಗಿರುವವೋ ?

(ಊ) ಸರಳವೂ ವ್ಯಾಕರಣಶುದ್ಧವೂ ಆಗಿರುವವೋ ?

(ಋ) ಸೂಚಿಕವಾಗಿರುವವೋ ?

(ೠ) ಉತ್ತರವಿಶ್ರಿತವಾಗಿರುವವೋ ?

(ಎ) ಹೌದು, ಅಲ್ಲ, ಇಷ್ಟೇ ಉತ್ತರ ಹೊರಡಿಸುವಂಥವಿರು
ವೋ ?

(ಏ) ಒಂದೇ ರೂಪದಿಂದಾಗಲಿ ಭಿನ್ನರೂಪದಿಂದಾಗಲಿ ತಿರಿತಿರಿ
ಅವನೇ ಕೇಳಲ್ಪಡುವವೋ ?

(ಐ) ಪ್ರಶ್ನೆಗಳು ತೀವ್ರವಾಗಿಯೂ ಪ್ರೋತ್ಸಾಹನವನ್ನುಂಟು
ಾಡುವಂತೆಯೂ ಕೇಳಲ್ಪಡವವೋ ?

ಎಂಬ ವಿಚಾರಗಳು ಬರುವವು

(ಬ) ಕಾರ್ಯ ಅಥವಾ ಕಲಿಸುವಂಥ ಜ್ಞಾನ ಜೈಲಿಗೆಳೆಯುವಂ
ಪ್ರಶ್ನೆಗಳು.

(ಗ) ಪ್ರಶ್ನೆಗಳು ಸುಸಂಗತವಾಗಿಯೂ ವಿಷಯಾನುಬದ್ಧವಾಗಿ
ಾ ಒಂದರಿಂದೊಂದು ಫಲಿತವಾಗಿರುವವೋ ?

(ಘ) ವಿದ್ಯಾರ್ಥಿಗಳ ಸಾಮರ್ಥ್ಯಕ್ಕೆ ಅನುಗುಣವಾಗಿರುವವೋ ?

(ಙ) ವಿಚಾರ ಮಾಡುವ ಲವಲವಿಕೆಯನ್ನು ಹುರುಳುಗೊಳಿಸು
ಥವಿರುವವೋ ?

(ಚ) ಉತ್ತರವನ್ನು ಪೂರ್ಣವಾಕ್ಯದಿಂದ ಜೋಡುವಂಥವಿರು
ವೋ ?

(ಛ) ವಿದ್ಯಾರ್ಥಿಗಳಿಗೆ ವಿಚಾರ ಮಾಡಲಿಕ್ಕೆ ತಕ್ಕಷ್ಟು ಹೊ
ಷ್ಟೇ ಕೊಡುವಷ್ಟು ಅವಕಾಶದಿಂದ ಕೇಳಲ್ಪಡುವವೋ ?

(೬) ಸರಾಸರಿ ಸಮುವಾದ ಉತ್ತರದೊಳಗಿರುವ ದೋಷವನ್ನೆ ವಿದ್ಯಾರ್ಥಿಗಳಿಂದಲೇ ಯುಕ್ತಿಯಿಂದ ತಿದ್ದಿಸುವಂಥವಿರುವವೋ? ಪೂರ್ಣ ಉತ್ತರವನ್ನ ಅವರಿಂದಲೇ ಹೊರಡಿಸುವಂಥವಿರುತ್ತವೆಯೋ?

DEPARTMENTAL NOTICES.

ನೋಟೀಸುಗಳು.

I

ಹೋದ ಸಪಟೆಂಬರ ತಿಂಗಳ ಪತ್ರಕದಲ್ಲಿ ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯ ಬಗ್ಗೆ ನೋಟೀಸು ಕೊಟ್ಟರುತ್ತದಷ್ಟೇ. ಆ ನೋಟೀಸಿನಲ್ಲಿ ಉಮೇದವಾರರ ವಯಸ್ಸು ೨೨ ಕ್ಕಿಂತ ಕಡಿಮೆ ಇರಬಾರದೆಂದು ಛಾಪಿಸುವದಕ್ಕೆ ಬದಲಾಗಿ ೨೪ ಅಂತಾ ಛಾಪಿಸಿದೆ. ಅದರಿಂದ ಅನೇಕ ಉಮೇದವಾರರ ತಪ್ಪು ತಿಳುವಳಿಕೆಯಾಗಬಹುದು. ಕಾರಣ ಈ ನೋಟೀಸಿನಿಂದ ತಿಳಿಸುವದೇನಂದರೆ, ಉಮೇದವಾರರ ವಯಸ್ಸು ೨೨ ವರ್ಷಕ್ಕೆ ಮಿಾರಿರಬಾರದೆಂಬ ಮೊದಲಿನ ನಿಯಮವೇ ಕಾಯಿಮವಾಗಿರುತ್ತದೆ.

ತಾ॥ ೭-೧೦-೧೯೦೧. } S. K. Rodda,
ಪ್ರಿನ್ಸಿಪಾಲ.

II

ಮೈಲೀ ತೆಗಿಸುವ ಸಂಬಂಧದಿಂದ ಮುಖ್ಯ ಶಿಕ್ಷಕರೂ ಶಿಕ್ಷಕಿಯರೂ ಮಾಡಬಹುದಾದ ನೆರವನ್ನು ಕುರಿತು ಮೆಹರ್ಬಾನ ಡೈರೆಕ್ಟರ ಆಫ ಪಬ್ಲಿಕ ಇನ್‌ಸ್ಟ್ರಕ್ಷನ ಸಾಹೇಬರವರು ವಿಧಿಸಿದ ನಿಯಮಗಳು.

(೧) ವ್ಯಾಕ್ಸಿನೇಟರ ಜನರಿಗೆ ಅಂದರೆ ಮೈಲಿ ಕಾರಕೂನರಿಗೆ ಸಹಾಯ ಮಾಡುವದು ಎಲ್ಲ ಲೋಕಲ್×ಬೋರ್ಡ ಸಾಲಿಗಳ ಮತ್ತು ಮ್ಯುನಿಸಿಪಲ್ ಸಾಲಿಗಳ ಶಿಕ್ಷಕರ ಜನರ ಕರ್ತವ್ಯವಿರುತ್ತದೆ, ಆ ಸಹಾಯವನ್ನು ಎರಡು ಬಗೆಯಿಂದ ಮಾಡಬಹುದು.

× ಮ್ಯುನಸಿಪಲ್ ಸಾಲಿಗಳು ಮ್ಯುನಿಸಿಪಾಲಿಟಿಗಳ ವಶದಲ್ಲಿರುವದರಿಂದ ಇಂಥ ಸಾಲಿಗಳ ಬಗ್ಗೆ ಮ್ಯುನಿಸಿಪಾಲಿಟಿಯ ಅಧಿಕಾರಸ್ಥರು ಹುಕುಮು ಕೊಡುವರು.

(ಗ) ಮೈಲೀ ತೆಗಿಸುವದರಿಂದ ಆಗುವ ಲಾಭಗಳನ್ನು ಕುರಿತು ಜನರಿಗೆ ಉಪದೇಶ ಮಾಡುವದು.

(ಘ) ಸಾಲಿಯಲ್ಲಿ ಕೂಡಿದ ಹುಡುಗರು ಮೈಲೀ ತೆಗಿಸಿರುವರೋ ಇಲ್ಲವೋ ಅವರಿಗೆ ಮೈಲಿ ತೆಗಿಸುವದಿದೆಯೋ ಎಂಬದನ್ನು ತಿಳುಕೊಳ್ಳಲಿಕ್ಕೆ ವ್ಹ್ಯಾಕ್ಸಿನೇಟರರಿಗೆ ಪರವಾನಗಿ ಕೊಡುವದಲ್ಲದೆ ಅವರಿಗೆ ತಪಾಸಣೆಯಲ್ಲಿ ತಕ್ಕ ಸಹಾಯ ಮಾಡುವದು.

(೨) ಸಾಲಿಯಲ್ಲಿ ಮೈಲೀ ತೆಗಿಯಕೂಡದು; ಆದರೆ ಈ ಬಗ್ಗೆ ವ್ಹ್ಯಾಕ್ಸಿನೇಟರನು ಗೊತ್ತುಗೊಳಿಸಿದ ಸ್ಥಳದಲ್ಲಾಗಲಿ ಹುಡುಗರ ಮನೆಗಳಲ್ಲಾಗಲಿ ಮೈಲಿ ತೆಗಿಯಬಹುದು.

(೩) ವ್ಹ್ಯಾಕ್ಸಿನೇಟರನು ಸಾಲಿಗೆ ಬಂದ ಉದ್ದೇಶವನ್ನು ಹುಡುಗರಿಗೆ ಸರಿಯಾಗಿ ತಿಳಿಸಿ ಹುಡುಗರನ್ನು ಪರೀಕ್ಷಿಸುವದರಲ್ಲಿ ಅವನಿಗೆ ಸಹಾಯ ಮಾಡಬೇಕು, ಹಾಗೂ ತಾನು ಸ್ವತಃ ನಡೆದ ತಪಾಸಣೆಯನ್ನು ನೋಡಬೇಕು.

(೪) ಯಾವನೊಬ್ಬ ಹುಡುಗನಾಗಲಿ ಹುಡಿಗೆಯಾಗಲಿ ವ್ಹ್ಯಾಕ್ಸಿನೇಟರನ ತಪಾಸಣೆಗೆ ಒಪ್ಪಿಕೊಳ್ಳದಿದ್ದರೆ ಒತ್ತಾಯವನ್ನು ಮಾಡಕೂಡದು. ಈ ವಿಷಯದಲ್ಲಿ ವ್ಹ್ಯಾಕ್ಸಿನೇಟರನು ಹಾಗು ಮಾಸ್ತರನು ವಿದ್ಯಾರ್ಥಿಯ ಮನೆಯವರನ್ನು ಕೇಳಬೇಕು.

(೫) ಪ್ರತಿಯೊಂದು ಸಾಲಿಗೆ ಒಂದು ಸ್ಥಾನಿಕ ಪ್ರಮುಖ ಜನರ ×ಕಮಿಟಿಯು ಗೊತ್ತಾಗಿದೆ. ಈ ಕಮಿಟಿಯ ಮೆಂಬರರನ್ನು ವ್ಹ್ಯಾಕ್ಸಿನೇಟರನು ಮಾಡುವ ತಪಾಸಣೆಯನ್ನು ನೋಡಲಿಕ್ಕೆ ಮಾಸ್ತರನು ಕರಿಸಬೇಕು. ಅಂದರೆ ಈ ತಪಾಸಣೆಯು ಯೋಗ್ಯ ಮೇಲ್ವಿಚಾರಣೆಯಾಗುವದಲ್ಲದೆ ಇದರಲ್ಲಿ ಮನಸ್ಸು ನೋಯಿಸುವಂಥ ಸಂದರ್ಭವೇನೂ ಇರುವದಿಲ್ಲೆಂದು ಜನರಿಗೆ ಸ್ಪಷ್ಟವಾಗಿ ತೋರುವದು.

× ಆಯಾ ಊರ ಪ್ರಮುಖರಿಂದ ಉಂಟಾದ ಕಮಿಟಿಯು.

(೬) ವ್ಹ್ಯಾಕ್ಸಿನೇಟರನು ತಾನು ತಪಾಸಣೆಗೆ ಬರುವ ದಿವಸವನ್ನು ಶಕ್ಯವಿದ್ದ ಮಟ್ಟಿಗೆ ವೇಳೆಯನ್ನು ಸಹ, ಸಾಲಿಯ ಮಾಸ್ತರನಿಗೆ ಅಥವಾ ಮಿಸ್ಟ್ರೆಸಳಿಗೆ ಯಾವಾಗಲು ತಿಳಿಸಲೇಬೇಕು. ಆ

ಕಾರೀಖಿಗೆ ಮಾಸ್ತರನು ಅಥವಾ ಮಿಸ್ಟ್ರೆಸಳು ಹುಡುಗರನ್ನು ತಯಾರ ಮಾಡಿ ಇಡಬಹುದು.

ಈ ನಿಯಮಗಳನ್ನು ದಕ್ಷಿಣಭಾಗದ ಎಲ್ಲ ಶಿಕ್ಷಕ ಶಿಕ್ಷಕಿಯರ ತಿ
ಸುವಳಿಕೆಗಾಗಿ ಪ್ರಸಿದ್ಧಿಸಲ್ಪಟ್ಟಿವೆ. ೪೯೬೩
೧೬-೧೦-೧೯೧೦.

ಧಾರವಾಡ
ತಾ॥ ೧೬-೧೦-೧೯೧೦. } B. R. Sahasrabudhe,
ಎ. ಇ. ದಕ್ಷಿಣಭಾಗ.

III

ಈ ನೋಟೀಸಿನಿಂದ ಪ್ರಸಿದ್ಧಪಡಿಸುವದೇನಂದರೆ, ಪುಣೆ ಚಿತ್ರ
ಶಾಲಾ ಮ್ಯಾನೇಜರ ಇವರಿಂದ ರಚಿಸಲ್ಪಟ್ಟ ಸಚಿತ್ರ ಅಕ್ಷರಲಿಪಿ
ಎಂಬ ಪುಸ್ತಕವು ಮೆಹರ್ಬಾನ ಡಾಯರೆಕ್ಟರ ಸಾಹೇಬರವರಿಂದ
ಇನಾಮಿಗಾಗಿಯೂ ಶಾಲೆಗಳ ಉಪಯೋಗಕ್ಕಾಗಿಯೂ ಮಂಜೂ
ರಿ ಮಾಡಲ್ಪಟ್ಟಿದೆ.

ಧಾರವಾಡ ಟ್ರೇ. ಕಾಲೇಜ, } S. K. Rodda,
ತಾ॥ ೧-೧೧-೧೯೧೦. } ಪ್ರಿನ್ಸಿಪಾಲ.

V

ಟ್ರೇನಿಂಗಕಾಲೇಜದ ಪ್ರವೇಶ ಪರೀಕ್ಷೆಯ ನೋಟೀಸನ್ನು ಸಪ
ಟಂಬರ ತಿಂಗಳ ಶಾಲಾಪತ್ರಕದಲ್ಲಿ ಕೊಟ್ಟಿದ್ದು ಎಲ್ಲರಿಗೆ ಗೊತ್ತಿರ
ಬಹುದು. ಆದರೆ ಈ ವರ್ಷ ಕಾಲೇಜದಲ್ಲಿ ೬ ಮಂದಿ ಮುಸಲ
ಮಾನ ವಿದ್ಯಾರ್ಥಿಗಳನ್ನು ಸಂಬಳದೊಂದಿಗೆ ತಕ್ಕೊಳ್ಳುವೆವು. ಮು
ಸಲಮಾನ ವಿದ್ಯಾರ್ಥಿಗಳು ಈ ಸಂಧಿಯನ್ನು ಕಳಕೊಳ್ಳಬಾರದು.
ಆದರ್ದಿಂದ ಯಾವತ್ತು ಹಿಂದೀ ಶಾಲೆಯ ಮಾಸ್ತರರು ಈ ನೋಟೀ
ಸನ್ನು ನೋಡಿಕೊಂಡು ಒಳ್ಳೇ ಹುಷಾರಿರುವಂಥ ಮುಲ್ಕೀ ಪರೀ
ಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳನ್ನು ಆರಿಸಿ ಅವರಿಗೆ ಉತ್ತೇಜನ
ಕೊಟ್ಟು ಕಾಲೇಜಕ್ಕೆ ಕಳಿಸಬೇಕು.

ಧಾರವಾಡ ಟ್ರೇ. ಕಾಲೇಜ. } S. K. Rodda,
ತಾ॥ ೧-೧೧-೧೯೧೦ } ಪ್ರಿನ್ಸಿಪಾಲ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ।
ಬಯಸುತ್ತಂ ಪ್ರತಿಮಾಸದಾದಿಗೊಲನಿಂದೀಪತ್ರಮಂ ಮುದ್ರಿಸಿ॥
ನಯದಿಂದಿತ್ತವೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷವತಿದ್ದ ವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧

ಪುಸ್ತಕ ೩೭] ದಿಶಂಬರ ೧೯೦೧. [ಸಂಚಿಕೆ ೧೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ೪ ಸಂಬಂಧದ ವೃತ್ತಾಂತಗಳು.

ಮಿಸೆಸ್ ಆನಿ ಬಿಸಾಂಟ ಎಂಬ ವಿದುಷಿಯು ಸ್ವದೇಶ ಭಕ್ತರಲ್ಲಿ ಹೆಸರಾದ ಮಿಸ್ತರ ಬ್ರಾಡ್ಲಾ ಎಂಬ ಘನವಂತನ ಸಹವ್ಯವಸಾಯಿನಿಯಾಗಿದ್ದು ಬಹು ದಿವಸದಿಂದ ಧರ್ಮಸು ಧಾರಣಾವಿಷಯದಲ್ಲಿ ಪ್ರಯತ್ನಿಸುತ್ತಿರುವಳು. ಈಕೆಯು ಅನೇಕ ಧರ್ಮಗಳ ಪರಿಶೀಲನ ಮಾಡಿ, ಕಡೆಗೆ ಕರ್ನಲ್ ಅಲ್ಕಾಟ, ಹಾಗು ಮ್ಯಾಡಮ್ ಬ್ಲಾವ್ಹಾಟಸ್ಕಿ ಈ ವಿಭೂತಿ ದ್ವಯಗಳಿಂದ ಸ್ಥಾಪಿಸಲ್ಪಟ್ಟ ಥಿಯೋಸೋಫಿ ಎಂಬ ಧರ್ಮ ಮತವನ್ನು ಕುರಿತು ವಿಚಾರ ಮಾಡಿ ಅದನ್ನು ಸ್ವೀಕರಿಸಿರುವಳು. ಹಿಂದು ಸಮಾಜದ ಸದ್ಯದ ಶಿಕ್ಷಣವು ಕೇವಲ ಲೌಕಿಕವಾಗಿರುವದರಿಂದ ಪರಮಾರ್ಥದ ಲೇಶವೂ ಅದರಲ್ಲಿ ಇಲ್ಲದೆ ಇರುವದರಿಂದ ಅದು ಸರಿಯಲ್ಲವೆಂದು ತಿಳಿದು, ಈ ಕೊರತೆಯನ್ನು ಪೂರೈಸುವದಕ್ಕಾಗಿ ಬನಾರಸ ಪಟ್ಟಣದಲ್ಲಿ "ಹಿಂದು ಕಾಲೇಜ" ಎಂಬ ಹೆಸರಿನ ಒಂದು ಪಾಠಕಾಲೆಯನ್ನು ಸ್ಥಾಪಿಸಿ, ಅದರಲ್ಲಿ ಧರ್ಮಶಿಕ್ಷಣದ ಏರ್ಪಾಡನ್ನು ಮಾಡಿರುವಳು.

ಈ ವಿದುಷಿಯು ಸೆನ್ಯಕ್ಕೆ ಬಡೋದೆಗೆ ಹೋಗಿ, ಅಲ್ಲಿ ಶ್ರೀಮಂತ ಗಾಯಕ್ವಾಡ ಮಹಾರಾಜರವರ ಆಶ್ರಯದಿಂದ ಶಿಕ್ಷಣದ ವಿಷಯವಾಗಿ ಕೆಲವು ವ್ಯಾಖ್ಯಾನಗಳನ್ನು

ಕೊಡುತ್ತಿರುವಳು. ಆ ವ್ಯಾಖ್ಯಾನಮಾಲೆಯ ಮೊದಲನೆಯ ವ್ಯಾಖ್ಯಾನವು ಕಳೆದ ತಿಂಗಳ ೫ನೆಯ ತಾರೀಖಿನ ದಿವಸ ನ್ಯಾಯಮಂದಿರವೆಂಬ ಸಭಾಸ್ಥಾನದಲ್ಲಿ ಕೊಡಲ್ಪಟ್ಟಿತು. ವ್ಯಾಖ್ಯಾನಮುಖದಲ್ಲಿ ಶಿಕ್ಷಣವನ್ನು ಕುರಿತು ಪ್ರಾಚೀನರೂ ಅರ್ವಾಚೀನರೂ ಕೊಟ್ಟ ಗೌರವದ ಅಭಿಪ್ರಾಯವನ್ನು ವ್ಯಾಖ್ಯಾತ್ರಿಯು ಅರುಹಿದಳು. ಆ ವ್ಯಾಖ್ಯಾನದ ತಾತ್ಪರ್ಯವೇನೆಂದರೆ:—ಪ್ರಾಚೀನ ಕಾಲದಲ್ಲಿ ಈ ದೇಶದ ಅರಸರೂ ರಾಜಕಾರ್ಯಧುರಂಧರರೂ ಇತರ ಜನರೂ ಲೋಕಶಿಕ್ಷಣದ ಮಹತ್ವದ ಕೆಲಸದಲ್ಲಿ ಸರಿಯಾಗಿ ಮನಸು ಹಾಕುತ್ತಿದ್ದರೆಂಬದು ವಿಶ್ರುತವೇ ಇರುವದು. ಸದ್ಯಕ್ಕೆ ಜರ್ಮನಿಯ ಬಾದಶಹರೂ ಇಂಗ್ಲಂಡದ ಚಕ್ರವರ್ತಿಗಳೂ, ಗ್ಲಾಡಸ್ಟನ್ ಸಾಲಿಸ್ಬರಿ ರೋಜಬರಿ ಮೊದಲಾದ ಮುತ್ಸದ್ದಿಗಳೂ ಈ ವಿಷಯದಲ್ಲಿ ತುಂಬಾ ಮನಸ್ಸು ಹಾಕುತ್ತಿರುವದು ಲೋಕಪ್ರಸಿದ್ಧವು. ಈಗ ಸುಧಾರಣಾಗ್ರಸರತ್ವವನ್ನು ಪಡೆದ ಜರ್ಮನಿ, ಇಂಗ್ಲಂಡ ದೇಶಗಳಲ್ಲಿಯೆ ಶಿಕ್ಷಣಪದ್ಧತಿಗೂ ಪ್ರಾಚೀನ ಹಿಂದುಸ್ತಾನದ ಶಿಕ್ಷಣಪದ್ಧತಿಗೂ ಸರಿಹಚ್ಚಿ ನೋಡಿದರೆ, ಬಂದನ್ನೊಂದು ಹೋಲುತ್ತದೆಂದು ಕೇಳಿ ಅರಿದಾಗಬಹುದು. ಆದರೆ ಸ್ವಲ್ಪ ಸೂಕ್ಷ್ಮದೃಷ್ಟಿಯಿಂದ ವಿಚಾರ ಮಾಡಿದರೆ ಈ ಮಾತಿನ ನಿಜತ್ವವು ಬಡೆದು ತೋರುವದು.

ಶಿಕ್ಷಣವೂ ಅದರ ಅಂಗಗಳೂ.

ಸುಶಿಕ್ಷಣವೆಂದರೇನು? ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಲಿಕ್ಕೆ ಅನುಕೂಲಿಸುವ ಶಿಕ್ಷಣವೇ ಮೇಲಾದ ಶಿಕ್ಷಣವು. ಮನುಷ್ಯಜನ್ಮಸಾಫಲ್ಯವೇ ಸುಶಿಕ್ಷಣದ ಕುರುಹು.

ಈ ಧೋರಣದಿಂದ ಸಾಗಿಸಿದ ಶಿಕ್ಷಣವು ಸ್ವಾರ್ಥದೃಷ್ಟಿಯಿಂದಲೂ ಪರಾರ್ಥದೃಷ್ಟಿಯಿಂದಲೂ ವ್ಯಕ್ತಿದೃಷ್ಟಿಯಿಂದಲೂ ಸಮಾಜದೃಷ್ಟಿಯಿಂದಲೂ ಸರ್ವಸಮ್ಮತವಾಗಿರುವದು. ಈ ಉದಾತ್ತದೃಷ್ಟಿಯಿಂದ ಶಿಕ್ಷಣದ ಸೂಕ್ಷ್ಮವಿಚಾರವನ್ನು ಮಾಡಲಾಗಿ ಅದರ ನಾಲ್ಕು ಅಂಗಗಳು ಬೈಲಿಗೆ ಬರುತ್ತವೆ. ಅವು ಯಾವವೆಂದರೆ—(೧) ಶಾರೀರಶಿಕ್ಷಣ, (೨) ಮನೋವೃತ್ತಿ ಶಿಕ್ಷಣ, (೩) ಬುದ್ಧಿಶಿಕ್ಷಣ, (೪) ಆಧ್ಯಾತ್ಮಿಕ ಅಥವಾ ಧರ್ಮಶಿಕ್ಷಣ.

ಶಾರೀರಶಿಕ್ಷಣವು:—ಮನುಷ್ಯನ ಊರ್ಜಿತವಾದ ಜೀವನ ಕ್ರಮಕ್ಕೆ ಬುದ್ಧಿಯೆಂಬದೊಂದೇ ಸಾಧನವಲ್ಲ. ಅದಕ್ಕೆ ಶರೀರ ಬಲದ ಸಾಧನವೂ ಬೇಕು. ಬುದ್ಧಿಯಿಂದ ಸರಿಯಾದ ಪ್ರಯೋಜನವಾಗಬೇಕಾದರೆ ಶರೀರಬಲವು ಅವಶ್ಯವಾದದ್ದು. ಆದಕಾರಣ ಬುದ್ಧಿಯನ್ನೇ ಲಕ್ಷಿಸಿ ಶರೀರವನ್ನು ದುರ್ಲಕ್ಷಿಸುವದು ಹಾನಿಕಾರಕವು. ಶರೀರಬಲವು ಬುದ್ಧಿಬಲಕ್ಕೆ ಪ್ರೋತ್ಸಾಹನಕಾರವಾದದ್ದು. ಬಲವಾದ ಶರೀರಸಾಧನದಿಂದ ಬುದ್ಧಿಬಲದ ಫಲವನ್ನು ಉಣ್ಣುವದು ಶಕ್ಯವು; ಆದಕಾರಣ ಶರೀರಬಲವನ್ನು ಬೆಳಿಸುವದು ಸುಶಿಕ್ಷಣದ ಮೊದಲನೇ ಅಂಗವು.

ಮನೋವೃತ್ತಿ ಶಿಕ್ಷಣ:—ಮನೋವೃತ್ತಿ ಶಿಕ್ಷಣವು ಸುಶಿಕ್ಷಣದ ಎರಡನೇ ಅಂಗವು. ಮನುಷ್ಯನು ಒಂಟಿಗನಾಗಿರುವ ಪ್ರಾಣಿಯಲ್ಲ. ಇವನಿಗೆ ನಾಲ್ವರಲ್ಲಿ ಕೂಡಿಕೊಂಡಿರುವದು ಬೇಕು. ನಾಲ್ವರ ಮೇಳಕ್ಕೆ ಕುಟುಂಬವೆಂಬ ಹೆಸರು. ಈ ಕುಟುಂಬಸುಸ್ಥಿತಿಯು ಪ್ರತಿ ಒಬ್ಬ ಘಟಿಕನ ಮನೋವೃತ್ತಿಯನ್ನು ಅವಲಂಬಿಸಿರುತ್ತದೆ. ಪ್ರೇಮವು ಹೆಚ್ಚು ಕಡಿಮೆ ಇದ್ದಂತೆ ಗಂಡಹೆಂಡಿರೂ ತಂದೆ ಮಕ್ಕಳೂ ಆಪ್ತಮಿತ್ರರೂ ಕೂಡುವರು, ಅಗಲುವರು. ಮನೋವೃತ್ತಿಶಿಕ್ಷಣದಿಂದ ಗೃಹಸೌಖ್ಯವು ಬೆಳೆಯುತ್ತದೆ, ಪ್ರೇಮವೂ ಪ್ರೀತಿಯೂ ವ್ಯಕ್ತವಾಗುತ್ತವೆ.

ಮನೋವೃತ್ತಿಗಳು ಸುಧಾರಿಸಿ ಬೆಳೆಬೆಳೆದಂತೆ ಪರಸ್ಪರ ನಂಬಿಗೆಯೂ ವಿಶ್ವಾಸವೂ ಪತ್ತೂ ನೆಲೆಗೊಳ್ಳುತ್ತದೆ. ಇವು ನೆಲೆಗೊಂಡ ಹಾಗೆ ಕುಟುಂಬಗಳು ಒಟ್ಟಾಗಿ ಸೇರಿ ಒಂದು ಸಮಾಜವನ್ನುಂಟು ಮಾಡುತ್ತವೆ. ಅನೇಕ ಸಮಾಜಗಳು ಕೂಡಿ ಒಂದು ರಾಷ್ಟ್ರವಾಗುತ್ತದೆ. ಆ ರಾಷ್ಟ್ರದ ಸ್ಥಿತಿಯು, ದೇಶಪ್ರೀತಿ, ಸತ್ಯಪ್ರೀತಿ, ಸಾರ್ವಜನಿಕ ಹಿತಪಕ್ಷತೆ ಮುಂತಾದ ಶ್ರೇಷ್ಠ ಗುಣಗಳನ್ನು ಅವಲಂಬಿಸಿರುತ್ತದೆ. ಆದ ಸಾರಾಂಶ, ಮನೋವೃತ್ತಿಗಳ ಸುಧಾರಣೆಯಾಗದಿದ್ದರೆ ಕುಟುಂಬವೇ ಇಲ್ಲದಂತಾಗುವದು. ರಾಷ್ಟ್ರದ ಮುಂತಾದ ಎತ್ತಲಿಕ್ಕೇ ಬೇಡ.

ಬುದ್ಧಿಶಿಕ್ಷಣವು:—ಇದು ಸುಶಿಕ್ಷಣದ ಕಿನೇ ಅಂಗವಲ್ಲ. ಬಿಡಿ ಸಂಗತಿಗಳನ್ನು ತಲೆಬುರಡೆಯಲ್ಲಿ ಸೇರಿಸುವದೂ ಕೆಲವುಗಳನ್ನು ಪಾಠ ಮಾಡಿಸುವದೂ ನಿಜವಾದ ಬುದ್ಧಿಶಿಕ್ಷಣವಲ್ಲ. ಪದಾರ್ಥಗಳನ್ನು ಲಕ್ಷಪೂರ್ವಕವಾಗಿ ನೋಡುವದೂ ಪರೀಕ್ಷಿಸುವದೂ ನೋಡಿದೆ ಸಂಗತಿಗಳನ್ನು ಯಥಾರ್ಥವಾಗಿ ಲಕ್ಷದಲ್ಲಿಡುವದೂ ಸರಿಹಚ್ಚಿ ನೋಡುವದೂ ಅವುಗಳನ್ನು ಕುರಿತು ವಿಚಾರ ಮಾಡುವದೂ ನಿರ್ದುಷ್ಟವಾದ ಅನುಮಾನಗಳನ್ನು ಸಂಗ್ರಹಿಸುವದೂ ಹೊಸ ಸ್ವತಂತ್ರವಾದ ಸಿದ್ಧಾಂತಗಳನ್ನು ಸ್ಥಾಪಿಸುವದೂ ಈ ಮೊದಲಾದ ಸಾಮರ್ಥ್ಯವಿಕಾಸವೇ ಬುದ್ಧಿಶಿಕ್ಷಣವು. ಜೀವನಕಲಹವನ್ನು ಯುಕ್ತಿಯಿಂದ ಸಹಿಸಿ ಜಯ ಹೊಂದುವದೇ ಪ್ರತಿ ಒಬ್ಬ ವಿದ್ಯಾರ್ಥಿಯ ವಿಶೇಷ ಕಾರ್ಯವು. ನಿರೀಕ್ಷಣ ಪರೀಕ್ಷಣ ವಿಚಾರಾದಿ ಸಾಮರ್ಥ್ಯಗಳ ಪೂರ್ಣತ್ವದೊಂದಿಗೆ ದೇಶಭಕ್ತನಾಗಿ ತನ್ನ ಸಮಾಜದವರ ಹಿತವನ್ನು ಸಾಧಿಸುವದೇ ಅವನು ಸಾಧಿಸತಕ್ಕ ಎರಡನೇ ಕಾರ್ಯವು. ಗಿಳಿಯೋದು ಈ ಕಾರ್ಯಗಳನ್ನು ಸಾಧಿಸಲಾರದು ಕೆಲವು ಇತಿಹಾಸದ ಸಂಗತಿಗಳನ್ನು, ಖಾಯಿಲೆಪಾಠ ಮಾಡಿದಂಥ ವಾಚ್ಯಯದ ಕೆಲವು ಪುಸ್ತಕಗಳನ್ನು ಹಾಗೂ ಹೀಗೂ ಓದಿದಂಥ ಮನುಷ್ಯನಿಂದ ಈ ಕಾರ್ಯಗಳು ಸಾಧ್ಯವಾಗುವ ಬಗೆಯೇನು? ಸಂಸಾರದ ಬಿಕ್ಕಟ್ಟಿನ ಪ್ರಶ್ನೆಗಳನ್ನು ಎದುರ್ಗೊಂಡು ಅವುಗಳನ್ನು ಇವನು ಬಿಡಿಸುವದು ಹ್ಯಾಗೆ? ಇವನಿಂದ ಸಮಾಜಕ್ಕಾಗಲಿ ದೇಶಕ್ಕಾಗಲಿ ಲಾಭವೇನು? ಸಮಾಜಕ್ಕೂ ದೇಶಕ್ಕೂ ಲಾಭವಾಗಬೇಕಾದರೆ ಬುದ್ಧಿ ಸಾಮರ್ಥ್ಯಗಳು ಪಕ್ವವಾಗಿ ಬೇಕಾದಾಗ ಕೆಲಸಕ್ಕೆ ಬರುವಂತೆ ಅವನ್ನು ಸಾಧ್ಯ ಮಾಡಿಕೊಂಡ ಮನುಷ್ಯನೇ ಬೇಕೆಂಬದು ಸ್ಪಷ್ಟವದೆ.

ಧರ್ಮ ಅಥವಾ ಆಧ್ಯಾತ್ಮಿಕ ಶಿಕ್ಷಣ:—ಧರ್ಮವೆಂದರೆ ಆತ್ಮವಿಚಾರವು; ಅಂದರೆ ಮನುಷ್ಯನು ತನ್ನ ಆದಿಕಾರಣವನ್ನು ಹುಡುಕಿ ಅದರಲ್ಲಿ ಐಕ್ಯ ಹೊಂದುವ ವಿಚಾರವು. ಇದು ಮನುಷ್ಯಜನ್ಮದಲ್ಲಿ ಸಾಧಿಸತಕ್ಕ ಪರಮಾರ್ಥವು. ಲೌಕಿಕಾರ್ಥವನ್ನು ಸಾಧಿಸಲಿಕ್ಕೆ ಬುದ್ಧಿಶಿಕ್ಷಣ ಅವಶ್ಯವಿದ್ದಂತೆ

ಪರಮಾರ್ಥವನ್ನು ಸಾಧಿಸಲಿಕ್ಕೆ ಧರ್ಮಶಿಕ್ಷಣವು ಅವಶ್ಯವಾಗಿರುವದು. ಶಿಕ್ಷಣದ ಮೂರು ಅಂಗಗಳಿಂದ ನಿರ್ಮಿತವಾದ ಇಮಾರತಿಗೆ ಈ ನಾಲ್ಕನೇ ಅಂಗವು ಅಂದರೆ ಧರ್ಮಶಿಕ್ಷಣವು ಕಳಸದಂತೆ ಒಪ್ಪುವದು.

ಹಿಂದುಸ್ತಾನದ ಪ್ರಾಚೀನ ಶಿಕ್ಷಣವು.

ಈ ವರೆಗೆ ನಡಿಸಿದ ವಿಚಾರದಿಂದ ಶಿಕ್ಷಣದ ಸ್ವರೂಪ ಲಕ್ಷಣಗಳು ಗೊತ್ತಾದವು. ಪ್ರಾಚೀನ ಕಾಲದಲ್ಲಿ ಹಿಂದುಸ್ತಾನದೊಳಗೆ ನಡೆದ ಶಿಕ್ಷಣಕ್ಕೆ ಇದನ್ನು ಸರಿಮಾಡಿ ನೋಡಿದರೆ ಆ ಕಾಲದ ಶಿಕ್ಷಣದ ಸ್ವರೂಪವು ಇದಕ್ಕೆ ಭಿನ್ನವಾದ ದ್ದಿದ್ದಿಲ್ಲವೆಂದು ಸಹಜವೇ ಕಂಡು ಬರುವದು. ಪುರಾಣ ಪುಸ್ತಕಗಳಲ್ಲಿ ವಿವರಿಸಿದ ಒಬ್ಬ ಅರಸನ ಆಯುಷ್ಯಕ್ರಮವನ್ನು ನೋಡಿದರೆ ಈ ಮಾತು ನಿದರ್ಶನಕ್ಕೆ ಬರುವದು. ಶ್ರೀ ರಾಮಚಂದ್ರನ ಆಯುಷ್ಯಕ್ರಮವನ್ನು ವಿಚಾರಿಸಿ ನೋಡುವಾ. ಈ ಮಹಾರಾಯನು ಶಿಕ್ಷಣದ ಯಾವತ್ತೂ ಅಂಗಗಳಲ್ಲಿ ಪ್ರವೀಣನಾಗಿದ್ದನೆಂಬದು ಸ್ಪಷ್ಟವು. ಧರ್ಮಶಿಕ್ಷಣವಂತೂ ಇವನಲ್ಲಿ ಪೂರ್ಣವಾಗಿ ನೆಲೆಗೊಂಡಿತ್ತೆಂಬದಕ್ಕೆ ಅವನ ಇತಿಹಾಸದಲ್ಲಿಯೇ ಆಧಾರ ಸಿಗುತ್ತದೆ. ಅವನು ಯಾವಾಗಲೂ ಸ್ವಾರ್ಥವನ್ನು ಬಿಟ್ಟು ಪರಾರ್ಥವನ್ನು ಸಾಧಿಸಲಿಕ್ಕೆ ತತ್ಪರನಾಗಿದ್ದನು. ಶ್ರೇಷ್ಠ ಮನುಷ್ಯನ ಲಕ್ಷಣಗಳೆಲ್ಲ ಅವನಲ್ಲಿ ಪೂರ್ಣವಾಗಿದ್ದವು. ಅವನ ಇತಿಹಾಸದಿಂದ ಕೇವಲ ಸ್ವಾರ್ಥ ಸಾಧನವು ಪಾಪವು, ಸ್ವಾರ್ಥತ್ಯಾಗವು ಪುಣ್ಯವು ಎಂಬ ಸಿದ್ಧಾಂತವು ಬೈಲಿಗೆ ಬರುತ್ತದೆ. ಇಂಥ ಸ್ವಾರ್ಥತ್ಯಾಗಿಗಳಾದ ಮಹಾನುಭಾವರೇ ನಿಜವಾದ ಶೂರರು, ಇವರೇ ರಾಜ್ಯವನ್ನೂ ಸಾಮ್ರಾಜ್ಯವನ್ನೂ ಸ್ಥಾಪಿಸುವವರು. ನಾವು ಆಲೋಚಿಸಿದ ಮೇರೆಗೆ ಸುಶಿಕ್ಷಣವು ಪೂರ್ವದಲ್ಲಿ ಹಿಂದುಸ್ತಾನದಲ್ಲಿ ನಡೆಯುತ್ತಿತ್ತೆಂಬದಕ್ಕೆ ಇಂಥ ಅನೇಕ ಉದಾಹರಣೆಗಳುಂಟು. ಆದರೆ ಈ ಮಾದರಿಯ ಸುಶಿಕ್ಷಣವು ಸದ್ಯಕ್ಕೆ ಗ್ರೇಟಬ್ರಿಟನ್‌ದಲ್ಲಿ ಗೋಚರವಾಗುತ್ತದೆ. ಅವಶ್ಯಕರು ಹ್ಯಾರೋ ಎಂಬ ವಿದ್ಯಾಲಯವನ್ನು ಹೋಗಿ ನೋಡಿ ಮನಗಾಣಬಹುದು. ಅಲ್ಲಿಯ ಶಿಕ್ಷಣವು ನಾಲ್ಕೂ ಅಂಗಗಳಿಂದ ಪೂರ್ಣವಾಗಿರುವದು.

ಬುದ್ಧಿಶಿಕ್ಷಣವು:—ಇದು ಸುಶಿಕ್ಷಣದ ಒಂದೇ ಅಂಗವು. ಬಿಡಿ ಸಂಗತಿಗಳನ್ನು ತಲೆಬುರಡೆಯಲ್ಲಿ ಸೇರಿಸುವದೂ ಕೆಲವುಗಳನ್ನು ಪಾಠ ಮಾಡಿಸುವದೂ ನಿಜವಾದ ಬುದ್ಧಿಶಿಕ್ಷಣವಲ್ಲ. ಪದಾರ್ಥಗಳನ್ನು ಲಕ್ಷಪೂರ್ವಕವಾಗಿ ನೋಡುವದೂ ಪರೀಕ್ಷಿಸುವದೂ ನೋಡಿದ ಸಂಗತಿಗಳನ್ನು ಯಥಾರ್ಥವಾಗಿ ಲಕ್ಷದಲ್ಲಿಡುವದೂ ಸರಿಹಚ್ಚಿ ನೋಡುವದೂ ಅವುಗಳನ್ನು ಕುರಿತು ವಿಚಾರ ಮಾಡುವದೂ ನಿರ್ದುಷ್ಟವಾದ ಅನುಮಾನಗಳನ್ನು ಸಂಗ್ರಹಿಸುವದೂ ಹೊಸ ಸ್ವತಂತ್ರವಾದ ಸಿದ್ಧಾಂತಗಳನ್ನು ಸ್ಥಾಪಿಸುವದೂ ಈ ಮೊದಲಾದ ಸಾಮರ್ಥ್ಯವಿಕಾಸವೇ ಬುದ್ಧಿಶಿಕ್ಷಣವು. ಜೀವನಕಲಹವನ್ನು ಯುಕ್ತಿಯಿಂದ ಸಹಿಸಿ ಜಯ ಹೊಂದುವದೇ ಪ್ರತಿ ಒಬ್ಬ ವಿದ್ಯಾರ್ಥಿಯ ವಿಶೇಷ ಕಾರ್ಯವು. ನಿರೀಕ್ಷಣ ಪರೀಕ್ಷಣ ವಿಚಾರಾದಿ ಸಾಮರ್ಥ್ಯಗಳ ಪೂರ್ಣತ್ವದೊಂದಿಗೆ ದೇಶಭಕ್ತನಾಗಿ ತನ್ನ ಸಮಾಜದವರ ಹಿತವನ್ನು ಸಾಧಿಸುವದೇ ಅವನು ಸಾಧಿಸತಕ್ಕ ಎರಡನೇ ಕಾರ್ಯವು. ಗಿಳಿಯೋದು ಈ ಕಾರ್ಯಗಳನ್ನು ಸಾಧಿಸಲಾರದು ಕೆಲವು ಇತಿಹಾಸದ ಸಂಗತಿಗಳನ್ನು, ಬಾಯಿಪಾಠ ಮಾಡಿದಂಥ ವಾಙ್ಮಯದ ಕೆಲವು ಪುಸ್ತಕಗಳನ್ನು ಹಾಗೂ ಹೀಗೂ ಓದಿದಂಥ ಮನುಷ್ಯನಿಂದ ಈ ಕಾರ್ಯಗಳು ಸಾಧ್ಯವಾಗುವ ಬಗೆಯೇನು? ಸಂಸಾರದ ಬಿಕ್ಕಟ್ಟಿನ ಪ್ರಶ್ನೆಗಳನ್ನು ಎದುರ್ಗೊಂಡು ಅವುಗಳನ್ನು ಇವನು ಬಿಡಿಸುವದು ಹ್ಯಾಗೆ? ಇವನಿಂದ ಸಮಾಜಕ್ಕಾಗಲಿ ದೇಶಕ್ಕಾಗಲಿ ಲಾಭವೇನು? ಸಮಾಜಕ್ಕೂ ದೇಶಕ್ಕೂ ಲಾಭವಾಗಬೇಕಾದರೆ ಬುದ್ಧಿ ಸಾಮರ್ಥ್ಯಗಳು ಪಕ್ವವಾಗಿ ಬೇಕಾಬಾಗ ಕೆಲಸಕ್ಕೆ ಬರುವಂತೆ ಅವನ್ನು ಸಾಧ್ಯ ಮಾಡಿಕೊಂಡ ಮನುಷ್ಯನೇ ಬೇಕೆಂಬದು ಸ್ಪಷ್ಟವದೆ.

ಧರ್ಮ ಅಥವಾ ಆಧ್ಯಾತ್ಮಿಕ ಶಿಕ್ಷಣ:—ಧರ್ಮವೆಂದರೆ ಆತ್ಮವಿಚಾರವು; ಅಂದರೆ ಮನುಷ್ಯನು ತನ್ನ ಆದಿಕಾರಣವನ್ನು ಹುಡುಕಿ ಅದರಲ್ಲಿ ಐಕ್ಯ ಹೊಂದುವ ವಿಚಾರವು. ಇದು ಮನುಷ್ಯಜನ್ಮದಲ್ಲಿ ಸಾಧಿಸತಕ್ಕ ಪರಮಾರ್ಥವು. ಲೌಕಿಕಾರ್ಥವನ್ನು ಸಾಧಿಸಲಿಕ್ಕೆ ಬುದ್ಧಿಶಿಕ್ಷಣ ಅವಶ್ಯವಿದ್ದಂತೆ

ಪರಮಾರ್ಥವನ್ನು ಸಾಧಿಸಲಿಕ್ಕೆ ಧರ್ಮಶಿಕ್ಷಣವು ಅವಶ್ಯವಾಗಿರುವದು. ಶಿಕ್ಷಣದ ಮೂರು ಅಂಗಗಳಿಂದ ನಿರ್ಮಿತವಾದ ಇಮಾರತಿಗೆ ಈ ನಾಲ್ಕನೇ ಅಂಗವು ಅಂದರೆ ಧರ್ಮಶಿಕ್ಷಣವು ಕಳಸದಂತೆ ಒಪ್ಪುವದು.

ಹಿಂದುಸ್ತಾನದ ಪ್ರಾಚೀನ ಶಿಕ್ಷಣವು.

ಈ ವರೆಗೆ ನಡಿಸಿದ ವಿಚಾರದಿಂದ ಶಿಕ್ಷಣದ ಸ್ವರೂಪ ಲಕ್ಷಣಗಳು ಗೊತ್ತಾದವು. ಪ್ರಾಚೀನ ಕಾಲದಲ್ಲಿ ಹಿಂದು ಸ್ತಾನದೊಳಗೆ ನಡೆದ ಶಿಕ್ಷಣಕ್ಕೆ ಇದನ್ನು ಸರಿಮಾಡಿ ನೋಡಿದರೆ ಆ ಕಾಲದ ಶಿಕ್ಷಣದ ಸ್ವರೂಪವು ಇದಕ್ಕೆ ಭಿನ್ನವಾದದ್ದಿಲ್ಲವೆಂದು ಸಹಜವೇ ಕಂಡು ಬರುವದು. ಪುರಾಣ ಪುಸ್ತಕಗಳಲ್ಲಿ ವಿವರಿಸಿದ ಒಬ್ಬ ಅರಸನ ಆಯುಷ್ಯಕ್ರಮವನ್ನು ನೋಡಿದರೆ ಈ ಮಾತು ನಿದರ್ಶನಕ್ಕೆ ಬರುವದು. ಶ್ರೀ ರಾಮಚಂದ್ರನ ಆಯುಷ್ಯಕ್ರಮವನ್ನು ವಿಚಾರಿಸಿ ನೋಡುವಾ. ಈ ಮಹಾರಾಯನು ಶಿಕ್ಷಣದ ಯಾವತ್ತೂ ಅಂಗಗಳಲ್ಲಿ ಪ್ರವೀಣನಾಗಿದ್ದನೆಂಬದು ಸ್ಪಷ್ಟವು. ಧರ್ಮಶಿಕ್ಷಣವಂತೂ ಇವನಲ್ಲಿ ಪೂರ್ಣವಾಗಿ ನೆಲೆಗೊಂಡಿತ್ತೆಂಬದಕ್ಕೆ ಅವನ ಇತಿಹಾಸದಲ್ಲಿಯೇ ಆಧಾರ ಸಿಗುತ್ತದೆ. ಅವನು ಯಾವಾಗಲೂ ಸ್ವಾರ್ಥವನ್ನು ಬಿಟ್ಟು ಪರಾರ್ಥವನ್ನು ಸಾಧಿಸಲಿಕ್ಕೆ ತತ್ಪರನಾಗಿದ್ದನು. ಶ್ರೇಷ್ಠ ಮನುಷ್ಯನ ಲಕ್ಷಣಗಳೆಲ್ಲ ಅವನಲ್ಲಿ ಪೂರ್ಣವಾಗಿದ್ದವು. ಅವನ ಇತಿಹಾಸದಿಂದ ಕೇವಲ ಸ್ವಾರ್ಥ ಸಾಧನವು ಪಾಪವು, ಸ್ವಾರ್ಥತ್ಯಾಗವು ಪುಣ್ಯವು ಎಂಬ ಸಿದ್ಧಾಂತವು ಬೈಲಿಗೆ ಬರುತ್ತದೆ. ಇಂಥ ಸ್ವಾರ್ಥತ್ಯಾಗಿಗಳಾದ ಮಹಾನುಭಾವರೇ ನಿಜವಾದ ಶೂರರು, ಇವರೇ ರಾಜ್ಯವನ್ನೂ ಸಾಮ್ರಾಜ್ಯವನ್ನೂ ಸ್ಥಾಪಿಸುವವರು. ನಾವು ಆಲೋಚಿಸಿದ ಮೇರೆಗೆ ಸುಶಿಕ್ಷಣವು ಪೂರ್ವದಲ್ಲಿ ಹಿಂದುಸ್ತಾನದಲ್ಲಿ ನಡೆಯುತ್ತಿತ್ತೆಂಬದಕ್ಕೆ ಇಂಥ ಅನೇಕ ಉದಾಹರಣೆಗಳುಂಟು. ಆದರೆ ಈ ಮಾದರಿಯ ಸುಶಿಕ್ಷಣವು ಸದ್ಯಕ್ಕೆ ಗ್ರೇಟಬ್ರಿಟನ್‌ದಲ್ಲಿ ಗೋಚರವಾಗುತ್ತದೆ. ಅವಶ್ಯಕತು ಹ್ಯಾರೋ ಎಂಬ ವಿದ್ಯಾಲಯವನ್ನು ಹೋಗಿ ನೋಡಿ ಮನಗಾಣಬಹುದು. ಅಲ್ಲಿಯ ಶಿಕ್ಷಣವು ನಾಲ್ಕೂ ಅಂಗಗಳಿಂದ ಪೂರ್ಣವಾಗಿರುವದು.

ಹಿಂದುಸ್ತಾನದ ಶಿಕ್ಷಣದೊಳಗಿನ ಕೊರತೆಗಳು.

ಹಿಂದುಸ್ತಾನದಲ್ಲಿ ಈಗ ನಡೆದ ಶಿಕ್ಷಣವನ್ನು ವಿಚಾರಿಸಲಾಗಿ ವಿದ್ಯಾಪರಿಷತ್ತಿನಲ್ಲಿ ಲಾರ್ಡ ಕರ್ಝನ್ ಸಾಹೆಬರು ಮಾಡಿದ ಭಾಷಣದ ಯಾಥಾರ್ಥ್ಯವು ತಿಳಿಯುವದು. ಈ ದೇಶದಲ್ಲಿ ಶಿಕ್ಷಣದ ಸಂಬಂಧದಿಂದ ನಡೆದಂಥ ಪರೀಕ್ಷಾಸತ್ರವು ಚೀನದ ಹೊರತು ಬೇರೆ ಯಲ್ಲಿಯೂ ಕಂಡು ಬರುವದಿಲ್ಲ. ಇಲ್ಲಿ ನಡೆದ ಶಿಕ್ಷಣದಿಂದ ಸಾವಿರಾರು ಮಂದಿ ಕಾರಕೂನರೂ, ರೈಟರರೂ ವಕೀಲರೂ ಮುಂತಾದವರು ಸಿದ್ಧರಾದರೇ ಹೊರತು ರಾಷ್ಟ್ರದ ಉನ್ನತಿಗೂ ವರ್ಧಿಸ್ಣುಗೂ ಬೇಕಾದಂಥ ಸ್ವಲ್ಪ ಜನರು ಸಹ ತಯಾರಾಗಲಿಲ್ಲ. ಸದ್ಯಕ್ಕೆ ತಯಾರಾದ ಜನರಲ್ಲಿ ಸ್ವತಂತ್ರವಿಚಾರವೂ ತಮಗೆ ಸೇರುವ ಅಭ್ಯಾಸವನ್ನು ನಡಿಸಿ ಉಚ್ಚ್ರಾಯವನ್ನು ಪಡೆಯುವ ಹವ್ಯಾಸವೂ ತೋರುವದಿಲ್ಲ ಈ ಕೊರತೆಗಳು ಸದೋಷ ಶಿಕ್ಷಣಪದ್ಧತಿಯ ಫಲಗಳೆಂದು ನಿರ್ಬಾಧವಾಗಿ ಹೇಳಬಹುದು. ಹಿಂದುಸ್ತಾನದಲ್ಲಿ ಶಿಕ್ಷಣವು ಸರ್ವಾಂಗಸಂಪನ್ನವಾಗಿಲ್ಲ. ಹಾಗಾಗಲಿಕ್ಕೆ ಕೆಲವು ಅಡಚಣಿಗಳಾದರೂ ಉಂಟು. ಧರ್ಮಶಿಕ್ಷಣದ ಸಂಬಂಧದಿಂದ ಸರಕಾರದವರು ಉದಾಸೀನರಾಗಿರಲಿಕ್ಕೇಬೇಕಾಗಿರುತ್ತದೆ. ಆದ್ದರಿಂದ ಸರಕಾರದ ಶಾಲೆಗಳಲ್ಲಿ ಲೌಕಿಕ ಶಿಕ್ಷಣವಷ್ಟೇ ಸಾಗುತ್ತದೆ. ಪಾದ್ರಿ ಸಾಲೆಗಳಲ್ಲಿ ಧರ್ಮಶಿಕ್ಷಣವು ಸಾಗುವದು ನಿಜವು. ಆದರೆ ಅದು ಪರಧರ್ಮಶಿಕ್ಷಣವು. ಹಿಂದು ಮುಸಲ್ಮಾನರ ಧರ್ಮತತ್ವಗಳಿಂದ ಈ ಧರ್ಮತತ್ವಗಳು ಭಿನ್ನವಾಗಿರುವವು. ಸರ್ವಾಂಗದಿಂದ ಶಿಕ್ಷಣವನ್ನು ಕೊಡುವ ಎರಡೇ ಪಾಠಶಾಲೆಗಳು ಈ ದೇಶದಲ್ಲಿ ಉಂಟು. ಅಲೀಗಡದ ಮುಸಲ್ಮಾನ ಕಾಲೇಜವು ಒಂದನೇದು. ಬನಾರಸದ ಹಿಂದೂ ಕಾಲೇಜವು ಎರಡನೇದು. ಈ ರಾಷ್ಟ್ರವು ತಕ್ಕ ಸ್ಥಳವನ್ನಾಕ್ರಮಿಸಬೇಕಾದರೆ ಶಿಕ್ಷಣಪದ್ಧತಿಗಳಲ್ಲಿ ಕೆಲವು ಸುಧಾರಣೆಗಳಾಗಲಿಕ್ಕೆ ಬೇಕು. ಸದ್ಯಕ್ಕೆ ಸಾಲೆಯ ಹುಡುಗರಿಗೆ ಇಂಗ್ಲಂಡದ ಜ್ಞಾನವಿದ್ದಷ್ಟು ಹಿಂದುಸ್ತಾನದ ಸಂಬಂಧದ ಜ್ಞಾನವಿರುವದಿಲ್ಲ. ಅವರಿಗೆ ಎಷ್ಟೋ ನಿಷ್ಪ್ರಯೋಜನದ ಸಂಗತಿಗಳು ಗೊತ್ತಿರುತ್ತವೆ. ಆದರೆ

ಅವರಿಗೆ ಸ್ವದೇಶದ ವ್ಯಾಪಾರ ಕಲಾಕೌಶಲ್ಯಗಳ ಜ್ಞಾನವು ಎಳ್ಳಷ್ಟು ಸಹ ಇರುವದಿಲ್ಲ ಬೇಸಾಯವು ಹಿಂದುಸ್ತಾನದ ನಿವಾಸಿಗಳ ಮುಖ್ಯಜೀವನಸಾಧನವಾದಾಗ್ಯೂ ಅದರ ಮೂಲತತ್ವಗಳು ನೂರರಲ್ಲಿ ತೊಂಬತ್ತು ಜನರಿಗೆ ಗೊತ್ತಿರುವದಿಲ್ಲ. ಈ ನ್ಯೂನಗಳನ್ನು ದೂರ ಮಾಡುವಂತೆ ಶಿಕ್ಷಣ ಸುಧಾರಕರು ಯತ್ನಿಸತಕ್ಕದ್ದು.

ಭಾವಿಸ್ಥಿತಿ.

ಈ ಶಿಕ್ಷಣದ ದುಃಸ್ಥಿತಿಯ ಸಂಬಂಧದಿಂದ ಮುಖ್ಯವಾಗಿ ತಾಯಿ ತಂದೆಗಳೇ ಜವಾಬದಾರರಾಗಿರುವರು. ದೇಶದ ಬಡತನವು ಇದಕ್ಕೆ ಕಾರಣವೆಂದು ಭ್ರಮಿಸಬಾರದು. ದೇಶದಲ್ಲಿ ಧರ್ಮಬುದ್ಧಿಯೂ ಸಾರ್ವಜನಿಕ ಕೆಲಸದ ಸಂಬಂಧದ ಹವಣಿಕೆಯೂ ತಕ್ಕಷ್ಟಿರುವವು ಆದರೆ ಅವುಗಳ ದಿಕ್ಕು ಮಾತ್ರ ತಪ್ಪಿರುವದು ಧರ್ಮಬುದ್ಧಿಗೆ ತಕ್ಕ ಮಾರ್ಗವನ್ನು ಹಚ್ಚುವದು ಪ್ರಯಾಸಬಡುವದನ್ನು ಬಿಟ್ಟು ಬಿಂಬವನ್ನೇ ಹಿಡಿಯಲೆತ್ನಿಸುವದು ಕಳಿತವರೆಲ್ಲ ಜನ್ಮಿಗಳಿವಿಚಾರಿಸಿ ಈ ಧರ್ಮಕಾರ್ಯವನ್ನು ಒಮ್ಮನಸಿನಿಂದ ಮಾಡಿದರೆ ಪೂರ್ವದ ವೈಭವವು ಹ್ರಸ್ವದಲ್ಲಿ ಸಾಧ್ಯವಾಗುವದು. ಸರಕಾರದವರು ರಾಷ್ಟ್ರವನ್ನು ಎಂದೂ ಮಾಡಲಾರರು. ಅದು ತನ್ನಿಂದ ತಾನೇ ಆಗತಕ್ಕದ್ದು. ಹಿಂದುಸ್ತಾನದ ರಾಷ್ಟ್ರೋನ್ನತಿಗೆ ಸದ್ಯದ ಕಾಲವು ಬಹಳ ಅನುಕೂಲವಾಗಿರುವದು. ಪಶ್ಚಿಮ ರಾಷ್ಟ್ರೀಯ ಸೂರ್ಯನು ಹಿಂದುಸ್ತಾನದ ಕ್ಷಿತಿಜದ ಮೇಲೆ ಉದಯಿಸಿರುವನು. ಈ ಯೋಗವನ್ನು ಸಾಧಿಸಿ ಹಿಂದುಸ್ತಾನದ ಪ್ರಬುದ್ಧಜನರೆಲ್ಲ ಒಟ್ಟಾಗಿ ಪಾಶ್ಚಿಮಾತ್ಯರಲ್ಲಿ ಇದ್ದ ಸುಗುಣಗಳನ್ನೆಲ್ಲ ಸಂಗ್ರಹಿಸಿ ತಮ್ಮ ಗುಣಗಳಿಗೆ ಅವುಗಳನ್ನು ಜೋಡಿಸಿ ರಾಷ್ಟ್ರಸುಧಾರಣೆಯ ಯತ್ನವನು ಮಾಡಿದರೆ ಅವರ ಯತ್ನವು ತೀವ್ರವಾಗಿ ಕೈಗೂಡುವದು. ಆಸ್ಟ್ರೇಲಿಯಾ, ಕಾನಡಾ ಮುಂತಾದ ಆಧೀನ ರಾಜ್ಯಗಳು ಹೆಸರಿಗೆ ಬಂದಂತೆ ಗ್ರೇತಬ್ರಿತನದ ಛತ್ರಚ್ಛಾಯೆಯಲ್ಲಿ ಹಿಂದುಸ್ತಾನವು ಒಂದು ಹೆಸರಾದ ರಾಷ್ಟ್ರವಾಗಿ ಗೌರವವನ್ನು

ಪಡೆಯಬಹುದು. ಈ ಮಾತು ತರುಣ ಜನರೆನ್ನೂ ಅವರ ಶಿಕ್ಷಣವನ್ನೂ ಅವಲಂಬಿಸಿರುತ್ತದೆ.

ಕಠಿಣ ದುಷ್ಕಾಳ ತೀರುವಪ್ಪರಲ್ಲಿಯೇ ಕಠಿಣರಲ್ಲಿ ಪರ್ಜನ್ಯ ವಾಗದೆ ಕಠಿಣ ಮತ್ತು ಗಂಡಂಂ ನರ್ಪಗಳು ಹಿಂದುಸ್ತಾನದ ಪ್ರಜೆಗಳಿಗೆ ಬಹಳ ಭಯಂಕರವಾಗಿ ತೋರಿ ದೇಶವನ್ನೆಲ್ಲ ಕಡು ವಿಪತ್ತಿಗೆ ಗುರಿಯಾಗಿ ಮಾಡಿದವು. ಆದರೆ ಈ ಆಪತ್ತಿನ ಸುದ್ದಿಯು ಇಂಗ್ಲಿಷ ಭಾಷೆ ನಡಿಯುವ ಎಲ್ಲ ದೇಶಗಳಲ್ಲಿ ಹಬ್ಬಿ ಅಲ್ಲಿಯ ಜನರ ಉದಾರಾಶ್ರಯದಿಂದಲೂ ಸರಕಾರದ ಸಹಾಯದಿಂದಲೂ ಜನರು ಬರಗಾಲವನ್ನು ದಾಟಿ ಸುಖಕಾಲದ ಹಾದಿಗೆ ಹತ್ತಿರುವರೆನ್ನಲಿಕ್ಕೆ ಅಡ್ಡಿಯಿಲ್ಲ.

ಇಂಗ್ಲಂಡದಲ್ಲಿ ಮ್ಯಾನ್‌ಸನ್‌ಹೌಸ ಫಂಡ ಎಂಬ ಹೆಸರಿನಿಂದ ಸ್ಥಾಪಿತವಾದ ಧರ್ಮಾದಾಯ ಫಂಡವು ಒಟ್ಟು ೫೫೫೮೮೩ ರೂ.ಗೆ ಮಿಕ್ಕಿತ್ತು. ಲ್ಯಾಂಕಾಶಾಯರ್ ನಾಡಿನವರು ೧೬॥ ಲಕ್ಷ ಗ್ಲಾಸ್ಗೋ ಎಂಬದೊಂದೇ ಪಟ್ಟಣದವರು ೮॥ ಲಕ್ಷ ರೂ. ಗಳನ್ನು ವಂತಿಗೆ ಕೊಟ್ಟರು. ಕ್ಯಾನಡಾ, ಸಿಂಹಲ್, ಚೀನ, ಜಪಾನ, ಸಯಾಮ, ಸ್ಟ್ರೇಟ ಸೆಟ್ಟಲ್‌ಮೆಂಟ್, ಮಾರಿಷಸ, ಅಮೇರಿಕದ ಸಂಯುಕ್ತ ಸಂಸ್ಥಾನಗಳು, ಜರ್ಮನಿ ಮುಂತಾದವುಗಳಿಂದ ಹಣ ಧಾನ್ಯಗಳ ಸಹಾಯವು ದೊರೆಯಿತು. ಯುದ್ಧದಲ್ಲಿ ತೊಡಗಿದ ನೆಟಲ್ ಎಂಬ ವಸಾಹತಿಯಿಂದಲೂ ೪೬೫೮ ಪೌಂಡುಗಳವರೆಗೆ ನೆರವು ಲಭಿಸಿತು.

ಮನುಷ್ಯನು ವಿಶ್ವಕುಟುಂಬಿಯು ಎಂಬ ಉದಾತ್ತ ಕಲ್ಪನೆಯು ಹಬ್ಬುತ್ತ ನಡೆದದೆಂಬ ಮಾತಿಗೆ ಈ ನೆರವು ಸಾಕ್ಷಿಯಾಗಿದೆ.

ಈ ದೇಶವನ್ನು ಆಳುವ ಏಳನೇ ಎಡ್ವರ್ಡ ಮಹಾರಾಜರಿಗೆ ಬರುವ ಜೂನ ತಿಂಗಳಲ್ಲಿ ರಾಜ್ಯಾಭಿಷೇಕವು ಆಗುವದೆಂದು ಖಂಡಿತವಾಗಿ ಗೊತ್ತಾಗಿರುವದು. ಈ ಸಮಾರಂಭಕ್ಕೆ ನಮ್ಮ ದೇಶದೊಳಗಿನ ಪ್ರಮುಖರಾದ ಸಂಸ್ಥಾನಿಕರಿಗೆ ಆಮಂತ್ರಣವು ಕೊಡಲ್ಪಟ್ಟಿದೆ. ಆದರೆ ಉದೇಪುರದ ಮಹಾರಾಣಾ ಸಾಹೇಬರೂ ಹೈದರಾಬಾದದ ನಿಜಾಮ ಸಾಹೇಬರೂ ಗೃಹಕೃತ್ಯದ ಅನಾನುಕೂಲತೆಗಾಗಿ ಹೋಗುವಂತಿಲ್ಲ.

ಗ್ವಾಲೇರದ ಮಹಾರಾಜರೂ ಕೊಲ್ಹಾಪುರದ ಛತ್ರಪತಿಗಳೂ ಜಯಪುರದ ಮಹಾರಾಜರೂ ಭಾವಲಪುರದ ನಬಾಬರೂ ನಾಭಾ ಸಂಸ್ಥಾನದ ಅರಸರೂ ಈ ಸಮಾರಂಭಕ್ಕೆ ಹೋಗುವರೆಂದು ಗೊತ್ತಾಗಿದೆ. ಸ್ಥಲದ ಅನನುಕೂಲತೆಗಾಗಿಯೂ ಬೇರೆ ಕಾರಣಗಳ ಮೂಲಕವಾಗಿಯೂ ಮಿಕ್ಕ ಸಂಸ್ಥಾನಿಕರನ್ನು ಬರಮಾಡಿಕೊಳ್ಳಲಿಕ್ಕೆ ಉಪಾಯವಿಲ್ಲದ್ದರಿಂದ, ಅವರ ಸಂತೋಷಾರ್ಥವಾಗಿ ದಿಲ್ಲೀ ಪಟ್ಟಣದಲ್ಲಿ ೧೯೦೩ನೇ ಇಸವಿಯ ಜನವರಿ ತಿಂಗಳ ೧೦ನೇ ತಾರೀಖಿನ ದಿವಸ ದೊಡ್ಡದೊಂದು ದರ್‌ಬಾರವನ್ನು ನೆರಿಸಿ ಮಹಾ ಸಮಾರಂಭವನ್ನು ಮಾಡುವರು. ಲಂಡನದಲ್ಲಿಯ ಸಮಾರಂಭಕ್ಕಾಗಿ ಸಂಸ್ಥಾನಿಕರಲ್ಲದೆ ನಮ್ಮ ದೇಶದೊಳಗಿನ ಬೇರೆ ಬೇರೆ ಜಾತಿಯ ಪ್ರಮಿತರಾದ ಸಭ್ಯ ಗ್ರಹಸ್ಥರಿಗೂ ಯುರೋಪಿಯನ್ ಜನರ ಸಾರ್ವಜನಿಕ ಸಂಸ್ಥೆಗಳಿಗೂ, ತದ್ಪರ್ಗದ ಅಧಿಕಾರಿಗಳಿಗೂ ಆಮಂತ್ರಣವನ್ನು ಕೊಟ್ಟಿದ್ದಾರೆ. ಇದಲ್ಲದೆ ಈ ದೇಶದ ಜನರ ಬಂದು ದಳಭಾಗವನ್ನು, ಜೋಧಪುರದ ನರ ಪ್ರತಾಪಸಿಂಗ ಎಂಬವರ ಕೈಕೆಳಗೆ ಇಂಪೀರಿಯಲ್ ಅರ್ಮಿಕೋರ ಎಂಬ ಸಂಸ್ಥಾನಿಕರ ದಂಡಿನ ಭಾಗವನ್ನು ಕಳಿಸಿಕೊಡಬೇಕೆಂಬ ವಿಚಾರವು ನಡೆದಿರುವದು. ದಿಲ್ಲಿಯ ಉತ್ಸವದ ಸಿದ್ಧತೆಯು ಈಗಿನಿಂದಲೇ ಆರಂಭವಾಗಿರುವದು ಬಂದು ವ್ಯವಸ್ಥಾಪಕ ಕವಿಾಟಿಯನ್ನು ನಿರ್ಮಿಸಿ ಅವರಿಗೆ ಸ್ಥಳವನ್ನು ಗೊತ್ತುಪಡಿಸುವದೂ ಮಾರ್ಗಗಳನ್ನು ಮಾಡಿಸುವದೂ ಮೊದಲಾದ ಕೆಲಸಗಳನ್ನು ನಡಿಸಲಿಕ್ಕೆ ಹೇಳಿದ್ದಾರೆ. ಈ ದರ್ಬಾರವು ಬಳ್ಳೀ ಪ್ರೇಕ್ಷಣೀಯವಾಗುವದೆಂದು ತೋರುತ್ತದೆ.

ವಿಳನೇ ಎಡ್ವರ್ಡ ಬಾದಶಹರ ಮಕ್ಕಳೂ ಕಾರ್ನವಾಲದ ಡ್ಯೂಕರೂ ಅವ ಪ್ರಿನ್ಸೆಜಾರ್ಜರೆಂಬವರು ತಮ್ಮ ಪತ್ನಿಯೊಡನೆ « ಅಫೀರ » ಎಂಬ ಬಂದು ಸ್ವತಂತ್ರ ಉಗೆಹಡಗವನ್ನೇರಿ ಚಿಕ್ಕ ಪರಿವಾರದಿಂದ ಕೂಡಿಕೊಂಡು ದೇಶಪರ್ಯಟನಕ್ಕಾಗಿ ಇದೇ ವರ್ಷದ ಮಾರ್ಚ ತಿಂಗಳ ೧೬ನೇ ತಾರೀಖಿನ ದಿವಸ ಹೊರಟರು. ಯುರೋಪ

ಖಂಡದೊಳಗಿನ ಜೆಬ್ರಾಲ್ಟರ ಮಾಲ್ಟಾ ಮುಂತಾದವುಗಳನ್ನು ನೋಡಿ ಸಿಂಹಲ, ಆಸ್ಟ್ರೇಲಿಯಾ, ಕೇಪಕಾಲನೀ, ಕಾನಡಾ ಮುಂತಾದ ದೂರದ ಪ್ರದೇಶಗಳಲ್ಲಿ ತಿರುಗಾಡಿ ಹೋದ ತಿಂಗಳ ೧೯ನೇ ತಾರೀಖಿಗೆ ಸ್ವದೇಶಕ್ಕೆ ಸುರಕ್ಷಿತವಾಗಿ ಹೋಗಿ ಮುಟ್ಟಿದರು. ಇವರು ಕ್ರಮಿಸಿದ ಅಂತರವು-ಜಲಮಾರ್ಗ ೩೫೦೦೦ ಮೈಲು, ಸ್ಥಲಮಾರ್ಗ ೧೮೫೦ ಮೈಲು.

೧೪೯೯ನೇ ಇಸವಿಯಲ್ಲಿ ಕೇಂಬ್ರಿಜ ಪಟ್ಟಣದ ವಿದ್ಯಾಪೀಠದಲ್ಲಿ ಪಾಸಾಗಿ ರ್ಯಾಂಗ್ಲರ ಪದವಿಯನ್ನು ಪಡೆದ ಮಿ. ರಘುನಾಥ ಪುರುಷೋತ್ತಮ ಪರಾಂಜಪೆ ಎಂಬವರನ್ನು ಸೆಂಟ್‌ಜಾನ್ಸ್ ಕಾಲೇಜದಲ್ಲಿ ಫೆಲೊಗಳಾಗಿ ನೇಮಿಸಿದರೆಂಬ ಸಂಗತಿಯನ್ನು ತಿಳಿಸಲಿಕ್ಕೆ ನಮಗೆ ಪರಮಾವಧಿ ಆನಂದವಾಗುತ್ತದೆ.

ಕಳೆದ ಸಪ್ತಂಬರ ತಿಂಗಳಲ್ಲಿ ಮೈಸರಾದು ದೊರೆಗಳು ಸಿವ್ಲಾ ಪಟ್ಟಣದಲ್ಲಿ ವಿದ್ಯಾಪರಿಷತ್ತನ್ನು ಕೂಡಿಸಿದ್ದರಷ್ಟೇ. ಅದರೆ ಈಗ ಅನರೇಬಲ್ ರ್ಯಾಲೇ ಎಂಬ ಫಿನವಂತರ ಅಧ್ಯಕ್ಷತೆಯ ಕೆಳಗೆ ಒಂದು ಚಿಕ್ಕ ಸಮಿತಿಯನ್ನು ನಿರ್ಮಿಸಿ ಈ ದೇಶದೊಳಗಿನ ಬೇರೆ ಬೇರೆ ವಿದ್ಯಾಪೀಠಗಳ ಸಭಾಸದರನ್ನೂ ಪಂಡಿತರನ್ನೂ ಬೇರೆ ವಿದ್ಯಾಭಿಮಾನಿಗಳಾದ ಸದ್ಗೃಹಸ್ಥರನ್ನು ಕಂಡುಕೊಂಡು ಪ್ರಸ್ತುತದ ಶಿಕ್ಷಣದ ಸಂಬಂಧವಾಗಿ ಅವರವರ ಅಭಿಪ್ರಾಯಗಳನ್ನು ಒಟ್ಟುಗೂಡಿಸಿ ತಮಗೆ ತಿಳಿಸಬೇಕೆಂದು ನಿರ್ಣಯಿಸಿದ್ದಾರೆ. ಅದರಂತೆ ಈ ಚಿಕ್ಕ ಸಮಿತಿಯು ಮೊದಲು ಅಂದರೆ ಫೆಬ್ರುವರಿಯಲ್ಲಿ ಮದ್ರಾಸಕ್ಕೆ ತಲಪುವದು. ಅಲ್ಲಿಂದ ಕ್ರಮವಾಗಿ ಕಲಕತ್ತಾ, ಅಲ್ಲಾಹಬಾದ, ಲಾಹೋರ, ಮುಂಬಯಿಗಳಿಗೆ ಬರುವದು. ಈ ಬಗೆಯಾಗಿ ನಾಲ್ಕು ಕಡೆಯ ಅನುಭವಿಕರಾದ ವಿದ್ವಾಂಸರ ಅಭಿಪ್ರಾಯಗಳನ್ನು ದೊರಕಿಸಿಕೊಂಡು ತಮ್ಮ ಅಭಿಪ್ರಾಯದೊಡನೆ ಆ. ರ್ಯಾಲೇ ಸಾಹೆಬರು ಹಿಂದುಸ್ಥಾನ ಸರಕಾರಕ್ಕೆ ರಿಪೋರ್ಟು ಕಳಿಸುವರು. ಬಳಿಕ ಸರಕಾರದವರ ಕೊನೆಯ ನಿರ್ಣಯವು ತರುವಿನ ರೂಪದಿಂದ ಪ್ರಕಟವಾಗುವದು. ಲಾರ್ಡ ಕರ್ಜನ ಸಾಹೇಬರಂಥ ವಿದ್ಯಾಪಕ್ಷ

ಸಾತಿಗಳ ಆಳಿಕೆಯಲ್ಲಿ ಶಿಕ್ಷಣದ ಪದ್ಧತಿಯಲ್ಲಿ ತಕ್ಕ ಸುಧಾರಣೆಗಳು ಆಗಬಹುದೆಂದು ತುಂಬಾ ನಂಬಿಗೆಯುಂಟು.

FORMS OF CRITICISM LESSONS.

ಟೀಕಾ ಪಾಠಗಳ ನಮೂನೆಗಳು.

(೨೬೦ನೇ ಪುಟದಿಂದ ಮುಂದೆ ಸಾಗಿದ್ದು.)

(೧) ಕಲಿಸಿದ ವಿಷಯವನ್ನೇ ಅನುಬಂಧಿಸಿವೆಯೋ?

(೨) ಮಹತ್ವದ ಸಂಗತಿಗಳನ್ನೆ ಅನುಲಕ್ಷಿಸಿರುವವೋ?

(೩) ಬುದ್ಧಿಯನ್ನು ಸ್ವಾಧೀನದಲ್ಲಿರಿಸುವಂಥವಿರುವವೋ? ಅಂದರೆ ಕಲಿಸಿದ ಸಂಗತಿಗಳನ್ನು ವ್ಯವಸ್ಥಿತವಾಗಿ ಹೊಂದಿಸಿ ತೆಲೆಗೊಳಿಸುವಂಥವಿರುವವೋ?

(೪) ಪೂರ್ಣ ವಾಕ್ಯದ ರೂಪದಿಂದ ಉತ್ತರವನ್ನು ಬೇಡುವಂಥವಿರುವವೋ?

(೫) ತಕ್ಕಷ್ಟಕ್ಕಿಂತ ಹೆಚ್ಚು ಅವಕಾಶ ಕೊಡದೆ ಪ್ರಶ್ನೆಗಳು (ಸಾಲಾಗಿ) ಒಂದರಹಿಂಗೊಂದು ಉತ್ತರದಿಂದ ಕೇಳಲ್ಪಡುವವೋ?

(೬) ಉತ್ತರಗಳು.

(೧) ಎಲ್ಲ ವಿದ್ಯಾರ್ಥಿಗಳಿಂದ ಸರತಿಯಂತೆಯಾಗಲಿ ನಡುನಡವೆಯಾಗಲಿ ಎಲ್ಲರಿಂದ ಉತ್ತರಗಳು ತೆಗೆದುಕೊಳ್ಳಲ್ಪಡುವವೋ?

(೨) ಉತ್ತರದಲ್ಲಿ ಪ್ರಯೋಗಿಸಲ್ಪಡುವ ಭಾಷೆಯು ರಚನೆಗೆ ಅಂದರೆ ವ್ಯಾಕರಣಪ್ರಯೋಗಗಳಿಗೂ ಸ್ವರ ಉಚ್ಚಾರಗಳಿಗೂ ಲಕ್ಷವು ಪೂರೈಸಲ್ಪಡುವದೋ?

(III) ವ್ಯಾಖ್ಯಾನ ನಿವೃತ್ತಿಗಳು.

(೧) ನಿರ್ವಾಹವಿಲ್ಲದಲ್ಲಿ ಮಾತ್ರ ಅಂದರೆ ಅವಶ್ಯವಿದ್ದಷ್ಟೇ ವ್ಯಾಖ್ಯಾನವು (ಸ್ವಂತ ನಿರೂಪಣ) ಕೊಡಲ್ಪಡುವದೋ?

(೨) ವ್ಯಾಖ್ಯಾನವು.

(೧) ವಿವಿಧರೂಪದಿಂದ ಕೊಡಲ್ಪಡುವದೋ?

(೨) ಸ್ಪಷ್ಟ ಅಥವಾ ನಿಸ್ಸಂದಿಗ್ಧವಾಗಿರುವದೋ?

(೭) ಸುಸಂಗತವಾಗಿರುವದೋ ?

(೪) ಗೌರವಕ್ಕೆ ಅನುಗುಣವಾಗಿ ಆಯಾ ಸಂಗತಿಗಳು ತಕ್ಕಷ್ಟು ಆಗ್ರಹದಿಂದ ಹೇಳಲ್ಪಡುವವೋ ?

(೫) ವಿವರಣವು.

(೧) ಮಾಸ್ತರನು ಮಾಡಿದ ವಿವರಣವು ಅವಶ್ಯವಾಗಿರುವದೋ ?

(೨) ಅದು ನಿಜವಾಗಿರುವದೋ ?

(೩) ಸಾಕಷ್ಟಿರುವದೋ ?

(೪) ಜಾಬಾಳವಾಗಿರದೆ ಪೂರ್ಣತ್ವಕ್ಕೂ ಸ್ಪಷ್ಟತ್ವಕ್ಕೂ ಜೇಕಾದಷ್ಟೇ (ಸಂಕ್ಷಿಪ್ತ) ಇರುವದೋ ?

(೫) ಅಚ್ಚುಕಟ್ಟಾಗಿರುವದೋ ?

(೬) ವಿದ್ಯಾರ್ಥಿಗಳ ಜ್ಞಾನವನ್ನು ನಿಜವಾಗಿ ಎಚ್ಚರಿಸುವಂಥಾದ್ದಿರುವದೋ ?

(೭) ಹಳೆ ಹೊಸ ಸಂಗತಿಗಳ ಅಥವಾ ವಿಚಾರಗಳ ಸಂಬಂಧವನ್ನು ಸ್ಪಷ್ಟವಾಗಿ ಹೊರಗೆಡಹುವಂಥಾದ್ದಿರುವದೋ ?

(IV ಎ) ದೃಷ್ಟಾಂತಗಳು.

(ಆ) ಗುಣ.

(೧) ದೃಷ್ಟಾಂತಗಳು ತಿಳುವಳಿಕೆಯ ಸಂಬಂಧದ ತೊಡಕನ್ನು ನಿಜವಾಗಿ ಬಿಡಿಸುವಂಥವಿರುವವೋ ?

(೨) ಸುಲಭವಾದಂಥ ರೂಢಿಯೊಳಗಿರುವಂಥ ಸಂಗತಿಗಳಿಗೆ ಅನುಬಂಧಿಸಿರುವವೋ ?

(೩) ಜ್ಞಾನವನ್ನು ಸ್ಥಿರಪಡಿಸುವಂಥವಿರುವವೋ ?

(೪) ಲವಲವಿಕೆಯನ್ನು ಹುಟ್ಟಿಸಿ ಅದನ್ನು ಕಾಯ್ದುಕೊಳ್ಳುವಂಥವಿರುವವೋ ?

(೫) ದೃಷ್ಟಾಂತಗಳು ಉಚಿತವಾಗಿಯೂ ಮನಸಿಗೆ ನಡುವಂಥವುಗಳಾಗಿಯೂ ಇರುವವೋ ?

(೬) ದೃಷ್ಟಾಂತ ಸಾಮಗ್ರಿಯು ಪೂರ್ಣವೂ ನಿರ್ದುಷ್ಟವೂ ಆಗಿರುವದೋ ?

(೭) ಯಥಾರ್ಥವಾಗಿರುವವೋ ?

(೫) ಸಂಖ್ಯೆ:

(೧) ಕೆಲವು ಅನಾವಶ್ಯಕವಾಗಿರುವವೋ ?

(೨) ತಕ್ಕ ಪ್ರಸಂಗದಲ್ಲಿಯೇ ಹೇಳಲ್ಪಟ್ಟಿರುವವೋ ?

(೫) ಪ್ರಯೋಜನ.

(೧) ಉದ್ದೇಶವು ಕೈಗೂಡುವಂತೆ ಉಪಯೋಗಿಸಲ್ಪಟ್ಟಿವೆಯೋ ?

(೨) ಉದ್ದಿಷ್ಟ ಸಂಗತಿಯು ಮನವಟ್ಟಾಗುವಂತೆ ಸಾಕಷ್ಟು ಹೊತ್ತು ಹೇಳಲ್ಪಟ್ಟಿರುವವೋ ?

(೩) ತಕ್ಕಷ್ಟಕ್ಕಿಂತ ಹೆಚ್ಚು ದೃಷ್ಟಾಂತಗಳನ್ನು ಹೇಳುವದರಲ್ಲಿ ಹೊತ್ತು ಕಳೆಯಲ್ಪಟ್ಟಿದೆಯೋ ?

(೪) ದೃಷ್ಟಾಂತಗಳು ವಿದ್ಯಾರ್ಥಿಗಳ ಲಕ್ಷವನ್ನು ತಮ್ಮ ಕಡೆಗೇ ಸ್ವತಂತ್ರವಾಗಿ ಎಳಕೊಳ್ಳದೆ ಪ್ರಧಾನ ವಿಷಯದ ಕಡೆಗೇ ಹರಿಸುವವೋ ?

(IV ಇ) ಪ್ರಯೋಗಗಳು.

(೧) ವೆಗ್ಗಕ್ಕೂ ವಿಷಮಕ್ಕೂ ತಕ್ಕ ಪ್ರಮಾಣಗಳಾಗಿರುವವೋ ?

(೨) ಉದ್ದಿಷ್ಟ ಮಾತನ್ನು ಸ್ಥಾಪಿಸಲಿಕ್ಕಾಗಲಿ, ಸೂಚಿಸುವದಕ್ಕಾಗಲಿ ಅನುಕೂಲವಾಗಿರುವವೋ ?

(೩) ವಿದ್ಯಾರ್ಥಿಗಳಿಗೆ ಪೂರ್ಣವಾಗಿ ತಿಳಿಯುವವೋ ?

(೪) ಪ್ರಯೋಗಗಳು ಅಂದವಾಗಿಯೂ ವೇಳೆಗಳೆಯದಂತೆ ತೀವ್ರವಾಗಿಯೂ ಸಫಲವಾಗಿಯೂ ಮಾಡಲ್ಪಡುವವೋ ?

(೫) ತಕ್ಕ ಪ್ರಸಂಗಗಳಲ್ಲಿ ಮಾಡಲ್ಪಡುವವೋ ?

(೬) ಪ್ರಯೋಗಗಳಿಂದಾಗುವ ಯಾವತ್ತು ಲಾಭಗಳು ಮಾಡಿಕೊಳ್ಳಲ್ಪಡುವವೋ ?

V ಕರೇ ಹಲಿಗೆಯ ಉಪಯೋಗ.

(೫) ಪಾಠದ ತಿಳುವಳಿಕೆಗೆ ಅನುಕೂಲವಾದ ಚಿತ್ರ ನಕಾಶಗಳಿಗಾಗಿ ಕರೇ ಹಲಿಗೆಯು ಸರಿಯಾಗಿ ಉಪಯೋಗಿಸಲ್ಪಡುವದೋ ?

(೪) ಕರೇ ಹಲಿಗೆಯ ಮೇಲೆ ಬರೆದ ಸಾರಸಂಗ್ರಹವು.

(೧) ಅವಶ್ಯವಾಗಿರುವದೋ ?

(೨) ಸುಸಂಗತವಾಗಿರುವದೋ ?

(೩) ಸ್ಪಷ್ಟವೂ ಸಂಕ್ಷಿಪ್ತವೂ ಮಾರ್ಮಿಕವೂ ಆಗಿರುವದೋ ?

(೪) ಸುವ್ಯವಸ್ಥಿತವಾಗಿರುವದೋ ?

(೫) ವಿದ್ಯಾರ್ಥಿಗಳಿಂದಲೇ ಹೊರಡಿಸಲ್ಪಟ್ಟಿರುವದೋ ?

(೬) ಪಾಠದ ಉಚಿತವಾದ ಮೆಟ್ಟುಗಳಲ್ಲಿ ಮಾಡಿದ ಪ್ರಶ್ನೆಗಳಿಂದ ನಿಷ್ಪನ್ನವಾಗಿರುವದೋ ?

(೭) ಸರಿಯಾಗಿ ಕೆಲಸಕ್ಕೆ ಹಚ್ಚಲ್ಪಡುವದೋ ?

(೮) ಶಿಕ್ಷಕನ ಬರಹವು.

(೧) ಸುವಾಚ್ಯವಾಗಿರುವದೋ ?

(೨) ತಕ್ಕ ಆಕಾರದ್ದಿರುವದೋ ?

(೩) ಶೀಘ್ರವಾಗಿರುವದೋ ?

(೪) ಚಂದವಾಗಿರುವದೋ ?

(೯) ಶಿಕ್ಷಕರು ಕರೇ ಹಲಿಗೆಯ ಮೇಲೆ ಬರೆಯುವಾಗ ವಿದ್ಯಾರ್ಥಿಗಳು ಕೆಲಸದಲ್ಲಿ ಪೂರ್ಣವಾಗಿ ತೊಡಗಿಸಲ್ಪಟ್ಟಿರುವರೋ ?

ಶಿಕ್ಷಕ ಶಿಕ್ಷಿತರ ಸಂಬಂಧ.

(೫) ಶಿಕ್ಷಕ.

(ಅ) ಶಿಕ್ಷಕ ಶಿಕ್ಷಿತರ ಶ್ರೇಯದ ಬಳಿಕೆಯು.

(೧) ಈ ಉಭಯತರಿಗೂ ಬುದ್ಧಿನೀತಿ ಸಂಬಂಧದಿಂದ ತಾದಾತ್ಮ್ಯವನ್ನು ಹುಟ್ಟಿಸುವಪ್ಪು.

(೨) ವಿದ್ಯಾರ್ಥಿಗಳ ವಿಚಾರಗಳಿಗೆ ಬಳಣವನ್ನು ಹಚ್ಚುವಪ್ಪು.

(೩) ಆದರದ ಸಹಾಯವನ್ನು ಪಡೆಯುವಪ್ಪು.

(೪) ವಿದ್ಯಾರ್ಥಿಗಳ ತೊಂದರೆಗಳನ್ನು ತಿಳುಕೊಂಡು ವಿವರಣ ದೃಷ್ಟಾಂತಗಳ ಅವಶ್ಯಕತೆಯನ್ನು ಕಂಡು ಹಿಡಿಯುವಪ್ಪು.

(೫) ವಿದ್ಯಾರ್ಥಿಗಳು ತಮ್ಮ ಮನೋವಿಚಾರಗಳನ್ನು ಹೊರಗೆಡಹಿ ತಮಗೆ ತಟ್ಟುವ ತೊಂದರೆಗಳನ್ನು ನಿಃಶ್ಯಂಕವಾಗಿ ಒಡನುಡಿಯಲಿಕ್ಕೆ ಧೈರ್ಯವನ್ನೂ ಉತ್ಸಾಹವನ್ನೂ ಪಡುವಪ್ಪು.

ನಿಕಟವಾಗಿರುವದೋ ?

(ಬ) ಶಿಕ್ಷಕನಲ್ಲಿ.
(೧) ವಿದ್ಯಾರ್ಥಿಗಳ ವರ್ತನದೋಷಗಳನ್ನು.
(೨) ದುರ್ಲಕ್ಷವನ್ನು ಅಥವಾ ಲಕ್ಷದ ಭ್ರಮಣವನ್ನು.
(೩) ತಿಳುವಳಿಕೆಗೆ ಅಡ್ಡಾಗುವ ಕಾರಣಗಳನ್ನು.
(೪) ಭ್ರಾಂತಿದೋಷಗಳನ್ನು.
ಕೈಕೊಳ್ಳುವ ಹತೋಟಿಯೂ ಸಾಮರ್ಥ್ಯವೂ ಇರುವವೋ?
(ಕ) ಶಿಕ್ಷಕನ ರೀತಿಯು.
(೧) ಸ್ನಿಗ್ಧವೂ
(೨) ಪ್ರೋತ್ಸಾಹಕವೂ.
(೩) ಸ್ಥಿರವೂ.
(೪) ದರ್ಪವುಳ್ಳದ್ದೂ ಸಾಮರ್ಥ್ಯವ್ಯಂಜಕವೂ.
(೫) ಅಸ್ಥೆಯುಳ್ಳದ್ದೂ.
(೬) ಸಾವಧಾನವುಳ್ಳದ್ದೂ.
(೭) ಪ್ರೌಢವಾದದ್ದು ಅಂದರೆ ಗ್ರಾಮ್ಯತನದ ದೋಷವಿಲ್ಲದ್ದೂ
ಇರುವದೋ?
(ಡ) ಶಿಕ್ಷಕನ ಭಾಷೆಯು,
(೧) ಸ್ಪಷ್ಟವಾಗಿಯೂ ನಿಸೆಂದಿಗ್ಧವಾದದ್ದಾಗಿಯೂ,
(೨) ಅರ್ಥವತ್ತ್ತಾಗಿಯೂ ಅಂದರೆ ವಿಷಯವನ್ನು ಕಣ್ಣು ಮುಂದು ತಂದು ನಿಲ್ಲಿಸುವಂಥಾದ್ದಾಗಿಯೂ.
(೩) ಅಸ್ಖಲಿತವಾಗಿಯೂ
(೪) ವಾಕ್‌ಸಂಯಮವುಳ್ಳದ್ದಾಗಿಯೂ,
(೫) ಯಥಾರ್ಥವಾಗಿಯೂ.
(೬) ಉಚ್ಚಾರದಲ್ಲಿ ಶುದ್ಧವಾಗಿಯೂ,
(೭) ವ್ಯಾಕರಣದೋಷವಿಲ್ಲದ್ದಾಗಿಯೂ,
ಇರುವದೋ?
(ಇ) ಶಿಕ್ಷಕನ ವರ್ಣೋಚ್ಚಾರವು.
(೧) ಸ್ಪಷ್ಟವೂ
(೨) ಶುದ್ಧವೂ.
ಇರುವದೋ?
ಮತ್ತು ಅವನ ಧ್ವನಿಯು.

(೧) ಅಕೃತ್ರಿಮವೂ.
(೨) ಮನೋಹರವೂ.
(೩) ಸುಶ್ರಾವ್ಯವೂ.
(೪) ತಕ್ಕಷ್ಟು ಗಟ್ಟಿಯಾದದ್ದು.
ಇರುವದೋ ?
(ಫ) ಆಸನ ಚಲನವಲನ ಮುದ್ರಾದಿ ಸಂಸ್ಥಿತಿಗಳು.
(೧) ಉಡುವ ತೊಡುವ ರೀತಿಯೂ ಕೂಡ್ರುವ ನಿಲ್ಲುವ
ನಸ್ಸೂ ಮುಂತಾದ ಸಾಮಾನ್ಯ ಸಂಸ್ಥಿತಿಗಳು ಅಕೃತ್ರಿಮವೂ
ಸಂಭಾವಿತತನದವೂ ಆಗಿರುವವೋ ?
(೨) ವರ್ಗದಲ್ಲಿ ನಡೆದ ಯಾವತ್ತು ಸಣ್ಣ ದೊಡ್ಡ ವ್ಯಾಪ
ರಗಳು ತಪ್ಪದೆ ಕೂಡಲೆ ಕಣ್ಣಿಗೆ ಬೀಳುವಂತೆ ಮಾಸ್ತರನ
ಸರಿಯಾದ ಸ್ಥಳವನ್ನು ಆಕ್ರಮಿಸಿರುವನೋ ?
(ಗ) ಮಾಸ್ತರನ ಜ್ಞಾನ.
(೧) ಅಮೋಘವಾದದ್ದು.
(೨) ವ್ಯವಸ್ಥಿತವಾದದ್ದು.
(೩) ಅದ್ಯತನವಾದದ್ದು ಅಪ್ರತಿಹತವಾದದ್ದು (ಮನಸೋ
ಏ ಇದದ್ದು).
(೪) ಸುಗಮವಾದದ್ದು
ಇರುವದೋ ?
(ಹ) ತಿದ್ದುವಿಕೆ.
(೧) ಒಮ್ಮೆ ಟೀಕಾರೂಪದಿಂದ ತೋರಿಸಿರುವ ತಪ್ಪುಗ
ಳನ್ನು ಶಿಕ್ಷಕನು ತಿದ್ದುಕೊಂಡಿರುವನೋ ?
(೨) ವರ್ಗವನ್ನು ನಡಿಸುವವರಲ್ಲಿಯೂ ಪಾಠ ಕಲಿಸುವ
ವರಲ್ಲಿಯೂ ತಕ್ಕ ತಿದ್ದುಪಡಿಯಾಗಿರುವದೋ ?
(೫) ವರ್ಗ.
(ಅ) ಮನಸ್ಸಿನ ಸಂಸ್ಕಾರ ಅಥವಾ ಅಭ್ಯಾಸ.
(೧) ವಿದ್ಯಾರ್ಥಿಗಳು ಅಭ್ಯಾಸದಲ್ಲಿ ಆಸ್ಥೆಯುಳ್ಳವರಾ
ರುವರೋ ?
(೨) ವಿದ್ಯಾರ್ಥಿಗಳ ಲಕ್ಷವು ನಿರುಪಾಧಿಕವಾಗಿರುವ
ದೋ ? ಅಂದರೆ ಅವಾಂತರ ಸಂಗತಿಗಳ ಸಹಾಯವಿಲ್ಲದೆ
ಅಭ್ಯಾಸಕ್ಕೆ ವಿದ್ಯಾರ್ಥಿಗಳು ಲಕ್ಷ ಕೊಡುವರೋ ?

೭) ಪಾಠವನ್ನು ಸಾಧ್ಯ ಮಾಡಿಕೊಳ್ಳುವದಕ್ಕೆ ಶಿಕ್ಷಕನಿಗೆ ಅನುಕೂಲವಾಗಿ ವಿದ್ಯಾರ್ಥಿಗಳು ದುಡಿಯುವರೋ?

(೮) ವಿಷಯ ಗ್ರಹಣಕ್ಕಾಗಿ ತಮ್ಮ ಬುದ್ಧಿಸಾಮರ್ಥ್ಯವನ್ನೆಲ್ಲ ವೆಚ್ಚ ಮಾಡಲಿಕ್ಕೆ ಹವಣಿಸುವರೋ?

(೫) ವಿದ್ಯಾರ್ಥಿಗಳು ತಿದ್ದುವಿಕೆಯುಳ್ಳವರಾಗಿರುವರೋ? ತಿದ್ದುವಿಕೆಯು ಒತ್ತಾಯದಿಂದ ಕಾದುಕೊಂಡದ್ದೋ? ಅಥವಾ ಹುಡುಗರ ತಿಳುವಳಿಕೆಯಿಂದ ಸಿದ್ಧವಾದದ್ದೋ?

(ಬ) ಮನಸ್ಸಿನ ಪ್ರಬುದ್ಧತೆ ಅಥವಾ ಜ್ಞಾನೋನ್ನತಿ.

(೧) ಹೊಸದಾಗಿ ಕಲಸಿದ ಪಾಠದೊಳಗಿನ ಜ್ಞಾನಾಂಶವು.

(೧) ಎಷ್ಟರಮಟ್ಟಿಗೆ ಮನದಟ್ಟಾಗಿರುವದು? ಅಂದರೆ ವಿದ್ಯಾರ್ಥಿಗಳ ಸ್ವತ್ತಾಗಿರುವದು?

(೨) ಎಷ್ಟುಮಟ್ಟಿಗೆ ಗೋಚರವಾಗಿರುವದು? ಅಂದರೆ ಕೇವಲ ಸ್ಮೃತಿಸಾಧ್ಯವಾಗಿರುವದು?

(೨) ಪಾಠದ ವಿಷಯದಲ್ಲಿ ವಿದ್ಯಾರ್ಥಿಗಳು ಎಷ್ಟುಮಟ್ಟಿಗೆ ಮನಸು ಹಾಕುವರು?

(೫) ಪರಿಣಾಮ ಅಥವಾ ಫಲ.

(ಅ) ಕಲಿಸುವ ಕೆಲಸದಲ್ಲಿ ಮಾಸ್ತರನಿಗೆ ಯಶವು ದೊರಿಯಿತೋ ಇಲ್ಲವೋ? ದೊರೆದಿದ್ದರೆ ಎಷ್ಟು ಮಟ್ಟಿಗೆ.

(ಬ) ಮಾಸ್ತರನಿಗೆ ಬಂದ ಅಪಯಶದ ಕಾರಣಗಳು.

TEACHER'S WORK & DUTY (*Communicated*)

ಶಿಕ್ಷಕನ ಕೆಲಸವೂ ಕರ್ತವ್ಯವೂ.

(ಬರೆದುಬಂದದ್ದು.)

(೧) ವಿಷಯಪ್ರವೇಶ, (೨) ಶಿಕ್ಷಕನ ಕೆಲಸದ ಮಹತ್ವವು. (೩) ಶಿಕ್ಷಕನ ಕರ್ತವ್ಯ, (೪) ಗುರುಶಿಷ್ಯರಿಗಾಗುವ ಲಾಭಗಳು, (೫) ತಾತ್ಪರ್ಯ.

೧. ಶಿಕ್ಷಣದಂಥ ಪವಿತ್ರವೂ ಗೌರವವುಳ್ಳದ್ದೂ ಆದ ಕೆಲಸವನ್ನು ಕೈಕೊಂಡವರಿಗೆ ಅದರ ವಿಷಯದ ತಿರಸ್ಕಾರ ಬೇಸರಗಳು ಅತ್ಯಂತ ವಿಘಾತಕಗಳಾಗಿರುತ್ತವೆ. ಯಾಕಂದರೆ ಈ ತಿರಸ್ಕಾರ ಬೇಸರಗಳಿಂದ ಶಿಕ್ಷಣದ ಕೆಲಸವು ಲಾಭದಾಯಕವೂ, ಆನಂದಕರವೂ ಆಗಿ ನಡೆಯಲಾರದು. ಹೀ

ಗಿದ್ದು ಕೆಲ ಶಿಕ್ಷಕರು ಈ ಶಿಕ್ಷಕನ ಕೆಲಸದ ಸಂಬಂಧದ ತಿರಸ್ಕಾರ ಬೀಸರಗಳನ್ನು ಹೊರಗೆಡವುತ್ತಿರುವರು. ಆದರೆ ಈ ಸಂಬಂಧದ ಅಂದರೆ ಈಗಿನ ನಮ್ಮ ಕೆಲಸದ ಮಹತ್ವ, ಜನರ ಹಾಗೂ ನಮ್ಮ ತಪ್ಪು ತಿಳುವಳಿಕೆ, ನಮ್ಮ ಕರ್ತವ್ಯ ನಮಗೂ ಶಿಷ್ಯವರ್ಗಕ್ಕೂ ಆಗುವ ಲಾಭ ಮುಂತಾದವುಗಳ ಸಂಬಂಧದಿಂದ ನನ್ನ ವಿಚಾರಗಳನ್ನು ಎಲ್ಲ ಜನರ ಮುಂದೆ ವಿಶೇಷವಾಗಿ ನಮ್ಮ ಬಂಧುಗಳಾದ ಶಿಕ್ಷಕರ ಮುಂದೆ ಇಡುವದಕ್ಕೆ ನಾನು ಇಚ್ಛಿಸುತ್ತಿದ್ದೆನು ಅದೇ ಇಚ್ಛೆಯಿಂದ ಈಗ "ಶಿಕ್ಷಕನ ಕೆಲಸವೂ ಕರ್ತವ್ಯವೂ" ಎಂಬ ಈ ನಿಬಂಧವು ಬರೆಯಲ್ಪಟ್ಟಿದೆ.

ಯಾವದೊಂದು ಕೆಲಸದ ಮಹತ್ವದಿಂದ ಆ ಕೆಲಸ ಮಾಡುವವನಿಗೆ ಮಹತ್ವವು ಬರುತ್ತದೆ. ಕೆಲಸದ ಮಹತ್ವವು ಮುಖ್ಯವಾಗಿ ಅದರ ಪವಿತ್ರತೆ ಗೌರವಗಳನ್ನು ಅವಲಂಬಿಸಿರುವದು ಕೆಲ ಕೆಲಸಗಳು ವಸ್ತುತಃ ಪವಿತ್ರವಾಗಿದ್ದರೂ ಕೆಲಸ ಮಾಡುವವರ ಯೋಗದಿಂದ ಅವಕ್ಕೆ ಅಪವಿತ್ರತೆಯು ಆರೋಪವು ಬರುವ ಸಂಭವವಿರುತ್ತದೆ ಸ್ವಲ್ಪ ವಿಚಾರ ಮಾಡಿ ನೋಡಿದರೆ ಇದಕ್ಕೆ ಲಂಚಗೂಳಿ ಅಧಿಕಾರಿಯಂಥ ಉದಾಹರಣೆಗಳು ವ್ಯವಹಾರದಲ್ಲಿ ಹಲವು ದೊರೆಯಬಹುದು. ಆದರೆ ಕರ್ತೃವಿನಲ್ಲಿ ಈ ಪ್ರಕಾರದ ದೋಷಗಳು ಸೇರಲಿಕ್ಕೆ ಅತ್ಯಂತ ವಿರೋಧಿಯಾದ, ಬಂದು ಪಕ್ಷದಲ್ಲಿ ಸೇರಿದರೂ ತಾನು ಈ ಸಾಂಸರ್ಗಿಕ ದೋಷಕ್ಕೆ ಬಳಗಾಗದೆ ಕುಂಬಾರ ಹುಳದಂತೆ ಕೇವಲ ನಿರ್ಲಿಪ್ತವಾಗಿದು ಕೆಲಸ ಮಾಡುವವನನ್ನು ಪ್ರಸಿದ್ಧವಾಗಿ ನಿಂದ್ಯನನ್ನು ಮಾಡುವ ಅತ್ಯಂತ ಪವಿತ್ರವಾದ ಕೆಲಸವು ಈ ಜಗತ್ತಿನಲ್ಲಿ ಇದ್ದರೆ, ಅದು ಶಿಕ್ಷಕನ ಕೆಲಸವಾಗಿರುತ್ತದೆಂದು ಹೇಳಬಹುದು. ಲಂಚಗೂಳಿಯಾಗಲಿಕ್ಕೆ ಶಿಕ್ಷಕನಿಗೆ ಅಸ್ಪದವಿಲ್ಲೆಂಬದನ್ನು, ಅವನು ದುರ್ವ್ಯಸನಿಯೂ ದುರಾಚಾರಿಯೂ ಆದರೆ ಜನರು ಅವನನ್ನು ಪ್ರಸಿದ್ಧವಾಗಿ ತಿರಸ್ಕರಿಸುವದನ್ನು, ಶಿಕ್ಷಕನು ಸದಾಚಾರಿ ಇರಲಿ ದುರಾಚಾರಿ ಇರಲಿ ಅವನಲ್ಲಿರುವ ವಿದ್ಯೆಗೆ ಮಾನ ಕೊಟ್ಟು ಶಿಷ್ಯವರ್ಗವು ಆತನನ್ನು ಭಕ್ತಿಯಿಂದ ಓಲೈಸುವದನ್ನೂ ನೋಡಿದರೆ ಈ ಮಾತಿನ ನಿಜತ್ವವು ತೋ

ರಬಹುದು. ಶುದ್ಧಾಂತಃಕರಣದ ಸಭ್ಯಸ್ವಭಾವದ ಜನರು ವಿದ್ಯಾಖಾತೆಯನ್ನು ಬಿಟ್ಟು ರಾಜಕೀಯವಾದ ಎರಡನೆಯ ಖಾತೆಯಲ್ಲಿ ಹೋದ್ದರಿಂದ ಅವರ ಮನಃಪ್ರವೃತ್ತಿಯು ಬದಲಾದದ್ದೂ, ಆ ಖಾತೆಯವರು ವಿದ್ಯಾಖಾತೆಯಲ್ಲಿ ಬಂದದ್ದರಿಂದ ಅನಿರ್ವಾಹಪಕ್ಷವೇ ಆಗಲಿ ಅವರು ಪವಿತ್ರಾಚರಣೆಯವರಾದದ್ದೂ ಹಲವರ ಅನುಭವಕ್ಕೆ ಬಂದಿರಬಹುದು. ಸಾರಾಂಶ ಜ್ಞಾನದಲ್ಲಿ ಪವಿತ್ರತೆಯು ಬೆರೆತಪ್ರೋತವಾಗಿ ತುಂಬಿರುವದರಿಂದ ಅಜ್ಞಾನದ ಪ್ರಭಾವವು ಅದನ್ನು ವಿದ್ಯಾದಾನದ ಯೋಗದಿಂದ ಜಾಗ್ರತೆಗೊಳಿಸುವ ಶಿಕ್ಷಕನ ಮೇಲೆ ಬೀಳದೆ ಹೋಗದು. ಆದ್ದರಿಂದ ಶಿಕ್ಷಕನ ಕೆಲಸವು ಅತ್ಯಂತ ಪವಿತ್ರವಾದದ್ದಿರುತ್ತದೆ

ಇನ್ನು ಶಿಕ್ಷಕನ ಕೆಲಸದ ಗೌರವವನ್ನು ಕುರಿತು ವಿಚಾರ ಮಾಡುವಾಗ ಮನುಷ್ಯನು ಈ ಸೃಷ್ಟಿಯ ಒಡೆಯನೂ, ಪ್ರಾಣಿವರ್ಗಕ್ಕೆಲ್ಲ ದೇವನೆಂದೂ ಆಗಲಿಕ್ಕೆ ಅವನಲ್ಲಿರುವ ಜ್ಞಾನವು ಕಾರಣವಾಗಿರುವದು ಈ ಜ್ಞಾನರೂಪವಾದ ಬಂಡವಾಳವು ಶಿಕ್ಷಕವಿದ್ಯಾರ್ಥಿಗಳ ರೂಪವಾದ ವ್ಯಾಪಾರಿಗಿರಾಕಿಗಳ ಯೋಗದಿಂದ ಬೆಳಿಸಲ್ಪಟ್ಟಂತೆ ಐಹಿಕ ಪಾರಲೌಕಿಕ ಸುಖರೂಪವಾದ ಲಾಭಗಳು ಮನುಷ್ಯಜೀವಿಗೆ ಪ್ರಾಪ್ತವಾಗುವವು. ಪಾಶ್ಚಿಮಾತ್ಯರ ಈಗಿನ ಸುಧಾರಣೆಯ ಕಡೆಗೂ, ಪ್ರಾಚೀನರಾದ ಹಿಂದೂ ಆರ್ಯರ ಆತ್ಮಾನಾತ್ಮವಿಚಾರಗಳ ಕಡೆಗೂ ಲಕ್ಷಕೊಟ್ಟು ನೋಡಿದರೆ ಈ ಮಾತಿನ ನಿಜತ್ವವು ತೋರದೆ ಹೋಗದು. ಇಹಪರ ಸಾಧನವಾದ ಈ ಅಮೌಲ್ಯ ಜ್ಞಾನಪ್ರಾಪ್ತಿಗೆ ವಿದ್ಯೆಯು ಕಾರಣವಾಗಿದ್ದು, ವಿದ್ಯೆಯಿಲ್ಲದವನು ಪಶುವಿಗೆ ಸಮಾನನೆನಿಸುವನು. ಈ ಪಶುಸ್ಥಿತಿಯಿಂದ ಮನುಷ್ಯನನ್ನು ಉದ್ಧರಿಸಿ, ತನ್ನ ಅತ್ಯಂತ ಉಜ್ವಲವಾದ ತೇಜಸ್ಸಿನಿಂದ ಅಜ್ಞಾನಕತ್ತಲೆಯನ್ನು ಹೊಡೆದೋಡಿಸಿ ಅಖಂಡಾನಂದವನ್ನು ತೋರಿಸುವ ಈ ಜ್ಞಾನದ ಗೌರವವನ್ನೇನು ವರ್ಣಿಸುವದದೆ? ಅದು ವಿಚಾರ ಮಾಡುವವರ ಯೋಗ್ಯತೆಯನ್ನು ಅವಲಂಬಿಸಿ ಅವರ ಅನುಭವಕ್ಕೆ ಬರುವದು.

ಈ ಪ್ರಕಾರ ಅತ್ಯಂತ ಪವಿತ್ರವೂ ಗೌರವವುಳ್ಳದ್ದೂ ಆದ ಜ್ಞಾನವು ವಿದ್ಯೆಯ ಯೋಗದಿಂದ ಜಾಗ್ರತವಾಗುತ್ತಿದ್ದು, ಆ ವಿದ್ಯಾದಾನದ ಕೆಲಸವು ಶಿಕ್ಷಕನದಾಗಿರುವದು. ಅದರಿಂದ ಶಿಕ್ಷಕನ ಕೆಲಸವು ಯಾವ ತರದ್ದೆಂಬದನ್ನು ಮೇಲಿನ ವಿವರದಿಂದಲೂ, ತಮ್ಮ ಸುವಿಚಾರದಿಂದಲೂ, ವಾಚಕರೇ ತರ್ಕಿಸತಕ್ಕದ್ದು. ಇನ್ನು ಆಫ್ರಿಕದ ಕಾಡು ಮನುಷ್ಯನು ರತ್ನದ ಗೌರವವನ್ನು ತಿಳಿಯದಿದ್ದರೆ, ಅಥವಾ ಅಜ್ಞಾನಿಯಾದ ವೇದಧರ್ಮಿಯು ಜೀವವು ವಿನಾಶಿಯೆಂದು ತಿಳಿದರೆ ರತ್ನದ ಗೌರವಕ್ಕೂ, ಜೀವದ ಅವಿನಾಶತ್ವಕ್ಕೂ ಬಾಧೆ ಬರಲಾರದು. ಅದಕಂತೆ ವಿದ್ಯೆಯು ಮಹಿಮೆಯನ್ನರಿಯದೆ ಶಿಕ್ಷಕನ ಕೆಲಸಕ್ಕೆ ಮಹತ್ವ ಕೊಡದ ಮನುಷ್ಯನ ಸ್ಥಿತಿಯು ಸೂರ್ಯನ ಮೇಲೆ ಮಣ್ಣುತೂರಿ ನೋಡುವವನಂತೆ ಆಗುವದು. ಪ್ರಾಜೀನ ಕಾಲದಲ್ಲಿ ನಮ್ಮ ದೇಶದಲ್ಲಿ ವಿದ್ಯಾಗುರುವಿಗೆ ಅತಿಶಯ ಮಾನವಿತ್ತೆಂಬದಕ್ಕೆ ಸಂದೇಹವಿಲ್ಲ. ಆ ಕಾಲಕ್ಕೆ ಗುರುವನ್ನು ಪರಸುಗಲ್ಲಿಗಿಂತಲೂ ಶ್ರೇಷ್ಠನೆಂದು ತಿಳಿಯುವರು. ಯಾಕಂದರೆ ಪರಸುಗಲ್ಲು ತನ್ನನ್ನು ಸ್ಪರ್ಶ ಮಾಡುವ ಲೋಹವನ್ನು ಸುವರ್ಣವಾಗಿ ಮಾಡುತ್ತದಲ್ಲದೆ ತನ್ನಂತೆ ಮಾಡಿಕೊಳ್ಳುವದಿಲ್ಲ; ಆದರೆ ತನ್ನಂತೆ ಮಾಡಿಕೊಳ್ಳುವ ಈ ಅದ್ಭುತವಾದ ಸಾಮರ್ಥ್ಯವು ಗುರುವಿನಲ್ಲಿ ಮಾತ್ರ ಇರುತ್ತದೆಂದು ಆಗಿನ ಮಹಾತ್ಮರು ತಿಳಿಯುವರು. ಇದಲ್ಲದೆ ಗುರುವು ಬ್ರಹ್ಮಸ್ವರೂಪನೂ, ವಿಷ್ಣುಸ್ವರೂಪನೂ, ಶಿವಸ್ವರೂಪನೂ ಆಗಿರುವದಲ್ಲದೆ ಅವನು ಸಾಕ್ಷಾತ್ ಪರಬ್ರಹ್ಮನೂ ಆಗಿರುವನೆಂದು ಅವರು ನಂಬುವರು. ಈ ಪ್ರಕಾರದ ಅತ್ಯುಚ್ಚವಾದ ಶ್ರೇಷ್ಠಗುರುವಿನ ಹೆಚ್ಚಳವನ್ನು ವಿದ್ಯೆಯು ನಿಜವಾದ ಫಲವನ್ನು ಉಂಡ ನಮ್ಮ ಪ್ರಾಜೀನ ಆರ್ಯರಷ್ಟು ಅನ್ಯರು ತಿಳಿಯಲಾರರೆಂಬದು ಸ್ವಾಭಾವಿಕವು.

(ಸಶೇಷ)

DEPARTMENTAL NOTICE.

ನೋಟೀಸು.

ದಕ್ಷಿಣಭಾಗದ ಪಬ್ಲಿಕ್ ಸರ್ವಿಸ ಸರ್ಟಿಫಿಕೇಟ ಪರೀಕ್ಷೆಗಳು :—

ಕೆಳಗಿನ ತರಗತಿಯ ಸರಕಾರೀ ಕೆಲಸಗಳನ್ನು ದೊರಕಿಸಬೇಕಾದರೆ, ಸರ್ ೧೮೮೪ ನೇ ಇಸವಿಯ ಎಪ್ರಿಲ ೫ ನೇ ತಾರೀಖಿನ ಮುಂಬಯಿ ಸರಕಾರೀ ಗ್ಯಾಝೆಟಿನಲ್ಲಿ ಛಾಪಿಸಿದ ನಿಯಮಗಳಿಗನುಸರಿಸಿ ೨ ನೇ ಅಥವಾ ೩ ನೇ ಗ್ರೇಡ ಪಬ್ಲಿಕ್ ಸರ್ವಿಸ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕಾಗುತ್ತದಷ್ಟೇ? ಆ ಪರೀಕ್ಷೆಗಳಿಗಾಗಿ ೧೯೦೦ ೧೯೦೧ ವರ್ಷದ ಬಗ್ಗೆ ಕೆಳಗೆ ಬರೆದ ಪುಸ್ತಕಗಳು ಗೊತ್ತು ಮಾಡಲ್ಪಟ್ಟಿವೆ. ದಕ್ಷಿಣ ಭಾಗದೊಳಗೆ ಬೆಳಗಾವ, ಧಾರವಾಡ, ವಿಜಾಪೂರ, ಕಾರವಾರ, ಕುಲಾಬಾ ಹಾಗೂ ರತ್ನಾಗಿರಿ ಜಿಲ್ಲೆಗಳಲ್ಲಿಯೂ; ಕೊಲ್ಲಾಪೂರ ಹಾಗೂ ಇತರ ಸಂಸ್ಥಾನಗಳಲ್ಲಿಯೂ, ಇರುವ ಉಮೇದವಾರರಿಗಾಗಿ ಈ ಪುಸ್ತಕಗಳು ನೇಮಿಸಲ್ಪಟ್ಟಿವೆ.

(೧) ಈ ಪರೀಕ್ಷೆಗಳು ಬೆಳಗಾವ, ಕಾರವಾರ, ಸೆಂಟರುಗಳಲ್ಲಿ ಕನ್ನಡದಲ್ಲಿಯೂ, ಮರಾಠಿಯಲ್ಲಿಯೂ; ಧಾರವಾಡ, ವಿಜಾಪೂರ ಸೆಂಟರುಗಳಲ್ಲಿ ಬರೇ ಕನ್ನಡದಲ್ಲಿ, ರತ್ನಾಗಿರಿ, ಕುಲಾಬಾ ಹಾಗೂ ಕೊಲ್ಲಾಪುರ, ಸೆಂಟರುಗಳಲ್ಲಿ ಬರೇ ಮರಾಠಿಯಲ್ಲಿ ಆಗುವವು

(೨) ಧಾರವಾಡ, ವಿಜಾಪೂರ, ಜಿಲ್ಲೆಗಳಲ್ಲಿರುವಂಥ ಮರಾಠಿಯಲ್ಲಿ ಪರೀಕ್ಷೆಯನ್ನು ಕೊಡುವ ಮನಸ್ಸುಳ್ಳಂಥ ಉಮೇದವಾರರು, ಬೆಳಗಾವ, ಸೋಲಾಪೂರ, ಕೋಲ್ಲಾಪೂರ, ಸಾತಾರಾ ಎಂಬ ನಾಲ್ಕು ಸೆಂಟರುಗಳಲ್ಲಿ ತಮಗೆ ಸಮಿಾಪವಾದಂಥ ಹೋಗಲಿಕ್ಕೆ ಸುಲಭವಾದಂಥ ಯಾವದೊಂದು ಸೆಂಟರಿನಲ್ಲಿ ಮೇಹರ್‌ಬಾನ ಎಜ್ಯುಕೇಶನಲ್ಲ ಇನಸ್ಪೆಕ್ಟರ ಸಾಹೆಬ ಪ್ರಾಂತ ದಕ್ಷಿಣಭಾಗ ಇವರ ಅಪ್ಪಣೆಯನ್ನು ಪಡಕೊಂಡು ಪರೀಕ್ಷೆಗೆ ಕೂಡ್ರಬಹುದು.

೭ನೇ ಗ್ರೇಡ ಸರ್ಟಿಫಿಕೇಟ ಪರೀಕ್ಷೆ ಶಿಡ್ಯೂಲ.

(೧) ಇಂಗ್ಲಿಷ:—ಸೇಕ್ಸಪೀಯರನ ಮರ್ಚಂಟ ಆಫ್ ವೇನೀಸ, ಹಾಮ್ಲೇಟ, ಟಂಪೆಸ್ಟ, ಟಾಯಮನ್ ಆಫ್ ಅಥೆನ್ಸ, ಮತ್ತು ಕಿಂಗ್‌ಲಿಅರ್ (೪) ಚೇಂಬರ್ಸ ಶಾರ್ಟ್‌ಸ್ಟೋರೀಜ ಭಾಗ ೭ನೇ ಹಿರಾಯಿಕ್ ಪೆರ್ಸುಂಟಿಯಿಂದ ಮಾರ್ವೆಲಸ್ ಯಿಸ್ ಕೇಪದ ವರೆಗೆ ೭೧ ನೇ ಪುಟದಿಂದ ೧೪೦ ಪುಟಗಳು ಪೂರಾ (೫) ಗೋಲ್ಡಸ್ಮಿಥನ ಡೆಸರ್ಟೆಡ್ ವ್ಹಿಲೇಜದೊಳಗಿನ ಅಥವಾ ಪೋಪ್ಸ ಹೋಮರ್ಸ್ ಯಿಲಿಯಡ್ ಮೂರನೇ ಪುಸ್ತಕದೊಳಗಿನ ೪೦೦ ಪಂಕ್ತಿಗಳು.

(೨) ಮರಾಠಿ:—ಚಿಪಳೂಣಕರರು ಮಾಡಿದ ಸಾಕ್ರೆತೀಶನ ಚರಿತ್ರವು.

(೩) ಕನ್ನಡ:—ತೂರವಮರಿಯವರು ಮಾಡಿದ ಕಾದಂಬರಿಯು.

(೪) ಉರ್ದು:—ತವ್‌ಬತುನ್‌ನಸೂಹ್.

೬ನೇ ಗ್ರೇಡ ಸರ್ಟಿಫಿಕೇಟ ಪರೀಕ್ಷೆಯು. ಶಿಡ್ಯೂಲ (೪)

(೧) ಅಂಕಗಣಿತ ಪೂರಾ ಜವಾಖಿರ್ಚು ಹಾಗೂ ಯುಕ್ಲೀಡನ ೧ನೇ ಪುಸ್ತಕ ಪೂರಾ.

(೨) ಮರಾಠಿ:—ಮರಾಠಿ ಆರನೇ ಪುಸ್ತಕ ಪೂರಾ. ಆರನೇ ಪುಸ್ತಕದೊಳಗಿನ ೭ನೇ ೪೦೦ ಪಂಕ್ತಿ ಕವಿತೆ ಬಾಯಿಪಾಠ ಅರ್ಥ ಸಹಿತ.

(೩) ಕನ್ನಡ:—ಆರನೇ ಪುಸ್ತಕ ಪೂರಾ; ಕನ್ನಡ ಕವಿತೆಯು ಎರಡನೇ ಪುಸ್ತಕದೊಳಗಿನ ೫೯–೧೯ ಪಾಠಗಳು ಪೂರಾ ಅರ್ಥ ಸಹಿತ.

(೪) ಉರ್ದು:—ತವ್‌ಬತುನ್‌ನಸೂಹ್.

ಧಾರವಾಡ
೩೦ ಗಿಸ್-೧೦-೧೯೦೧. } B. R. Sahasrabudhe,
ಎ. ಇ. ದಕ್ಷಿಣಭಾಗ.

CORRESPONDENCE.

ಪತ್ರವ್ಯವಹಾರ.

(೧೧೬ನೇ ಪುಟದಿಂದ ಮುಂದೆ ಸಾಗಿದ್ದು.)

ಪೇಟೆಯೊಳಗಿಂದ ತಂದ ಎಲ್ಲ ಪದಾರ್ಥಗಳನ್ನೂ ಅಡಿಗೆಯ

ಪಾತ್ರೆಗಳನ್ನೂ ಬೇರೆ ಸಾಮಾನು ಮುಂತಾದವುಗಳನ್ನು ಸ್ವಚ್ಛವಾಗಿಯೂ, ಕ್ರಮವಾಗಿಯೂ, ಅಚ್ಚುಕಟ್ಟಾಗಿಯೂ ತಕ್ಕಸ್ಥಳಗಳಲ್ಲಿ ಇಟ್ಟು, ಬೇಡಿದಾಗ ತಡವಿಲ್ಲದೆ ಕೊಡಬರುವಂತೆ ಮಾಡಿಬಿಡಬೇಕು ಸ್ತ್ರೀಯರು ತಮ್ಮ ಕೆಲಸಗಳನ್ನು ತಾವೇ ಮಾಡಬೇಕಲ್ಲದೆ, ಅನ್ಯರ ಮೈ ಮೇಲೆ ಹೊತ್ತೊಗೆದು ಹೊತ್ತುಗಳೆಯುತ್ತ ಕೂಡ್ರುವದು ವಿಹಿತವಲ್ಲ. ಶರೀರಕ್ಕೆ ಕೆಲಸ ಕೊಡುವದರಿಂದ ಅದು ನಿರೋಗವಾಗಿಯೂ, ಬಲಕಟ್ಟಾಗಿಯೂ, ಮನಸ್ಸು ಶಾಂತವಾಗಿಯೂ, ನಿರ್ಮಲವಾಗಿಯೂ, ಇರುವದು. ಶ್ರೀಮಂತರಾದ ಕೆಲ ಜನ ಹೆಂಗಸರ ಮನೆಯಲ್ಲಿ ಅನ್ಯರ ಕಡಿಯಿಂದ (ತೊತ್ತು, ಆಳು, ಮುಂತಾದವರಿಂದ) ಕೆಲಸ ಮಾಡಿಸುವ ಪ್ರಸಂಗ ಬೀಳಬಹುದು. ಅಂಥಲ್ಲಿ ಅದಷ್ಟು ಪ್ರೀತಿಯಿಂದಲೂ, ಜಾಣತನದಿಂದಲೂ, ಅನ್ಯರ ಕಡಿಯಿಂದ ಕೆಲಸತಕ್ಕೊಳ್ಳುವದು ಮನೆಯೊಡತಿಯು ಕೆಲಸವೆಂಬುದು ಅವರ ಕೂಡ ಹೆಚ್ಚು ಮಾತಾಡದೆಯೂ ನಗದೆಯೂ, ಅಶ್ಲೀಲವಾದ ಮಾತುಗಳನ್ನಾಡದೆಯೂ, ತಮ್ಮ ಕೆಲಸದ ಪೂರ್ತಿ ಅಚ್ಚುಕಟ್ಟಾಗಿ ಅಳತೆಯಿಂದ ಮಾತಾಡುತ್ತಲೂ, ಅವರನ್ನು ಹುರಿದುಂಬಿಸಿ ತಮ್ಮ ಕೆಲಸವನ್ನು ಕೊನೆಗಾಣಿಸಿಕೊಳ್ಳಬೇಕು. ಒಂದಾನೊಂದು ಸಮಾರಂಭದ ಕಾಲದಲ್ಲಿ ಸ್ತ್ರೀಯು ಊಟಕ್ಕೆ ಹಾಕಬೇಕಾದ ಪ್ರಸಂಗ ಬಿದ್ದಲ್ಲಿ ಪಂಕ್ತಿಭೇದವನ್ನು ಮಾಡದೆ, ಎಲ್ಲರಿಗೂ ಒಂದೇ ಸವನೇ ಹಾಕಬೇಕು. ಮನೆಯ ಯಜಮಾನಳು ಒಂದು ವೇಳೆ ತನಗೆ ನೀಡಲನುಕೂಲವಿಲ್ಲದಿದ್ದರೆ, ತನ್ನ ಸರ್ವಮಂಡಳಿಗೂ ಸೇವಕ ಜನರಿಗೂ ಈ ಭೇದವರ್ತನವನ್ನು ಮಾಡಬಾರದೆಂದು ಚೆನ್ನಾಗಿ ತಿಳಿಯು ಹೇಳಬೇಕಾಗುವದು.

ಮನೆಯಲ್ಲಿರುವ ಎಲ್ಲ ಜನರ ಸಂಗಡಲೂ, ಮರ್ಯಾದೆಯಿಂದಲೂ, ಪ್ರೀತಿಯಿಂದಲೂ, ಭಕ್ತಿಯಿಂದಲೂ ನಡಕೊಳ್ಳಬೇಕು. ಯಾರೊಡನೆಯಾದರೂ, ಸಿಟ್ಟಿನಿಂದ ಮಾತಾಡದೆ ಒಳ್ಳೇ ಅಂತಃಕರುಣದಿಂದಲೂ, ಸಮಯೋಚಿತವಾಗಿಯೂ, ಉತ್ತಮ ರೀತಿಯಿಂದಲೂ, ವಿನಯವಾಗಿ ಭಾಷಣಮಾಡತೊಡಗಬೇಕು. ತಮ್ಮ ಸ್ವಾತಂತ್ರ್ಯವನ್ನು ವಹಿಸಿಕೊಂಡು ಅವರ ಮೇಲೆ ಅಧಿಕಾರವನ್ನು ತೋರಿಸಬಾರದು. ಅವರ ಅಭಿಪ್ರಾಯಕ್ಕೆ ವಿರೋಧವಾಗಿ, ತನ್ನ ಮನಸಿಗೆ ಬಂದಂತೆ ನಡೆಯಬಾರದು. ಅಸಂಗತವಾದ ಮಾತಗಳನ್ನಾಡ

ಬಾರದು. ಸ್ವಾರ್ಥವನ್ನು ಸಾಧಿಸಿಕೊಂಡು ಗುರುಹಿರಿಯರಿಗೆ ನಮ್ರತೆಯಿಂದಲೂ, ಮಮತೆಯಿಂದಲೂ, ವಿಧೇಯರಾಗಿದ್ದು ಸದ್ವರ್ತನದಿಂದ ನಡೆಯಬೇಕು. ಯಾರೊಡನೆಯಾದರೂ ದ್ವೇಷಭಾಷಣ ತರವಲ್ಲ.

ಊಟವಾದ ಮೇಲೆ ವ್ಯರ್ಥವಾದ ಕೆಲಸಗಳನ್ನು ಅಂದರೆ ಸುಮ್ಮನೇ ಕೂಡ್ರುವದೂ, ನಿಲ್ಲುವದೂ, ಮಲಗುವದೂ, ಹರಟೆಯ ಕೊಚ್ಚುವದೂ ಇತ್ಯಾದಿಗಳನ್ನು ಮಾಡತೊಡಗದೆ ಮನೆಯಲ್ಲಿ ಇಲ್ಲದ ಅವಶ್ಯವಾದ ಜೀನಸುಗಳನ್ನು ತರಿಸುವದಕ್ಕಾಗಿ ತಮ್ಮ ಪತಿಗಳಿಗೆ ಆದರದಿಂದ ಸೂಚನೆಯ ಮಾಡಬೇಕು. ತುರ್ತ ತಮಗೆ ಬೇಕಾಗಿದ್ದಷ್ಟನ್ನೇ ತರಸಲಿಕ್ಕೆ ಹೇಳಬೇಕಲ್ಲದೆ ಕಾರಣವಿಲ್ಲದೆ ಪ್ರಪಂಚದಲ್ಲಿ ಹೆಚ್ಚು ಹಣವನ್ನು ವೆಚ್ಚ ಮಾಡುವಂತೆ ವರ್ತನವಿಡುವದು ಸ್ತ್ರೀಯಳ ಮುಖ್ಯವಾದ ಸ್ತುತ್ಯ ಕರ್ತವ್ಯವಲ್ಲ. ಆದಷ್ಟು ಮಿತವೃತ್ತಿಯಿಂದ ನಡಿಯುವದು ಬಹು ಅಗತ್ಯವುಂಟು. ಈ ಪ್ರಕಾರದ ಸ್ತ್ರೀಯರು ತಮ್ಮ ಪತಿಗಳಿಗೆ ಸಹಾಯಕರಾಗಿಯೂ, ಹಣವನ್ನು ಕೂಡಿಡುವವರಾಗಿಯೂ, ಇರುವರೆಂಬದರಲ್ಲೇನೂ ಅನುಮಾನವಿಲ್ಲ. ಇಂಥವರೇ ಮೇಲಾದ ಗೃಹಸ್ಥಾಶ್ರಮಕ್ಕೆ ತಕ್ಕವರೆಂದು ಹೇಳಬಹುದು. ಗಂಡನು ಮನೆಯಲ್ಲಿ ಇಲ್ಲದಾಗ ಸ್ತ್ರೀಯಳೇ ಪುಣ್ಯಸಾಧನಾರ್ಥವಾಗಿ ದಾನ ಧರ್ಮಾದಿ ಸತ್ಕಾರ್ಯಗಳ ಕಡಿಗೆ ಲಕ್ಷಿಸಬೇಕಾದ ಮೂಲಕ, ಮಿತಿಯಿಂದ ವೆಚ ಮಾಡಿ, ಅದರ ಲೆಖ್ಖವನ್ನು ತನ್ನ ಪತಿಗೆ ತಿಳುಹಿಸಬೇಕು. ದೇಶಪ್ರಚಾರದಂತೆ ವ್ಯಂಗರನ್ನು ಕಂಡು ನಗುವದೂ, ಹಾಸ್ಯ ಮಾಡುವದೂ, ಜನರಲ್ಲಿ ಬಹಳ ವಾಡಿಕೆಯಾಗಿದೆ. ಆದರೆ ಹಾಗೆ ಮಾಡದೆ ತಮ್ಮ ಶಕ್ತಿಯ ಮಟ್ಟಿಗೆ ಅಂಥವರಿಗೆ ಸಹಾಯ ಮಾಡಿ ಹಾದಿಗೆ ತರುವದು ಯೋಗ್ಯವು. ಸಾರಾಂಶ—ಅನ್ನದಾನ, ವಸ್ತ್ರದಾನಗಳನ್ನು ಮಾಡುವದು ಸ್ತ್ರೀಯರಿಗೆ ಬಹು ಭೂಷಣಾಸ್ಪದವೂ, ಕೀರ್ತಿದಾಯಕವೂ, ಬಹು ದೊಡ್ಡ ಪುಣ್ಯವೂ, ಮರ್ಯಾದೆಯೂ ಆಗಿರುವದು. ಯಥಾಶಕ್ತಿ ಈ ದಾನಗಳನ್ನು ಮಾಡುವವರೇ ಧನ್ಯರೆಂದ ಪುರಾಣಾದಿಗಳು ಸ್ಮೃತಿಸಾದಿಸುತ್ತವೆ.

(ಸಶೇಷ

ಪರ್ಮಾಣಿ ಪಗೂಲು

ಧಾರವಾಡ ಜಿಲ್ಲೆ

ರಾ. ಸಾ. ಡೆ. ಇ. ರಿಂದ ಅಕ್ಟೋಬರ ಬಾ. ಮೈಗಂಗಡಿ

ಬೆಳಗಾವ ಜಿಲ್ಲೆ.

ರಾ. ಸಾ. ಡೆ. ಇ. ರಿಂದ ಅಕ್ಟೋಬರ ಬಾ. ಗಗ್ಗಡಿಗೆ

ವಿಜಾಪೂರ ಜಿಲ್ಲೆ.

ರಾ. ಸಾ. ಡೆ. ಇ. ರಿಂದ ಅಕ್ಟೋಬರ ಬಾ. ಗಟ್ಟಿಗಳಿಗೆ

ಕಾರವಾರ ಜಿಲ್ಲೆ.

ರಾ. ಸಾ. ಡೆ. ಇ. ರಿಂದ ಅಕ್ಟೋಬರ ಬಾ. ಗಂಡಿಗೆ

ಕಿರುಕಾಳ.

ಮೈ. ಇ. ಜನರಲ್ ಆಫ ಪಿಜ್ಯುಕೇಶನ ಮೈಸೂರಿಂ
ದ ರ್ಗಿಂಗ ಬಗ್ಗೆ ರಂಗಿ

ರಾ. ಸಾ. ವಿ. ಇ ಧಾರವಾಡ ಇವರಿಂದ ರ್ಗಿಂಗ ಬಾ ರಂಗಿ

ಮುಹಾಲಿಂಗಪೂರ ಗ. ಸಾ. ಮಾಸ್ತರರಿಂದ ರ್ಗಿಂಗ ಬಗೆ ರಂಗಿ

ಹಲ್ಯಾಳ ಮ್ಯು. ೪ ಸಾಲಿಗಳಿಂದ ರ್ಗಿಂಗ ಬಗ್ಗೆ ಚರಂಗಿ

ಗುಡಗೇರಿ ೬ ಸಾಲಿಗಳಿಂದ ರ್ಗಿಂಗ ಬಗ್ಗೆ ಸಿರಂಗ

ಭಟಕಳ ಮ್ಯು. ೨ ಸಾ. ರ್ಗಿಂಗ ಬಗ್ಗೆ ಗಂರಂಗ

ಹೊನ್ನಾವರ ಮ್ಯು. ೩ ಸಾ. ರ್ಗಿಂಗ ಬಗ್ಗೆ ಎಗ್ಗಿ

ಸದರ ಸದರ ರ್ಗಿಂಗ ಬಗ್ಗೆ ಎರಗಿ

---

* ಇದರೊಳಗೆ ಸೇನಾದರರು ಪಲ್ಲು ಇದ್ದರೆ ಅದನ್ನು ಬಿಟ್ಟು
ಮಾಡಿ ತೆಗೆಯಬೇಕು

REGISTERED NO B. 19

ಸವದಾಗರ ಬು. ಡಿಪೋ.

ಇಲ್ಲಿ ಶಾಲೋಪಯೋಗಿ ಕನ್ನಡ ಉರ್ದು, ಮಹಾರಾಷ್ಟ್ರ ಪುಸ್ತಕಗಳು ಕಥೆ ಪುಸ್ತಕಗಳು, ಗಣಿತ ನಾಟಕಪುರಾಣ ಮೊದಲಾದವು ಅಮೆರಿಕನ್ ಪೋಸ್ಟ್ ಆಫೀಸ್ (ಎ. ಪಿ.) ತರಿಸಿದಲ್ಲಿಗಳಮಿನ ತಕ್ಕ ಕಮಿಶನ್ನ ಸಿಗುವದು.

ಹಾವೇರಿ. ಜಿಲ್ಲಾ ಧಾರವಾಡ. } ಬುಕ್‌ಸೇಲರ ಮಹಮ್ಮದ ವಲಿ ಅಬ್ದುಲ್‌ಹಮಿದ ಸಾ॥ ಸವದಾಗರ.

ನ್ನ ಸಂಸ್ಕೃತದ ಪಲವು ಧಂಡಸ್ಸುಗಳನ್ನು (ಅವಕ್ಯಕತೆಯು ಬಂದಾಗ
ಕರಿಸಿದ್ದು ದಿಟವಷ್ಟೆ? ಅವುಗಳನ್ನು ಸ್ವೈರವಾಗಿ ವಿಶ್ರಮಿಸಿ ಹಾ
ವಷ್ಟಾರ್ಥವು ಸಿದ್ಧಿಸುವದೇ? ಕೆಳಗೆ ಬದಿಗೆ ಬಡವಿರುವ ಬಂಗಾರದ

ಣೀ, ಪಯಶ್ವಿನಿ, ಶಬರಿಣೀ: ! ಫ ವೈತ್ತಿಗಳನ್ನು ಬಿಂಬೀ ನಾಟಿ
ಮಿಕಲಕಾ, ತರಳ, ನ ವದ ನ್ಯ ಚಾಟುವಿಂದ ಅಂಜರ್, ಅವರ್ಗ
ವಿಬುಧಪ್ರಿಯಾ, ತರಂಗ, ನಾಟ್ಯರಸ್ಯ ತೋರುವದೇ? ರಣರ
ತವಪ್ಪನಿ. ತೊಡಲನ್ನೆ. ಚಟ್ಟಿ ಪಡೆಯುವದೇ

ಬು ಪ್ರೇಮಪೋರಿ ಪಸ್ಪರಗತಪಾತಿಕೊಂಡು, ಕಡೆಗೆ ಹೀಗೆ ಮು
ತೆ ಮೂಗು (ಪ್ರಾಸ) ಕೊಯ್ದು, ಕೈಕಾಲ್ (ಚರಣಾದಿ) ಗಡಿದು
ಮಾಡಿದ್ದಕ್ಕೆ ಆ ಧಂಡಸ್ಸುಗಳೂ ಅಸ್ಪೃಗಳವಾತೆಯಾವ ನೀರ್ಜೀವ
ಸೂ ಆತ್ಯಂತ ಧನ್ಯತೆಯನ್ನು ಪಡೆಯುವವೆಂಬದಕ್ಕೆ ಏನೇನ
ಹವಿಲ್ಲ! ಅಚ್ಚರಿಯೀನಂಪವೆ— ಇಷ್ಟಾಗಿಯೂ ಹೊಸಪದ್ಧತಿಯ
ಪ್ಪವೇ!! ಕಾಲಾಯ!!!

ಜ. ಮೈಸೂರವರು ನಗುತ್ತಾರೆಂದು ನಾವು ಆವರ ಅನುಕರಣ
ಪಡಾದರೆ, ಸಂಸ್ಕೃತಜ್ಞರು ನಗುತ್ತಾರೆಂದು ಅವರ ಅನುಪದ
ಅನಪೇಕ್ಷಣಾಗಿ ದುತಿಗೆ ವಿಭಕ್ತಿಯನ್ನಿಡಬೇಕೆಂದು ಯಾಕೆ ನಿಷ್ಕಾರಣ
ಬಾರದು? ಈ ತರವ ಪದಪ್ರತ್ಯಯನೇವು ಬುದ್ಧಿವನ್ನು ಬದಿಗೊತ್ತಿ
ವೈಕವನ್ನೂ ಸ್ವಾಭಿಮಾನವನ್ನೂ ಹಿಂಬಾಲಿಸಿ, (ಧಾರಣಾ
ಸ್ಥರಾದ) ನಾವೇ ಈ ಬಗ್ಗೆ ನಿಶ್ಚಯಿಸುವ ಬೇಕಾಗಿದೆ. ವೈಜ್ಞಾನ
ನವರು, ಪ್ರಾಂತೀಯರು, ರಾಷ್ಟ್ರೀಯರು, ತಮ್ಮ ನಿಮ್ಮ ಕ್ಷೇತ್ರ
ಸಾಯುದ್ಧಿಯೊಳ್ಳನೆಯ ಪದವು ಸಾಧಿಸ್ಪಾನವಾದ ಪತ್ರಾಸ್ಪದವಾಗಿದೆ
ಪ್ರಾಂತದ ವ್ಯಾಪಕಾರಿಕ ಭಾವಾನವಿಧವು, ಎಲ್ಲಿ ಮೈಸೂರ
ಹೋಲುವ್ಯದೆ? ಅದನ್ನು ಬಿಚಿಡಿಸಲಿಕ್ಕೆ ಯಾರು ಯತ್ನಿಸಿರುವರು?
ಪರಿಶ್ರಮಗೊಳ್ಳುವರಿಂಪ ಧ್ಯೇಯವಾವದೂ ಲಭಿಸುವದೇ?

ಜ. ಸಾಮಿಕಕಾರವೂ ಗಾಯಕರದೂ ರಾಗವಾದಾಗ್ಯೆ ವಿಕ್ಷಾಂತಯ
ಗಿ ಎಲ್ಲಿ ವಿಘಟ್ಟನೆಯು ಬಾರದೆ ನಿಷ್ಕಲುವದೋ ಅಲಾಗೆ ಗಾಯಕ
ಪೋಷಾಪನ್ನು ಪಿಡ್ಡಿಸುವುದು. ಗಾಯಕರಲ್ಲಿಯೂ ವಿಮರ್ಶವು

ಸಂಪುಟ : ಐದನೆಯ

1902

ಜೀವನ ಲೆಕ್ಕಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಮಹೋದ

ಪುಸ್ತಕ ಸ್ಪರ್ಧಾನ ೧೯೮೯



ಶತಮಾನೋತ್ತರ ಬೆಳ್ಳಿ ಹಬ್ಬ

(ಎಸ್.ಎಲ್.ಸಿ. ಬ್ಯಾಚ್ ೧೯೮೯)

ವರ್ಷ 1902

ಸಿ. ಚನ್ನಬಸಪ್ಪನವರು

(ಮಾಜಿ-ಶಿಕ್ಷಕರು)

ಸೇವಾ ಸಾಧನೆ

ಸುವರ್ಣ ಶಾಲಾ ಪತ್ರಿಕೆ



ಲೆಕ್ಕಣ ಸಂತಸ

ಸರಕಾರಿ ಉಸಾಧ್ಯಾಯರ ಶರಬೀಕ ನಿಗ್ಯಾಲಯ

ಟೆಪ್ಪಾಟಿ ಚನ್ನಬಸಪ್ಪ ಪ್ರೌಢ, ರೂನ್ವರಸ್ಸೆ, ಧಾರವಾಡ

KANARESE
SCHOOL PAPER.

ಪುಸ್ತಕ ೩೮] ಜಾವ್ಯೂಆರಿ ೧೯೦೨. [ಸಂಚಿಕೆ ೧.

ಅನುಕ್ರಮಣಿಕೆ.

	ಪುಟ.
ವಿದ್ಯಾಸುಧಾರಣಾ ಸಂಬಂಧಿಯು ವೃತ್ತಾಂತಗಳು	೧–೨
ಶಿಕ್ಷಾಕ್ರಮ	೨–೧೫
ಶಿಷ್ಟಕನ ಕೆಲಸವೂ ಕರ್ತವ್ಯವೂ ...	೧೫–೧೭
ನೋಟೀಸು	೧೮
ಪತ್ರವ್ಯವಹಾರ	೧೮–೨೨
ವರ್ಥಪ್ಪಾಯಿಜ ಪರೀಕ್ಷೆಯ ಪ್ರಶ್ನೆಗಳು ...	೨೨–೨೪

CONTENTS.

1. Educational Intelligence and Useful Notes	1–7
2. Manual of method	7–15
3. Teacher's Work & Duty (Communicated)	15–17
4. Departmental Notice	18
5. Correspondence	18–22
6. Question Paper Wurth Prize Examination	22–24

DHARWAR:
PRINTED AT THE KARNATIC BOOK DEPOT PRESS,
1902.

REGISTERED No. B. 19

ಕನ್ನಡ ಶಾಲಾಪತ್ರಿಕೆಯ ವರ್ಗಣಿ ವರ್ಷಕ್ಕೆ ಮುಂಗಡ ರೂ ೨.
ಒಂದು ಸಂಚಿಕೆಗೆ ೨ ೯

ಪ್ರಕಟನೆಗಳನ್ನು ಛಾಪಿಸುವ ದರಗಳು.

ಮೊದಲ ಪುಟ ೪ ಪಂಕ್ತಿಗಳವರೆಗೆ ೧ ರೂ.
ಮಿಕ್ಕಿರುವಷ್ಟಾರೆ ಪುಟ್ಟರೆ ೪ ,, ೧ ರೂ
ಕಡೆಯಷ್ಟಾರೆ ಪುಟ್ಟರೆ ೪ ,, ೧ ರೂ.

ಸೂಚನೆಗಳು.

೧. ಶಾಲಾಪತ್ರಿಕೆಳಿಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.
೨. ಶಿಷ್ಟೋಲೇಖಿಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ
ಹಾಸಲು ಬೀಳುವದು.
೩. ಭಾಷಾಂತರ ಮಾಡಿ ಛಾಪಿಸುವಹಾದರೆ ಮೇಲಿನ ದರದ ೫
ಪ್ಪಟ್ಟಿ ಹೀ ಬೀಳುವದು.
೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.
೫. ಪ್ರಕಟನೆ ಇಷ್ಟ ಹೊರ್ತು ಉತ್ತರ ಶಿಗಲಾರದು.

Raoji B. Karandikar
ವ್ಯವಸ್ಥಾಪಕರು ಕ. ಶಾಲಾಪತ್ರಿಕೆ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಥಮವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ।
ಜಯಸುತ್ತಂ ಪ್ರತಿಪಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ಪ್ರಯಬಿಂದಿತ್ತವಿಪ್ರೋದುವರ್ಗೆಸುಗುಣಂ ತೋರಲ್ಕೆಕೈಕೊಂಬುದೈ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರಿ॥೧

ಪುಸ್ತಕ ೩೮] ಜಾನ್ಯೂಆರಿ ೧೯೦೨. [ಸಂಚಿಕೆ ೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

विद्वान् सर्वत्र पूज्यते ॥

ನಾವು ಕಳೆದ ತಿಂಗಳ ಪತ್ರಿಕೆಯಲ್ಲಿ ಸೀನಿಯರ್ ರ್ಯಾಂಗ್ಲರ ಎಂಬ ಗೌರವದ ಬಿರುದನ್ನು ಪಡೆದ ಪ್ರೊಫೆಸರ ರಘುನಾಥ ಪುರುಷೋತ್ತಮ ಪರಾಂಜಪೇ ಎಂಬವರಿಗೆ ಕೆಂಬ್ರಿಜ್ ನಗರದ ವಿದ್ಯಾಪೀಠದವರು ಸೇಂಟ್‌ಜಾನ್ಸ್ ಕಾಲೇಜಿನ ಫೆಲೊಗಳನ್ನಾಗಿ ನೇಮಿಸಿದ್ದನ್ನು ಉಲ್ಲೇಖಿಸಿರುವದು ವಾಚಕರಿಗೆ ನೆನಪಿದಬಹುದು. ವರುಷಕ್ಕೆ ೭೦೦ ಪೌಂಡುಗಳು ಅಂದರೆ ಸುಮಾರು ೭೫೦೦ ರೂಪಾಯಿಗಳನ್ನು ಬಾಳುವ ಈ ಫೆಲೋಶಿಪ್ಪು ೩ ವರ್ಷ ನಡೆಯುವದು. ಈ ಅವಧಿಯಲ್ಲಿ ಗಣಿತ ವಿಷಯಕ ವ್ಯಾಸಂಗವನ್ನು ಚೆನ್ನಾಗಿ ಸಾಗಿಸಿದರೆ ಈ ಫೆಲೋಶಿಪ್ಪು ಮುಂದೆ ೩ ವರ್ಷ ನಡೆಯುವದು. ಈವಿದ್ವನ್ಮಣಿಗಳು ದಿಸಂಬರ ತಿಂಗಳ ೫ನೇ ತಾರೀಖಿನ ದಿವಸ ತಮ್ಮ ಜನ್ಮಭೂಮಿಯಾದ ಹಿಂದುಸ್ಥಾನಕ್ಕೆ ಬಂದಿರುವರು. ಬರುವ ಕಾಲವು ಮುಂಚಿತವಾಗಿಯೇ ಗೊತ್ತಿದ್ದವರಿಂದ ಮುಂಬಯಿ ಪಟ್ಟಣದೊಳಗಿನ ಜನರು ಹಿಂಡುಗಟ್ಟಿಕೊಂಡು ಕಡಲದಂಡೆಯಲ್ಲಿ ಹಡಗದ ಹಾದಿಯನ್ನು ನೋಡುತ್ತ ನಿಂತುಕೊಂಡಿದ್ದರು ಹಲಕೆಲವರು ಹಡಗದವರೆಗೆ ಹೋಗಿ ಕರಕೊಂಡು ಬರಬೇಕೆಂದು ಆತುರ ಪಟ್ಟರು. ಆದರೆ ಅಲ್ಲಿಯವರೆಗೆ ಯಾರನ್ನೂ ಹೋಗಗೊಡಲಿಲ್ಲ. ಡಾ. ಸರ ಭಾಲಚಂದ್ರ,

ಸೌ. ಗೋಖಲೆ, ಮಿ. ವಾಚ್ಚಾ, ಪ್ರೊಫೆಸರ್ ಕರ್ವೆ ಮೊದಲಾದ ದೊಡ್ಡ ಜನರು ಮಾತ್ರ ಥಕ್ಕೆಯವರೆಗೆ ಹೋಗಿದ್ದರು. ರ್ಯಾಂಗ್ಲರರ ಮುಖವನ್ನು ನೋಡಿದ ಕೂಡಲೆ ಸಾವಿರಾರು ಜನರು ಚಪ್ಪಳಿಯನ್ನಿಕ್ಕುತ್ತ ಜಯಘೋಷವನ್ನು ಮಾಡಿದರು. ರಘುನಾಥರಾಯನು ಬಾಂಡ್ರ ಪೀಯರಿಯ ನೆರೆಯಲ್ಲಿರುವ ಭವ್ಯವಾದ ಮಂದಿರದಲ್ಲಿ ಪ್ರಮುಖ ಜನರೊಡನೆ ಪ್ರವೇಶಿಸಿ ಆಸನದ ಮೇಲೆ ಕೂತ ಬಳಿಕ ಡಾಕ್ಟರ ನರ ಭಾಲಚಂದ್ರರವರು ಸ್ವಾಗತಪರವಾದ ಭಾಷಣವನ್ನು ಮಾಡಿದರು. ತಾವು ರ್ಯಾಂಗ್ಲರ ಪದವಿಯನ್ನು ಪಡೆದದ್ದರಿಂದ ನಮಗಂತೂ ಹೇಳಕೂಡದಷ್ಟು ಆನಂದವಾಗಿರುವದು ನಿಜವು. ಇದಲ್ಲದೆ ಹಿಂದೂ ಜನರು ಯೋಗ್ಯ ಅನುಕೂಲಗಳು ದೊರೆದರೆ ಬೇಕಾದಂಥ ಸಾಹಸದ ಕಾರ್ಯವನ್ನು ಸಿತ್ಕರಿಸಲಿಕ್ಕೆ ತಕ್ಕವರಿದುತ್ತಾರೆಂಬ ಸಂಗತಿಯು ಜಗಕೆಲ್ಲ ವಿಪ್ರತೀತವಾಯಿತು ಎಂದು ನುಡಿದು ರ್ಯಾಂಗ್ಲರೆದವರ ಕಂಠದಲ್ಲಿ ಪುಷ್ಪಮಾಲೆಯನ್ನು ಹಾಕಿದರು. ಕೈಯಲ್ಲಿ ಹೂವಿನ ಗಜರೆಗಳನ್ನು ಕಟ್ಟುವ ಹೊತ್ತಿನಲ್ಲಿ ಮಿ. ವಾಚ್ಚಾ ಇವರು "ಇವು ಬರೇ ಹೂವಿನ ಗಜರೆಗಳಲ್ಲ, ಶಾಸ್ತ್ರಗಳನ್ನು ಉತ್ಕೃಷ್ಟಗೊಳಿಸಲಿಕ್ಕೆಂದು ಕಟ್ಟುವ ಜಯ ಕಂಕಣವೇ ದು" ನುಡಿದರು. ಬಳಿಕ ನ್ಯೂ ಹಾಯಸ್ಕೂಲ, ಎಲ್ಫಿನಸ್ಟನ್ ಹಾಯಸ್ಕೂಲ, ಮಿಲನ್‌ಸ್ಕೂಲ, ಗೋಕುಲಬಾಸ ತೇಜಪಾಲ ಹಾಯಸ್ಕೂಲ ಮುಂತಾದ ಶಾಲೆಗಳ ಮುಂದಿಂದ ಊರೊಳಗೆ ಬಂದರು. ಆಯಾ ಶಾಲೆಗಳ ಗುರುಗಳು ತೋರಣ-ಪತಾಕೆಗಳಿಂದ ಶೃಂಗರಿಸಿಕೊಂಡು ವಿದ್ಯಾರ್ಥಿಗಳಿಂದೊಡಗೂಡಿ ಇವರನ್ನು ಸತ್ಕರಿಸಬೇಕೆಂದು ಶಾಲಾಗ್ರಹದ ಬಾಗಿಲಲ್ಲಿ ನಿಂತುಕೊಂಡಿದ್ದರು. ಎಲ್ಫಿನಸ್ಟನ್ ಹಾಯಸ್ಕೂಲ ಮುಂದೆ ಬರಲು, ಆ ಕಾಲೇಜಿನ ಪ್ರಿನ್ಸಿಪಾಲರು ತಮಗಾದ ಆನಂದವನ್ನು ವ್ಯಕ್ತಪಡಿಸಿದ್ದಲ್ಲದೆ "ನೀವು ಹಿಂದುಸ್ಥಾನದೊಳಗಿನ ಬಂದು ಬೆಲೆಯುಳ್ಳ ರತ್ನವಾಗಿದ್ದೀರೆಂದು" ಆಡಿ ತೋರಿಸಿದರು.

ಮರುದಿನದ ಬ್ರಾಹ್ಮಣಸಭೆಯಲ್ಲಿ ರ್ಯಾಂಗ್ಲರರವರ ಸತ್ಕಾರ ಸಮಾರಂಭವು ನಡೆಯಿತು. ಅಧ್ಯಕ್ಷರಾದ ಡಾಕರ್ವ

ರ ಭಾಲಚಂದ್ರರು– ತಾವು ಗಣಿತ ಶಾಸ್ತ್ರದ ಅಭ್ಯಾಸವನ್ನು ಬಿಚ್ಚಿಸುತ್ತ ಮೊದಲೇ ಗೊತ್ತು ಮಾಡಿಟ್ಟುಕೊಂಡಂತೆ ಫರ್ಗ್ಯುಸನ್ ಕಾಲೇಜದಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುತ್ತ ಸ್ವಾರ್ಥವನ್ನು ತ್ಯಜಿಸಿ ದೇಶೋನ್ನತಿಗಾಗಿ ಕಾಯುವನ್ನು ಸವಿಸುವ ಬಗೆಯನ್ನು ಸ್ವಜನರಿಗೆ ತೋರಿಸುತ್ತ ಕೇರೋರಂತ, ಬಾಪೂಶಾಸ್ತ್ರಿ ಮೊದಲಾದ ಗಣಿತಶಾಸ್ತ್ರ ವಿಶಾರದರನ್ನು ನುರಿಸುತ್ತ ಬಹುಕಾಲ ಬಾಳಿರಿ; ಎಂಬ ಅರ್ಥದ ಭಾಷಣವನ್ನು ಮಾಡಿದರು. ಅದೇ ದಿವಸ ಗ್ರ್ಯಾಜೂಯಿಟ್ ಅಸೋಸಿಯೇಶನ್‌ದವರು ವಿದ್ಯಾಮಂದಿರದ ಭವ್ಯವಾದ ಮಂದಿರದಲ್ಲಿ ಬಂದು ಮಾನಪತ್ರವನ್ನು ಕೊಟ್ಟರು. ಈ ಸಭೆಗೆ ಪ್ರೊಫೆಸರರಾದ ನರಾಜವಾಡೆ, ಭಾಟೆ, ಕಾಥವಟೆ, ಅಡವ್ಹೊಕೇಟ ಸಿಟ್ಲೂರ, ಶಾಮರಾವ ವಿಠ್ಠಲ, ಭಾಜೀಕರ, ಶೇಟ ನರೋತ್ತಮದಾಸ, ಕಾಕ್ಟರ ನಗಾರ, ಮಿ ಬೇಂಬಸೆಗ ದಸ್ತೂರ ವಾಚ್ಟ ಮುಂತಾದ ಬಹು ಜನ ಪ್ರಮುಖರು ಬಂದಿದ್ದರು. ನಾಮದಾರ ಮೇಥಾ ನಾರಾಯಣರು ಅಧ್ಯಕ್ಷರಾಗಿದ್ದರು ಮಾನಪತ್ರವು ಬೆಳ್ಳಿಯ ಡಬ್ಬಿಯಲ್ಲಿ ಹಾಕಿ ಕೊಡಲ್ಪಟ್ಟಿತು. ಅದರೊಳಗಿನ ಅರಬ್ಬಿಯ ವಾಕ್ಯರ ಭಾಲಚಂದ್ರರವರ ಭಾಷಣದಂತೆ ಇತ್ತು- ಈ ಮಾನಪತ್ರ ಸ್ವೀಕರಿಸುವ ನಮ್ಮಯವಲ್ಲಿ ರಘುನಾಥರಾಯರು ನುಡಿದದ್ದೇನೆಂದರೆ- ಇಂಥಾ ಮಹಾ ಪುರುಷರಿಂದ ಹೊಗಳಿಸಿಕೊಳ್ಳುವಷ್ಟು ಯೋಗ್ಯತೆಯು ನನ್ನದಲ್ಲ. ಈ ಪದವಿಯನ್ನು ಪಡೆದ ಬಳಿಕ ನನ್ನ ತಲೆಯ ಮೇಲೆ ದೊಡ್ಡ ಹೊಣೆಯು ಬಂದಿತೆಂದು ತಿಳಿದು ಸೊರೆಯೇ ಬಂತೆಂದು ಎಣಿಸುತ್ತೇನೆ. ಆದರ ಋಣದಿಂದಲೂ ಜೋರಿ ಬಗೆಯಿಂದಲೂ ಪ್ರೋತ್ಸಾಹನೆಯನ್ನು ಕೊಟ್ಟಂಥ ಹಿಂದುಸ್ತಾನ ಸರಕಾರವನ್ನೂ ಪ್ರೊ. ಕರ್ವೆ ಸಾಹೇಬರನ್ನೂ ಎಂದಿಗೂ ಮರೆಯೆನು. ಇ.

ಬಳಿಕ ಸಭಾ ವಿಸರ್ಜನವಾಯಿತು. ಈ ಸಭೆಗೆ ರಘು ನಾಥರಾಯರು ಅಂಗಿ ರುಮಾಲು ಮುಂತಾದ ದೇಶೀ ವೇಷಗಳಿಂದ ಬಂದಿದ್ದರು. ಇದೊಂದು ಲಕ್ಷ್ಯವಲ್ಲಿಡತಕ್ಕ ಸಂಗತಿಯು.

ಹೋದ ತಿಂಗಳಲ್ಲಿ ಧಾರವಾಡ ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆಯು ಮುಗಿಯಿತು. ಈ ಸಾರೆಯ ಪರೀಕ್ಷೆಗೆ ಧಾರವಾಡ ಜಿಲ್ಲೆಯಿಂದ ೧೧೩ ಮಂದಿ, ಬೆಳಗಾವಿ ಜಿಲ್ಲೆಯಿಂದ ೬೩ ಮಂದಿ, ವಿಜಾಪೂರ ಜಿಲ್ಲೆಯಿಂದ ೪೪ ಮಂದಿ, ಕಾರವಾರ ಜಿಲ್ಲೆಯಿಂದ ೧೩ ಮಂದಿ ವಿದ್ಯಾರ್ಥಿಗಳು ಬಂದಿದ್ದರು. ನಾಲ್ಕೂ ಜಿಲ್ಲೆಗೆ ಕೂಡಿ ಒಟ್ಟು ೭೬ ವಿದ್ಯಾರ್ಥಿಗಳನ್ನು ಸಂಬಳದೊಂದಿಗೆ ತಕ್ಕೊಳ್ಳುವರೆಂದು ಗೊತ್ತಾಗಿದೆ. ಇದಲ್ಲದೆ ಸಂಬಳವಿಲ್ಲದ ೧೦-೧೫ ಮಂದಿ ವಿದ್ಯಾರ್ಥಿಗಳನ್ನು ತಕ್ಕೊಳ್ಳುವರು. ಒಟ್ಟು ಸುಮಾರು ನಾಲ್ವತ್ತು ಜನರು ಕಾಲೇಜದಲ್ಲಿ ಸೇರಿರುವರೆಂದು ತಿಳಿದದೆ. ಆದರೆ ಆಯಾ ಜಿಲ್ಲೆಯವರನ್ನು ಆಯಾ ಜಿಲ್ಲೆಗಾಗಿ ತಕ್ಕೊಳ್ಳುವದು ಲೇಸು. ಒಂದು ವೇಳೆ ಆಯಾ ಜಿಲ್ಲೆಯಲ್ಲಿ ಚಲೋ ವಿದ್ಯಾರ್ಥಿಗಳು ಸಿಗದಿದ್ದರೆ ಆಯಾ ಜಿಲ್ಲೆಗಳ ಗಡಿವಾಡದ ವಿದ್ಯಾರ್ಥಿಗಳನ್ನಾದರೂ ತಕ್ಕೊಳ್ಳಲಿಕ್ಕೆ ಅಡ್ಡಿಯಿಲ್ಲ ಒಟ್ಟಿನ ಮೇಲೆ ನಮ್ಮ ಮತವೇನೆಂದರೆ- ತಮತಮಗೆ ತಮತಮ್ಮ ಜಿಲ್ಲೆಯು ಹವೆ, ನೀರು, ಭಾಷೆ, ಪರಿಸ್ಥಿತಿ ಮುಂತಾದವುಗಳಿಂದ ಉತ್ತಮವೆಂತಲೂ ಬೇರೆ ಜಿಲ್ಲೆಯು ಅಷ್ಟು ಉತ್ತಮವಲ್ಲೆಂತಲೂ ಪ್ರತಿ ಒಬ್ಬನ ತಿಳುವಳಿಕೆಯುಂಟು. ವಾಸಸ್ಥಳವು ಒತ್ತಟ್ಟಿಗೆ, ಕೆಲಸ ಮಾಡುವದು ಬೇರೊಂದು ಕಡಿಗೆ ಇರುವದರಿಂದ ಕೆಲವು ಗೃಹಕೃತ್ಯಗಳ ಅನಾನುಕೂಲತೆಗಳು ಬದಗುವವು. ಹೀಗಾಗಿ ಕೆಲಸ ಮಾಡುವವನ ಮನಸ್ಸು ಅಡಕೊತ್ತಿನಲ್ಲಿ ಶಿಕ್ಕ ಅಡಿಕೆಯಂತೆ ಆಗುವದು. ಇನ್ನು ಎರಡನೇ ಬಗೆಯಿಂದ ವಿಚಾರಿಸಿದರೆ ಮೇಲಾಟದ ಪರೀಕ್ಷೆಯಲ್ಲಿ ಹೆಚ್ಚು ಗುಣಗಳನ್ನು ಪಡೆದು ಮೇಲಿನ ನಂಬರವನ್ನು ದೊರಿಕಿಸಿದಂಥ ವಿದ್ಯಾರ್ಥಿಯನ್ನು ಬಿಟ್ಟು ಮಧ್ಯಮ ತರದ ಅಥವಾ ಕನಿಷ್ಠ ತರದ ಯೋಗ್ಯತೆಯ ವಿದ್ಯಾರ್ಥಿಯನ್ನು ತಕ್ಕೊಂಡರೆ ಪರೀಕ್ಷೆಯ ಉದ್ದೇಶಕ್ಕೂ ಸತ್‌ಶಿಕ್ಷಕರನ್ನುಂಟು ಮಾಡುವ ಕಾಲೇಜದ ಉದ್ದೇಶಕ್ಕೂ ಅತಂಕ ಬರುವದು ಇವೆರಡೂ ತೋದ ರೆಗಳನ್ನು ಸುಲಭವಾಗಿ ನೀಗಿ ಚಲೋ ವಿದ್ಯಾರ್ಥಿಗಳನ್ನು

ತಕ್ಕೊಳ್ಳುವ ಉಪಾಯಗಳನ್ನು ಕಾಲೇಜದ ಅಧಿಕಾರಿಗಳು ಕೈಕೊಳ್ಳುವರೆಂದು ನಂಬುತ್ತೇವೆ.

ಕಳೆದ ದಿಶಂಬರ ತಿಂಗಳಲ್ಲಿ ಫಿಮೇಲ ಟ್ರೇನಿಂಗ ಕ್ಲಾಸಿನ ಪ್ರವೇಶ ಪರೀಕ್ಷೆಯು ಆಯಿತು. ಒಟ್ಟಿಗೆ ೧೪ ಮಂದಿ ವಿದ್ಯಾರ್ಥಿನಿಯರು ಪರೀಕ್ಷೆಗೆ ಕುಳಿತಿದ್ದರು. ಇವರಲ್ಲಿ ಬೆಳಗಾವಿ ಜಿಲ್ಲೆಯವರು ೩ ಮಂದಿ, ವಿಜಾಪೂರ ಜಿಲ್ಲೆಯವರು ೩ ಮಂದಿ, ಧಾರವಾಡ ಜಿಲ್ಲೆಯವರು ೮ ಮಂದಿ ಇರುವರು ತೇರ್ಗಡೆ ಹೊಂದಿದ (೬) ಮಂದಿಯನ್ನು ವರ್ಗದಲ್ಲಿ ಶೇರಿಸಿಕೊಳ್ಳುವರೆಂದು ತಿಳಿದದೆ. ಗುಳೇದಗುಡ್ಡದಿಂದ ಬಂದ ಕ್ರಿಸ್ತಯನ್ ಹೆಣ್ಮುಮಕ್ಕಳಿಗೆ ಪಾದ್ರಿಯವರೇ ಆಶ್ರಯ ಕೊಡುವದಾಗಿ ತಿಳಿದದೆ. ಹಾಗಾದರೆ ಒಟ್ಟು ಹತ್ತರವರೆಗೆ ವಿದ್ಯಾರ್ಥಿನಿಯರಾಗುವರೆನ್ನಬಹುದು. ಈ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ೩ ಮಂದಿಗೆ ೭೦ ರೂಪಾಯಿದ ಸರ್ಟಿಫಿಕೇಟುಗಳೂ ಇಬ್ಬರಿಗೆ ೧೫ ರೂಪಾಯಿದ ಸರ್ಟಿಫಿಕೇಟುಗಳೂ ದೊರೆತಿರುವವು ಇವರು ತಮ್ಮ ನೇಮಕವಾದ ಸ್ಥಳಕ್ಕೆ ಹೋಗಿರುವರು. ಒಟ್ಟಿನ ಮೇಲೆ ಈ ಚಿಕ್ಕ ಸಂಸ್ಥೆಯು ಜವಾಬ್ದಾರಿಕರವಾಗಿ ನಡೆದಿರುವದೆಂದು ಹೇಳಬಹುದು.

ಮುಂಗವಂಥ ಮನುಷ್ಯ.

ಜಾವಾ ನಡುಗಡ್ಡೆಯಲ್ಲಿ ಅರ್ನೆಸ್ಟ ಹೇಕೆಲನೆಂಬವನೊಬ್ಬ ಶಾಸ್ತ್ರಜ್ಞನಿರುವನು. ಅವನಿಗೆ ಒಂದು ತರದ ಪ್ರಾಣಿಯು ದೊರೆತಿರುವದು. ಅದನ್ನು ಪೂರಾ ಮನುಷ್ಯರೊಳಗೂ ಪೂರಾ ಮುಂಗಗಳೊಳಗೂ ಎಣಿಸಲಿಕ್ಕೆ ಬರುವಂತಿಲ್ಲ. ಮುಂಗ ಮತ್ತು ಮನುಷ್ಯರ ಶಾರೀರಿಕ ಮಾನಸಿಕ-ಸ್ಥಿತಿಗಳಲ್ಲಿ ಬಹಳ ವೈಲಕ್ಷಣ್ಯವುಂಟು. ಆದರೆ ಈ ಸೊರೆತ ಪ್ರಾಣಿಯು ಮುಂಗನಿಗಿಂತ ಮನುಷ್ಯನನ್ನು ಹೆಚ್ಚಿಗೆ ಹೋಲುತ್ತದೆ. ಆದ್ದರಿಂದ ಇದು ಇವೆರಡು ಪ್ರಾಣಿಗಳ ಮಧ್ಯಸ್ಥಿತಿಯ ಪ್ರಾಣಿ ಇರಬಹುದೆಂದು ತರ್ಕಿಸುತ್ತಾರೆ. ಇದರ ತಲೆ ಸಣ್ಣನು, ಮುಖಮುದ್ರೆಯು ಜಾಣತನವನ್ನು ಸೂಚಿಸುವಂಥಾದ್ದು, ಕಾಲುಗಳು ಗಿಡ್ಡಾಗಿದ್ದು ಕೈಗಳು ಉದ್ದಾಗಿರುವವು.

ಮುಂಗಗಳಂತ ನಾಲ್ಕೂ ಕಾಲುಗಳನ್ನು ಊರಿ ನಡೆಯದೆ ಮನುಷ್ಯರಂತೆ ನಡೆಯುವದು. ಇದು ಇವನ ಮನೆತುಂ ಬಾ ಮನಬಂದಂತೆ ಸುತ್ತಾಡುವದು; ದಣಿದ ಕೂಡಲೆ ಮನುಷ್ಯರಂತೆ ತೋಳನ್ನು ತಲೆಗಿಂಬಿಗಿಟ್ಟುಕೊಂಡು ಮಲ ಗುವದು; ತೆಂಗಿನ ಕಾಯಿಯನ್ನು ಒಡಿದು ಚಿಪ್ಪು ತೆಗೆದೂ ಗೆದು ಕೊಬ್ಬರಿ ತಿನ್ನುವದು; ಕಿತ್ತಳೇ ಹಣ್ಣನ್ನು ಸುಲಿದು ತಿನ್ನುವದು. ಮನುಷ್ಯರಂತೆ ತಾಲಿಯಿಂದ ನೀರು ಕುಡಿ ಯುವದು. ಇದರ ಬಾಯಿಂದ ಮೂರು ತರದ ಧ್ವನಿಗಳು ಮಾತ್ರ ಹೊರಡುವವು. ಆ ಧ್ವನಿಗಳಿಂದ ಆ ಮನೆಯ ಒಡೆ ಯನಿಗೆ ಈ ಪ್ರಾಣಿಯ ಮನೋಭಾವವು ಒಳಿತಾಗಿ ತಿಳಿ ಯುವದು. ಒಟ್ಟಿನ ಮೇಲಿಂದ ಇದು ಮನುಷ್ಯರನ್ನು ಹೆಚ್ಚಿ ಗೆ ಹೋಲುತ್ತದೆಂಬದು ನಿರ್ವಿವಾದವು. ಈ ಶಾಸ್ತ್ರಜ್ಞನು ಈ ಪ್ರಾಣಿಯ ಸಂಬಂಧದಿಂದ ಹೆಚ್ಚಿಗೆ ತಿಳುಕೊಳ್ಳಬೇಕೆಂ ದು ಪ್ರಯತ್ನಿಸುವನು. ತುಸು ದಿವಸಗಳಲ್ಲಿ ಇದರ ಸಂಬಂ ಧದ ಹಲವು ಸೋಜಿಗದ ಹೊಸ ಸಂಗತಿಗಳು ಬೈಲಿಗೆ ಬರು ವವೆಂದು ಆಶೆಯುಂಟು. ಇದಕ್ಕೆ ಅವನು ಹಿಲೋಬೆಟ್ಸಲು ಸಿಸ್ಕಸ್ ಎಂದು ಹೆಸರಿಟ್ಟಿದ್ದಾನೆ. ಆದರೆ ನಾವು ಇದಕ್ಕೆ ಮುಂ ಗನಂಥ ಮನುಷ್ಯನೆಂದು ಕರೆಯುವಾ.

ಸರ ಚಾರ್ಲಸ ಡಾರ್ವಿನ್ನನೆಂಬ ಸೃಷ್ಟಿಶಾಸ್ತ್ರ ಶೋಧಕ ನು ಪ್ರಾಣಿಗಳ ಉತ್ಪತ್ತಿಯನ್ನು ವರ್ಣಿಸಿರುವದು ಹ್ಯಾಗೆಂ ದರೆ:—ಮೊದಲು ಜಲಚರಗಳು ಬಳಿಕ ಜಲಸ್ಥಳಚರಗಳು, ಆ ಮೇಲೆ ವನ್ಯ ಪಶುಗಳು. ಕಡೆಯಲ್ಲಿ ಮನುಷ್ಯನು. ಇದೇ ತತ್ವದಂತೆ ನಮ್ಮ ಜನರಲ್ಲಿಯು ಮತ್ಸ್ಯಕಚ್ಛಪಾದಿ ಅವತಾರಗಳ ಕಲ್ಪನೆಯು ಹುಟ್ಟಿರಬಹುದು. ಶರೀರರಚ ನೆಯಲ್ಲಿ ಕೀರ ಅಪೂರ್ಣತ್ವವನ್ನು ಪಡೆದ ತ್ರಿಪಾಲಿಕಾ ಮುಂ ತಾದ ಆರಂಭದ ಪ್ರಾಣಿಗಳಿಗಿಂತ ಮತ್ಸ್ಯಾದಿ ಪ್ರಾಣಿಗಳ ಶರೀರರಚನೆಯು ಪೂರ್ಣವಾಗಿರುವದು. ಇವುಗಳಿಗಿಂತ ಕ್ರಮವಾಗಿ ಡಾರ್ವಿನ್ನ ಸಾಹೇಬರು ವರ್ಣಿಸಿದ ಉತ್ಪತ್ತಿ ಕ್ರಮದ ಪ್ರಾಣಿಗಳ ಶರೀರರಚನೆಯು ಹೆಚ್ಚೆಚ್ಚು ಪೂರ್ಣ ತೆಯನ್ನು ಪಡೆಯುತ್ತಾ ಪಡೆಯುತ್ತಾ ಮನುಷ್ಯನೆಂಬ ಕಡೆ ಯ ಪ್ರಾಣಿಯು ಸಂಪೂರ್ಣವಾದ ಶರೀರರಚನೆಯನ್ನು ಪಡೆ

ದಿರುವನು. ಮನುಷ್ಯಶರೀರದ ರಚನೆಯನ್ನು ಹೋಲುವ ಮಂಗನಿಗೂ ಮನುಷ್ಯನಿಗೂ ನಡುವೆ ಕೆಲವು ಪ್ರಾಣಿಗಳಿರ ಬೇಕೆಂದು ಡಾರ್ವಿನ್ನನು ಆಕ್ಷೇಪಿಸುತ್ತಿದ್ದನು ಆದರೆ ಅಂ ಥ ಪ್ರಾಣಿಯು ಇದು ವರೆಗೆ ಶಿಕ್ಕಿದ್ದಿಲ್ಲ. ಈ ಪ್ರಾಣಿಯು ಸಿಕ್ಕಿಂದಿನಿಂದ ಮಂಗ ಮತ್ತು ಮನುಷ್ಯರ ಮಧ್ಯವರ್ತಿ ಯಾದ ಪ್ರಾಣಿಮಾಲಿಕೆಯೊಳಗಿನದೊಂದು ಮಣಿಯು ಶಿಕ್ಕಿಂ ತಾಯಿತೆಂದು ಹೇಳಬಹುದು.

MANUAL OF METHOD.

ಶಿಕ್ಷಾಕ್ರಮ.

(೨೫೫ ನೇ ಪುಟದಿಂದ ಮುಂದೆ ಸಾಗಿದ್ದು.)

ಟೀಕಾಪಾಠದ ವಿಷಯಗಳು:— ಟೀಕಾಪಾಠಗಳಿಗಾಗಿ ವ ಸ್ತುಪಾಠಗಳನ್ನು ತೆಗೆದುಕೊಳ್ಳುವದೇ ಬಹಳ. ಯಾಕಂದ ರೆ ಈ ಪಾಠಗಳಲ್ಲಿ ಸಿದ್ಧತೆ, ಪ್ರಯೋಗ, ದೃಷ್ಟಾಂತ ಟೀಕಾ ಇವೇ ಮೊದಲಾದ ಸಮಾವತ್ತು ಅಂಗಗಳಿಗೆ ಅವಕಾಶ ದೊ ರೆಯುತ್ತದೆ. ಆದರೆ ಈ ಏಕಾವಲಂಬನವು ಸರಿಯಲ್ಲ. ಟೀಕಾಪಾಠಗಳಲ್ಲಿ ಸಾಲೆಯಲ್ಲಿ ಎಲ್ಲ ವಿಷಯಗಳ ಸಮಾ ವೇಶವಾಗಲಿಕ್ಕೇಬೇಕು. ಅಂದರೆ ಯಾವತ್ತು ಇಯತ್ತೆಗ ಳ ಹಾಗೂ ವರ್ಗಗಳ ವಿಷಯಗಳು ಬರಲಿಕ್ಕೆಬೇಕು. ಯಾಕಂದರೆ ಹುಡುಗರ ಶಿಕ್ಷಣದಲ್ಲಿ ಈ ವಿಷಯಗಳೇ ಬಹ ಳ ಇರುತ್ತವೆ. ಮತ್ತು ಇವುಗಳನ್ನು ಕಲಿಸಲಿಕ್ಕೆ ಉಪ ಯೋಗಿಸಲ್ಪಡುವ ಪದ್ಧತಿಗಳು ಬಹಳ ಗೌರವವಿರುತ್ತ ವೆ. ಯಾಕಂದರೆ ಆ ಪದ್ಧತಿಗಳು ಸುಪ್ತವಿದ್ಯಾರ್ಥಿಗಳ ಕೋಮಲ ಮನಸ್ಸುಗಳು ವಿದ್ಯಾಸಂಪನ್ನವಿಹೀನ ವಾಗುವವು

ಟೀಕಾ:—ಇದಾದರೂ ಏಕದೇಶಿಯವಿರಕೂಡದು. ಕೇ ವಲ ದೋಷಗಳನ್ನೇ ಬೈಲಿಗೆ ಹಾಕುವದು ಟೀಕೆಯ ಪ್ರ ಯೋಜನವಲ್ಲ. ದೋಷಗಳಂತೆ ಗುಣಗಳನ್ನಾದರೂ ವ್ಯಕ್ತ ಪಡಿಸಿ ಶ್ಲಾಘಿಸುವದು ಟೀಕಾಕಾರ್ಯವು. ಹೊಸ ಶಿಕ್ಷಕರಿ ಗೆ ಬಹುತರ ಟೀಕಾ ಮಾಡಗೊಡುವದು ಕಡಿಮೆ ಹಾಗೂ ಹೀಗೆ ಮಾಡುವದಕ್ಕೆ ಹಲವು ಯೋಗ್ಯ ಕಾರಣಗಳೂ ಇರು

ತ್ತವೆ. ಈ ಕಾರಣಗಳಲ್ಲಿ ಶಿಕ್ಷಕರ ಕೊರತೆಯೆನ್ನೂ ಅವರ ಮರ್ಯಾದಿತವಾದಂಥ ಅನುಭವವನ್ನೂ ಜ್ಞಾನವನ್ನೂ ಎಣಿಸಬಹುದು. ಆದರೆ ಸಾಧ್ಯವಾದ ಮಟ್ಟಿಗೆ ಹೆಚ್ಚು ಕಾಲ ಇದ್ದ ಪ್ಯೂಪಿಲ್ ಟೀಚರರಿಗೆ ಬೇರೆ ಹೊಸ ಶಿಕ್ಷಕರ ಶಿಕ್ಷಣದ ಮೇಲೆ ಟೀಕಾ ಮಾಡಗೊಡಬೇಕು. ಮತ್ತು ಅವರ ಟೀಕೆಯ ನಂತರ ಮುಖ್ಯ ಶಿಕ್ಷಕನು ಟೀಕಾ ಮಾಡಬೇಕು. ಹೀಗೆ ಮಾಡುವದರಿಂದ ಶಿಕ್ಷಣದ ಒಳ್ಳೇ ಕ್ರಮಗಳನ್ನು ಕಲಿಯುವದಕ್ಕೂ ಶಿಕ್ಷಣವು ನಡೆದಿರುವಾಗ್ಗೆ ಅದನ್ನು ಏಕಾಗ್ರ ಚಿತ್ತದಿಂದ ಪರೀಕ್ಷಿಸುವದಕ್ಕೂ ವಿಶೇಷ ಉತ್ತೇಜನ ದೊರೆಯುವದು. ಇದರಿಂದ ಶಿಕ್ಷಣವನ್ನು ರಚಿಸುವದಕ್ಕೂ ಪ್ರಥಕ್ಕರಣ ಮಾಡುವದಕ್ಕೂ ಕೂಡೇ ರೂಢಿಯಾಗುವದು. ಸದ್ಯಕ್ಕೆ ಟೀಕಾಪಾಠದಲ್ಲಿ ಬಹುತರವಾಗಿ ಪಾಠವನ್ನು ರಚನೆ ಮಾಡುವದರ ಕಡೆಗೇ ವಿಶೇಷ ಲಕ್ಷ್ಯ ಕೊಡಲ್ಪಡುತ್ತದೆ. ಅವರೆ ಮೇಲೆ ಹೇಳಿದಂತೆ ಟೀಕಾ ಮಾಡುವದರಿಂದ ಅದರ ಪ್ರಥಕ್ಕರಣ ಶಕ್ತಿಗೆ ಉತ್ತೇಜನ ಕೊಟ್ಟಂತೆ ಆಗುತ್ತದೆ. ಆದಕಾರಣ ಇಂಥ ಟೀಕೆಯನ್ನು ಮಾಡಗೊಡಬೇಕೆಂಬದಿಷ್ಟೇ ಅಲ್ಲ; ಅದಕ್ಕೆ ತಕ್ಕ ಉತ್ತೇಜನವನ್ನೂ ಕೊಡಬೇಕು.

ಟೀಕಾ ಮಾತುವದರಲ್ಲಿ ಲಕ್ಷಿಸತಕ್ಕಂಥ ಹಲವು ನಿಯಮಗಳಿರುತ್ತವೆ ಈ ವಿಷಯದಲ್ಲಿ ಇಲ್ಲಿ ಬಹಳ ನಿಯಮಗಳನ್ನು ಹೇಳುವದರಿಂದ ಉಪಯೋಗವಿಲ್ಲ. ಯಾಕಂದರೆ ಅದರಿಂದ ಟೀಕಾ ಮಾಡುವದರಲ್ಲಿ ಗೊಂದಲವಾಗುವದಕ್ಕೂ ತಿಳುವಳಿಕೆ ಇಲ್ಲದೆ ಎಲ್ಲರೂ ಒಂದೇ ರೀತಿಯಿಂದ ಟೀಕಾ ಮಾಡುವದಕ್ಕೂ ಆಸ್ಪದವಾಗುವದು. ಈ ಪರಿಣಾಮಗಳು ಇಷ್ಟವಲ್ಲ ಸೂಕ್ಷ್ಮರೀತಿಯಿಂದಲೂ ಒಳ್ಳೇ ರೀತಿಯಿಂದಲೂ ಟೀಕಾ ಮಾಡುವ ಶಕ್ತಿಯು ಜ್ಞಾನವೂ ಅನುಭವವೂ ಬೆಳೆದ ಹಾಗೆ ತಾನೇ ಬೆಳೆಯುತ್ತ ಹೋಗುವದು. ಶಿಕ್ಷಕನಿಗೆ ತನ್ನ ಟೀಕೆಯನ್ನು ಬರಬರುತ್ತಾ ತಕ್ಕ ಪ್ರಮಾಣದಿಂದ ಬೆಳಿಸಲಿಕ್ಕೆ ಬರುವದು; ಆದರೆ ಮೊದಲು ಅವನು ಪಾಠಗಳ ಮುಖ್ಯ ಭಾಗಗಳನ್ನಷ್ಟೇ ಲಕ್ಷಿಸಿ, ಸುಲಭ ರೀತಿಯಿಂದ ಟೀಕೆ ಮಾಡಬೇಕು ಗುಣಗಳನ್ನು ಹೊಗಳಬೇಕು. ದೋಷಗಳನ್ನು ತಿದ್ದಬೇಕು ಆದರೆ ಟೀಕೆಯಲ್ಲಿ

ಇರಲವಶ್ಯವಾದ ಈ ಎರಡು ಸಂಗತಿಗಳಲ್ಲದೆ ನೆನಪಿಡತಕ್ಕಂಥ ಹಾಗೂ ಅದರಂತೆ ವರ್ತಿಸತಕ್ಕಂಥ ಇನ್ನೂ ಹಲವು ಸಂಗತಿಗಳಿರುವವು ಅವು ಯಾವವಂದರೆ :—

೧ ಟೀಕೆಯಲ್ಲಿ ತಪ್ಪುಗಳನ್ನು ಹೊರಗೆಡಹಿದಂತೆ ಆವುಗಳನ್ನು ನೀಗುವ ಬಗೆಗಳನ್ನಾದರೂ ಹೇಳಲಿಕ್ಕೆಬೇಕು. ಕೆಡಹುವ ಗುಣವಿದ್ದಂತೆ ಕಟ್ಟುವ ಗುಣವಾದರೂ ಇರಲಿಕ್ಕೆಬೇಕು. ಅಂದರೆ ಯಾವದೊಂದು ಶಿಕ್ಷಣಕ್ರಮವನ್ನು ಹಳಿದಿದ್ದರೆ, ಅದಕ್ಕೂ ಬಲೋ ಶಿಕ್ಷಣಕ್ರಮವನ್ನು ಸೂಚಿಸಲಿಕ್ಕೆಬೇಕು.

೨. ಶ್ಲಾಘನೆಯು ಸಯುಕ್ತಿಕವಾಗಿರಬೇಕು. ಮತ್ತು ಅದರ ಕಾರಣಗಳನ್ನು ಹೇಳಬೇಕು.

೩ ಟೀಕೆಯು ಸಂಕ್ಷಿಪ್ತವೂ ಮಾರ್ಮಿಕವೂ ಇರಬೇಕು. ಟೀಕಾಪಾಠದ ಪ್ರತಿಯೊಂದು ಅಂಗಗಳನ್ನು ಎಡೆಬಿಡದೆ ಟೀಕಿಸುವದು ಅವಶ್ಯವಿಲ್ಲ. ಪಾಠದೊಳಗಿನ ಗುಣದೋಷಗಳನ್ನೇ ಲಕ್ಷಿಸತಕ್ಕಂಥ ಸಂಗತಿಗಳಾಗಿರುತ್ತವೆ.

೪. ಟೀಕಾ ಮಾಡುವಾಗ ಸಹಾಯಕ್ಕಾಗಿ ಯಾವದಾದರೊಂದು ಟೀಕೆಯ ನಮೂನೆಯನ್ನು ಯಾವಾಗಲೂ ಉಪಯೋಗಿಸಬೇಕು ಇಂಥಾದ್ದೇ ಒಂದು ನಮೂನೆಯನ್ನು ಹಿಂಬಾಲಿಸಬೇಕೆಂಬ ನಿರ್ಬಂಧವಿಲ್ಲ. ಶಿಕ್ಷಣದ ಸಂಬಂಧದಿಂದ ನೋಡಿದರೆ ಈ ವಿಷಯದಲ್ಲಿ ಯಾವದಾದರೂ ಪುಸ್ತಕದೊಳಗಿಂದ ತೆಗೆದುಕೊಂಡ ನಮೂನೆಗಿಂತಲೂ ಶಿಕ್ಷಕನು ತಾನೇ ತಯಾರ ಮಾಡಿದ ನಮೂನೆಯು ಹೆಚ್ಚು ಬೆಲೆಯುಳ್ಳದ್ದಿರುವದು. ಯಾಕಂದರೆ ಪುಸ್ತಕದೊಳಗಿನ ನಮೂನೆಯು ಒಂದೇ ತರದ್ದಿರುವದರಿಂದ ಅದು ಎಲ್ಲ ಪಾಠಗಳಿಗೆ ಶಕ್ತವಾಗಿರಲಾರದು; ಪಾಠದ ಮೇಲಿಂದ ನಮೂನೆಯನ್ನು ತಯಾರಿಸತಕ್ಕದ್ದೇ ಹೊರ್ತು ನಮೂನೆಯಂತೆ ಪಾಠವನ್ನು ತಯಾರಿಸತಕ್ಕದ್ದಿರುವದಿಲ್ಲ. ಹಾಗೂ ಟೀಕೆಯು ಯಾವದಾದರೂ ಒಂದೇ ನಮೂನೆಯನ್ನು ತೆಗೆದುಕೊಂಡರೆ ಬಹುತರವಾಗಿ ಅದರಂತೆಯೇ ಪಾಠಗಳನ್ನು ರಚಿಸುವ ಪ್ರವೃತಿಯಾಗುತ್ತದೆ. ಮತ್ತೊಂದೇನಂದರೆ ಟೀಕೆಯು

ನಮೂನೆಯಲ್ಲಿ ಕಿರುಕುಳ ಸಂಗತಿಗಳನ್ನು ಮಿತಿಮೀರಿ ಸೇರಿಸಬಾರದು. ಯಾಕಂದರೆ ಅದರಿಂದ ಟೀಕಾ ಮಾಡುವಾಗ ಕೈ ಕಟ್ಟಿದಂತಾಗಿ ಏನೂ ಸ್ವತಂತ್ರ್ಯ ಉಳಿಯುವದಿಲ್ಲ. ಕೆಳಗೆ ಟೀಕೆಯ ಬಂದು ನಮೂನೆಯನ್ನು ಕೊಟ್ಟಿದ್ದೇವೆ. ಈ ನಮೂನೆಯು ಬೇಕಾದ ಪಾಠಗಳಿಗೆ ಉಪಯೋಗಿಸುತ್ತದೆಂದು ತಿಳಿಯಬಾರದು. ಪ್ಯುಪಿಲ್ ಟೀಚರನು ಅಥವಾ ಹೊಸ ಶಿಕ್ಷಕನು ತಕ್ಕ ನಮೂನೆಯನ್ನು ತಾನೇ ಯಾವ ಪ್ರಕಾರ ಮಾಡಿಕೊಳ್ಳಬೇಕೆಂಬದನ್ನು ತೋರಿಸುವದಕ್ಕಾಗಿ ಮಾತ್ರವೇ ಇದನ್ನು ಕೊಟ್ಟಿದ್ದೇವೆ.

ಸಂಖ್ಯೆ	ಪಾಠದವಿಷಯ ಇತ್ಯಾದಿ	ಹೇಳತಕ್ಕ ಸಂಗತಿಗಳು.	ಕ್ರಮ.
೧	ವಿಷಯ		
೨	ವರ್ಗ ಅಥವಾ ಹುಡುಗರು	ಸರಾಸರಿ ವಯಸ್ಸು ಮಾನ	
೩	ವೇಳೆ		
೪	ಉಪಕರಣ		

ಸಂಖ್ಯೆ	ಶಿಕ್ಷಕನ ವಿಷಯದಲ್ಲಿ	ಸಂಖ್ಯೆ	ವರ್ಗದ ವಿಷಯದಲ್ಲಿ
೧	ರೀತಿ	೧	ಲಕ್ಷ
	(ಅ) ಧ್ವನಿ	೨	ಉತ್ಸಾಹ
	(ಬ) ಅಭಿನಯ	೩	ತಿದ್ದುವಿಕೆ ಅಥವಾ ಓರಣ
	(ಕ) ಕೂಡ್ರುವ ಅಥವಾ ನಿಲ್ಲತಕ್ಕ ಸ್ಥಲ	೪	ಬುದ್ಧಿ ಸಂಸ್ಕಾರ
	( ) ಸ್ವಭಾವ		
೨	ಭಾಷೆ		
೩	ಪ್ರಶ್ನೆಗಳು		
೪	ಸಾರಾಂಶ ಅಥವಾ ಉಪಸಂಹಾರ		
೫	ಪ್ರಯೋಗಗಳೂ ದೃಷ್ಟಾಂತಗಳೂ		
೬	ಕರೇ ಹಲಿಗೆ		

೫ನೇ ಅಧ್ಯಾಯ.

ವರ್ಗಶಿಕ್ಷಣ,

ಹುಡುಗರನ್ನು ಕ್ರಮಗೊಳಿಸಿ ತಕ್ಕ ವರ್ಗಗಳಲ್ಲಿ ಸೇರಿಸಿ ಶಾಲೆಯನ್ನು ವ್ಯವಸ್ಥಿತವಾಗಿ ನಡಿಸಲಿಕ್ಕೂ ವಿದ್ಯಾರ್ಥಿಗಳ ಶಿಕ್ಷಣವನ್ನು ಸಾಧಿಸಲಿಕ್ಕೂ ಶಿಕ್ಷಕನು ತಕ್ಕವನಾಗಿರಲಿಕ್ಕೆ ಬೇಕೆಂಬದಕ್ಕೆ ಸಂದೇಹವಿಲ್ಲ. ಈ ಕೆಲಸಗಳು ಸರಿಯಾ ಗಿ ಆಗಬೇಕಾದರೆ ಮೊದಲು ಮಾಸ್ತರನಲ್ಲಿಯೇ ಯಾವತ್ತು ಅವಶ್ಯವಾದ ಶಾರೀರಿಕ, ಮಾನಸಿಕ, ನೈತಿಕ ಗುಣಗಳು ಇ ರಲಿಕ್ಕೆಬೇಕು. ಆ ಗುಣಗಳ ನಿರ್ದೇಶವನ್ನು ಈ ಕೆಳಗೆ ಮಾಡಿರುತ್ತೇವೆ.

(೫) ಮಾನಸಿಕ ಗುಣಗಳು :—ಶಿಕ್ಷಕನು ಬಹು ಶ್ರುತನಿ ರಬೇಕು. ವರ್ಗಕ್ಕೆ ಕಲಿಸುವ ಯಾವತ್ತು ವಿಷಯಗಳ ಪೂರ್ಣ ಜ್ಞಾನವುಳ್ಳವನಿರಬೇಕು, ಒಂದು ಜೇಳೆ ಪೂರ್ಣ ಜ್ಞಾನವಿಲ್ಲದಿದ್ದರೂ ತಕ್ಕಮಟ್ಟಿಗೆ ಪೂರ್ಣವಾದಂಥ ಜ್ಞಾನ ವಾದರೂ ಇರಲಿಕ್ಕೆಬೇಕು. ತಾನು ಕಲಿಸುವ ಸಂಗತಿಗಳ ನ್ನು ನಿಸ್ಸಂದಿಗ್ಧವಾಗಿಯೂ ಅಚ್ಚುಕಟ್ಟಾಗಿಯೂ ಹೇಳಲಿಕ್ಕೆ ಬರುವಂತೆ ಪಾಠಗಳನ್ನು ಯಾವಾಗಲೂ ಎಚ್ಚರದಿಂದಲೂ ನಿರಾಲಸ್ಯದಿಂದಲೂ ನೋಡಿಕೊಳ್ಳುತ್ತಿರಬೇಕು. ವಿದ್ಯಾ ವ್ಯಾಸಂಗವನ್ನು ಯಾವಾಗಲೂ ನಡಿಸಿ, ತನ್ನ ಮನಸ್ಸಿನ ಸು ಧಾರಣೆಯನ್ನು ಸಾಧಿಸುವ ಶಿಕ್ಷಕನೇ ವಿವಿಧವಿದ್ಯಾರ್ಥಿಗಳ ಸಮೂಹದ ತೊಂದರೆಗಳನ್ನು ಮುಂಗಂಡು ಬಗೆಬಗೆಯ ಹಂಚಿಕೆ ಉಪಾಯಗಳಿಂದ ಅವುಗಳನ್ನು ಪರಿಹರಿಸಲಿಕ್ಕೂ ವಿದ್ಯಾರ್ಥಿಗಳ ಲಕ್ಷವನ್ನು ಎಳಕೊಳ್ಳಲಿಕ್ಕೂ ಪ್ರೀತಿಯನ್ನು ಸಂಪಾದಿಸಲಿಕ್ಕೂ ಶಿಕ್ಷಣದ ಕೆಲಸದಲ್ಲಿ ಯುಕ್ತವನ್ನು ಪಡೆಯು ಲಿಕ್ಕೂ ಸಮರ್ಥನಾಗುವನು. ಅವನ ಭಾಷೆಯು ಮು ಬ್ಬೋಧವೂ ಕ್ಲಿಷ್ಟವೂ ಇರಬಾರದು. ಆದರೆ ಬಾಲಬೋ ಧವೂ ಸಹಜವೂ ಆಗಿ ಇರಬೇಕು. ಅವನಲ್ಲಿ ಡಾಂಭಿಕ ತನ ದುರಭಿಮಾನಗಳ ಗಂಧವಾದರೂ ಇರಕೂಡದು. ತನ್ನ ಜಾಣ್ಮೆಯನ್ನು ಎಂದಿಗೂ ಮೆರೆಸಕೂಡದು. ತನಗಿಂತ ಬ ಲ್ಲವರ ಕೂಡ ಸ್ನೇಹವನ್ನು ಬಳಿಸಬೇಕು. ಅವರ ಸಹ

ವಾಸದಿಂದ ಇವನಿಗೆ ಬಗೆಬಗೆಯ ಪ್ರಯೋಜನಗಳುಂಟು. ಮುಖ್ಯವಾಗಿ ಪಾಂಡಿತ್ಯದ ಮದವು ಮೊಳೆಯದೇ ಶಿಕ್ಷಣ ಕನಲ್ಲಿ ವಿಷಯವರ್ಣನೆ ನೈಪುಣ್ಯವು ಬೇಕು. ಈ ಸಾಮರ್ಥ್ಯವನ್ನು ಮನಃಪೂರ್ವಕವಾಗಿ ಸಂಪಾದಿಸಲಿಕ್ಕೆ ಯತ್ನಿಸಬೇಕು. ವಿದ್ಯಾದಾನದ ಹೋರೆಯಲ್ಲಿ ಮಿಕ್ಕ ಹೋರೆಗಳಂತೆ ದಿನದಿನಕ್ಕೆ ಸುಧಾರಣೆಯಾಗುವದು ನಿಜವು, ಆದದರಿಂದ ಶಿಕ್ಷಕನು ತನ್ನ ಹಳೆ ಪದ್ಧತಿಯನ್ನು ಇಟ್ಟುಕೊಂಡು ಕೂಡುವದು ಸರಿಯಲ್ಲ. ಅವುಗಳಲ್ಲಿ ದೇಶಕಾಲಾದಿ ಪರಿಸ್ಥಿತಿಗಳನ್ನು ಅನುಲಕ್ಷಿಸಿ ತಕ್ಕ ವಿಪರ್ಯಾಯಗಳನ್ನು ಮಾಡಿಕೊಳ್ಳುವದು ಅವಶ್ಯವು. ಆದ ಕಾರಣ ತನ್ನ ಅವಲೋಕನಾಭ್ಯಾಸಗಳನ್ನು ಶಿಕ್ಷಕನು ಸಾಗಿಸಬೇಕು

(೩) ನೈತಿಕ ಗುಣಗಳು :—ಶೀಲಸ್ವಭಾವಗಳು ನಿರ್ದುಷ್ಟವಾಗಿರಬೇಕು. ಶಿಕ್ಷಕರ ಆಚಾರವಿಚಾರಗಳನ್ನು ಜನರು ಸೂಕ್ಷ್ಮರೀತಿಯಿಂದ ವಿಚಾರಿಸುವರು. ವಿದ್ಯಾರ್ಥಿಗಳಂತೂ ಕಣ್ಣಿಟ್ಟು ನೋಡಿ ಅವರ ಅನುಕರಣವನ್ನು ಮಾಡಲಿಕ್ಕೆ ಹವಣಿಸುವರು ಆದದ್ದರಿಂದ ಶಿಕ್ಷಕನು ತನ್ನ ಚಿತ್ತಸಮತೆಯನ್ನು ಕಾಯ್ದುಕೊಂಡು ವಿದ್ಯಾರ್ಥಿಗಳೊಡನೆ ಯಾವಾಗಲೂ ಉಲ್ಲಾಸವೃತ್ತಿಯಿಂದ ನಡಕೊಳ್ಳಬೇಕು. ಶೀಘ್ರಕೋಪಿಯೂ, ನಿಷ್ಠುರನೂ, ಕಠಿಣಚಿತ್ತನೂ, ಉಗ್ರಸ್ವಭಾವದವನೂ ಆದ ಶಿಕ್ಷಕನ ಮುಖವನ್ನು ನೋಡುವಂಥ ಶಬ್ದವನ್ನು ಕೇಳುವಂಥ ವಿದ್ಯಾರ್ಥಿಗಳು ದುರ್ಗುಣದ ಆಗರದಲ್ಲಿಯೇ ಇರುತ್ತಾರೆಂದು ಒಬ್ಬ ಕವಿಯು ಹೇಳುತ್ತಾನೆ. ಈ ಮಾತು ಸಟೆಯಲ್ಲ. ಉಲ್ಲಾಸವೃತ್ತಿಯು ಶಿಕ್ಷಕನಲ್ಲಿರತಕ್ಕ ಪ್ರಥಮ ಗುಣವು. ಕರ್ತವ್ಯಕ್ಕೂ ಉಲ್ಲಾಸವೃತ್ತಿಗೂ ಸಹಚರ್ಯದ ಯೋಗವನ್ನು ಹುಟ್ಟಿಸುವ ಶಿಕ್ಷಕನು ವಿದ್ಯಾರ್ಥಿಗಳಿಗೆ ಅತಿ ಗೌರವದ ಪಾತ್ರವನ್ನು ಕಲಿಸುವನೆಂಬದಕ್ಕೆ ಸಂಶಯವಿಲ್ಲ. ಇಂಥ ಶಿಕ್ಷಕನ ಕೈಯಲ್ಲಿರುವ ಹುಡುಗರು ಕೆಲಸಕ್ಕೆ ಮೂಗು ಮುರಿಯದೆ ಅದನ್ನು ಆನಂದದಿಂದ ಕೈಕೊಳ್ಳಬಹುದು. ಸಹಾನುಭೂತಿಯು ಶಿಕ್ಷಕನಲ್ಲಿರತಕ್ಕ ಎರಡನೆಯ ಗುಣವು ವಿದ್ಯಾರ್ಥಿಗಳ ಸೌಖ್ಯದಿಂದ ಹಿಗ್ಗುವದೂ ದುಃಖವನ್ನು ಕಂಡು ಮರಗುವದೂ ದುಃಖವನ್ನು ಪರಿ

ಹರಿಸಲಿಕ್ಕೂ ಸುಖವನ್ನು ಬೆಳಿಸಲಿಕ್ಕೂ ತ್ರಿಕರಣಪೂರ್ವಕವಾಗಿ ಯತ್ನಿಸುವದೂ ಇವೇ ಮೊದಲಾದ ಕಾರ್ಯೋತ್ಪಾದಕ ಗುಣಕ್ಕೆ ಸಹಾನುಭೂತಿ ಅಥವಾ ಪ್ರೇಮವೆಂಬ ಹೆಸರು. ಈ ಗುಣವು ಬಹಳ ಪ್ರಯೋಜನಕರವಾದದ್ದು. ಶಿಕ್ಷಕನಲ್ಲಿ ಈ ಗುಣವಿದ್ದರೆ ವಿದ್ಯಾರ್ಥಿಗಳಲ್ಲಿಯೂ ಈ ಗುಣವು ಹುಟ್ಟುತ್ತದೆ. ಈ ಗುಣದಿಂದ ಮಾಸ್ತರನಿಗೆ ಮಾನವೂ ಮರ್ಯಾದೆಯೂ ದೊರಕುವದಲ್ಲದೆ ಶಾಲೆಯಿಲ್ಲ ಸುಖದ ಕಾರಮನೆಯಾಗಿ ಒಪ್ಪುತ್ತದೆ. ಉಲ್ಲಾಸವೃತ್ತಿಗೂ ಸಹಾನುಭೂತಿ ಅಥವಾ ಪ್ರೇಮಕ್ಕೂ ಒಳ್ಳೇ ನಡತೆ ನಡಾವಳಿಗಳ ಜೋಡಿರಲಿಕ್ಕೆಬೇಕು. ಈ ಜೋಡನ್ನು ಸಾಧಿಸಲಿಕ್ಕೆ ಮಾಸ್ತರನ ನಡತೆನಡಾವಳಿಗಳು ನಿರ್ದುಷ್ಟವಾಗಿರಲಿಕ್ಕೆಬೇಕೆಂಬದು ಸಹಜವು ಇದಲ್ಲದೆ ವಿದ್ಯಾರ್ಥಿಗಳ ನಡತೆನಡಾವಳಿಗಳನ್ನು ಹುಟ್ಟಿಸಲಿಕ್ಕೂ ಅವುಗಳನ್ನು ಅಗ್ರಹಪೂರ್ವಕವಾಗಿ ತಿಳಿಸಿ ತಿದ್ದಲಿಕ್ಕೂ ಶಿಕ್ಷಕನು ಯಾವಾಗಲೂ ಯುಕ್ತಿಸತಕ್ಕದ್ದು. ಒಳ್ಳೇ ನಡತೆನಡಾವಳಿಗಳು ಬಾಹ್ಯೋಪಾಯಗಳಿಂದ ಸಾಧಿಸುವದು ದುಃಸಾಧ್ಯವು ಅಸಾಧ್ಯವೆಂದರೂ ಸಲ್ಲುವದು. ಕೆಲವು ತತ್ವಗಳ ಅನುರೋಧದಿಂದ ಅಂತರೋಪಾಯಗಳನ್ನು ತಕ್ಕೊಂಡರೆ ಇದು ಸುಸಾಧ್ಯವು ಆ ತತ್ವಗಳು ಯಾವವೆಂದರೆ :— ೧ ಸಹಚರ್ಯ, ೨ ರೂಢಿ, ೩ ಏಕಾಗ್ರತಾ, ೪ ಪೋಷಣ.

ವಿದ್ಯಾರ್ಥಿಗಳು ಮಾಡುವ ಕಾರ್ಯಗಳೆಲ್ಲ ಪ್ರವೃತ್ತಿಫಲಗಳಾಗಿರುತ್ತವೆ. ಒಳ್ಳೇ ಪ್ರವೃತ್ತಿಗಳಿಂದ ಒಳ್ಳೇ ಕಾರ್ಯಗಳು ಘಟಿಸುತ್ತವೆ. ಕೆಟ್ಟ ಪ್ರವೃತ್ತಿಗಳಿಂದ ಕೆಟ್ಟ ಕಾರ್ಯಗಳು ಘಟಿಸುತ್ತವೆ. ಶಿಕ್ಷಕನು ತನ್ನ ಸ್ವಂತ ಆಚರಣದಿಂದಲೂ, ಉಪದೇಶದಿಂದಲೂ, ನಿಗ್ರಹಾನುಗ್ರಹದಿಂದಲೂ ವಿದ್ಯಾರ್ಥಿಗಳಲ್ಲಿರುವ ದುಷ್ಟ ಪ್ರವೃತ್ತಿಗಳನ್ನು ಮುರಿಬಡಿದು ಸತ್ಪ್ರವೃತ್ತಿಗಳನ್ನು ಬಲಿಸಬೇಕು.

(ಹ) ಶಾರೀರ ಗುಣಗಳು :—ಶಿಕ್ಷಕನು ಕೆಲವು ಆಟಗಳಲ್ಲಿ ಕನಿಷ್ಠ ಪಕ್ಷಕ್ಕೆ ಒಂದಾದರೂ ಶಾರೀರಶ್ರಮದ ಆಟದಲ್ಲಿ ನಿಪುಣನಾಗಿರಬೇಕು ಆ ಆಟಗಳನ್ನು ವಿದ್ಯಾರ್ಥಿಗಳಿಂದ ಆಡಿಸಿ ತಾನು ಅವರ ಕೂಡ ಆಡಿ ತನ್ನ ಶರೀರಸಂವರ್ಧನ

ವನ್ನು ಮಾಡಿಕೊಳ್ಳುವದಲ್ಲದೆ ಅವರ ಶರೀರಸಂವರ್ಧನೆಯ
ನ್ನಾದರೂ ಮಾಡಬೇಕು. ಆಟದ ಸ್ಥಳದಲ್ಲಿ ವಿದ್ಯಾರ್ಥಿಗಳ
ನೈಸರ್ಗಿಕ ಪ್ರವೃತ್ತಿಗಳು ಸ್ಪಷ್ಟವಾಗಿ ಕಂಡುಬರುತ್ತವೆ.
ಅವುಗಳನ್ನು ಸಕಾಲದಲ್ಲಿ ಯಥೋಚಿತವಾಗಿ ತಿದ್ದಲಿಕ್ಕೆಬೇ
ಕು. ಅದಕ್ಕಾಗಿ ಮಾಸ್ತರನ ಕಣ್ಣು ಕಿವಿಗಳು ತೀಕ್ಷ್ಣವಾ
ಗಿರಬೇಕು. ನಡಿವ ಸಂಗತಿಗಳಲ್ಲಿ ಒಂದು ಸಹ ಅವನನ್ನು
ವಿಚಾರಿ ಉಳಿಯೆಕೂಡದು. ಅವನ ಧ್ವನಿಯು ಕರ್ಣಕಟು
ವಾಗುವಷ್ಟು ಗಟ್ಟಿಯಾಗಿರಬಾರದು ಕೇಳಿಸದಷ್ಟು ಸಣ್ಣ
ಗಿಯೂ ಇರಬಾರದು. ಆದರೆ ತಕ್ಕಷ್ಟು ಗಟ್ಟಿಯಾಗಿಯೂ
ಮನೋಹರವಾಗಿಯೂ ಅಧಿಕಾರಯುಕ್ತವಾಗಿಯೂ ಇರ
ಬೇಕು. ಕೆಲ ಶಿಕ್ಷಕರು ವರ್ಗದಲ್ಲಿ ವ್ಯವಸ್ಥೆಯನ್ನು ಕಾ
ಯ್ದುಕೊಳ್ಳುವದಕ್ಕಾಗಿ ಧ್ವನಿಯ ಉಪಯೋಗವನ್ನು ಮೇ
ಲಿಂದಮೇಲೆ ಮಾಡುತ್ತಾರೆ. ಇದು ಸರಿಯಲ್ಲ. ಗದ್ದಲ
ಮಾಡುವ ಶಿಕ್ಷಕನ ವರ್ಗದಲ್ಲಿ ಗದ್ದಲವು ತಪ್ಪದು. ವ್ಯವ
ಸ್ಥೆಗಾಗಿ ಕಣ್ಣು ಕೈಗಳೇ ಪ್ರಧಾನ ಸಾಧನಗಳು, ಧ್ವನಿಯು
ಗೌಣಸಾಧನವಾಗಿದೆ. ಇದನ್ನು ಮರೆಯಕೂಡದು. ಶಿಕ್ಷ
ಕನು ತನ್ನ ಕೆಲಸವನ್ನು ಆಸ್ಥೆಯಿಂದಲೂ ಉತ್ಸಾಹದಿಂದ
ಲೂ ಸಾಗಿಸಬೇಕಾಗುವದು ಅದಕ್ಕೆ ಶಾರೀರಬಲವು ಅವ
ಶ್ಯವು. ಈ ಶಾರೀರಬಲವನ್ನು ಸಾಧಿಸಲಿಕ್ಕೆ ಅನುಕೂಲ
ವಾದ ಗುಣಪ್ರವೃತ್ತಿಗಳನ್ನು ಅನುಲಕ್ಷಿಸಿ ಅವುಗಳನ್ನು ಕೈ
ಕೊಂಡು ವಿದ್ಯಾರ್ಥಿಗಳ ಶಾರೀರಬಲವನ್ನಾದರೂ ಸಾಧಿಸ
ಬೇಕು ಅಂದರೆ ಅದರಿಂದ ಸುಖವೂ ಕೀರ್ತಿಯೂ ಪ್ರಾಪ್ತ
ವಾಗುವದು.

ರೋಜನಿತಿ :— ಪ್ರತಿ ಒಬ್ಬ ಹೊಸ ಶಿಕ್ಷಕನು ರೋಜನಿಶಿ
ಯನ್ನು ಇಡುವದು ವಿಹಿತವು. ವರ್ತಕರಿಗೆ ಕೀರ್ದಿಯಿಂದ
ಆಗುವ ಪ್ರಯೋಜನವೇ ಶಿಕ್ಷಕನಿಗೆ ಇದರಿಂದಾಗುವದು
ಇದರಲ್ಲಿ ಶಿಕ್ಷಕನು ಕಲಿಸುವ ಪ್ರತಿ ಒಂದು ವಿಷಯವನ್ನು
ವಿದ್ಯಾರ್ಥಿಗಳಿಗೆ ನೇಮಿಸಿಕೊಟ್ಟ ಪ್ರತಿ ಒಂದು ದಿನದ ಪಾಠ
ವನ್ನು ಕಾಣಿಸಲಿಕ್ಕೆಬೇಕು. ಇದಲ್ಲದೆ ಇದರಲ್ಲಿ ತನ್ನ ಸಂ
ಬಂಧದಿಂದ ಮುಖ್ಯ ಶಿಕ್ಷಕನ ಅಭಿಪ್ರಾಯಗಳನ್ನೂ ಪರೀಕ್ಷೆ
ಯ ಪರಿಣಾಮಗಳನ್ನೂ ನಮೂದಿಸಿಡಬೇಕು.

ಈ ರೀಜನಿಶಿಯಿಂದ ತನ್ನ ಕೆಲಸದ ಗುಣದೋಷಗಳು ಮಾಸ್ತರನಿಗೆ ಕಂಡುಬರುವವಲ್ಲದೆ ಯಶಾಪಯಶದ ಕಾರಣಗಳಾದರೂ ಗೋಚರವಾಗುವವು. ಅಸ್ಥಿ ಉತ್ಸಾಹಗಳ ಬೆಳವಣಿಗೆಗೂ ಸ್ವಾಭಿಮಾನಾಭಿವೃದ್ಧಿಗೂ ಸಹಾಯವಾಗುವದು. ಇದರಿಂದ ಸ್ವಾವಲಂಬನವೂ ಮುಂಜಾಗ್ರತೆಯೂ ಓರಣವೂ ಬಲಗೊಂಡು ಹಿಡಿದ ಕೆಲಸದ ಪೂರ್ಣತ್ವಕ್ಕೂ ಸಿದ್ಧಿಗೂ ಅನುಕೂಲಿಸುವದು

ಪಾಠದ ಟಿಪ್ಪಣಿಗಳ ಖರ್ಚುಗಳನ್ನು ನಮೂದ ಮಾಡಲಿಕ್ಕೆ ಮತ್ತೊಂದು ಪುಸ್ತಕ ಮಾಡಬೇಕು. ಈ ಪುಸ್ತಕವನ್ನು ಕಾದಿಡಬೇಕಾದುದರಿಂದ ಇದರ ರಟ್ಟಾದರೂ ಗಟ್ಟಿಯಾಗಿರಬೇಕು. ಈ ಪುಸ್ತಕದಲ್ಲಿ ಕೆಳಗೆ ತೋರಿಸಿದಂತೆ ಮನೆಗಳನ್ನು ಮಾಡಿ ಅದರಲ್ಲಿ ಆಯಾ ಸಂಗತಿಗಳನ್ನು ಸಮಾವೇಶ ಮಾಡಬೇಕು. ಹ್ಯಾಗಂದರೆ :—

ತಾರೀಖು.	ಸಿದ್ಧತೆ	ಮುಖ್ಯ ಶಿಕ್ಷಕರು ಕೊಟ್ಟ ಗುಣಗಳೂ ಅಭಿಪ್ರಾಯಗಳೂ.	ಟಿಪ್ಪಣಿ ಪಾಠದ ವಿಷಯ.	ಟೀಕೆಯು.	ಪರೀಕ್ಷೆಯೂ ಪರಿಣಾಮವೂ.

TEACHER'S WORK & DUTY (*Communicated*)

ಶಿಕ್ಷಕನ ಕೆಲಸವೂ ಕರ್ತವ್ಯವೂ.

(ಬರೆದುಬಂದದ್ದು.)

(೨೪೪ನೇ ಪುಟದಿಂದ ಮುಂದೆ ಸಾಗಿದ್ದು.)

ಈ ಪ್ರಕಾರ ಶಿಕ್ಷಕನ ಕೆಲಸವು ನಿಜವಾಗಿ ಪವಿತ್ರವಾದದ್ದೂ, ಗೌರವವುಳ್ಳದ್ದೂ ಇದ್ದು, ಈಗಿನ ಕಾಲದಲ್ಲಿ ಅದಕ್ಕೆ ಮಹತ್ವ ದೊರೆಯದ್ದನ್ನು ನೋಡಿದರೆ ಆಶ್ಚರ್ಯವಾಗುವದು. ಆದರೆ ಈಗಿನ ಜನರಲ್ಲಿರುವ ನಿಜವಾದ ವಿದ್ಯಾಭಿರುಚಿಯನ್ನೂ, ಈಗಿನ ಸಾಮಾನ್ಯ ಗುರುಗಳ ಯೋಗ್ಯತೆಯನ್ನೂ ಪರಿಶೋಧಿಸಿದರೆ ಈ ಆಶ್ಚರ್ಯವು ಕೆಲಮಟ್ಟಿಗಾದರೂ ಭ್ರಾಮ

ಕವಾಗಿ ತೋರದೆ ಹೋಗದು. ಪ್ರಾಚೀನ ಕಾಲದಲ್ಲಿ ಕೇವಲ ಜ್ಞಾನಸಂಪಾದನೆಗಾಗಿ ತನುಮನಧನ ಪ್ರಾಣಗಳನ್ನು ಅರ್ಪಿಸಿ ವಿದ್ಯಾಭ್ಯಾಸವನ್ನು ಕೈಕೊಳ್ಳುವವರು ಬಹು ಜನರು ದೊರೆಯುತ್ತಿದ್ದರು. ವಿದ್ಯಾರ್ಜನೆಯಲ್ಲಿ ಎಷ್ಟು ವಿಘ್ನಗಳೊದಗಿದರೂ ಅವರು ತಮ್ಮ ಕರ್ತವ್ಯವನ್ನು ಬಿಡುತ್ತಿದ್ದಿಲ್ಲ ಈ ಪ್ರಕಾರ ಕಷ್ಟಾರ್ಜಿತವಾದ ವಿದ್ಯೆಯು ಅವರ ಸೊತ್ತಾಗಿದ್ದರಿಂದ ಅದನ್ನು ಅವರು ಜಾಗ್ರತೆಯಾಗಿ ಕಾಯ್ದುಕೊಂಡು, ಮುಂದೆ ತಮ್ಮ ಸ್ವಂತ ಉದ್ಯೋಗದಿಂದ ಅದನ್ನು ವೃದ್ಧಿಗೊಳಿಸಿ ಜಗತ್ತಿನ ಕಲ್ಯಾಣಕ್ಕೆ ಕಾರಣಗಳಾದ ಹಲವು ಕೃತಿಗಳನ್ನು ಮಾಡಿದರು. ತಮ್ಮ ಜ್ಞಾನಾರ್ಜನೆಗೆ ಜ್ಞಾನ ಜನ್ಯ ಆನಂದವೇ ಪ್ರತಿಫಲವೆಂದು ಅವರು ಎಣಿಸಿದ್ದರಿಂದ ದ್ರವ್ಯಲೋಭ ಮೊದಲಾದ ವಿಘ್ನಗಳಿಗೆ ಒಳಗಾಗದೆ ನಿಷ್ಕಾಮದಿಂದ ಅವರು ತಮ್ಮ ಜ್ಞಾನವನ್ನು ಬೆಳಿಸಿದರು ಇದಕ್ಕೆ ಈ ದೇಶದಲ್ಲಿಯೂ, ಪರದೇಶದಲ್ಲಿಯೂ ಹಲವು ಉದಾಹರಣೆಗಳು ದೊರೆಯಬಹುದು ಕೃಷ್ಣನಂಥ ವಿಭವಶಾಲಿಯಾದ ಅರಸನು ಕಟ್ಟಿಗೆ ಹೊರೆ ಹೊತ್ತು ಸಾಂದೀಪನೆಂಬ ಬ್ರಾಹ್ಮಣನ ಮನೆಯಲ್ಲಿ ವಿದ್ಯಾಭ್ಯಾಸ ಮಾಡಿದನು ದೇವಗುರುವಾದ ಬ್ರಹಸ್ಪತಿಯ ಮಗ ಕಚನು ತನ್ನ ವೈರಿಗಳಾದ ದೈತ್ಯರ ಬಾಧೆಗಳನ್ನು ಎಣಿಸದೆ, ದೈತ್ಯಗುರುವಾದ ಶುಕ್ರಾಚಾರ್ಯರಲ್ಲಿ ವಿದ್ಯಾಭ್ಯಾಸ ಮಾಡಿದನು ಶಂಕರಾಚಾರ್ಯ, ಮಧ್ವಾಚಾರ್ಯ ಮೊದಲಾದ ಮಹಾತ್ಮರು ಜ್ಞಾನಸಂಪಾದನೆಗಾಗಿ ಕಷ್ಟತರವಾದ ಬ್ರಹ್ಮಚರ್ಯ ಸನ್ಯಾಸಾಶ್ರಮಗಳನ್ನು ಸ್ವೀಕರಿಸಿದರು. ಈ ಪ್ರಕಾರ ಜ್ಞಾನಸಂಪಾದನೆಗಾಗಿ ಹಲವು ಕಷ್ಟಗಳನ್ನು ಅನುಭವಿಸಿದವರ ಉದಾಹರಣೆಗಳು ನಮ್ಮ ಪುರಾಣೇತಿಹಾಸಗಳಲ್ಲಿ ಹಲವು ದೊರೆಯುವವು. ಯಾವದೊಂದು ರಾಷ್ಟ್ರವು ಜ್ಞಾನಸಂಪನ್ನವಾಗಹತ್ತಿತೆಂದರೆ ಅದಕ್ಕೆ ವಿದ್ಯಾಭಿರುಚಿಯು ಉತ್ಪನ್ನವಾಗಿ ಆ ರಾಷ್ಟ್ರವು ಸಾವಿರಾರು ತೊಂದರೆಗಳನ್ನು ಬದಿಗೊತ್ತಿ ತನ್ನ ಕೋರಿಕೆಗಳನ್ನು ನೆರವೇರಿಸಿಕೊಳ್ಳುತ್ತದೆ. ಈ ಸ್ಥಿತಿಯು ನಮ್ಮ ಪ್ರಾಚೀನ ಆರ್ಯರ ಕಾಲದಲ್ಲಿ ಇದ್ದದ್ದರಿಂದ ಅವರು ಮೇಲೆ ಹೇಳಿದಂತೆ ವಿದ್ಯಾರ್ಜನೆಗಾಗಿ ಯತ್ನಿಸಿದರು. ಈ ನಿಯ

ಮುವು ಸಾರ್ವತ್ರಿಕವಾದ್ದರಿಂದ ಬೇರೆ ದೇಶಗಳಲ್ಲಾದರೂ ಇಂಥ ಉದಾಹರಣೆಗಳು ದೊರೆಯುವವು. ಗ್ರೀಸ ದೇಶದ ಅರಸನಾದ ಪ್ರಸಿದ್ಧ ಶಿಕಂದರಬಾದಶಹನ ಗುರು ಅರಿಸ್ತೊತ ಲನೆಂಬ ತತ್ವಜ್ಞಾನಿಯು ಹಿಂದಕ್ಕೆ ಆಗಿಹೋದನು. ಆತನು ವಿದ್ಯಾಭ್ಯಾಸ ಮಾಡುವದಕ್ಕಾಗಿ ತನ್ನ ಊರಬಿಟ್ಟು ಎಷ್ಟೋ ಹರದಾರಿ ದೂರ ಇರುವ ಅಥೇನ್ಸ ಪಟ್ಟಣಕ್ಕೆ ಹೋಗಿ ಪ್ಲೇಟೋನ ವಿದ್ಯಾಲಯದಲ್ಲಿ ನಿಂತನು. ಭೂಮಿತಿ ಶಾಸ್ತ್ರಪ್ರವರ್ತಕನಾದ ಯುಕ್ಲೀಡನು ಮೈಗಾರಾ ಪ್ರಾಂತದಲ್ಲಿರುತ್ತಿದ್ದನು ಈ ಪ್ರಾಂತದವರಿಗೂ ಅಥೇನಿಯನ್ ಜನರಿಗೂ ದ್ವೇಷವಿದ್ದದ್ದರಿಂದ ಒಂದು ಸಂಸ್ಥಾನದೊಳಗಿನ ಮನುಷ್ಯರು ಎರಡನೆಯ ಸಂಸ್ಥಾನದಲ್ಲಿ ಹೋದರೆ ಅವನನ್ನು ಕೊಲ್ಲುವ ನಿಯಮವಿತ್ತು. ಆದರೆ ಇಂಥ ಭಯಂಕರ ಪ್ರಸಂಗದಲ್ಲಾದರೂ ಯುಕ್ಲೀಡನು ತನ್ನ ಗುರುವಾದ ಸಾಕ್ರೇತೀಸನ ಬಳಿಗೆ ರಾತ್ರಿಯು ಸ್ತ್ರೀವೇಷದಿಂದ ಹೋಗಿ ವಿದ್ಯಾಭ್ಯಾಸ ಮಾಡಿ ಬೆಳಗಾಗುವದರೊಳಗೆ ಬರುತ್ತಿದ್ದನು. ಈ ಪ್ರಕಾರದ ಉದಾಹರಣೆಗಳು ರೋಮನ್ನ ಜನರಲ್ಲಾದರೂ ಹಲವು ದೊರೆಯುವವು ಈ ಜನರ ಶಿಸರೊ ಎಂಬ ವಿಖ್ಯಾತ ವಕ್ತಾರನು ಕೇವಲ ಗ್ರೀಕ ವಿದ್ಯೆಗಳನ್ನು ಕಲಿಯುವದಕ್ಕಾಗಿ ಹನ್ನೆರಡು ವರ್ಷ ಗ್ರೀಸ ದೇಶದಲ್ಲಿ ನಿಂತಿದ್ದನು. ರೋಮನ್ನ ಜನರ ಪ್ರಜಾಸತ್ತಾತ್ಮಕ ರಾಜ್ಯದ ಅತ್ಯಂತ ಅಭಿಮಾನಿಯಾದ ಕೇಟೋ ಎಂಬವನು ಮುದುಕನಾಗುವವರೆಗೆ ಗ್ರೀಕ ವಿದ್ಯೆಗಳನ್ನೂ, ಸುಧಾರಣೆಗಳನ್ನೂ ತಿರಸ್ಕರಿಸುತ್ತಿದ್ದನು. ಆದರೆ ಕಡೆಯಲ್ಲಿ ಅವನ ಈ ವಿಚಿತ್ರವಾದ ಹಟವಾರಿತನವು ಹೋಗಿ ಅರವತ್ತು ವರ್ಷದ ವಯಸ್ಸಿನಲ್ಲಿ ಗ್ರೀಕ ವಿದ್ಯೆಯ ಅಭಿರುಚಿಯು ಅವನಲ್ಲಿ ಉತ್ಪನ್ನವಾಯಿತು. ಇದೇ ಪ್ರಕಾರ ಬೇರೆ ಬೇರೆ ರಾಷ್ಟ್ರಗಳ ಉದಾಹರಣೆಗಳು ದೊರೆಯಬಹುದು ಸಾರಾಂಶ ಪ್ರಾಚೀನ ಕಾಲದ ಜನರು ವಿದ್ಯಾಭಿರುಚಿಯಲ್ಲಿ ಇತರ ಸುಖೋಪಭೋಗದ ಅಭಿರುಚಿಯನ್ನು ಬಹುತರ ಮರೆತುಬಿಡುತ್ತಿದ್ದರು.

(ಸಶೇಷ).

DEPARTMENTAL NOTICE.
ನೋಟೀಸು.

ಯಾವತ್ತು ಜನರಿಗೆ ತಿಳಿಸುವದೇನಂದರೆ—ಮಿ. ಎಲ್ ಜಯೆರಾವ ಮುಕ್ಕಾವು ಮೈಸೂರ ಇವರು ರಚಿಸಿದ "ಅಲ್ಲಾಉದ್ದೀನ್ ಮತ್ತು ಅದ್ಭುತದೀಪ" ಎಂಬ ಪುಸ್ತಕವನ್ನು ಮೆ. ಡಾಯರೆಕ್ಟರ ಸಾಹೇಬ ಬಹದ್ದೂರವರು ಶಾಲೆಗಳ ಲಾಯಬ್ರರಿಗಾಗಿ ಮಂಜೂರ ಮಾಡಿದ್ದಾರೆ.

ಧಾರವಾಡ ಟ್ರೇ. ಕಾಲೇಜ.
ತಾ॥ ೯ - ೧೨ - ೧೯೦೧

S. K. Rodda,
ಪ್ರಿನ್ಸಿಪಾಲ.

CORRESPONDENCE.
ಪತ್ರವ್ಯವಹಾರ.

ಸವಣೂರ ಸಂಸ್ಥಾನದೊಳಗಿನ ನಾಯಿಕೆರೂರಿಂದ ಬಂಧ ಪತ್ರದ ಸಾರಾಂಶವು ಕೆಳಗೆ ಬರದಂತೆ—ಈ ಊರ ಗಾವಠಿ ಶಾಲೆಗೆ ಹೂವಿನಸಿಗ್ಗಲಿಯ ಕುಲಕರ್ಣಿಯವರೂ ಧಾರವಾಡ ಕಲೆಕ್ಟರ ಕಚೇರಿಯ ಕ್ಲಾರ್ಕರೂ ಆದ ರಾ. ತಮ್ಮಾಜಿ ಶ್ರೀನಿವಾಸ ಕುಲಕರ್ಣಿಯೆಂಬವರು ಊರೊಳಗಿನ ನಾಲ್ಕು ಮಂದಿ ಸಭ್ಯಗೃಹಸ್ಥರಿಂದೊಡಗೂಡಿ ಬಂದು ಹುಡುಗರನ್ನು ಪರೀಕ್ಷಿಸಿ ಹ್ಹಿ. ಬುಕ್ಕಿನಲ್ಲಿ ಉತ್ತಮವಾದ ಅಭಿಪ್ರಾಯವನ್ನು ಬರೆದಿರುವದಾಗಿ ತಿಳಿಯುತ್ತದೆ. ಮುಖ್ಯವಾಗಿ ರೈತರಿಗೆಲ್ಲ ಓದಬರಹವು ಬರಬೇಕೆಂದು ಸರಕಾರದವರ ಪ್ರಧಾನ ಉದ್ದೇಶವುಂಟು. ಈ ಉದ್ದೇಶವು ಕೈಗೂಡಲಿಕ್ಕೆ ಗಾವಠಿ ಶಾಲೆಗಳಾದರೂ ಮೇಲಾದ ಸಾಧನಗಳಾಗಿರುವವು. ಆದರೆ ಈ ಶಾಲೆಗಳು ಚನ್ನಾಗಿ ನಡೆದರೆ ಒಳ್ಳೇ ಪರಿಣಾಮ ಬಾಗಬಹುದು. ಈ ಶಾಲೆಯು ನೆಟ್ಟಗೆ ನಡೆದಿರುವದನ್ನು ಕೇಳಿ ನಮಗೆ ಸಮಾಧಾನವಾಗುತ್ತದೆ.

II

ರಾವ ಸಾ॥ ಕನ್ನಡ ಶಾಲಾಪತ್ರಕದ ಎಡಿಟರ ಪ್ರಾಂತ ದಕ್ಷಿಣಭಾಗ ಧೊರೆಗಳ ಸನ್ನಿಧಾನಕ್ಕೆ,

ವಿ. ವಿ. ಕೆಳಗೆ ಬರೆದ ಸಂಗತಿಗಳನ್ನು ತಮ್ಮ ಸುಂದರ

ವಾದ ಮಾಸಿಕ ಪುಸ್ತಕದಲ್ಲಿ ಮುದ್ರಿಸಿ ಪ್ರಕಟ ಮಾಡುವಿ ರೆಂದು ಆಶಿಸುತ್ತೇವೆ.

ವಿಜಾಪೂರ ಜಿಲ್ಲೆಯೊಳಗಿನ ಮುದ್ದೇಬಿಹಾಳ ತಾಲೂಕ ಕನ್ನಡ ಶಾಲೆಯ ವಾರ್ಷಿಕ ಪರೀಕ್ಷೆಯು ತಾ॥ ೨೦।೧೧। ೧೯೦೧ ಇಸವಿಯ ದಿವಸ ಮುಗಿದು ಇದರ ಸಂಬಂಧದಿಂದ ಬಕ್ಷೀಸ ಕೊಡುವ ಸಮಾರಂಭವು ತಾ॥ ೨೯।೧೧।೧೯೦೧ ಇಸವಿಯ ದಿವಸವಾಯಿತು. ಈ ಸಮಾರಂಭಕ್ಕೆ ರಾವ ಸಾ॥ ಡಿ. ಎ ಇ. ಅಂಕಲೆಯವರೂ ಅ. ಡಿ. ಯವರಾದ ಆನೆ ಖಿಂಡಿಯವರೂ ಮುದ್ದೇಬಿಹಾಳ ತಾ॥ ದ ರಾವ ಸಾ॥ ಸಬ್ ಜಜ್ಜರೂ ಮಾಮಲೇದಾರರರೂ ಶಿರಸ್ತೇದಾರರೂ ಯಾವತ್ತು ವಕೀಲರೂ ಶ್ರೀಮಂತ ಬಸರಕೋಡ ಸರ ನಾಡಗೌಡರೂ ಊರೊಳಗಿನ ಶ್ರೇಷ್ಠ ಸಾವಕಾರರೂ ಸಭ್ಯ ಗೃಹಸ್ಥರೂ ಬಂದಿದ್ದರು. ಸಮಾರಂಭ ಸಭೆಯ ಅಧ್ಯಕ್ಷಸ್ಥಾನವನ್ನು ರಾವ ಸಾ॥ ಹನುಮಂತರಾವ ದಾತಾರ ಮಾಮಲೇದಾರರು ಸ್ವೀಕರಿಸಿದ್ದರು.

ಇಲ್ಲಿ ಮೊದಲು ಗೊತ್ತು ಮಾಡಿದ ಪ್ರಕಾರ ಗಂಡು ಹುಡುಗರ ಡ್ರಿಲ್, ತಾಲೀಮು, ಚಿಕ್ಕ ಮಕ್ಕಳ ಸಂಗೀತ ಕವಾಯಿತು, ಗಂಡು ಹುಡುಗರು ರಾಗದ ಕೆಟ್ಟಿಗೆಯ ನೆಂಗಡ ಪದಗಳನ್ನು ಹಾಡುವದೂ ಹೆಣ್ಣುಮಕ್ಕಳು ಪದಗಳನ್ನು ಅನ್ನುವದೂ ಮತ್ತು ಸದರಿ ಶಾಲೆಯ ೧ನೆಯ ಅ॥ ಮಾಸ್ತರರಾದ ಭಗವಾನ ವಾಸುದೇವ ಮುರಾತೆ ಇವರು ಕೆಲವು ಶಾಸ್ತ್ರೀ ವಿಷಯದ ಪ್ರಯೋಗಗಳನ್ನು ಶ್ರೋಷ್ಟಕರಿಗೆ ನೋಡಬೇಕೆಂಬ ಕುತೂಹಲ ಹೆಚ್ಚಾಗುವಂತೆ ಮಾಡಿ ತೋರಿಸುವದೂ ಮುಗಿದ ನಂತರ ಇಲ್ಲಿಯ ಹೆಡ್‌ಮಾಸ್ತರರಾದ ಗೋವಿಂದ ಮಹಾದೇವ ಜೋಸಿ ಇವರು ಈ ಶಾಲೆಯ ಸ್ಥಿತಿಯನ್ನು ಕುರಿತು ಬರೆದ ನಿಬಂಧವನ್ನು ಓದಿದರು. ಅದರಲ್ಲಿ "ಈ ಶಾಲೆಯು ಸ್ಥಾಪಿಸಲ್ಪಟ್ಟು ೫೫ ವರ್ಷಗಳಾದವು. ಮೊದಲು ಇದು ಸಾಧಾರಣ ಸ್ಥಿತಿಯಲ್ಲಿತ್ತು. ಆದರೆ ರಾ. ರಾ. ರಾಣೂ ದೇವಜಿ ಮೋರೆ ಇವರು ಬಂದ ಬಳಿಕ ಹುಡುಗರ ಸಂಖ್ಯೆ ೬೦ಕ್ಕಿರ ಪರೆಗೆ ಬೆಳೆದು ಅಭ್ಯಾಸ ಚನ್ನಾಗಿ ಸಾಗ ಹತ್ತಿತು. ಸದ್ಯಕ್ಕೆ ಈ ಶಾಲೆಯಲ್ಲಿ ೩೦ ಹುಡುಗರು ಇರು